ಕುಸುಮಾಂಜಲಿ



ಸಂಪಾದಕಿ

ಶಶಿಕಲಾ ವೀರಯ್ಯಸ್ವಾಮಿ

హనుమాంజలి

హనుమాంజలి
హనుమాంజలి
హనుమాంజలి
హనుమాంజలి
హనుమాంజలి
హనుమాంజలి
హనుమాంజలి

۱۹۵

ಕುಸುಮಾಂಜಲಿ

ಕುಸುಮಾಂಜಲಿ

ಹುಟ್ಟು ಹೋರಾಟಗಾರ
ದಿ. ಕುಸುಮಾಕರ ದೇಸಾಯಿ ಅವರ
ಸಂಸ್ಮರಣಾ ಸಂಕಲನ

ಸಂಪಾದಕಿ: ಶಶಿಕಲಾ ವೀರಯ್ಯಸ್ವಾಮಿ

ಮುದ್ರಕರು: ಎ.ಸಿ.ಗೋಪಾಲ
ಸಂಯುಕ್ತ ಕರ್ನಾಟಕ ಪ್ರೆಸ್
ಹುಬ್ಬಳ್ಳಿ

ಪ್ರಕಾಶಕರು:
ಲೋಕಶಿಕ್ಷಣ ಟ್ರಸ್ಟ್,
ಹುಬ್ಬಳ್ಳಿ-ಬೆಂಗಳೂರು

KUSUMANJALI

A Collection of articles of various authors in memory of
late Shri Kusumakar Desai
Editor:Shashikala Veerayyaswamy
Printed by A.C.Gopal , Samyukta Karnataka Press,
Hubli
and published by Loka Shikshana Trust,
Hubli-Bangalore
Price: Rs.50.
Pages:389+24
First Edition: 2004
Copies: 1000

ಕುಸುಮಾಂಜಲಿ

ದಿ.ಕುಸುಮಾಕರ ದೇಸಾಯಿ ಅವರ ಸಂಸ್ಮರಣೆಯಲ್ಲಿ
ವಿವಿಧ ಲೇಖಕರ ಲೇಖನಗಳ ಸಂಗ್ರಹ ಗ್ರಂಥ

ಸಂಪಾದಕಿ: ಶಶಿಕಲಾ ವೀರಯ್ಯಸ್ವಾಮಿ

ಮುದ್ರಕರು: ಎ.ಸಿ.ಗೋಪಾಲ, ಸಂಯುಕ್ತ ಕರ್ನಾಟಕ ಪ್ರೆಸ್, ಹುಬ್ಬಳ್ಳಿ

ಪ್ರಕಾಶಕರು: ಲೋಕಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ-ಬೆಂಗಳೂರು

ಬೆಲೆ: 50 ರೂ.

ಪುಟಗಳು: ೩೮೯+೨೪

ಮೊದಲ ಮುದ್ರಣ:2004

ಪ್ರತಿಗಳು: 1000

ಪ್ರಕಾಶಕರ ನುಡಿ

ನಾಡ ಜನತೆಗೆ ವೈವಿಧ್ಯಮಯ ತಿಳಿವಳಿಕೆ, ಅವಶ್ಯಕ ಮಾಹಿತಿ, ಸಾಧಕರ ಸಾಧನೆ ತಿಳಿಸುವ ಗುರಿಯೊಂದಿಗೆ ಜನ್ಮ ತಳೆದ 'ಲೋಕಶಿಕ್ಷಣ ಟ್ರಸ್ಟ್', ತನ್ನ ಕಾರ್ಯಸಾಧನೆಯಿಂದ ತನ್ನ ಹೆಸರನ್ನು ಸಾರ್ಥಕಪಡಿಸಿಕೊಂಡಿದೆ. 'ಸಂಯುಕ್ತ ಕರ್ನಾಟಕ' ದಿನಪತ್ರಿಕೆ,'ಕರ್ಮವೀರ' ಸಾಪ್ತಾಹಿಕ ಹಾಗೂ 'ಕಸ್ತೂರಿ' ಮಾಸಪತ್ರಿಕೆಗಳ ಮೂಲಕ ಜನಸಮುದಾಯಕ್ಕೆ ಸುದ್ದಿ-ಸಮಾಚಾರ, ಜ್ಞಾನ-ವಿಜ್ಞಾನ, ಮಾಹಿತಿ-ಮನೋರಂಜನೆ ನೀಡಿ ಮನೋವಿಕಾಸಗೊಳಿಸುವ ಲೋಕಶಿಕ್ಷಣ ಟ್ರಸ್ಟ್, ತನ್ನ ಗ್ರಂಥಮಾಲೆಯ ಮೂಲಕ ನಾಡಿನ ಖ್ಯಾತನಾಮರ ಪುಸ್ತಕಗಳನ್ನೂ ಪ್ರಕಟಿಸುತ್ತದೆ. ಹುಟ್ಟು ಹೋರಾಟಗಾರ ದಿ.ಕುಸುಮಾಕರ ದೇಸಾಯಿ ಅವರ ಸ್ಮರಣಾರ್ಥ 'ಕುಸುಮಾಂಜಲಿ' ಗ್ರಂಥವನ್ನು ಈಗ ಕನ್ನಡಿಗರಿಗೆ ಅರ್ಪಿಸುತ್ತಿದೆ.

ದಿ.ಕುಸುಮಾಕರ ದೇಸಾಯಿ ಅವರದು ಬಹು 'ಎತ್ತರ'ದ ಬದುಕು- ಆಕಾರ, ಆಚಾರ, ನಡೆ-ನುಡಿ...ಹೀಗೆ ಎಲ್ಲದರಲ್ಲೂ ಅವರದು ಉನ್ನತ ವ್ಯಕ್ತಿತ್ವ. ನಿಜಾಮರ ಆಡಳಿತ ಕಾಲದಲ್ಲಿ ಹೈದರಾಬಾದ ವಿಮೋಚನೆಗಾಗಿ ಅಪರ್ನಿಶಿ ಶ್ರಮಿಸಿ ಸೆರೆವಾಸ ಅನುಭವಿಸಿದ ಅವರು, ಸ್ವತಂತ್ರ ಭಾರತದಲ್ಲಿ 'ತುರ್ತು ಪರಿಸ್ಥಿತಿ' ವಿರೋಧಿಸಿ ಮತ್ತೊಮ್ಮೆ ಜೈಲು ಕಂಡರು. 'ಇದು ಅನ್ಯಾಯ' ಎಂದು ಕಂಡು ಬಂದಾಗಲೆಲ್ಲ ಸಿಡಿದೆದ್ದರು. ಒಂಟಿ ಸಲಗದಂತೆ ಮುನ್ನುಗ್ಗಿದರು. ಗಟ್ಟಿ ನಿಲುವಿನ ದಿಟ್ಟ ಧುರೀಣರು ಅವರು.ಈ ಹಿರಿಯ ನ್ಯಾಯವಾದಿ ಸದಾ ಅನ್ಯಾಯದ ವಿರುದ್ಧ ಪ್ರತಿಭಟಿಸಿದರು. ನೊಂದವರ ಕಣ್ಣೀರು ಒರೆಸಿದರು. ಮನಸ್ಸು ಮಾಡಿದ್ದರೆ ಅವರು ರಾಜ್ಯ ರಾಜಕೀಯ ರಂಗದಲ್ಲಿ ಮಿಂಚಬಹುದಿತ್ತು. ಆದರೆ, ಅವರೆಂದಿಗೂ ಅಧಿಕಾರದ ಬೆನ್ನು ಹತ್ತಿ ಹೋಗಲಿಲ್ಲ. ಹುದ್ದೆಯೊಂದು ಹುಡುಕಿಕೊಂಡು ಬಂದಾಗ, ಜನಸಮುದಾಯ ಸದಾ ನೆನಪಿಟ್ಟುಕೊಳ್ಳುವಂತಹ ಸಾರ್ಥಕ ಕಾರ್ಯ ಮಾಡಿದರು. 'ಕಲಬುರ್ಗಿಯ ಭಗೀರಥ' ಎಂದೇ ಚಿರಸ್ಮರಣೀಯರಾದರು. ಪತಿಯ ಹಾದಿಯಲ್ಲಿಯೇ ಮುನ್ನಡೆದ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿ ಅವರು ನ್ಯಾಯವಾದಿಗಳಾಗಿ, ಶಾಸಕರಾಗಿ, ಮುಖ್ಯವಾಗಿ ಲೇಖಕಿಯಾಗಿ ಕನ್ನಡಿಗರ ಮನ ಗೆದ್ದಿದ್ದಾರೆ.

ಕುಸುಮಾಕರ ದೇಸಾಯಿ ಅವರ ಬಹುಮುಖ ಪ್ರತಿಭೆ ಬಿಂಬಿಸುವ, ಅವರ ಮಾನವೀಯ ಮುಖವನ್ನು ಪರಿಚಯಿಸುವ ಲೇಖನಗಳನ್ನೊಳಗೊಂಡ ಈ 'ಕುಸುಮಾಂಜಲಿ' ಕೃತಿಯನ್ನು ಕನ್ನಡಿಗರಿಗೆ ಅರ್ಪಿಸುತ್ತಿದ್ದೇವೆ. ಖ್ಯಾತ ಲೇಖಕಿ ಶ್ರೀಮತಿ ಶಶಿಕಲಾ ವೀರಯ್ಯಸ್ವಾಮಿ ಅವರ ಸಂಪಾದಕತ್ವದಲ್ಲಿ ಮೂಡಿಬಂದ ಈ ಸ್ಮರಣ ಸಂಚಿಕೆ ಹಳೆ ಪೀಳಿಗೆಯವರಿಗೆ ಅಂದಿನ ದಿನಗಳ ನೆನಪು ಮಾಡಿಕೊಟ್ಟರೆ, ಹೊಸ ಪೀಳಿಗೆಯವರಿಗೆ ಸ್ಫೂರ್ತಿ ಉಕ್ಕಿಸುತ್ತದೆ ಎಂಬ ನಂಬಿಕೆ ನಮ್ಮದು.

ಅಧ್ಯಕ್ಷರು
ಲೋಕಶಿಕ್ಷಣ ಟ್ರಸ್ಟ್
ಹುಬ್ಬಳ್ಳಿ-ಬೆಂಗಳೂರು

ಪ್ರಸ್ತಾವನೆ

ಭಾರತೀಯ ಇತಿಹಾಸಕ್ಕೆ ವೇದಗಳ ಸಾಕ್ಷರ ದಾಖಲೆಯೇ ಸಾಕ್ಷಿಯಾಗಿರುವದರಿಂದ ಭಾರತೀಯನ ಚರಿತ್ರೆ ಕೂಡ ಅಲ್ಲಿಂದಲೇ ಪ್ರಾರಂಭವಾಗುತ್ತದೆ. ವೈವಸ್ವತಮನು ಪ್ರಣೀತವಾದ ಮಾನವ ಚರಿತ್ರೆಗೆ ಆರ್ಷೇಯ ಭಾರತದಲ್ಲಿ ಉಜ್ವಲವಾದ ಸ್ಥಾನವಿದೆ. ವೇದಕಾಲೀನ ಋಷಿಪರಂಪರೆಯಿಂದ ಹಿಡಿದು, ಇವತ್ತು ಕಲುಷಿತಗೊಂಡ ರಾಷ್ಟ್ರೀಯ ಸ್ಥಿತ್ಯಂತರಗಳನ್ನು ಅವಲೋಕಿಸಿದಾಗ, ಈ ದೇಶವು ಎಂತೆಂಥ ಝಂಝಾವಾತಗಳನ್ನು ಸಹಿಸಿಯೂ ಆತ್ಮಪ್ರಕಾಶವನ್ನು ದೀಪ್ತವಾಗಿ ಪ್ರದರ್ಶಿಸುತ್ತ ಬಂದಿರುವದು ಗಮನಾರ್ಹವಾಗಿ ಎದ್ದು ಕಾಣುತ್ತದೆ. ಜಾಗತಿಕ ಹಿನ್ನೆಲೆಯಲ್ಲಿ, ಭಾರತ ದೇಶವು ನಿರಂತರ ಹೋರಾಟದ ಸ್ವರೂಪದಿಂದಲೇ ತನ್ನ ಅಂತಃತೇಜಸ್ಸಿನ ಅಸ್ತಿತ್ವವನ್ನು ಗೌರವಪೂರ್ಣವಾಗಿ ಉಳಿಸಿ-ಬೆಳೆಸಿಕೊಂಡು ಬರುವಲ್ಲಿ ಸಫಲವಾಗಿದೆ. ಭಾರತೀಯ ತತ್ವಜ್ಞಾನ, ಭಾರತೀಯ ಗಣಿತ, ಭಾರತೀಯ ವೈದ್ಯಶಾಸ್ತ್ರ ಮುಂತಾದವುಗಳು ಜಗತ್ತಿಗೆ ನೀಡಿದ ಆವಿಷ್ಕಾರಗಳು. ಭಾರತೀಯ ಆಧ್ಯಾತ್ಮವಂತೂ ವಿಶ್ವದ ತಲ್ಲಣಗೊಂಡ ದೇಶಗಳನ್ನು ಎಂದಿನಿಂದಲೂ ಆಕರ್ಷಿಸುತ್ತಾ ಬಂದಿದೆ.

ಈ ಯಶೋಗಾಥೆಯ ಹಿಂದೆ ಒಂದು ಅವಿಚ್ಛಿನ್ನವಾದ, ಪವಿತ್ರವಾದ ಸಂಕಲ್ಪಶಕ್ತಿಯ ಪ್ರವಾಹವೇ ಹೊಮ್ಮಿದೆ. ಈ ಪುಣ್ಯಭೂಮಿಯಲ್ಲಿ ಸರ್ವಶ್ರೇಷ್ಠ ದಾರ್ಶನಿಕರು, ದೇಶಭಕ್ತರು, ಮಹಾತ್ಯಾಗಿಗಳು, ಧರ್ಮಗುರುಗಳು, ಚಿಂತಕರು, ರಾಜಕಾರಣಿಗಳು, ಸಮಾಜ ಸುಧಾರಕರು, ಯೋಗಿಗಳು, ಸಂತರು, ಸೂಫಿಗಳು, ಸಾಹಿತಿಗಳು, ಸಂಗೀತಗಾರರು, ಕಲಾವಿದರು, ತತ್ವಜ್ಞಾನಿಗಳು, ವಿಜ್ಞಾನಿಗಳು, ವಿದ್ವಾಂಸರು ಜನ್ಮ ತಾಳಿದ್ದಾರೆ. ಈ ದೇಶದ ಸಂಸ್ಕೃತಿಯನ್ನು ಸಂಪದ್ಭರಿತಗೊಳಿಸಿದ್ದಾರೆ. ಈ ನೆಲದ ಮಣ್ಣೇ ಸಾರವತ್ತಾಗಿದೆ.

ಆದರೂ ಬಹುಕಾಲ ಪರಕೀಯರ ಕೈಯಲ್ಲಿ ಈ ನೆಲವು ನಲುಗಿದ್ದು ಯಾವ್ಯಾವ ಪರಿಯಲ್ಲಿ? ಎಷ್ಟೆಷ್ಟು ದಾರುಣವಾಗಿ? ನೆನೆದರೇ ಮೈ ಜುಮ್ಮೆನ್ನಿಸುವ ಅಮಾನುಷ ಆಡಳಿತ, ನೆನೆದರೇ ಮೈನವಿರೇಳಿಸುವ ದೇಶಭಕ್ತರ ಪ್ರತಿರೋಧ. ಹೀಗೆ ಈ ನೆಲದ ಕಣಕಣವೂ ಹುತಾತ್ಮರ ನೆತ್ತರಿನಲ್ಲಿ ನೆಂದು ಪಾವನವಾಗಿದೆ. ಕುಂಕುಮಭೂಮಿಯಾಗಿದೆ. ಅಸಂಖ್ಯಾತರು ಸ್ವಾತಂತ್ರ್ಯ ಸಮರದ ಮಹಾಯಜ್ಞಕ್ಕೆ ಆತ್ಮಾಹುತಿಯ ಆಜ್ಯವನ್ನೆರೆದಿದ್ದಾರೆ. ಅಮರರಾಗಿದ್ದಾರೆ. ಭಾರತ ಸ್ವಾತಂತ್ರ್ಯ ಸಮರದ ಇತಿಹಾಸದ ಪ್ರತಿಯೊಂದು ಅಕ್ಷರವೂ ಬಲಿದಾನದ ರಕ್ತಸ್ನಾನ ಮಾಡಿವೆ. "ಜನನಿ ಜನ್ಮಭೂಮಿಶ್ಚ ಸ್ವರ್ಗಾದಪೀಗರೀಯಸಿ" ಎಂಬುದು ಮಹಾತ್ಮರ ನೇತೃತ್ವದಲ್ಲಿ ದೀಕ್ಷಾ ಮಂತ್ರವಾಗಿತ್ತು. ಮಹಾತ್ಮಾಜೀಯವರು ಸಂಪೂರ್ಣವಾಗಿ ಅಹಿಂಸಾ ಮಾರ್ಗದಿಂದಲೇ ಸ್ವಾತಂತ್ರ್ಯ ಪಡೆಯಬೇಕೆಂದು

ಹಂಬಲಿಸಿದ್ದರಾದರೂ, ರಕ್ತವನ್ನು ಚೆಲ್ಲಾಡಬೇಕಾದ ದಾರುಣ ಸ್ಥಿತಿಯೂ ಇತ್ತು ಎಂಬುದು ಇತಿಹಾಸ ಬಲ್ಲವರಿಗೆಲ್ಲ ಗೊತ್ತು.

ಹಳ್ಳಿಯಿಂದ ಈ ಕ್ರಾಂತಿಯ ಕಹಳೆ ದಿಲ್ಲಿಯವರೆಗೂ ವ್ಯಾಪಿಸಿತು. ಇಡೀ ಭಾರತದ ನಾಡೀಬಡಿತ ಒಂದೇ ಆಗಿತ್ತು. ಸ್ವತಂತ್ರರಾಗಬೇಕೆಂದು ಶಾಲೆ ಕಾಲೇಜುಗಳನ್ನು ತೊರೆದು ಹೋರಾಟಕ್ಕೆ ಧುಮುಕಿದ ಯುವಕರು, ಮನೆಮಾರು ತೊರೆದು ಭೂಗತರಾದ ದೇಶಭಕ್ತರು, ಸಂಸಾರ ಸುಖಕ್ಕೆ ತಿಲಾಂಜಲಿಯನ್ನಿತ್ತು ಜೈಲು ಪಾಲಾದ ಗೃಹಸ್ಥರು, ಕೈಗೂಸುಗಳನ್ನು ಕಟ್ಟಿಕೊಂಡು ಬೀದಿಗೆ ಬಂದು ಜೈಕಾರ ಮಾಡಿ ಜೈಲಿಗೆ ಹೋದ ಹೆಣ್ಣುಮಕ್ಕಳು. ಹೀಗೆ ಹಳ್ಳಿಗೆ ಹಳ್ಳಿಯೇ ಜಾಗೃತವಾಗಿಬಿಟ್ಟಿದ್ದವು. ಇವರೆಲ್ಲ ಉದಾತ್ತ ಚರಿತರು, ಧೀಮಂತರು. ಇಂದು ನಾವು ತಿನ್ನುವ ಪ್ರತಿ ತುತ್ತಿನಲ್ಲಿಯೂ ಇವರೆಲ್ಲರ ಕುರಿತು ಒಂದು ಅನನ್ಯ ಕೃತಜ್ಞತೆಯೂ, ಇವರು ಸಂಪಾದಿಸಿಕೊಟ್ಟ ಸ್ವಾಭಿಮಾನದ ಬದುಕಿಗೆ ಈ ದೇಶದ ಅನಂತ ನಮನಗಳೂ ಸಲ್ಲುತ್ತವೆ ಎನ್ನುವುದು ನಿಜವಾದರೂ ಇವರೆಲ್ಲರ ಋಣವನ್ನು ತೀರಿಸಿದಂತಾಗುವದಿಲ್ಲ. ಅದು ತೀರುವಂಥ ಋಣವೂ ಅಲ್ಲ.

ಆದರೆ ಪ್ರಯತ್ನವನ್ನಾದರೂ ಮಾಡಬಹುದಲ್ಲವೇ? ಈ ನಿಟ್ಟಿನಲ್ಲಿ ಇಂದು ಪ್ರತಿಯೊಬ್ಬ ಭಾರತೀಯನೂ ಆತ್ಮವಿಮರ್ಶೆಯನ್ನು ಮಾಡಿಕೊಳ್ಳಬೇಕಾದ ಸಂಕ್ರಮಣ ಸ್ಥಿತಿಯಲ್ಲಿ ನಿಂತಿದ್ದಾನೆ. ಈ ಸ್ವಾತಂತ್ರ್ಯದ ಕೊಡುಗೆಗೆ ನಾವು ಅರ್ಹರಾಗಿದ್ದೇವೆಯೇ? ಅಂತಿಮ ಹಂತದ ಪ್ರಜೆಯವರೆಗೂ ಸ್ವಾತಂತ್ರ್ಯದ ಸಮಾನತೆ-ಸೌಲಭ್ಯಗಳು ಲಭ್ಯವಾಗಿವೆಯೇ? ಈ ದೇಶದ ರೈತ, ಕಾರ್ಮಿಕ, ದಲಿತರು ಆತ್ಮಗೌರವದಿಂದ ಬಾಳುವಂಥ ಪರಿಸರ ನಿರ್ಮಾಣವಾಗಿದೆಯೇ? ಮಧ್ಯರಾತ್ರಿಯಲ್ಲಿ ಮಹಿಳೆಯೊಬ್ಬಳು ಸುರಕ್ಷಿತವಾಗಿ ಮನೆಯನ್ನು ತಲುಪುವದು ಸಾಧ್ಯವಾದರೆ ಅದೇ ನಿಜವಾದ ಸ್ವಾತಂತ್ರ್ಯ" ಎಂದರು ಮಹಾತ್ಮಾಜಿ. ಹಾಡುಹಗಲಲ್ಲೇ ಈ ದೇಶದ ಹೆಣ್ಣುಮಕ್ಕಳು ಸುರಕ್ಷಿತವಾಗಿಲ್ಲ. ಆದರೆ ಈ ಎಲ್ಲ ಪ್ರಶ್ನೆಗಳನ್ನು ಯಾರಿಗೆ ಕೇಳೋಣ? ಕೇಳಿಸಿಕೊಳ್ಳುವವರು ಜಾಣಕಿವುಡರಾದ ನಾಯಕರು. ಕೋಮುವಾದದ ದಳ್ಳುರಿಗೆ ತುಪ್ಪವನ್ನು ಸುರಿಯುವವರು, ಬಡ ಕುಟುಂಬಗಳ ಸಾಮೂಹಿಕ ಆತ್ಮಹತ್ಯೆಗಳನ್ನು ಅಸಡ್ಡೆ ಮಾಡುವವರು, ಅಪೂರ್ಣ ಕಳಪೆಯೋಜನೆಗಳಿಗೆ ಪ್ರಜೆಗಳ ಕೋಟಿಗಟ್ಟಲೆ ಹಣವನ್ನು ದುಂದು ಮಾಡುವವರು, ಕೇಡಿಗಳನ್ನು, ರೌಡಿಗಳನ್ನು, ದೇಶದ್ರೋಹಿಗಳನ್ನು, ಅಪ್ರಾಮಾಣಿಕರನ್ನು ಕಾಪಾಡಿಕೊಳ್ಳುವವರು, ಜೂಜಾಟ, ಮದ್ಯದ ಮಾರಾಟಗಳಿಂದ ಸಾಮಾನ್ಯರ ಬದುಕನ್ನು ಅಧೋಗತಿಗಿಳಿಸಿದವರು; ಇಂಥವರ ಕೈಯಲ್ಲಿ ಅಧಿಕಾರದ ಚುಕ್ಕಾಣಿ ಇರುವದು ಈ ದೇಶದ ದುರಂತ. ಇಂಥವರ ಜೊತೆಗೆ ಅಧಿಕಾರ ಲಾಲಸೆಗಾಗಿ, ಆತ್ಮಗೌರವವನ್ನು ಮಾರಿಕೊಂಡ ಅಗಣಿತ ಪಕ್ಷಗಳು, ಅವುಗಳ ಅನೈತಿಕ ಮೈತ್ರಿ! ಇವರೆಲ್ಲರ ಸಾರಥ್ಯದಲ್ಲಿ ಈ ದೇಶಕ್ಕೆ ಭವಿಷ್ಯವೆಂಬುದಿದೆಯೆ? ಐತಿಹಾಸಿಕ ಪ್ರಜ್ಞೆ ಇಲ್ಲದೇ ಭವಿಷ್ಯದ ಬಗ್ಗೆ ಒಳನೋಟಗಳಿಲ್ಲದೇ

ವರ್ತಮಾನವನ್ನು ದಿಕ್ಕೆಡಿಸಿದವರು ಇವರು.

ಈ ಸಂದರ್ಭದ ಹಿನ್ನೆಲೆಯಲ್ಲಿ ಜನಜಾಗೃತಿಯೊಂದೇ ಇಂದು ನಮ್ಮ ಮುಂದಿರುವ ಏಕೈಕಮಾರ್ಗ. ಈ ಸ್ಫುರಣೆಯ ಮೂಲಗಳನ್ನು ಶೋಧಿಸುತ್ತ ಹೊರಟಾಗ ಅನೇಕ ಧೀಮಂತ ವ್ಯಕ್ತಿಗಳೂ ಅವರ ಉದಾತ್ತ ವಿಚಾರಗಳೂ ಕಣ್ಮುಂದೆ ಹೊಳೆಯುತ್ತವೆ. ಅಂಥ ಹೊಳಪಿನ ವ್ಯಕ್ತಿತ್ವವನ್ನು ಉಳ್ಳವರು ನಮ್ಮ ಶ್ರೀ ಕುಸುಮಾಕರ ದೇಸಾಯಿ ಅವರು. ಈ ದೇಶದ ಕುರಿತಾಗಿ ಅವರಲ್ಲಿ ಕನಸುಗಳಿದ್ದವು, ಭರವಸೆಗಳಿದ್ದವು. ಮನಃಪೂರ್ವಕವಾಗಿ ಅವರು ಈ ದೇಶದ ಸರ್ವಾಂಗೀಣ ಉನ್ನತಿಗಾಗಿ ಹಾರೈಸಿದ್ದರು; ಹಾತೊರೆದಿದ್ದರು. ಅವರಲ್ಲಿ ಉದಾತ್ತವಾದ ಸಾಮಾಜಿಕ ಪ್ರಜ್ಞೆಯಿತ್ತು. ಮಾನವೀಯ ನೆಲೆಯಲ್ಲಿ ಅವರು ಜೀವನ ವಿಧಾನವನ್ನು ರೂಪಿಸಿಕೊಂಡಿದ್ದರು. ಆತ್ಮಬಲದಿಂದ ತೋಜೋಮಯವಾದ ಅವರ ವ್ಯಕ್ತಿತ್ವಕ್ಕೆ ವೈವಿಧ್ಯಮಯ ಆಯಾಮಗಳಿದ್ದವು. ವಿದ್ಯಾಭ್ಯಾಸವನ್ನು ತೊರೆದು ಭಾರತದ ಸ್ವಾತಂತ್ರ್ಯಸಮರದಲ್ಲಿ ಭಾಗಿಯಾಗಿ ಜೈಲು ಸೇರಿದ್ದರು. ಹೈದ್ರಾಬಾದ್ ನಿಜಾಮನ ದುರಾಡಳಿತದ ವಿರೋಧೀ ಹೋರಾಟದ ಮುಂಚೂಣಿಯಲ್ಲಿದ್ದರು. ತುರ್ತು ಪರಿಸ್ಥಿತಿಯಲ್ಲಿ ಏಕಾಂಗಿಯಾಗಿಯೇ ಸ್ವಾಭಿಮಾನದ ಪ್ರಜ್ಞೆಯನ್ನು ಜನಮಾನಸದಲ್ಲಿ ಬಿತ್ತಿದ್ದರು. ಆಜೀವಪರ್ಯಂತ ಖಾದೀಧಾರಿ, ವಕೀಲಿಯಲ್ಲಿ ಶ್ರೇಷ್ಠವಾಗ್ಮಿ, ವ್ಯಾಪಕವಾದ ಅಧ್ಯಯನಶೀಲ, ಉತ್ಕಟ ಜೀವನಪ್ರೇಮಿ, ತುಂಬಿ ತುಳುಕುವ ಜೀವನೋತ್ಸಾಹಿ, ಅನನ್ಯವಾದ ಸಾಮಾಜಿಕ ಪ್ರಜ್ಞಾವಂತ, ಶ್ರದ್ಧೆ-ಸಮರ್ಪಣೆ- ಪ್ರಾಮಾಣಿಕತೆಗಳು ಮುಪ್ಪುರಿಗೊಂಡ ಅಧಿಕಾರಿ, ಬಹುಭಾಷಾ ತಜ್ಞ ಏನೇನೆಲ್ಲಾ ಆಗಿದ್ದರು ದೇಸಾಯಿ ಅವರು! ಉತ್ಕಂಠಿತವಾದ ಸಾಮಾಜಿಕ ಪ್ರಜ್ಞೆ ಇಲ್ಲದೇ ಹೋದರೆ ರಾಷ್ಟ್ರಪ್ರಜ್ಞೆಯ ಸ್ಪಂದನವೂ ವಿಮುಖವಾಗಿ ಬಿಡುತ್ತದೆ. ಇದಕ್ಕೆ ತಕ್ಕ ಮಾದರಿಯಂತಿದ್ದರು ಕುಸುಮಾಕರ ದೇಸಾಯಿ ಅವರು. ಇಂಥ ಪರಿಪೂರ್ಣ ವ್ಯಕ್ತಿತ್ವದ ಪರಿಚಯ ಲಾಭವನ್ನು ನಮ್ಮ ಮುಂದಿನ ಪೀಳಿಗೆಗೆ ಮನದಟ್ಟು ಮಾಡುವದು ಮತ್ತು ಈ ಮೂಲಕ ಯುವಶಕ್ತಿಯಲ್ಲಿ ರಾಷ್ಟ್ರಪ್ರೇಮವನ್ನೂ, ಜೀವನಪ್ರೀತಿಯನ್ನೂ ಉದ್ದೀಪನಗೊಳಿಸುವದು ನಮ್ಮ ಆದ್ಯ ಕರ್ತವ್ಯವಾಗಿದೆ ಎಂದು ನಾನು ಭಾವಿಸಿದ್ದೇನೆ. ಇಂಥ ಜೀವನ ಚರಿತ್ರೆಗಳು ನಾಡವರಿಗೆ ದಾರಿದೀಪವಾಗಬಲ್ಲವು. ತುಂಬುಗೌರವದಿಂದ ಈ ಸಂಪಾದನೆಯನ್ನು ವಹಿಸಿಕೊಂಡಿದ್ದೇನೆ.

ಯಾವುದೇ ಸಂಪಾದನೆಯಾದರೂ ಸಮಯ, ಶ್ರದ್ಧೆ, ಶ್ರಮಗಳನ್ನು ಬೇಡುತ್ತದೆ. ನಮ್ಮನ್ನು ಸಂಪೂರ್ಣವಾಗಿ ಕೊಟ್ಟುಕೊಂಡಾಗಲೇ ಅದು ಸಫಲವಾಗುವದು. ಈ ಉದ್ದೇಶವನ್ನು ಮುಂದಿಟ್ಟುಕೊಂಡು, ಶ್ರೀದೇಸಾಯಿ ಅವರ ಸಮಕಾಲೀನ ಸ್ವಾತಂತ್ರ್ಯಹೋರಾಟಗಾರರನ್ನು, ಅವರ ಜತೆ ಜತೆಗೆ ಪಕ್ಷದ ಕೆಲಸಗಳಲ್ಲಿ ಭಾಗಿಯಾಗಿದ್ದು

ರಾಜಕೀಯದಲ್ಲಿ ತೊಡಗಿಕೊಂಡ ಸ್ನೇಹಿತರನ್ನು, ವಕೀಲಿ ವೃತ್ತಿಯಲ್ಲಿ ಅವರ ಸಾಮಿಪ್ಯ ಪಡೆದ ಹಿರಿ-ಕಿರಿಯರನ್ನು, ಅಧಿಕಾರದಲ್ಲಿದ್ದಾಗಿನ ಸಹೋದ್ಯೋಗಿಗಳನ್ನು, ಬಂಧುಗಳನ್ನು, ಹಿತೈಷಿಗಳನ್ನು, ಅವರನ್ನು ಅಂತಿಮ ಕಾಲದಲ್ಲಿ ನೋಡಿಕೊಂಡ ವೈದ್ಯರನ್ನು ಪತ್ರ-ದೂರವಾಣಿಗಳ ಮೂಲಕ ಸಂಪರ್ಕಿಸಿದೆ. ನಾನೂ ಸರಿತಕ್ಕ ಒಮ್ಮೆ ವಿಧಾನಸೌಧದ ರೌಂಡನ್ನೂ ಮುಗಿಸಿದೆವು.

ಪುಸ್ತಕದ ವಿಷಯವನ್ನು ಕೇಳಿದ ಅನೇಕ ಅಭಿಮಾನಿಗಳು ತಾವಾಗಿ ಲೇಖನ ಬರೆದು ಸ್ವೀಕರಿಸಲು ವಿನಂತಿಸಿಕೊಂಡಿದ್ದು ಒಂದು ಅನುಭವವಾದರೆ, ಸಕಾಲದಲ್ಲಿ ಲೇಖನಗಳನ್ನು ನೀಡಿ ಸಹಕರಿಸಿದವರು ಅನೇಕರು. ಕೆಲವರು ಕೆಲವು ಮಾಹಿತಿಗಳನ್ನು ನೀಡಿ, "ನೀವೇ ಪೂರ್ಣಗೊಳಿಸಬೇಕು" ಎಂದು ಅರ್ಧ ಭಾರವನ್ನು ನಮಗೇ ವಹಿಸಿದರು. ಅವನ್ನೆಲ್ಲ ಸಂಪೂರ್ಣ ಪ್ರಮಾಣದಲ್ಲಿ ರಿಪೇರಿ ಮಾಡಿ ಪೂರ್ಣರೂಪ ಕೊಟ್ಟವರು ಶ್ರೀಮತಿ ಸರಿತಕ್ಕ ಅವರು. ಇನ್ನೂ ಕೆಲವರು, ಪತ್ರಗಳ ಮೇಲೆ ಪತ್ರ, ದೂರವಾಣಿಗಳ ಮೇಲೆ ದೂರವಾಣಿಗಳಿಂದ ಕಾಡಿದ ಮೇಲೆ ನೀಡಿದರು. ಒಂದಿಬ್ಬರು. "ನೀ ಎಷ್ಟು ಕಾಡತೀ ಕಾಡವ್ವ, ನೀ ಕಾಡಿದಷ್ಟು ನಮಗ ಪಾಡವ್ವ" ಎಂದು ನಿರುಮ್ಮಳವಾಗಿ ಉಳಿದುಕೊಂಡರು. ಅಂಥವರನ್ನು ಕಾಡಲು ನನಗೇ ಭಯವಾಗಿ ಸುಮ್ಮನಾಗಬೇಕಾಯಿತು.

ಈ ಎಲ್ಲ ಲೇಖನಗಳನ್ನು ಅವಲೋಕಿಸಿದಾಗ ಶ್ರೀ ಕುಸುಮಾಕರ ದೇಸಾಯಿ ಅವರ ಬಹುಮುಖೀ ವ್ಯಕ್ತಿತ್ವವು ಗೋಚರವಾಗುತ್ತದೆ. ಅವರ ಅಂತಃಕರಣದಲ್ಲಿ ಅನೇಕರು ಸಾಂತ್ವನ ಪಡೆದಿದ್ದಾರೆ. ಹೊಸ ಬದುಕು ರೂಪಿಸಿಕೊಂಡಿದ್ದಾರೆ. ಈಗಲೂ ಅವರ ಹೆಸರು ಹೇಳಿ ಮನೆಯಲ್ಲಿ ದೀಪ ಹಚ್ಚುವವರಿದ್ದಾರೆ. ಅವರ ಮಾರ್ಗದರ್ಶನದಲ್ಲಿ ವೃತ್ತಿ ನೈಪುಣ್ಯವನ್ನು ಸಾಧಿಸಿದವರಿದ್ದಾರೆ. ಅವರ ಬಗ್ಗೆ ನಿರ್ಮಲವಾದ ಅಕ್ಕರೆಯನ್ನು ಇಟ್ಟುಕೊಂಡ ಹಿರಿಯರಿದ್ದಾರೆ. ಅಭಿಮಾನ ಪಡುವ ಸ್ನೇಹಿತರಿದ್ದಾರೆ. ಆರಾಧಿಸುವ ಕಿರಿಯರಿದ್ದಾರೆ. ಅವರ ನಿಷ್ಕಾಮ ಸ್ನೇಹದಲ್ಲಿ ಮಿಂದಂಥ ಅನೇಕ ಸ್ನೇಹಿತೆಯರಿದ್ದಾರೆ.

ಅಂಥ ಸೌಭಾಗ್ಯ ಪಡೆದವರಲ್ಲಿ ನಾನೂ ಒಬ್ಬಳು. ಅವರ ನಿಷ್ಕಪಟ ಸ್ನಿಗ್ಧ ಸ್ನೇಹದಲ್ಲಿ ಒಂದು ಆರ್ದ್ರವಾದ ಪ್ರೌಢಿಮೆ ಇರುತ್ತಿತ್ತು. ಸಾಮಿಪ್ಯದಲ್ಲಿ ತಂದೆತನವಿರುತ್ತಿತ್ತು. ಇದು ಶ್ರೀ ಕುಸುಮಾಕರ ದೇಸಾಯಿ ಅವರ ಜಗತ್ತು. ಎಲ್ಲ ಲೇಖನಗಳಲ್ಲೂ ಈ ಸಂವೇದನೆ ಹರಿದು ಬಂದಿದೆ. ಕೆಲವು ಕಡೆ ಚರ್ವಿತ ಚರ್ವಣವಾಗಿರುವದು ಸಹಜ. ಒಂದೇ ವಿಷಯವನ್ನು ಕುರಿತು ಹಲವರು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಅವರು 'ಕಲಬುರ್ಗಿಯ ಭಗೀರಥ' ಬಿರುದಿಗೆ ಪಾತ್ರವಾಗಿದ್ದೂ ಒಂದು. ಕಲಬುರ್ಗಿಯಂಥ ಬಾಯಾರಿದ ನಗರಕ್ಕೆ ಜೀವಜಲವನ್ನು ನೀಡಿದ ಕೀರ್ತಿ ಖಂಡಿತ ಅವರಿಗೇ ಸಲ್ಲಬೇಕು. ಆದರೆ "ಊರು ಉಪಕಾರವನ್ನು ಅರಿಯದು" ಎನ್ನುವ ನೋವು ಕೂಡ ನನ್ನಂಥ ಅನೇಕರಿಗೆ ಬಾಧಿಸಿದ್ದು ನಿಜ. ಲೋಕ ವಿಧಿಸುವ ಇಂಥ ನಿರ್ದಯ

ತೀರ್ಮಾನಗಳಲ್ಲಿ ನಾವು ಅಸಹಾಯಕರು.

ಶ್ರೀ ಕುಸುಮಾಕರ ದೇಸಾಯಿ ಅವರ ಬದುಕು ಸಾರ್ಥಕ ಮತ್ತು ಅರ್ಥಪೂರ್ಣ. ಇಂಥದೊಂದು ಪರಿಮಳಚರಿತ ಗಂಧದ ಜೀವನ ಸ್ಮೃತಿಯನ್ನು ಪ್ರಕಾಶಗೊಳಿಸಲು ಲೋಕಶಿಕ್ಷಣ ಟ್ರಸ್ಟ್ ಕುಟುಂಬವು ಮುಂದಾಗಿರುವದು ಶ್ಲಾಘನೀಯ. ಎಂದಿನಿಂದಲೂ ಮೌಲಿಕ ಕೃತಿಗಳ ಪ್ರಕಟಣೆಗೆ ಹೆಸರುವಾಸಿಯಾದ ಲೋಕಶಿಕ್ಷಣ ಟ್ರಸ್ಟ್‌ನ ಕುಟುಂಬಕ್ಕೆ ನನ್ನ ಹಾರ್ದಿಕ ನಮನಗಳು.

ಶ್ರೀ ಕುಸುಮಾಕರ ದೇಸಾಯಿ ಅವರ ಮೇಲಿನ ಪ್ರೀತಿ-ಅಭಿಮಾನಗಳಿಂದ ಲೇಖನಗಳನ್ನು ಕಳಿಸಿದ ಎಲ್ಲ ಲೇಖಕ ಬಂಧುಗಳಿಗೂ ನನ್ನ ಗೌರವಪೂರ್ವಕ ಮಂದನೆಗಳು.

ಸಂದೇಶಗಳಿಂದ ಆಶೀರ್ವದಿಸಿದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ ಉಡುಪಿ, ಪೂಜ್ಯ ಶರಣಬಸಪ್ಪ ಅಪ್ಪ ಗುಲಬರ್ಗಾ, ಶ್ರೀ ಸೈಯದ್ ಮೊಹಮ್ಮದ ಮೊಹಮದುಲ್ ಹುಸೇನಿ ಗುಲಬರ್ಗಾ. ಈ ಎಲ್ಲ ಹಿರಿಯರಿಗೆ ನನ್ನ ಸವಿನಯಪೂರ್ವಕ ನಮಸ್ಕಾರಗಳು.

ನಮ್ಮ ಈ ಪ್ರಯತ್ನಕ್ಕೆ ಶುಭಕೋರಿ ಹಾರೈಸಿದ ಶ್ರೀ ಎಸ್.ಎಂ. ಕೃಷ್ಣ, ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಮತ್ತು ಶ್ರೀ ಅಲ್ಲಂ ವೀರಭದ್ರಪ್ಪ ಮಾನ್ಯ ವಾರ್ತಾಸಚಿವರು, ಕರ್ನಾಟಕ ಇವರಿಗೆ ನನ್ನ ಹೃದಯಪೂರ್ವಕ ಪ್ರಣಾಮಗಳು.

ಈ ಗ್ರಂಥ ರಚನೆಯಲ್ಲಿ ಅನೇಕ ಸಹೃದಯಿಗಳ ಸಹಕಾರವಿದೆ. ಅದನ್ನು ನಾನು ಸ್ಮರಿಸಲೇಬೇಕು. ಲೋಕಶಿಕ್ಷಣ ಟ್ರಸ್ಟ್‌ನ ಸಹಕಾರ್ಯದರ್ಶಿಗಳಾದ ಶ್ರೀ ಎ.ಸಿ. ಗೋಪಾಲ ಅವರು ತುಂಬು ಮುತುವರ್ಜಿಯಿಂದ, ಅನೇಕ ಸಲಹೆ-ಸೂಚನೆ ಮಾರ್ಗದರ್ಶನಗಳಿಂದ ಈ ಹೊತ್ತಿಗೆಯ ಸ್ವರೂಪಕ್ಕೆ ಕಾರಣರಾಗಿದ್ದಾರೆ. ಶ್ರೀ ಕಲ್ಯಾಣ ಭಕ್ಷಿ, ನ್ಯಾಯವಾದಿಗಳು, ಗುಲಬರ್ಗಾ ಇವರು ನನ್ನೊಂದಿಗೆ ಸಂಪಾದನೆಯ ಕಾರ್ಯವನ್ನು ಹಂಚಿಕೊಳ್ಳಬೇಕಿತ್ತು. ಆದರೆ ಅವರಿಗಿರುವ ಕಾರ್ಯಚಟುವಟಿಕೆಗಳ ಒತ್ತಡ ಒಂದು ಕಡೆಗೆ, ಅವರೊಂದು ಜಿಲ್ಲೆ, ನಾನೊಂದು ಜಿಲ್ಲೆಯಲ್ಲಿ ಉದ್ಯೋಗಿಗಳಾಗಿರುವದರಿಂದ ಕೂಡಿ ಕೆಲಸ ಮಾಡುವ ಅವಕಾಶ ಸಿಗದೇ ಹೋಯಿತು. ಆದರೂ ಅವರು ಅನೇಕ ಜನ ಪ್ರಮುಖರ ಲೇಖನಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಗುಲಬರ್ಗಾದ ಇನ್ನೊಬ್ಬ ಸೋದರ, ಶ್ರೀ ಶ್ರೀಕಾಂತಾಚಾರ್ಯ ಮಣೂರ, ಸಂಯುಕ್ತ ಕರ್ನಾಟಕ. ಅವರು ಅನೇಕರನ್ನು ಮುಖತಃ ಭೇಟಿಯಾಗಿ ವಿಷಯ ಸಂಗ್ರಹಿಸಿ ಲೇಖನ ರೂಪದಲ್ಲಿ ಒದಗಿಸಿದ್ದಾರೆ. ಗುಲಬರ್ಗಾದ ಇನ್ನೊಬ್ಬ ಸೋದರ ಪ್ರೊ. ರವೀಂದ್ರ ಕರ್ಜಗಿ ಅವರು ನಮಗೆ ಬಂದ ಅನೇಕ ಹಿಂದಿ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಶ್ರೀ ಆದರ್ಶ ಅವರು ಪ್ರಕಟಣೆಯ ಪತ್ರವ್ಯವಹಾರವನ್ನು ಪ್ರಾರಂಭಿಸಿದಾಗಿನಿಂದ ಪುಸ್ತಕದ ಹಂತದವರೆಗೆ ಶ್ರದ್ಧೆಯಿಂದ ಶಿಸ್ತಿನಿಂದ ನಿರ್ವಹಿಸಿ ನನ್ನ ಅನೇಕ ಕೆಲಸಗಳನ್ನು ಹಗುರಗೊಳಿಸಿದ್ದಾರೆ. ಇವರೆಲ್ಲರಿಗೂ ನಾನು

ಮನಃಪೂರ್ವಕರಾಗಿ ಋಣಿಯಾಗಿದ್ದೇನೆ.

ಈ ಕೃತಿ ಪ್ರಕಟಣೆಯಲ್ಲಿ ಸಂಪೂರ್ಣವಾಗಿ ಸಹಕರಿಸಿದ 'ಸಂಯುಕ್ತ ಕರ್ನಾಟಕ' ಹುಬ್ಬಳ್ಳಿ ಕಾರ್ಯಾಲಯದ ಸ್ಥಾನಿಕ ಸಂಪಾದಕ ಶ್ರೀ ಗುರುರಾಜ ಜೋಶಿ ಅವರು, ಮುದ್ರಣಕ್ಕೆ ತ್ವರಿತವಾಗಿ ಸಿದ್ಧತೆ ಮಾಡಿಕೊಟ್ಟ ಶ್ರೀ ಎಸ್.ಪಿ. ಬಸವರಾಜಪ್ಪ ಅವರು, ಮುಖಪುಟದ ವಿನ್ಯಾಸವನ್ನು ಸುಂದರಗೊಳಿಸಿದ ಶ್ರೀ ಕುಮಾರಸ್ವಾಮಿ ಮದ್ವಾನೆ ಮತ್ತು ನಮ್ಮ ಪುಸ್ತಕ ಪ್ರಕಟಣೆಯ ಕೆಲಸಕ್ಕಾಗಿ ಕಛೇರಿಯಲ್ಲಿ ನಾನು ವಾರಗಟ್ಟಲೆ ಕಾರ್ಯನಿರತಳಾದಾಗ ನನ್ನನ್ನೂ ಗಮನಿಸಿಕೊಳ್ಳುತ್ತಿದ್ದ ಶ್ರೀಮತಿ ಸಂಧ್ಯಾ ಬಾಳಣ್ಣವರ ಇವರಿಗೆಲ್ಲ ನನ್ನ ತುಂಬು ಮನದ ಕೃತಜ್ಞತೆಗಳು ಸಲ್ಲುತ್ತವೆ.

ಸಂಯುಕ್ತ ಕರ್ನಾಟಕದ ಬೆಂಗಳೂರು, ಹುಬ್ಬಳ್ಳಿ, ಗುಲಬರ್ಗಾ ಕಛೇರಿಗಳ ಸಹಕಾರವನ್ನು ನಾನು ಮರೆಯುವಂತೆಯೇ ಇಲ್ಲ ಇವರೆಲ್ಲರಿಂದ ನಾನು ಉಪಕೃತಳಾಗಿದ್ದೇನೆ.

ಈ ಸಂಪಾದನೆಯ ಗೌರವಕ್ಕೆ ಒಪ್ಪಿಗೆ ನೀಡಿದ ಸೋದರಿ ಶ್ರೀಮತಿ ಸರಿತಕ್ಕ ಕುಸುಮಾಕರ ದೇಸಾಯಿ ಅವರ ಅಂತಃಕರಣದ ಪಾಲು ದೊಡ್ಡದು. ನಾವಿಬ್ಬರೂ ಇಪ್ಪತ್ತೈದು ವರ್ಷಗಳಿಂದ ಒಡಹುಟ್ಟಿದ ಸೋದರಿಯರಂತೆಯೇ ಇದ್ದೇವೆ. ನನ್ನ ಬದುಕಿನ ಎಲ್ಲಾ ಸಂತಸ-ಸಂಕಟಗಳಲ್ಲೂ ದೇಸಾಯಿ ದಂಪತಿಗಳು ಪಾಲ್ಗೊಂಡಿದ್ದಾರೆ. ಅವರ ನಿರ್ಮಲ ಪ್ರೀತಿಗೆ ಈ ಕೃತಿ ಸಂಪಾದನೆ ಸಾಕ್ಷಿ.

ಸರಿತಕ್ಕನವರಿಗೆ ತಮ್ಮ ಪತಿದೇವರ ಕುರಿತಾಗಿರುವ ಆದರಾಭಿಮಾನಗಳು ಅನುಕರಣೀಯ. ಅಂದಿಗೂ-ಇಂದಿಗೂ ಅವರು ತಮ್ಮ ಬಗೆಗಿಂತಲೂ, ತಮ್ಮ ಪತಿರಾಯರ ಬಗ್ಗೆ ಮಾತಾಡುವುದೇ ಹೆಚ್ಚು. ಅವರ ದಾಂಪತ್ಯ, 'ಗಂಧ ತೀಡಿದಂಗ' ಇತ್ತು. ಈ ಶ್ರೀಗಂಧದ ಸೌರಭವು ಅನಂತಕಾಲ ಅವರಿಬ್ಬರಿಂದ ಸಾಮಾಜಿಕ ಸಾಂಸ್ಕೃತಿಕ ಸುಗಂಧವನ್ನು ಪರಿಮಳಿಸಿದೆ. ಕುಸುಮಾಮಾ ಕುಸುಮಮಾಮಿ, ನಿಮಗಿಬ್ಬರಿಗೂ ನಮ್ಮೆಲ್ಲರ ಶರಣು ಶರಣಾರ್ಥಿಗಳು.

– ಶಶಿಕಲಾ ವೀರಯ್ಯಸ್ವಾಮಿ.
ಧಾರವಾಡ
೨೬-೧೨-೨೦೦೩

ಸಂದೇಶ

ಗುಲ್ಬರ್ಗಾದ ಕುಸುಮಾಕರ ದೇಸಾಯಿಯವರು ಅನೇಕ ವರ್ಷಗಳಿಂದ ನನಗೆ ಅತ್ಯಂತ



ಪರಿಚಿತರು. ಸಮಾಜವಾದಿ ನೆಲೆಯಲ್ಲಿ ನಿಷ್ಠಾವಂತ ಆದರ್ಶ ರಾಜಕಾರಣಿಯಾಗಿ ಮೆರೆದ ಅವರು ಹೈದರಾಬಾದ್-ಕರ್ನಾಟಕದ ಶ್ರೇಷ್ಠ ನೇತಾರರಾಗಿ ವಿಶಿಷ್ಟ ಸೇವೆಯನ್ನು ಸಲ್ಲಿಸಿದ್ದಾರೆ. ನಮ್ಮಲ್ಲಿ ವಿಶೇಷ ಭಕ್ತಿ-ಅಭಿಮಾನಗಳನ್ನು ಹೊಂದಿದ್ದ ಅವರು ನಮ್ಮ ಆತ್ಮೀಯರೂ, ಪರಮಪ್ರೀತಿ ಪಾತ್ರರೂ ಆಗಿದ್ದರು. ಅವರ ಸೇವೆ, ಸಹೃದಯತೆಗಳನ್ನು ನಾವು ಯಾವಾಗಲೂ ಸ್ಮರಿಸುತ್ತಿದ್ದೇವೆ. ಅವರ ಸ್ಮರಣೆ ಮುಂದಿನ ಪೀಳಿಗೆಗೆ ಸ್ಫೂರ್ತಿಯಾಗುವುದರಲ್ಲಿ ಸಂದೇಹವಿಲ್ಲ. ಅವರ ಸಂಸ್ಮರಣೆಯಲ್ಲಿ ಗ್ರಂಥ ಪ್ರಕಟಿಸುವ ಈ ಪ್ರಯತ್ನವನ್ನು ನಾವು ತುಂಬು ಹೃದಯದಿಂದ ಸ್ವಾಗತಿಸುತ್ತೇವೆ.

ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು
ಶ್ರೀಪೇಜಾವರ ಮಠ,
ಜಗದ್ಗುರು ಶ್ರೀ ಮಧ್ವಾಚಾರ್ಯ ಮಹಾಸಂಸ್ಥಾನ, ಉಡುಪಿ.



ಸಂದೇಶ

ದಿ. ಕುಸುಮಾಕರ ದೇಸಾಯಿ ಅವರ ಕುರಿತು ಸ್ಮರಣ ಸಂಚಿಕೆ ತರುತ್ತಿರುವದು ತುಂಬ ಸಂತೋಷದ ಸಂಗತಿ. ನಾಡಿಗೆ ಸೇವೆ ಸಲ್ಲಿಸಿದವರನ್ನು ನೆನಪಿಸಿಕೊಳ್ಳುವದು ನಮ್ಮ ಸತ್ಪರಂಪರೆ. ದಿ. ದೇಸಾಯಿ ಅವರು ಸ್ವಾತಂತ್ರ್ಯ ಹೋರಾಟಗಾರರಾಗಿ ನಾಡಿಗೆ ತಮ್ಮನ್ನು ಸಮರ್ಪಿಸಿಕೊಂಡು, ಮುಂದೆ ಯಾವುದೇ ಅಧಿಕಾರಕ್ಕೆ ಆಸೆ ಪಡದೇ ಸಜ್ಜನ ರಾಜಕಾರಣಿ ಎಂದು ಹೆಸರಾದವರು.

ಅಧಿಕಾರ ತಾನಾಗಿಯೇ ಬಂದಾಗ, ಅದನ್ನು ಸದುಪಯೋಗಪಡಿಸಿಕೊಂಡು, ಬೆಳೆಯುತ್ತಿರುವ ಕಲಬುರ್ಗಿಯಂಥ ಮಹಾನಗರಕ್ಕೆ ಶಾಶ್ವತ ಕುಡಿಯುವ ನೀರಿನ ಭೀಮಾ ಯೋಜನೆ ಅನುಷ್ಠಾನಗೊಳಿಸುವ ಮೂಲಕ ಸದಾ ಸ್ಮರಣೆಯಲ್ಲಿ ಉಳಿದಿದ್ದಾರೆ. ಇಂಥ ಅವರ ಸಾಧನೆಗಳ ಕುರಿತು ಸ್ಮರಣ ಸಂಚಿಕೆಯನ್ನು ತರುತ್ತಿರುವ ನಿಮಗೆ ಯಶಸ್ವಿಯಾಗಲಿ. ದಿ. ದೇಸಾಯಿ ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ.

ಪೂಜ್ಯ ಡಾ. ಶರಣಬಸವಪ್ಪ ಅಪ್ಪಾ
ಪೀಠಾಧಿಪತಿಗಳು ಮಹಾ ದಾಸೋಹಿ
ಶ್ರೀ ಶರಣಬಸವೇಶ್ವರ ಸಂಸ್ಥಾನ ಮತ್ತು
ಅಧ್ಯಕ್ಷರು, ಅಖಿಲ ಭಾರತ ಅನುಭವ ಮಂಟಪ ಕಲಬುರ್ಗಿ.

ಸಂದೇಶ

ಶ್ರೀ ಕುಸುಮಾಕರ ದೇಸಾಯಿ ಅವರು, ನನಗೆ ಅತ್ಯಂತ ಆತ್ಮೀಯರು. ಸ್ವಾತಂತ್ರ್ಯ



ಹೋರಾಟದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ತಮ್ಮನ್ನು ತೊಡಗಿಸಿಕೊಂಡ, ಸ್ವಾತಂತ್ರ್ಯ ಹೋರಾಟಗಾರರ ಮನೆತನದ ಸ್ವಾತಂತ್ರ್ಯ ಪ್ರೇಮಿ. ಉನ್ನತ ಧ್ಯೇಯೋದ್ದೇಶ ಹಾಗೂ ವಿಚಾರಗಳನ್ನು ಹೊಂದಿರುವ ದೇಸಾಯಿ ಅವರು, ರಾಜಕೀಯದಲ್ಲಿದ್ದರೂ, ಅವರು ಎಲ್ಲರಂತಿರಲಿಲ್ಲ. ಎದ್ದು ಕಾಣುವ ವಿಶಿಷ್ಠ ವ್ಯಕ್ತಿತ್ವ ಹೊಂದಿದರು.

ಅಧಿಕಾರದ ಹಿಂದೆ ಬೀಳದೇ, ಅಧಿಕಾರ ಅವರ ಮನೆಯ ಬಾಗಿಲಿಗೆ ಬಂದಾಗ, ಕರ್ನಾಟಕ ಜಲ ಮಂಡಳಿಯ ಅಧ್ಯಕ್ಷರಾಗಿ ಕಲಬುರ್ಗಿಯಂಥ ಬೆಳೆಯುತ್ತಿರುವ ಐತಿಹಾಸಿಕ ನಗರಕ್ಕೆ, ಭೀಮಾ ಯೋಜನೆಯ ಮೂಲಕ ಶಾಶ್ವತ ಪರಿಹಾರ ಕಲ್ಪಿಸಿ, ನಮ್ಮ ಪಾಲಿಗೆ ಮತ್ತೊಬ್ಬ ನಜೀರಸಾಬ್ ಆಗಿ ಸದಾಕಾಲ ಸ್ಮರಣೀಯರು.

ಅವರು ನಮ್ಮನ್ನಗಲಿ ಒಂದು ವರ್ಷವಾಯಿತು. ಅವರ ಪ್ರಥಮ ಪುಣ್ಯ ಸ್ಮರಣೆಯ ಈ ಸಂದರ್ಭದಲ್ಲಿ ಅವರ ಅಭಿಮಾನಿಗಳು, ಸ್ನೇಹಿತರು, ಅವರ ಶ್ರೀಮತಿಯವರು 'ಕುಸುಮಾಂಜಲಿ'ಯನ್ನು ಹೊರತರುತ್ತಿರುವುದಕ್ಕೆ ಸಮಸ್ತ ಜನತೆಯ ಪರವಾಗಿ ಯಶಸ್ವಿಯಾಗಲಿ ಎಂದು ಶುಭ ಹಾರೈಸಿ, ದಿ.ಕುಸುಮಾಕರ ದೇಸಾಯಿ ಅವರ ಆತ್ಮಕ್ಕೆ ಅಲ್ಲಾಹ್‌ನು ಚಿರ ಶಾಂತಿ ನೀಡಲಿ ಎಂದು ಪ್ರಾರ್ಥಿಸುವೆ.

ಸಜ್ಜಾದ
ಸೈಯದ್ ಮೊಹ್ಮದ ಮೊಹ್ಮದುಲ್ ಹುಸೇನಿ
ಹಜರತ್ ಖ್ವಾಜಾ ಬಂದೇನವಾಜ್ ದರ್ಗಾ ಗುಲಬರ್ಗಾ



ಎಸ್. ಎಂ. ಕೃಷ್ಣ
ಮುಖ್ಯ ಮಂತ್ರಿ

ಬೆಂಗಳೂರು - ೫೬೦ ೦೦೧
ದಿನಾಂಕ 20.12.2003

ಸಂದೇಶ

ಶ್ರೀ ಕುಸುಮಾಕರ ಸಂಜೀವ್‌ರಾವ್ ದೇಸಾಯಿ ಅವರು ಒಬ್ಬ ಅಗ್ರಪಂಕ್ತಿಯ ನಿಸ್ವಾರ್ಥ ಸ್ವಾತಂತ್ರ್ಯ ಸೇನಾನಿ ಮತ್ತು ಕ್ರಿಯಾಶೀಲ ಸಮಾಜ ಸೇವಾ ಕಾರ್ಯಕರ್ತರಾಗಿದ್ದರು.

ಬಾಲ್ಯದಲ್ಲಿಯೇ ಗಾಂಧೀಜಿಯವರಿಂದ ಪ್ರೇರಿತರಾಗಿ ಸ್ವಾತಂತ್ರ್ಯ ಸಮರದ ಸೆಳೆತಕ್ಕೆ ಒಳಗಾದ ಅವರು ಉದ್ದಕ್ಕೂ ಹೋರಾಟದ ಜೀವನ ನಡೆಸಿದವರು. ಸ್ವಾತಂತ್ರ್ಯ ಹೋರಾಟವಲ್ಲದೆ ಹೈದರಾಬಾದ್ ವಿಮೋಚನಾ ಆಂದೋಲನ, ತುರ್ತುಪರಿಸ್ಥಿತಿ ವಿರುದ್ಧದ ಹೋರಾಟ ಮತ್ತು 1965ರ ಗುಲ್ಬರ್ಗಾಜಿಲ್ಲೆಯ ಬರಗಾಲ ಪರಿಹಾರ ಕಾರ್ಯಕ್ಕೆ ಒತ್ತಾಯಿಸಿ ನಡೆಸಿದ ಹೋರಾಟದ ಮುಂಚೂಣಿಯಲ್ಲಿದ್ದ ಅವರು ಕಡೆಯ ಉಸಿರುವವರೆಗೂ ಸಾಮಾಜಿಕ ಸೇವೆಯಲ್ಲಿ ಸಕ್ರಿಯರಾಗಿದ್ದವರು.

ಗುಲ್ಬರ್ಗಾದಲ್ಲಿ ಯಶಸ್ವೀ ವಕೀಲಿ ವೃತ್ತಿ ಇದ್ದರೂ ಜನಪರ ಹೋರಾಟಗಳಲ್ಲಿ ಕ್ರಿಯಾಶೀಲರಾಗಿದ್ದ ದೇಸಾಯಿ, ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯ ಅಧ್ಯಕ್ಷರಾಗಿ ನಾಡಿನ ಸಣ್ಣ ಮತ್ತು ಮಧ್ಯಮ ಪ್ರಮಾಣದ ಪಟ್ಟಣಗಳ ಕುಡಿಯುವ ನೀರಿನ ಕೊರತೆ ನೀಗಿಸಲು ನಡೆಸಿದ ಪ್ರಯತ್ನ ದಾಖಲಾರ್ಹ. ಗುಲ್ಬರ್ಗಾ ನಗರಕ್ಕೆ ರೂಪಿಸಿದ ಭೀಮ ಕುಡಿಯುವ ನೀರಿನ ಯೋಜನೆ ಅವರ ಕಾರ್ಯಕ್ಷಮತೆಯ ಪ್ರತೀಕ.

ಸರಳತೆ ಮತ್ತು ನಿಷ್ಕಪಟ ವ್ಯಕ್ತಿತ್ವದವರಾದ *ಶ್ರೀ ಕುಸುಮಾಕರ ಸಂಜೀವರಾವ್ ದೇಸಾಯಿ* ಅವರ ಸಾರ್ಥಕ ಬದುಕನ್ನು ದಾಖಲಿಸಲು **ನೆನಪಿನ ಸಂಚಿಕೆ** ಹೊರತರುತ್ತಿರುವುದು ಶ್ಲಾಘನೀಯ. *ಶ್ರೀ ಕುಸುಮಾಕರ ಸಂಜೀವರಾವ್ ದೇಸಾಯಿ* ಅವರ **ಸಂಸ್ಮರಣ ಗ್ರಂಥ** ಅವರ ಹೋರಾಟದ ಬದುಕನ್ನು ದಾಖಲಿಸುವ ಲೇಖನಗಳಿಂದೊಡಗೂಡಿ ಸರ್ವಾಂಗ ಸುಂದರವಾಗಿ ಮೂಡಿಬರಲೆಂದು ಹಾರೈಸುತ್ತೇನೆ.

(ಎಸ್.ಎಂ.ಕೃಷ್ಣ)

ದೂರವಾಣಿ : ಕಛೇರಿ : [illegible]
ನಿವಾಸ : [illegible]

ವಿಧಾನಸೌಧ, ಬೆಂಗಳೂರು - ೫೬೦ ೦೦೧

ದಿನಾಂಕ [illegible]



ಅಲ್ಲಂ ವೀರಭದ್ರಪ್ಪ
ಜಲಸಂಪನ್ಮೂಲ (ಕೃಷ್ಣಾ ಕಣಿವೆ)
ಖಾತೆ ಸಚಿವರು

ಸಂದೇಶ

ಸ್ವಾತಂತ್ರ್ಯ ಹೋರಾಟಗಾರರು, ಸಮಾಜವಾದಿಗಳು, ಸುಪ್ರಸಿದ್ಧ ವಕೀಲರೂ ಆಗಿದ್ದ ಕಲಬುರ್ಗಿಯವರಾದ ದಿವಂಗತ ಶ್ರೀ ಸುಧಾಕರ ದೇಸಾಯಿಯವರು ನನ್ನ ಆತ್ಮೀಯರಲ್ಲಿ ಒಬ್ಬರು.

ವಿದ್ಯಾರ್ಥಿ ದಿಸೆಯಲ್ಲಿಯೇ ಹೈದರಾಬಾದ್ ವಿಮೋಚನಾ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಕಠಿಣ ಶಿಕ್ಷೆಯನ್ನು ಅನುಭವಿಸಿ ಆ ನಂತರ ಭೂಗತರಾಗಿ ಹೋರಾಟಮಾಡಿದ ಖ್ಯಾತಿ ಇವರದ್ದು.

ಆ ನಂತರ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿ ಎಲ್.ಎಲ್.ಎಂ. ಪದವಿ ಪಡೆದು, ಕಲಬುರ್ಗಿಯ ಕಾನೂನು ಕಾಲೇಜಿನಲ್ಲಿ ಪ್ರೊಫೆಸರ್ ಆಗಿ ಸಾವಿರಾರು ವಿದ್ಯಾರ್ಥಿಗಳಿಗೆ ಕಾನೂನನ್ನು ಬೋಧಿಸಿದರು, ಮತ್ತು ಅತ್ಯಂತ ಪ್ರಖ್ಯಾತ ನ್ಯಾಯವಾದಿಗಳಾಗಿ ಸಮಾಜಸೇವಕರಾಗಿ ಹೆಸರುವಾಸಿಯಾದರು.

ತತ್ವ ಹಾಗೂ ಮೌಲ್ಯಗಳಿಗೆ ಕೊನೆಯವರೆಗೂ ಬದ್ಧರಾಗಿ ಜೀವಿಸಿದ್ದ ಇವರು ರಾಜಕೀಯ ಸ್ಥಾನ ಮಾನಗಳಿಗಾಗಿ ಎಂದೂ ರಾಜಿ ಮಾಡಿಕೊಂಡವರಲ್ಲ. ಸಾಹಿತ್ಯಪ್ರಿಯರು, ಸರಳರೂ ಸಜ್ಜನರೂ ಆಗಿದ್ದ ದೇಸಾಯಿಯವರು ಇನ್ನೂ ಹಲವು ಕಾಲ ನಮ್ಮೊಡನೆ ಇರಬೇಕಾಗಿತ್ತು. ಆದರೆ ದುರ್ದೈವ. ಅವರು ವಿಧಿವಶರಾದರು. ಅವರ ಮೊದಲನೇ ವಾರ್ಷಿಕ ಪುಣ್ಯ ತಿಥಿಯ ಸ್ಮರಣಾರ್ಥ ಅವರ ಗೆಳೆಯರೆಲ್ಲರೂ ಸೇರಿ ಒಂದು ವಿಶಿಷ್ಟವಾದ ಸ್ಮರಣ ಸಂಚಿಕೆಯನ್ನು ಹೊರತರುತ್ತಿರುವುದು, ಅವರ ನೆನಪನ್ನು ನಮ್ಮೆಲ್ಲರಲ್ಲಿ ಚಿರಸ್ಥಾಯಿಗೊಳಿಸುವುದರಲ್ಲಿ ಸಂದೇಹವಿಲ್ಲ.

(ಅಲ್ಲಂ ವೀರಭದ್ರಪ್ಪ)

ಪರಿವಿಡಿ

ಭಾಗ-೦೧

ಭಾವಾಂಜಲಿ

ದಳ-೦೧

ಸ್ವಾತಂತ್ರ್ಯಯೋಧರು

ದಳ-೦೨

ನ್ಯಾಯಾಧೀಶರು ಮತ್ತು ನ್ಯಾಯವಾದಿಗಳು

ದಳ-03

ರಾಜಕೀಯ ಬಂಧುಗಳು

ದಳ-೦೪

ವೃತ್ತಿ ಬಾಂಧವರು

ದಳ-೦೫

ಸಂಬಂಧಿಕರು

ದಳ-೦೬
ಹಿತೈಷಿ ಬಂಧುಗಳು

ದಳ-೦೭
ವೈದ್ಯ ಬಂಧುಗಳು

ದಳ-೦೮
ಆಂಗ್ಲ ಲೇಖನಗಳು

ಭಾಗ-೦೨

ಭಾವಚಿತ್ರಾಂಜಲಿ

(ದಿ. ಕುಸುಮಾಕರ ದೇಸಾಯಿ ಅವರ ಸ್ಮರಣೀಯ ಭಾವಚಿತ್ರಗಳು)

ಲೇಖಕರ ವಿಳಾಸಗಳು

ದಳ-೦೧

ಸ್ವಾತಂತ್ರ್ಯ ಯೋಧರು

ಹೋರಾಟದ ನೆನಪುಗಳು


ಹೈದರಾಬಾದ ವಿಮೋಚನಾ ಹೋರಾಟದಲ್ಲಿ ಸಕ್ರಿಯ ಪಾತ್ರ ವಹಿಸಿದ್ದ ಕುಸುಮಾಕರ ದೇಸಾಯಿ ಅವರು ಅಂದು ನಡೆದ ಹೋರಾಟದ ಕಿರು ಚಿತ್ರಣವನ್ನು ದಾಖಲಿಸಿಟ್ಟುಕೊಂಡಿದ್ದರು. ಅವರ ಲೇಖನದ ಆಯ್ದ ಭಾಗವನ್ನು ಇಲ್ಲಿ ಕೊಡಲಾಗಿದೆ. ಅವರ ಕೈಬರಹವನ್ನೂ ಈ ಲೇಖನದ ಜೊತೆಗೆ ಕೊಡಲಾಗಿದೆ.

– ಸಂಪಾದಕಿ

೧೫ ಅಗಸ್ಟ್ ೧೯೪೭. ಇತಿಹಾಸದ ಉದ್ದಗಲಕ್ಕೂ ಒಂದು ಮಹಾನ್ ದೇಶವೆಂದು ಪರಿಗಣಿಸಲ್ಪಟ್ಟ ಭಾರತ, ಪರಕೀಯರ ಆಡಳಿತದಿಂದ ಅಂದು ಮುಕ್ತಿ ಪಡೆದು ಸ್ವತಂತ್ರ ರಾಷ್ಟ್ರವೆಂದು ತನ್ನ ಹೊಸ ಬದುಕಿನ ನಾಂದಿ ಹೇಳಿತು. ನಾವು ಪಡೆದ ಸ್ವಾತಂತ್ರ್ಯ; ಫಲ ಪುಷ್ಪಗಳಿಂದ ಅಲಂಕರಿಸಿದ ಬಂಗಾರದ ತಟ್ಟೆಯಲ್ಲಿ ಪಡೆದ ಒಂದು ದಾನ ಕೊಡುಗೆ ಆಗಿರಲಿಲ್ಲ. ಅಂದಿನ ಆ ಸಂಘರ್ಷಕ್ಕೆ ಇತಿಹಾಸವಿದೆ. ಅದಕ್ಕೆ ಅಂಟಿಕೊಂಡ ತ್ಯಾಗ, ತಪಶ್ಚರ್ಯ, ಬಲಿದಾನ, ಸಾವು ನೋವುಗಳ ಗಾಥೆ ಇದೆ. ಆ ಸುದಿನದ ಸ್ವಾತಂತ್ರ್ಯೋತ್ಸವದ ಸುವರ್ಣ ಮಹೋತ್ಸವದ ಆಚರಣೆಯನ್ನು ಇದೀಗ ಮುಕ್ತಾಯಗೊಳಿಸಿದ್ದೇವೆ. ಸ್ವಾತಂತ್ರ್ಯ ಸಂಗ್ರಾಮದ ಸುದೀರ್ಘ ಇತಿಹಾಸಕ್ಕೆ ಒಂದು ಪೂರಕ ಟಿಪ್ಪಣಿ ಜೋಡಿಸಲ್ಪಟ್ಟಿದೆ ಎಂಬುದನ್ನು ನಾವು ಮರೆಯುವಂತಿಲ್ಲ. ಅದೂ ಕೂಡ ಭಾರತ ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವುಗಳ ಸಂಕ್ಷಿಪ್ತ ಆವೃತ್ತಿ ಆಗಿದೆ. ಅಂದು ನಿಜಾಮ ದೊರೆಯ ವಿರುದ್ಧ ಬಂಡೆದ್ದ ೧ ಕೋಟಿ ೭೫ ಲಕ್ಷ ಜನಗಳು ಹೋರಾಡಿದ ಅನುಭವ, ಅನಿಸಿಕೆಗಳು 'ಪೋಲಿಸ್ ಕಾರ್ಯಾಚರಣೆ'ಯ ನಾಮಕರಣದಿಂದ ಇತಿಹಾಸದ ಪುಟಗಳನ್ನು ಸೇರಿವೆ.

ಇದರ ಹಿನ್ನೆಲೆ ಗಮನಿಸಬೇಕಾದರೆ, ದ್ವಿತೀಯ ಮಹಾಯುದ್ಧದ ನಂತರದ ಭಾರತ ನಕಾಶೆ ನೋಡಬೇಕಾಗುತ್ತದೆ. ಅಂದಿನ ಆ ನಕಾಶೆಯಲ್ಲಿ ನಮಗೆ ಎರಡು ಬಣ್ಣಗಳು ಗೋಚರವಾಗುತ್ತವೆ. ಬ್ರಿಟಿಷರ ಆಳ್ವಿಕೆಗೆ ಒಳಪಟ್ಟ, ಭಾರತದ ಎರಡು ಮೂರಾಂಶ ಭೂಭಾಗ ಕೆಂಪು ಬಣ್ಣದಲ್ಲಿದೆ. ಬೇರೊಂದು ಹಳದಿ ದೊಡ್ಡಪುಟ್ಟ ಚುಕ್ಕೆಗಳಿಂದ ನಿರ್ದೇಶಿಸಿದ ಒಂದು ಮೂರಾಂಶ ದೇಶದ ತುಂಡು. ಅದು ನಮ್ಮವರೇ ಆದ ರಾಜ-ಮಹಾರಾಜರುಗಳು, ನವಾಬರು, ನಮ್ಮ ಗುಲಾಮಿಯ ಸಂಕೇತವೆಂದು ಸೂಚಿಸುವ ಆಡಳಿತದ ಘಟಕಗಳು. ಇವು ಹೇಗೆ ಮಾಯವಾದವೆಂದು ತಿಳಿಯಬೇಕಾದರೆ, ವ್ಹಿ.ಪಿ. ಮೆನನ್‌ರ ಆಕರ ಗ್ರಂಥವನ್ನು ಅವಲೋಕನ ಮಾಡಬೇಕಾಗುವದು. ಇಂಥ ದೇಶಿ ರಾಜ ಮಹಾರಾಜರುಗಳು ಮತ್ತು ಅವರ ಅಧೀನಕ್ಕೆ ಒಳಪಟ್ಟವೆಂದು ನಂಬಬೇಕಾದ ದೇಶಿ ಸಂಸ್ಥಾನಗಳ ಸಂಖ್ಯೆ ೫೬೫ ಇತ್ತೆಂದು ಇಂದು

ದಿ. ಕುಸುಮಾಕರರ ಕೈಬರಹ





ಕುಸುಮಾಂಜಲಿ

ನಂಬುವದು ಅಸಾಧ್ಯ.

ಬ್ರಿಟಿಷ ಆಳ್ವಿಕೆ ಮುಕ್ತಾಯ ಹಂತದಲ್ಲಿದೆ. ಅವರು ಇಲ್ಲಿಂದ ತೊಲಗುತ್ತಾರೆ. ಅವರ ಸಮಾನಾಂತರಿ ಪ್ರಭುತ್ವದ (Paramountacy) ಕೆಲ ಮಹಾರಾಜರುಗಳಿಗೆ ತಮ್ಮ ಗತಕಾಲದ ವೈಭವ ಮರುಕಳಿಸಹತ್ತಿತು. ಈ ಕನಸು ಕಂಡವರಲ್ಲಿ ಅನೇಕರನ್ನು ಉದ್ದಾಹರಿಸಬಹುದಾದರೂ, ಇಬ್ಬರು ಮಾತ್ರ ಪ್ರಮುಖರು. ತ್ರಾವಣಕೋರ ಸಂಸ್ಥಾನದ ಮಹಾರಾಜ ಮತ್ತು ಹೈದರಾಬಾದಿನ ಅಂದಿನ ದೊರೆ ನವಾಬ ಮೀರ ಉಸ್ಮಾನ ಅಲಿಖಾನ್.

ಹದಿನೇಳನೆ ಶತಮಾನದ ಅಂತ್ಯ ಕಾಲಕ್ಕೆ ಔರಂಗಜೇಬನ ಸಾಮ್ರಾಜ್ಯ ಶಿಥಿಲಗೊಳ್ಳುತ್ತಿದ್ದಂತೆ ಮೊಗಲರ ಆಳ್ವಿಕೆ ಕುಸಿಯುತ್ತಿದ್ದುದನ್ನು ಮನಗಂಡು, ದಿಲ್ಲಿಯ ನೇಮಕದ ದಕ್ಷಿಣದ ಸುಭೇದಾರ ಮೀರ ಆಸಿಫ್ ಜಾಹ ನಿಜಾಮಲ್ ಮುಲ್ಕ ಬಿರುದಾಂಕಿತನು ಹೈದರಾಬಾದಿನಲ್ಲಿ, ತನ್ನ ಸ್ವತಂತ್ರ ಅಸ್ತಿತ್ವವನ್ನು ಘೋಷಿಸಿಬಿಟ್ಟನು. ಫ್ರೆಂಚರು, ಪೋರ್ಚುಗೀಜರು, ಮರಾಠಾ ಶಕ್ತಿಗಳ ಜೊತೆ ಸಂಧಾನ ಸಮಯ ನೈಪುಣ್ಯದಿಂದ, ನಿಜಾಮ ರಾಜ್ಯದ ಸಂಸ್ಥಾಪಕನಾಗಿಬಿಟ್ಟ. ನವಾಬ ಮೀರ ಉಸ್ಮಾನ ಅಲಿ ನಿಜಾಮ ಮನೆತನದ ಏಳನೆ ದೊರೆ.

ದೊರೆ ಮುಸಲ್ಮಾನ, ಪ್ರತಿಶತ 95ಕ್ಕೆ ಸಮೀಪ ಪ್ರಜೆಗಳು ಹಿಂದುಗಳು. "ಸ್ವತಂತ್ರ ಸಾರ್ವಭೌಮ ನಾನಾಗ ಬೇಕಾದರೆ, ಬಹುಸಂಖ್ಯಾತ ಹಿಂದುಗಳನ್ನು ತನ್ನೆಡೆಗೆ ಒಲಿಸಿಕೊಳ್ಳುವದು, ಅವರನ್ನು ಸೇರಿಸಿಕೊಳ್ಳುವದು. ಆ ನಿಟ್ಟಿನ ಮೊದಲ ಹೆಜ್ಜೆಯೆಂದರೆ, ಹೈದರಾಬಾದ ಸ್ಟೇಟ್ ಕಾಂಗ್ರೆಸ್ ರಾಜಕೀಯ ಸಂಘಟನೆಗೆ ಹೇರಿದ ನಿರ್ಬಂಧದ ವಾಪಸಾತಿ." ಅವನ ಈ ಧೂರ್ತ ಕ್ರಮವನ್ನು ಅರಿತುಕೊಳ್ಳಲು ಜನತೆಗೆ, ಸಮಯ ಬೇಕಾಗಲೇ ಇಲ್ಲ. ಸ್ವಾತಂತ್ರ್ಯ ಸಂಗ್ರಾಮದ ಚುಕ್ಕಾಣಿ ಹಿಡಿದು ಹೋರಾಡುತ್ತಿರುವ ದೇಶದ ರಾಷ್ಟ್ರೀಯ ಕಾಂಗ್ರೆಸ್‌ನೊಂದಿಗೆ ತನುಮನಧನದಿಂದ ಒಂದುಗೂಡಿದ್ದರಲ್ಲದೆ ಟಿಳಕ-ಗಾಂಧಿಯವರ ತತ್ವಗಳಿಗೆ ಭಾವನಾತ್ಮಕವಾಗಿ ಏಕರೂಪವಾಗಿ ಬಿಟ್ಟಿದ್ದಿತು ಹೈದರಾಬಾದ್ ಸಂಸ್ಥಾನದ ಜನತೆ.

೧೫ ಅಗಸ್ಟ್ ಸಮೀಪಿಸುತ್ತಿದ್ದಂತೆ ಬ್ರಿಟಿಷರಿಂದಷ್ಟೆ ಅಲ್ಲ, ನಿಜಾಮರ ನಿರಂಕುಶ ಆಳ್ವಿಕೆಯಿಂದಲೂ `ಮುಕ್ತಿ ಪಡೆಯುತ್ತೇವೆಂಬ ನಂಬಿಕೆ ಜನಮನದಲ್ಲಿ ಬೇರೂರಿಬಿಟ್ಟಿದ್ದಿತು. ಇದನ್ನು ಹತ್ತಿಕ್ಕಲು, ಒತ್ತಡ ಹೇರಲು ತನ್ನ ಆಶೋತ್ತರಗಳಿಗೆ ರೂಪಕೊಡಲು ದಬ್ಬಾಳಿಕೆ ತೋರತುಪಡಿಸಿ ಬೇರೆ ಮಾರ್ಗ ಇರಲೇ ಇಲ್ಲ. ನಿಜಾಮರು ಇದಕ್ಕೆ ಕೈಕೊಂಡ ಕ್ರಮಗಳು ಒಂದೆರಡಲ್ಲ. ಬ್ರಿಟಿಷರು ಅನುಸರಿಸಿದ ದಾರಿಯನ್ನು ನಿಜಾಮನು ತನ್ನದಾಗಿರಿಸಿಕೊಂಡಿದ್ದರೆ, ಭಾರತ ಜನತೆ ಸ್ವಾತಂತ್ರ್ಯಕ್ಕಾಗಿ ಬಳಸಿದ ಎಲ್ಲ ದಾರಿಗಳನ್ನು ತುಳಿಯಲು ಜನತೆ ಸಿದ್ಧತೆ ಮಾಡಬೇಕಾಯಿತು.

ಸಂಘರ್ಷ ಸಂಗ್ರಾಮಕ್ಕೆ ಜನತೆಗೆ ಕರೆಕೊಟ್ಟದ್ದು ಅಂದಿನ ಹೈದರಾಬಾದ್ ಸ್ಟೇಟ್ ಕಾಂಗ್ರೆಸ್.

ಅಂದಿನ ಹೈದರಾಬಾದ್ ಸಂಸ್ಥಾನ, ನಿಜಾಮ ರಾಜ್ಯದಲ್ಲಿ ೧೬ ಜಿಲ್ಲೆಗಳಿದ್ದವು. ಅವುಗಳಲ್ಲಿ ತೆಲಗು ಭಾಷಿಕರ ೮ ಜಿಲ್ಲೆಗಳು, ತೆಲಂಗಾಣ, ಮರಾಠಿ ಭಾಷಿಕರ ಐದು ಜಿಲ್ಲೆಗಳು, ಇಂದಿನ ಮರಾಠವಾಡಾ, ಕನ್ನಡ ಮಾತನಾಡುವವರ ೩ ಜಿಲ್ಲೆಗಳು, ಅವುಗಳೇ ಇಂದಿನ ಹೈದರಾಬಾದ್ ಕರ್ನಾಟಕ. ಬಹುಭಾಷಿಕರ ಸಂಸ್ಥಾನ ಹೀಗಿದ್ದಿತು. ಸ್ಟೇಟ್ ಕಾಂಗ್ರೆಸ್‌ನ ಅಧ್ಯಕ್ಷರು ಸ್ವಾಮಿ ರಾಮಾನಂದತೀರ್ಥರು. ಅವರ ನೇತೃತ್ವದಲ್ಲಿ ನಿಜಾಮರ ವಿರುದ್ಧ ಹೋರಾಟ ಪ್ರಾರಂಭವಾದದ್ದು ೭ ಅಗಸ್ಟ್ ೧೯೪೭, ಸ್ವಾತಂತ್ರ್ಯೋದಯದ ಎಂಟು ದಿವಸಗಳಿಗೆ ಮುಂಚೆ.

ನನ್ನ ಮನೆತನ, ೧೯೨೦ ರಿಂದ ಸ್ವಾತಂತ್ರ ಸಂಗ್ರಾಮದಲ್ಲಿ ಸಕ್ರಿಯವಾಗಿದ್ದ ಕುಟುಂಬ. ಒಬ್ಬ ಕಕ್ಕ ಗೋಪಾಲಕೃಷ್ಣರಾಯ ತಾನು ಪಡೆದ ತಹಶೀಲ್ದಾರಿ ಹುದ್ದೆಗೆ ರಾಜೀನಾಮೆ ನೀಡಿ, ಖಾದಿ ಬಟ್ಟೆ ಉಟ್ಟು ವಕೀಲಿ ವೃತ್ತಿಗೆ ಇಳಿದರು. ಇನ್ನೊಬ್ಬ ಕಕ್ಕ ರಾಘವೇಂದ್ರರಾಯ, ಅಂದು ನಿಜಾಮ ಸಂಸ್ಥಾನದ ಕೇಂಬ್ರಿಜ್, ಆಕ್ಸಫರ್ಡ್ ಎಂದು ಪರಿಗಣಿಸಲ್ಪಡುತ್ತಿರುವ ನಿಜಾಮ ಕಾಲೇಜಿನ ಬಿ.ಎ. ಅಂತಿಮ ವರ್ಗದ ವಿದ್ಯಾರ್ಥಿ. ಅಲ್ಲಿಯ ಪದವೀಧರರಿಗೆ ಕನಿಷ್ಠ ತಹಶೀಲ್ದಾರಿ ಹುದ್ದೆ ಕಟ್ಟಿಟ್ಟದ್ದು. ೧೯೨೧ ರಲ್ಲಿ ಮಹಾತ್ಮಾ ಗಾಂಧಿಯವರ ಕರೆಗೆ ಓಗೊಟ್ಟು, ವಿದ್ಯಾರ್ಜನೆಗೆ ಬಿದಾಯಿ ಹೇಳಿ, "ವಿದ್ಯಾನಂದ ಗುರುಕುಲ" ಎಂಬ ಒಂದು ರಾಷ್ಟ್ರೀಯ ಶಾಲೆ ಸ್ಥಾಪಿಸಲು ಮುಂದಾದರು. ಇಂದಿಗೂ ಅದೊಂದು ಮಾದರಿ ಶಿಕ್ಷಣ ಸಂಸ್ಥೆಯೆಂದು, ಪದವಿ ಕಾಲೇಜಾಗಿ ಕಾರ್ಯ ನಿರತವಾಗಿದೆ.

ಇಂದಿನ ಮಹಾರಾಷ್ಟ್ರ, ಮರಾಠವಾಡದಲ್ಲಿ ಒಂದು ಜಿಲ್ಲಾ ಕೇಂದ್ರವಾದ "ಲಾತೂರು" ಅಂದು ರೈಲು ಸಂಪರ್ಕವೂ ಇಲ್ಲದ ಒಂದು ತಾಲೂಕು. ಅಲ್ಲಿಯ ಕೆಲಸಕ್ಕೆ ಬಾರದ ಮಾಮೂಲಿ ವಕೀಲ ಕಾಸಿಂ ರಜವಿ. ಇಂಗ್ಲೀಷ ಭಾಷೆಯ ಯಾವ ಶಬ್ದವೂ ಅರ್ಥವಾಗದ ಧರ್ಮಾಂಧ. ಉರ್ದು ಭಾಷೆಯ ಹಿಡಿತ, ಅಮೋಘ ವಕ್ತೃತ್ವ ಶೈಲಿ, ಇವುಗಳೆಲ್ಲ ಹೈದರಾಬಾದ ರಾಜ್ಯದ ಆಡಳಿತ ವರ್ಗಗಳ ಗಮನಕ್ಕೆ ಬಂದು ಅವನನ್ನು ಹೈದರಾಬಾದ್ ಪಟ್ಟಣಕ್ಕೆ ಕರೆಸಿಕೊಳ್ಳಲಾಯಿತು. ಅಲ್ಲದೆ ಮುಸ್ಲಿಂ ಸಂಘಟನೆ "ಇತ್ತಿಹಾದುಲ್ ಮುಸಲ್ಮಿನ್' ಅಧ್ಯಕ್ಷ ಗದ್ದುಗೆಯನ್ನು ಅವನಿಗೆ ಅರ್ಪಿಸಲಾಯಿತು.

ಬೆಳಗಾಗುವದರೊಳಗೆ ಇವನು ಹೈದರಾಬಾದ್ ರಾಜ್ಯದ ಮಹಾನ್ ರಾಜಕಾರಣಿ, ಮುಸ್ಲಿಂ ಪ್ರಜೆಯ ಏಕಮೇವಾದ್ವಿತೀಯ ಮುಂದಾಳು ನೇತಾರ. ದೊರೆ ನಿಜಾಮರ ಕೃಪೆಗೆ ಪಾತ್ರನಾಗಿ ಅವರ ಕನಸು ಹುನ್ನಾರುಗಳನ್ನು ಸಾಕಾರಗೊಳಿಸಲು ಅವರ ಸೂತ್ರದ ಗೊಂಬೆಯಾಗಿ ಪಾತ್ರ ವಹಿಸಿದ ಮಹಾನ್ ವ್ಯಕ್ತಿ. ಇವನು ನಿಜಾಂ ದೊರೆಯ ಬೆಂಬಲಕ್ಕೆ ಸದಾ ಕಾಲವೂ ಸಿದ್ಧವಾಗಿರುವ ಪಡೆ "ರಜಾಕಾರ" ರ "ಸೈನ್ಯ"ವನ್ನು ರಾಜ್ಯದಾದ್ಯಂತ ಸಂಘಟಿಸಿದನು. ಸಮವಸ್ತ್ರಧಾರಿ ಶಸ್ತ್ರ ಸಜ್ಜಿತ ಗುಂಪುಗಳು ರಾಜ್ಯದ ಎಲ್ಲ ಊರು ಕೇರಿಗಳಲ್ಲಿ ಸಿದ್ಧವಾಗಿ ನಿಂತವು. ಕತ್ತಿ, ಗುರಾಣಿ, ಕೋವಿ, ಬಂದೂಕಳಿಂದ ಹಿಡಿದು ಕೆಲವು ಆಧುನಿಕ ಶಸ್ತ್ರಗಳನ್ನು ಸಹಿತ ಇವರಿಗೆ ಆಡಳಿತದಿಂದ ಒದಗಿಸಲಾಯಿತು.

ಜೊತೆಗೆ ಕಾಸಿಂ ರಜವಿಯ ಪ್ರಕ್ಷೋಭಕ ಭಾಷಣಗಳು, ನಿಜಾಂರ ರೇಡಿಯೋ, ಉರ್ದು ಪತ್ರಿಕೆಗಳಲ್ಲಿ ಅಬ್ಬರದ ಪ್ರಚಾರ. "ಮುಂದಿನ ತಿಂಗಳ ಮೂರನೆ ಶುಕ್ರವಾರದ ನಮಾಜನ್ನು ದಿಲ್ಲಿಯ ಜಾಮಾ ಮಸೀದಿಯಲ್ಲಿ ಸಲ್ಲಿಸುವವರಿದ್ದೇವೆ. ಕೆಲವೇ ದಿನಗಳಲ್ಲಿ ಕೆಂಪು ಕೋಟೆಯ ಮೇಲೆ ನಿಜಾಮರ ಹಳದಿ ಬಣ್ಣದ ಆಸಿಫ್‌ಜಾಹಿ ಬಾವುಟ ಹಾರುವದನ್ನು ನೋಡಲು ಬಹಳ ಕಾಲ ನಾವು ಇನ್ನು ಕಾಯಬೇಕಿಲ್ಲ. ಕೋಟೆಯ ಕೆಳಮನೆಯಲ್ಲಿ ಬಂಧಿತರಾದ ಸರದಾರ ಪಟೇಲರಿಗೆ ಒಂದು ಅಂಕಣ ಸ್ಥಳ ಕಾದಿರಿಸಲಾಗಿದೆ." ಭಾಷಣಗಳು, ರಜಾಕಾರರ ಕವಾಯಿತು ಮೊಳಗುತ್ತ ನಡೆದಂತೆ, ಪ್ರಜೆಗಳು ಪೌಹಾರಿ ಬಿಟ್ಟರು. ಶಸ್ತ್ರಸಜ್ಜಿತ ರಜಾಕಾರರ ಲೂಟಿ-ಕೊಲೆ ಸುಲಿಗೆಗಳಿಂದ ಭಯಗ್ರಸ್ತ ವಾತಾವರಣಕ್ಕೆ ಎದುರಾಗಲು ಅಂದಿನವರೆಗೆ ಪ್ರಜೆಗಳ ಶಾಂತಿಯುತ ಪ್ರತಿಭಟನೆ ಶಸ್ತ್ರ ಸನ್ನದ್ಧ ಪ್ರತೀಕಾರದ ರೂಪ ತಾಳಿತು.

ಇತ್ತ ಪ್ರಜೆಗಳು ತಮ್ಮ ಮನೆ ಮಾರುಗಳನ್ನು ತೊರೆದು ನಿಜಾಂ ರಾಜ್ಯವನ್ನು ಸುತ್ತುವರಿದ ಸ್ವತಂತ್ರ ಭಾರತದ ಪ್ರಾಂತಗಳಾದ, ಮುಂಬೈ, ಮದರಾಸು ಮತ್ತು ಉತ್ತರದ ವರ್ಹಾಂಡ ಇಲಾಖೆಗಳಲ್ಲಿ ಸಾವಿರಗಳ ಸಂಖ್ಯೆಯಲ್ಲಿ ನಿರಾಶ್ರಿತರಾಗಿ ವಲಸೆ ಬರಹತ್ತಿದರು. ಇದರ ಜೊತೆಗೆ ನಿಜಾಂ ರಾಜ್ಯದ ಗಡಿಗುಂಟ ಶಸ್ತ್ರಧಾರಿ ಸ್ವಯಂಸೇವಕರ ಶಿಬಿರಗಳು ಸ್ಥಾಪನೆಯಾದವು. ಜನತೆಗೆ ಅಭಯ ನೀಡಲು ರಜಾಕಾರರ ಗುಂಪುಗಳ ಜೊತೆಗೆ ಮುಖಾಮುಖಿ ಸಶಸ್ತ್ರ ಪ್ರತಿಭಟನೆಗಳು ಸುದ್ದಿ ಮಾಡತೊಡಗಿದವು.

ಅಕ್ಕಲಕೋಟ ರೈಲು ನಿಲ್ದಾಣ ಹತ್ತಿರದ ಗೌಡಗಾಂವ ಶಿಬಿರವನ್ನು ಪೋಲೀಸ್ ಕಾರ್ಯಾಚರಣೆಯ ಮುಕ್ತಾಯದ ಹಂತದವರೆಗೂ ನಾವು ಸಾಗಿಸಿಕೊಂಡು ಬಂದೆವು.

ಪ್ರದರ್ಶನ, ಅಹಿಂಸಕ ಪ್ರತಿಭಟನೆ, ವೈಯಕ್ತಿಕ ಮತ್ತು ಸಾಮೂಹಿಕ ಸತ್ಯಾಗ್ರಹ, ಕರನಿರಾಕರಣೆ, ಭೂಗತ ಪ್ರಚಾರ, ಜನಸಂಗ್ರಹಣೆ, ವಿದ್ಯಾರ್ಥಿಗಳಿಂದ ಶಾಲೆ-ಕಾಲೇಜುಗಳ ಬಹಿಷ್ಕಾರ, ವಕೀಲರಿಂದ ಕೋರ್ಟು ಕಚೇರಿಗಳಿಂದ ತೊಲಗುವಿಕೆ, ಕೊನೆಗೆ ಸಶಸ್ತ್ರ ಪ್ರತೀಕಾರ. ಹೀಗೆ ಭಾರತ ಸ್ವತಂತ್ರ ಸಂಗ್ರಾಮದ ಎಲ್ಲ ಮಜಲುಗಳು ನಿಜಾಂರ ದಬ್ಬಾಳಿಕೆ ಪ್ರತಿಭಟನೆಗೆ ಪ್ರಯೋಗಿಸಲ್ಪಟ್ಟವು. ಇವುಗಳ ಜೊತೆ ಹುತಾತ್ಮರ ಪಟ್ಟಿಯನ್ನು ಸೇರುವವರ ಸಂಖ್ಯೆ ಮೇಲಕ್ಕೇರತೊಡಗಿತು. ಕಕ್ಕ ಭೀಮಸೇನರಾಯ ದೇಸಾಯಿ ಜೊತೆಗೆ ನನ್ನ ಸಹಪಾಠಿ, ವೀರಭದ್ರಪ್ಪ, ಸುರಪುರ ತಾಲೂಕ ಗಡಿಯಲ್ಲಿ ಪೋಲೀಸರ ಜೊತೆ ಸಶಸ್ತ್ರ ಪ್ರತಿಭಟನೆಯಲ್ಲಿ ತಮ್ಮ ಪ್ರಾಣ ತೆತ್ತರು. ನಮ್ಮ ಶಿಬಿರದ ಸ್ವಯಂಸೇವಕ ಆನಂದರಾವ ಬನಶೆಟ್ಟಿ, ರಜಾಕಾರರ ಗುಂಡಿಗೆ ಆಹುತಿಯಾದರು. ಹೈದರಾಬಾದ್ ಪಟ್ಟಣದಲ್ಲಿ "ಇಮರೋಜ" ಉರ್ದು ದಿನಪತ್ರಿಕೆಯಲ್ಲಿ ನಿಜಾಂರ ವಿರುದ್ಧ ಅಗ್ರಲೇಖನಗಳನ್ನು ಪ್ರಕಟಿಸುತ್ತ ಹೋದಂತೆ 'ಕಾಚಿಗುಡಾ' ಮುಖ್ಯರಸ್ತೆಯಲ್ಲಿ ಹಾಡು ಹಗಲೇ ಕೊಲೆ ಮಾಡಲಾಯಿತು.

ಸತ್ಯಾಗ್ರಹ ಜೈಲು, ಶಾಲಾ ಕಾಲೇಜುಗಳ ಬಹಿಷ್ಕಾರ, ಮುಂದೆ ಸಶಸ್ತ್ರ ಗುಂಪುಗಳಾಗಿ

ಮಾರ್ಪಟ್ಟು ಸಾವಿರಾರು ವಿದ್ಯಾರ್ಥಿಗಳು, ನಿರಾಶರಾಗಿ ಭವಿಷ್ಯದ ದಾರಿ ಹುಡುಕುತ್ತಿದ್ದೆವು. ಜೂನ್ ತಿಂಗಳಿನಲ್ಲಿ ನಮ್ಮ ಆಂದೋಲನದ ಹಿರಿಯರು, ಮುಖಂಡರು ಔರಂಗಾಬಾದ್ ಜಿಲ್ಲೆಯ ಗಡಿಯಲ್ಲಿರುವ ಮನಮಾಡ ಪಟ್ಟಣಕ್ಕೆ ಸುಮಾರು ೨೦೦ ವಿದ್ಯಾರ್ಥಿಗಳನ್ನು ಕರೆಸಿಕೊಂಡಿದ್ದರು. ಇನ್ನು ಸ್ವಲ್ಪ ಕಾಲ ತಾಳ್ಮೆಯಿಂದಿರಲು ನಮ್ಮನ್ನು ಕೇಳಿಕೊಂಡರು.

ಈಗ ಆ ದಿನಗಳು ಅಂದಿನ ಘಟನೆಗಳು, ಮಾಸಿ ಮುಸುಕಿದ ನೆನಪಾಗಿಬಿಟ್ಟಿವೆ. ಆದರೆ, ಹೈದರಾಬಾದ್ ಜನತೆಯ ತಾಳ್ಮೆ ತ್ಯಾಗ, ಸಂಘರ್ಷದ ಘನತೆಯನ್ನು ಕಡೆಗಾಣಿಸುವಂತಿಲ್ಲ. ಒಂದು ವೇಳೆ ನಿಜಾಮರು ಹಾಗೇ ಉಳಿದಿದ್ದರೆ? ದಕ್ಷಿಣದಲ್ಲಿ ಭಾರತ ವಿರೋಧಿ ಒಂದು ರಾಜ್ಯ ಉಳಿದಕೊಂಡಿದ್ದರೆ? ಇಂದಿಗೂ ಕಾಶ್ಮೀರದಲ್ಲಿ ಕಾಣಿಸಿಕೊಳ್ಳುವ ಪರಿಸ್ಥಿತಿ ನಮ್ಮನ್ನು ಕಾಡುತ್ತಿತ್ತೋ ಏನೋ. ಇಂದು ಕೋಯಿಮುತ್ತೂರ, ಮುಂಬಯಿ ಸರಣಿ ಬಾಂಬ್ ಸ್ಫೋಟ, ದಿಲ್ಲಿಯ ಬೀದಿ ಬಸ್ಸುಗಳಲ್ಲಿ ಹತರಾಗುತ್ತಿರುವ ಅಮಾಯಕರ ದೃಶ್ಯ. ದಕ್ಷಿಣದ ಸಂಘಟಿತ ಶಕ್ತಿಯಾಗಿ ಉಳಿದಿದ್ದರೆ? ಇದನ್ನು ಮನಗಂಡವರು ಹೈದರಾಬಾದ್ ರಾಜ್ಯದ ಜನತೆ, ಮತ್ತು ನಮ್ಮ ಸ್ವತಂತ್ರ ಭಾರತ ಮುಂದಾಳುಗಳು. ಇದಕ್ಕೆ ಮುಕ್ತಾಯ ಹೇಳಿದ ಮಹಾನುಭಾವರು, ಸರದಾರ ವಲ್ಲಭಭಾಯಿ ಪಟೇಲರು.

ದೇಶಾಭಿಮಾನಿ

❁ ಸರ್ದಾರ ಶರಣಗೌಡ ಇನಾಮದಾರ

ಕೆಲವರು ದೇಶ ಸೇವೆಗಾಗಿಯೇ ಜನ್ಮ ತಳೆಯುತ್ತಾರೆ. ಮತ್ತೆ ಕೆಲವರು ದೇಶಕ್ಕೆ ಭಾರವಾಗುತ್ತಾರೆ. ಕುಸುಮಾಕರ ದೇಸಾಯಿಯವರ ಇಡೀ ಕುಟುಂಬವೇ ದೇಶ ಸೇವೆಗೆ ತನ್ನನ್ನು ಸಮರ್ಪಿಸಿಕೊಂಡ ಕುಟುಂಬಗಳಲ್ಲಿ ಒಂದು ಇದು ನಮ್ಮ ದೇಶದಲ್ಲಿ ಅಪರೂಪದ್ದೆನ್ನಬಹುದು.

ಇಂದಿನ ಕೊಪ್ಪಳ ಜಿಲ್ಲೆಯ ಬೇನಕಲ್ ದೇಸಾಯರ ಮನೆತನದ ಸಂಜೀವರಾವ ದೇಸಾಯಿ ಅವರು, ಅಂದಿನ ಕಾಲದ ಪ್ರಸಿದ್ಧ ವಕೀಲರು. ಇವರ ತಮ್ಮ ರಾಘವೇಂದ್ರರಾವ್ ದೇಸಾಯಿ ಅಪ್ಪಟ ಗಾಂಧಿವಾದಿಗಳಾದ್ದರಿಂದ, ಗಾಂಧೀಜಿಯವರ ಕರೆಗೆ ಓಗೊಟ್ಟು ತಮ್ಮ ಓದಿಗೆ ಶರಣು ಹೊಡೆದು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಇಂಥ ಪುಣ್ಯಜೀವಿಯ ಮನೆತನದಲ್ಲಿ ಹುಟ್ಟಿದವರು ಕುಸುಮಾಕರ ದೇಸಾಯಿ ಅವರು.

ವಿದ್ಯಾರ್ಥಿಯಾಗಿದ್ದಾಗಲೇ, ದೇಶದ ಸ್ವಾತಂತ್ರ್ಯದ ಕನಸುಗಳನ್ನು ಕಾಣುತ್ತಿದ್ದ ಈ ಹುಡುಗನಿಗೆ ರಕ್ತಗತವಾಗಿ ತಂದೆಯಂತೆ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವ ಹುಮ್ಮಸ್ಸು. ವಿದ್ಯಾರ್ಥಿಗಳ ಗುಂಪು ಕಟ್ಟಿಕೊಂಡು ಕಾಲೇಜಿಗೆ ಶರಣು ಹೊಡೆದು ಹೋರಾಟಕ್ಕಿಳಿದರು ಕುಸುಮಾಕರ ದೇಸಾಯಿ.

ನನಗೆ ಇವರ ಸಂಪರ್ಕ ಬಂದದ್ದು ಹೈದರಾಬಾದನಲ್ಲಿ ಓದುತ್ತಿರುವಾಗ. ಕುಸುಮಾಕರ ಇನ್ನೂ ವಿದ್ಯಾರ್ಥಿ. ನಾವಾಗಲೇ ಶಿಕ್ಷಣ ಮುಗಿಸಿ ಪೂರ್ಣಾವಧಿಯ ಸ್ವಾತಂತ್ರ ಹೋರಾಟಗಾರರೆಂದು ನಿಜಾಮನ ವಕ್ರ ದೃಷ್ಟಿಗೆ ಒಳಗಾದ ಗುಂಪಿನವರಾಗಿದ್ದೆವು.

ಈ ಸಂದರ್ಭದಲ್ಲಿ ಕುಸುಮಾಕರ ದೇಸಾಯಿ ವಿದ್ಯಾರ್ಥಿಯಾಗಿ ನಮ್ಮ ಹೋರಾಟಕ್ಕೆ ಸಹಕಾರಿಯಾಗಿ ಬಂದವರು, ಮುಂದೆ ಇವರೂ ಕೂಡ ಓದಿಗೆ ಸಂಪೂರ್ಣ ತಿಲಾಂಜಲಿ ಇಟ್ಟು ತಂದೆಯಂತೆ ಮಗ ಎಂಬಂತೆ ಸ್ವಾತಂತ್ರ್ಯ ಚಳವಳಿಯ ನೇತೃತ್ವ ವಹಿಸಿ, ನಿಜಾಮನ ವಕ್ರದೃಷ್ಟಿಗೊಳಗಾಗಿ ಜೈಲು ಸೇರಿದರು.

ಕಾಶೀಮ್ ರಜ್ವಿ ಎಂಬ ಮತಾಂಧ, ಸ್ವಯಂ ಸೇವಕರ ಹೆಸರಿನಲ್ಲಿ ಕೈಯಲ್ಲಿ ಬಂದೂಕು ಕೊಟ್ಟು, ಲಕ್ಷಗಟ್ಟಲೆ ಮತಾಂಧರನ್ನು ಹೈದರಾಬಾದ ರಾಜ್ಯದಾದ್ಯಂತ ಬಿಟ್ಟು, ಸ್ವಾತಂತ್ರ್ಯದ ಧ್ವನಿ ಅಡಗಿಸಲು ಪ್ರಯತ್ನಿಸಿದ ಮೂರ್ಖ. ಇವನ ಷಡ್ಯಂತ್ರ ಮುರಿಯಲು ದೇಶಭಕ್ತರ ಪಡೆಗಳೇ ಸಿದ್ಧವಾಗಿದ್ದವು. ಇಂಥ ಪಡೆಗಳಲ್ಲಿ ಯುವಕರ ನೇತೃತ್ವ ವಹಿಸಿದವರು ಕುಸುಮಾಕರ ದೇಸಾಯಿ ಅವರು.

ವಿದ್ಯಾವಂತ, ಅತ್ಯಂತ ಬುದ್ಧಿವಂತ, ತೀಕ್ಷ್ಣಮತಿಯಾಗಿರುವ ಹಾಗೂ ಕನ್ನಡ, ಉರ್ದು, ಹಿಂದಿ, ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುತ್ತ, ಎಂಥವರನ್ನೂ

ಮೋಡಿ ಮಾಡುತ್ತಿದ್ದ ಕುಸುಮಾಕರ ದೇಸಾಯಿ, ಬಹುಬೇಗ, ನಮ್ಮ ಹಿರಿಯ ನಾಯಕರ ವಿಶ್ವಾಸಕ್ಕೆ ಪಾತ್ರನಾದ ಅತ್ಯಂತ ಕಿರಿಯ ವಯಸ್ಸಿನ ನಾಯಕನೆನಿಸಿಕೊಂಡವರು.

ಮನೆಯಿಂದ ಸಾಕಷ್ಟು ಸ್ಥಿತಿವಂತರಿದ್ದರೂ, ಯಾವುದನ್ನೂ ಲೆಕ್ಕಿಸದೇ ದೇಶ ಹಾಗೂ ಸ್ವಾತಂತ್ರ್ಯ ಎಂದು ಭೂಗತರಾಗಿ ಅನೇಕ ಬಾರಿ ಉಪವಾಸ. ವನವಾಸ ಅನುಭವಿಸಿದ್ದೂ ಉಂಟು. ಅವರೆಂದೂ "ಯಾರಿಗೆ ಬೇಕಿತ್ತು ಈ ಸ್ವಾತಂತ್ರ್ಯ" ಎಂದು ಭಾವಿಸಲಿಲ್ಲ. ವಿದ್ಯಾವಂತರಾಗಿದ್ದ ದೇಸಾಯಿ ಅವರಿಗೆ ಸ್ವಾತಂತ್ರ್ಯವೆಂದರೇನು? ಎಂಬ ಬಗ್ಗೆ ಪೂರ್ಣ ಅರಿವಿತ್ತು. ಅದನ್ನು ಜನರಿಗೆ ಅರಿವು ಮಾಡಿಕೊಡುವ ದಿಸೆಯಲ್ಲಿ ಅಪಾರ ಪರಿಶ್ರಮ ವಹಿಸಿದರು. ಹೊಸ ಯುವಕರ ಪಡೆಯನ್ನೇ ನಿರ್ಮಿಸಿ, ಹೋರಾಟಕ್ಕೆ ಕರೆತಂದು, ಹೋರಾಟ ಬಲಗೊಳಿಸಿದರು.

ತಮ್ಮ ತೀಕ್ಷ್ಣಮತಿಯಿಂದ ಇಲ್ಲಿನ ಪ್ರತಿಯೊಂದು ಮಾಹಿತಿಯನ್ನು ರಾಷ್ಟ್ರದ ಹಿರಿಯ ನಾಯಕರವರೆಗೂ ತಲುಪಿಸುವ ಮೂಲಕ ಅವರ ಸಂಬಂಧ ಬೆಳೆಸಿಕೊಂಡು ಅವರ ಪ್ರೀತಿ-ವಿಶ್ವಾಸಕ್ಕೆ ಪಾತ್ರರಾದರು. ರಜಾಕರರ ವಿರುದ್ಧ ನಡೆದ ಸೈನಿಕ ಕಾರ್ಯಾಚರಣೆಯಲ್ಲೂ ಕೂಡ, ಸೈನಿಕರ ಭಾಷೆಯಲ್ಲೇ ಮಾತನಾಡುತ್ತ, ಒಂದು ತುಕಡಿಯೊಂದಿಗೆ ಅವರಿಗೆ ಮಾರ್ಗದರ್ಶಿಯಾಗಿ ಜೊತೆಯಲ್ಲೇ ಬಂದರು.

ಹೈದರಾಬಾದ ವಿಮೋಚನೆಯ ನಂತರ ಅನೇಕರು ನೇರವಾಗಿ ರಾಜಕೀಯಕ್ಕಿಳಿದರು. ದೇಸಾಯಿ ರಾಜಕೀಯದಿಂದ ದೂರವಿದ್ದು, ಕೆಲಕಾಲ ದೆಹಲಿಯಲ್ಲಿದ್ದರು. ನಂತರ ಕಲಬುರ್ಗಿಗೆ ಬಂದು ವಕಾಲತ್ತು ಆರಂಭಿಸಿದರು. ತಮ್ಮ ವೃತ್ತಿಯ ಬಗ್ಗೆ ಅಪಾರ ಗೌರವ ಹೊಂದಿದ್ದ ಕುಸುಮಾಕರ ದೇಸಾಯಿ ಅವರು, ನಾನು ಕಂಡಿರುವಂತೆ ಇಡೀ ತಮ್ಮ ಜೀವನದಲ್ಲಿ ನಿಷ್ಕಳಂಕ ವ್ಯಕ್ತಿತ್ವವನ್ನು ಉಳಿಸಿಕೊಂಡು, ತಂದೆಯ ಹೆಸರಿಗೆ ತಕ್ಕಂತೆ ಮಗ ಎಂಬಂತೆ ನಡೆದುಕೊಂಡು ಬಂದರು. ಮನೆತನ ಹಾಗೂ ವೃತ್ತಿಯ ಘನತೆ-ಗೌರವವನ್ನು ಕಾಪಾಡಿಕೊಂಡು ಬಂದರು.

ದೇಸಾಯಿ ಅವರು ಅನಾರೋಗ್ಯದಿಂದ ಚಿಕಿತ್ಸೆಗಾಗಿ ಬೆಂಗಳೂರಿಗೆ ಹೋಗಿದ್ದು, ಅಲ್ಲೇ ಅವರು ನಿಧನರಾದರೆಂದು ತಿಳಿದು ಬಂದಿತು. ಈ ಸುದ್ದಿ ಕೇಳಿದ ನಂತರ ನನ್ನ ಕಣ್ಣೆದುರಿಗೆ ಬಂದದ್ದು, ವಿದ್ಯಾರ್ಥಿ ದೇಸಾಯಿ ಕಾಲೇಜಿಗೆ ಶರಣು ಹೊಡೆದು ಸ್ವಾತಂತ್ರ್ಯ ಹೋರಾಟಕ್ಕಿಳಿದದ್ದು. ಅವನಲ್ಲಿನ ಉತ್ಸಾಹ, ದೇಶಪ್ರೇಮ. ಕೊನೆಯವರೆಗೂ ಇದನ್ನು ಉಳಿಸಿಕೊಂಡು ಬಂದದ್ದು. ಇಂಥವರನ್ನು ಪಡೆದ ತಂದೆ-ತಾಯಿ ಪುಣ್ಯವಂತರು. ಮತ್ತು ಭರತ ಭೂಮಿ ನಿಜಕ್ಕೂ ಪುಣ್ಯಭೂಮಿ ಎಂದು ಹೇಳಿದರೆ ತಪ್ಪಾಗದು.

ಬಹುಮುಖ ವ್ಯಕ್ತಿತ್ವ

❁ ಪ್ರೊ. ವಿ. ಪಿ. ದೇವುಳಗಾಂವಕರ್

ಶ್ರೀ ಕುಸುಮಾಕರ ದೇಸಾಯಿಯವರು ಆಕಸ್ಮಿಕ ನಿಧನವಾಗಿ ಒಂದು ವರ್ಷವಾಗುತ್ತಲಿದೆಯೆಂದರೆ ನಂಬಲಿಕ್ಕೆ ಆಗುತ್ತಿಲ್ಲ. ಅವರ ಮೊದಲ ಪುಣ್ಯತಿಥಿಯ ನಿಮಿತ್ತ ಸ್ಮೃತಿ ಸುಮನಗಳನ್ನರ್ಪಿಸುವದು ನನ್ನ ಪಾಲಿನ ದುರ್ದೈವವೇ ಸರಿ.

ಕುಸುಮಾಕರರು ಚಿಕ್ಕವನಾಗಿದ್ದಾಗಿನಿಂದಲೇ ಅವರನ್ನು ನಾನು ಬಲ್ಲೆ. ನಮ್ಮ ಕುಟುಂಬದ ಸದಸ್ಯನಂತೆಯೇ ಅವರಿದ್ದರು. ಕುಸುಮಾಕರ ಮತ್ತು ನನ್ನ ತಮ್ಮ ಡಾ. ವೆಂಕಟೇಶ ದೇವುಳಗಾಂವಕರ ಇವರು ರಾಜಕೀಯ ಕ್ಷೇತ್ರದ ಸಹಕಾರಿಗಳಾಗಿದ್ದರೆ, ನನ್ನ ಚಿಕ್ಕ ತಮ್ಮ ವಾಮನ ಉರ್ಫ್ ತಾನಾ ಅವರ ಬಾಲ್ಯ ಸ್ನೇಹಿತ ಮತ್ತೂ ಒಂದೇ ಶಾಲೆಯ ವಿದ್ಯಾರ್ಥಿಗಳು.

ದೇಸಾಯಿ ಕುಟುಂಬ ಮೂಲತಃ ಕೊಪ್ಪಳ ಜಿಲ್ಲೆಯ ಬೆಣಕಲ್‌ನವರು. ಕುಸುಮಾಕರರವರ ಕಕ್ಕ, ಕೊಪ್ಪಳ ಜಹಗೀರಿಯ ತಹಶೀಲದಾರರಾಗಿದ್ದರು. ಇವರು ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿ ಗಾಂಧೀಜಿಯವರ ಅನುಯಾಯಿಗಳಾದರು. ಇನ್ನೊಬ್ಬ ಕಕ್ಕಂದಿರಾದ ಶ್ರೀ ರಾಘವೇಂದ್ರ ದೇಸಾಯಿಯವರು ಹೈದ್ರಾಬಾದಿನ ನಿಜಾಮ ಕಾಲೇಜಿನಲ್ಲಿ ಬಿ.ಎ. ಓದುತ್ತಿರುವಾಗಲೇ ಗಾಂಧೀಜಿಯವರ ತತ್ವಗಳಿಗೆ ಮಾರು ಹೋಗಿ, ಶಿಕ್ಷಣವನ್ನು ಬಿಟ್ಟುಕೊಟ್ಟು ಖಾದಿಧಾರಿಗಳಾದರು. ಮರಳಿ, ಅಲ್ಲಿ ಒಂದು ರಾಷ್ಟ್ರೀಯ ಶಾಲೆಯನ್ನು ತೆರೆದರು. (ರಾಘವೇಂದ್ರರ ಮಗನಾದ ಶ್ರೀ ಅನಿರುದ್ಧ ದೇಸಾಯಿಯವರು ಈಗ ಈ ಶಾಲೆಯನ್ನು ವಿಕಸನಗೊಳಿಸಿ ಒಳ್ಳೆಯ ರೀತಿಯಿಂದ ಸಂಸ್ಥೆ ನಡೆಸುತ್ತಿದ್ದಾರೆ). ಕುಸುಮಾಕರರ ತಂದೆ ಸಂಜೀವರಾಯರು ಒಳ್ಳೆಯ ನ್ಯಾಯವಾದಿಗಳೂ ಹಾಗೂ ಸಾಮಾಜಿಕ ಕಾರ್ಯಕರ್ತರಾಗಿದ್ದರು. ಈ ಕೌಟುಂಬಿಕ ಹಿನ್ನೆಲೆ ಕುಸುಮಾಕರರ ಮುಂದಿನ ಜೀವನಕ್ಕೆ ನೀರೆರೆದು ಪ್ರೋಷಿಸಲು ತಕ್ಕದ್ದಾಗಿತ್ತು.

ಕುಕನೂರಿನಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಗುಲಬರ್ಗಾಕ್ಕೆ ಬಂದ, ಕುಸುಮಾಕರರು ನೂತನ ವಿದ್ಯಾಲಯದಲ್ಲಿ ಶಿಕ್ಷಣ ಮುಂದುವರೆಸಿದರು. ನೂತನ ವಿದ್ಯಾಲಯವೂ ಸಹ ಒಂದು ರಾಷ್ಟ್ರೀಯ ಶಾಲೆ. ಇದನ್ನು ನನ್ನ ದೊಡ್ಡಪ್ಪನವರಾದ ವಿ. ವಿಠ್ಠಲರಾವ ದೇವುಳಗಾಂವಕರ ಸ್ಥಾಪಿಸಿದ್ದಾರೆ. ಕುಸುಮಾಕರ ಈ ಶಾಲೆಗೆ ಕಲಿಯಲು ಬಂದಾಗ ನಾನು ಮಾಧ್ಯಮಿಕ ವಿಭಾಗದ ಪ್ರಮುಖನೆಂದು ಕೆಲಸ ಮಾಡುತ್ತಿದ್ದೆ. ನಾನು ಮಕ್ಕಳಿಗೆ ಇಂಗ್ಲೀಷ ಭಾಷೆ ಕಲಿಸುತ್ತಿದ್ದೆ. ಯಾವುದೇ ಭಾಷೆಯ ತಳಹದಿ ಎಂದರೆ ಅದರ ವ್ಯಾಕರಣ. ಹೀಗಾಗಿ ಮಕ್ಕಳಿಗೆ ವ್ಯಾಕರಣ ಮನದಟ್ಟು ಮಾಡಿಕೊಡುವದರ ಕಡೆಗೆ ನನ್ನ ಆದ್ಯತೆ ಇರುತ್ತಿತ್ತು. ಕುಸುಮಾಕರ ನನ್ನ ಈ ಪದ್ಧತಿಗೆ ಮಾರು ಹೋಗಿದ್ದರೆಂದು ಕಾಣುತ್ತದೆ. ಕುಸುಮಾಕರ ನನ್ನ ಕಲಿಸುವಿಕೆಯ ಬಗ್ಗೆ ಆಡಿದ

ಪ್ರಶಂಸೆಯ ಮಾತುಗಳನ್ನು ನಾನು ಅನೇಕರ ಬಾಯಿಯಿಂದ ಕೇಳಿದ್ದೇನೆ. ವಿದ್ಯಾರ್ಥಿಗಳಿಗಾಗಿ ಅಭ್ಯಾಸ ಮಂಡಳಗಳನ್ನು ನಾನು ನಡೆಸುತ್ತಿದ್ದೆ. ಆಚಾರ್ಯ ಜಾವರೇಕರವರ 'ಆಧುನಿಕ ಭಾರತ' ದಂಥ ಗ್ರಂಥಗಳನ್ನು ಓದಿ ಅದರಲ್ಲಿ ಟಿಪ್ಪಣೆಗಳನ್ನು ಮಕ್ಕಳಿಗೆ ಹೇಳಿಕೊಡುತ್ತಿದ್ದೆ. ಇದರಿಂದ ಮಕ್ಕಳು ಗ್ರಂಥಗಳನ್ನು ಓದಿ ಜ್ಞಾನ ಪಡೆದುಕೊಳ್ಳಲಿ ಎನ್ನುವ ಉದ್ದೇಶವಿರುತ್ತಿತ್ತು. ಈ ಉದ್ದೇಶವನ್ನು ಮನಗಂಡ ಕುಸುಮಾಕರರು ಇಂಥ ಅನೇಕ ಗ್ರಂಥಗಳನ್ನು ಏಕಾಗ್ರತೆಯಿಂದ ಓದುವದನ್ನು ನಾನು ಗಮನಿಸುತ್ತಿದ್ದೆ.

ಆ ಕಾಲದಲ್ಲಿ ಕನ್ನಡ ಮಾತೃಭಾಷೆಯುಳ್ಳ ಕುಟುಂಬಗಳೂ ಸಹ 'ನವಾಕಾಳ', 'ಜ್ಞಾನಪ್ರಕಾಶ'ಗಳಂಥ ಮರಾಠಿ ವೃತ್ತಪತ್ರಿಕೆಗಳನ್ನು ತರಿಸುತ್ತಿದ್ದರು.

ಸಾನೆ ಗುರೂಜಿಯವರು ಪ್ರಾರಂಭಿಸಿದ 'ಸಾಧನಾ' ಸಾಪ್ತಾಹಿಕವನ್ನು ಕುಸುಮಾಕರ ನಿಯಮಿತವಾಗಿ ಓದುತ್ತಿದ್ದರು. ಈ ಪತ್ರಿಕೆಯಲ್ಲಿಯ ಪುರೋಗಾಮಿ ವಿಚಾರಗಳ ಪ್ರಭಾವ ಅವರ ಮೇಲಾಯಿತು. ಮರಾಠಿ, ಜೊತೆಗೆ ಇಂಗ್ಲೀಷ್, ಆಗಿನ ರಾಜ್ಯಭಾಷೆ ಉರ್ದು ಮತ್ತು ರಾಷ್ಟ್ರಭಾಷೆಯೆಂದು ಸ್ವೀಕರಿಸಿದ ಹಿಂದಿ ಈ ಎಲ್ಲ ಭಾಷೆಗಳನ್ನು ಕುಸುಮಾಕರರು ಸುಂದರವಾಗಿ ಮಾತನಾಡುವದರ ಜೊತೆಗೆ, ಇವುಗಳ ಬಗ್ಗೆ ಪ್ರೀತಿಯನ್ನೂ ಹೊಂದಿದ್ದರು. ಹೀಗಾಗಿ ಈ ಯಾವುದೇ ಭಾಷೆಯಲ್ಲಿ ಮಾತನಾಡಲಿ, ಅವರ ಭಾಷೆ ಇನ್ನೂ ಕೇಳಬೇಕೆನಿಸುವಷ್ಟು ಸುಂದರವಾಗಿರುತ್ತಿತ್ತು.

೧೯೪೪ ರಲ್ಲಿ ನೂತನ ವಿದ್ಯಾಲಯ ಸಂಸ್ಥೆಯಲ್ಲಿ ಮ್ಯಾಟ್ರಿಕ್ ಮುಗಿಸಿ ಮುಂದೆ ಹೈದ್ರಾಬಾದಿನ ಸುಪ್ರಸಿದ್ಧ ಸಿಟಿ ಕಾಲೇಜಿನಲ್ಲಿ ಮುಂದಿನ ವಿದ್ಯಾಭ್ಯಾಸಕ್ಕೆ ಕುಸುಮಾಕರ ಪ್ರವೇಶ ಪಡೆದರು. ಅವರ ಕಾಲೇಜ್ ಶಿಕ್ಷಣದ ಸಮಯದಲ್ಲಿ ಸತ್ಯಾಗ್ರಹ ಪ್ರಾರಂಭವಾಗಿತ್ತು. 'ಸ್ಟುಡೆಂಟ್ ಫೆಡರೇಶನ್' ಸಂಘಟಕರು ಕಾಲೇಜನ್ನು ಬಹಿಷ್ಕರಿಸಿ ಚಳುವಳಿಯಲ್ಲಿ ಭಾಗವಹಿಸುವ ವಿಚಾರ ಮಾಡಿದರು. ಈ ರೀತಿ ಠರಾವೂ ಸಹ ಪಾಸಾಯಿತು. ಈ ಚಳುವಳಿಯಲ್ಲಿ ಕುಸುಮಾಕರ ದೇಸಾಯಿ, ಶ್ಯಾಮ ಅಪಸಂಗಿಕರ, ದಿಗಂಬರರಾವ ಕಲಮಣಕರ ಭಾಗವಹಿಸಿದ್ದರು. ಪೊಲೀಸರು ಸತ್ಯಾಗ್ರಹಿಗಳನ್ನು ಕೈದು ಮಾಡಿದರು. ರಾತ್ರಿಯಿಡೀ ಪೋಲಿಸ್ ಠಾಣೆಯಲ್ಲಿಯೇ ಅವರನ್ನು ಇರಿಸಿದ್ದರು. ಮರುದಿನ ಜೈಲಿಗೆ ರವಾನಿಸಿದರು. ಅಲ್ಲಿ ಅವರಿಗೆ ನೀಡಿದ ಶಿಕ್ಷೆಯನ್ನು ಅನುಭವಿಸಿ ಹೊರಬಿದ್ದರು. ಹೊರಬಂದ ಕುಸುಮಾಕರ ಮನಮಾಡಕ್ಕೆ ನಡೆದರು. ನಿಜಾಮ ರಾಜ್ಯದಲ್ಲಿ ನಿಜಾಮನ ಶಸ್ತ್ರಾಸ್ತ್ರ ಪಡೆಯ ರಜಾಕರರು ಹಲ್ಲೆಗಳನ್ನು ನಡೆಸುತ್ತಿದ್ದರು. ರಜಾಕಾರರ ಹಲ್ಲೆಗಳ ಪ್ರತೀಕಾರಕ್ಕಾಗಿ ಸ್ಟೇಟ್ ಕಾಂಗ್ರೆಸ್, ನಿಜಾಮ ರಾಜ್ಯದ ಸರಹದ್ದಿನ ಹೊರವಲಯದಲ್ಲಿದ್ದ ಊರುಗಳಲ್ಲಿ ಕ್ಯಾಂಪುಗಳನ್ನು ನಡೆಸುತ್ತಿದ್ದರು. ಕುಸುಮಾಕರ ದೇಸಾಯಿ ಮತ್ತು ದಿಗಂಬರರಾವ ಕಲಮಣಕರ ಇಂತಹ ಕ್ಯಾಂಪುಗಳಲ್ಲಿ ಕೆಲಸ ಮಾಡತೊಡಗಿದರು. ಕಲಮಣಕರ ಬೆಂಗಳೂರಿನಲ್ಲಿ ಬಾಂಬ್ ತಯಾರಿಸುವದನ್ನು ಕಲಿತುಕೊಂಡು ಬಂದರೆ,

ಕುಸುಮಾಕರ ಬಂದೂಕು ಗುರಿಯಿಡುವದರಲ್ಲಿ ನಿಷ್ಣಾತರಾಗಿದ್ದರು. ವಿಜಯೇಂದ್ರ ಕಾಬ್ರಾರ ಜೊತೆಗೂ ಅವರು ಸಂಪರ್ಕವನ್ನಿರಿಸಿಕೊಂಡಿದ್ದರು.

೧೯೪೮ರ ಸೆಪ್ಟೆಂಬರ್ ೧೭ರಂದು ನಿಜಾಮ ರಾಜ್ಯ ಸ್ವತಂತ್ರ ಭಾರತದಲ್ಲಿ ವಿಲೀನವಾಯಿತು. ಹೈದ್ರಾಬಾದ ಮುಕ್ತಿ ಸಂಗ್ರಾಮದ ಕಾರ್ರಕರ್ತರು ತಮ್ಮ ಮೊದಲಿನ ಕಾರ್ಯಗಳಿಗೆ ಹಿಂದಿರುಗಿದರು. ಕುಸುಮಾಕರರೂ ಸಹ ತಮ್ಮ ವಿದ್ಯಾಭ್ಯಾಸ ಮುಂದುವರೆಸಿ B.Sc. ಪದವಿ ಪಡೆದುಕೊಂಡರು. ಎಲ್.ಎಲ್.ಬಿ. ಪದವಿಯ ಪ್ರವೇಶವನ್ನು ಅವರು ಪಡೆದುಕೊಂಡ ಸಮಯದಲ್ಲಿಯೇ ನಾನು ಸಹ ಎಲ್. ಎಲ್. ಬಿ.ಗೆ ಸೇರಿಕೊಂಡಿದ್ದೆ. ಒಂದು ಕಾಲದಲ್ಲಿ ನನ್ನ ವಿದ್ಯಾರ್ಥಿಯಾಗಿದ್ದ ಕುಸುಮಾಕರ ಈಗ ನನ್ನ ವರ್ಗಮಿತ್ರನಾಗಿದ್ದೊಂದು ವಿಚಿತ್ರ ಯೋಗಾಯೋಗವೇ ಸರಿ. ಇಡೀ ಎರಡು ವರ್ಷಗಳ ಅವಧಿಯಲ್ಲಿ ಎಂಟ್ಹತ್ತು ದಿನಗಳಷ್ಟೇ ಕಾಲೇಜಿಗೆ ಹಾಜರಿದ್ದರೂ ಸಹ ಅವರು ಕಾಲೇಜಿನ ವಿದ್ಯಾರ್ಥಿ ಸಂಘದ ಅಧ್ಯಕ್ಷರಿದ್ದರು! ಇದಕ್ಕೆ ಕಾರಣ ಮಿತ್ರವೃಂದದಲ್ಲಿ ಅವರ ಬಗ್ಗೆ ಇದ್ದ ಗೌರವ. ಎಲ್.ಎಲ್.ಬಿ. ಮುಗಿಸಿದ ಮೇಲೆ ಕುಸುಮಾಕರರು ಕೆಲ ದಿನಗಳ ವರೆಗೆ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಶ್ರೀಧರ ನಾಯಕ ಅವರ ಆಪ್ತ ಕಾರ್ಯದರ್ಶಿಯೆಂದು ಕೆಲಸ ಮಾಡುತ್ತಿದ್ದರು. ಹೀಗಾಗಿ ವಕೀಲಿ ವೃತ್ತಿಯನ್ನು ಪ್ರಾರಂಭಿಸುವ ಮೊದಲಿಗೆ ಕುಸುಮಾಕರರಿಗೆ ಪಾರ್ಲಿಮೆಂಟಿನ ಕಾರ್ಯಕಲಾಪಗಳ ಪರಿಚಯವಾಯಿತು.

ಮುಂದೆ ಗುಲಬರ್ಗಾಕ್ಕೆ ಬಂದ ಕುಸುಮಾಕರ ತಮ್ಮ ತಂದೆಯ ಕೈಕೆಳಗೆ ವಕೀಲಿಯನ್ನು ಪ್ರಾರಂಭಿಸಿದರು. ಆ ಕಾಲಕ್ಕೆ ಹೋಲಿಸಿದರೆ, ಕುಸುಮಾಕರರ ಮದುವೆ ಕೊಂಚ ತಡವಾಗಿಯೇ ಆಯಿತೆನ್ನಬಹುದು. ಆದರೆ Mariages are made in Heaven. ವಿದ್ಯಾಸಂಪನ್ನೆ, ಸಂಗೀತ, ಲಲಿತಕಲೆಗಳಲ್ಲಿ ನಿಷ್ಣಾತಳಾದ ಅನುರೂಪ ಕನ್ಯೆ ಸರಿತಾಬಾಯಿ ಕುಸುಮಾಕರರ ಮನ ಮತ್ತು ಮನೆಗಳೆರಡನ್ನೂ ತುಂಬಿದರು. ಕುಸುಮಾಕರರು ಪತ್ನಿಗೆ ವಕೀಲಿ ಶಿಕ್ಷಣವನ್ನು ಕೊಡಿಸಿ ವೃತ್ತಿ ಜೀವನ ನಡೆಸುವಂತೆ ಹುರಿದುಂಬಿಸಿದರು. ಗೃಹಕೃತ್ಯ, ವಕೀಲಿ ವೃತ್ತಿ ಮತ್ತೂ ಪ್ರವೃತ್ತಿಯಲ್ಲಿ ಸಾಹಿತಿಯಾಗಿ ಈ ಮೂರು ರಂಗಗಳನ್ನು ಸರಿತಾಬಾಯಿ ಸಮರ್ಥವಾಗಿ ತೂಗಿಸಿಕೊಂಡು ಹೋಗಬಹುದೆನ್ನುವದನ್ನು ಸಾಬೀತುಗೊಳಿಸಿದರು.

ಕುಸುಮಾಕರರು ತಮ್ಮ ವಕೀಲಿ ವೃತ್ತಿಯ ಜೊತೆಗೆ ಗುಲಬರ್ಗಾದ ಸಾಮಾಜಿಕ ಜೀವನದಲ್ಲಿಯೂ ಸಮರಸಗೊಂಡಿದ್ದರು. ಅವರು ಸಮಾಜವಾದಿ ವಿಚಾರಗಳುಳ್ಳವರಾಗಿದ್ದರು. ದೇಸಾಯಿಯವರು ನೂತನ ವಿದ್ಯಾಲಯ ಸಂಸ್ಥೆಯ ಕಾರ್ಯಕಾರಣಿ ಸದಸ್ಯರು ಮತ್ತು ಖಾದಿ ಗ್ರಾಮೋದ್ಯೋಗ ಸಂಘದ ಉಪಾಧ್ಯಕ್ಷರೂ ಆಗಿದ್ದರು.

ನೂತನ ವಿದ್ಯಾಲಯ ಸಂಸ್ಥೆಯ ಇತಿಹಾಸದಲ್ಲಿ ಒಮ್ಮೆ ಬಿಕ್ಕಟ್ಟಿನ ಪ್ರಸಂಗ ಎದುರಾಯಿತು. ಸಂಸ್ಥೆಯ ಕ್ರೀಡಾಂಗಣದಲ್ಲಿ ಒಮ್ಮೆ ರಾತ್ರೋರಾತ್ರಿಯಲ್ಲಿ ದಲಿತರ ಗುಡಿಸಲುಗಳು

ತಲೆಯೆತ್ತಿಕೊಂಡವು. ಯಾರೋ ದುಷ್ಕರ್ಮಿಗಳು ಬೇಕೆಂದೇ ಮಾಡಿದ ಕುಕೃತ್ಯವಿದೆಂದು ಎಲ್ಲರಿಗೂ ನೋಡಿದ ತಕ್ಷಣ ಗೊತ್ತಾಗುತ್ತಿತ್ತು. ಇಂತಹ ನಾಜೂಕು ಪರಿಸ್ಥಿತಿಯನ್ನು ಎದುರಿಸಲು ತುಂಬ ಧೈರ್ಯ ಮತ್ತು ಚಾಲಾಕಿತನ ಬೇಕಾಗಿತ್ತು. ಎಲ್ಲರಿಗೂ ಉದ್ವಿಗ್ನತೆಯುಂಟಾಗುವದು ಸಹಜ. ಕುಸುಮಾಕರರು ಈ ವೇಳೆಯಲ್ಲಿ ಪ್ರಸಂಗವನ್ನು ತುಂಬ ಗಟ್ಟಿತನದಿಂದ ನಿಭಾಯಿಸಿದರು. ಕುಚೇಷ್ಟೆ ಮಾಡಿದವರಿಗೆ ಉತ್ತರವೆಂಬಂತೆ ಆ ಗುಡಿಸಲುಗಳನ್ನು ಅವರು ಸುಡಿಸಿಬಿಟ್ಟರು. ಈ ರೀತಿಯ ಪರಿಣಾಮವನ್ನು ನಿರೀಕ್ಷಿಸಿರದ ಆ ಕಿಡಿಗೇಡಿಗಳು ನೂತನ ವಿದ್ಯಾಲಯ ಸಂಸ್ಥೆಯ ಆಗಿನ ಅಧ್ಯಕ್ಷರಾಗಿದ್ದ ಚಂದ್ರಕಿ ಮತ್ತು ಕುಸುಮಾಕರ ಇವರಲ್ಲದೇ ಜಹಗೀರದಾರರ ಮನೆಗಳನ್ನು ಸುಡುವ ಪ್ರಯತ್ನ ಮಾಡಿದರು. ಅವರಿಗೆ ಈ ಕಾರ್ಯದಲ್ಲಿ ಯಶಸ್ಸು ಸಿಗಲಿಲ್ಲ. ಆದರೆ ಮುಂದೆ ಈ ರೀತಿ ಮಾಡಬಾರದೆನ್ನುವ ಪಾಠವನ್ನು ಕುಸುಮಾಕರರು ಆ ಜನರಿಗೆ ನ್ಯಾಯಾಲಯದ ಮುಖಾಂತರ ತಿಳಿಸಿಕೊಟ್ಟರು.

ಶ್ರೀ ರಾಮಕೃಷ್ಣ ಹೆಗಡೆ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾಗ ಶ್ರೀ ಕುಸುಮಾಕರರು ಗುಲಬರ್ಗಾದ ನೀರು ಸರಬರಾಜು ಮತ್ತು ಒಳಚರಂಡಿ ಬೋರ್ಡಿನ ಚೇರಮನ್ನರಾಗಿದ್ದರು. ಆಗ ಗುಲಬರ್ಗಾ ಶಹರ ಕುಡಿಯುವ ನೀರಿನ ಕೊರತೆಯಿಂದ ಬಳಲುತ್ತಿತ್ತು. ಈ ಸಮಸ್ಯೆಗೆ ಪರಿಹಾರ ಹುಡುಕುವ ಜವಾಬ್ದಾರಿಯನ್ನು ಕುಸುಮಾಕರರ ಮೇಲೆ ಹೆಗಡೆ ಒಪ್ಪಿಸಿದರು. ಗುಲಬರ್ಗಾ ಸಮೀಪದಲ್ಲಿಯೇ ಭೀಮಾ ನದಿ ಹರಿಯುತ್ತದೆ. ಈ ನದಿಯ ನೀರನ್ನು ಕಾಯಂ ಸ್ವರೂಪವಾಗಿ ಗುಲಬರ್ಗಾ ಶಹರಕ್ಕೆ ಪೂರೈಸಿದ ಶ್ರೇಯಸ್ಸು ಕುಸುಮಾಕರರದು.

ಅಂತೆಯೇ ಗುಲಬರ್ಗಾ ನಗರದ ಜನತೆ ಅವರಿಗೆ 'ಗುಲಬರ್ಗಾದ ಭಗೀರಥ' ಎಂದು ಕರೆದು ಚಿರಋಣಿಯಾಗಿದೆ.

A hero at one point is a hero at all prints ಈ ಮಾತು ಕುಸುಮಾಕರರಿಗೆ ಸರಿಯಾಗಿ ಅನ್ವಯಿಸುತ್ತದೆ. ಚಿಕ್ಕಂದಿನಿಂದಲೂ ಅವರದು ಮುಂಚೂಣಿಯಲ್ಲಿರುವ, ಜನರನ್ನು ತನ್ನೆಡೆಗೆ ಸೆಳೆದುಕೊಳ್ಳುವ ಅಯಸ್ಕಾಂತದ ವ್ಯಕ್ತಿತ್ವ. ಅವರು ಒಳ್ಳೆಯ ಕ್ರಿಕೆಟ್ ಆಟಗಾರರಾಗಿದ್ದರು. ಒಳ್ಳೆಯ ವಾಗ್ಮಿಗಳಾಗಿದ್ದರು. ಸಾಮಾಜಿಕ ಕಾರ್ಯಗಳಲ್ಲಿ ಹುರುಪಿನಿಂದ ಭಾಗವಹಿಸುತ್ತಿದ್ದರು. ವಕೀಲಿ ವೃತ್ತಿಯನ್ನು ಸಹ ಅಷ್ಟೇ ಜಾಣ್ಮೆಯಿಂದ ನಡೆಸಿಕೊಂಡು ಹೋಗುತ್ತಿದ್ದರು. ತುರ್ತು ಪರಿಸ್ಥಿತಿಯಲ್ಲಿ ಜೈಲಿಗೆ ಹೋಗಿ ಬಂದವರಾಗಿದ್ದರು. ಅನೇಕ ಚಳುವಳಿಗಳನ್ನು ನಡೆಸಿಕೊಂಡು ಹೋಗಿದ್ದರು. ಕಾನೂನು ವಿದ್ಯಾಲಯದಲ್ಲಿ ಶಿಕ್ಷಕರೆಂದು ಕೆಲಸ ಮಾಡುತ್ತಿದ್ದಾಗ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾಗಿದ್ದರು. ತುಂಬಾ ಹಾಸ್ಯ ಪ್ರಕೃತಿಯುಳ್ಳವರಾಗಿದ್ದರು. ಎರಡು ಸಲ ತೆರೆದ ಹೃದಯದ ಶಸ್ತ್ರಕ್ರಿಯೆ ಮಾಡಿಸಿಕೊಳ್ಳಬೇಕಾಗಿ ಅವರಿಗೆ ಬಂದಿತ್ತು. ಅವರನ್ನು ಭೇಟಿಯಾಗಲು ನಾನು ಅವರಲ್ಲಿಗೆ ಹೋಗಿ 'ಹೇಗಿದ್ದೀರಿ ಕುಸುಮಾಕರ'? ಎಂದು ವಿಚಾರಿಸಿದೆ. ಅದಕ್ಕೆ ಅವರು "ಏನ್ರಿ ಸರ್ ಹೀಗೆ ಕೇಳುತ್ತಿದ್ದೀರಿ?

ಎರಡು ಸಲ ರಿಪೇರಿಯಾಗಿ ನನ್ನ ಹೃದಯ ಎಷ್ಟು ಗಟ್ಟಿಮುಟ್ಟಾಗಿದೆಯೆಂದರೆ, ಬೇಕೆಂದರೆ ನೀವು ಅಖಾಡಾದಲ್ಲಿ ನನ್ನ ಕುಸ್ತಿ ಸಹ ನೋಡಬಹುದು" ಎಂದು ನನ್ನನ್ನು ನಗಿಸಿದರು.

ಕುಸುಮಾಕರರ ಜೊತೆಗೆ ಸರಿತಾಬಾಯಿಯವರೂ ಸಹ ತಮ್ಮ ಜೀವನವನ್ನು ವಕೀಲಿ ವೃತ್ತಿಯೊಂದಿಗೆ, ಸಾಮಾಜಿಕ ಕಾರ್ಯಗಳಲ್ಲಿಯೂ ಬೆಸೆದುಕೊಂಡಿದ್ದರು. ಸರಿತಾಬಾಯಿಯವರು ಕರ್ನಾಟಕ ಲೆಜಿಸ್ಲೇಟಿವ್ ಕೌನ್ಸಿಲ್‌ದ ಸದಸ್ಯರೂ ಆಗಿದ್ದರು. ಹೀಗೆ ಇಬ್ಬರಮೂ ಆದರ್ಶದ ಜೋಡಿ. ಅವರ ಆದರ್ಶಮಯ ಸುಖ ಜೀವನಕ್ಕೆ ಯಾರದೋ ದೃಷ್ಟಿ ತಗುಲಿರಬೇಕು. ಇಲ್ಲದಿದ್ದರೆ ಹೀಗೆ ಆಕಸ್ಮಿಕವಾಗಿ ಕುಸಮಾಕರರು ಸರಿತಾಬಾಯಿಯವರನ್ನು ಬಿಟ್ಟು ಹೋಗುತ್ತಿದ್ದಿಲ್ಲ. ಏನೇ ಆಗಲಿ, ಈಗ ಉಳಿದಿರುವದು ಅವರ ನೆನಪುಗಳು ಮಾತ್ರ. ಈ ಸ್ಮೃತಿಗಳಿಗೆ ನನ್ನ ಭಾವಪೂರ್ಣ ಶ್ರದ್ಧಾಂಜಲಿ ಈ ಶಬ್ದರೂಪದಲ್ಲಿ.

ನನ್ನ ಮಿತ್ರ

❀ ಡಾ. ವಿ. ಪಿ. ದೇವುಳಗಾಂವಕರ

ದಿನಗಳು ಎಷ್ಟು ಬೇಗ ಸಾಗುತ್ತವೆ ನೋಡಿರಿ. ಹಾಂ. ಹಾಂ...... ಅನ್ನುವದರಲ್ಲಿ ಡಿಸೆಂಬರದಲ್ಲಿ ಕುಸುಮಾಕರ ಹೋಗಿ ಒಂದು ವರ್ಷ ಪೂರ್ಣವಾಗುತ್ತದೆ.

ಅವರ ಪ್ರಥಮ ವರ್ಷಶ್ರಾದ್ಧದಂದು ಶ್ರೀ ಕಲ್ಯಾಣರಾವ ಭಕ್ಕಿ, ಶ್ರೀಕಾಂತಾಚಾರಿ, ಅವರ ವಿದ್ಯಾವಂತ ಪತ್ನಿ ಸರಿತಾಬಾಯಿ, ಅವರ ಹಿತೈಷಿಗಳು, ಕುಸುಮಾಕರರ ನಿಕಟ ಸಂಪರ್ಕದಲ್ಲಿ ಬಂದವರ ಕಡೆಯಿಂದ ಒಂದು ಗುಣಗೌರವದ ಸ್ಮರಣಸಂಚಿಕೆ ತರಲು ಯೋಚಿಸಿದ್ದಾರೆ.

ಕುಸುಮಾಕರರದು ಆಜಾನುಬಾಹು ವ್ಯಕ್ತಿತ್ವ. ಶರೀರಯಷ್ಟಿ ಸಂಬಂಧವಾಗಿ ನಾನು ದಿನಾಲೂ ಆಯುರ್ವೇದ ಪರಿಭಾಷೆಯಲ್ಲಿ ಅವರಿಗೆ ಹೇಳುತ್ತಿದ್ದೆ. "ನೀವು ಜೋಡು ಎಲುಬಿನ ಮನುಷ್ಯ"ರೆಂದು.

ಬುದ್ಧಿಮತ್ತೆಯಲ್ಲಿಯೂ ಹಾಗೆಯೇ, ಯಾವಯಾವ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರೋ ಆಯಾ ಕ್ಷೇತ್ರದಲ್ಲಿ ಅವರ ಬುದ್ಧಿಯ ಕೌಶಲ್ಯ ಎದ್ದು ಕಾಣುತ್ತಿತ್ತು.

ಕೈ. ಸಂಜೀವರಾವ ದೇಸಾಯಿ, ದೇವುಳಗಾಂವಕರ ಈ ಎರಡು ಕುಟುಂಬಗಳ ಸಂಬಂಧ, ನೂತನ ವಿದ್ಯಾಲಯದಿಂದಾಗಿ ಪರಿಚಯವಾದುದರಿಂದ, ಕುಸುಮಾಕರ ಹಾಗೂ ನನ್ನ ಸಂಬಂಧ ಸಹ ಮುಂದುವರಿದುಕೊಂಡು ಬಂದಿತು.

ಕುಸುಮಾಕರ ತಮ್ಮ ಶಾಲೆಯ ಶಿಕ್ಷಣ ಮುಗಿಸಿ ಕಾನೂನು ವಿಷಯದ ಉದ್ಯೋಗದ ಉದ್ದೇಶವನ್ನು ಕಣ್ಣ ಮುಂದೆ ಇರಿಸಿಕೊಂಡು, ಮಹಾವಿದ್ಯಾಲಯದ ಶಿಕ್ಷಣದ ಸಲುವಾಗಿ ಹೈದ್ರಾಬಾದಿಗೆ ತೆರಳಿದರು. ಅದು ಅವರ ಅಂಗೈನೆಲ್ಲಿಯಾಗಿದ್ದಿತು.

ದೇಸಾಯಿ ಕುಟುಂಬದಲ್ಲಿ (ವಿಶೇಷತ: ಕೈ. ಸಂಜೀವರಾವ, ಕೈ ರಾಘವೇಂದ್ರರಾವ ಮೂಲಕ) ರಾಷ್ಟ್ರೀಯ ವಾತಾವರಣ ಉಂಟಾಗಿತ್ತು. ಲೋಕಮಾನ್ಯ ಟಿಳಕರ ಮುಂದಾಳುತನದಿಂದ ಅವರ ವಿಚಾರದ ಪಗಡಿ ಇವರ ತಲೆಗಿತ್ತು. ಅವರ ಸಂವೇದನಾಶೀಲ, ರಾಷ್ಟ್ರೀಯ ವೃತ್ತಿಯಿಂದ ಈ ಕುಟುಂಬದಲ್ಲಿ ಸ್ವದೇಶಿ, ಸ್ವಾವಲಂಬನೆಯಲ್ಲಿ ಪ್ರಾಮಾಣಿಕತೆ ಖಾದಿ, ಸಾರ್ವಜನಿಕ ಜೀವನದಲ್ಲಿ ಸೇವೆ- ಈ ಗುಣಗಳಿಂದ ಗುಲಬರ್ಗಾದಲ್ಲಿ ಅವರ ಪ್ರಭಾವ ಪಸರಿಸಿತ್ತು.

ಅವರ ಬಹುರಂಜಿತ ಪಗಡಿ, ಕುಸುಮಾಕರರ ಹೈದ್ರಾಬಾದ ಜೀವನದಲ್ಲಿ ಬೇರೆ ಸ್ವರೂಪದ ಪ್ರಸಿದ್ಧಿ ಬಂದಿತು. ಆ ಸಮಯದಲ್ಲಿ ಹೈದ್ರಾಬಾದ ಸಂಸ್ಥಾನದಲ್ಲಿ "ಹೈದ್ರಾಬಾದ ಮುಕ್ತಿಹೊಂದಿ ಜವಾಬ್ದಾರಿ ಸರಕಾರದ ಆಳಿಕೆ ಬರಬೇಕು" ಎಂಬ ಕಾರಣದಿಂದ ಹೈದ್ರಾಬಾದ ಸಂಸ್ಥಾನದಲ್ಲಿ ಸ್ವಾಮಿ ರಾಮಾನಂದ ತೀರ್ಥರ ಮುಂದಾಳುತನದಲ್ಲಿ ಧ್ಯೇಯನಿಷ್ಠ ಚಳವಳಿ ಪ್ರಾರಂಭವಾಗಿದ್ದಿತು. ಸ್ವಾಮೀಜಿಯವರೊಂದಿಗೆ ಅನೇಕ ಧ್ಯೇಯನಿಷ್ಠ, ಕರ್ತವ್ಯಪರ, ಪ್ರಗಲ್ಭ ವಿಚಾರದ ಸಮಾಜವಾದಿ ವಿಚಾರ ಸರಣಿಯ ದೊಡ್ಡ ವರ್ತುಲವೇ ನಿರ್ಮಾಣವಾಗಿತ್ತು. ಶ್ರೀ

ಗೋಪಿಂದಭಾಯಿ ಶ್ರಾಫ್, ವೈಶಂಪಾಯನ, ಜಗನ್ನಾಥರಾವ ಚಂಡ್ರಿಕಿ ಅದರಲ್ಲಿದ್ದರು. ಇವರೆಲ್ಲ ಸ್ವಾಮೀಜಿ ನೇತೃತ್ವದಲ್ಲಿ ಕೃತಿಶೀಲ, ಸಂಘರ್ಷಕಾರ್ಯಕ್ರಮ ಆಧಾರಿತ, ರಚನಾತ್ಮಕ ಮತ್ತು ಸಂಘಟನಾತ್ಮಕ ಕೆಲಸದಲ್ಲಿ ತೊಡಗಿಸಿಕೊಂಡಿದ್ದರು.

ಸಂವೇದನಾಶೀಲ ಕುಸುಮಾಕರ ಈ ವರ್ತುಳದಲ್ಲಿ ದಾಖಲೆಯಾಗದಿದ್ದರೂ ಆಶ್ಚರ್ಯಕರವಾಗಿ ಅವರ ಪ್ರವೇಶ ಸಹಜ ರೀತಿಯಿಂದಾಯಿತು. ಆ ವರ್ತುಳದಲ್ಲಿ ಕುಸುಮಾಕರರ ಸ್ವಾತಂತ್ರ್ಯ, ಸಮತೆ, ಪ್ರಜಾಸಮಾಜವಾದ, ಅದರ ಮೇಲಿನ ವೈಚಾರಿಕನಿಷ್ಠೆ ಪ್ರಜ್ವಲಿತವಾದವು. ಈ ಧ್ಯೇಯವಾದಿ ಮಂಡಲಿಯಲ್ಲಿ ಅವರು ಎಷ್ಟು ಸಮರಸರಾದರೆಂದರೆ, ಅದು ನಡೆಸುವ ಅಂಗ್ರೇಜಿ ಸಾಪ್ತಾಹಿಕದಲ್ಲಿ ಯಶಸ್ವಿಯಾಗಿ ಲೇಖಿನ ವ್ಯವಸಾಯ ಕೈಗೊಂಡರು.

ಹೈದ್ರಾಬಾದಿನಲ್ಲಿ ಕಾನೂನು ವಿಷಯದ ಪದವಿ ಪಡೆದುಕೊಂಡು ಮರಳಿದರು. ಆದರೆ ಇನ್ನೂ ಹೈದ್ರಾಬಾದ ಮುಕ್ತಿಸಂಗ್ರಾಮ ಅಂತಿಮ ಅವಸ್ಥೆಯಲ್ಲಿ ಇದ್ದರೂ ಪೂರ್ಣವಾಗಬೇಕಾಗಿದ್ದಿತು. ಇಂಥ ಸಮಯದಲ್ಲಿ ಹೈದ್ರಾಬಾದ ಮುಕ್ತಿಸಂಗ್ರಾಮದ ಚಳವಳಿಯಲ್ಲಿ, ವಿಶೇಷತ: ಹೈದ್ರಾಬಾದ ಸೀಮೆಯಲ್ಲಿ ಎಲ್ಲಾಕಡೆಗೂ ವಿಶೇಷವಾಗಿ ರಜಾಕಾರರು ಹಿಂಸಾತ್ಮಕ ಹಾವಳಿ ನಡೆಸಿದಾಗ, ಅವರ ವಿರೋಧಿಯಾಗಿ ಸಂರಕ್ಷಣಾತ್ಮಕ, ಪ್ರತೀಕಾರಾತ್ಮಕ, ಆಕ್ರಮಕ ಚಳವಳಿ ಪ್ರಾರಂಭವಾಗಿದ್ದಿತು. ಅದರಲ್ಲಿ ನನ್ನ ಮಿತ್ರರು ವಿಶೇಷವಾಗಿ ಕುಸುಮಾಕರ ದೇಸಾಯಿ, ಮೃಗರಾಜೇಂದ್ರ ಗಂಗಣೆ, ದಿಗಂಬರರಾವ ಕಲಮಣಕರ, ಶಸ್ತ್ರಗಳನ್ನು ರೂಢಿಸುವಲ್ಲಿ ಅದನ್ನು ವಿತರಿಸುವಲ್ಲಿ ಜಯಶೀಲರಾಗಲು ಇವರೆಲ್ಲ ಧೈರ್ಯ ವಹಿಸಿದರು. ಇದರಿಂದ ಗಡಿಯಲ್ಲಿ ಜನರ ನೈತಿಕ ಸ್ಥೈರ್ಯ ಉನ್ನತ ಮಟ್ಟ ಕಂಡಿತು.

ಹೈದ್ರಾಬಾದ ಮುಕ್ತಿ ಸಂಗ್ರಾಮ ಯಶಸ್ವಿಯಾಗಿ, ಭಾರತದಲ್ಲಿಯ ಇತರ ರಾಜ್ಯಗಳಿಗೆ ಮೊದಲ ಸಾರ್ವತ್ರಿಕ ಚುನಾವಣೆಯ ತಯಾರಿ ಸುರುವಾಗಿದ್ದಿತು. ನಾವು ಇಲ್ಲಿ ರಾಷ್ಟ್ರಸೇವಾದಲದ ದಾರಿಯಲ್ಲಿ ಹೊರಟೆವು. ಮತ್ತು ರಾಜಕೀಯ ದೃಷ್ಟಿಯಿಂದ ಸಮಾಜವಾದಿ ವಿಚಾರಸರಣಿಯಲ್ಲಿ ಕಾರ್ಯಗೈಯುತ್ತ ಬಂದೆವು. ಮೃಗರಾಜೇಂದ್ರಗಂಗಣೆ, ನಾನು, ಶಿವರಾಚಪ್ಪ, ಬಿಡಪ್, ಜೀವನಭಾಯಿ ಡೋಳೆ, ಹಣಮಂತರಾವ ಜಮಗಾ, ಸೇವಾದಳದ ಚಂದ್ರಕಾಂತ ಮಯೂರಕರ, ಪುರುಷೋತ್ತಮ ನಳದುರ್ಗಕರ, ಬಲಭೀಮ ಮುರುಗಕರ, ಚಂದ್ರಕಾಂತ ದೇವುಳಗಾಂವಕರ, ಬೀದರಿನ ವೈಜನಾಥ ಪಾಟೀಲ ಇವರೆಲ್ಲ ಸಮಾಜವಾದಿ ಪಕ್ಷ ಸ್ಥಾಪಿಸಿದರು. ನಾವು ಸರ್ವಾಂಗೀಣ (ರಾಷ್ಟ್ರಸೇವಾದಲ, ಸಾನೆಗುರೂಜಿ- ಸೇವಾ ಪದಕ, ಸಮಾಜವಾದಿ ಪಕ್ಷದ ಶ್ರಮಿಕ ಕ್ಷೇತ್ರ, ಮತ್ತು ಸಾನೆಗುರೂಜಿ ಕಥಾಮಾಲೆ) ಸಮಾಜವಾದಿ ಸಂಘಟನೆಯನ್ನು ಕಟ್ಟುತ್ತಲಿದ್ದೆವು. ಅದರಲ್ಲಿ ಕುಸುಮಾಕರ ಸರ್ವ ಅಂಗಗಳಲ್ಲಿ ತಮ್ಮ ವೈಶಿಷ್ಟಗಳೊಂದಿಗೆ ತಲ್ಲೀನರಾಗಿದ್ದರು.

ನಾವು ಸಮಾಜವಾದಿ ಮಂಡಲಿಯವರು ಬೆರಳೆಣಿಕೆಯಷ್ಟಿದ್ದರೂ ಸಹ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ, ಮೊದಲ ಸ್ಥಾನಿಕ ಸ್ವರಾಜ್ಯ ಸಂಸ್ಥೆಯ ಚುನಾವಣೆಯಲ್ಲಿ ಅತ್ಯಂತ ಉತ್ಸಾಹ, ನಿಷ್ಠೆಯಿಂದ ಕೆಲಸ ಮಾಡುತ್ತಿದ್ದೆವು. ಪ್ರಜಾಪ್ರಭುತ್ವ, ಸಮತೆ, ಸಮಾಜವಾದಿ ಶೀಲ,

ವಿಕೇಂದ್ರೀಕರಣ ಈ ಎಲ್ಲ ಸಂಕಲ್ಪಗಳನ್ನು ಜನತೆಯ ಮುಂದೆ ಇಟ್ಟು, ಆದರ್ಶಬೋಧನವ ಮತ್ತು ರಾಜಕೀಯ ಶಿಕ್ಷಣ ದೃಷ್ಟಿಯಿಂದ ಎಂಥ ಸಂಘಟನೆಯನ್ನು ಕಟ್ಟುತ್ತಿದ್ದೆವೆಂದರೆ ಆಡಳಿತ ಪಕ್ಷವೇ ಮುಕ್ತವಾಗಿ ಹೊಗಳುತ್ತಿತ್ತು.

ಸಮಯ ಸರಿದಂತೆ ದೇಶದ ರಾಜಕೀಯ ಕ್ಷೇತ್ರವಲ್ಲಿ ಪ್ರಚಂಡ ಬದಲಾವಣೆ ಆಗಿ ಸಮಾಜವಾದಿಗಳೆಲ್ಲ ಚದುರಿದರು. ಕೆಲವರಂತೂ ಸಹಜವಾಗಿ ಕಾಂಗ್ರೆಸ್ಸಿನಲ್ಲಿ ಪ್ರವೇಶ ಪಡೆದರು. ಸಮಾಜವಾದಿ ಪಕ್ಷದಲ್ಲಿ ಡಾ. ರಾಮಮನೋಹರ ಲೋಹಿಯಾ, ಮಧುಲಿಮಯೆ, ಎಸ್.ಎಂ.ಜೋಶಿ ಒಂದು ಕಡೆಯಾದರೆ, ಮತ್ತೊಂದು ಕಡೆಗೆ ನಾಥ ಪೈ, ನಾನಾಸಾಹೇಬ ಗೋರೆ, ಮಧುದಂಡವತೆ, ಹೀಗೆ ಸ್ಥೂಲವಾಗಿ ಒಡಕು ಉಂಟಾಯಿತು. ಈ ಸುಮಾರಿನಲ್ಲಿ ಜಯಪ್ರಕಾಶರು ವಿನೋಬಾರವರ ಭೂದಾನ ಯಜ್ಞದಲ್ಲಿ ಸಕ್ರಿಯವಾಗಿ ಕಾರ್ಯಶೀಲರಾದರು. ಭೂದಾನ ಮೂಲಕ, ಗ್ರಾಮೋದ್ಯೋಗ ಪ್ರಧಾನ, ಅಹಿಂಸಾತ್ಮಕ ಸಮಾಜ ಸ್ಥಾಪನೆಯಲ್ಲಿ ಅಗ್ರೇಸರರಾದರು. ಇಂಥ ಪರಿಸ್ಥಿತಿಯಲ್ಲಿ ರಾಜಕೀಯವಾಗಿ ಪಿ.ಎಸ್.ಪಿ.ಯನ್ನು ಜೀವಂತವಾಗಿಟ್ಟುಕೊಳ್ಳುವುದೊಂದೇ ಮುಖ್ಯ ಕಾರ್ಯವಾಗಿದ್ದಿತು. ಈ ಕಾರ್ಯ ಇಲ್ಲಿ ಕುಸುಮಾಕರ ದೇಸಾಯಿ, ಜೀವನಭಾಯಿ, ಶಿವರಾಜಪ್ಪ ವೈಜನಾಥ ಪಾಟೀಲ, ನಾನು ಮುಂತಾದವರಿಂದ ನಡೆಯಿತು.

ಪಂ. ನೆಹರೂ ಅವರ ಕಾಲದಲ್ಲಿ ರಾಜಕೀಯ ಕ್ಷೇತ್ರದಲ್ಲಿ ತತ್ವನಿಷ್ಠತೆ ಸಾವಕಾಶವಾಗಿ ಲುಪ್ತವಾಗುತ್ತ ನಡೆಯಿತು. ಸಮತೆಯಿಂದ ಕೂಡಿದ ಸಮಾಜ ರಚನೆಯ ಧ್ಯೇಯ ಮತ್ತು ಅದನ್ನು ಸಾಧ್ಯಮಾಡುವದಕ್ಕಾಗಿ ವಿಶುದ್ಧ ಸಂಸದೀಯ ಪ್ರಣಾಳಿಯ ಸಾಧನಗಳಿಗೆ ನೆಹರೂ ಕಾಲದಲ್ಲಿ ಇದ್ದ ಮನ್ನಣೆ ಸಾವಕಾಶವಾಗಿ ನಷ್ಟವಾಗುತ್ತ ಹೋಯಿತು. ಇಂದಿರಾ ಗಾಂಧಿಯ ಕಾಲದಲ್ಲಿ ಈ ಚಿತ್ರಪಲ್ಲಟಗೊಂಡಿತು. ಏನಕೇನ ಪ್ರಕಾರದಿಂದ ಅಧಿಕಾರ ಸಂಪಾದಿಸುವ, ಅಪಮಾರ್ಗದಿಂದ ಅಧಿಕಾರವನ್ನು ಕೈಯಲ್ಲಿ ಇಟ್ಟುಕೊಳ್ಳುವದು ಇವೇ ಜಾರಿಯಲ್ಲಿದ್ದವು. ಅಶೋಭನೀಯ, ವಿಕೃತ ಆಕಾಂಕ್ಷೆಗಳೆಲ್ಲ ಬೆಳಕಿಗೆ ಬಂದು ದೇಶದಲ್ಲಿ ಅಸಂತೋಷದ ಅಲೆಗಳು ಏಳತೊಡಗಿದವು. ವಿಸ್ಫೋಟಕ ಪರಿಸ್ಥಿತಿ ನಿರ್ಮಾಣವಾಯಿತು. ಬಿಹಾರ, ಗುಜರಾತ ರಾಜ್ಯಗಳಲ್ಲಿ ವಿದ್ಯಾರ್ಥಿಗಳು ಉಗ್ರ ಆಂದೋಲನ ಕೈಕೊಂಡರು. ಈ ಎರಡೂ ಆಂದೋಲನಗಳ ನೇತೃತ್ವ ಸ್ವೀಕರಿಸಿದುದನ್ನು ಆಹ್ವಾನವೆಂದು ಬಗೆದು ಇಂದಿರಾಗಾಂಧಿ ಜೂನ್ ೨೫ ರಂದು ತುರ್ತು ಪರಿಸ್ಥಿತಿಯನ್ನು ಘೋಷಿಸಿ ಜಯಪ್ರಕಾಶ್‌ರೊಂದಿಗೆ ಸಾವಿರಾರು ಜನರನ್ನು ಬಂಧಿಸಿದರು. ತುರ್ತುಪರಿಸ್ಥಿತಿಯನ್ನು ಜನತೆ ಅತ್ಯಂತ ತ್ಯಾಗಶೀಲ ಸಂಯಮದಿಂದ ಎದುರಿಸಿದರು. ಇದು ಅದ್ವಿತೀಯವಾಗಿತ್ತು. ಜಯಪ್ರಕಾಶರ ನೇತೃತ್ವದಿಂದ ನೈತಿಕ ಅಧಿಷ್ಠಾನ ಪ್ರಾಪ್ತವಾಯಿತು.

ಇಂಥ ಪರಿಸ್ಥಿತಿಯಲ್ಲಿ ಗುಲಬರ್ಗಾದಲ್ಲಿಯೂ ತುರ್ತು ಪರಿಸ್ಥಿತಿ ವಿರೋಧಿ ವಾತಾವರಣ ನಿರ್ಮಾಣ ಮಾಡಲಾಯಿತು. ನಮ್ಮ ಶಕ್ತಿಯಿಂದ ಯಶಸ್ವಿ ಪ್ರಯತ್ನಮಾಡಿದೆವು. ಅನೇಕ

ಸಭೆಗಳು ಆಳಂದ, ಗುಲಬರ್ಗಾದಲ್ಲಿ ಯೋಜಿತಗೊಂಡವು. ಇಂಥ ನೂರು ಸಭೆಗಳನ್ನು ನಡೆಸುವ ಸಂಕಲ್ಪ ಕೈಕೊಳ್ಳಲಾಗಿದ್ದಿತು. ಆದರೆ ಪ್ರತ್ಯಕ್ಷವಾಗಿ ೫೦-೬೦ ಸಭೆಗಳು ನಡೆದವು. ಗುಲಬರ್ಗಾದಲ್ಲಿ ಪ್ರಥಮ ಸತ್ಯಾಗ್ರಹಿ ಕುಸುಮಾಕರರೇ. ಎರಡನೇ ಸತ್ಯಾಗ್ರಹಿ ಬಿ.ಆರ್. ಪಾಟೀಲ್. ಮಾರುಕಟ್ಟೆ ಪ್ರದೇಶದಲ್ಲಿ ನಡೆದುದರಿಂದ ಹೆಚ್ಚು ಪ್ರಚಾರವಾಯಿತು. ಪ್ರಸಿದ್ಧ ಸರ್ವೋದಯವಾದಿ ಠಾಕೂರದಾಸ ಬಂಗರವರ ಭಾಷಣ ಅತ್ಯಂತ ಪ್ರಭಾವಿ, ಪರಿಣಾಮಕಾರಿ ಆಗಿತ್ತು. ತುರ್ತುಸ್ಥಿತಿ ವಿರೋಧಿ ವಾತಾವರಣ ನಿರ್ಮಾಣ ಸಮ್ಮೆಳ್ಳನದಿಂದ ಯಶಸ್ವಿಗೊಂಡಿತು. ಸಾಮಾನ್ಯಜನತೆ ಸಹ ಪಾಲುಗೊಂಡರು. ಆ ಸಭೆಯಲ್ಲಿ ೨೫ ಸಾವಿರ ಜನ ಪಾಲುಗೊಂಡಿದ್ದರು. ಸತ್ಯಾಗ್ರಹ ಮಾಡಿದವರೆಲ್ಲ ಆರು ತಿಂಗಳು ಜೈಲುಶಿಕ್ಷೆಯಿಂದ ಜೈಲುವಾಸ ಮಾಡಬೇಕಾಯಿತು. ನನ್ನನ್ನು ಮಾತ್ರ ಮೀಸಾದಲ್ಲಿ ಬಂಧಿಸಿ ಹದಿನಾಲ್ಕು ತಿಂಗಳು ಕಳೆದ ನಂತರ ಬಿಡುಗಡೆ ಮಾಡಿದರು. ನಮ್ಮ ಹೋರಾಟ ಯಶಸ್ವಿಯಾಗಿದ್ದಿತು.

ತುರ್ತು ಪರಿಸ್ಥಿತಿಯನ್ನು ತೆಗೆದು, ಅದು ಇತಿಶ್ರೀಯಾಗಿ ರಾಜಕಾರಣೆ ಬಂದಿಗಳೆಲ್ಲ ಬಿಡುಗಡೆಯಾದರು. ಸಾರ್ವತ್ರಿಕ ಚುನಾವಣೆ ಘೋಷಿಸಲ್ಪಟ್ಟಿತು. ಮೂರು ತಿಂಗಳ ನಂತರದ ಸಾರ್ವತ್ರಿಕ ಚುನಾವಣೆಯಲ್ಲಿ ಇಂದಿರಾಗಾಂಧಿಯ ದಾರುಣ ಸೋಲು ಉಂಟಾಯಿತು. ಜಯಪ್ರಕಾಶ, ಕೃಪಲಾನಿಯವರ ಪ್ರಯತ್ನದಿಂದ ದೇಶದಲ್ಲಿ ಜನತಾಪಕ್ಷ ಅಸ್ತಿತ್ವಕ್ಕೆ ಬಂದಿತು.

ಕರ್ನಾಟಕದಲ್ಲಿ ಜನತಾಪಕ್ಷದ ಸರಕಾರ ಬಂದಿತು. ಮುಖ್ಯಮಂತ್ರಿ ಹೆಗಡೆಯವರು ಕುಸುಮಾಕರರ ಬುದ್ಧಿವಂತಿಕೆಯನ್ನು ಗಮನಿಸಿ ರಾಜ್ಯ ನೀರು ಸರಬರಾಜು ಮಂಡಳಿಯ ಅಧ್ಯಕ್ಷರೆಂದು ನಿಯಮಿಸಿದರು. ಕುಸುಮಾಕರರ ಪುರುಷಾರ್ಥಕ್ಕೆ ನವಸಂಧಿ ದೊರೆಯಿತು. ಹಿಂದಿನ ಕಾಂಗ್ರೆಸ್ ಸರಕಾರದ ಕಡೆಯಿಂದ ಆದ ದುಷ್ಟ, ಕ್ಷುದ್ರ, ರಾಜಕಾರಣವನ್ನು ಬಯಲುಗೊಳಿಸಿ ಕುಡಿಯುವ ನೀರನ್ನು ಭೀಮಾನದಿಯಿಂದಲೇ ಪಡೆಯುವ ಯೋಜನೆಯನ್ನು ಜಾರಿಗೊಳಿಸಿದರು. ಸರಕಾರದ ಅಪ್ಪಣೆ ಪಡೆದ ಆರು ತಿಂಗಳಲ್ಲೇ ಜಾರಿಗೊಳ್ಳುವಂತೆ ನೋಡಿಕೊಂಡರು. ಗುಲಬರ್ಗಾ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಮಾರ್ಗ ತೋರಿಸಿದರು. ರಾಜ್ಯದ ಅನೇಕ ನಗರಗಳಲ್ಲಿ, ವಾರಕ್ಕೊಮ್ಮೆ ನೀರು ಬಿಟ್ಟರೆ ಕಲಬುರ್ಗಿಯಲ್ಲಿ ದಿನಾಲು ನೀರನ್ನು ಬಿಡುವದು ಕುಸುಮಾಕರರ ಬುದ್ಧಿವಂತಿಕೆಗೆ ತಾಜಾ ಸಾಕ್ಷಿಯಾಗಿದೆ.

ಬುದ್ಧಿವಂತ ಪ್ರಕೃತಿಯ ಕುಸುಮಾಕರ ಇಂಗ್ಲಿಷ್, ಕನ್ನಡ, ಉರ್ದು ಮತ್ತು ಮರಾಠಿ ಭಾಷೆಗಳ ಮೇಲೆ ಸಮಾನ ಪ್ರಭುತ್ವ ಹೊಂದಿದ್ದರು. ಲೀಲಾಜಾಲವಾಗಿ ಭಾಷಣವನ್ನು ಮಾಡುತ್ತಿದ್ದರು. ಅವರ ವಾಚನವೂ ಹಾಗೆಯೇ. ಗಂಭೀರವಾದುದು. ಕಾನೂನು ವಿಷಯದ ಓದಿಗೆ ವ್ಯತಿರಿಕ್ತವಾಗಿ ವೈವಿಧ್ಯವಾದ ಓದು. ರಹಸ್ಯಕತೆ (ಪತ್ತೇದಾರಿ) ಓದುವದರಲ್ಲಿ ಪ್ರವೀಣರಾದವರು. ಒಂದು ರಾತ್ರಿಯಲ್ಲಿ ಎರಡು ಪುಸ್ತಕಗಳನ್ನು ಓದುವವರು. ಮುಂಜಾನೆ ಅವರನ್ನು ಭೆಟ್ಟಿ ಆದಾಗ ಕೇಳುತ್ತಿದ್ದ ಪ್ರಶ್ನೆ ಎಂದರೆ "ನೀವು ನಿನ್ನೆ ರಾತ್ರಿ ಎಷ್ಟು ಕೊಲೆಗಳನ್ನು ಮಾಡಿದಿರಿ" ಎಂದು! ಅವರು ಉತ್ತರಿಸುವ ರೀತಿ ಹೀಗೆ. "ರಹಸ್ಯ ಕತೆಗಳಲ್ಲಿ ರಹಸ್ಯವನ್ನು

ಅರಿಯುವದರಿಂದ (ಸಿವ್ಹಿಲ್, ಕ್ರಿಮಿನಲ್) ಜಗತ್ತಿನ ವಿಭಿನ್ನ ದೃಷ್ಟಿಕೋನದ ಪರಿಚಯ ಪ್ರಾಪ್ತವಾಗುತ್ತದೆ."

ವಕೀಲಿ ವ್ಯವಸಾಯದಲ್ಲಿ ಅವರ ಸ್ಥಾನ ಉಚ್ಚವಾದುದಾಗಿತ್ತು. ಅವರು ಸರ್ವಮಾನ್ಯರು. ವ್ಯವಸಾಯದಲ್ಲಿ ಪ್ರವೇಶಿಸಿ ಪದಾರ್ಪಣ ಮಾಡಿದ ತರುಣರಿಗೆ (ಕೃಷ್ಣಮೂರ್ತಿ, ಮಾನವೇಂದ್ರ, ಚಿಂಚೋಳಿ, ಕೆಲ ಮಾನಿನಿಯರು) ಸಮಾನತೆಯಿಂದ ಕಂಡು ಮಾರ್ಗದರ್ಶನ ಮಾಡುವ ರೀತಿ ವೈಶಿಷ್ಟ್ಯ ಪೂರ್ಣವಾಗಿತ್ತು. ಕಾನೂನಿನ ಮೂಲಭೂತ ಪರಿಚಯ ಮಾಡುವ ಕಲೆ ಅವರಿಗೆ ಸಾಧಿಸಿತ್ತು. ಆಪ್ತೇಷ್ಟರು, ಬೇರೆಯವರು ಯಾರು ಅವರೊಂದಿಗೆ ಕೆಲಸ ಮಾಡಿದ್ದರೋ ಅವರು ಇಂದು ಸ್ವತಂತ್ರವಾಗಿ ಸಂಪಾದನಾ ಮಾರ್ಗ ಕಂಡುಕೊಂಡಿದ್ದಾರೆ.

ಕುಸುಮಾಕರ ಬುದ್ಧಿಮತ್ತೆಯ, ಮುತ್ಸದ್ದಿತನದ, ಧೈರ್ಯಶೀಲ ಜೀವನದ ಗುರಿ ನಿರ್ಧರಿಸುವ ರೋಮ ಹರ್ಷ ಪ್ರಸಂಗ ಅವರ ಜೀವನದಲ್ಲಿ ಘಟಿಸಿತು. ಪ್ರಸಂಗ ಹೀಗಿತ್ತು. ಕೆಲ ಉಪದ್ವ್ಯಾಪಿಗಳು ನೂತನ ವಿದ್ಯಾಲಯ ಸಂಸ್ಥೆಯ ಎದುರಿಗೆ ಹೋಗುವಾಗ ಬಲಗಡೆಯ ಸ್ಥಳವನ್ನು ಆಕ್ರಮಿಸುವ ಉದ್ದೇಶದಿಂದ, ಅಲ್ಲಿ ಕೆಲವರಿಗೆ ಪ್ರೇರಣೆ ನೀಡಿ ಕಚ್ಚಾ ಝೋಪಡಿಗಳನ್ನು ಹಾಕಿಸಿದರು. ಇದರಿಂದ ಸಂಸ್ಥೆಯ ಸಂಚಾಲಕರು ಅಧೀರರಾದರು. ಈ ಕೃತಿ ಕಾನೂನುಬಾಹಿರ ಎಂದು ನಿರ್ಣಯವಾಗಿ ಮನವರಿಕೆಯ ಪ್ರಯತ್ನ ಅಪಯಶದ ಕಡೆಗೆ ಸಾಗಿದಂತೆ ಉದ್ವೇಗ ಹೆಚ್ಚುತ್ತ ನಡೆಯಿತು. ಉಪದ್ವ್ಯಾಪಿಗಳ ಕೃತಿಗೆ ಜನಮತದ ಬೆಂಬಲವಾಗಲಿ, ಅಧಿಕಾರಿಗಳ ಬೆಂಬಲವಾಗಲಿ ಇರಲಿಲ್ಲ. ಅದರ ಪರಿಣತಿ, ಪರಭಾರೆ ಈ ಝೋಪಡಿಗಳು ಅಗ್ನಿಯಿಂದ ಭಸ್ಮವಾದವು. ಈ ಪ್ರಕರಣ ಹೇಗೆ ಕೊನೆಗೊಂಡಿತೆಂದರೆ ಕುಸುಮಾಕರರ ಕಲ್ಪಕತೆ, ಬುದ್ಧಿವಂತಿಕೆ, ಧೈರ್ಯದ ನಡತೆಯಿಂದ ಎಂಬುದು ಸರ್ವಶ್ರುತವಾಗಿದೆ.

ನನ್ನ ಸ್ವಂತ ವ್ಯಥೆ

ರಾಜಕೀಯವಾಗಿ ಸಂಘಟನೆ ಎದ್ದು ನಿಲ್ಲುವಂತೆ ಮಾಡುವದು ಅಷ್ಟು ಸರಳ ಕಾರ್ಯವಲ್ಲ. ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮತಾಧಿಷ್ಠಿತ ಸಮಾಜ ನಿರ್ಮಾಣ ಮಾಡುವದನ್ನು ನಿಶ್ಚಯಿಸಿದವರಿಗಂತೂ ಇದು ಮತ್ತಷ್ಟು ಕಠಿಣವಾದುದು.

ಪಕ್ಷದ ಕಾರ್ಯಕರ್ತರಲ್ಲಿ ಧ್ಯೇಯನಿಷ್ಠತೆ ಮೂಡಿಸುವದು, ಶಿಬಿರ, ಇನ್ನಿತರ ಕಾರ್ಯಕ್ರಮಗಳಲ್ಲಿ ಸಾಮರಸ್ಯ ನಿರ್ಮಿಸುವದು, ಭಾವೈಕ್ಯತೆ ಸಾಧಿಸುವುದನ್ನು ಯಾರು ಮಾಡುವರೋ ಅವರಿಗೆ ಪಕ್ಷ ಸಂಘಟನೆ ಸಾಧ್ಯವಾಗುವದು.

ಕುಸುಮಾಕರರ ಸ್ವಭಾವದಲ್ಲಿ ಕೆಲ ನೈಸರ್ಗಿಕ ಸ್ವಭಾವ ದೋಷಗಳ ಮೂಲಕ ಸರ್ವಸಾಮಾನ್ಯ ಕಾರ್ಯಕರ್ತರಲ್ಲಿ ಸ್ವಲ್ಪ ಅಸಹನೆ, ಸಿಟ್ಟು ಇದ್ದಿತು. ಬೌದ್ಧಿಕ ಅಹಂಕಾರದಿಂದಾಗಿ ಇತರರನ್ನು ಕಡಿಮೆ, ತುಚ್ಛರೆಂದು ಕಾಣುವದರಿಂದಾಗಿ ಕಾರ್ಯಕರ್ತರು ಇವರಿಂದ ದೂರವಾದರು. ಇದೇ ನನ್ನ ತೀವ್ರ ವ್ಯಥೆ.

ಕುಸುಮಾಕರರು ಬುದ್ಧಿಜೀವಿಯಾಗಿದ್ದರೂ, ವಿವಿಧ ಭಾಷಾ ಕೋವಿದರಾಗಿದ್ದರೂ ಬರೆಯುವ ಕಲೆ ಕರಗತವಾಗಿದ್ದರೂ, ಅಹಂಕಾರ, ಆಲಸ್ಯಗಳಿಂದಾಗಿ ಲೇಖನಗಳು ಬರಲಿಲ್ಲ.

ಉತ್ಕೃಷ್ಟ, ಮೂಲಭೂತ ಸಮಾಜವಾದಿ ವಾಙ್ಮಯ ಇವರಿಂದ ಕನ್ನಡದಲ್ಲಿ ಬರಬೇಕು ಎಂಬುದು ನನ್ನ ತೀವ್ರ ಇಚ್ಛೆಯಾಗಿದ್ದಿತು. ಅದು ಫಲಪ್ರದವಾಗಲೇ ಇಲ್ಲ. ಇದು ನನ್ನ ಎರಡನೆಯ ಆಂತರಿಕ ವ್ಯಥೆ.

ಕೆಲ ಊಹೆಗೆ ನಿಲುಕದ ಸಂಗತಿಗಳು

ರಾಜಕೀಯ ಕ್ಷೇತ್ರದಲ್ಲಿ ಏನಾಯಿತೋ ಹಾಗೆಯೇ ನೂತನ ವಿದ್ಯಾಲಯ ಸಂಸ್ಥೆಯ ಸ್ಥಾನ ಸಂಬಂಧವಾಗಿ ಸಂಸ್ಥೆಯ ಸಂಚಾಲಕ ಮತ್ತು ಕುಸುಮಾಕರರ ಮಧ್ಯೆ ಅಹಂಕಾರ, ಹಟ ಇದ್ದುದರಿಂದ, ಸಂಸ್ಥೆ ಕುಸುಮಾಕರರಿಂದ ಲಾಭ ಪಡೆಯಲಾಗಲಿಲ್ಲ. ಮುಕ್ತವಾಗಿ ಸೇವೆಗೈಯುವದು ಕೊನೆಯವರೆಗೂ ಸಾಧ್ಯವಾಗಲೇ ಇಲ್ಲ ಎಂಬ ವ್ಯಥೆ ಹಾಗೆಯೇ ಉಳಿದಿದೆ.

ಗುಲಬರ್ಗಾ ನಗರಕ್ಕೆ, ಯಶಸ್ವಿ ನೀರು ಪೂರೈಕೆಯ ನಂತರ, ಆ ಹುದ್ದೆಯ ಅವಧಿ ಮುಗಿದ ನಂತರ, ಕುಸುಮಾಕರರು ಅಕ್ಷರಶಃ ಕೊನೆಯವರೆಗೂ ನ್ಯಾಯಾಲಯದೆಡೆಗೆ ಬೆನ್ನು ತಿರುವಿದರು. ವಾಸ್ತವಿಕವಾಗಿ ಅವರು ವಕೀಲಿ ಕಾರ್ಯದಲ್ಲಿ ಪುನಃ ಮಗ್ನರಾಗುವದು ಸಾಧ್ಯವಿತ್ತು. ನನ್ನ ಗುರು ಡಾ. ಕೇತಕರರು ದೇಶದಲ್ಲಿ ಆಂದೋಲನ ನಡೆದಾಗೆಲ್ಲ ಭಾಗವಹಿಸಿ, ಮುಗಿದ ನಂತರ ಮತ್ತೆ ಉದ್ಯೋಗದತ್ತ ಧಾವಿಸುತ್ತಿದ್ದರು. ಪುನಃ ಆಯುರ್ವೇದ ಕಾಲೇಜಿನ ಅಧ್ಯಾಪನಗೈಯುತ್ತಿದ್ದರು. ನ್ಯಾಯಾಲಯದೆಡೆಗೆ ಪುನಃ ಕೊನೆಯವರೆಗೂ ಹೋಗಲಾರದುದು ಊಹೆಗೆ ನಿಲುಕದ ವಿಷಯ.

ಇನ್ನೊಂದು ಊಹೆಗೆ ನಿಲುಕದ ಬಾಬು ಸಂಪೂರ್ಣ ಖಾಸಗಿ ಸ್ವರೂಪದ್ದು, ತಂದೆಯ ಸ್ವರೂಪದ ಕುಸುಮಾಕರ, ತಮ್ಮ ಕರ್ತವ್ಯವೆಂದು ಬಗೆದು ಮನೆಯಲ್ಲಿ ಆಪ್ತೇಷ್ಟರಿಗೆ, ಉಚ್ಚಶಿಕ್ಷಣಕ್ಕಾಗಿ, ವ್ಯವಸಾಯಕ್ಕಾಗಿ, ಮುಕ್ತ ಹಸ್ತದಿಂದ ಪರಿಪರಿಯಾಗಿ ಸಹಾಯ ಸಲ್ಲಿಸಿದರು. ಕರ್ತವ್ಯವೆಂದು ಲಗ್ನಕ್ಕಾಗಿ ಮತ್ತಿತರ ಕಾರಣಗಳಿಗಾಗಿ ಸಹಾಯ ಮಾಡಿದರು. ವಿಷಾದದ ಸಂಗತಿಯೆಂದರೆ ಅವರೆಲ್ಲರ ಮತ್ತು ಕುಸುಮಾಕರರ ಸಂಬಂಧ ಆಶ್ಚರ್ಯಕರ ರೀತಿಯಲ್ಲಿ, ಬಿಗಡಾಯಿಸಿತು. ಸ್ಥಾವರ ಆಸ್ತಿ ಸಂಬಂಧವಾಗಿಯೂ ನ್ಯಾಯಪೂರ್ಣವಾಗಿ ವಿಲೇವಾರಿ ಮಾಡಲು ಪ್ರಯತ್ನಿಸಿದರು. ಆದರೆ ಕೊನೆಗೆ, ವೈರತ್ವದ ಪರಿಸ್ಥಿತಿ ನಿರ್ಮಾಣವಾಯಿತು. ಇದು ಖಾಸಗಿ ಬಾಬು ಎಂದು ನಾನು ಬರೆಯುವದನ್ನು ಬಿಡಬೇಕೆಂದಿದ್ದೆ. ಆದರೆ ಕೊನೆ ಕೊನೆಗೆ ಈ ವೈರತ್ವ ವಿಕೋಪಕ್ಕೆ ಹೋಗಿ ಅವರ ಮನಸ್ಸಿನ ಮೇಲೆ, ಕಾರ್ಯಕ್ಷಮತೆಯ ಮೇಲೆ, ಮತ್ತು ಮಾನಸಿಕ ಆರೋಗ್ಯದ ಮೇಲೆ ವಿಪರೀತ ಪರಿಣಾಮವಾದುದನ್ನು ನಾನು ಪ್ರತ್ಯಕ್ಷ ಕಂಡಿದ್ದೇನೆ. ಈ ಕಷ್ಟದ ಪ್ರಸಂಗವನ್ನು ಕುಸುಮಾಕರ ಮತ್ತು ಶ್ರೀಮತಿ ಸರಿತಾಬಾಯಿ ಸಾಮೋಪಾಯದಿಂದ ಬಿಡಿಸಲು ಆಗುತ್ತಿರಲಿಲ್ಲವೇನು? ಈ ಪ್ರಸಂಗ ನನಗೆ ಊಹೆಗೆ ನಿಲುಕಲಾರದ್ದು ಅನಿಸಿತು.

ಕರ್ಮಯೋಗಿ

❁ ಆದ್ಯ ರಾಮಾಚಾರ್ಯ

ಭಾರತದ ಸ್ವಾತಂತ್ರ ಹೋರಾಟದಲ್ಲಿ ಅಗ್ರಮಾನ್ಯ ಕುಟುಂಬವೆಂದೆನಿಸಿದ ದೇಸಾಯಿ ಮನೆತನದಲ್ಲಿ ದಿ. ರಾಘವೇಂದ್ರರಾಯರು ಕುಕನೂರಿನಲ್ಲಿ ರಾಷ್ಟ್ರೀಯ ವಿದ್ಯಾಲಯವನ್ನು ನಿರ್ಮಿಸಿದ್ದು, ಆ ವಿದ್ಯಾಲಯವು ಇಂದಿಗೂ ಅಷ್ಟೇ ನಿಷ್ಠೆಯಿಂದ ಮುಂದುವರೆಯುತ್ತ ಬಂದಿರುವದು ನಾಡಿನ ಮಹಾ ಭಾಗ್ಯವೆಂದೆನಿಸುವದು. ಅದೇ ಕುಟುಂಬದಲ್ಲಿ ಜನಿಸಿದ ಸಂಜೀವರಾಯರಾದರೂ ರಾಷ್ಟ್ರಾಭಿಮಾನ, ರಾಷ್ಟ್ರೀಯತ್ವದ ಹೋರಾಟದಲ್ಲಿಯೇ ಬೆಳೆದು ಬಂದವರು. ಶ್ರೀ ಸಂಜೀವರಾಯರ ಪುತ್ರರೇ ಗುಲಬರ್ಗಾ ನಗರದಲ್ಲಿ ಖ್ಯಾತ ವಕೀಲರು, ರಾಷ್ಟ್ರೀಯವಾದಿಗಳು, ಖಾದೀ ಪ್ರೇಮಿಗಳೂ, ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದು, ವಿದ್ಯಾರ್ಥಿಗಳಲ್ಲಿ ರಾಷ್ಟ್ರಪ್ರೇಮದ ಜ್ಯೋತಿಯನ್ನು ಬೆಳಗಿಸಲು ಕಾರಣಕರ್ತರಾದವರೆಂದರೆ ಶ್ರೀ ಕುಸುಮಾಕರ ದೇಸಾಯಿಯವರು. ದೇಸಾಯಿಯವರ ಬಾಳು ಬಾಲ್ಯದಿಂದಲೇ ರಾಷ್ಟ್ರೀಯತ್ವದ ಶಾಂತಿ ಮಂತ್ರದೊಂದಿಗೆ ಆರಂಭಗೊಂಡಿತು. ಇವರ ಪ್ರಾಥಮಿಕ ವಿದ್ಯಾಭ್ಯಾಸವು ವಿದ್ಯಾನಂದ ಗುರುಕುಲದಲ್ಲಾದರೆ ಮುಂದಿನ ಪ್ರೌಢ ವಿದ್ಯಾಭ್ಯಾಸವೆಲ್ಲ ಹಿರಿಯರು, ಸ್ವಾತಂತ್ರ ಸಂಗ್ರಾಮದ ಮಹಾನೇತಾರರು ಎಂದೆನಿಸಿಕೊಂಡಿರುವ, ಗುಲಬರ್ಗಾದಲ್ಲಿರುವ ಶ್ರೀ ದೇವುಳಗಾಂವಕರ ಹಿರಿತನದಲ್ಲಿ ನಡೆಯುತ್ತಿರುವ ನೂತನ ವಿದ್ಯಾಲಯದಲ್ಲಾಯಿತು. ಇವರು ಬಾಲ್ಯದಿಂದಲೇ ಖಾದಿ ವಸ್ತ್ರಧಾರಿಗಳು. ಆ ಉದ್ಯಮವನ್ನು ಬಹು ಆದರದಿಂದ ಬೆಳೆಸಲು ಕಾರಣಕರ್ತರೆನಿಸಿದರು. ಶ್ರೀಯುತರಿಗೆ ತಮ್ಮ ಬಾಲ್ಯದಲ್ಲಿಯೇ ಒಳ್ಳೆಯ ಸಂಸ್ಕಾರದೊಂದಿಗೆ ರಾಷ್ಟ್ರೀಯತ್ವದ ಭದ್ರವಾದ ವಿಚಾರಧಾರೆಯ ತಳಹದಿಯು ಲಭಿಸಿತು. ಅದನ್ನು ಅವರು ಜೀವನದುದ್ದಕ್ಕೂ ಕಾಪಾಡಿಕೊಂಡು, ರೂಢಿಸಿಕೊಂಡು ಬಂದವರಲ್ಲದೆ ತಪ್ಪದೇ ಆ ಶಿಸ್ತು, ಸಂಯಮ ಹಾಗೂ ಕಾರ್ಯತತ್ಪರತೆ ಮೊದಲಾದವುಗಳನ್ನು ಆದರ್ಶ ರೀತಿಯಲ್ಲಿ ರಕ್ಷಿಸಿಕೊಂಡು ಬಂದರು.

ಗುಲಬರ್ಗಾ ನಗರಕ್ಕೆ ಭೇಟಿ ಕೊಟ್ಟಾಗಲೆಲ್ಲ ತಪ್ಪದೇ ಕುಸುಮಾಕರರನ್ನು ಭೇಟಿಯಾಗಿ ಆ ದಂಪತಿಗಳೊಂದಿಗೆ ಪ್ರಚಲಿತ ವಿದ್ಯಮಾನಗಳೊಂದಿಗೆ ರಾಷ್ಟ್ರದ ಆಗುಹೋಗುಗಳು ಹಾಗೂ ಸಾಹಿತ್ಯದ ಬಗ್ಗೆ ಮೆಲುಕು ಹಾಕದೆ ಮರಳುವುದಂತೂ ಸಾಧ್ಯವೇ ಆಗುತ್ತಿರಲಿಲ್ಲ. ಶ್ರೀಯುತರು ಹೈದರಾಬಾದಿನಲ್ಲಿ ವಿದ್ಯಾರ್ಥಿದಿಶೆಯಲ್ಲಿದ್ದಾಗ ತಮ್ಮ ಸಹಪಾಠಿಗಳೊಂದಿಗೆ ದಿನಾಂಕ ೧೦-೮-೧೯೪೭ ರಲ್ಲಿ ಮೊಟ್ಟ ಮೊದಲ ಸಲ ಎಂಬಂತೆ ಸತ್ಯಾಗ್ರಹಿಗಳ ಒಂದು ತಂಡವನ್ನು ರಚಿಸಿದರು. ಅದರಲ್ಲಿ ಹದಿನೇಳು ಜನ ಯುವಕರು ಭಾಗಿಗಳಾಗಿದ್ದರು. ಅವರ ಈ ಪ್ರಯತ್ನವು ಅಂದಿನ ಆಡಳಿತಾಧಿಕಾರಿಗಳಿಗೆ ಅಪಥ್ಯವಾಗಿತ್ತು. ತತ್ಫಲವಾಗಿ ಕುಸುಮಾಕರ ದೇಸಾಯಿಯವರು ಎರಡು ತಿಂಗಳುಗಳ ಕಾಲ ಕಾರಾಗೃಹವಾಸವನ್ನನುಭವಿಸಬೇಕಾಯಿತು.

ಕುಸುಮಾಕರರಿಗೆ ಈ ಬಂಧನದಿಂದ ಹೊಸ ಚೈತನ್ಯವೇ ಲಭಿಸಿದಂತಾಯಿತು. ಮುಂದೆ ಅವರು "ಕೈಸರ್ ಜಾವಳ್"ರಲ್ಲಿದ್ದುಕೊಂಡು ಸಶಸ್ತ್ರ ಭೂಗತ ಯೋಧರ ಪಡೆಯೊಂದನ್ನು ಸಂಘಟಿಸಿದರಲ್ಲದೆ ೧೯೪೮ ರಲ್ಲಿ ನಡೆದ ಹೈದಾರಾಬಾದ್ ಕರ್ನಾಟಕ ಪ್ರದೇಶದ ಬಂಧನದಿಂದ ಬಿಡುಗಡೆಯ ಆಂದೋಲನದಲ್ಲಿ ತಮ್ಮ ಇಪ್ಪತ್ತನೇ ವರುಷದ ತಾರುಣ್ಯಾವಸ್ಥೆಯಲ್ಲಿಯೇ ಸಂಪೂರ್ಣ ಭಾಗವಹಿಸಿದರು. ಇದರೊಂದಿಗೆ ಹೈದರಾಬಾದ್ ಸ್ಟೇಟ್ ಕಾಂಗ್ರೆಸ್ಸಿನವರು ಆರಂಭಿಸಿದ್ದ 'ಸ್ಕೊಲೈಸ್' ಹಾಗೂ 'ಫ್ರೀಡಮ್' ಎಂಬ ಆಂಗ್ಲ ವಾರಪತ್ರಿಕೆಗಳಿಗೆ ಸಂಪಾದಕರಾಗಿ ಒಳ್ಳೇ ಶಿಸ್ತಿನಿಂದ ಆ ಪತ್ರಿಕೆಗಳು ಸ್ವಾತಂತ್ರ ಹೋರಾಟಗಾರರಿಗೆಲ್ಲ ಮಾರ್ಗದರ್ಶನವನ್ನೀಯುವಂತೆ ನೋಡಿಕೊಂಡರು. ಇದರಿಂದಾಗಿ ಶ್ರೀಯುತರಿಗೆ ಬ್ಯಾರಿಸ್ಟರ್ ಶ್ರೀಧರ್ ವಾಮನ್ ನಾಯಕ್ ಇವರ ಆಪ್ತ ಕಾರ್ಯದರ್ಶಿಯಾಗಿ ಒಂದು ವರುಷ ಕಾಲ (೧೯೫೦ ರಲ್ಲಿ) ದಿಲ್ಲಿಯಲ್ಲಿ ಕೆಲಸ ಮಾಡುವಂಥ ಸುಯೋಗವು ಲಭಿಸಿತು. ಶ್ರೀಧರ್ ವಾಮನ್ ನಾಯಕ್ ಇವರು ಅಂದಿನ ಹೈದರಾಬಾದ್ ಸರಕಾರದ ಪಾರ್ಲಿಮೆಂಟ್ ಸದಸ್ಯರಾಗಿ ಆಯ್ಕೆಯಾಗಿದ್ದರು.

ಕುಸುಮಾಕರ ದೇಸಾಯಿಯವರು ತಾವು ೧೯೫೪ರಲ್ಲಿ ಕಾನೂನು ಪದವಿ ಪಡೆದ ನಂತರ ಕೇಂದ್ರ ಸ್ಥಳವಾದ ಗುಲಬರ್ಗಾದಲ್ಲಿಯೇ ಇದ್ದುಕೊಂಡು ತಮ್ಮ ವಕೀಲ ವೃತ್ತಿಯನ್ನಾರಂಭಿಸಿ ಬಹು ಬೇಗನೇ ಪ್ರಸಿದ್ಧಿ ಪಡೆದುಕೊಂಡರು. ಯಾವಾಗಲೂ ಅವರ ಧೋರಣೆಯು ಸಮಾಜವಾದಿ ಪಕ್ಷದ ಕಡೆಗಿದ್ದುದರಿಂದ ಅದೇ ಪಕ್ಷದಿಂದ ೧೯೫೦ರಲ್ಲಿ ಜಿಲ್ಲಾ ನಗರಪಾಲಿಕೆಗೆ ಚುನಾಯಿತರಾಗಿ ಬಂದರು. ಮುಂದೆ ಅವರು ೧೯೬೦ರಲ್ಲಿ ತುಲನಾತ್ಮಕ ಸಂವಿಧಾನಶಾಸ್ತ್ರ ಹಾಗೂ ನ್ಯಾಯಶಾಸ್ತ್ರ ಈ ಎರಡೂ ವಿಷಯಗಳನ್ನು ತೆಗೆದುಕೊಂಡು ಎಲ್.ಎಲ್.ಎಂ. ಪರೀಕ್ಷೆಯಲ್ಲಿ ತೇರ್ಗಡೆಯಾದರು.

ಅಲ್ಲದೆ, ಗುಲಬರ್ಗಾದಲ್ಲಿರುವ ಕಾನೂನು ಕಾಲೇಜಿನಲ್ಲಿ ಉಪಾಧ್ಯಾಯ ವೃತ್ತಿಯಲ್ಲಿಯೂ ತಮ್ಮ ಸಹಭಾಗಿತ್ವವನ್ನು ತೋರಿಸಿದರು. ೧೯೭೪ರಲ್ಲಿ ಶ್ರೀಯುತರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾಗಿ ಆಯ್ಕೆಗೊಂಡರು. ೧೯೭೫ರಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಿದಾಗ ಅದರ ವಿರುದ್ಧವಾಗಿ ಒಬ್ಬಂಟಿಗರಾಗಿಯೇ ಹೋರಾಡಿದರು. ಬಂಧಿತರಾದ ದೇಸಾಯಿಯವರಿಗೆ ೧೯೭೬ರಲ್ಲಿ ಬಿಡುಗಡೆಯಾಯಿತು. ನಮ್ಮ ರಾಜ್ಯದಲ್ಲಿ ೧೯೭೭ರಲ್ಲಿ ಜನತಾ ಪಕ್ಷವು ಸ್ಥಾಪನೆಗೊಂಡಾಗ ಕುಸುಮಾಕರರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಕೆಲಸ ಮಾಡಿದರು. ಹೀಗೆ ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಶ್ರೀಯುತರು ನಾಲ್ಕು ಬಾರಿ ಸೆರೆಮನೆ ವಾಸವನ್ನು ಅನುಭವಿಸಿದ ಧೀರಯೋಧರೆಂದೆನಿಸಿಕೊಂಡರು.

ಅರ್ಧ ಶತಮಾನಕ್ಕಿಂತಲೂ ಹೆಚ್ಚಿನ ಕಾಲಾವಧಿಯಲ್ಲಿ ಅತ್ಯಂತ ನಿಷ್ಠೆಯಿಂದ ಯಾವ ಆಸೆ ಆಕಾಂಕ್ಷೆಗಳಿಲ್ಲದೆ ಸೇವೆ ಸಲ್ಲಿಸುತ್ತ ಬಂದ ಕುಸುಮಾಕರ ದೇಸಾಯಿಯವರಿಗೆ ಅವರ

ಜೀವನದಲ್ಲಿಯೇ ಆಕಸ್ಮಿಕವೆಂಬಂತೆ ಕರ್ನಾಟಕ ರಾಜ್ಯ ಸರಕಾರವು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಿತು. ಅವರು ಮಾಡಿದ ತ್ಯಾಗ ಹಾಗೂ ರಾಷ್ಟ್ರಸೇವೆಗೆ ಇದೊಂದು ಹೇಳಿಕೊಳ್ಳುವಂತಹ ಹುದ್ದೆಯಾಗಿರದಿದ್ದರೂ ಸಹ ದೇಸಾಯಿಯವರು ಮಾತ್ರ ತಮಗೊಪ್ಪಿಸಿದ ಈ ಕೆಲಸವನ್ನು ಸಹ ಬಹು ನಿಷ್ಠೆಯಿಂದ ಅಷ್ಟೇ ಚೊಕ್ಕಟವಾದ ರೀತಿಯಲ್ಲಿ ಸಮರ್ಥ ರೀತಿಯಲ್ಲಿ ಮಾಡಿ ತೋರಿಸಿದರು. ಜಲಮಂಡಳಿಯ ವತಿಯಿಂದ ಅವರು ಗುಲಬರ್ಗಾ ನಗರಕ್ಕೆ ನೀಡಿದ ಭೀಮಾ ಯೋಜನೆಯು ಅವರ ಕಾರ್ಯಕ್ಷಮತೆಯ ದ್ಯೋತಕವಾಗಿ ಉಳಿಯುವಂತಾಯಿತು.

ಜೀವನದಲ್ಲಿ ಮರೆಯಲಾಗದಂತಹ ಕೆಲವು ಘಟನೆಗಳು ನಡೆಯುವದುಂಟು. ಅಂಥ ಸ್ಮರಣೀಯ ಘಟನೆಗಳಲ್ಲಿ ಅವರ ದಾಂಪತ್ಯ ಜೀವನವೂ ಒಂದು. ನಮ್ಮ ನಾಡಿನ ಸುಪ್ರಸಿದ್ಧ ಸಾಂಸ್ಕೃತಿಕ ಮನೆತನದವರಾದ ಶ್ರೀಮತಿ ಸರಿತಾರವರು ಅವರ ಧರ್ಮಪತ್ನಿಯಾಗಿ ಬಂದರು. ಇವರು ಒಳ್ಳೇ ಬರಹಗಾರ್ತಿ ಅಷ್ಟೇ ಅಲ್ಲದೆ ಪ್ರಸಿದ್ಧ ವಕೀಲರೆಂದೂ ಹೆಸರು ಮಾಡಿದರು. ಇವರಿಬ್ಬರ ಜೋಡಿ ಹಾಲು-ಜೇನಿನಂತಾಯಿತು. ಪತಿಪತ್ನಿಯರಿಬ್ಬರ ಬಾಳು ಬಹು ಪ್ರಾಮಾಣಿಕವಾದುದು. ಅವರಿಬ್ಬರ ಮನೋಭಾವಗಳೂ ಒಂದೇ ಅಭಿರುಚಿಯದಾದ್ದರಿಂದ, ಗುಲಬರ್ಗಾಕ್ಕೆ ಹೋದಾಗಲೆಲ್ಲ ಈ ದಂಪತಿಗಳನ್ನು ಕಂಡು ಮನದುಂಬಿ ಹರಟೆ ಹೊಡೆಯ ಬಾರದಿದ್ದಲ್ಲಿ ಮನಸ್ಸಿಗೆ ಸಮಾಧಾನವೆನಿಸುತ್ತಿರಲಿಲ್ಲ.

ಶ್ರೀಮತಿ ಸರಿತಾ ಆ ಭಾಗದ ಸ್ವಾತಂತ್ರ್ಯಯೋಧರಾದ ತುಂಗಾ ಬಳೂರಗಿ ಎಂಬವರಿಗೆ ಅಸಾಮಾನ್ಯ ಮಹಿಳೆ ಎಂದು ಸತ್ಕಾರ ಮಾಡಿದಾಗ ನನ್ನನ್ನು ಪಿ. ವೆಂಕೋಬರಾಯರನ್ನು ಕರೆಸಿದ್ದರು. ಸಮಾರಂಭ ಮುಗಿಸಿಕೊಂಡು ಬರುವಾಗ ದೇಸಾಯಿ ದಂಪತಿಗಳ ಜೊತೆಗೆ ರೇಲ್ವೆ ಸಹ ಪ್ರಯಾಣ, ಸಹ ಭೋಜನ, ಹರಟೆ ಕೇವಲ ೨ ವರ್ಷಗಳ ಹಿಂದಿನ ಮಾತಷ್ಟೇ! ಆಗಾಗ ಫೋನ್‌ನಲ್ಲಿ ಮಾತಾಡಿದ್ದೆವು. ಭೆಟ್ಟಿಯಾಗಿರಲಿಲ್ಲ.

ಕುಸುಮಾಕರ ದೇಸಾಯಿಯವರಿಗೆ ಒಂದೆರಡು ಸಲ ಹೃದಯದ ಶಸ್ತ್ರಚಿಕಿತ್ಸೆಯಾದರೂ ಸಹ ತಮ್ಮ ನಿತ್ಯದ ವ್ಯವಹಾರದಲ್ಲಾಗಲಿ ಅಥವಾ ಬಂಧು ಮಿತ್ರರೊಂದಿಗೆ ಸಮಯ ಕಳೆಯುವುದರಲ್ಲಾಗಲಿ ಎಂದೂ ಹಿಂಜರಿಯುತ್ತಿರಲಿಲ್ಲ. ಇಂದು ನಾವು ಓರ್ವ ಧೀರೋದಾತ್ತ ಕರ್ಮಜೀವಿ ಕುಸುಮಾಕರರನ್ನು ಕಳೆದುಕೊಂಡು ಹಳಹಳಿಸುವಂತಾಗಿದೆ. ಮತ್ತೆ ಅಂಥ ಉದಾತ್ತ ಮನೋಭಾವದ, ಪ್ರಾಮಾಣಿಕ ಕಾರ್ಯಕರ್ತರನ್ನು ನಾವು ಕಾಣಲು ಸಾಧ್ಯವೇ? ಎಂದು ಚಿಂತಿಸುತ್ತ ಭಗವಂತನಲ್ಲಿ ಶ್ರೀಯುತರ ಆತ್ಮಕ್ಕೆ ಶಾಂತಿ ಕೋರುವುದೊಂದೇ ನಮ್ಮ ಕೆಲಸವೆನಿಸಿಕೊಂಡಿದೆ.

ಭಲಗಾರ

❀ ಅನಂತ ಶರ್ಮಾ

ದಿವಂಗತ ಶ್ರೀ ಕುಸುಮಾಕರ ಸಂಜೀವರಾವ ದೇಸಾಯಿ ಅವರ ಬಗ್ಗೆ ಎರಡು ಶಬ್ದಗಳನ್ನು ಬರೆಯಬೇಕೆಂದಾಗ, ಏನು ಬರೆಯುವದು, ಎಲ್ಲಿಂದ ಪ್ರಾರಂಭಿಸುವದು ಎಂದು ತೋಚುತ್ತಿಲ್ಲ. ಕಳೆದ ೬೦ ವರ್ಷಗಳಿಗೂ ಮೇಲ್ಪಟ್ಟು ನನ್ನ ಅವರ ಸ್ನೇಹ ಪೂರಿತ ಸಂಪರ್ಕವಿತ್ತು. ಅದೆಷ್ಟೋ ಮಾತುಗಳು ನೆನಪಿನಂಚಿನಿಂದ ಮಾಸಿಹೋಗಿವೆ.

ಹೈದರಾಬಾದ (ನಿಜಾಂ) ಆಡಳಿತದಿಂದ ಹೈದರಾಬಾದ ಸ್ಟೇಟ್ ಕಾಂಗ್ರೆಸ್ ನಿಬಂಧಕ್ಕೊಳಗಾದಾಗ, ಹೈದರಾಬಾದ ಸಂಸ್ಥಾನವನ್ನು ಮೂರು ಭಾಷಿಕ ವಿಭಾಗಗಳಲ್ಲಿ ಕ್ರಮವಾಗಿ ಆಂಧ್ರ ಮಹಾಸಭಾ, ಮರಾಠವಾಡಾ ಪರಿಷತ್ತು ಹಾಗೂ ನಿಜಾಂ ಕರ್ನಾಟಕ ಪರಿಷತ್ತು ಹೆಸರಿನಲ್ಲಿ, ಪ್ರತ್ಯಕ್ಷವಲ್ಲದಿದ್ದರೂ ಪರೋಕ್ಷವಾಗಿ ಹಿಂಗಡಿಸಿ ರಾಜಕೀಯ ಚಟುವಟಿಕೆಗಳನ್ನು ಜೀವಂತವಾಗಿ ಇಡಲು ಪ್ರಯತ್ನಿಸಲಾಗುತ್ತಿತ್ತು. ನಮ್ಮ ಭಾಗದ ಧುರೀಣರು "ನಿಜಾಂ" ಹೆಸರನ್ನು ಅಂಟಿಸಿಕೊಂಡಿದ್ದರಿಂದ, ಬೇರೆ ಭಾಷಿಕರಿಂದ ಮೂದಲಿಕೆಯೊಡನೆ, ನಮಗೆ ಬಹಳೇ ಕಳವಳವನ್ನುಂಟುಮಾಡಿತ್ತು. ಆಗ ಶ್ರೀ ದೇಸಾಯಿಯವರು ಹಾಗೂ ಶ್ರೀ ದಿಗಂಬರರಾವ ಕಲ್ಮಣಕರರು ಹಾಗೂ ನಾನು ಹೈದರಾಬಾದಿನಲ್ಲಿಯೇ ಇರುತ್ತಿದ್ದೆವು. ಮರಾಠವಾಡಾ ಯುವಕರ ಒಂದು ಸಭೆಯಲ್ಲಿ ದೇಸಾಯಿಯವರ ಪರಿಚಯವಾಯಿತು. ಹಾಗೂ "ನಿಜಾಂ" ಶಬ್ದವನ್ನು ಸಂಸ್ಥೆಯಿಂದ ಕೈಬಿಡುವಂತೆ ಮಾಡಬೇಕಾದ ನಿರ್ಣಯವೂ ಆಯಿತು. ಹೈದರಾಬಾದಿನಲ್ಲಿನ ಹಾಗೂ ಬಂದು ಹೋಗುತ್ತಿರುವ ಕೆಲವರನ್ನು ನಾವು ಸಂಪರ್ಕಿಸಿದಾಗ ನಮ್ಮ ವಾದದಲ್ಲಿ ಹುರುಳಿದೆ ಎಂದು ಮನಗಂಡ ಕೆಲ ಜನರ ಪ್ರಯತ್ನದಿಂದಾಗಿ 'ನಿಜಾಂ ಕರ್ನಾಟಕ ಪರಿಷತ್ತು' ಹೈದರಾಬಾದ ಕರ್ನಾಟಕ ಪರಿಷತ್ತು ಆಗಿ ರೂಪಾಂತರಗೊಂಡಿತು. ಇದಕ್ಕೆ ವಿರೋಧವೂ ಇಲ್ಲದಿರಲಿಲ್ಲ ಪ್ರಭು ಭಕ್ತರಿಂದ. ಆದರೆ ಅದು ಬಾಳಲಿಲ್ಲ. ಆಗಲೇ ಹೈದರಾಬಾದಿನಲ್ಲಿನ ಸಮಾಜವಾದಿ ಕಾರ್ಯಕರ್ತರಾದ ಶ್ರೀ ಮಹದೇಸಿಂಗ, ಗಿರಿಬಸವರಾಜ ಹಾಗೂ ಬಿಡಪ್ಪ ಅವರ ಸಂಪರ್ಕ ನನಗೆ ಲಭಿಸಿತು. ನಂತರ ನಾನು ಕಾರ್ಯಕ್ಷೇತ್ರವನ್ನು ಹೈದರಾಬಾದಿನಿಂದ ಬಸವಕಲ್ಯಾಣದ ಸಮೀಪದ ಗ್ರಾಮ ಜಾನಾಪುರಕ್ಕೆ ಸ್ಥಳಾಂತರಿಸಿದೆ ಹಾಗೂ ನಿರ್ಬಂಧದಿಂದ ಮುಕ್ತವಾದ ಸ್ಟೇಟ್ ಕಾಂಗ್ರೆಸ್ಸನ್ನು ಹಳ್ಳಿಮಟ್ಟದಿಂದ ಸಂಘಟಿಸಿ, ಮುಂಬರುವ ಹೋರಾಟಕ್ಕೆ ಅಣಿಯಾಗುವ ಕರ್ತವ್ಯ ನಿರ್ವಹಿಸಲು, ಕಾಂಗ್ರೆಸ್ಸಿನ ಪೂರ್ಣಾವಧಿ ಕಾರ್ಯಕರ್ತನಾಗಿ, ಚಿಂಚೋಳಿ, ತಾಂಡೂರು, ಕೋಡಪಗಳಲ್ಲಿ ಕಾರ್ಯವಹಿಸಿಕೊಂಡೆ. ಆದರೂ ಆಗಾಗ್ಗೆ ನಮ್ಮ ಭೇಟಿ ಆಗುವದು ತಪ್ಪಲಿಲ್ಲ.

ಶ್ರೀ ಕುಸುಮಾಕರರು, ಹೈದಾರಾಬಾದಿನಲ್ಲಿಯೇ ತಮ್ಮ ಚಟುವಟಿಕೆಗಳನ್ನು ಮುಂದುವರಿಸಿ,

ಹಾ. ಮೇಲಕೋಟೆಯವರ ಸಂಪರ್ಕ ಬಂದು ಅಲ್ಲಿಯೇ ಜೇಲುವಾಸವನ್ನು ಅನುಭವಿಸಿದರು. ನಾನು ಹುಟಗಿಯ ಕಲ್ಬುರ್ಗಿ ಕಾರ್ಯಾಲಯದಲ್ಲಿ ಕೆಲದಿನ, ಕಲ್ಬುರ್ಗಿ ಕೇಂದ್ರ ಕಾರಾಗೃಹದಲ್ಲಿ ಸುಮಾರು 5 ತಿಂಗಳವಾಸ, ನಂತರ ವಿಜಾಪುರ ಜಿಲ್ಲಾ ಕಾರ್ಯಾಲಯದಲ್ಲಿ ಕೆಲಸ ನಿರ್ವಹಿಸಿದೆನು. ಪೊಲೀಸ್ ಕಾರ್ಯಾಚರಣೆಯ ನಂತರ ಮತ್ತೆ ಕಲ್ಬುರ್ಗಿಯಲ್ಲಿ ಸೇರಿ ಮುಂದಿನ ಕಾರ್ಯವಲ್ಲಿ ತೊಡಗಿಸಿಕೊಂಡೆ. ಶ್ರೀ ದೇಸಾಯಿಯವರು ಹೈದರಾಬಾದಿಗೆ ಕೆಲ ದಿನ ಬಂದರು. ನಾನು ವಕೀಲವೃತ್ತಿಯನ್ನು ಮುಂದುವರೆಸಲು ಚಿಂಚೋಳಿಗೆ ಬಂದನಂತರ ಮತ್ತೆ ನಮ್ಮ ನಿಕಟ ಸಂಪರ್ಕ ಮುಂದುವರೆಯಿತು. ವಕೀಲ ವೃತ್ತಿಯೊಂದಿಗೇ ಶ್ರೀ ದೇಸಾಯಿಯವರು ಅನೇಕ ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾದರು. ವಿಶೇಷತಃ ನೂತನ ವಿದ್ಯಾಲಯ ಶಿಕ್ಷಣ ಸಂಸ್ಥೆ ಹಾಗೂ ಖಾದೀ ಗ್ರಾಮೋದ್ಯೋಗ ಸಂಘ ಕಲಬುರ್ಗಿ.

ರಾಜಕೀಯ ಮತಭೇದವಿದ್ದರೂ ನಮ್ಮ ಸ್ನೇಹದಲ್ಲಿ ಯಾವ ಕುಂದೂ ತಲೆದೋರಲಿಲ್ಲ. ಅದೇ ಆತ್ಮೀಯತೆ ಅವರಿಂದ ನನಗೆ ದೊರೆಯುತ್ತಿತ್ತು ಹಾಗೂ ನಾವು ಅನೇಕಸಲ ಚರ್ಚೆ ಕೈಗೊಂಡರೂ ಅಸಮಾಧಾನದ ಹೊಗೆ ಎಲ್ಲೂ ಉಂಟಾಗಿರಲಿಲ್ಲ.

ಛಲಗಾರರು ದೇಸಾಯಿಯವರು. ತುರ್ತು ಪರಿಸ್ಥಿತಿ ಸಮಯದಲ್ಲಿ ನಾವು, ಕೆಲವರು ಒಟ್ಟಿಗೇ ಸತ್ಯಾಗ್ರಹ ಮಾಡಬೇಕೆಂಬ ವಿಚಾರವಿತ್ತು. ನಾವು ಮೀನ-ಮೇಷ ಮಾಡುತ್ತಿರುವದು ಅವರಲ್ಲಿ ಬೇಸರವನ್ನುಂಟುಮಾಡಿ ಅವರೊಬ್ಬರೇ ಏಕಾಂಗಿಯಾಗಿ ಸತ್ಯಾಗ್ರಹ ಕೈಕೊಂಡು ಆರು ತಿಂಗಳ ಜೇಲುವಾಸವನ್ನನುಭವಿಸಿದರು. ಕೆಲದಿನಗಳ ನಂತರ ನಾನೂ ಅವರ ಜೊತೆಗಾರನಾದೆ. ಎರಡು ತಿಂಗಳ ಅವಧಿಗೆ ನಾನು ಜೇಲು ಪ್ರವೇಶಿಸಿದ ಕೂಡಲೇ, ಆತ್ಮೀಯತೆಯಿಂದ ಬರಮಾಡಿಕೊಂಡು, “ನಿನಗಾಗಿ ಸ್ಥಳ ಕಾಯ್ದಿರಿಸಿದ್ದೇನೆ, ನೀನು ಬಂದೇ ಬರುವಿಯಾಗಿ ವಿಶ್ವಾಸವಿತ್ತು” ಎಂದು ಸಂತೋಷಗೊಂಡರು. ರಾತ್ರಿ ಬಹಳ ಹೊತ್ತಿನವರೆಗೆ ನಮ್ಮ ಮಾತುಕತೆ ನಡೆಯುತ್ತಿತ್ತು. ನಂತರ ೧೯೮೦ರಲ್ಲಿ ಕೇಂದ್ರದ ನೀತಿಯನ್ನು ಪ್ರತಿಭಟಿಸಿ ಇಬ್ಬರೂ ಒಟ್ಟಿಗೇ ಬಂಧನಕ್ಕೊಳಗಾಗಿ, ಮತ್ತೆ ೫ ದಿನ ಜೇಲು ಸಹವಾಸವನ್ನು ಅನುಭವಿಸಿದೆವು. ಶ್ರೀ ಕುಸುಮಾಕರರದು ನೇರ ನಡೆನುಡಿ, ಮುಚ್ಚು ಮರೆಯಿಲ್ಲ. ಸಿದ್ಧಾಂತದೊಂದಿಗೆ ರಾಜೀ ಮಾಡಿಕೊಳ್ಳುವ ಪ್ರಮೇಯವೇ ಇರಲಿಲ್ಲ. ಕೊನೆಯುಸಿರಿನವರೆಗೂ ತಾವು ನಂಬಿದ ಸಮಾಜವಾದಿ ವಿಚಾರವನ್ನು ಮೈಗೂಡಿಸಿಕೊಂಡಿದ್ದರು. ರಾಜಕೀಯ ಲಾಭಕ್ಕಾಗಿ ಯಾರಿಗೂ ಹೊಗಳುವ ಜಾಯಮಾನ ಅವರದಾಗಿರಲಿಲ್ಲ. ಸ್ವಾಭಿಮಾನಕ್ಕೆ ಧಕ್ಕೆ ಬರುವ ಸಂದೇಹ ತಲೆದೋರಿದಾಗ ಬಹಳೇ ಎಚ್ಚರ ವಹಿಸುತ್ತಿದ್ದರು. ಅದಕ್ಕೆ ಅವಕಾಶವನ್ನೇ ನೀಡುತ್ತಿರಲಿಲ್ಲ.

ದೇಸಾಯಿಯವರು ಸ್ವಾಧ್ಯಾಯಶೀಲರು, ಅಲಭ್ಯ ಗ್ರಂಥಗಳ ಭಂಡಾರವೇ ಅವರಲ್ಲಿತ್ತು. ಅವರ ಜ್ಞಾನಕ್ಕೆ, ಜ್ಞಾನದಾಹಕ್ಕೆ ಪರಿಮಿತಿಯಿರಲಿಲ್ಲ. ಭಾಷೆಗಳ ಮೇಲೆ ಅಗಾಧ ಹಿಡಿತ ಅವರದಾಗಿತ್ತು. ಸಾಹಿತ್ಯಿಕ, ಆರ್ಥಿಕ, ಸಾಮಾಜಿಕ, ರಾಜನೀತಿ ಯಾವ ವಿಷಯದಲ್ಲೇ ಆಗಲಿ,

ಸಮರ್ಥವಾಗಿ ತಮ್ಮ ವಿಚಾರಗಳನ್ನು ಮಂಡಿಸುವ ಕ್ಷಮತೆ ಅವರದಾಗಿತ್ತು. ಅವರ ಸಂಗಡ ಮಾತನಾಡುವುದೆಂದರೆ ರಸಮೂಟವಾಗಿರುತ್ತಿತ್ತು. ಹಾಸ್ಯಭರಿತ ಶೈಲಿಯಲ್ಲಿ ಗಹನ ವಿಚಾರಗಳನ್ನು ವ್ಯಕ್ತಪಡಿಸುವ ಚಾಕಚಕ್ಯತೆ ಅವರಲ್ಲಿತ್ತು. ಅವರ ಮಾತುಕತೆಗಳಿಂದ ಬೇಸರ ಉಂಟಾಗುತ್ತಿರಲಿಲ್ಲ. ಬೇಸರದ ವಿಷಾದದ ಛಾಯೆ ಅವರಲ್ಲಿ ನಾನು ಎಂದೂ ಕಂಡಿರಲಿಲ್ಲ. ಅವರ ನಗುಮುಖ ಎಂಥ ದುಸ್ತರ ಪರಿಸ್ಥಿತಿಯಲ್ಲಿಯೂ ಇತರರಿಗೆ ಸಮಾಧಾನ ಉಂಟುಮಾಡುತ್ತಿತ್ತು.

ಅರವತ್ತು ವರ್ಷಗಳ ನಮ್ಮ ಸಹಚರ್ಯ ಕಳೆದು ಹೋಯಿತು. ಕಲ್ಬುರ್ಗಿಯ ಸಾರ್ವಜನಿಕ ಜೀವನದಲ್ಲಿ ತುಂಬಲಾರದ ಶೂನ್ಯ ಅವತರಿಸಿದೆ.

ಆತ್ಮೀಯ ಬಂಧು, ನಂಬಲರ್ಹ ಸಹಯೋಗಿ, ಅಭಿನ್ನ ಗೆಳೆಯನನ್ನು ಕಳೆದುಕೊಂಡ ನನಗೆ ಮಂಕುತನ ಕವಿದಿದೆ. ಸಮಸ್ಯೆಗಳು ತಲೆದೋರಿದಾಗ ಸಹಾನುಭೂತಿ ತೋರುವ ವ್ಯಕ್ತಿ ಇನ್ನಿಲ್ಲ.

ಕರ್ತವ್ಯತ್ವಶಾಲಿ, ವೈಚಾರಿಕ, ಚಿಂತಕ, ನಿಸ್ಪೃಹ ಕಾರ್ಯಕರ್ತನು ನಮ್ಮನ್ನು ಅಗಲಿದ್ದಾನೆ. ಆತನಿಗೆ ಅನಂತ ಶ್ರದ್ಧಾಂಜಲಿಗಳು.

ಸ್ನೇಹಮಯಿ ಸಮಾಜವಾದಿ

❀ ವಿದ್ಯಾಧರ ಗುರೂಜಿ

ಸ್ವಾತಂತ್ರ್ಯ ಯೋಧರ ಮನೆತನದಲ್ಲಿ ಹುಟ್ಟಿ, ತಾವೂ ಸ್ವಾತಂತ್ರ್ಯ ಹೋರಾಟಗಾರರಾಗಿ ದೇಶಪ್ರೇಮವನ್ನು ಮೈಗೂಡಿಸಿಕೊಂಡು ಬೆಳೆದಿದ್ದ ಕುಸುಮಾಕರ ದೇಸಾಯಿ ಅವರು ನನಗೆ ಸ್ವಾತಂತ್ರ್ಯ ಹೋರಾಟ ಸಂದರ್ಭದಿಂದಲೂ ಪರಿಚಯ.

ನನ್ನ ಕಾರ್ಯಕ್ಷೇತ್ರ ಕಲಬುರ್ಗಿ ಜಿಲ್ಲೆಯ ಗುರುಮಠಕಲ್ ಆಗಿತ್ತು. ನಾನು ಅನೇಕ ಬಾರಿ ಹೈದರಾಬಾದಗೆ ಹೋದಾಗ, ಕುಸುಮಾಕರ ವಿದ್ಯಾರ್ಥಿಗಳ ತಂಡವನ್ನು ಕಟ್ಟಿಕೊಂಡು ರಜಾಕಾರರ ವಿರುದ್ಧ ಬೀದಿಗಿಳಿದು ಹೋರಾಟ ನಡೆಸುತ್ತಿರುವದನ್ನು ಕಂಡಿದ್ದೇನೆ.

ಇದೇ ಸಂದರ್ಭದಲ್ಲಿ ನಾನು ಅವರನ್ನು ಕಂಡಿದ್ದು. ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ, ಕಾಲೇಜಿಗೆ ಶರಣು ಹೊಡೆದು ಹೋರಾಟಕ್ಕೆ ಧುಮುಕಿದ ಕುಸುಮಾಕರ, ಆಗಿನಿಂದಲೇ ಉತ್ತಮ ನಾಯಕತ್ವದ ಗುಣಗಳನ್ನು ಹೊಂದಿದ್ದರು. ಹೋರಾಟದ ರೂಪರೇಖೆಗಳನ್ನು ರಚಿಸುವ ಚಾಣಾಕ್ಷಮತಿಯೂ ಆಗಿದ್ದರು.

ಮುಂದೆ ನನಗೆ ಸೊಲ್ಲಾಪುರದಲ್ಲಿ ನಿರಾಶ್ರಿತರ ಶಿಬಿರಗಳನ್ನು ನೋಡಿಕೊಳ್ಳುವ ಉಸ್ತುವಾರಿ ವಹಿಸಲಾಗಿತ್ತು. ಇಲ್ಲಿನ ಹೋರಾಟಗಳನ್ನು ನಿರಾಶ್ರಿತರ ಬಾಯಿಯಿಂದ ಕೇಳಿ ತಿಳಿಯುತ್ತಿದ್ದೆವು. ಇದೇ ಸಂದರ್ಭದಲ್ಲಿ ಕುಸುಮಾಕರ ದೇಸಾಯಿ ಅವರ ಸಾಹಸ ಗಾಥೆಗಳನ್ನೂ ಕೇಳುತ್ತಿದ್ದೆ. ಈ ಹೋರಾಟದಲ್ಲಿ ಅನೇಕ ಬಾರಿ ಜೈಲು ಕಂಡಿರುವ ಕುಸುಮಾಕರ ದೇಸಾಯಿ, ರಜಾಕಾರರ ವಿರುದ್ಧ ನಡೆದ ಕಾರ್ಯಾಚರಣೆಯಲ್ಲಿ ಸೈನಿಕ ತುಕಡಿಗೆ ಮುಂಚೂಣಿಯಲ್ಲಿ ನಿಂತು, ಕಲಬುರ್ಗಿಗೆ ಕರೆತಂದ ಧೈರ್ಯಶಾಲಿ ಎನಿಸಿಕೊಂಡವರು.

ಸ್ವಾತಂತ್ರ್ಯ ಸಮರದ ಸಂದರ್ಭದಲ್ಲಿ ಸಮಾಜವಾದಿ ಧುರೀಣರೊಂದಿಗೆ ಸಂಪರ್ಕ ಹೊಂದಿದ್ದು, ನಂತರ ತಾವೂ ಸಮಾಜವಾದವನ್ನು ಸ್ವೀಕರಿಸಿದವರು. ಕಾನೂನು ತಜ್ಞರು ಹಾಗೂ ಪ್ರಸಿದ್ಧ ವಕೀಲರೂ ಆಗಿದ್ದ ಕುಸುಮಾಕರ ದೇಸಾಯಿ ಅವರು ರಾಜಕಾರಣಿಯಾಗಿದ್ದರೂ, ವಕೀಲಿ ವೃತ್ತಿಯೊಂದಿಗೆ ಕಾಂಪ್ರಮೈಜ್ ಮಾಡಿಕೊಂಡಿರಲಿಲ್ಲ. ವೃತ್ತಿ-ಪ್ರವೃತ್ತಿ ಎರಡೂ ಬೇರೆ ಎಂದೇ ಪರಿಗಣಿಸುತ್ತಿದ್ದರು. ತಮ್ಮ ಕಕ್ಷಿದಾರರ ಹಿತರಕ್ಷಣೆ ಒಬ್ಬ ವಕೀಲನ ಮುಖ್ಯ ಕರ್ತವ್ಯವೆಂದು ನಂಬಿ, ಅದನ್ನು ಉಳಿಸಿಕೊಂಡು ಬಂದಿದ್ದರು.

ಸಮಾಜವಾದಿ ರಾಜಕಾರಣದಲ್ಲಿ ತಾವು ನಂಬಿರುವ ತತ್ವಗಳನ್ನೂ ಕೂಡ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಉಪದೇಶ ಮಾಡುವದು ಸುಲಭ. ಆಚರಣೆ ಕಷ್ಟ ಎಂದು ಹೇಳುವವರಿಗೆ, ಕುಸುಮಾಕರ ದೇಸಾಯಿ ಅವರು ನಡೆ-ನುಡಿ ಎರಡರಲ್ಲೂ ಸಮಾಜವಾದಿಯಾಗಿದ್ದು ತೋರಿಸಿಕೊಟ್ಟವರು.

ಕುಸುಮಾಕರ ದೇಸಾಯಿ ಅವರು ರಾಜಕಾರಣಿಯಾಗಿದ್ದರೂ, ಅವರೆಂದೂ ಅಧಿಕಾರವನ್ನು ಅರಸಿಕೊಂಡು ಹೋಗಲಿಲ್ಲ. ಸ್ವಾತಂತ್ರ್ಯ ಸಂಗ್ರಾಮ ಕಾಲದಿಂದಲೂ ಸಂಪರ್ಕ ಹೊಂದಿದ್ದ ಹಿರಿಯ ರಾಜಕೀಯ ನಾಯಕರ ಸಂಬಂಧವನ್ನು ಉಳಿಸಿಕೊಂಡು ಬಂದಿದ್ದರು. ಕಲಬುರ್ಗಿಗೆ ಭೇಟಿ ನೀಡಿದ ಬಹುತೇಕ ಸಮಾಜವಾದಿ ಧುರೀಣರು ಕುಸುಮಾಕರ ದೇಸಾಯಿ ಅವರ ಮನೆಯ ಆತಿಥ್ಯ ಸ್ವೀಕರಿಸದೇ ಹೋಗುತ್ತಿರಲಿಲ್ಲ. ಈ ಧುರೀಣರ ಸ್ನೇಹವನ್ನು ಅವರೆಂದೂ ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು, ಅಧಿಕಾರಕ್ಕೆ ದೇಹಿ ಎಂದು ಯಾರ ಮುಂದೆಯೂ ನಿಲ್ಲಲಿಲ್ಲ.

ಕುಸುಮಾಕರ ದೇಸಾಯಿ ಗಂಭೀರ ವ್ಯಕ್ತಿತ್ವದ ಅತ್ಯಂತ ನಿಷ್ಠುರವಾದಿ, ಅಷ್ಟೇ ನಿಷ್ಕಲ್ಮಶ ಮನಸ್ಸು, ಅಂತೆಯೇ ಅವರಿಗೆ ತಡವಾಗಿಯಾದರೂ ಹಿರಿಯ ಧುರೀಣರು ಗುರುತಿಸಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷರನ್ನಾಗಿ ಮಾಡಿದರು. ಈ ಸದವಕಾಶವನ್ನು ಅವರ ಸರಿಯಾಗಿಯೇ ಉಪಯೋಗಿಸಿಕೊಂಡು, ರಾಜ್ಯದ ಅನೇಕ ನಗರ- ಪಟ್ಟಣಗಳಿಗೆ ಕುಡಿಯುವ ನೀರು ಮತ್ತು ಒಳಚರಂಡಿ ಯೋಜನೆಗಳನ್ನು ರೂಪಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿದರು.

ಅದರಂತೆಯೇ ಕಲಬುರ್ಗಿಯಲ್ಲೂ ಕೂಡ ಭೀಮಾ ಯೋಜನೆಯ ಮೂಲಕ ಮುಂದಿನ ೫೦ ವರ್ಷಗಳವರೆಗೂ ಕಲಬುರ್ಗಿ ನಗರಕ್ಕೆ ನೀರಿನ ಸಮಸ್ಯೆಯಾಗದಂತೆ ಅನುಷ್ಠಾನಗೊಳಿಸಿದರು. ಇಂದು ದೇಸಾಯಿ ಅವರು ನಮ್ಮನ್ನು ಅಗಲಿ ಒಂದು ವರ್ಷವಾಗಿದೆ. ಅವರು ನಮ್ಮೊಂದಿಗೆ ಇಲ್ಲದಿದ್ದರೂ, ಕಲಬುರ್ಗಿ ಜನತೆ ಅವರನ್ನು ಮರೆಯದಂತೆ ಭೀಮಾ ನದಿಯ ನೀರು ಕುಡಿಯುವಾಗಲೊಮ್ಮೆ ದೇಸಾಯಿ ಅವರನ್ನು ನೆನೆಯದೇ ಇರಲಾರರು.

ಅವಿಸ್ಮರಣೀಯ 'ಅಣ್ಣ'

✽ ಸುನಂದಾ ಜೋಶಿ

ಶ್ರೀಮತಿ ಸರಿತಾಬಾಯಿ ದೇಸಾಯಿಯವರಿಂದ ಅಕಸ್ಮಾತ್ತಾಗಿ ಬೆಂಗಳೂರಿನಿಂದ ಫೋನ್ ಬಂದಿತು. ಅವರ ಪತಿಯು ಅಗಲಿ ಕೇವಲ ಆರೇಳು ತಿಂಗಳಾಯಿತೆಂದು ತಿಳಿದು ಬಹಳ ಬೇಸರವಾಯಿತು. ಅವರ ಪತಿ ಕುಸುಮಾಕರ ದೇಸಾಯಿಯವರ ಪರಿಚಯದ ಕುರಿತು ಅನೇಕ ನೆನಪುಗಳು ನನ್ನ ಮನಃಪಟಲದ ಮೇಲೆ ತಾವಾಗಿ ಸರಿದುಹೋದವು.

ಐವತ್ತು ವರ್ಷಗಳ ಹಿಂದಿನ ಆ ದಿನಗಳಲ್ಲಿ ನಿಜಾಮ ಹೈದರಾಬಾದ್ ಸಂಸ್ಥಾನವನ್ನು ಭಾರತದಲ್ಲಿ ಸೇರ್ಪಡಿಸಕೂಡದೆಂಬ ವಿಚಾರದಲ್ಲಿದ್ದನು. ಆದರೆ ಆತನ ಈ ಕನಸು ನನಸಾಗಿಸಬಾರದೆಂದು ಸ್ಟೇಟ್ ಕಾಂಗ್ರೆಸ್ ಪಣತೊಟ್ಟಿತ್ತು. ಸ್ಟೇಟ್ ಕಾಂಗ್ರೆಸ್‌ನ ನೇತೃತ್ವದಲ್ಲಿ ನಡೆದ ಈ ಹೋರಾಟದಲ್ಲಿ ಸರ್ವಪಕ್ಷಗಳು ಭಾಗವಹಿಸಿದ್ದವು. 'ಮಾಡು ಇಲ್ಲವೆ ಮಡಿ' ಎಂಬ ಧ್ಯೇಯದೊಂದಿಗೆ, ಸರ್ವಾನುಮತದಿಂದ ಎಲ್ಲರೂ ನಡುಕಟ್ಟಿ ನಿಂತಿದ್ದರು. ಪೂಜ್ಯ ರಾಮಾನಂದತೀರ್ಥರು ಕೂಡ "ಮಡಿಯಲು ಸಿದ್ಧ ಆದರೆ ಮಣಿಯುವುದಿಲ್ಲ" ಎಂಬ ಸಂದೇಶವನ್ನೇ ಹೈದರಾಬಾದ್ ಸಂಸ್ಥಾನದ ಜನತೆಗೆ ನೀಡಿದ್ದರು. ಎಲ್ಲ ಪಕ್ಷಗಳವರು ಸೇರಿ, ನಿಜಾಮನ ಸ್ವಪ್ನಭಂಗಕ್ಕಾಗಿ ಕಾರ್ಯತತ್ಪರರಾದರು.

ಆ ಕಾಲದಲ್ಲಿ ಹಿಂದುಗಳಿಗೆ ಅನೇಕ ರೀತಿಯಿಂದ ಹಿಂಸೆ ನೀಡಲಾಗುತ್ತಿತ್ತು. ಅದರಿಂದ ಹೋರಾಟ ಮಂದಗತಿ ಹಿಡಿಯಿತು. ಆದ್ದರಿಂದ ಪೂಜ್ಯರಾಮಾನಂದ ತೀರ್ಥರು ಎಲ್ಲರಿಗೂ ಮೇಲಿನಂತೆ ಕರೆ ನೀಡಿದ್ದರು. ಈ ಹೋರಾಟದಲ್ಲಿ ಭಾಗವಹಿಸಿದ್ದ ಘಟಕಗಳಲ್ಲಿ ವಿದ್ಯಾರ್ಥಿಗಳ ಘಟಕ ಮಹತ್ವದ್ದಾಗಿತ್ತು. ಬಹುತೇಕ ಎಲ್ಲ ವಿದ್ಯಾರ್ಥಿಗಳು ಶಿಕ್ಷಣಕ್ಕೆ ತಿಲಾಂಜಲಿ ನೀಡಿ ಈ ಹೋರಾಟಕ್ಕಾಗಿಯೇ ಸರ್ವಸ್ವವನ್ನು ಅರ್ಪಿಸಿದರು. ಹೋರಾಟದಲ್ಲಿ ಅಬಾಲವೃದ್ಧರಾದಿಯಾಗಿ ಸ್ತ್ರೀ-ಪುರುಷರೆಲ್ಲರೂ ಭಾಗವಹಿಸಿದ್ದರು. ಈ ರೀತಿ ನಡೆದ ಹೈದರಾಬಾದ್ ಸಂಸ್ಥಾನದ ಮುಕ್ತಿ ಸಂಗ್ರಾಮ ಇತಿಹಾಸ ಎಲ್ಲರಿಗೂ ತಿಳಿದದ್ದೇ.

ಆ ಕಾಲದಲ್ಲಿಯೇ ವಿದ್ಯಾರ್ಜನೆಗಾಗಿ ಹೈದರಾಬಾದಿನಲ್ಲಿದ್ದ ಕುಸುಮಾಕರ ದೇಸಾಯಿಯವರೂ ಈ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ಅವರು ತಮ್ಮ ತಂದೆಯಕಡೆ ಬಂಧುಗಳ ಮನೆಯಲ್ಲಿ (ಇಸಾಮಿಯಾ ಬಜಾರ) ವಾಸವಾಗಿದ್ದರು. ಆಗ ಅವರಿಗೆ ೨೦-೨೨ ವರ್ಷವಿರಬಹುದು. ಶಿಕ್ಷಣ ಪಡೆಯುತ್ತಲೇ ಇತರ ವಿದ್ಯಾರ್ಥಿಗಳಂತೆ ಹೋರಾಟದಲ್ಲಿ ತಾವೂ ಧುಮುಕಿದರು. ಅವರ ಮನೆಯಲ್ಲಿ ಮೊದಲಿನಿಂದಲೂ ದೇಶಭಕ್ತಿಯ ವಾತಾವರಣವೇ ಇತ್ತು. ಅವರ ತಂದೆ ಹಾಗೂ ಚಿಕ್ಕಪ್ಪನವರಿಬ್ಬರೂ ಕಾಂಗ್ರೆಸ್ ಕಾರ್ಯಕರ್ತರಾಗಿದ್ದರಲ್ಲದೆ, ಸ್ವಾತಂತ್ರ್ಯದ ರಾಷ್ಟ್ರೀಯ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಖಾದಿಧಾರಿಗಳೂ ಆಗಿದ್ದರು.

ಅದರಿಂದಾಗಿಯೇ ಕುಸುಮಾಕರ ಅವರಲ್ಲಿ ಆ ಗುಣಗಳು ಇರುವುದು ಸಹಜವಾಗಿತ್ತು.ಚಿಕ್ಕಂದಿನಿಂದ ಖಾದಿಯನ್ನೇ ಧರಿಸಿದ ಕುಸುಮಾಕರ ಅವರು ಕೊನೆಯವರೆಗೂ ಅದನ್ನು ಬಿಟ್ಟಿರಲಿಲ್ಲ. ಆದರೆ ಅವರ ವಿಚಾರಗಳು ಮಾತ್ರ ಸಮಾಜವಾದದ್ದಾಗಿದ್ದವು. ಹೀಗಾಗಿ ಸಮಾಜವಾದಿ ಪಕ್ಷದೊಂದಿಗೆ ಅವರ ಸಂಪರ್ಕ ವಿಶೇಷದ್ದಾಗಿತ್ತು. ಮುರಳೀಧರ ಕಾನಡೆ, ವಿಜಯೇಂದ್ರ ಕಾಬರಾ, ಶ್ಯಾಮ ಆಪಸಂಗೇಕರ ಮೊದಲಾದ ಅನೇಕ ಕಾರ್ಯಕರ್ತರೊಂದಿಗೆ ಅವರು ದೇಶಕ್ಕಾಗಿ ಸೇವೆ ಆರಂಭಿಸಿದರು. ಪ್ರಭಾತ ಫೇರಿ, ಸತ್ಯಾಗ್ರಹ, ಬೌದ್ಧಿಕಸಭೆ ಮೊದಲಾದವುಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ಸುಲ್ತಾನ ಬಜಾರದಲ್ಲಿ ನಡೆದ ಸತ್ಯಾಗ್ರಹದಲ್ಲಿ ಅವರು ಹಾಗೂ ಇತರ ಕಾರ್ಯಕರ್ತರು ಪಾಲ್ಗೊಂಡಿದ್ದರು. ಆಗ ಎಲ್ಲರ ಬಂಧನವಾಯಿತು. ನಂತರ ಬಹಳಷ್ಟು ಜನ ಕ್ಷಮಾಪಣೆ ಪತ್ರ ಸಲ್ಲಿಸಿ ಹೊರ ಬಂದು ಬಿಟ್ಟರು. ಆದರೆ ಕುಸುಮಾಕರ, ಕಾನಡೆ ಇಂದಿಬ್ಬರು ಮಾತ್ರ ಕ್ಷಮಾಪಣೆ ಪತ್ರ ಕೊಡಲಿಲ್ಲ. ಅವರಿಗೆ ಎರಡು ತಿಂಗಳ ಶಿಕ್ಷೆಯಾಯಿತು. ಚಂಚಲಗುಡಾ ಜೈಲ್‌ನಲ್ಲಿ ಅವರನ್ನು ಬಂಧಿಸಿಡಲಾಯಿತು. ಜೈಲಿನಿಂದ ಹೊರ ಬಂದ ನಂತರ, ಇತರ ಕಾರ್ಯಕರ್ತರೊಡನೆ ಭೂಗತ ಹೋರಾಟ ಆರಂಭಿಸಿದರು. ಅಲ್ಲಿಂದಲೇ ಮೂರೂ ಪ್ರಾಂತಗಳ (ತೆಲಂಗಾಣಾ, ಮರಾಠವಾಡಾ ಹಾಗೂ ಕರ್ನಾಟಕ) ಕಾರ್ಯಕರ್ತರೊಡನೆ ಸಂಪರ್ಕವಿರಿಸಿಕೊಂಡು ಚಳವಳಿ ನಡೆಸುತ್ತಿದ್ದರು. ಸಮಾಜವಾದಿ ಪಕ್ಷದ ಮುಖ್ಯ ಕಾರ್ಯಾಲಯ ಸೋಲಾಪುರದಲ್ಲಿತ್ತು. ಅಲ್ಲಿ ನನ್ನ ಹಿರಿಯ ಅಣ್ಣನ (ದಿ. ನರಹರಿ ಬೆಳೂರಗಿಕರ-ಲೇಖಿಕಿ ಸುನಂದಾ ಜೋಶಿಯವರ ತವರಿನ ಹೆಸರು ತುಂಗಾ ಬೆಳೂರಗಿಕರ) ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದರು. ಆ ಕಾರ್ಯಾಲಯದ ಮೇಲೂ ಹೈದರಾಬಾದ್ ಸಂಸ್ಥಾನ ವಾರಂಟ್ ಹೊರಡಿಸಿತ್ತು. ನನ್ನ ಅಣ್ಣ ಬ್ಯಾಂಕಿನ ನೌಕರಿ ಬಿಟ್ಟು ಮುಕ್ತಿ ಸಂಗ್ರಾಮದಲ್ಲಿ ಧುಮುಕಿದ್ದರು. ಅಣ್ಣನಿಂದಲೇ ಸಂಗ್ರಾಮದ ಪೂರ್ಣ ಮಾಹಿತಿ ದೊರೆಯುತ್ತಿತ್ತು. ಚಳವಳಿ ಅಂಗವಾಗಿ ಚರ್ಚಿಸಲು ಕುಸುಮಾಕರ ಅವರು ನನ್ನ ಅಣ್ಣನ ಕಡೆ ಬರುತ್ತಿದ್ದರು. ಆದರೆ ಆಗ ನನಗೆ ಅವರ ಮುಖಪರಿಚಯವಾಗಿರಲಿಲ್ಲ.

ಕುಸುಮಾಕರ ಅವರೊಡನೆ ನನ್ನ ಪ್ರತ್ಯಕ್ಷ ಪರಿಚಯವಾಗಿರದಿದ್ದರೂ ನಮ್ಮಿಬ್ಬರ ಸಂಬಂಧ ಬಹಳ ಹಳೆಯದಾಗಿದ್ದಿತ್ತು. ನಾವಿಬ್ಬರೂ ಗುಲಬರ್ಗಾದವರೇ ಆದ್ದರಿಂದ ಪರಿಚಯಕ್ಕಾಗಿ ಮುಖತಃ ಭೇಟಿಯೇ ಆಗಬೇಕೆಂದೇನೂ ಇರಲಿಲ್ಲ. ನನಗಂತೂ ಅವರೊಡನೆ ಎದುರು-ಬದುರು ಕೆಲಸ ನಿಮಿತ್ತವಾದರೂ ಮಾತನಾಡುವ ಅವಕಾಶ ಸಿಕ್ಕಿರಲಿಲ್ಲ. ಆದರೂ ಅವರಿಗೆ ನನ್ನ ಬಗ್ಗೆ ನಮ್ಮ ಕಡೆಯ ಒಬ್ಬ ಹುಡುಗಿ, ಇಷ್ಟೊಂದು ಓಗ್ಗಿನಿಂದ, ದೇಶಸಂಗ್ರಾಮದಲ್ಲಿ ಪಾಲ್ಗೊಂಡಿದ್ದಾಳಲ್ಲಾ ಎಂದು ಆಶ್ಚರ್ಯವಿತ್ತೋ ಏನೋ, ಅಂತೆಯೇ ಚಿಕ್ಕ ತಂಗಿಯಂತೆ ನನ್ನನ್ನು ಕಾಣುತ್ತಿದ್ದರು. ೫೦ ವರ್ಷಗಳ ನಂತರ ನಾವು ಪ್ರತ್ಯಕ್ಷ ಭೇಟಿಯಾದಾಗ

ಅದಕ್ಕೆ ಪ್ರಮಾಣವೂ ದೊರೆಯಿತು.

ಅವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರಲ್ಲದೆ, ಖ್ಯಾತ ನ್ಯಾಯವಾದಿಗಳೂ ಆಗಿದ್ದರು. ಅವರಿಗೆ ಮರಾಠಿ, ಆಂಗ್ಲ, ಉರ್ದು, ಕನ್ನಡ ಮೊದಲಾದ ಭಾಷೆಗಳ ಮೇಲೆ ಪ್ರಭುತ್ವವಿತ್ತು. ಕೆಟ್ಟವರೊಂದಿಗೆ ಕೆಟ್ಟವರಾಗಿ ಹಾಗೂ ಒಳ್ಳೆಯವರೊಂದಿಗೆ ತುಂಬ ಒಳ್ಳೆಯವರಾಗಿ ನಡೆದುಕೊಳ್ಳುತ್ತಿದ್ದರು. ಕುಸುಮಾಕರ ಅವರು ರಾಜಕೀಯದಲ್ಲಿ ಮಾತ್ರವಲ್ಲದೆ ಸಾಹಿತ್ಯ ಮತ್ತು ಕಲೆಗಳ ಬಗ್ಗೆ ಆಸಕ್ತಿ ವಹಿಸುತ್ತಿದ್ದರು.

ಐವತ್ತು ವರ್ಷಗಳ ನಂತರವಾದರೂ ಅವರೊಂದಿಗೆ ಭೇಟಿಯಾಗುವ ಸದವಕಾಶ ನನ್ನ ಮಗಳ ಕಾರಣದಿಂದಾಗಿ ದೊರೆಯಿತು. ನನ್ನ ಮಕ್ಕಳಿಗೆ ನಾನೊಬ್ಬ ಸ್ವಾತಂತ್ರ್ಯ ಚಳವಳಿಗಾರ್ತಿ ಎಂಬ ವಿಷಯ ಗೊತ್ತಿತ್ತು. ಉತ್ತಮ ಕಾರ್ಯಕರ್ತರ ಕುರಿತು ಮಾತನಾಡುವಾಗ ಯಾವುದೇ ಕಾರಣದಿಂದಲಾದರೂ ಕುಸುಮಾಕರ ಅವರ ಹೆಸರು ಬಂದೇ ಬರುತ್ತಿತ್ತು. ನನ್ನ ಮಗಳು ಸಂಜೀವಿನಿ ಜೋಶಿ ಗುಲಬರ್ಗಾದಲ್ಲಿದ್ದಳು. ಕುಸುಮಾಕರ ಅವರು ಸಹ ಅಲ್ಲೇ ಇದ್ದರು. ಯಾವುದೋ ಕೆಲಸದಿಂದಾಗಿ ಅವರ ಬಳಿಗೆ ಹೋದಾಗ "ನಾನು ತುಂಗಾ ಅವರ ಮಗಳು" ಎಂದು ಪರಿಚಯಿಸಿಕೊಂಡಳು. ಇಷ್ಟು ಹೇಳಿದ್ದೇ ತಡ ಅವರಿಗೆ, ಒಬ್ಬ ವಿಜ್ಞಾನಿ ತಾನು ನಡೆಸಿದ ಸಂಶೋಧನೆಯಲ್ಲಿ ಸಫಲನಾದರೆ ಎಷ್ಟು ಸಂತೋಷವಾಗಬೇಕೋ ಅಷ್ಟು ಹರ್ಷವಾಯಿತಲ್ಲದೆ, ನನ್ನ ಬಗ್ಗೆ ಅತೀ ಕಾಳಜಿಯಿಂದ ಎಲ್ಲವನ್ನೂ ವಿಚಾರಿಸಿದರಂತೆ.

ನನ್ನ ಮತ್ತು ಕುಸುಮಾಕರ ಅವರ ಭೇಟಿಯಾದದ್ದು "ಹೈದರಾಬಾದ್ ಮುಕ್ತಿ ಸಂಗ್ರಾಮ"ದ ಸ್ವರ್ಣ ಮಹೋತ್ಸವದಲ್ಲಿ. ಐವತ್ತು ವರ್ಷಗಳ ನಂತರ ಭೇಟಿ. ಅದೂ ಮೊದಲ ಪ್ರತ್ಯಕ್ಷ ಭೇಟಿಯಾಗಿದ್ದರೂ, ಅವರು ಗುಲ್ಬರ್ಗಾದಲ್ಲಿಯೇ ವಾಸಿಸುತ್ತಿದ್ದರೂ "ಹೋರಾಟ" ದ ಹರಟೆ ಎಷ್ಟೊಂದು ಸ್ವಾರಸ್ಯವಾಗಿತ್ತೆಂದರೆ ನೋಡಿದವರಿಗೆ ನಾವಿಬ್ಬರೂ ಮೊಟ್ಟಮೊದಲ ಬಾರಿ ಭೇಟಿಯಾಗಿದ್ದೇವೆ ಎಂಬ ಅನುಮಾನ ಕೂಡ ಬರುತ್ತಿರಲಿಲ್ಲ.

ನನ್ನ ಭೇಟಿಯಾದದ್ದು ಕುಸುಮಾಕರ ಅವರಿಗೆ ಸಂತೋಷವಾಗಿದ್ದು, ಹೊಸತೇನಲ್ಲ. ಆದರೆ ಅವರ ಪತ್ನಿ ಶ್ರೀಮತಿ ಸರಿತಾಬಾಯಿಯವರಿಗೆ ದುಪ್ಪಟ್ಟು ಖುಷಿಯಾಯಿತು. ಅಂದರೆ ಸ್ವಾತಂತ್ರ್ಯ ಸಂಗ್ರಾಮದ ಸುದ್ದಿಯನ್ನೆಲ್ಲ ಅವರ ಪತಿ ಅವರಿಗೆ ಹೇಳಿರಬೇಕು. ಭೇಟಿಯಾಗಬೇಕೆಂಬ ಆತುರತೆಯೂ ಅವರಲ್ಲಿದ್ದಿರಬಹುದು. ಸ್ವತಃ ಭೇಟಿಯೇ ಆದ ನಂತರದ ಸಂತೋಷವನ್ನಂತೂ ವರ್ಣಿಸಲಾಗದು. ಅಷ್ಟು ಸಂತಸಪಟ್ಟರು.

ಹೈದರಾಬಾದ್ ಮುಕ್ತಿ ಸಂಗ್ರಾಮದ ಸ್ವರ್ಣ ಮಹೋತ್ಸವ ಸಮಾರಂಭ, ಸಂಸ್ಥಾನದ ಅದೇ ಮೂರು ಸ್ಥಳಗಳಲ್ಲಿ ಅತ್ಯಂತ ಸಂಭ್ರಮದಿಂದ ಆಯೋಜಿಸಲಾಗಿತ್ತು. ಹೋರಾಟದಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬರೂ ಸದಾ ಹೋರಾಟಕ್ಕೇ ಅಂಟಿಕೊಂಡಿರುವುದು ಅಸಾಧ್ಯ. ನಾನಾದರೂ ವೈವಾಹಿಕ ಜೀವನದಲ್ಲಿ ಬಹು ಆಳವಾಗಿ ಮುಳುಗಿಹೋಗಿದ್ದೆ. ಸರಿತಾಬಾಯಿ

ಹಾಗೂ ಡಿ. ಕುಸುಮಾಕರ ಅವರು ಅವರಿಂದ ನನ್ನನ್ನು ಹೊರಗೆಳೆದು ಬೆಳಕಿಗೆ ತಂದರು. ಪ್ರಸಿದ್ಧರಾಗುವ ಬಗ್ಗೆ ಹಂಬಲ, ಆಸಕ್ತಿಯೇ ಇರದ ನಾನು ಒಂದು ಸಾಮಾನ್ಯ ಜೀವನ ಸಾಗಿಸುವುದು ರೂಢಿಯಾಗಿತ್ತು. ಅಕಸ್ಮಾತ್ತಾಗಿ ಅವರಿಬ್ಬರೂ ನನ್ನನ್ನು ಸತ್ಕರಿಸಿದರು. ರೇಡಿಯೋ, ಟಿ.ವಿ. ಪತ್ರಿಕಾಮಾಧ್ಯಮಗಳಲ್ಲಿ ಭೇಟಿ ಏರ್ಪಡಿಸಿ, ಪ್ರಚುರಿಸಿದರು. ಗೌರವಿಸಿದರು. ಅಷ್ಟೇ ಅಲ್ಲ ನನ್ನನ್ನು ಝಾನ್ಸಿರಾಣಿ ಲಕ್ಷ್ಮೀಬಾಯಿಯೊಂದಿಗೆ ಹೋಲಿಸಿದರು. ಅಷ್ಟೊಂದು ಹೊಗಳಿಕೆಯಿಂದಾಗಿ ನನಗೆ ಒಂದು ರೀತಿಯ ಗಂಟಲುಕಟ್ಟಿದಂತಾಯಿತು. ಆ ಎಲ್ಲದರ ಶ್ರೇಯಸ್ಸು ಕುಸುಮಾಕರರಿಗಿಂತ ಹೆಚ್ಚಾಗಿ ಸರಿತಾಬಾಯಿಯವರಿಗೆ ಸಲ್ಲುತ್ತದೆ. ನನ್ನ ಪರಿಚಯವಿಲ್ಲದಿದ್ದರೂ, ಮೊದಲ ಭೇಟಿಯಲ್ಲೇ ನನ್ನನ್ನು ತಮ್ಮವರಂತೆ ಕಂಡರಲ್ಲದೆ, ಚಿಕ್ಕಂದಿನಿಂದಲೂ ನಾವಿಬ್ಬರೂ ಗೆಳತಿಯರೇನೋ ಎಂಬಂತೆ ಅಭಿಮಾನ ತೋರಿಸಿದರು. ಇದಕ್ಕೆಲ್ಲ ಕಾರಣ ಕುಸುಮಾಕರ ಅವರೇ. ಪರಿಚಿತರೆಲ್ಲರನ್ನು ಇಷ್ಟೊಂದು ಆತ್ಮೀಯವಾಗಿ ಕಾಣುವ ಗುಣ ಎಲ್ಲರಲ್ಲೂ ಕಾಣಸಿಗದು.

ನಾನು ಮತ್ತು ಕುಸುಮಾಕರ ಅವರು 'ಚಳವಳಿ'ಯಲ್ಲಿ ಪಾಲ್ಗೊಂಡಿದ್ದರಿಂದಾಗಿ, ನಮ್ಮಿಬ್ಬರಲ್ಲಿ ಅತೀ ಆತ್ಮೀಯತೆ ಇರುವುದು ಸಹಜ. ಆದರೆ ಅವರಿಗಿಂತ ಹೆಚ್ಚು ಆತ್ಮೀಯತೆ ಸರಿತಾಬಾಯಿಯವರೊಂದಿಗಾದದ್ದರ ಕುರಿತು ಎಷ್ಟು ಹೇಳಿದರೂ ಕಡಿಮೆಯೇ. ಕುಸುಮಾಕರ ಅವರಿಗೆ ಎರಡು ಬಾರಿ ಹೃದಯ ಶಸ್ತ್ರಚಿಕಿತ್ಸೆಯಾಗಿತ್ತು. ಸರಿತಾಬಾಯಿಯವರಿಗೆ ಮಧುಮೇಹ. ಆದರೂ ಇಬ್ಬರೂ ತಮ್ಮ ಆರೋಗ್ಯದ ಚಿಂತೆಬಿಟ್ಟು, ಉತ್ಸಾಹದಿಂದ ಕೆಲಸಮಾಡುತ್ತಿದ್ದರು.

ಮನೆಗೆ ಬಂದ ಅತಿಥಿ, ಅಭ್ಯಾಗತರ ಕುಶಲ ಸಮಾಚಾರ ವಿಚಾರಿಸುವುದು, ಬಂಧು ಬಳಗದ ಆದರಾತಿಥ್ಯ, ಕೆಲಸಗಾರರು ಹಾಗೂ ಅವರ ಮಕ್ಕಳು ಮರಿಗಳ ಬಗ್ಗೆ ಕೂಡ ಅತ್ಯಂತ ಪ್ರೀತಿಪೂರ್ವಕ, ಕಾಳಜಿ ಮಾಡುತ್ತಿದ್ದರು. ಅಲ್ಲದೆ ಅವರ ಬೇಕು- ಬೇಡಗಳನ್ನು ಸಹ ಪೂರೈಸುತ್ತಿದ್ದರು. ಇದು ಅವರಿಬ್ಬರ ಪ್ರೀತಿಯ ಹವ್ಯಾಸವಾಗಿತ್ತು. ತಮಗೆ ಸ್ವಂತ ಮಕ್ಕಳಿಲ್ಲವೆಂಬ ಚಿಂತೆ ಎಂದೂ ಅವರನ್ನು ಕಾಡಲಿಲ್ಲ. ಮನುಷ್ಯರಂತೆಯೇ ಪ್ರಾಣಿಗಳನ್ನು ಪ್ರೀತಿಸುತ್ತಿದ್ದರು. ಅವರ ಬಳಿ ಶುಭ್ರ ಬಿಳಿ ಬಣ್ಣದ, ಆಲ್ಸೆಶನ್ ಜೋಡಿ ನಾಯಿಗಳಿದ್ದವು. ಆ ನಾಯಿಗಳನ್ನು ಚಿಕ್ಕಮಕ್ಕಳಂತೆ ಪ್ರೀತಿಸುತ್ತಿದ್ದರು. ನಾಯಿಗಳು ಕೂಡ ಯಾವಾಗಲೂ ಅವರಿಬ್ಬರ ಹಿಂದೆಯೇ ಇರುತ್ತಿದ್ದವು. ಅವರದು ಎಲ್ಲರಿಗೂ ಪ್ರೀತಿ ತೋರಿಸಬೇಕು ಎಂಬುದೇ ಮೂಲಮಂತ್ರವಾಗಿತ್ತು. ಅದರಲ್ಲಿ ಒಂದಿನಿತೂ ಕುಂದುಕೊರತೆಯಿರುತ್ತಿರಲಿಲ್ಲ.

ಸರಿತಾಬಾಯಿಯವರು ಧಾರ್ಮಿಕ ಶ್ರದ್ಧೆಯುಳ್ಳವರು ಹಾಗೂ ಪಾಪಭೀರು ಸ್ವಭಾವದವರು. ಎಲ್ಲಿಯೇ ಹೋದರೂ ದೇವಸ್ಥಾನಗಳಿಗೆ ಭೇಟಿ ನೀಡುವುದು, ದರ್ಶನಪಡೆದು, ಪೂಜೆ ಸಲ್ಲಿಸುವುದು ಅವರಿಗೆ ತುಂಬ ಇಷ್ಟ. ಏನೆಲ್ಲ ವ್ರತ ನೇಮ, ನಿಷ್ಠೆ ಆಚರಿಸುವರು. ಸ್ವತಃ ಕುಶಲ ನ್ಯಾಯವಾದಿಯಾಗಿರುವರಲ್ಲದೆ, ಸಾಹಿತ್ಯ, ಕಲೆ, ಸಂಗೀತ ಹೀಗೆ

ಅನೇಕ ಗುಣಗಳು ಅವರಲ್ಲಿವೆ. ಅದಲ್ಲದೆ ದೂರದರ್ಶನ ಧಾರಾವಾಹಿಗಾಗಿ ಕಥೆ ರಚಿಸುವುದು, ನಿರ್ದೇಶಿಸುವುದು ಕೂಡ ಅವರಿಗೆ ಕರಗತ. ತಾವು ಸ್ವತಃ ಅಭಿನಯಿಸುತ್ತಾರಲ್ಲದೆ, ಅಭಿನಯವನ್ನು ಕಲಿಸುತ್ತಾರೆ. ಈ ಎಲ್ಲ ಉತ್ತಮ ಗುಣಗಳು ಒಬ್ಬರಲ್ಲೇ ಇರುವುದನ್ನು ನೋಡಿ ಆಶ್ಚರ್ಯವಾಗುತ್ತದೆ.

ಕುಸುಮಾಕರ ದಂಪತಿಯಲ್ಲಿ ಪರಸ್ಪರ ತಿಳಿವಳಿಕೆ ಅಪಾರವಾಗಿತ್ತು. ಆದ್ದರಿಂದಲೇ ಅವರಿಬ್ಬರಲ್ಲಿ ಕಟುತ್ವ ಬರಲೇ ಇಲ್ಲ.

ಕೆಟ್ಟ ಗುಣ ಯಾರಲ್ಲಿರುವುದಿಲ್ಲ. ಆದರೆ ಅವರಿಬ್ಬರಲ್ಲಿ ಕೇವಲ ಒಳ್ಳೇಯ ಗುಣಗಳೇ ಹೆಚ್ಚಾಗಿದ್ದವು. ಅವರಿಬ್ಬರೂ ಎಷ್ಟೇ ದೂರ ಹೋಗಿರುತ್ತಿದ್ದರೂ ಮಾನಸಿಕವಾಗಿ ಸದಾ ಹತ್ತಿರವಾಗಿರುತ್ತಿದ್ದರು.

ಸರಿತಾ ಬಾಯಿಯವರನ್ನು ಕುಸುಮಾಕರ ಅವರು ಬಿಟ್ಟು ಹೋದದ್ದು ತ್ರಾಸದಾಯಕ. ಅವರು ಭೌತಿಕವಾಗಿಲ್ಲದಿದ್ದರೂ, ಅವರ ನೆನಪುಗಳು ಸದಾ ಅವರಿಗೆ ಜೊತೆಯಾಗಿರುತ್ತವೆ ಎಂಬುದರಲ್ಲಿ ಅನುಮಾನವಿಲ್ಲ.

ಶ್ರೀ ಕುಸುಮಾಕರ ಅವರ ಆತ್ಮಕ್ಕೆ ಶಾಂತಿ ಸಿಗಲೆಂಬುದೇ ಆ ಭಗವಂತನಲ್ಲಿ ಪ್ರಾರ್ಥನೆ.

ಖಾದಿಪ್ರೇಮಿ

❁ ಬಿ.ಎಚ್. ಇನಾಂದಾರ್

ಶ್ರೀ ಕುಸುಮಾಕರ ದೇಸಾಯಿ ಇವರ ಪರಿಚಯ, ಅವರು ಹೈದ್ರಾಬಾದಲ್ಲಿ ಕಾಲೇಜ ಓದುತ್ತಿದ್ದಾಗ ಆಯಿತು. ನಾನು ಆಗ ಹೈದ್ರಾಬಾದನಲ್ಲಿ ಖಾದಿ ಕೆಲಸ ಮಾಡುತ್ತಿದ್ದೆ. ಅವರ ಮನೆ ನಮ್ಮ ಮನೆಯ ಸಮೀಪ ಇತ್ತು. ಆದ ಕಾರಣ ಮೇಲಿಂದ ಮೇಲೆ ಅವರ ಭೇಟಿಯಾಗುತ್ತಿತ್ತು. ಭೇಟಿಯಲ್ಲಿ ವಿಶೇಷವಾಗಿ ರಾಜಕಾರಣದ ಬಗ್ಗೆ ಚರ್ಚೆ ಮಾಡುತ್ತಿದ್ದೆವು.

ಅವರು ಕಾಲೇಜ ಅಭ್ಯಾಸ ಮುಗಿಸಿದ ನಂತರ ೧೯೫೪-೫೫ರಲ್ಲಿ ಗುಲ್ಬರ್ಗಾಕ್ಕೆ ವಕೀಲ ವೃತ್ತಿ ಪ್ರಾರಂಭಿಸಲು ಹೋದರು. ನಾನು ಭಾಷಾವಾರು ಪ್ರಾಂತ ರಚನೆಯಾದ ನಂತರ ೧೯೫೫-೫೬ನೇ ಇಸವಿಯಲ್ಲಿ ನಮ್ಮ ಕಚೇರಿಯನ್ನು ಹೈದ್ರಾಬಾದದಿಂದ ರಾಯಚೂರಕ್ಕೆ ವರ್ಗಾಯಿಸಿದೆವು. ನಮ್ಮ ಸಂಸ್ಥೆಯ ಕಾರ್ಯಕ್ಷೇತ್ರ ರಾಯಚೂರು, ಗುಲ್ಬರ್ಗಾ, ಕೊಪ್ಪಳ ಮತ್ತು ಬೀದರ ಜಿಲ್ಲೆಗಳಲ್ಲಿ ವ್ಯಾಪಿಸಿತ್ತು. ನನಗೆ ಮೇಲಿಂದ ಮೇಲೆ ಗುಲ್ಬರ್ಗಾಕ್ಕೆ ಹೋಗುವ ಅವಶ್ಯಕತೆ ಬೀಳುತ್ತಿದ್ದರಿಂದ ಶ್ರೀ ಕುಸುಮಾಕರ ದೇಸಾಯಿ ಇವರನ್ನು ಭೇಟಿಯಾಗಿ ಸಾಕಷ್ಟು ಚರ್ಚೆ ಮಾಡುತ್ತಿದ್ದೆವು.

ಶ್ರೀ ಕುಸುಮಾಕರ ದೇಸಾಯಿ ಇವರು ವಿಶೇಷವಾಗಿ ಸಮಾಜವಾದಿ ತತ್ವದವರು. ಅವರು ಶ್ರೀರಾಮಮನೋಹರ ಲೋಹಿಯಾ ಅವರ ಪ್ರಭಾವಕ್ಕೆ ಒಳಗಾದವರು. ಕರ್ನಾಟಕದಲ್ಲಿ ವಿಶೇಷವಾಗಿ ಶ್ರೀ ಜೆ.ಎಚ್. ಪಟೇಲರ ಮಿತ್ರರು. ನಾನು ಖಾದಿ ಕಾರ್ಯಕರ್ತನಾಗಿದ್ದರಿಂದ ವಿಶೇಷವಾಗಿ ಗಾಂಧೀವಿಚಾರದಲ್ಲಿ ವಿಶ್ವಾಸವುಳ್ಳವರು. ಅವರಿಗೂ ನನಗೂ ಭಿನ್ನ ದೃಷ್ಟಿಕೋನ ಇದ್ದರೂ ಚರ್ಚೆಯಲ್ಲಿ ತಾಸುಗಟ್ಟಲೆ ವೇಳೆಯನ್ನು ಕಳೆಯುತ್ತಿದ್ದೆವು. ಅವರೂ ಕೂಡಾ ಖಾದಿಧಾರಿಗಳು ಆಗಿದ್ದರು.

ಶ್ರೀ ಕುಸುಮಾಕರ ದೇಸಾಯಿ ಇವರು, ಶ್ರೀಮತಿ ಸರಿತಾದೇವಿ ಇವರನ್ನು ವಿವಾಹವಾದರು. ವಿವಾಹದ ಕಾಲಕ್ಕೆ ಶ್ರೀಮತಿ ಸರಿತಾದೇವಿ ಇವರು ಕೇವಲ ಇಂಟರಮಿಡಿಯೆಟ್ ಪಾಸ್ ಆಗಿದ್ದರು. ಶ್ರೀ ಕುಸುಮಾಕರ ದೇಸಾಯಿ ಇವರ ಪ್ರೋತ್ಸಾಹದಿಂದ ಪುನಃ ಅಭ್ಯಾಸ ಮಾಡಿ ಬಿ.ಎ.ಎಲ್.ಎಲ್.ಬಿ. ಪಾಸ್ ಆದರು. ಶ್ರೀ ಕುಸುಮಾಕರ ದೇಸಾಯಿ ಸಂಗಡ ಅವರೂ ಕೂಡಾ ವಕೀಲ ವೃತ್ತಿ ಪ್ರಾರಂಭಿಸಿದರು.

ಶ್ರೀ ಕುಸುಮಾಕರ ದೇಸಾಯಿ ಇವರು ವಕೀಲ ವೃತ್ತಿಯಲ್ಲಿ ಹೆಸರು ಪಡೆದವರು. ಅವರ ಸಂಗಡ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿ ಇವರು ಸಾಕಷ್ಟು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಶ್ರೀಮತಿ ಕುಸುಮಾಕರ ದೇಸಾಯಿ ಇವರಿಗೆ ವಿಶೇಷವಾಗಿ ಮಹಾರಾಷ್ಟ್ರದ ಸಮಾಜವಾದಿ ನಾಯಕರಾದ ಶ್ರೀಯುತ ಮಧುಲಿಮಯೆ, ಶ್ರೀ

ಮಧು ದಂಡವತೆ, ಮಂತಾದವರ ಸಂಬಂಧ ಹೆಚ್ಚಾಗಿತ್ತು.

ಕುಸುಮಾಕರರನ್ನು ನಾನು ಏಕವಚನದಲ್ಲೇ ಸಂಬೋಧಿಸುತ್ತಿದ್ದೆ. ಆತ ಮಾತ್ರ ಅತ್ಯಂತ ಗೌರವಪೂರ್ವಕ 'ರೀ' ಹಾಕುತ್ತಿದ್ದ. ಆತ ಎಂಟು ವರ್ಷದವನಿದ್ದಾಗ ಆತನ ತಾಯಿ ತೀರಿಕೊಂಡಿದ್ದರು. ಅವರದು ತುಂಬು ಕುಟುಂಬ. ಕುಸುಮಾಕರ ಸೇರಿ ಆರು ಜನ ಗಂಡು ಮಕ್ಕಳು, ಮೂರು ಜನ ಅಕ್ಕತಂಗಿಯರು. ಕುಸುಮಾಕರನ ಕಕ್ಕಂದಿರಾದ ಭೀಮಸೇನರಾವ ದೇಸಾಯಿ, ರಾಘವೇಂದ್ರ ದೇಸಾಯಿ, ರಾಘವೇಂದ್ರರ ಮಗ ಅನಿರುದ್ಧ, ಕುಸುಮಾಕರ ಎಲ್ಲರೂ ಸ್ವಾತಂತ್ರ್ಯ ಚಳುವಳಿಯಲ್ಲಿದ್ದರು. ಭೀಮಸೇನರಾವ್ ದೇಸಾಯಿಯವರು ಅಂದಿನ ನಿಜಾಂ ಸರಕಾರದ ವಿರುದ್ಧ ಹೋರಾಡಿ ಗುಲ್ಬರ್ಗಾ ಜೈಲ್‌ನಲ್ಲಿ ಲಾಠಿ ಚಾರ್ಜ್‌ಗೆ ಬಲಿಯಾಗಿ ಅಸುನೀಗಿದ್ದರು. ರಾಘವೇಂದ್ರ ದೇಸಾಯಿಯವರು ಮನೆಯಲ್ಲಿ ತಕಲಿಯಿಂದ ಖಾದಿ ನೂಲುವುದನ್ನು ಕಲಿತಿದ್ದರು. ಕುಸುಮಾಕರ ತಾನೂ ಖಾದಿಯನ್ನು ಬಾಲ್ಯದಿಂದಲೇ ಧರಿಸುತ್ತಿದ್ದ ಪ್ರಸಂಗ ಹೇಳಿದ್ದ ಒಮ್ಮೆ ೮-೯ ವರ್ಷದ ಬಾಲಕನಾಗಿದ್ದ ಆತ ತಂದೆ ಸಂಜೀವರಾಯರನ್ನು ತನಗೆ ಬಟ್ಟೆ ಹೊಲಿಸಲು ಕೇಳಿದಾಗ ತಂದೆ "ಏನು ಬಟ್ಟೆ ಹೊಲಿಸಬೇಕಾ? ಬತ್ತಲೆ ತಿರುಗಾಡಿರಿ" ಎಂದರಂತೆ. ಅಪ್ಪ ಹೀಗೇಕೆ ಹೇಳುತ್ತಿದ್ದಾರೆ? ಶಾಲೆಗೆ ಹಾಕಿಕೊಂಡು ಹೋಗಲು ಬಟ್ಟೆ ಹೊಲಿಸಲು ಕೇಳಿದರೆ? ಎಂದು ಅಚ್ಚರಿಯಿಂದ ನಿಂತಾಗ "ನೀವೆಲ್ಲಾ ಖಾದಿ ಬಟ್ಟೆ ಹಾಕುವುದಾದರೆ ಮಾತ್ರ ಹೊಲಿಸುತ್ತೇನೆ" ಎಂದರಂತೆ. ತಂದೆಗೆ ಕೊಟ್ಟ ಮಾತಿನಂತೆ ಕುಸುಮಾಕರ ತಾನು ಸಾಯುವ ತನಕ ಖಾದಿ ಬಿಟ್ಟು ಇನ್ನೊಂದು ಯಾವುದೇ ತರಹದ ಬಟ್ಟೆ ಧರಿಸಲಿಲ್ಲ. ನಮ್ಮ ಸಂಸ್ಥೆಯು ೧೯೭೧-೭೨ ರಲ್ಲಿ ವಿಕೇಂದ್ರೀಕರಣ ಆದಾಗ್ಗೆ ಆತ ವಿಕೇಂದ್ರೀಕೃತ ಸಂಸ್ಥೆಯ ಆಜೀವ ಸದಸ್ಯರಾಗಿದ್ದರು. ಆ ಸಮಯದಲ್ಲಿ ದಿ. ಶ್ರೀ ಜಗನ್ನಾಥರಾವ್ ಚಂಡ್ರಕಿ ಖಾದಿ ಗ್ರಾಮೋದ್ಯೋಗ ಸಂಸ್ಥೆಯ ಗುಲ್ಬರ್ಗಾದ ಅಧ್ಯಕ್ಷರಾಗಿದ್ದರು. ಖಾದಿ ಕಾರ್ಯದಲ್ಲಿ ಅವರ ಬೆಳವಣಿಗೆಯಲ್ಲಿ ಕುಸುಮಾಕರನ ಪಾತ್ರ ಹಿರಿದು.

ಒಮ್ಮೆ ಶ್ರೀ ದೇಸಾಯಿಯವರು ಸಪತ್ನೀಕರಾಗಿ ನನ್ನ ಬಳಿ ಬಂದರು. ಕುಸುಮಾಕರ ತಿಳಿಸಿದ್ದ "ಇನಾಂದಾರರೇ, ನಾನು ಸರಿತಾನ್ನ ಲಗ್ನವಾಗಿ ಹತ್ತು ವರ್ಷಗಳಾಗಿವೆ. ಆಕೆಗೆ ನಾನೆಂದೂ ಸೀರೆ ಕೊಂಡು ತಂದಿಲ್ಲ. ಈಗ ನನ್ನ ಹಣಕಾಸಿನ ಪರಿಸ್ಥಿತಿ ಸುಧಾರಿಸಿದೆ. ಆಕೆಗೆ ಒಮ್ಮೆಗೇ ಹತ್ತು ಖಾದಿ ಸಿಲ್ಕ್ ಸೀರೆಗಳನ್ನು ಕೊಡಿಸಬೇಕು ಎನಿಸಿದೆ ನಿಮ್ಮ ಸಹಕಾರ ಸಹಾಯಬೇಕು. ಸ್ವಲ್ಪ ಉದ್ರಿ ಕೊಡಿಸಿದರೂ ಮುಟ್ಟಿಸಿಬಿಡುತ್ತೇನೆ". ನಾನು ಸಂತೋಷದಿಂದ ಒಪ್ಪಿದೆ. ಆ ಪ್ರಕಾರ ಬೆಂಗಳೂರಿನಲ್ಲಿ ಸಾಹಿತ್ಯ ಸಮ್ಮೇಳನಕ್ಕೆಂದು ಇಬ್ಬರೂ ಬಂದಾಗ ನಮ್ಮ ಖಾದಿ ಸಿಲ್ಕ್‌ಸೀರೆಗಳಲ್ಲಿ ಕುಸುಮಾಕರ ಒಟ್ಟಿಗೇ ಹತ್ತು ಸೀರೆ ಹೆಂಡತಿಗೆ ಕೊಡಿಸಿದ್ದ. ಸರಿತಾ ಅವರು ನನ್ನ ಬಗ್ಗೆ ಅತ್ಯಂತ ಗೌರವ ಭಾವನೆ ತಳೆದಿದ್ದರು. ಇಂದಿಗೂ ಅವರು ನನ್ನನ್ನು ಆತ್ಮೀಯತೆಯಿಂದ ಕಾಣುತ್ತಾರೆ. ಯಾವುದೇ ಒಂದು ವಿಷಯದ ಬಗ್ಗೆ ನನ್ನ ಕುಸುಮಾಕರನಲ್ಲಿ ಭಿನ್ನಾಭಿಪ್ರಾಯ ಮೂಡಿ ನಾವು

ಜೋರು ಧ್ವನಿಯಲ್ಲಿ ಮಾತನಾಡತೊಡಗಿದ ಕೂಡಲೇ ಒಳಗಿನಿಂದ ಸರಿತಾ ಧಾವಿಸಿ ಬಂದು ಇಬ್ಬರಿಗೂ ಸಂಭಾಳಿಸುವುದು ವಾಡಿಕೆಯಾಗಿತ್ತು. ತಿಂಡಿ ತೀರ್ಥದಿಂದ ಇಬ್ಬರನ್ನೂ ಸಂತೈಸಿ ಇಬ್ಬರೂ ನಗತೊಡಗಿ ವಾತಾವರಣ ತಿಳಿಗೊಳ್ಳುತ್ತಿತ್ತು. ಆ ನೆನಪು ಹಸಿರು ಹಸಿರು.

ಕುಸುಮಾಕರನು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷನಾಗಿ ಕಾರ್ಯನಿರ್ವಹಿಸತೊಡಗಿದಾಗ ಒಂದೆರಡು ಬಾರಿ ಭೆಟ್ಟಿಯಾಗಿದ್ದೆ. ಗುಲ್ಬರ್ಗಕ್ಕೆ ವಿಶೇಷ ಶ್ರಮ ವಹಿಸಿ ಭೀಮಾಯೋಜನೆ ಕೈಕೊಂಡು 'ಭಗೀರಥ' ಉಪಾಧಿ ಪಡೆದದ್ದು ನನಗೆ ಸಂತೋಷವಾಯಿತು. ಆತ ಚೇರಮನ್ ಆದಾಗ ಪತ್ನಿ ಸರಿತಾ ಮಾತ್ರ ಗುಲ್ಬರ್ಗದಲ್ಲೇ ಉಳಿದು ಆತನ ವಕಾಲತ್ತು, ತನ್ನ ಆಫೀಸ್ ಸಂಭಾಳಿಸಿದಳು. ಸಾಹಿತ್ಯ ಕ್ಷೇತ್ರದಲ್ಲಿಯೂ ಸಹ ತೊಡಗಿ ಜನಪ್ರಿಯತೆ ಗಳಿಸಿದಳು.

ನಂತರ ೧೯೯೦-೯೧ರಲ್ಲಿ ಕುಸುಮಾಕರನಿಗೆ ಬೈಪಾಸ್ ಸರ್ಜರಿ ಆಯಿತು. ಆದರೂ ಲವಲವಿಕೆಯಿಂದಲೇ ಇದ್ದ. ಹಾಸ್ಯ ಚಟಾಕಿ ಹಾರಿಸುತ್ತ ನಗಿಸುತ್ತ ಇದ್ದ. ವಕಾಲತ್ ಬಿಟ್ಟಿದ್ದ. ಪ್ರಕೃತಿ ಸಂಭಾಳಿಸಲು ರಾಜಕಾರಣದಿಂದಲೂ ದೂರವಾಗಿದ್ದ.

೧೯೯೫ರಲ್ಲಿ ವಿಧಾನ ಪರಿಷತ್‌ಗೆ ಸರಿತಾ ಸದಸ್ಯಳಾಗಿ ನೇಮಕಗೊಂಡು ಪತಿ-ಪತ್ನಿ ಬೆಂಗಳೂರು, ಗುಲ್ಬರ್ಗಾ ಓಡಾಡಿಕೊಂಡಿದ್ದರಿಂದ ನನ್ನ ಭೆಟ್ಟಿ ಕಡಿಮೆಯಾಯಿತು. ಆ ನಂತರ ಆತನಿಗೆ ಎರಡನೇ ಬಾರಿ ಬೈಪಾಸ್ ಸರ್ಜರಿ ಆದದ್ದು, ಸರಿತಾಗೆ ಸ್ತನ ಕ್ಯಾನ್ಸರ್ ಆಗಿದ್ದು ನನಗೆ ಕಳವಳವಾಗಿತ್ತು. ಅವರಿಬ್ಬರೂ ಬೆಂಗಳೂರಿನಲ್ಲಿ ಚಿಕಿತ್ಸೆಗಾಗಿ ನೆಲೆಸಿದ್ದರಿಂದ ನನ್ನ ಅವರ ಭೆಟ್ಟಿಯಾಗಲಿಲ್ಲ. ಇತ್ತೀಚೆಗೆ ಬೆಂಗಳೂರಿಗೆ ಹೋದಾಗ್ಗೆ ದೇಸಾಯಿಗೆ ಫೋನ್ ಮಾಡಿದೆ. ತಕ್ಷಣ ಆತ "ಕೇವಲ ಫೋನ್ ಮಾಡಿದರೆ ಹೇಗೆ? ಬಂದು ಭೆಟ್ಟಿ ಆಗಬಾರದೇ" ಎಂದ. ಆದರೆ ನನಗೆ ಅವರ ಭೇಟಿ ಆಗಲು ಸಾಧ್ಯವಾಗಲಿಲ್ಲ. ಅದೇ ಅವರ- ನನ್ನ ನಡುವೆ ಕೊನೆಯ ಮಾತು. ಆತನ ಧ್ವನಿ ಕೇಳಿದ್ದು ಕೊನೆ.

ಆತ ಅಗಲಿದ ಸುದ್ದಿ ಪೇಪರ್‌ನಲ್ಲಿ ಓದಿದೆ. ಒಬ್ಬ ನಿಷ್ಠಾವಂತ ಕಾರ್ಯಕರ್ತ ದೇಶಪ್ರೇಮಿಯನ್ನು ದೇಶ ಕಳೆದುಕೊಂಡಂತಾಯಿತೆಂದು ದುಃಖವಾಯಿತು.

ಶ್ರೀಮತಿ ದೇಸಾಯಿ ನನ್ನ ಬಗ್ಗೆ ಅಭಿಮಾನವುಳ್ಳವರು, ಗುಲ್ಬರ್ಗಾಕ್ಕೆ ಹೋದಾಗ್ಗೆ ನನ್ನನ್ನು ಆತ್ಮೀಯತೆಯಿಂದ ಮಾತನಾಡಿಸಿ ಗೌರವಿಸುತ್ತಿದ್ದರು. ಈಗವರು ಬೆಂಗಳೂರು ನಿವಾಸಿಯಾಗಿ ನನ್ನಿಂದ ದೂರವಾಗಿದ್ದಾರೆನಿಸುತ್ತಿದೆ.

ಕುಸುಮಾಕರನ ಆತ್ಮಕ್ಕೆ ಸದ್ಗತಿ ಸಿಗಲಿ. ಸರಿತಾಗೆ ಈ ದುಃಖ ಸಹಿಸಲು ಶಕ್ತಿ ದೊರೆಯಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತಿರುವೆ.

ಕನ್ನಡ ಪ್ರೇಮಿ

❀ ವಾಮದೇವ ದೀಕ್ಷಿತ

ದಿ. ಶ್ರೀ ಕುಸುಮಾಕರ ದೇಸಾಯಿ ಅವರ ತಂದೆಯವರು ಕುಟುಂಬವತ್ಸಲರು. ಆದುದರಿಂದ ಮೊದಲು ತಮ್ಮ ಸಹೋದರರಾದ, ದಿ. ಸೀತಾರಾಮರಾವ್ ರಾಘವೇಂದ್ರರಾವ್, ಕೃಷ್ಣರಾವ್, ಪಾಂಡುರಂಗರಾವ್ ಇವರೆಲ್ಲರಿಗೂ ಉತ್ತಮ ಶಿಕ್ಷಣ ಕೊಡಮಾಡುವದರಲ್ಲಿ ಮಹತ್ವದ ಪಾತ್ರವಹಿಸಿದರು. ಇವರಲ್ಲಿ ದಿ. ರಾಘವೇಂದ್ರರಾವ್ ದೇಸಾಯಿ ಯಲಬುರ್ಗಿ ತಾಲೂಕು ಕುಕನೂರಿನಲ್ಲಿ ವಿದ್ಯಾನಂದ ಗುರುಕುಲವೆಂಬ ರಾಷ್ಟ್ರೀಯ ಶಾಲೆಯನ್ನು ಸ್ಥಾಪಿಸಿದ ಮಹನೀಯರು. ಪ್ರಾಥಮಿಕ ಹಂತದಲ್ಲಿದ್ದ ಈ ಶಾಲೆ ಈಗ ಕಲಾಮಹಾವಿದ್ಯಾಲಯ, ಮಹಾವಿದ್ಯಾಲಯ ಎಂದು ರಾಷ್ಟ್ರಮಟ್ಟದಲ್ಲಿ ಹೆಸರು ಪಡೆದಿದೆ. ಇವರಂತೆ ಪಾಂಡುರಂಗರಾವ್ ದೇಸಾಯಿ ಅವರು ಗಣ್ಯ ಇತಿಹಾಸ ಸಂಶೋಧಕರೆಂದು ಹೆಸರು ಪಡೆದು ಅನೇಕ ಐತಿಹಾಸಿಕ ಗ್ರಂಥಗಳನ್ನು ಬರೆದು ಕೀರ್ತಿಶೇಷರಾದವರು. ಇಂಥ ಪರಿಸರದಲ್ಲಿ ಕುಸುಮಾಕರ ದೇಸಾಯಿ ಬೆಳೆದರು ದಿ. ಸಂಜೀವರಾವ್ ದೇಸಾಯಿ ಅವರಿಗೆ ಮೊದಲ ಪತ್ನಿಯಿಂದ ಮೂವರು ಮಕ್ಕಳು. ಗ್ರೀಷ್ಮಕುಮಾರ, ನರಹರಿ, (ತಮ್ಮಣ್ಣ) ಹಾಗೂ ಲಕ್ಷ್ಮೀದೇವಿ, ಮೊದಲ ಪತ್ನಿಯ ವಿಯೋಗದ ನಂತರ ಎರಡನೆಯ ಮದುವೆ ಮಾಡಿಕೊಂಡರು. ಎರಡನೆಯ ಹೆಂಡತಿಯಿಂದ ಇವರಿಗೆ ನಾಲ್ಕು ಜನ ಗಂಡು ಮಕ್ಕಳು ಕುಸುಮಾಕರ, ಕೃಷ್ಣ-, ಭೀಮಸೇನ ಹಾಗೂ ಶ್ರೀದರ್ಶನ ಇಬ್ಬರು ಹೆಣ್ಣು ಮಕ್ಕಳು ಜನಿಸಿದರು. ಕಮಲಾ ಹಾಗೂ ವೈಜಯಂತಿ ಹೀಗೆ ಒಟ್ಟು ೯ ಜನ.

ದಿ. ಶ್ರೀ ಸಂಜೀವರಾಯರು ತಮ್ಮ ಮೊದಲ ಧರ್ಮಪತ್ನಿಯ ಚಿ. ಶ್ರೀ ಗ್ರೀಷ್ಮಕುಮಾರ ಅವರಿಗೆ ಮ್ಯಾಟ್ರಿಕ್ ಪಾಸಾದ ನಂತರ ವಕೀಲ ಪರೀಕ್ಷೆಗೆ ಕಟ್ಟಿ ತೇರ್ಗಡೆಯಾಗಿ ವಕೀಲ ವೃತ್ತಿಯನ್ನು ಕೈಗೊಳ್ಳಲು ಸೂಚಿಸಿದರು. ಅವರ ಇಚ್ಛೆಯಂತೆ ಅವರು ಈ ಪರೀಕ್ಷೆ ಮುಗಿಸಿಕೊಂಡು ವಕೀಲರಾದರು. ಆದರೆ ಈ ವೃತ್ತಿ ಅವರಿಗೆ ಸರಿಹೊಂದಲಿಲ್ಲ. ಇದನ್ನು ತ್ಯಜಿಸಿ ವಾಣಿಜ್ಯ ಇಲಾಖೆಯನ್ನು ಸೇರಿದರು. ಅಲ್ಲಿ ಅವರು ಸಹಾಯಕ ವಾಣಿಜ್ಯ ಸಮಾಜದ ಅಭಿವೃದ್ಧಿಯ ಬಗ್ಗೆ ಇವರಿಗಿರುವ ಕಳಕಳಿಯನ್ನು ಪರಿಗಣಿಸಿ ಅನೇಕ ಸಂಘ ಸಂಸ್ಥೆಗಳು ಇವರ ಭಾಷಣಗಳನ್ನು ಏರ್ಪಡಿಸಿ, ಇವರು ಜನತೆಗೆ ಸಮಾಜದ ಅಭಿವೃದ್ಧಿಯ ಬಗ್ಗೆ ಕೈಗೊಳ್ಳುವ ಯೋಜನೆಗಳನ್ನು ವಿವರಿಸಿದರು. ಶ್ರೀ ಕುಸುಮಾಕರ ಅವರು ತಾಯಿ ನುಡಿಯಾದ ಕನ್ನಡದ ಬಗ್ಗೆ ವಿಶೇಷ ಆಸ್ಥೆ ಹಾಗೂ ಅಭಿಮಾನವಿದ್ದುದರಿಂದ ಕರ್ನಾಟಕದ ಹಿರಿಯ ಸಾಹಿತಿಗಳ ಕೃತಿಗಳನ್ನು ಓದಿಕೊಂಡು ಅದರಲ್ಲಿಯೂ ಹಿಡಿತ ಸಾಧಿಸಿದರು. ಶ್ರೀ ದೇಸಾಯಿಯರು ತಂದೆಯವರಂತೆ ಕನ್ನಡ ಸಾಹಿತ್ಯ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಿ ಈ ಸಂಸ್ಥೆಯ ಉಪಾಧ್ಯಕ್ಷರೆಂದು ಕಾರ್ಯಮಾಡಿದ ಶ್ರೇಯಸ್ಸು ಅವರಿಗಿದೆ.

ಶ್ರೀ ದೇಸಾಯಿ ಅವರು ತಮ್ಮ ವೃತ್ತಿಯಲ್ಲಿ ಉತ್ತಮ ಹೆಸರು ಪಡೆದಿದ್ದರಿಂದ, ಹೈದರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯು ಕಾನೂನು ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರೆಂದು ಸೇವೆ ಸಲ್ಲಿಸಲು ಕೇಳಿಕೊಂಡಿತು. ಅವರ ಅಪೇಕ್ಷೆಯಂತೆ ಗೌ. ಪ್ರಾಧ್ಯಾಪಕರೆಂದು ಕೆಲವು ವರ್ಷ ಸೇವೆ ಸಲ್ಲಿಸಿ ಉತ್ತಮ ಕಿರಿಯ ವಕೀಲರನ್ನು ಸಿದ್ಧಗೊಳಿಸಿದ ಕೀರ್ತಿ ಇವರಿಗೆ ಸಲ್ಲುವುದು.

೧೯೪೭ ಅಗಸ್ಟ್ ೧೫ ರಂದು ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟು ಹೊರಟು ಹೋದರು. ಆ ಸಮಯದಲ್ಲಿ ಭಾರತದಲ್ಲಿ ಹಿರಿಯ ಹಾಗೂ ಕಿರಿಯ ಸಂಸ್ಥಾನಗಳ ರಾಜರ ಸಂಖ್ಯೆ ೫೫೪ ಇತ್ತು. ಅವರಿಗೆ ಭಾರತದ ಒಕ್ಕೂಟದಲ್ಲಿ ಸೇರುವ ಬಗ್ಗೆ ಸಲಹೆ ನೀಡದೇ ಅವರೆಲ್ಲರೂ ತಮಗೆ ಸರಿಕಂಡಂತೆ ಮಾಡಲಿ ಎಂದು ಹೇಳಿಕೆ ನೀಡಿ ನಿರ್ಗಮಿಸಿದರು. ಈ ಸಮಯದಲ್ಲಿ ಮುಂಬೈ ಪ್ರಾಂತದ ವಿಜಾಪುರ ಜಿಲ್ಲೆಯಲ್ಲಿ ಇದ್ದ ಜಮಖಂಡಿ ಸಂಸ್ಥಾನದ ರಾಜರಾದ ಪಟವರ್ಧನ ಅವರು ಭಾರತದ ಒಕ್ಕೂಟದಲ್ಲಿ ಕಿರಿಯ ಸಂಸ್ಥಾನಿಕರು ತಾವೂ ಸೇರಿಕೊಳ್ಳುವದಾಗಿ ಘೋಷಿಸಿದರು. ಕಿರಿಯ ಸಂಸ್ಥಾನ ಜುನಾಗಡ ಸೇರಲಿಲ್ಲ. ಆ ವಿಷಯ ಜನತೆಗೆ ಗೊತ್ತು.

ಸರದಾರ ಪಟೇಲರ ಸಲಹೆಯಂತೆ ಹೈದರಾಬಾದ ನಿಜಾಂರ ಹೊರತುಪಡಿಸಿ ಉಳಿದ ಎಲ್ಲ ಸಂಸ್ಥಾನಗಳು ಒಕ್ಕೂಟದಲ್ಲಿ ಸೇರ್ಪಡೆಗೊಂಡವು.

ಇದೇ ಸಮಯದಲ್ಲಿ ಹೈದರಾಬಾದ ಸಂಸ್ಥಾನದ ಲಾತೂರ ಜಿಲ್ಲೆಯಲ್ಲಿ ವಕೀಲರೆಂದು ಕೆಲಸ ಮಾಡುತ್ತಿದ್ದ ಕಡಿಗೇಡಿ ಶ್ರೀ ಕಾಶಿಂರಜವಿ ರಜಾಕಾರ ಸಂಘಟನೆ ಸಂಘಟಿಸಿ, ನಿಜಾಂ ಉಸ್ಮಾನ ಅಲಿಖಾನರನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಹೈದರಾಬಾದ ಸ್ವಾತಂತ್ರ್ಯವೆಂದು ಸಾರಿದರು. ಇದನ್ನು ಗಮನಿಸಿ ಜುನಾಗಡದ ನವಾಬನು ತಾನೂ ಸ್ವತಂತ್ರನೆಂದು ಘೋಷಿಸಿದನು. ಇದೊಂದು ದೊಡ್ಡ ಐತಿಹಾಸಿಕ ಚರಿತ್ರೆ ಎಂಬುದೂ ಅನೇಕರಿಗೆ ಗೊತ್ತು. ಈ ಸಮಯದಲ್ಲಿ ಶ್ರೀ ಸ್ವಾಮಿ ರಾಮಾನಂದ ತೀರ್ಥರ ಹಿರಿತನದಲ್ಲಿ ಹೈದರಾಬಾದದ ಕಾಂಗ್ರೆಸ್ ಸ್ಥಾಪನೆಗೊಂಡು, ಸತ್ಯಾಗ್ರಹ ಆಂದೋಲನ ಪ್ರಾರಂಭವಾಯಿತು. ಹೈದರಾಬಾದ ಎಲ್ಲ ಜಿಲ್ಲೆಗಳಲ್ಲಿ ಸತ್ಯಾಗ್ರಹ ಉಗ್ರರೂಪ ತಾಳಿ ಅನೇಕರು ಜೇಲನ್ನು ಸೇರಿದರು. ಶ್ರೀ ಕುಸುಮಾಕರ ದೇಸಾಯಿಯವರು ಸತ್ಯಾಗ್ರಹ ಕೈಕೊಂಡರು. ೧೮ನೇ ಸಪ್ಟಂಬರ್ ೧೯೪೮ ರಂದು ನಿಜಾಂರು ಶರಣಾಗತರಾಗಿ (ಶ್ರೀ ವಲ್ಲಭಭಾಯಿ ಪಟೇಲರು ಕೈಕೊಂಡ ಪೋಲೀಸ್ ಆಕ್ಶನ್) ಹೈದರಾಬಾದ ಒಕ್ಕೂಟದಲ್ಲಿ ಸೇರುವದಾಗಿ ಘೋಷಿಸಿದರು. ಈ ಘೋಷಣೆಯ ನಂತರ ಜೇಲಿನಲ್ಲಿದ್ದ ಎಲ್ಲ ಸತ್ಯಾಗ್ರಹಿಗಳನ್ನು ಬಿಡುಗಡೆ ಮಾಡಿದರು.

ಶ್ರೀ ಕುಸುಮಾಕರ ದೇಸಾಯರು ಜೇಲಿನಿಂದ ಹೊರಗೆ ಬಂದನಂತರ ತಮ್ಮ ವೃತ್ತಿಯನ್ನು ಪ್ರಾರಂಭಿಸುತ್ತ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸತೊಡಗಿದರು. ಹಿರಿಯರ ಒತ್ತಡಕ್ಕೆ

ಮಣಿಮ ಗೃಹಸ್ಥರಾದರು. ಶ್ರೀಮತಿ ಸರಿತಾ ಅವರು ಧರ್ಮಪತ್ನಿಯಾಗಿ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯಾದರು. ಆಗ ಅವರು ಇಂಟರ್ ಮೀಡಿಯೆಟ್ ಪರೀಕ್ಷೆ ಪಾಸುಮಾಡಿದ್ದರು. ಇವರಿಗೆ B.A. ಮುಗಿಸಿ LLB ಮಾಡಲು ಪ್ರೋತ್ಸಾಹ ನೀಡಿದವರು ದೇಸಾಯರು. ನಂತರ ವಕೀಲ ವೃತ್ತಿಯನ್ನು ಕೈಗೊಳ್ಳಲು ಸಲಹೆ ನೀಡಿದರು. ಅದರಂತೆ ಇವರು ಜಿಲ್ಲೆಯ ಪ್ರಥಮ ವಕೀಲರೆಂಬ ಹೆಸರು ಪಡೆದರು. ಎಲ್ಲಾ ರಂಗಗಳಲ್ಲಿ ಮಹಿಳೆಯರು ಎಲ್ಲಿಯವರೆಗೆ ಪಾತ್ರ ವಹಿಸುವದಿಲ್ಲವೋ ಅಲ್ಲಿಯವರೆಗೂ ಭವ್ಯ ಭಾರತದ ಕನಸು ನನಸಾಗುವದಿಲ್ಲವೆಂದು ಸಲಹೆ ನೀಡಿ, ಸಮಾಜ ಸೇವೆಯಲ್ಲಿ ತೊಡಗುವಂತೆ ತಮ್ಮ ಪತ್ನಿಯವರಿಗೆ ಹುರಿದುಂಬಿಸಿದರು. ಅವರಿಗೆ ಬೆಂಬಲರಾಗಿದ್ದು ಜಿಲ್ಲೆಯ ಸ್ಥಳವಾದ ಕಲಬುರ್ಗಿಯಲ್ಲಿ ಮಹಿಳಾ ಸಂಘಟನೆಯಲ್ಲಿ ಕಾರ್ಯನಿರ್ವಹಿಸಿ ನಂತರ ತಾಲೂಕು ಹಾಗ ಹೋಬಳಿಗಳಲ್ಲಿ ಮಹಿಳೆಯರ ಸಂಘಗಳನ್ನು ಸ್ಥಾಪಿಸಿದ ಕೀರ್ತಿ ಉಭಯತರಿಗೂ ಸಲ್ಲುವುದು.

ದಿ. ಶ್ರೀ ದೇಸಾಯರು ನೇರ ನುಡಿಯ ಸ್ವಭಾವದವರು. ಯಾರ ಮುಲಾಜಿಗೂ ಒಳಪಡದ ವ್ಯಕ್ತಿಗಳು, ಯಾರಾದರೂ ತಮ್ಮ ಕೆಲಸವನ್ನು ಮಾಡಿಸಿಕೊಳ್ಳಲು ಇಂಥವರಿಗೆ ನಮ್ಮ ಕೆಲಸ ಮಾಡಿ ಕೊಡಲು ಪತ್ರವನ್ನುಕೊಡಮಾಡಬೇಕೆಂದು ಕೇಳಿಕೊಂಡರೆ ನನ್ನಿಂದ ಈ ಕಾರ್ಯಸಾಧ್ಯವಾಗದು ಎಂದು ಖಂಡಿತವಾಗಿ ಹೇಳಿ ಬಿಡುತ್ತಿದ್ದರು. ಇವರ ಈ ಸ್ವಭಾವವನ್ನು ಮೆಚ್ಚದವರು ಅವರ ಬಗ್ಗೆ ಅಪಪ್ರಚಾರ ಮಾಡಿದ್ದೂ ಉಂಟು.

ನನ್ನ ಒಂದು ಅನುಭವವನ್ನು ಇಲ್ಲಿ ಹೇಳುವುದು ಸೂಕ್ತವೆಂದು ಭಾವಿಸುವೆ. ಸುಮಾರು 12 ವರ್ಷಗಳ ಹಿಂದಿನ ಘಟನೆ.

ಪ್ರಾಣಿಗಳ ಬಗ್ಗೆ ದೇಸಾಯರಿಗೆ ವಿಶೇಷ ಮಮತೆ. ಮನೆಯಲ್ಲಿಯಿದ್ದ ಆಕಳಿಗೆ ಲಕ್ಷಮ್ಮ ಕರುವಿಗೆ ಗೌರಮ್ಮ ಎಂದೂ ಪ್ರೀತಿಯಿಂದ ಕರೆಯುವುದು ನೋಡಿ ಆಶ್ಚರ್ಯವಾಗುತ್ತಿತ್ತು. ನಾಯಿ, ಬೆಕ್ಕು ಇವು ಕೂಡ ಅವರ ಹತ್ತಿರ ಚೆಲ್ಲಾಟವಾಡುವುದು ನೋಡಿ ಸಂತಸವಾಗುತ್ತಿತ್ತು.

ಶ್ರೀ ದೇಸಾಯಿಯವರ ಸಂಘಟನಾ ಚಾತುರ್ಯ ಹಾಗೂ ಇವರ ವಾಕ್ ಚಾತುರ್ಯವನ್ನು ಪರಿಗಣಿಸಿ (ಜನತಾಪಕ್ಷದ ಸರಕಾರ ಕೇಂದ್ರದಲ್ಲಿ ಹಾಗೂ ಕರ್ನಾಟಕದಲ್ಲಿ ಬಂದಾಗ) ಶ್ರೀ ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸುತ್ತಿರುವ ಸಮಯದಲ್ಲಿ ಉತ್ತರ ಕರ್ನಾಟಕದಲ್ಲಿ ಹುಬ್ಬಳ್ಳಿ-ಧಾರವಾಡ, ವಿಜಾಪುರ, ಗದಗ, ಕೊಪ್ಪಳ ಮತ್ತು ಕಲಬುರ್ಗಿಯಲ್ಲಿ ಮಳೆ ಬರದಿದ್ದರಿಂದ ಬರಗಾಲ ಹಾಗೂ ಕುಡಿಯುವ ನೀರಿಗಾಗಿ ಜನತೆಗೆ ಹಾಗೂ ದನಕರುಗಳಿಗೆ ಹಪಹಪಿಸುವ ಸ್ಥಿತಿ ಪ್ರಾರಂಭವಾಯಿತು. ವಿಶೇಷವಾಗಿ ಕಲಬುರ್ಗಿಯಲ್ಲಿಯ ಜನರು ಗುಳೆ ಹೋಗತೊಡಗಿದರು. ಆಗ ಮುಖ್ಯಮಂತ್ರಿಗಳು ಶ್ರೀ ದೇಸಾಯಿಯವರನ್ನು ಬರಮಾಡಿಕೊಂಡು ಇವರಿಗೆ ಕ್ಯಾಬಿನೆಟ್ ಮಂತ್ರಿಯ ಸ್ಥಾನ ನೀಡಿ ನೀರಿನ ಬವಣೆ ದೂರಮಾಡಲು ಅಧಿಕಾರ ಕೊಟ್ಟರು. ಮೊದಲು ಕಲಬುರ್ಗಿಯ ಸ್ಥಿತಿ

ಸುಧಾರಿಸಲು ಬಹಳ ಪರಿಶ್ರಮಿಸಿದರು. ಇದರಿಂದ ನೀರಿನ ಬವಣೆ ಸುಧಾರಿಸಿತು. ಗುಲ್ಬರ್ಗಾದ ಜನತೆ ಕಲಬುರ್ಗಿಯ 'ಭಗೀರಥ' ಎಂದು ನಾಮಕರಣವಿತ್ತರು. (ಉತ್ತರ ಕರ್ನಾಟಕದ ಉಳಿದಭಾಗಗಳ ಕಡೆಗೂ ಗಮನಹರಿಸತೊಡಗಿದರು. ಆ ಸಮಯದಲ್ಲಿ ಶ್ರೀ ರಾಮಕೃಷ್ಣ ಹೆಗಡೆ ಅವರ ಸರಕಾರ ಹೋಯಿತು. ಹೀಗಾಗಿ ಶ್ರೀ ದೇಸಾಯಿ ಅವರು ಕೈಗೊಳ್ಳಲಿರುವ ಯೋಜನೆಗಳು ನಿಂತವು.)

ಒಟ್ಟಿನಲ್ಲಿ ಶ್ರೀ ದೇಸಾಯಿಯವರ ಜೀವನ ತುಂಬ ವೈವಿಧ್ಯಮಯವಾಗಿತ್ತು. ಅವರಿಗಿಂತ ವಯಸ್ಸಿನಿಂದ ಹಿರಿಯರಾದ ಮುಖಂಡರಿಗೆ ಇವರ ಈ ಅಕಾಲ ಮರಣದಿಂದ ತುಂಬ ವ್ಯಥೆ ಪಡುವಂತಾಯಿತು. ಹೈದರಾಬಾದ ಕರ್ನಾಟಕ ಚರಿತ್ರೆಯಲ್ಲಿ ಇವರ ಹೆಸರು ಶಾಶ್ವತವಾಗಿ ಉಳಿದುಕೊಳ್ಳುವದೆಂದು ಬೇರೆ ಹೇಳಬೇಕಾಗಿಲ್ಲ.

ದಳ-೦೨

ನ್ಯಾಯಾಧೀಶರು ಮತ್ತು ನ್ಯಾಯವಾದಿಗಳು

ಸೌಜನ್ಯ ಶೀಲ

❁ ನ್ಯಾ. ಮೂ. ನಿಟ್ಟೂರು ಶ್ರೀನಿವಾಸರಾವ್

ನಾನು ಹೈದರಾಬಾದ್ ಕರ್ನಾಟಕದ ಗುಲ್ಬರ್ಗಕ್ಕೆ ಅನೇಕ ಬಾರಿ ಹೋಗಿದ್ದೆ. ಸ್ವಾತಂತ್ರ್ಯಪೂರ್ವದ ಆ ಪ್ರದೇಶ ಸ್ವಾತಂತ್ರ್ಯ ನಂತರದ ಹಾಗೂ ರಾಜ್ಯ ಪುನರ್ವಿಂಗಡಣೆಯ ನಂತರ ಸಹ ಗುಲ್ಬರ್ಗ, ಬೀದರ, ರಾಯಚೂರು ಪ್ರದೇಶದ ಸ್ಥಿತ್ಯಂತರದ ಸ್ಥಿತಿಯನ್ನು ಗಮನಿಸಿದ್ದೇನೆ. ಅಲ್ಲಿಯ ಅನೇಕ ಸ್ವಾತಂತ್ರ್ಯ ಯೋಧರ ಪರಿಚಯ ನನಗಿತ್ತು. ಕೋಳೂರು ಮಲ್ಲಪ್ಪ ಹಾಗೂ ಆ ಭಾಗದ ಹುಲಿ ಎಂದೇ ಪ್ರಸಿದ್ಧರಾಗಿದ್ದ ಚಂದ್ರಶೇಖರ ಪಾಟೀಲ, ಬೀದರ್‌ನ ಬಿಡಪ್‌ರು, ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದ ಮಹಾದೇವಪ್ಪ ರಾಮಪುರೆ, ವಿ.ಜಿ. ದೇವುಳ್‌ಗಾಂವ್‌ಕರ್, ಡಾ. ದೇವುಳ್‌ಗಾಂವಕರ್, ಜಕವುಲ್ಲಾ ಮುಂತಾದ ಅನೇಕರ ಗಾಢ ಪರಿಚಯವಾಗಿತ್ತು. ಹೈದರಾಬಾದ್ ವಿಮೋಚನಾ ಚಳುವಳಿಯಲ್ಲಿ (ಇಡೀ ಮನೆತನ) ಧುಮುಕಿದ ದೇಸಾಯಿ ಮನೆತನದ ಕುಸುಮಾಕರ, ಆತನ ಚಿಕ್ಕಪ್ಪಂದಿರಾದ ಶ್ರೀ ರಾಘವೇಂದ್ರರಾವ್ ದೇಸಾಯಿ, ಅವರ ಮಗ ಅನಿರುದ್ಧ, ಇನ್ನೊಬ್ಬ ಚಿಕ್ಕಪ್ಪರಾಗಿದ್ದ ಇತಿಹಾಸ ಸಂಶೋಧಕ ಡಾ. ಪಿ. ಬಿ. ದೇಸಾಯಿ (ಅವರು ಪ್ರಸಿದ್ಧ ಕವಿ ಶ್ರೀ ಸಾಲಿ ರಾಮಚಂದ್ರರಾಯರ ಅಳಿಯರಾಗಿದ್ದವರು) ಅಲ್ಲದೇ ಗುಲ್ಬರ್ಗ ಜೈಲಿನಲ್ಲೇ ರಜಾಕಾರರ ಲಾಠಿ ಪ್ರಹಾರಕ್ಕೆ ಬಲಿಯಾಗಿ ಹುತಾತ್ಮರಾದ ಭೀಮಸೇನರಾವ್ ದೇಸಾಯಿ ಬಗ್ಗೆ ಸಹ ವಿಷಯ ತಿಳಿದಿದ್ದೆ. ಈ ದೇಸಾಯಿ ಮನೆತನದ ರಾಷ್ಟ್ರಭಕ್ತಿ, ಖಾದಿ ಪ್ರೇಮವನ್ನು ಮೆಚ್ಚಿಕೊಂಡಿದ್ದೆ.

ನನ್ನ ಮಗಳು ಲಲಿತಾ ಅಲ್ಲಿಯ ರಾಷ್ಟ್ರೀಯ ಭಾವನೆಗಳ ಹಿನ್ನೆಲೆಯಲ್ಲಿ ಸ್ಥಾಪಿತಗೊಂಡಿದ್ದ ಪ್ರಸಿದ್ಧ ಶಿಕ್ಷಣ ಸಂಸ್ಥೆ ನೂತನ ವಿದ್ಯಾಲಯದಲ್ಲಿ ಕೆಲ ಸಮಯ ಸೇವೆ ಸಲ್ಲಿಸಿದ್ದಳು. ನಾನು ಆಗಾಗ ಗುಲ್ಬರ್ಗಕ್ಕೆ ಹೋಗುವುದು ವಾಡಿಕೆ ಆಗಿತ್ತು. ಹೀಗಾಗಿ ನನಗೆ ಅನೇಕರ ಪರಿಚಯ, ಸ್ನೇಹಭಾವ ಒದಗಿತ್ತು. ಪ್ರಸಿದ್ಧ ಸಂಶೋಧಕರೂ ಕನ್ನಡ ಪ್ರೇಮಿಗಳೂ ಆಗಿದ್ದ ಕಪಟರಾಳ ಕಿಶನರಾವ್, ತವಗ ಭೀಮಸೇನರಾವ್, ವಾಮದೇವ್ ದೀಕ್ಷಿತರು, ನೂತನ ವಿದ್ಯಾಲಯದ ಅಯ್ಯರ್ ಮಾಸ್ತರ ಮುಂತಾದವರೊಂದಿಗೆ ಗಾಢವಾದ ಪರಿಚಯವಿತ್ತು. ಡಾ. ಜಾಗಿರ್‌ದಾರ್ ಮೊದಲ ಮುನ್ಸಿಪಾಲಿಟಿ ಅಧ್ಯಕ್ಷರಾಗಿದ್ದರು.

ಶ್ರೀ ಅಪ್ಪಾರಾವ್ ಹಾಗೂ ಲಾ ಕಾಲೇಜ್ ಪ್ರಿನ್ಸಿಪಾಲರಾಗಿದ್ದ ಶ್ರೀ ದೇಶಪಾಂಡೆ, ವಕೀಲರಾಗಿದ್ದ ರಾಮಪುರೆ ಅವರ ಜ್ಯೂನಿಯರ್ ಹಾಗೂ ಅಳಿಯರಾಗಿದ್ದ ಎಂ.ಎಸ್. ಪಾಟೀಲ (ಮುಂದೆ ಪಾಟೀಲರು ಹೈಕೋರ್ಟ್ ನ್ಯಾಯಾಧೀಶರೂ ಆದರು) ರ ಪರಿಚಯವಾಗಿತ್ತು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಮುಖಾಂತರ ಅಲ್ಲಿ ಅನೇಕರ ಪರಿಚಯದಲ್ಲಿ ಶ್ರೀ

ವಿ.ಪಿ. ದೇವುಳ್‌ಗಾಂವಕರ್‌ರವರ ಪರಿಚಯ ದೃಢವಾಗುತ್ತ ಹೋಗಿತ್ತು. ಅವರು ಬೆಂಗಳೂರಿನಲ್ಲಿ ಮೀಟಿಂಗ್ ಜರುಗಿದಾಗ ಇಲ್ಲಿಗೂ ಬರುತ್ತಿದ್ದುರಿಂದ ಅಲ್ಲಿಯ ಅನೇಕರ ಬಗ್ಗೆ ಅವರಿಂದ ತಿಳಿದುಕೊಳ್ಳುತ್ತಿದ್ದೆ. ಕುಸುಮಾಕರ ಹಾಗೂ ದೇವುಳ್‌ಗಾಂವ್‌ಕರರವರು ಹಾಗೂ ಇತರರು ಸ್ವಾಮಿ ರಾಮಾನಂದತೀರ್ಥರ ಗರಡಿಯಲ್ಲಿ ಪಳಗಿದವರು. ಕುಸುಮಾಕರ ಶ್ರೀ ವಿ.ಪಿ. ದೇವುಳ್‌ಗಾಂವ್‌ಕರರನ್ನು ತನ್ನ ವಿಶೇಷ ಗುರು-ಮಾರ್ಗದರ್ಶಕರನ್ನಾಗಿ ಸ್ವೀಕರಿಸಿದ್ದು ಆತನು ಬಾಲ್ಯದಿಂದಲೇ ಖಾದಿ ಧರಿಸುತ್ತಿದ್ದದ್ದು ನನಗೂ ಆತನ ಬಗ್ಗೆ ಮೆಚ್ಚಿಕೆಯಾಗಲು ಕಾರಣವಾಯಿತು. ಅಷ್ಟೇ ಅಲ್ಲ ಆತನೂ ವಕೀಲಿವೃತ್ತಿ ಆಯ್ದುಕೊಂಡದ್ದು ಹಾಗೂ ಜಿಲ್ಲೆಯ ಶೇಠ ಶಂಕರಲಾಲ ಲಾಹೋಟಿ ಕಾನೂನು ಕಾಲೇಜ್ ಸ್ಥಾಪನೆ ವರ್ಷದಿಂದ ವಿದ್ಯಾರ್ಥಿಗಳಿಗೆ ಲಾ ಕಲಿಸುತ್ತಿದ್ದದ್ದು ಅಭಿಮಾನದ ಸಂಗತಿಯಾಗಿತ್ತು. ಕಾಲೇಜ್ ಪ್ರಾರಂಭದಲ್ಲೇ ಅಂದು ಕಾನೂನು ಕಲಿತ್ತಿದ್ದ ಇಂದು ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶ ಶ್ರೀ ಶಿವರಾಜ್ ಪಾಟೀಲರು, ಕುಸುಮಾಕರನ ವಿದ್ಯಾರ್ಥಿಯಾಗಿದ್ದರೆಂದು ಮುಂದೆ ಅವರೇ ಕುಸುಮಾಕರನ ಪತ್ನಿ ಸರಿತಾರವರ ಕಾನೂನು ಗುರುವೂ ಆಗಿದ್ದರೆಂದೂ ತಿಳಿದುಬಂದಿತ್ತು

೧೯೬೫ರಲ್ಲಿ ನಾನು ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿದ್ದ ಕಾಲದಲ್ಲಿ ಕುಸುಮಾಕರ ವಕೀಲಿ ವೃತ್ತಿ ಗುಲ್ಬರ್ಗದಲ್ಲಿ ಪ್ರಾರಂಭಿಸಿದ್ದ. ಆತನ ಅಭ್ಯುದಯ ವಕೀಲಿ ಪರಿಜ್ಞಾನದ ಬಗ್ಗೆ ಕೆಲವು ಪರಿಚಿತರಿಂದ ತಿಳಿದುಬರುತ್ತಿತ್ತು

ವರ್ಷದ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕಲ್ಯಾಣರಾವ್ ಬಕ್ಷಿ ಕಾಲೇಜ್‌ಗೆ ಕರೆಸಿದ್ದಾಗ, ಅಲ್ಲಿ ಕುಸುಮಾಕರ ಅವರಿಗೆಲ್ಲ ಕಾನೂನು ಕಲಿಸುವ ಉಪಾಧ್ಯಾಯನಾಗಿದ್ದ. ಅವನ ಜೊತೆಗೆ ಶ್ರೀ ವೆಂಕಟಾಚಾರ್ ಜೋಶಿ ಕುಸುಮಾಕರನ ತಂಗಿಯ ಗಂಡ ಸಹ ಕೆಲಸ ಮಾಡುತ್ತಿದ್ದರು. ಕುಸುಮಾಕರನಲ್ಲಿ ನಾನು ಕಂಡ ಗುಣ ಅತ್ಯಂತ ವಿನಯಶೀಲ, ಸೌಜನ್ಯ, ಸುಸಂಸ್ಕೃತ ನಡವಳಿಕೆ.

ನಾನು ಮುಖ್ಯ ನ್ಯಾಯಾಧೀಶನಾಗಿ ೧೯೭೩ರಲ್ಲಿ ನಿವೃತ್ತಿ ಹೊಂದಿದ ಮೇಲೆ, ನಂತರ ಹಂಗಾಮಿ ರಾಜ್ಯಪಾಲನೆಂದೂ ನಿವೃತ್ತಿ ಹೊಂದಿದ ಮೇಲೆ, ಅನೇಕ ವರ್ಷಗಳ ನಂತರ ಸಭೆ-ಸಮಾರಂಭಗಳು ಮುಗಿದ ಮೇಲೆ ಅಥವಾ ಪ್ರಾರಂಭಕ್ಕೆ ಮುಂಚೆ ಕುಸುಮಾಕರ ನನ್ನನ್ನು ಕಂಡ ಕೂಡಲೇ ವಿನೀತಭಾವದಿಂದ ಬಗ್ಗಿ ನಮಸ್ಕರಿಸಿ ಕುಶಲ ವಿಚಾರಿಸುತ್ತಿದ್ದ. ಮಾತಿಗೆ ಅವಕಾಶ ಸಿಕ್ಕಾಗ ನಾನು ಗುಲ್ಬರ್ಗದ ವ್ಯಕ್ತಿಗಳ ಬಗ್ಗೆ ಕೇಳುತ್ತಿದ್ದೆ. ಅಶ್ವಥರಾವ್ ಕೆಲಕಾಲ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನಿವೃತ್ತಿ ಹೊಂದಿ ಗುಲ್ಬರ್ಗದಲ್ಲೇ ಇರುತ್ತಿದ್ದರಿಂದ ಅವರ ಮಕ್ಕಳ ಬಗ್ಗೆ, ಡಾ. ದೇವುಳ್‌ಗಾಂವ್‌ಕರ್ ಬಗ್ಗೆ ಅಚ್ಯುತ ಪಟವರ್ಧನ, ಪದ್ಮನಾಭ ಪುರಾಣಿಕರರ ಬಗ್ಗೆ ಮಾತು ಸಾಗುತ್ತಿತ್ತು.

ಕುಸುಮಾಕರನಿಗೆ ತನ್ನ ಊರು ಅಲ್ಲಿಯ ಹಿರಿಯರ ಬಗ್ಗೆ ಅತ್ಯಂತ ಹೆಮ್ಮೆ ಅತ್ಯಂತ ಸಂತಸದಿಂದ ಅವರ ಬಗ್ಗೆ ಹೇಳುತ್ತಿದ್ದಾಗ ನಾನು ಆಸಕ್ತಿಯಿಂದ ಕೇಳುತ್ತಿದ್ದೆ. ಕುಸುಮಾಕರನ

ಪತ್ನಿ ಸರಿತಾ ಸಾಹಿತಿ ಕತೆಗಾರ್ತಿ. ಅವಳು ಹಾಸ್ಯ ಸಾಹಿತಿ ಜೀಜೆಯು ಸೋದರಿ ಎಂದೂ ತಿಳಿದಿತ್ತು. ಆಕೆಯ ಪುಸ್ತಕಗಳ ಬಿಡುಗಡೆಯ ಸಮಾರಂಭ ಬೆಂಗಳೂರಿನಲ್ಲಿ ಜರುಗಿದಾಗ ಆಮಂತ್ರಿಸಿದಾಗ ತಪ್ಪದೇ ಹೋಗುತ್ತಿದ್ದೆ. ದಂಪತಿಗಳಿಬ್ಬರೂ ಆದರಾಭಿಮಾನದಿಂದ ನನ್ನನ್ನು ಸ್ವಾಗತಿಸಿ, ಕುಶಲ ವಿಚಾರಿಸಿಕೊಳ್ಳುತ್ತಿದ್ದರು.

ತೀರ ಇತ್ತೀಚೆಗೆ ಎಂದರೆ ಉದಯ ಟಿ.ವಿ.ಯಲ್ಲಿ ಸರಿತಾಳ ಪರಿಚಯ ಕಾರ್ಯಕ್ರಮ ನೋಡಿ ಅನಿರುದ್ಧನಿಂದ ಕುಸುಮಾಕರನ ಮನೆ ವಿಳಾಸ-ಫೋನು ಪಡೆದು ಆತನ ಆರೋಗ್ಯ ವಿಚಾರಿಸಿ ಸರಿತಾಳ ಕಾರ್ಯಕ್ರಮದ ಬಗ್ಗೆ ಮೆಚ್ಚಿಕೆ ಹೇಳಲು ಫೋನ್ ಮಾಡಿದಾಗ ಆ ಬದಿಯಿಂದ ಕುಸುಮಾಕರನೇ ಎತ್ತಿದ್ದ. ಅದೆಷ್ಟು ಹಿಗ್ಗು ಅದೆಷ್ಟು ಆನಂದ ಆತನಿಗೆ, ಪತ್ನಿಗೆ ಹೇಳಿದ-ನಿಟ್ಟೂರರ ಫೋನ್ ನೋಡು ನಮಗೆ ಬೆಳಿಗ್ಗೆಯಿಂದ ಮೆಚ್ಚಿಗೆ ವ್ಯಕ್ತಪಡಿಸಿ ಫೋನ್ ಬಂದಿದೆ. ಆದರೆ ನಿಟ್ಟೂರರ ಫೋನ್ ಎನ್ನುತ್ತ ಗದ್ಗದಿತನಾಗಿಬಿಟ್ಟ. ನಂತರ ಸರಿತಾ ಸಹ ಸಂತಸಪಟ್ಟಳು. ಈ ದಂಪತಿಗಳ ಅನ್ಯೋನ್ಯ ದಾಂಪತ್ಯಜೀವನ ಸರಳ ಸಜ್ಜನಿಕೆ ಕಂಡಿದ್ದೆ. ಕೇಳಿದ್ದೆ. ಆಕೆ ಆರು ವರುಷ ಎಂ.ಎಲ್.ಸಿ ಆಗಿದ್ದು ಆತ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಜಲಮಂಡಳಿ ಅಧ್ಯಕ್ಷನಾಗಿದ್ದು ಸಂತಸದ ಕ್ಷಣಗಳಲ್ಲಿ ನನ್ನನ್ನು ಭೆಟ್ಟಿಯಾಗಿ ಆಶೀರ್ವಾದ ಬಯಸಿದ್ದರು.

ಇಂತಹ ಸರಳ ಸಜ್ಜನ ವಿನಯಶೀಲ, ರಾಷ್ಟ್ರಪ್ರೇಮಿ, ಖಾದಿಪ್ರಿಯ ಕುಸುಮಾಕರ ಇನ್ನಿಲ್ಲ ಎಂದು ತಿಳಿದಾಗ ಆತನ ಎತ್ತರ ನಿಲುವು, ಚಿತ್ರ ಕಣ್ಮುಂದೆ ಕಟ್ಟಿತ್ತು. ಆತನ ಆತ್ಮಕ್ಕೆ ಸದ್ಗತಿ ಸಿಗಲಿ, ಸರಿತಾ ಆತನ ಆಶೋತ್ತರಗಳನ್ನು ಪೂರೈಸುವಂತಾಗಲಿ ಎಂದು ತುಂಬು ಹೃದಯದಿಂದ ಆಶೀರ್ವದಿಸುವೆ.

ಕುಸುಮದ ಕಂಪು

❁ ನ್ಯಾ. ಮೂ. ಶಶಿಧರ ಮಜ್ಜಿಗಿ

ಕುಸುಮಾಕರ ದೇಸಾಯಿಯವರ ಹೆಸರನ್ನು ಬಹಳ ಸಲ ಕೇಳಿದ್ದೆ. ಆದರೆ ಅವರನ್ನು ನೋಡಿದ್ದು, 1987 ರಲ್ಲಿ ಗುಲಬರ್ಗಾಕ್ಕೆ ನನ್ನ ವರ್ಗವಾದಾಗ. ವೃತ್ತಿಯಿಂದ ಅವರು ವಕೀಲರಾಗಿದ್ದರೂ, ನಾನು ಗುಲಬರ್ಗಾ ಹೋಗುವದಕ್ಕಿಂತ ಮೊದಲೆ ಆ ವೃತ್ತಿಯಿಂದ ತಾನೇ ದೂರ ಸರಿದಿದ್ದರಿಂದ, ಅವರ ವಾದ ಕೇಳುವ ಸದವಕಾಶ ನನಗೆ ಸಿಗಲಿಲ್ಲ. ವೃತ್ತಿಯಿಂದ ದೂರ ಸರಿದದ್ದು, ಅವರ ಆದರ್ಶಮಯ ವಿಚಾರ ಪ್ರತಿಬಿಂಬಿಸುತ್ತದೆ. ಏಕೆಂದರೆ, ಅವರೇ ಹೇಳಿದಂತೆ, ಆಡಳಿತ ರಂಗದಲ್ಲಿ ವ್ಯಕ್ತಿಯು ಒಮ್ಮೆ ಒಂದು ಉನ್ನತಿಗೆ ಹೋದ ನಂತರ, ತಿರುಗಿ ಬಂದು ಪುನಾಃ ವೃತ್ತಿ ಪ್ರಾರಂಭಿಸಿದರೆ, ಆ ಅಧಿಕಾರದ ಪ್ರಭಾವ ಬೀರಲು ಬಂದಿದ್ದಾರೆಂದೆನಿಸಬಾರದು ಮತ್ತು ಅದರಿಂದ ವೃತ್ತಿಯಾಗಲಿ ಅಥವಾ ಬೇರೆ ಯಾರೇ ಆಗಲಿ ಪರೋಕ್ಷವಾಗಿ ಕೂಡ ಪ್ರಭಾವಿತರಾಗಬಾರದೆಂದು, ನನಗೆ ನಂತರ ಗೊತ್ತಾದದ್ದು. ಇಂಥ ಧೀಮಂತ ವಿಚಾರದ ಒಬ್ಬ ಅಪರೂಪದ ವ್ಯಕ್ತಿ ಕುಸುಮಾಕರರು. ಈಗಿನ ಕಾಲದಲ್ಲಿ, ಅಧಿಕಾರಾವಧಿಯಲ್ಲಿಯಲ್ಲ ಅಧಿಕಾರ ಹೋದ ಮೇಲೂ, ಆ ಹಿಂದಿನ ಅಧಿಕಾರದ ಪ್ರಭಾವ ಬಲದಿಂದ ತನ್ನ ವೃತ್ತಿ/ಕೆಲಸಗಳನ್ನು ಹೇಗೆ ಮಾಡಿಕೊಳ್ಳಬಹುದೆಂದು ಪ್ರಾಯಶಃ ಎಲ್ಲರೂ ಯೋಚಿಸುವಾಗ, ಅವರೊಬ್ಬ ಅಪರೂಪದ ಅಪರಂಜಿ ವ್ಯಕ್ತಿತ್ವದ ವ್ಯಕ್ತಿ ಎಂದರೆ ಉತ್ಪ್ರೇಕ್ಷೆಯಾಗಲಾರದು. ಅವರು ತಮ್ಮ ಹೆಸರಿನ ಹಾಗೆ ಕುಸುಮದ ಕಂಪನ್ನು ಹೊಂದಿದ್ದರಿಂದ, ಯಾರಿಗೂ ಬೇಡವಾಗಿರಲಿಲ್ಲ.

ಅವರ ನೇರ ನಡೆನುಡಿ ನನಗೆ ಬಹಳ ಹಿಡಿಸಿತ್ತು. ಯಾವುದನ್ನು ಅವರು ಒಪ್ಪುತ್ತಿರಲಿಲ್ಲವೋ ಅದನ್ನು ನಿರ್ಭಿಡೆಯಿಂದ ನೇರವಾಗಿ ಹೇಳುತ್ತಿದ್ದರು. ಅವರ ಮಾತಿಗೂ ಕೃತಿಗೂ ವ್ಯತ್ಯಾಸವಿರಲಿಲ್ಲ. ರಾಜಕೀಯದಲ್ಲಿದ್ದರೂ ಅದರಿಂದ ಹೊರತಾಗಿದ್ದರು. ರಾಜಕಾರಣಿಯಾಗಿದ್ದರೂ ರಾಜಕಾರಣಿಯಂತಿರಲಿಲ್ಲ. ಹೀಗಾಗಿ ಅಧಿಕಾರದ ರಾಜಕೀಯದಿಂದ ಬಹು ದೂರವಿದ್ದರು. ಅಧಿಕಾರದ ಬೆನ್ನು ಹತ್ತಿ ಓಡಿದವರಲ್ಲ. ಅವರು ಸಂಕುಚಿತ ಮನೋಭಾವದವರಾಗಿರದೇ ವಿಶಾಲ ಹೃದಯದವರಾಗಿದ್ದರು. ಅವರು ಜಾತ್ಯಾತೀತರಾಗಿದ್ದುದಲ್ಲದೇ, ಒಬ್ಬ ಪ್ರಾಮಾಣಿಕ ವ್ಯಕ್ತಿಯಾಗಿದ್ದು, ಈಗಿನ ಸಮಾಜದಲ್ಲಿ ಕಾಣುವ ಲೋಪದೋಷಗಳ ಬಗ್ಗೆ, ಅವುಗಳನ್ನು ಹೇಗೆ ಹೋಗಲಾಡಿಸಬಹುದೆಂದು ಯಾವಾಗಲೂ ವಿಚಾರ ಮಾಡುತ್ತಿದ್ದ ವ್ಯಕ್ತಿತ್ವ. ಅಧಿಕಾರ ಬಯಸದೇ, ಬಂದ ಅಧಿಕಾರ ತಲೆಗೆ ಹಚ್ಚಿಕೊಳ್ಳದೇ, ತನ್ನ ಜೀವನದುದ್ದಕ್ಕೂ, ತಾನು ಪ್ರತಿಪಾದಿಸುವ ಆದರ್ಶದ ಸಲುವಾಗಿ ಹೋರಾಡಿದ ನಿಸ್ಪೃಹ ಜೀವನದ ಗಣ್ಯವ್ಯಕ್ತಿ. ಒಟ್ಟಾರೆ ಹೇಳುವದಾದರೇ, ಅವರೊಬ್ಬ ಅಪರೂಪದ Thorugh gentleman to the crore ವ್ಯಕ್ತಿ. ಲಕ್ಷೋಪ ಲಕ್ಷದಲ್ಲಿ ಇಂಥವರು ಒಬ್ಬರು ಅಥವಾ ಇಬ್ಬರೋ ಎಂದು ಹೇಳಬಹುದಾದಂಥ ವ್ಯಕ್ತಿತ್ವ.

ಅಪ್ಪಟ ಜಾತ್ಯತೀತವಾದಿ

❁ ಅಬ್ದುಲ್ ರಹೀಮ್ ಆರಜೂ

ನಾನು ಅನೇಕ ಸಮಾಜವಾದಿಗಳನ್ನು ನೋಡಿದ್ದೇನೆ. ಕೆಲವರು ಕೇವಲ ರಾಜಕೀಯವಾಗಿ ಸಮಾಜವಾದಿಯಾಗಿದ್ದಾರೆ. ಆದರೆ, ಕುಸುಮಾಕರ ದೇಸಾಯಿ ಅವರು ರಾಜಕೀಯವಾಗಿ ಸಮಾಜವಾದವನ್ನು ಸ್ವೀಕರಿಸಿದವರು. ಲೋಹಿಯಾ ಮತ್ತು ಗೋಪಾಲಗೌಡರನ್ನು ಅನುಸರಿಸಿದರು. ಅದರಂತೆ ತಮ್ಮ ನಡೆ-ನುಡಿಗಳಲ್ಲೂ ಸಮಾಜವಾದಿಯಾಗಿದ್ದರು.

ಇದನ್ನು ನಾನು ಪ್ರತ್ಯಕ್ಷ ಕಂಡು ಅನುಭವಿಸಿ ಹೇಳುತ್ತಿರುವ ಮಾತಿದು. ಯಾಕೆಂದರೆ, ಅವರ ಮನೆಯೇ ಒಂದು ಸಮಾಜವಾದದ ದೇಗುಲವಾಗಿತ್ತು. ಅವರ ಮನೆಯಲ್ಲಿ ಅವರ ಸಹಾಯಕರು, ಮನೆಯಲ್ಲಿ ಕೆಲಸ ಮಾಡುವವರಿಗೆ ಎಲ್ಲರಿಗೂ ಒಂದೇ ರೀತಿಯ ಆತಿಥ್ಯ. ಊಟ-ತಿಂಡಿ ಎಲ್ಲರೂ ಕೂಡಿಯೇ ಮಾಡುತ್ತಿದ್ದರು. ನೌಕರರು ನೌಕರರಾಗಿರಲಿಲ್ಲ. ಮನೆಯ ಸದಸ್ಯರಾಗಿದ್ದರು. ಎಲ್ಲರಿಗೂ ಅಡಿಗೆ ಮನೆಯ ಪ್ರವೇಶವಿತ್ತು.

ಅವರು ಹುಟ್ಟಿನಿಂದ ಬ್ರಾಹ್ಮಣರಾಗಿದ್ದರೂ ಎಂದೂ ಮಡಿವಂತಿಕೆ ಪ್ರದರ್ಶಿಸಲಿಲ್ಲ. ನಾನು ಅನೇಕ ಬಾರಿ ಅವರ ಮನೆಗೆ ಹೋಗಿದ್ದೇನೆ. ಆತಿಥ್ಯ ಸ್ವೀಕರಿಸಿದ್ದೇನೆ. ಅವರ ಮನೆಯಲ್ಲಿ ಅನೇಕ ವಿದ್ಯಾರ್ಥಿಗಳು ಅಭ್ಯಾಸ ಮಾಡಲು ಇದ್ದರು. ಅವರೆಲ್ಲರನ್ನೂ ಮಕ್ಕಳಂತೆ ಕಾಣುತ್ತಿದ್ದ ದೇಸಾಯರು, ತಮ್ಮೆದುರು ಯಾರೂ ನಿಂತು ಮಾತಾಡುವುದನ್ನು ಸಹಿಸುತ್ತಿರಲಿಲ್ಲ. ತಮ್ಮೊಂದಿಗೆ ಕುಳಿತೇ ಮಾತಾಡಬೇಕು. ನೀವು ನಿಂತರೆ ನನ್ನ ಕಾಲು ನೋಯುತ್ತವೆ ಎಂದು ತಮಾಷೆಯಾಗಿ ಹೇಳಿದರೂ, ಅದರ ಹಿಂದಿರುವ ಸಮಾಜವಾದದ ಸತ್ವವನ್ನು ಅವರೊಂದಿಗೆ ನಿಕಟವಾಗಿದ್ದ ನನ್ನಂಥ ಆತ್ಮೀಯರಾದ ಕೆಲವೇ ಜನರಿಗೆ ಅರಿವಾಗುತ್ತಿತ್ತು.

ನಾನು ಅನೇಕ ಬಾರಿ ಈ ಕುರಿತು ಅವರೊಂದಿಗೆ ಚರ್ಚಿಸಿದ್ದೇನೆ. ವಿದ್ಯೆ ಮತ್ತು ವೃತ್ತಿಯಲ್ಲಿ ನಾವು ಭಿನ್ನವಾಗಿರಬಹುದು. ಆದರೆ, ಎಲ್ಲರಿಗೂ ಅವರದೇ ಆದ ವ್ಯಕ್ತಿತ್ವ ಇರುತ್ತದೆ. ಅವರ ವ್ಯಕ್ತಿತ್ವವನ್ನು ಅಪಮಾನಗೊಳಿಸುವ ಹಕ್ಕು ಯಾರಿಗೂ ಇಲ್ಲ. ಪರಸ್ಪರ ಗೌರವ ನೀಡಿದಾಗಲೇ ನಮಗೂ ಗೌರವವಿರುತ್ತದೆ. ಅದೇ ನಿಜವಾದ ಸಮಾನತೆ ಮತ್ತು ಸಮಾಜವಾದ ಎನಿಸಿಕೊಳ್ಳುತ್ತದೆ ಎಂದು ದೇಸಾಯಿ ಅವರು ಹೇಳುತ್ತಿದ್ದರು.

ದೇಸಾಯಿ ಅವರದು ಅನ್ಯೋನ್ಯ ಆದರ್ಶ ದಾಂಪತ್ಯ. ಅವರ ಪತ್ನಿ ಶ್ರೀಮತಿ ಸರಿತಾಬಾಯಿ ಅವರು ಅವರು ಸಂಪ್ರದಾಯಸ್ಥ ಕುಟುಂಬದಿಂದ ಬಂದವರು. ಆದರೆ, ದೇಸಾಯಿ ಅವರ ಪತ್ನಿಯಾಗಿ ಬಂದ ನಂತರ, ಗಂಡನ ನಡೆ-ನುಡಿಗಳೊಂದಿಗೆ ಹೆಜ್ಜೆಯಿಟ್ಟು ನಡೆದುಕೊಂಡು ಬಂದವರು. ಮಡಿ-ಮೈಲಿಗೆ, ಮುಟ್ಟಿ ತಟ್ಟಿ ಎಲ್ಲವನ್ನೂ ಅವರು ತವರಿನಲ್ಲಿ ಬಿಟ್ಟು, ದೇಸಾಯಿ ಅವರ ಪತ್ನಿಯಾಗಿ ಬಾಳಿದ್ದು ಅಪರೂಪದ ಸಂಗತಿ ಹಾಗೂ ಇದು

ದೇಸಾಯಿ ಅವರ ಸೌಭಾಗ್ಯ ಎಂದು ಹೇಳಬಹುದು.

ವೃತ್ತಿಯಲ್ಲಿ ಇಬ್ಬರೂ ವಕೀಲರು, ಅವರಿಬ್ಬರೂ ಜೊತೆಯಾಗಿಯೇ ಕೋರ್ಟಿಗೆ ಬರುತ್ತಿದ್ದರು. ಜೊತೆಯಾಗಿಯೇ ಮನೆಗೆ ಹೋಗುತ್ತಿದ್ದರು. ಮನೆಯಲ್ಲೂ ಕೂಡ ಅವರವರ ವಕಾಲತ್ತು ಅವರವರಿಗೆ. ಪ್ರತಿಯೊಬ್ಬರಿಗೂ ಸಲಹೆ ನೀಡುತ್ತಿದ್ದರು. ವಕೀಲ ವೃತ್ತಿಯನ್ನು ಅವರೆಂದೂ ವ್ಯಾಪಾರವಾಗಿ ಪರಿಗಣಿಸಿದವರಲ್ಲ. ಹಣಕ್ಕಾಗಿ ವಕೀಲಿ ಮಾಡಿದವರಲ್ಲ. ಅವರಲ್ಲಿರುವ ಬಹುತೇಕ ಕೇಸುಗಳು ಬಡವರದು. ಇವರ ಸ್ವಭಾವ ಗೊತ್ತಿದ್ದವರೇ ಇವರಲ್ಲಿ ಬರುತ್ತಿದ್ದರು. ಇವರೆಂದೂ ತಮ್ಮ ಕಕ್ಷಿದಾರರಿಗೆ ಹಣಕ್ಕಾಗಿ ಪೀಡಿಸಿದವರಲ್ಲ. ಆದ್ದರಿಂದಲೇ ದೇವರು ಅವರಿಗೆ ಸಾಕಷ್ಟು ಕೊಟ್ಟು ಮರೆತಿದ್ದ. ಉಂಡು ಸಮೃದ್ಧವಾಗಿದ್ದ ಇವರ ಆಶ್ರಯದಲ್ಲಿ ಅನೇಕರಿಗೆ ಅನ್ನದಾನ ಮತ್ತು ವಿದ್ಯಾದಾನವೂ ದೊರಕಿದ್ದು ಮತ್ತು ಅವರ ಆಶ್ರಯ ಪಡೆದವರು ಇಂದು ಉನ್ನತ ಸ್ಥಾನದಲ್ಲಿದ್ದುದೂ ಇವರ ಕುಟುಂಬದ ಶ್ರೇಯಸ್ಸಿಗೆ ಸಾಕ್ಷಿಯಾಗಿದೆ.

ದೇಸಾಯಿ ಅವರು ರಾಜಕೀಯದಲ್ಲಿದ್ದರೂ, ಎಂದೂ ಅಧಿಕಾರದ ಬೆನ್ನು ಹತ್ತಿದವರಲ್ಲ. ಆದರೆ ದೇಶದ ಪ್ರತಿಯೊಂದು ಸಂಕಷ್ಟದ ಪರಿಸ್ಥಿತಿಯಲ್ಲೂ ಅವರು ತಮ್ಮ ಕರ್ತವ್ಯ ಮರೆತವರಲ್ಲ. ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದಾಗ, ಹೊರಬಂದು ಪ್ರತಿಭಟಿಸಿ ಜೈಲು ಸೇರಿದ ಪ್ರಥಮ ವ್ಯಕ್ತಿ ದೇಸಾಯಿ ಅವರು. ಅವರೊಂದಿಗೆ ಯಾರೂ ಇರಲಿಲ್ಲ. ಆದರೂ ಪೊಲೀಸ್ ಠಾಣೆಯ ಎದುರಲ್ಲೇ ಪ್ರತಿಭಟನೆ ನಡೆಸಿದರು.

ಅವರ ಬಂಧನದ ನಂತರ ಅವರ ಪತ್ನಿ ಶ್ರೀಮತಿ ಸರಿತಾ ದೇಸಾಯಿ ಅವರು ಎದೆಗುಂದದೇ ವಕಾಲತ್ತು ನಡೆಸಿದರು. "ನನಗೆ ಯಾರ ಅನುಕಂಪವೂ ಬೇಡ. ನನ್ನ ಪತಿ ಪ್ರತಿಭಟನೆ ಮಾಡಿ ಜೈಲು ಸೇರಿರುವುದಕ್ಕೆ ನನಗೆ ಪಶ್ಚಾತ್ತಾಪವಿಲ್ಲ. ಅಭಿಮಾನವಿದೆ" ಎಂದೇ ಕೋರ್ಟಿನಲ್ಲಿ ನಮ್ಮೊಂದಿಗೆ ಹೇಳುತ್ತಿದ್ದರು. ಪತಿಯ ಬಹುತೇಕ ಎಲ್ಲ ಕೇಸುಗಳನ್ನೂ ತಾವೇ ನಿರ್ವಹಿಸಿ, ಪತಿಯೊಂದಿಗೆ ನೆರಳಾಗಿದ್ದರೆಂದು ತಿಳಿದವರಿಗೆ ತಮ್ಮ ಪ್ರತಿಭೆಯಿಂದ ಗೆದ್ದು ದಿಟ್ಟ ಮಹಿಳೆ ಎಂದು ಅವರು ತೋರಿಸಿಕೊಟ್ಟರು.

ದೇಸಾಯಿ ಅವರು ಇಂದು ನಮ್ಮೊಂದಿಗಿಲ್ಲ. ಆದರೆ, ಕಲಬುರ್ಗಿಯ ಜನತೆಯ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಿದ ಭೀಮಾ ಯೋಜನೆಯನ್ನು ಜನತೆ ಎಂದೂ ಮರೆಯುವಂತಿಲ್ಲ. ಒಬ್ಬ ವ್ಯಕ್ತಿಗೆ ಅಧಿಕಾರ ಸಿಕ್ಕಾಗ ಅದನ್ನು ಹೇಗೆ ಸಾರ್ವಜನಿಕರಿಗಾಗಿ ಸದುಪಯೋಗಪಡಿಸಿಕೊಳ್ಳಬೇಕು ಎಂಬುದನ್ನು ದೇಸಾಯಿ ಅವರಿಂದ ಕಲಿಯಬೇಕು.

ರಾಜ್ಯ ಜಲಮಂಡಳಿಯ ಅಧ್ಯಕ್ಷಗಿರಿ ಅವರನ್ನು ಹುಡುಕಿಕೊಂಡು ಬಂದಿತು. ಕೂಡಲೇ ಅವರು ಮಾಡಿದ್ದು, ಹಲವರ ವಿರೋಧದ ಮಧ್ಯೆಯೂ ಭೀಮಾ ಯೋಜನೆಯ ಮೂಲಕ ಕಲಬುರ್ಗಿಗೆ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸಿದರು. ಇಂದು ರಾಜ್ಯದ

ಎಲ್ಲೆಡೆ ಕುಡಿಯುವ ನೀರಿನ ಬರ. ವಾರಕ್ಕೊಮ್ಮೆ ನೀರು ಎಂದು ಪತ್ರಿಕೆಯಲ್ಲಿ ಓದುತ್ತೇವೆ. ಆದರೆ ಕಡು ಬೇಸಿಗೆಯಲ್ಲೂ ಕಲಬುರ್ಗಿ ನಗರಕ್ಕೆ ನಿತ್ಯ ಕುಡಿಯುವ ನೀರು ದೊರೆಯುವಂತೆ ಮಾಡಿರುವ ಶ್ರೇಯಸ್ಸು ದೇಸಾಯಿ ಅವರಿಗೆ ಸಲ್ಲುತ್ತದೆ.

ಇಂದು ದೇಸಾಯಿ ಅವರು ನಮ್ಮೊಂದಿಗಿಲ್ಲ. ಆದರೆ ಅವರು ಜನಪರವಾಗಿ ಮಾಡಿರುವ ಕುಡಿಯುವ ನೀರು ಯೋಜನೆ ಶಾಶ್ವತವಾಗಿದೆ. ನಿತ್ಯ ನೀರು ಕುಡಿಯುವಾಗಲೂ ನನಗೆ ಕುಸುಮಾಕರ ದೇಸಾಯಿ ಅವರ ನೆನಪಾಗುತ್ತದೆ.

ನುಗ್ಗಿ ಬಂದ ನೆನಪು

❁ ಆರ್.ಆರ್. ಜಹಾಗೀರದಾರ

"ನನ್ನ ಆತ್ಮೀಯ ಕುಸುಮಾಕರ ದೇಸಾಯಿ ಇನ್ನಿಲ್ಲ" ಬೆಳಿಗ್ಗೆ ಈ ಸಂದೇಶವನ್ನು ಯಾವಾಗ ಓದಿದೆನೋ ಆಘಾತಗೊಂಡೆ. ನನಗೆ ನಂಬಿಕೆ ಆಗಲೇ ಇಲ್ಲ. ಅವರು ಬೆಂಗಳೂರಿಗೆ ಸ್ಥಳಾಂತರಗೊಂಡು ಅಲ್ಲೇ ನಿಧನರಾದುದರಿಂದ ಅವರ ದರ್ಶನವನ್ನು ಸಹ ಪಡೆಯಲಾಗಲಿಲ್ಲ.

ನನ್ನ ಸ್ಮರಣೆ ಒಂದಕ್ಕೆ ಓಡಿತು. ಅವರ ಚಟುವಟಿಕೆಗಳ ಬಗ್ಗೆ ನೆನಪುಗಳೆಲ್ಲ ನುಗ್ಗಿ ಬಂದವು. ನಾವು ಶಾಲಾ ಸಹಪಾಠಿಗಳಾಗಿದ್ದೆವು. ಅಲ್ಲದೇ ಹೈದರಾಬಾದದಲ್ಲಿಯೂ ಕೂಡಿ ಓದು ಮುಂದುವರಿಸಿದಾಗ ಅತ್ಯಂತ ಆತ್ಮೀಯರಾದೆವು. ನಾವಿಬ್ಬರೂ ವಕೀಲಿ ಉದ್ಯೋಗಕ್ಕೆ ಸೇರಿದಾಗಿನಿಂದ, ಕಳೆದ ನಲವತ್ತೈದು ವರ್ಷಗಳವರೆಗೆ ಜೊತೆಯಾಗಿದ್ದೆವು. ನಾವು ಅನೇಕ ಅಭಿಪ್ರಾಯಭೇದಗಳನ್ನು ಹೊಂದಿದ್ದರೂ, ಅವು ನಮ್ಮನ್ನು ಬೇರ್ಪಡಿಸಲಿಲ್ಲ. ೧೯೬೦ ರಲ್ಲಿ ಅವರ ವಿರುದ್ಧ ನಗರಸಭೆ ಚುನಾವಣೆಗೆ ಸ್ಪರ್ಧಿಸಬೇಕೆಂದಿದ್ದೆ. ಆದರೆ ನನ್ನ ನಾಮಪತ್ರ ತಿರಸ್ಕೃತಗೊಂಡು ಸ್ಪರ್ಧಿಸಲಾಗಲಿಲ್ಲ. ತಪ್ಪು ತುಂಬುವಿಕೆ ಕಾರಣ. ಆದರೆ ಉದ್ದೇಶಪೂರ್ವಕ ನಾಮಪತ್ರವನ್ನು ತಪ್ಪಾಗಿ ತುಂಬಿದ್ದರಿಂದಲೇ ಸರಳವಾಗಿ ಅವರು ಆಯ್ಕೆ ಆದರೆಂದು ಅಭಿಪ್ರಾಯಗಳು ವ್ಯಕ್ತಗೊಂಡವು.

ಕುಸುಮಾಕರ ಚೆನ್ನಾಗಿ ಓದಿಕೊಂಡಿದ್ದರು. ಸಮಾಜವಾದದ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲವರಾಗಿದ್ದರು. ಹೈದರಾಬಾದಿನ ಸ್ಟೇಟ್ ಲೈಬ್ರರಿಯಲ್ಲಿ ಇದ್ದ ಎಲ್ಲ ಪುಸ್ತಕಗಳನ್ನು ಅವರು ಓದಿಕೊಂಡಿದ್ದರು. ಉಸ್ಮಾನಿಯಾ ಕಾನೂನು ಕಾಲೇಜಿನ ವಿದ್ಯಾರ್ಥಿ ಸಂಘದ ಅಧ್ಯಕ್ಷರೂ ಆಗಿದ್ದರು.

ಕುಸುಮಾಕರ ತತ್ವಗಳಿಗೆ ಬದ್ಧರಾದವರಾಗಿದ್ದರು. ಯಾವದೇ ಲಾಭದ ಆಸೆಗೆ ಬಿದ್ದು ತತ್ವಗಳಿಗೆ ತಿಲಾಂಜಲಿ ನೀಡಲಿಲ್ಲ. ಶ್ರೀಮತಿ ಸರಿತಾ ದೇಸಾಯಿ ವೈದ್ಯಳಾಗಬೇಕೆಂದು ಬಯಸಿದ್ದರು. ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಗೆ ಅರ್ಜಿ ಹಾಕಿದಾಗ ಸೀಟು ದೊರೆಯಲಿಲ್ಲ, ತಾಂತ್ರಿಕ ಕಾರಣಗಳಿಗಾಗಿ, ಆದರೆ ಕುಸುಮಾಕರ ಒಂದು ಮಾತು ಹೇಳಿದ್ದರೆ ಶ್ರೀಮತಿ ಸರಿತಾ ಡಾಕ್ಟರರಾಗಬಹುದಿತ್ತು. ಆದರೆ ಅವರು ಹಾಗೆ ಹೇಳಲಿಲ್ಲ. ೧೯೭೨ ರಲ್ಲಿ ಭೀಕರ ಬರಗಾಲದಿಂದಾಗಿ ಕುಡಿಯುವ ನೀರಿಗೆ ತೀರ ಕೊರತೆಯಾಗಿ ಸಮಸ್ಯೆ ಉಂಟಾಗಿತ್ತು. ನಾವು ವಿರೋಧ ಪಕ್ಷದಲ್ಲಿ ಇದ್ದುದರಿಂದ ಚಳವಳಿಯನ್ನೂ ಹಮ್ಮಿಕೊಂಡು, ನಗರಕ್ಕೆ ಶಾಶ್ವತ ಕುಡಿಯುವ ನೀರು ಪೂರೈಕೆಗಾಗಿ 'ಭೀಮಾ' ನೀರನ್ನು ತರಬೇಕು ಎಂದು ಸರಕಾರವನ್ನು ಒತ್ತಾಯಿಸಿದೆವು. ಆದರೆ ಕೆಲ ವಿಘ್ನ ಸಂತೋಷಿಗಳು ರಾಷ್ಟ್ರೀಯ ಪ್ರಯೋಗಾಲಯದಿಂದ ಭೀಮಾ ನೀರು ಕುಡಿಯಲು ಯೋಗ್ಯವಾದುದಲ್ಲವೆಂಬ ಸುಳ್ಳು ವರದಿಯನ್ನು ಪಡೆದರು.

ಆದರೆ ಈ ವರದಿ ನಂಬಲರ್ಹವಾದುದಲ್ಲವೆಂದು ನದಿಯ ದಂಡೆಯ ಮೇಲಿರುವ ಹಳ್ಳಿಗಳ ಜನತೆ ಹೇಳಿತು.

ಕುಸುಮಾಕರ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷರಾದೊಡನೆ ಮಾಡಿದ ಮೊದಲ ಕೆಲಸವೆಂದರೆ, ಭೀಮಾ ನೀರಿನ 'ಸ್ಯಾಂಪಲ್'ನ್ನು ಎಲ್ಲ ರಾಷ್ಟ್ರೀಯ ಪ್ರಯೋಗಾಲಯಗಳಿಗೆ ರವಾನಿಸಿದ್ದು, ಭೀಮಾ ನೀರು ಕುಡಿಯಲು ಯೋಗ್ಯವಾದುದು ಎಂಬ ವರದಿಯನ್ನು ಪಡೆದ, ಶಾಶ್ವತವಾಗಿ ನಗರದ ನಾಗರಿಕರು ಕುಡಿಯಲು ಭೀಮಾ ನದಿಯ ನೀರನ್ನು ಬಳಸುವಂತಾಗಲು ಹೋರಾಡಿ ಸಫಲರಾದರು. ನನ್ನ ಗೆಳೆಯ ಕುಸುಮಾಕರ ದೇಸಾಯಿಯ ಹೆಸರು ಯಾವಾಗಲೂ ನೆನಪಿನಲ್ಲಿ ಉಳಿಯುವಂತಾಯಿತು. ನೆನಪಿಸಿಕೊಳ್ಳುವದೇ ಅವರಿಗೆ ಅರ್ಪಿಸುವ ಶ್ರದ್ಧಾಂಜಲಿ.

ತುರ್ತು ಪರಿಸ್ಥಿತಿಯ ಸಮಯದಲ್ಲಿ ಕುಸುಮಾಕರರು ಸತ್ಯಾಗ್ರಹ ಮಾಡಿ, ಈ ಘೋಷಣೆಯನ್ನು ವಿರೋಧಿಸಿದ ಮೊದಲ ವ್ಯಕ್ತಿಯಾಗಿದ್ದರು. ಇಡೀ ಕರ್ನಾಟಕ ರಾಜ್ಯದಲ್ಲಿಯೇ ಆರು ತಿಂಗಳ ಶಿಕ್ಷೆಯನ್ನು ಸಹ ಅನುಭವಿಸಿದರು. ಭೂಗತ ಆಂದೋಲನ ಹುಟ್ಟುಹಾಕಿದ ಈಗಿನ ರಕ್ಷಣಾಮಂತ್ರಿ ಶ್ರೀ ಜಾರ್ಜ ಫರ್ನಾಂಡಿಸರಿಂದ ಅನೇಕ ಪತ್ರಗಳನ್ನು ಪಡೆದಿದ್ದರು.

ಕುಸುಮಾಕರ ಸೋಸಿಯಲಿಸ್ಟ್ ಆಗಿದ್ದರು. ಪ್ರಜಾಸಮಾಜವಾದಿ ಪಕ್ಷದಲ್ಲಿ ಜನಪ್ರಿಯರಾಗಿದ್ದರಲ್ಲದೇ, ಹಿರಿಯ ನಾಯಕರಿಗೆ ಹತ್ತಿರದವರಾಗಿದ್ದರು. ವೈದ್ಯನಾಥನ್, ಜಾರ್ಜ್ ಫರ್ನಾಂಡಿಸ್, ನಾನಾಸಾಹೇಬ ಗೋರೆ, ಜೆ.ಎಚ್. ಪಟೇಲರು ಕಲಬುರ್ಗಿಗೆ ಬಂದಾಗ ಅವರ ಮನೆಯಲ್ಲಿಯೇ ವಾಸ್ತವ್ಯ ಹೂಡುತ್ತಿದ್ದರು.

ಬಹುಕಾಲದಿಂದ ಅವರ ಮನೆಯಲ್ಲಿ ಕೆಲಸ ಮಾಡಲು ಒಬ್ಬ ಹೆಣ್ಣುಮಗಳಿದ್ದಳು. ಬಹಳೇ ವಯಸ್ಸಾದುದರಿಂದ ಕೆಲಸ ಮಾಡಲು ಅಸಮರ್ಥಳಾದುದರಿಂದ, ನಿಲ್ಲಿಸಬೇಕಾಯಿತು. ಕುಸುಮಾಕರರು ಅವಳಿಗೆ ನಿವೃತ್ತಿ ವೇತನ ನೀಡತೊಡಗಿದರು. ತಮ್ಮ ಮನೆಯ ಹಿಂದಿನ ಕೆಲಸದಾಳಿಗೆ ನಿವೃತ್ತಿ ವೇತನ ಕೊಡುವ ಈ ಕಾರ್ಯ ಸಾಮಾಜಿಕ ನ್ಯಾಯ, ಭಾವುಕತೆ, ಮಾನವೀಯತೆಗೆ ಸಾಕ್ಷಿಯಾಗಿದೆ. ಈ ಮೂರು ಗುಣಗಳನ್ನು ಅವರು ಹೊಂದಿದ್ದರು.

೧೯೭೪-೭೫ರಲ್ಲಿ ಕಲಬುರ್ಗಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷತೆಗೆ ಸ್ಪರ್ಧಿಸಿದ್ದರು. ಅದೊಂದು ಪ್ರತಿಷ್ಠೆಯ ಚುನಾವಣೆಯಾಗಿದ್ದಿತು. ನಾವಿಬ್ಬರೂ ಎಲ್ಲ ವಕೀಲ ಮತದಾರರ ಮನೆಗಳಿಗೆ ಹೋಗಿದ್ದೆವು. ಅವರ ಪರವಾಗಿ ಮತ ನೀಡಲು ವಿನಂತಿಸಿದೆವು. ಅವರ ವರ್ತನೆಗಿಂತ ನನ್ನ ವರ್ತನೆ ಭಿನ್ನವಾಗಿತ್ತು. ಹೇಗಾದರೂ ಅವರು ಆರಿಸಿ ಬರುವದು ನನಗೆ ಬೇಕಾಗಿತ್ತು. ಆದರೆ ಅವರು ಮತದಾರರಿಗೆ ತಮ್ಮ ಬಗ್ಗೆ ಹೇಳುವದು ಬೇಡವಾಗಿತ್ತು. ಮತ ಪಡೆಯಲು ಅಡ್ಡದಾರಿ ಹಿಡಿಯುವದು ಅವರಿಗೆ ಸರಿ ಬರುತ್ತಿರಲಿಲ್ಲ. ಎಲ್ಲ ಪ್ರಯತ್ನಗಳಿಂದ

ಅವರು ಆಯ್ಕೆಯಾದರು. ೧೯೭೮ರಲ್ಲಿ ಚಿತಾಪುರ ವಿಧಾನಸಭಾ ಕ್ಷೇತ್ರದಲ್ಲಿಯೂ ಹೀಗೆ ಕೆಲಸ ಮಾಡಲು ಬಿಡಲಿಲ್ಲ. ಏಕೆಂದರೆ ನಾವಿಬ್ಬರೂ ಒಂದೇ ಜಾತಿಯವರಾಗಿದ್ದೆವು.

ನಾವಿಬ್ಬರೂ ನೂತನ ವಿದ್ಯಾಲಯ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿದ್ದೆವು. ಹಾಗೆಯೇ ಸಂಸ್ಥೆಯ ಅಭಿವೃದ್ಧಿಯನ್ನೇ ಬಯಸುತ್ತಿದ್ದೆವು. ವಿವಿಧ ಕೋರ್ಸ್‌ಗಳು, ವಿಭಾಗಗಳು ಪ್ರಾರಂಭವಾಗಬೇಕು, ನಮ್ಮ ವಿದ್ಯಾರ್ಥಿಗಳು ಅದರ ಲಾಭ ಪಡೆಯಬೇಕೆಂಬುದು ನಮ್ಮ ನಿರೀಕ್ಷೆಯಾಗಿದ್ದಿತು. ಈ ಉದ್ದೇಶದಲ್ಲಿ ರಾಯಚೂರಿನ ಮೂಲ ನಗರದ ವಿಧಾನಸಭಾ ಸದಸ್ಯ ಶ್ರೀ ಬಿ. ಶಿವಣ್ಣ ಅವರು ಸಹಾಯ ಮಾಡಿದ್ದರು.

ಐವತ್ತು ವರ್ಷಗಳಿಂದಲೂ ನಾವಿಬ್ಬರೂ ಸಹವರ್ತಿಗಳಾಗಿದ್ದೆವು. ಕೂಡಿ ಕೆಲಸ ಮಾಡುತ್ತಿದ್ದೆವು. ಯಾವುದೋ ಒಂದು ವಿಷಯದ ಬಗ್ಗೆ ಭಿನ್ನಾಭಿಪ್ರಾಯ ಉಂಟಾದರೂ, ಅದು ಆ ವಿಷಯಕ್ಕೆ ಮಾತ್ರ ಸಂಬಂಧಿಸಿ ಸೀಮಿತವಾಗಿರುತ್ತಿತ್ತು. ಮರುಕ್ಷಣದಲ್ಲಿಯೇ ಎಂದಿನ ಆತ್ಮೀಯತೆ ಇದ್ದೇ ಇರುತ್ತಿತ್ತು.

ನಿಷ್ಠುರ ನ್ಯಾಯವಾದಿ

❁ ಕಲ್ಯಾಣ ಬಕ್ಷಿ

ಶ್ರೀ ಕುಸುಮಾಕರ ದೇಸಾಯಿ ಹುಟ್ಟಿದ್ದು ವಕೀಲರ ಮನೆತನದಲ್ಲಿ. ಇವರ ತಂದೆ ಸಂಜೀವರಾವ್ ದೇಸಾಯಿ ಆಗಿನ ದಿನಗಳಲ್ಲಿ ಕಲಬುರ್ಗಿಯಲ್ಲಿ ಖ್ಯಾತ ಹಿರಿಯ ವಕೀಲರೆಂದೆನಿಸಿದ್ದರು. ಕಲಬುರ್ಗಿಯ ಸಾರ್ವಜನಿಕ ಉದ್ಯಾನದ (ಮೆಹಬೂಬ ಗುಲಶನ್) ರಸ್ತೆಯಲ್ಲಿ ಅವರ ಮನೆ 'ಸಂಜೀವಿನಿ'. ಆ ಕಾಲದಲ್ಲಿ ಅದನ್ನು ತೋಟದಮನೆ ಎಂದೇ ಕರೆಯಬಹುದಾಗಿತ್ತು. ಕಲಬುರ್ಗಿ ನಗರ ಆಗ ಈಗಿನಷ್ಟು ವಿಸ್ತಾರವಾಗಿ ಬೆಳೆದಿರಲಿಲ್ಲ. ಜನಸಂದಣಿಯೂ ಇರಲಿಲ್ಲ. ಅದರಿಂದಾಗಿ ಅವರ ಮನೆ ತೋಟದ ಮನೆ ಎಂದೆನಿಸಿತ್ತು. ಸಂಜೀವರಾವ್ ದೇಸಾಯಿಯವರು ವಕೀಲರಾಗಿರುವ ಜೊತೆಗೆ ಖಾದಿ ವ್ರತಿಗಳೂ ಆಗಿದ್ದರು. ಅವರ ಮನೆ ರಾಷ್ಟ್ರೀಯ ಹೋರಾಟದ ಒಂದು ಸಣ್ಣ ಕೇಂದ್ರವಾಗಿತ್ತು. ಅವರ ಇಬ್ಬರು ಸಹೋದರರು ಹೈದ್ರಾಬಾದ ಮುಕ್ತಿ ಸಂಗ್ರಾಮದಲ್ಲಿ ನಿಜಾಮನ ನಿರಂಕುಶ ಪ್ರಭುತ್ವದ ವಿರುದ್ಧ ಸೆಡ್ಡುಹೊಡೆದು ನಿಂತಿದ್ದರು. ಅವರಲ್ಲೊಬ್ಬರಾದ ಭೀಮಸೇನರಾವ್ ದೇಸಾಯಿಯವರು ಕಲಬುರ್ಗಿಯ ಕೇಂದ್ರ ಕಾರಾಗೃಹದಲ್ಲಿ ಪೊಲೀಸರ ಮತ್ತು ರಜಾಕಾರರ ಲಾಠೀ ಏಟುಗಳಿಗೆ ಗುರಿಯಾಗಿ ಹುತಾತ್ಮರಾದರು.

ಕುಸುಮಾಕರ ದೇಸಾಯಿಯವರು ಬಾಲ್ಯದಲ್ಲಿ ಬೆಳೆದುಬಂದ ಅವರ ಮನೆಯ ಪರಿಸರವೇ ಹಾಗಿತ್ತು. ಕುಸುಮಾಕರರು ತಮ್ಮ ತಂದೆಯಿಂದ ವಕೀಲ ವೃತ್ತಿ ಮತ್ತು ಖಾದಿ ವ್ರತ ಈ ಎರಡನ್ನೂ ಬಳುವಳಿಯಾಗಿ ಪಡೆದು, ಅದನ್ನು ತಮ್ಮ ಜೀವನದಲ್ಲಿ ಶ್ರದ್ಧೆ ಮತ್ತು ಪ್ರಾಮಾಣಿಕತೆಗಳಿಂದ ಅಳವಡಿಸಿಕೊಂಡಿದ್ದರು.

ಕುಸುಮಾಕರ ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಹೈದ್ರಾಬಾದಗೆ ಹೋದರು. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಮತ್ತು ವಿಶ್ವವಿದ್ಯಾಲಯದ 'ಬಿ' ಹಾಸ್ಟೆಲ್‌ನಲ್ಲಿ ಪ್ರವೇಶವನ್ನು ಪಡೆದರು. ವಿಶ್ವವಿದ್ಯಾಲಯದ 'ಬಿ' ಹಾಸ್ಟೆಲ್ ರಾಜಕೀಯ ಚಟುವಟಿಕೆಗಳ ಕೇಂದ್ರವಾಗಿತ್ತು. ಹಾಸ್ಟೆಲ್‌ನ್ನು ಪೊಲೀಸರ ಕಣ್ಣುಗಳು ಬಹು ಎಚ್ಚರದಿಂದ ಕಾಯುತ್ತಿದ್ದವು. ರಾಷ್ಟ್ರೀಯ ಹೋರಾಟದ ನಿರ್ಧಾರ ಅವರಿಗೆ ಈ ಹಾಸ್ಟೆಲಿನಲ್ಲೇ ಸಿಕ್ಕಿತು.

ಕುಸುಮಾಕರರು ಒಂದು ಅರ್ಥದಲ್ಲಿ ಪುಸ್ತಕದ ಹುಳುವಾಗಿದ್ದರು. ಅವರ ಸಹಪಾಠಿ ತಾನಾ ಮಾಸ್ತರರ ಮಾತುಗಳಲ್ಲಿ ಹೇಳಬೇಕೆಂದರೆ ಕುಸುಮಾಕರರು ತಮ್ಮ ಜೀವನದಲ್ಲಿ ಸೂರ್ಯೋದಯಗಳನ್ನು ಕಂಡಿದ್ದೇ ಬಹು ವಿರಳ. ರಾತ್ರಿ ಎಲ್ಲ ಎಚ್ಚೆತ್ತು, ಕೈಗೆ ಸಿಕ್ಕ ಪುಸ್ತಕವನ್ನು ಓದಿ, ಮುಗಿಸದೇ ಹಾಸಿಗೆಯನ್ನೇ ಸೇರುತ್ತಿರಲಿಲ್ಲ. ಹೀಗೆ ತಡವಾಗಿ ಮಲಗಿದ ಮೇಲೆ, ಅವರು ಸೂರ್ಯೋದಯ ಕಾಣುವುದಾದರೂ ಹೇಗೆ? ಹೀಗೆ ಓದುವ ಹುಚ್ಚನ್ನು ಅವರು ತಮ್ಮ

ಬದುಕಿನುದ್ದಕ್ಕೂ ಉಳಿಸಿಕೊಂಡು ಬಂದರು. ಇದರಿಂದ ಅವರಿಗೆ ವೃತ್ತಿ ಜೀವನದಲ್ಲಿ ಬಹುದೊಡ್ಡ ಲಾಭವಾಯಿತೆಂದೇ ಹೇಳಬಹುದು. ದೇಶ ವಿದೇಶಗಳ ಖ್ಯಾತ ಲೇಖಕರು ಹತ್ತಿರದವರಾದರು. ಹಾಗೂ ರಾಜಕೀಯ ಸಿದ್ಧಾಂತಗಳು ಅವರಿಗೆ ಬಹು ಹತ್ತಿರ ಆದವು. ಈ ಓದುವ ಹುಚ್ಚಿನಿಂದಾಗಿ, ಅವರು ಇಂಗ್ಲಿಷ್ ಮತ್ತು ಉರ್ದು ಭಾಷೆಗಳ ಮೇಲೆ ಅಸಾಧಾರಣವಾದ ಹಿಡಿತವನ್ನು ಗಳಿಸಿಕೊಂಡಿದ್ದರು. ಈ ಎರಡೂ ಭಾಷೆಗಳಲ್ಲಿ ಅವರು ಮಾತನಾಡುವುದನ್ನು ಕೇಳುವುದೇ ಒಂದು ಸೊಗಸು ಎಂದು ನನಗೆ ಅನೇಕ ಸಲ ಅನಿಸಿದ್ದಿದೆ. ಅದೇ ರೀತಿ ಈ ಎರಡು ಭಾಷೆಗಳನ್ನು ಸಮಯ-ಸಂದರ್ಭಗಳಿಗನುಸಾರವಾಗಿ ನಿರ್ದಿಷ್ಟವಾದ ಆದರೆ ಅರ್ಥಪೂರ್ಣವಾದ ಪದಗಳನ್ನು ಬಳಸಿ, ತಮ್ಮದೇ ಆದ ಶೈಲಿಯಲ್ಲಿ ಬರೆಯುವಲ್ಲಿ ಕೂಡ ಅವರು ಸಿದ್ಧಹಸ್ತರಾಗಿದ್ದರು. ಮನೆ ಮಾತು ಕನ್ನಡವಾಗಿದ್ದರಿಂದ ಕನ್ನಡದ ಪರಿಚಯ ಅವರಿಗೆ ಆ ಕಾಲದ ಅವಶ್ಯಕತೆಗನುಸಾರವಾಗಿ ಇತ್ತು. ಅವರ ಜೀವನದಲ್ಲಿ ಸರಿತಾ ಬಂದ ಮೇಲೆ ಅವರ ಕನ್ನಡದ ಆಳ ಮತ್ತು ಹರವುಗಳೂ ವ್ಯಾಪಕಗೊಂಡವು. ಇದರ ಶ್ರೇಯಸ್ಸು ಸರಿತಾ ಅವರದ್ದು. ಇದನ್ನೆಲ್ಲ ಹೇಳುವ ಕಾರಣವೆಂದರೆ, ಒಬ್ಬ ವ್ಯಕ್ತಿ, ಸಫಲನಾದ ವಕೀಲನಾಗಬೇಕಾದರೆ ಅವನಿಗೆ ಓದುವ ಹುಚ್ಚು ಇರಬೇಕು. ಭಾಷೆಗಳ ಮೇಲೆ ಪ್ರಭುತ್ವವನ್ನು ಹೊಂದಿರಬೇಕು. ಮಾತಾಡುವಲ್ಲಿ, ಓದುವಲ್ಲಿ ಮತ್ತು ಬರೆಯುವಲ್ಲಿ ಹಿಡಿತವನ್ನು ಹೊಂದಿರಬೇಕು. ಇವೆಲ್ಲವೂ ಒಬ್ಬ ಯಶಸ್ವೀ ವಕೀಲನ ಮುಖ್ಯ ಬಂಡವಾಳಗಳು. ಈ ಎಲ್ಲವುಗಳು ಕುಸುಮಾಕರರಲ್ಲಿದ್ದದ್ದು ಒಂದು ವಿಶೇಷ.

ಕುಸುಮಾಕರರು ಒಳ್ಳೆಯ ಮಾತುಗಾರರು ಕೂಡ. ಅವರ ಕಲಬುರ್ಗಿಯ ಮನೆ ಮಾತಿನ ಮಂಟಪವೇ ಆಗಿತ್ತು. ಮಾತಿಗೆ ಇಂತಹುದೇ ವಿಷಯವೆಂದೇನಿಲ್ಲ. ವಕೀಲಿ, ಸಾಹಿತ್ಯ, ರಾಜಕಾರಣ, ವಿನೋದ, ಆಧ್ಯಾತ್ಮ ಧರ್ಮ ಹೀಗೆ ಬಹುಮುಖವಾದ ಮಾತಿನ ಹಂದರವನ್ನು ಅಲ್ಲಿ ಕಾಣಬಹುದಾಗಿತ್ತು. ರಾಜ್ಯ- ರಾಷ್ಟ್ರಮಟ್ಟದ ಈ ಕ್ಷೇತ್ರಗಳಲ್ಲಿನ ಅನೇಕ ಹಿರಿಯರು ಅವರ ಮನೆಯ ಆತಿಥ್ಯವನ್ನು ಸವಿದು ಅವರ ಮಾತಿನ ಮೋಡಿಯನ್ನು ಕಂಡು ದಂಗಾಗಿದ್ದೂ ಇದೆ. ಮಾತುಗಾರಿಕೆಯೂ ಕೂಡ ವಕೀಲ ವೃತ್ತಿಗೆ ಅವಶ್ಯಕವಾಗಿ ಬೇಕಾಗಿರುವ ಒಂದು ಅರ್ಹತೆ, ಈ ಅರ್ಹತೆಯನ್ನು ಕುಸುಮಾಕರರು ಧಾರಾಳವಾಗಿ ಮೈಗೂಡಿಸಿಕೊಂಡಿದ್ದರು.

ಕುಸುಮಾಕರರು, ವಕೀಲ ವೃತ್ತಿಗೆಂದೇ ಹೇಳಿ ಮಾಡಿಸಿದ ಆಜಾನುಬಾಹು, ಆಕರ್ಷಕ ವ್ಯಕ್ತಿತ್ವವನ್ನು ಹೊಂದಿದ್ದರು. ಧರಿಸುವ ಖಾದಿ ಉಡುಪಿನಲ್ಲಿ ಅಚ್ಚುಕಟ್ಟುತನ. ಅಲ್ಲದೆ ವಕೀಲ ವೃತ್ತಿಗೆ ಅಗತ್ಯವೆಂದೆನಿಸಿದ ಎಲ್ಲ ಗುಣಗಳಿಂದ ಕುಸುಮಾಕರರು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದರು. ಹೈದ್ರಾಬಾದ್‌ನಲ್ಲಿ ಕಾನೂನು ಪದವೀಧರರಾಗಿ, ಕುಸುಮಾಕರರು ಕಲಬುರ್ಗಿಗೆ ಬಂದರು. ಮನೆಯಲ್ಲಿಯೇ ತನ್ನ ತಂದೆಯ ವಕೀಲಿ ವೃತ್ತಿ ಅವರಿಗೆ ಬಳುವಳಿಯಾಗಿ ಬಂದಿತ್ತು. ಕಲಬುರ್ಗಿಯ ಖ್ಯಾತ ವಕೀಲರೊಬ್ಬರ ಕಚೇರಿ ಅದಾಗಿತ್ತು. ಆದರೆ

ಕುಸುಮಾಕರರ ದೃಷ್ಟಿಯೇ ಬೇರೆ. ಒಂದು ರೀತಿಯಲ್ಲಿ ಅವರು ಕೈಲಾಸಂರ ತರಹ. ಕೈಲಾಸಂರ ತಂದೆ ಖ್ಯಾತ ವಕೀಲರು, ಆಮೇಲೆ ಅವರು ಹೈಕೋರ್ಟ್ ನ್ಯಾಯಾಧೀಶರೂ ಆಗಿದ್ದರು. ಅವರ ಮಿತ್ರರೊಬ್ಬರು ಕೈಲಾಸಂರಿಗೆ "ನೀನು ಪ್ರಖ್ಯಾತ ತಂದೆಯ ಮಗನೆಂದು ಗುರುತಿಸಿಕೊಳ್ಳಲು ಬಯಸುವೆಯಾ" ಎಂದು ಕೇಳಿದ್ದಕ್ಕೆ ಕೈಲಾಸಂರು, "ಇಲ್ಲ ನನ್ನ ತಂದೆ ಸಮಾಜದಲ್ಲಿ ಕೈಲಾಸಂರ ತಂದೆ ಎಂದು ಗುರುತಿಸಲ್ಪಡುವಂತೆ, ನಾನು ಬೆಳೆಯಲಿಚ್ಛಿಸುತ್ತೇನೆ" ಎಂದು ಹೇಳಿದರಂತೆ. ಅದರಂತೆ ಕೈಲಾಸಂರು ಬೆಳೆದರೂ ಕೂಡ. ಈ ಸಂದರ್ಭ ಕುಸುಮಾಕರರಿಗೂ ಅಷ್ಟೇ ಸಮರ್ಪಕವಾಗಿ ಒಪ್ಪುತ್ತದೆ. ವಕೀಲನಾಗಿ ಕೋರ್ಟ್‌ಗೆ ಹೋಗುವ ಮೊದಲ ದಿನವಂದು ಸಂಜೀವರಾವ್ ದೇಸಾಯಿಯವರು ಮಗನ ಕೈಯಲ್ಲಿ ಒಂದು ಪ್ರಕರಣ ಕಡತವನ್ನು ಕೊಟ್ಟು, ಅದನ್ನು ನ್ಯಾಯಾಲಯದಲ್ಲಿ ಹೇಗೆ ನಿರ್ವಹಿಸಬೇಕೆಂದು ವಿವರವಾಗಿ ತಿಳಿಸಲು ತೊಡಗಿದಾಗ, ಕುಸುಮಾಕರರು ತಂದೆಯನ್ನು ತಡೆದು "ಪ್ರಕರಣದ ಕಡತವನ್ನು ನನ್ನ ಕೈಗೆ ಕೊಟ್ಟಿದ್ದೀರಿ. ಈಗ ಅದು ನನ್ನ ಕೇಸು. ನಿಮ್ಮ ವಿವರಣೆ ನನಗೆ ಬೇಕಿಲ್ಲ" ಎಂದು ಹೇಳಿದರಂತೆ. ತಂದೆಗೆ ಮಾತು ಕೊಟ್ಟಂತೆ ಆ ಪ್ರಕರಣದಲ್ಲಿ ಗೆಲುವನ್ನು ಸಾಧಿಸಿ, ತಂದೆಯಲ್ಲಿ ನಂಬುಗೆಯನ್ನು ಮೂಡಿಸುವಂತಹ ವಕೀಲರಾಗಿ ಕುಸುಮಾಕರರು ಕಾಣಿಸಿಕೊಂಡರು.

ಕುಸುಮಾಕರರು ತಮ್ಮ ಉಪಜೀವನಕ್ಕಾಗಿ ವಕೀಲಿಯನ್ನು ಪೂರ್ಣಾವಧಿ ವೃತ್ತಿಯಾಗಿ ಅಂಗೀಕರಿಸಿದ್ದೇನೋ ಸರಿ. ಆದರೆ ಆಗಾಗ ಅವರಿಗೆ ರಾಜಕಾರಣ ಕೈಬೀಸಿ ಮಾದಕವಾಗಿ ಕರೆಯುತ್ತಿತ್ತು. ರಾಜಕೀಯದಲ್ಲೂ ಅವರಿಗೆ ಅಷ್ಟೇ ಆಸಕ್ತಿ. ಹೀಗಾಗಿ ಅವರ ನಿಷ್ಠೆ ವಕೀಲಿ ಮತ್ತು ರಾಜಕೀಯಗಳ ನಡುವೆ ಆಗಾಗ ಉಯ್ಯಾಲೆಯಾಡುತ್ತಿತ್ತು. ಇದರಿಂದಾಗಿ ಅವರ ರಾಜಕೀಯ ಮತ್ತು ವಕೀಲ ವೃತ್ತಿ ಎರಡಕ್ಕೂ ನಷ್ಟವಾಗಿದೆ. ಇದು ಅವರಿಗೂ ಗೊತ್ತಿತ್ತು. ಆದರೆ ಮಾಡುವುದೇನು? ಎಲ್ಲದರ ಮೇಲೂ ಹಿಡಿತ ಸಾಧಿಸಬಹುದು. ಆದರೆ ಸ್ವಭಾವಕ್ಕೆ ಮದ್ದನ್ನು ಇನ್ನೂ ಯಾರೂ ಕಂಡುಹಿಡಿದಿಲ್ಲ.

ವಕೀಲರಾಗಿ ಕುಸುಮಾಕರರದು ಅಸ್ತವ್ಯಸ್ತ ವ್ಯಕ್ತಿತ್ವವಾಗಿತ್ತು. ಅವರ ಕಚೇರಿಯನ್ನು, ಗ್ರಂಥಾಲಯವನ್ನು ಹಾಗೂ ಕಡತಗಳ ರಾಶಿಯನ್ನು ಕಂಡ ನನ್ನಂತಹ ಅನೇಕರಿಗೆ ಅದರ ಅನುಭವವಾಗಿದೆ. ಯಾವುದೇ ಪ್ರಕರಣದ ಕಡತವನ್ನು ತೆಗೆದುಕೊಂಡರೂ ಆ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕ್ರಮಬದ್ಧವಾದ ಶಿಸ್ತಿನಲ್ಲಿ ಜೋಡಿಸಿಟ್ಟು ಅದನ್ನು ಉಪಯೋಗಿಸುವುದು, ಕುಸುಮಾಕರರ ಜಾಯಮಾನದಲ್ಲೇ ಇರಲಿಲ್ಲ. ಇಂತಹ ಒಂದು ಪ್ರಕರಣದ ಕಡತವನ್ನು ಇನ್ನೊಬ್ಬ ವಕೀಲನ ಕೈಯಲ್ಲಿ ಕೊಟ್ಟು, ಇದನ್ನು ನೀನು ನಡೆಯಿಸಿಕೊಂಡು ಹೋಗು ಎಂದು ಏನಾದರೂ ಕುಸುಮಾಕರರು ಹೇಳಿದರೆಂದು ಇಟ್ಟುಕೊಳ್ಳುವ, ಆಗ ಆ ಇನ್ನೊಬ್ಬ ವಕೀಲರು ಹೌಹಾರುವಂತಹ ಪ್ರಸಂಗವೆ ಅದು. ಪ್ರಕರಣದಲ್ಲಿನ ಕಾಗದಗಳನ್ನು ನೋಡಿ ಅವರ ಅಧ್ಯಯನವನ್ನು ಎಲ್ಲಿಂದ ಆರಂಭಿಸಬೇಕು,

ಎಲ್ಲಿಗೆ ಮುಗಿಸಬೇಕು ಎಂಬುದನ್ನು ತಿಳಿಯದೇ ಪೇಚಾಡುವ ಸಂದರ್ಭ ಅದು. ಕುಸುಮಾಕರರಿಗೆ ಅದೊಂದು ಸಮಸ್ಯೆಯೇ ಅಲ್ಲ. ಅವರ ನೆನಪಿನ ಶಕ್ತಿ ಅಗಾಧವಾಗಿತ್ತು. ಪ್ರಕರಣದ ಕಡತದಲ್ಲಿನ ತಮಗೆ ಬೇಕಾದ ಕಾಗದವನ್ನು ತಕ್ಷಣವೇ ಕಂಡುಹಿಡಿಯುತ್ತಿದ್ದರು. ಅಲ್ಲದೇ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ವಿವರಗಳು ಅವರ ನಾಲಿಗೆಯ ತುದಿಯ ಮೇಲೆ ಇರುತ್ತಿದ್ದವು. ಹೀಗೆ ಅಸ್ತವ್ಯಸ್ತ ವಕೀಲ ಕುಸುಮಾಕರ, ನ್ಯಾಯಾಲಯದ ಎದುರು ಸಾಕ್ಷಿ ಮಂಡಿಸುವಾಗ, ಪಾಟಿಸವಾಲು ಮಾಡುವಾಗ ಇಲ್ಲವೇ ವಾದಗಳನ್ನು ಮಂಡಿಸುವಾಗ ನಿರರ್ಗಳವಾಗಿ ಯಾರ ಅಡೆತಡೆ ಇಲ್ಲದೆ ಕಾನೂನಿನ ಓನ್ನೆಲೆಯಲ್ಲಿ ತಮ್ಮ ಪ್ರಕರಣವನ್ನು ಹಿಂಜಿ, ಹಿಂಜಿ ವಿವರಗಳನ್ನು ಬಿಡಿಸಿ, ನಿರ್ಣಯಕ್ಕಾಗಿ ನ್ಯಾಯಾಧೀಶರ ಮುಂದೆ, ಅವರು ತಲೆದೂಗುವಂತೆ ಇಡುತ್ತಿದ್ದರು. ಹಗಲು- ರಾತ್ರಿ ಎಡಬಿಡದೆ ತಮ್ಮ ಪ್ರಕರಣವನ್ನು ಅಭ್ಯಾಸ ಮಾಡಿ, ಅದನ್ನು ನ್ಯಾಯಾಲಯದ ಮುಂದೆ ಮಂಡಿಸುವಾಗ ತಡಬಡಿಸುವ ವಕೀಲರೇ ಹೆಚ್ಚಾಗಿರುವ ಈ ಕಾಲದಲ್ಲಿ ಕುಸುಮಾಕರರು ವೃತ್ತಿ ನೈಪುಣ್ಯಕ್ಕೆ ಒಂದು ಮಾದರಿಯಾಗಿದ್ದರು.

ಕುಸುಮಾಕರರ ಮಡದಿ ಸರಿತಾ, ಮದುವೆಯಾದ ಮೇಲೆ ಗಂಡನ ಪ್ರೇರಣೆಯಿಂದ ಕಾನೂನು ಪದವಿಯನ್ನು ಗಳಿಸಿ, ಗಂಡನ ಆಫೀಸಿನಲ್ಲೇ ಜ್ಯೂನಿಯರ್ ಎಂದು ಸೇರಿಕೊಂಡರು. ಸರಿತಾ ಅವರಿಗೆ ಎಲ್ಲದರಲ್ಲೂ ಶಿಸ್ತು ಮತ್ತು ಅಚ್ಚುಕಟ್ಟು ಬೇಕು. ಆದರೆ ಕುಸುಮಾಕರರು ಇದಕ್ಕೆ ತದ್ವಿರುದ್ಧ. ಇಂತಹ ಈ ಜೋಡಿ ಕಲಬುರ್ಗಿ ನ್ಯಾಯಾಲಯಗಳಲ್ಲಿ ಎರಡು ದಶಕಗಳಿಗೆ ಮೇಲ್ಪಟ್ಟು ವಕೀಲ ವೃತ್ತಿಯನ್ನು ನಿಷ್ಠೆಯಿಂದ ನಡೆಯಿಸಿ ಆದರ್ಶ ವಕೀಲ ದಂಪತಿಗಳೆಂದು ಮೆರೆದಿದ್ದಾರೆ. ಕಲಬುರ್ಗಿಯ ಪ್ರಥಮ ಮಹಿಳಾ ವಕೀಲರೆಂದು ಹೆಸರು ಮಾಡಿದ ಸರಿತಾ ಅವರಿಗೆ ಕುಸುಮಾಕರರು ಪ್ರೇರಕ ಶಕ್ತಿಯಾಗಿದ್ದರು.

ಕುಸುಮಾಕರರು ಇಂಗ್ಲಿಷ್‌ನಲ್ಲಿ ಪಾಂಡಿತ್ಯವನ್ನು ಸಂಪಾದಿಸಿದ್ದರೂ ಕೂಡ ಅವರಿಗೆ ಇಂಗ್ಲಿಷ್ ವ್ಯಾಮೋಹವಿರಲಿಲ್ಲ. ಅವರ ಮನೆಯ ಮುಂದೆ ತೂಗು ಹಾಕಿದ ಅವರ ನಾಮಫಲಕಗಳು ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ ಮಾತ್ರ ಇದ್ದವು. ಇದು ಅವರ ರಾಷ್ಟ್ರಾಭಿಮಾನಕ್ಕೆ ಕನ್ನಡಿ ಹಿಡಿಯುತ್ತದೆ.

ಕುಸುಮಾಕರರು ಖ್ಯಾತ ವಕೀಲರಾಗಿರುವ ಜೊತೆಗೆ ಕಾನೂನು ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದ್ದಾರೆ. ಕಲಬುರ್ಗಿಯ, ಶತಮಾನದಷ್ಟು ಹಳೆಯದಾದ ರಾಷ್ಟ್ರೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡು ಬೆಳೆದ ಖ್ಯಾತ ನೂತನ ವಿದ್ಯಾಲಯ ಸಂಸ್ಥೆಯ, ಮಾಜಿ ವಿದ್ಯಾರ್ಥಿಗಳು. ಕುಸುಮಾಕರರು ಅದೇ ಸಂಸ್ಥೆಯ ಪದವಿಮಹಾವಿದ್ಯಾಲಯದಲ್ಲಿ ಬಿ.ಕಾಂ. ತರಗತಿಗಳಿಗೆ ವಾಣಿಜ್ಯ, ಕಾನೂನು ಶಾಸ್ತ್ರವನ್ನು ಅವರು ಆರಂಭದ ಕೆಲವು ವರ್ಷಗಳಲ್ಲಿ ಬೋಧಿಸಿದರು. ಅವರು ಕಾಲೇಜಿಗೆ ಬಂದ ದಿನ ವಿದ್ಯಾರ್ಥಿಗಳಿಗೆ ಸಂತಸ. ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ವಿಷಯವನ್ನು ಅವರು ಆಕರ್ಷಕವಾಗಿ ತಿಳಿಹೇಳುತ್ತಿದ್ದರು. ಅವರು

ಸೂರ್ಯವಂಶಿಗಳಾಗಿದ್ದರಿಂದ ಅವರು ಮತ್ತೆ ಕಾಲೇಜಿಗೆ ಬರುವುದನ್ನು ವಿದ್ಯಾರ್ಥಿಗಳು ತವಕದಿಂದ ಕಾಯುತ್ತಿರುತ್ತಿದ್ದರು. ಆ ವಿಷಯ ಬೇರೆ. ಕುಸುಮಾಕರರು ನೂತನ ವಿದ್ಯಾಲಯ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಹೈದ್ರಾಬಾದ್ ಶಿಕ್ಷಣ ಸಂಸ್ಥೆಯ ಕಾನೂನು ಮಹಾವಿದ್ಯಾಲಯದಲ್ಲೂ ಕೂಡ ಕುಸುಮಾಕರರು ಪ್ರಾಧ್ಯಾಪಕರಾಗಿ ಕೆಲವು ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದಾರೆ.

ರಾಮಕೃಷ್ಣ ಹೆಗಡೆಯವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಕುಸುಮಾಕರರು ರಾಜ್ಯ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷರಾಗಿ ನೇಮಕಗೊಂಡರು. ಅವರು ತಮ್ಮ ಹೊಸ ಹುದ್ದೆಗೆ ಸೇರಿಕೊಳ್ಳುವ ಪೂರ್ವದಲ್ಲಿ, ಕಲಬುರ್ಗಿ ಜಿಲ್ಲಾ ವಕೀಲರ ಸಂಘವು ಅವರಿಗೆ ಸನ್ಮಾನ ಮತ್ತು ಅಭಿನಂದನಾ ಸಮಾರಂಭವನ್ನು ಏರ್ಪಡಿಸಿತ್ತು. ಆ ಸಭೆಯಲ್ಲಿ ಮಾತನಾಡುವಾಗ ಕುಸುಮಾಕರರು, "ಇನ್ನು ಮತ್ತೆ ವಕೀಲ ವೃತ್ತಿಗೆ ಮರಳುವುದಿಲ್ಲ" ಎಂದು ಭೀಷ್ಮ ಪ್ರತಿಜ್ಞೆಯನ್ನು ಮಾಡಿದರು. ಈ ರೀತಿಯಾಗಿ ಆ ದಿನ ಅದು ಅವರಿಗೆ ಬೀಳ್ಕೊಡುಗೆ ಸಮಾರಂಭವೂ ಆದಂತಾಯಿತು. ಆಮೇಲೆ ಮತ್ತೆ ಕುಸುಮಾಕರರು ವಕೀಲ ವೃತ್ತಿಗೆ ಹಿಂದಿರುಗಲಿಲ್ಲ. ಇಂತಹ ಪ್ರತಿಜ್ಞೆಯನ್ನು ಆ ದಿನ ಅವರು ಮಾಡಬಾರದಿತ್ತು ಎಂದು ನನ್ನಂತೆ ಅನೇಕರಿಗೆ ಇಂದಿಗೂ ಅನಿಸುತ್ತಿದೆ.

ಬದುಕಿನಲ್ಲಿ ನಾ ಕಂಡ ಸಂಜೀವಿನಿ

❁ ಬಿ. ಕೃಷ್ಣಮೂರ್ತಿ

ಇಂದು ನಾನು ಹರಪನಹಳ್ಳಿ-ದಾವಣಗೆರೆಯಲ್ಲಿ ಯಶಸ್ವಿ ವಕೀಲನೆನಿಸಿಕೊಂಡು ತಲೆ ಎತ್ತಿ ತಿರುಗುತ್ತಿದ್ದೇನೆ. ನನಗೇ ಈಗ ಹತ್ತು, ಹದಿನೈದು ಜ್ಯೂನಿಯರ್ಸ್ ವೃತ್ತಿ ಸಹಾಯಕರಾಗಿ ಕಲಿಯಲು ನನ್ನ ಬಳಿ ಬರುತ್ತಿದ್ದಾರೆ. ಇವತ್ತು ನಾನು ಸಮಾಜದಲ್ಲಿ ಈ ಸ್ಥಾನ ಗೌರವಗಳಿಸಿ, ಸಂಸಾರ ನಿರ್ವಹಣೆಯಲ್ಲಿ ಸ್ವಾವಲಂಬನೆಯಿಂದ ಬದುಕುತ್ತಿದ್ದೇನೆ. ಇದಕ್ಕೆ ಯಾರು ಕಾರಣರು. ನನ್ನ ತಿದ್ದಿ ತಿದ್ದಿ ಈ ಸ್ಥಿತಿಗೆ ತಂದ ರೂವಾರಿ ಯಾರು? ಮತ್ಯಾರು? ನನ್ನ ಮಾಮ ದಿ. ಕುಸುಮಾಕರ ದೇಸಾಯಿಯವರು. ನನ್ನ ಬದುಕಿನ ಸಂಜೀವಿನಿ ಅವರು.

ನಮ್ಮ ತಂದೆಯ ಅಕ್ಕನ ಮಗಳು ಸರಸ್ವತಿಯನ್ನು (ನಾನು ಕರೆಯುತ್ತಿರುವುದು ಸರಸತ್ತಿ) ಹರಪನಹಳ್ಳಿಯಲ್ಲಿ ೧೯೬೧ರಲ್ಲಿ ಲಗ್ನವಾದಾಗ ನಾನು ಚಿಕ್ಕ ಹುಡುಗ. ಅಂದಿನಿಂದ ನಾನು ಕುಸುಮಾಕರರನ್ನು ಕರೆಯುತ್ತಿದ್ದದ್ದು ಮಾಮಾ ಎಂದೇ. ಈ ಮಾಮಾನ ಮನೆ 'ಸಂಜೀವಿನಿ'ಯಲ್ಲಿ ನಾನೂ ವಿದ್ಯಾರ್ಥಿಯಾಗಿ ನೆಲೆ ಕಂಡುಕೊಂಡವನು. ನಾನು ಬಿ.ಎ. ಪಾಸಾದ ಕೂಡಲೇ ನೌಕರಿ ಮಾಡಬೇಕೆಂದಿದ್ದೆ. ಆದರೆ ನಮ್ಮತಂದೆ ನಾನು ಎಲ್.ಎಲ್.ಬಿ. ಓದಿ ಮಾಮನ ಗರಡಿಯಲ್ಲಿ ವಕೀಲನಾಗಬೇಕೆಂದು ಬಯಸಿ ದೂರದ ಗುಲ್ಬರ್ಗಕ್ಕೆ ಕಳಿಸಿದಾಗ ಒಲ್ಲದ ಮನಸ್ಸಿನಲ್ಲಿ ಅವರಲ್ಲಿಗೆ ಬಂದೆ ನೂರೆಂಟು ಭಯ-ಆತಂಕದಿಂದ ಒಳಗಡಿಯಿಟ್ಟಾಗ ಮೊದಲು ಬೊಗಳುತ್ತ ಬಂದ ನಾಯಿ, ನಂತರ ಮಾಮ ಅತ್ತಿ ಬಂದು ಆತ್ಮೀಯತೆಯಿಂದ ಬರಮಾಡಿಕೊಂಡರು. ಅಜಾನುಬಾಹು ಕಪ್ಪು ಮೀಸೆ ಮುಖದ ಮಾಮನ್ನ ಕಂಡು ಅಂಜಿಬಿಟ್ಟೆ, ಬಗ್ಗಿ ನಮಸ್ಕರಿಸಿದಾಗ ಬೆನ್ನಿಗೆ ಗುದ್ದಿ ಸ್ವಾಗತಿಸಬೇಕೆ? ಬೆವತುನೀರಾದೆ. ನನ್ನ ಮನದ ಭಾವನೆ ಮುಖದಲ್ಲಿ ಗುರುತಿಸಿ ಗಹಗಹಿಸಿ ನಗುತ್ತಾ "ಕಿಟ್ಟೀ.... ನಾನು ಎಲ್ಲರಿಗೂ ಗುದ್ದಿ ಆಶೀರ್ವಾದ ಮಾಡ್ತೀನಿ ಗೊತ್ತಾ" ಎಂದಾಗ ಅತ್ತಿ ಒಳಗೆ ಕರೆದೊಯ್ದು ಸಂಜೀವಿನಿಯ ಉಳಿದ ಸದಸ್ಯರನ್ನು ಪರಿಚಯಿಸಿ ನನ್ನ ರೂಂ ತೋರಿಸಿ.... "ನಿರ್ಭಿಢೆಯಿಂದ ಇರು. ಕಿಟ್ಟೀ.... ಇದು ಈಗ ನಿನ್ನ ಮನಿ" ಎಂದಾಗ ಅಲ್ಪ ಸಮಾಧಾನ. ಅವರ ಮನೆ ದೊಡ್ಡದಾಗಿ ಅನೇಕ ಅನುಕೂಲಗಳನ್ನು ಹೊಂದಿತ್ತು. ಅವರ ಪದ್ಧತಿಗಳು ಆಹಾರ-ಊಟ ನಮ್ಮೆಲ್ಲಕ್ಕಿಂತ ಭಿನ್ನವಾಗಿತ್ತು. ಮಾಮನನ್ನು ಕಂಡರೆ ಭಯ. ನಾನು ಬಾಯಿ ಬಿಚ್ಚುತ್ತಲೇ ಇರಲಿಲ್ಲ. ಮುಂಬಯಿಯಿಂದ ಬಂದಿದ್ದ ಅತ್ತಿ, ನೆಗ್ಗೆಣ್ಣೆ ಮಕ್ಕಳ ನಗು ಹರಟೆಗಳನ್ನು ದೂರದಿಂದ ಕೇಳುತ್ತಿದ್ದೆನಷ್ಟೆ. ಮಕ್ಕಳಿಗೆ ನಾನೂ ಜೋಕ್ ಹೇಳಿದಾಗ ಆ ಮಗು ಮಾಮನ ಬಳಿ ಓಡಿ ಹೋಗಿ "ದೊಡ್ಡಪ್ಪ-ದೊಡ್ಡಪ್ಪ-ಕಿಟ್ಟೀಗೂ ಮಾತಾಡೋಕ್ಕೆ ಬರತ್ತೆ" ಎಂದಾಗ ಎಲ್ಲರೂ ನಕ್ಕಿದ್ದೇ ನಕ್ಕಿದ್ದು. ಅಷ್ಟು ಅನಾಮಧೇಯನಾಗಿದ್ದ ನಾನು ಹತ್ತು ವರ್ಷ ಅವರಲ್ಲಿ ಇದ್ದದ್ದು ಮಾತ್ರವಲ್ಲ ಮಾಮನ ಹೃದಯಕ್ಕೆ ಅತ್ಯಂತ

ಸಮೀಪದವನಾಗಿ ಬಿಟ್ಟ ಬಗೆ ಇಂದಿಗೂ ನನಗೆ ಚೋದ್ಯ. ನನ್ನಲ್ಲಿ ಧನ್ಯತಾ ಭಾವ ಮೂಡಿಸಿದೆ.

ಬೆಳಗ್ಗೆ ಅವಸರ ಅವಸರದಲ್ಲಿ ಒಬ್ಬೊಬ್ಬರೇ ಅನುಕೂಲವಾದಾಗ ಊಟ ಮಾಡಿ ಎಲ್ಲರೂ ಹೋಗುತ್ತಿದ್ದರೂ ಮಾಮ ರಾತ್ರಿ ಊಟಕ್ಕೆ ಮಾತ್ರ ಎಲ್ಲರೂ ಸಮಯಕ್ಕೆ ಸರಿಯಾಗಿ ಕೂಡಬೇಕೆಂದು ನಿಯಮ ಮಾಡಿದ್ದನು. ಅದರಂತೆ ಅವರು- ಅತ್ತಿ ಕೋರ್ಟಿನ ಪ್ರಕರಣಗಳ ಬಗ್ಗೆ ಚರ್ಚಿಸುವಾಗ ರಾತ್ರಿ ನಾನು ಉಳಿದ ಜ್ಯೂನಿಯರ್ಸ್‌ನ್ನು ಕರೆದು ರೋಲಿಂಗ್ಸ್ ಓದಲು ಪ್ರೇರೇಪಿಸುತ್ತಿದ್ದರು. ರಾತ್ರಿ ನಮ್ಮ ರೂಂಗಳಲ್ಲಿ ಎಷ್ಟು ಹೊತ್ತು ಲೈಟ್ ಉರಿಸಿದರೂ ಚಿಂತೆಯಿಲ್ಲ. ಓದಲು ಪ್ರೇರಣೆ ಸಿಗುತ್ತಿತ್ತು. ಇಷ್ಟೆಲ್ಲ ಅನುಕೂಲಗಳಿದ್ದೂ ನಾನು ಪ್ರಥಮ ವರ್ಷ ಲಾ ಪರೀಕ್ಷೆಯಲ್ಲಿ ನಪಾಸ್ ಆದಾಗ ಗಂಟುಮೂಟೆ ಕಟ್ಟಿ ಹರಪನಹಳ್ಳಿಗೆ ಹೊರಟು ಭವಿಷ್ಯ ಕಂಡುಕೊಳ್ಳಲು ನಿರ್ಧರಿಸಿ ನಿಂತಾಗ ಮಾಮಾ ತಡೆದು ನಿಲ್ಲಿಸಿ ಸಮಾಧಾನ ಮಾಡಿದರು. "ನೋಡು ಕಿಟ್ಟೀ.... ನಿರಾಶನಾಗಬೇಡ ಎಂಥೆಂಥ ಘಟಾನುಘಟಗಳು ಮೊದಲ ವರ್ಷ ನಪಾಸ್ ಆಗಿದ್ದಾರೆ. ನಿನ್ನ ಮಾಮ ಅಂದರೆ ನಾನೂ ಮೊದಲ ವರ್ಷ ಫೇಲ್ ಆಗಿದ್ದೆ. Law ಅಂದರೆ Nothing but commansense ನಿನಗೆ Commansense ಅದೆ. ಓದುವುದಕ್ಕೂ ಮುಂದೆ ಪ್ರ್ಯಾಕ್ಟೀಸ್ ಮಾಡುವುದಕ್ಕೂ ಬಹಳ ವ್ಯತ್ಯಾಸವಿದೆ ಗೊತ್ತಾ.... ನರ್ವಸ್ ಆಗಬ್ಯಾಡ... ನಿನ್ನ ವಕೀಲ ಮಾಡಿಯೇ ನಿಮ್ಮಪ್ಪನ ಹತ್ತಿರ ಕಳಿಸ್ತೀನಿ.... ಚಿಂತೆ ಮಾಡಬ್ಯಾಡ" ಆದರೂ ನನ್ನ ಚಿಂತಿ ತಪ್ಪಲಿಲ್ಲ. ಮಾಮಾ ಆಗಿನ ಲಾ ಕಾಲೇಜ್ ಪ್ರಿನ್ಸಿಪಾಲರಾಗಿದ್ದ ಪಂಢರಪುರಕರ (ಅವರು ಮಾಮಾನ ಪ್ರಥಮ ವಿದ್ಯಾರ್ಥಿ ಆಗಿದ್ದರಂತೆ) ಸರ್ ಅವರನ್ನು ಕರೆಸಿ ನನಗೆ ಟ್ಯೂಶನ್ ಹೇಳಲು ಒಪ್ಪಿಸಿದರು. ತಮ್ಮ ಬಳಿ ನಾನು ಹೆದರುತ್ತೇನೆ ಎಂದೂ ಅವರಿಗೆ ಹೇಳಿ ತರಬೇತಿ ಕೊಡಿಸಿದರು. ಅಂತೂ ಲಾ ಮೂರು ವರ್ಷ ಓದಿ ಪಾಸಾದ ನಂತರ ಮಾಮಾ-ಅತ್ತಿಯ ಆಫೀಸ್ ಸೇರಿ ವಕೀಲ ವೃತ್ತಿಗಿಳಿದೆ. ಅದಕ್ಕೆ ನಮ್ಮಪ್ಪನ ಆದೇಶವಿತ್ತು. ೧೯೭೭ ರಲ್ಲಿ ನಾನು ವೃತ್ತಿಗಿಳಿದಿದ್ದು. ಮಾಮ, ಅತ್ತಿ ಕೋರ್ಟ್‌ಗೆ ಕರೆದೊಯ್ದಾಗ ಮಾಮಾ ಬಾರ್ ಅಸೋಸಿಯೇಷನ್‌ಲ್ಲಿ ನನ್ನನ್ನು ಹಿರಿಯ ನ್ಯಾಯವಾದಿಗಳಿಗೆ ಪರಿಚಯಿಸಿದರು. ಆಗ ಆ ಹಿರಿಯ ವಕೀಲರು ನನ್ನ ದಿಟ್ಟಿಸಿ ``One more ass to the graing ground" ಎಂದು ಸ್ವಾಗತಿಸಿದ್ದು ನಾನು ಬೆವತುಬಿಟ್ಟೆ.

ವೃತ್ತಿಗಿಳಿದೆ ನಿಜ. ಆದರೆ, ನನ್ನಲ್ಲಿಯ ಆತ್ಮವಿಶ್ವಾಸದ ಕೊರತೆಯಿಂದಾಗಿ ಪ್ರಕರಣಗಳ ಕಲಾಪದಲ್ಲಿ ಭಾಗಿಯಾಗಲು ಹೆದರುತ್ತಿದ್ದೆ. ಇನ್ನೊಬ್ಬ ಜ್ಯೂನಿಯರ್ ಆಗಿದ್ದ ನಿಂಗಮ್ಮ ಪಾಟೀಲ ಅತ್ತಿ ಹಿಂದೆ ಹಿಂದೆ ತಿರುಗುತ್ತಿದ್ದೆ. ನ್ಯಾಯಾಧೀಶರೆದುರು ನಿಲ್ಲಲಿಕ್ಕೇ ಅಂಜುತ್ತಿದ್ದೆ. ಕೇಸು ಕೂಗಿದಾಗ ಗಲಿಬಿಲಿಗೊಂಡು ನಾನು ನನ್ನ ಅತ್ತಿ ಸರಿತಾ ದೇಸಾಯಿಯನ್ನು ಕರೆದುಕೊಂಡು ಬರಲು ಓಡುತ್ತಿದ್ದೆ. ನನಗೆ ಈ ವೃತ್ತಿ ಸಾಧ್ಯವಿಲ್ಲ ಎನಿಸತೊಡಗಿತ್ತು. ಈ ಅವಧಿಯಲ್ಲಿ ನನ್ನ ಅತ್ತೆ ಗುಲ್ಬರ್ಗದಲ್ಲಿದ್ದ ನಮ್ಮೂರಿನ ಶ್ರೀ ಸೇತುರಾಮಚಾರರ ತಂಗಿಯ ಮನೆಗೆ ಕರೆದುಕೊಂಡು

ಹೋಗಿದ್ದಾಗ "ಕಿಟ್ಟಿ ಈಗ ನಮ್ಮಲ್ಲಿಯೇ ವಕೀಲಿ ಪ್ರಾರಂಭಿಸಿದ್ದಾನೆ" ಎಂದಾಗ ಅದಕ್ಕೆ ಸಾಬಕ್ಕ ತಕ್ಷಣ.... "ಸಾಕು ನಾನು ನೋಡಲಾರೆ ತಾಯಿ... ಅವನೇನು ವಕೀಲ ಆಗ್ತಾನೇ... ಸರಿಯಾಗಿ ಬಾಯಿನೇ ತೆರೆಯಲು ಬರುವುದಿಲ್ಲ.. ಅವನ ವಕೀಲಿ ಕೂಡ ಹಾಗೇ ಅದ ಬಿಡು" ಎಂದು ಪ್ರತಿಕ್ರಿಯಿಸಿದ್ದು ನಾನು ವಕೀಲನಾಗಲು ಯೋಗ್ಯತೆಯಿಲ್ಲವೆಂದು ಮನಸಲ್ಲಿ ನಿರ್ಧರಿಸಿ ಪುನಃ ಗಂಟು ಮೂಟೆಕಟ್ಟಿ ಹರಪನಹಳ್ಳಿಗೆ ಹೊರಡಲು ನಿರ್ಧರಿಸಿ ಪ್ರಕಟಿಸಿದಾಗ ಮಾಮಾ ನಗುತ್ತ ನನ್ನ ಬಳಿಬಂದು ತಮ್ಮ ಬಳಿ ಕೂಡಿಸಿಕೊಂಡು ಧೈರ್ಯ ತುಂಬಿ "ನಾನು ನಿನ್ನ ಜೊತೆಗಿದ್ದೀನಿ ಹೆದರಬೇಡ ಕಿಟ್ಟೀ" ಎಂದು ನನ್ನನ್ನು ಹುರಿದುಂಬಿಸಿದರು. ಅವರು ನನ್ನಲ್ಲಿ ಯಾವ ಗುಣಗಳನ್ನು ಕಂಡಿದ್ದರೋ ಒಬ್ಬ ಮಾಂತ್ರಿಕನಂತೆ ನನ್ನಲ್ಲಿ ಶಕ್ತಿ ತುಂಬಿಬಿಟ್ಟರು. ನಂತರ ನಾನು ಎಂದೂ ಹೆದರಲಿಲ್ಲ. ಪ್ರಕರಣ ಆಳಕ್ಕೆ ಇಳಿಯುವುದು ತಿಳಿದುಕೊಳ್ಳುವುದು ಸರಿಯಾದ ರೂಲಿಂಗ್ಸ್ ಹುಡುಕಿ ಮಾಮಾಗೆ ಕೊಡತೊಡಗಿದಾಗ ಮಾಮಾ ನನ್ನ ಬೆನ್ನು ಚಪ್ಪರಿಸಿ "ನನ್ನ dictation ತಗೋತೀದಿ.. obsearve ಮಾಡ್ತೀದಿ, ಅಭ್ಯಾಸ ಮಾಡ್ತಿ ಇನ್ನು ಮುಂದೆ... ಆಫೀಸ್ ಕೆಲಸ ಅಚ್ಚುಕಟ್ಟಾಗಿ ಮಾಡು ಹಾಗೆ ಪ್ರಕರಣ ಕರೆದಾಗ I A applications ಗೆ Arguments ಮಾಡುತ್ತಾ ಹೋಗು" ಎಂದು ಆ ಪ್ರಕಾರ ಹೇಳಿಕೊಟ್ಟಿದ್ದರಿಂದ ಅವರು ಬರುವುದು ತಡವಾದರೆ ನ್ಯಾಯಾಧೀಶರು ಕೇಳುವ ಪ್ರಕರಣಗಳ ವಿವರ ಹೇಳುವುದು ಸಣ್ಣ ಪುಟ್ಟ ವಾದಗಳನ್ನು ಮಾಡತೊಡಗಿದೆ. ಹೀಗೆ ಮಾಮ ಹೆಜ್ಜೆ ಹೆಜ್ಜೆಗೆ ನನ್ನ ತಿದ್ದಿ ವಕೀಲ ಮಾಡಿಯೇಬಿಟ್ಟರು. ಅವರಂಥ ವಕೀಲನಾಗಲು ಸಾಧ್ಯವಾದೀತೆ ಎಂದು ಆ ನಿಟ್ಟಿನಲ್ಲಿ ಪ್ರಯತ್ನಿಸತೊಡಗಿದೆ.

ಮಾಮಾನದು ವಿಶಿಷ್ಟ ವ್ಯಕ್ತಿತ್ವ. ವಕೀಲಿಯಲ್ಲಿ ಅವರು ಕೇಸು ನಡೆಸುವ ಶೈಲಿಗೆ ನಾನು ಮಾರುಹೋಗಿಬಿಟ್ಟೆ. ಕೋರ್ಟಿನ್ನು ತಪ್ಪುದಾರಿಗೆ ಎಳೆಯುತ್ತಿರಲಿಲ್ಲ. ಅತ್ಯಂತ ಪ್ರಾಮಾಣಿಕ ನಿವೇದನೆ. ಹಿರಿಯ ವಕೀಲರಿಗೆ, ನ್ಯಾಯಾಧೀಶರಿಗೆ ಅವರು ತೋರಿಸುವ ಗೌರವ, ವಿನಯದ ನಡವಳಿಕೆ ಗಮನಿಸುತ್ತಿದ್ದೆ. ಅದರಂತೆ ಕಿರಿಯ ಜ್ಯೂನಿಂದ ಅಪೇಕ್ಷಿಸುತ್ತಿದ್ದರು.

ನಾನು ಮಾಮಾನಲ್ಲಿ ಕಂಡ ಒಂದು ಗಮನಾರ್ಹ ಅಂಶವೆಂದರೆ ಅವರ ನೆನಪಿನ ಶಕ್ತಿ ಹಾಗೂ ಎದುರಾಳಿ ಎಲ್ಲಿ ತಪ್ಪು ಮಾಡುತ್ತಿದ್ದಾರೆ ಎಂದು ಗುರುತಿಸುವ ಅವರ ಅಗಾಧ ಬುದ್ಧಿ ಶಕ್ತಿಯ ಬಗ್ಗೆ ಹೇಳಬೇಕೆಂದರೆ, ಒಂದು ದಿವಸ ಒಂದು ಮಹತ್ವದ ಕೇಸು Acc ಸಿಮೆಂಟ್ ಫ್ಯಾಕ್ಟರಿಯವರು ರೇಲ್ವೆ ಇಲಾಖೆ ಮೇಲೆ ಹೂಡಿದ್ದ ಲುಕ್ಸಾನುಭರ್ತಿಯ ಪ್ರಕರಣ. ಅಂದು ಸಿವಿಲ್ ನ್ಯಾಯಾಲಯದಲ್ಲಿತ್ತು. Acc ಪರ ಸಾಕ್ಷಿ ಬಂದಿದ್ದು ಮಾಮ ಪಾಟೀ ಸವಾಲು ಮಾಡಬೇಕಿತ್ತು. ಆದರೆ ಆ ಮಹತ್ವ ಕೇಸಿನ ಫೈಲ್ ನಾನು ಮನೆಯಲ್ಲಿ ಮರೆತು ಬಂದಿದ್ದೆ. ಬೇಗ ಮನೆಗೆ ಹೋಗಿ ಫೈಲ್ ತರ್ತೀನಿ "ಎಂದೆ". ಬೇಡ ಎಂದ ಮಾಮ. ಎದುರಿನಲ್ಲಿದ್ದ ಯಾರದೋ ಫೈಲ್ ಹಿಡಿದು ಏಕಚಿತ್ತರಾಗಿ ವಾದಿ ಪರ ಸಾಕ್ಷಿಯ ಹೇಳಿಕೆ ಕೇಳುತ್ತಾ ತಾವು

ಕೌಂಟರ್ ರಿಟರ್ನ್ ಸ್ಟೇಟ್‌ಮೆಂಟ್ ಕೊಟ್ಟ ಅಂಶಗಳನ್ನು ನೆನಪಿಸಿಕೊಂಡು ಸಾಕ್ಷಿಯನ್ನು ಪಾಟಿ ಸವಾಲು ಮಾಡಿದ ರೀತಿಯನ್ನು ನಾನೆಂದೂ ಮರೆಯಲು ಸಾಧ್ಯವಿಲ್ಲ.

ಮಾಮಾ ಅವರು, ಕೋರ್ಟಿನಲ್ಲಿ ಎಂದೂ ಅನುಚಿತವಾಗಿ ನಡೆದುಕೊಂಡದ್ದು ನಾನು ನೋಡಲಿಲ್ಲ. ಅವರು ವಾದ ಮಾಡಲು ನಿಂತರೆ ಕೋರ್ಟ್ ಹಾಲ್ ಕಿಕ್ಕಿರಿದು ಹೋಗುತ್ತಿತ್ತು. ನಾನೆಂಥ ಭಾಗ್ಯಶಾಲಿ ಎನಿಸುತ್ತಿತ್ತು. ಬೇರೆಯ ಸಹ ಜ್ಯೂನಿಯರ್ಸ್ ಕರಬುತ್ತಿದ್ದರು. ಅವರು ಬಹಳ ಜನ ಜ್ಯೂನಿಯರ್ಸ್ ಇಟ್ಟುಕೊಂಡಿರಲಿಲ್ಲ. ೪-೫ ಜನ ಮಾತ್ರ. ಆದರೆ ತಮ್ಮ ವಿದ್ಯೆಯನ್ನೆಲ್ಲ ಎಲ್ಲ ಜ್ಯೂನಿಯರ್ಸ್‌ಗೆ ಧಾರೆ ಎರೆದರು. ಮುಂದೆ ಅವರೆಲ್ಲ ಶ್ರೇಷ್ಠ ವಕೀಲರೆನಿಸಿ ತಮ್ಮ ಆದರ್ಶಗಳನ್ನೇ ಎತ್ತಿಹಿಡಿದು ಹಣ, ಕೀರ್ತಿ ಗಳಿಸಿದ್ದನ್ನು ತಮ್ಮ ಜೀವಿತ ಕಾಲದಲ್ಲೇ ಕಂಡು ಸಂತೃಪ್ತಿಪಟ್ಟರು. ನಾವು ಜ್ಯೂನಿಯರ್ಸ್‌ರನ್ನು ಕೂಡಿಸಿಕೊಂಡು ಕೇಸಿನ ಬಗ್ಗೆ ಚರ್ಚೆ ಮಾಡುತ್ತಿದ್ದರೆ ಸಮಯದ ಪರಿವೆಯೇ ಇರುತ್ತಿರಲಿಲ್ಲ. ರಾತ್ರಿ ೧೨-೧ ರ ವರೆಗೆ ಚರ್ಚಿಸುತ್ತಿದ್ದೆವು. ಮಾಮ ಅವರು ನನ್ನನ್ನು ಒಬ್ಬ ಒಳ್ಳೆಯ ವಕೀಲನನ್ನಾಗಿ ಮಾಡಲು ಎಲ್ಲ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದರು. ಅವರು ಹೇಳಿ ಕೊಡುತ್ತಿದ್ದುದಲ್ಲದೆ ಬೇರೆಯವರಿಂದ ಕಲಿಯಲು ಇರುವ ಅವಕಾಶವನ್ನು ಕೂಡ ಅಸೂಯೆಯಿಲ್ಲದೇ ಒದಗಿಸಿಕೊಡುತ್ತಿದ್ದರು. ನನ್ನ ವಕೀಲಿಯ ಆರಂಭದ ದಿನದಲ್ಲಿ ನಡೆದ ಒಂದು ಘಟನೆ ಅವರ ವಿಶಾಲ ಉದಾರ ಮನೋಭಾವಕ್ಕೆ ಸಾಕ್ಷಿಯೆಂದರೆ, ನಾನು ದಿನಂಪ್ರತಿಯಂತೆ ಕೋರ್ಟ್‌ನಲ್ಲಿ Calling work ನಲ್ಲಿ ತಲ್ಲೀನನಾಗಿದ್ದೆ. ಮಾಮಾ ಅಂದು ಕೋರ್ಟಿಗೆ ಬೇಗ ಬಂದು ನನ್ನನ್ನು ಕರೆದು ಇಂದು ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಹಿರಿಯ ವಕೀಲರಾದ ಗುಲಾಮ್ ಹಾಫೀಜ್‌ಖಾನ್‌ರವರು Finger print expert ನ್ನ ಪಾಟಿ ಸವಾಲು ಮಾಡುವವರಿದ್ದಾರೆ. ಅವರು ಪಾಟೀ ಸವಾಲು ಮಾಡುವ ರೀತಿ ಮತ್ತು ಅವರಿಗೆ ಆ ವಿಷಯದಲ್ಲಿರುವ ಪ್ರತಿಭೆ ಗಮನಿಸು. ನೀನೂ ಹಾಗಾಗಬೇಕು. ನೀನು ಹೋಗು ಆ ಕೇಸು ಗಮನಿಸು ನಾನು ನಿನ್ನ ಈ ಕೆಲಸ ಮಾಡುತ್ತೇನೆ" ಎಂದು ನನ್ನನ್ನು ಕಳುಹಿಸಿದರು. ಹೀಗೆ ತಾವು ಹೇಳಿಕೊಡುವುದಲ್ಲದೇ ಬೇರೆಯವರಲ್ಲಿದ್ದ ಪ್ರತಿಭೆಯನ್ನು ಗುರುತಿಸಿ ಅವರಿಂದಲೂ ಕಲಿಯಲು ಅನುವು ಮಾಡಿಕೊಟ್ಟಿದ್ದು ನಾನು ಮರೆಯಲು ಸಾಧ್ಯವೇ? ಎಂದೆಂದಿಗೂ ನಾನು ಋಣಿ.

ಅದರಂತೆ ಅವರ ಅಗಾಧ ಬುದ್ಧಿಶಕ್ತಿಯ ಮಟ್ಟವನ್ನು ಯಾರಿಂದಲೂ ಅಳೆಯಲು ಸಾಧ್ಯವಿಲ್ಲ. ಒಂದು ಉದಾಹರಣೆ ಎಂದರೆ ನೂತನ ವಿದ್ಯಾಲಯದ ವಿದ್ಯಾರ್ಥಿಗಳ ಆಟದ ಮೈದಾನದ ಕೇಸು. ಆ ಕೇಸನ್ನು ಅವರು ನಡೆಸಿದ ಚಾಕಚಕ್ಯತೆ, ಬುದ್ಧಿ, ಮುಂದಾಲೋಚನೆ ಇಲ್ಲಿ ಸ್ಮರಿಸುವುದು ಸೂಕ್ತ. ನೂತನ ವಿದ್ಯಾಲಯಕ್ಕೆ ಸಂಬಂಧಪಟ್ಟ ಆ ಆಟದ ಮೈದಾನ, ಬೇರೆಯವರು ಅದು ತಮಗೆ ಸೇರಿದ್ದೆಂದು ಹೇಳಿ ಆ ಸ್ಥಳದಲ್ಲಿ ಆಸ್ಪತ್ರೆ ಕಟ್ಟುವ ಹುನ್ನಾರದಿಂದ ಅಡಿಗಲ್ಲು ಸಮಾರಂಭವನ್ನೇರ್ಪಡಿಸಿ, ಆಗಿನ ಕೇಂದ್ರೀಯ ಮಂತ್ರಿಗಳಾಗಿದ್ದ ಶ್ರೀ ವೀರೇಂದ್ರ

ಪಾಟೀಲರನ್ನು ಉದ್ಘಾಟಕರನ್ನಾಗಿ ಕರೆಸುವ ಕಾರ್ಯಕ್ರಮ ಏರ್ಪಡಿಸಿದ್ದರು. ಆ ಸಮಾರಂಭಕ್ಕೆ ಇನ್ನಿತರ ಮಂತ್ರಿಗಳು ಹಾಗೂ ಗಣ್ಯ ವ್ಯಕ್ತಿಗಳು ಕೂಡ ಬರುವವರಿದ್ದರು. ನೂತನ ವಿದ್ಯಾಲಯದ ಕಾರ್ಯಕಾರಿ ಮಂಡಳಿ ತಮ್ಮ ಸಂಸ್ಥೆಯ ಜಾಗ ಉಳಿಸಿಕೊಡುವಂತೆ ಕೋರಿ ಮಾಮ ಅವರಲ್ಲಿ ಬಂದರು. ಮಾಮ ನೂತನ ವಿದ್ಯಾಲಯದ ಪರವಾಗಿ ತಡೆಯಾಜ್ಞೆ ಹಾಗೂ ಸ್ಥಳ ಸ್ವಾಧೀನತೆಗೆ ಧಕ್ಕೆ ಬಾರದಂತೆ ಆದೇಶ ಕೂಡ ಕೋರಿದ್ದರು. ಪ್ರತಿವಾದಿಗಳು ಹಾಜರಾಗಿ ಸದರಿ ಜಾಗ ತಮಗೆ ಸಂಬಂಧಿಸಿದ್ದಾಗಿ ಮಧ್ಯಂತರ ಆದೇಶಕೊಡಕೂಡದೆಂದು ಮತ್ತು ನಿಗದಿತ ಕಾರ್ಯಕ್ರಮಕ್ಕೆ ಕೇಂದ್ರೀಯ ಮಂತ್ರಿಗಳು ಬರುತ್ತಿರುವುದರಿಂದ ಬಹಳ ತೊಂದರೆಯಾಗುವುದಾಗಿ ತಕರಾರು ಸಲ್ಲಿಸಿದ್ದರು. ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಕೋರ್ಟಿನ ಮಧ್ಯಂತರ ಆದೇಶ ಯಾರ ಪರವಾಗಿಯಾದರೂ ಗಲಾಟೆಯಾಗುವ ಸಂಭವವಿತ್ತು. ಆಗ ಮಾಮಾ ಅವರು ವಾದ ಮಂಡಿಸುತ್ತ ನ್ಯಾಯಾಲಯಕ್ಕೆ ಪ್ರತಿವಾದಿಗಳು ನ್ಯಾಯಾಲಯದ ಪರವಾನಿಗೆಯಲ್ಲಿ ಕಾರ್ಯಕ್ರಮ ನೆರವೇರಿಸಲು ತಮ್ಮ ಅಭ್ಯಂತರವೇನೂ ಇಲ್ಲವೆಂದೂ ಮತ್ತು ಕಾರ್ಯಕ್ರಮ ಮುಗಿದ ನಂತರ ಪೂರ್ವಸ್ಥಿತಿಯಲ್ಲಿ ಬಿಟ್ಟುಕೊಡಬೇಕೆಂದು ಮನವಿ ಮಾಡಿದರು. ನನ್ನ ಸೀನಿಯರ್‌ರವರು ಮಾಡಿದ ಮನವಿಯನ್ನು ಪ್ರತಿವಾದಿಗಳು ಆಶ್ಚರ್ಯದಿಂದ ತಕ್ಷಣ ಒಪ್ಪಿ ಅದರಂತೆ ಆದೇಶ ಮಾಡಲು ತಮ್ಮ ಅಭ್ಯಂತರವಿಲ್ಲವೆಂದು ಕೋರ್ಟಿಗೆ ಹೇಳಿದರು. ನೂತನ ವಿದ್ಯಾಲಯದ ನೂತನ ಪದಾಧಿಕಾರಿಗಳು ಅವಾಕ್ಕಾಗಿ "ಕುಸುಮಾಕರ ದೇಸಾಯಿ ಹೀಗೇಕೆ ಮಾಡಿದರು" ಎಂದು ಸಿಟ್ಟಾಗಿ ಕೋರ್ಟಿನಿಂದ ಹೊರನಡೆದರು. ನ್ಯಾಯಾಲಯವು ಅದರಂತೆ ಆದೇಶ ಮಾಡಿದಾಗ ಪ್ರತಿವಾದಿಗಳು ಬಹಳ ಸಂತೋಷದಿಂದ ಕೇಸು ಗೆದ್ದುಬಿಟ್ಟೆವೆಂಬಂತೆ ಸಂಭ್ರಮದಿಂದ ಹೊರನಡೆದರು. ಈ ವಿಚಾರ ಎಲ್ಲ ಪ್ರಮುಖ ದಿನ ಪತ್ರಿಕೆಗಳಲ್ಲಿ ಪ್ರಕಟವಾಯಿತು. ನನಗೆ ಕೂಡಾ ಮಾಮಾ ಹೀಗೇಕೆ ಮಾಡಿದರು? ಹಾಗೇಕೆ ಕೋರ್ಟಿಗೆ ಮನವಿ ಮಾಡಿದರು? ನನಗೆ ತಳ-ಬುಡ ಅರ್ಥವಾಗಲಿಲ್ಲ. ಒಂದು ತರಹದ ಅಪಮಾನ ನನಗೇ ಆಯಿತೆಂಬಂತೆ ನನ್ನ ಮುಖವಾಗಿತ್ತು. ಮಾಮಾನ್ನ ದಿಟ್ಟಿಸಿದೆ. ಅದೇ ತಿಳಿನಗು, ಅದೇ ಆತ್ಮವಿಶ್ವಾಸ ಅವರ ಮುಖದಲ್ಲಿ. ಕೊಂಚವೂ ವಿಚಲಿತರಾಗದೇ ಕೋರ್ಟ್ ಹಾಲ್‌ನಿಂದ ಹೊರ ನಡೆದರು. ಅಂದು ರಾತ್ರಿ ಮನೆಯಲ್ಲಿ ಯಥಾಪ್ರಕಾರ ಈ ಕೇಸಿನ ಬಗ್ಗೆ ಚರ್ಚೆಗೆ ಕುಳಿತಿದ್ದೆವು. ಅತ್ತಿ ಮಾತ್ರ ಮಾಮಾನ್ನ ಅಭಿಮಾನದಿಂದ ನೋಡುತ್ತಿದ್ದಳು. ಅಷ್ಟರಲ್ಲಿ ನೂತನ ವಿದ್ಯಾಲಯದ ಹಿತೈಷಿಗಳು ಮತ್ತು ಕಾರ್ಯಕಾರಿ ಸಮಿತಿಯವರು ಫೋನ್ ಮಾಡಿ ತಮ್ಮ ಅಸಮಾಧಾನ ವ್ಯಕ್ತಪಡಿಸಿ ಹೀಗೇಕೆ ಮಾಡಿದಿರಿ ಎಂದು ಪ್ರಶ್ನಿಸಿದರು. ಅದಕ್ಕೆ ಮಾಮಾ "ಕಾದು ನೋಡಿ ನೀವೇನೂ ಯೋಚನೆ ಮಾಡಬೇಕಿಲ್ಲ. ನಾಳೆ ಈ ಕಾರ್ಯಕ್ರಮ ನಡೆಯುವುದಿಲ್ಲ" ಎಂದು ಧೈರ್ಯ ಹೇಳಿದರು. ನನಗೆ ಕಾರ್ಯಕ್ರಮ ನಡೆಯುವುದಿಲ್ಲ ಎಂದು ಧೈರ್ಯಹೇಳಿದ್ದು ಆಶ್ಚರ್ಯವಾಗಿತ್ತು. ಏಕೆಂದರೆ

ಇವರೇ ಕಾರ್ಯಕ್ರಮ ನಡೆಸಲು ತಮ್ಮ ಅಭ್ಯಂತರವಿಲ್ಲವೆಂದು ಕೋರ್ಟಿನಲ್ಲಿ ಹೇಳಿದ್ದರು. ಆದರೆ ಪತ್ರಿಕೆಯಲ್ಲಿ ಕೋರ್ಟಿನ ಆದೇಶ ಪ್ರಕಟವಾದ ಮರುದಿನ ಪ್ರಮುಖ ಉದ್ಘಾಟಕರಾಗಿ ಬರಬೇಕಾದ ಮಂತ್ರಿಗಳು ಗುಲ್ಬರ್ಗಾಕ್ಕೆ ಬಂದಿದ್ದರೂ ಕೂಡಾ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲವೆಂದು ಹೇಳಿದ್ದರಿಂದ ಇಡೀ ಕಾರ್ಯಕ್ರಮ ಸದ್ದು ಗದ್ದಲವಿಲ್ಲದೇ ರದ್ದಾಯಿತು. ಈ ಬೆಳವಣಿಗೆ ಅರ್ಥವಾಗದೇ ನಾನು ಮಾಮ ಅವರನ್ನು ಇದರ ಮರ್ಮವೇನೆಂದು ವಿಚಾರಿಸಿದಾಗ ಕೋರ್ಟಿನಲ್ಲಿ ವಿವಾದಕ್ಕೊಳಪಟ್ಟ ಸ್ಥಳದಲ್ಲಿ ಕಾರ್ಯಕ್ರಮದಲ್ಲಿ ಯಾವುದೇ ಮಂತ್ರಿಗಳು ಭಾಗವಹಿಸಲು ಬರುವುದಿಲ್ಲವೆಂದು ಹೇಳಿದರು. ಮತ್ತು ಈ ಕಾರಣಕ್ಕಾಗಿಯೇ ಅವರು ಅಂದು ನ್ಯಾಯಾಲಯದಲ್ಲಿ ಆ ರೀತಿ ವಾದ ಮಂಡಿಸಿದ್ದಾಗಿ ಹೇಳಿದರು. ಇದರಿಂದ ಅವರ ಅಮೋಘ ಬುದ್ಧಿಮಟ್ಟದ ಅರಿವಾಗುತ್ತದೆ. ಅವರ ಮುಂದಾಲೋಚನೆ ತಿಳಿದುಬರುತ್ತದೆ.

'ಸಂಜೀವಿನಿ'ಯಲ್ಲಿ ನನ್ನ ಮಾಮನ ಸೋದರ ಮಾವನ ಮಕ್ಕಳೂ ಇದ್ದರು. 'ಸಂಜೀವಿನಿ'ಯ ಸದಸ್ಯಳಾಗಿದ್ದ ಅವರ ಮಾಮನ ಮಗಳಾದ ಸುಜಾತಳ ನನ್ನ ಮದುವೆ 1987 ರಲ್ಲಿ ನಿಶ್ಚಯವಾದಾಗ ತಂದೆ-ತಾಯಿಗಳಾಗಿ ಸುಜಾತಳನ್ನು ನನಗೆ ಧಾರೆ ಎರೆದು ಕೊಡಲು ಮಾಮಾ ಮತ್ತು ಅತ್ತೆ ಹಸೆಮಣೆಯ ಮೇಲೆ ಕೂಡಲು ಒಪ್ಪಿಸಿದರು ಶಿಷ್ಯನನ್ನು ಅಳಿಯನನ್ನಾಗಿ ಪಾದ ತೊಳೆಯುವ ಪ್ರಸಂಗ! ನಾನು ನಾಚಿ ನೀರಾದೆ. ಮದುವೆಯಲ್ಲಿ ಮಾಮಾ ನಗೆಯ ಬಾಣ ಬಿಡುತ್ತ ಹೇಳಿದ್ದರು. "ನೋಡ್ರೆಪ್ಪಾ ಎಲ್ಲರೂ ಹುಷಾರಾಗ್ರಿ.... ನಿಮಗೆ ಬೆಳೆದ ಮಗಳಿದ್ದಲ್ಲಿ, ವಕೀಲಿ ವೃತ್ತಿಗೆ ಬರುವ ಶಿಷ್ಯನನ್ನು ಪಡೆಯುವಾಗ ಎಚ್ಚರ ವಹಿಸಿರಿ". ಕಾಶೀಯಾತ್ರೆ, ಪಾದ ತೊಳೆಯುವ ಸಂದರ್ಭ ಬಂದದ್ದು ನಾನು ಮುಜುಗರ ಪಟ್ಟುಕೊಂಡಿದ್ದು ಇನ್ನೂ ಮರೆಯಲು ಸಾಧ್ಯವಾಗುತ್ತಿಲ್ಲ.

ಮತ್ತೊಂದು ಮರೆಯಲಾರದ ವಿಷಯವೆಂದರೆ ಅಷ್ಟು ಆತ್ಮವಿಶ್ವಾಸ ಧೈರ್ಯದಿಂದ ಜೀವನ ಎದುರಿಸುತ್ತಿದ್ದ ಮಾಮಾ, ತಮ್ಮ ಸ್ವಂತದ ಪ್ರಕರಣಕ್ಕೆ ತುಂಬಾ ನೊಂದಬಿಟ್ಟಿದ್ದರು. ತಮ್ಮ ತಂದೆ ಮಾಡಿದ್ದ ವಿಲ್ ಕೇಸು ಅದರಲ್ಲಿ ಅವರನ್ನು ಎಕ್ಸಿಕ್ಯೂಟಿವ್ ಆಗಿ ಮಾಮನ್ನ ಅವರ ತಂದೆ ನೇಮಿಸಿ ತೀರಿಕೊಂಡಾಗ ಆ ವಿಲ್ ಪ್ರಕಾರ ತಂದೆಯ ಕರ್ತವ್ಯ ನಿಭಾಯಿಸುವಲ್ಲಿ ತೊಡಗಿದ್ದ ಅವರಿಗೆ ಅವರ ಅಣ್ಣನ ಮಗ ಕೋರ್ಟ್ ಕಟ್ಟೆ ಹತ್ತಿದ್ದು ಹೆಚ್ಚಿನ ಆಘಾತ. ಆ ಪ್ರಕರಣ ಹೈಕೋರ್ಟ್ ಕಂಡು, ಪುನಃ ಹೈಕೋರ್ಟ್‌ನಲ್ಲಿ ಇತ್ಯರ್ಥವಾಗದೇ ಬರೀ ಮುಂದೂಡಲ್ಪಟ್ಟಾಗಲೆಲ್ಲ ನಾನು ಅತ್ತಿ ಅವರನ್ನು ಸಂಭಾಳಿಸುವುದೇ ಕಷ್ಟವಾಗಿತ್ತು. ಅದೊಂದು ಅವರಿಗೆ ಅಗ್ನಿಪರೀಕ್ಷೆಯಾಗಿತ್ತು. ಸಿವಿಲ್ ಜಡ್ಜ್ ಕೋರ್ಟ್‌ನಲ್ಲಿ ವಾದ ಮಂಡಿಸುವ ಜವಾಬ್ದಾರಿಯನ್ನು ಮಾಮಾ ನನಗೊಪ್ಪಿಸಿದ್ದಾಗ ನಾನು ಅವರ ನಿರೀಕ್ಷೆಗೆ ಮೀರಿ ಕೆಲಸ ಮಾಡಿ ಜಯಗಳಿಸಿದೆ. ಮಾಮಾಗೆ ನನ್ನ ಮೇಲೆ ಅತೀವ ಮಮಕಾರ, ಹೆಮ್ಮೆ ಪ್ರಕರಣ ಹೈಕೋರ್ಟ್‌ಗೆ

ಬಂದಾಗ ಮಾಮಾ ಎರಡೆರಡು ಬೈಪಾಸ್ ಸರ್ಜರಿಗೆ ಒಳಪಟ್ಟು ಮಾನಸಿಕವಾಗಿ ಜರ್ಜರಿತರಾಗಿದ್ದರೂ, ಲವಲವಿಕೆಯಿಂದಲೇ ಇದ್ದರು.

ಮಾಮಾ ಅವರಿಗೆ ಸಮಾಜದ ಬಗ್ಗೆ ಇದ್ದ ಕಾಳಜಿ ಅಪಾರ. ಸದಾ ಅವರು ತಮ್ಮನ್ನು ಸಮಾಜದ ಕಾರ್ಯಕ್ಕೆ ತೊಡಗಿಸಿಕೊಳ್ಳಲು ಇಷ್ಟಪಡುತ್ತಿದ್ದರು. ಅವರಿಂದ ಧನಸಹಾಯ ಪಡೆದ ವಿದ್ಯಾರ್ಥಿಗಳಿಗೆ ಲೆಕ್ಕವಿಲ್ಲ. ಸಹಾಯಕೋರಿ ಬಂದವರಿಗೆ ತಮ್ಮ ಕಷ್ಟ ಎಷ್ಟೇ ಇರಲಿ ಬಂದವರನ್ನು ಬರಿಗೈಯಲ್ಲಿ ಕಳಿಸುತ್ತಿರಲಿಲ್ಲ. ಅವರು ಜೀವನದಲ್ಲಿ ಪಾಲಿಸಿಕೊಂಡು ಬಂದ ಆದರ್ಶಗಳಿಗಾಗಿ ಕೆಲವೊಮ್ಮೆ ನಿಷ್ಠುರರಾಗಿರುತ್ತಿದ್ದರು. ಇದರಿಂದ ಅವರು ಹೊರ ಜಗತ್ತಿಗೆ ಕಠೋರರಾಗಿ ಕಂಡರೂ ಹೃದಯದಿಂದ ಬಹು ಮೃದು ಸ್ವಭಾವದವರಾಗಿದ್ದರು. ಅವರ ಬೈಪಾಸ್ ಸರ್ಜರಿ ಸಮಯದಲ್ಲಿ ಅವರ ಅನಾರೋಗ್ಯ ಸುದ್ದಿ ತಿಳಿದಾಗ ಅವರು "ಕಿಟ್ಟಿನ್ನ ಕರೆಸು" ಎಂದು ನೆನೆಸುವರೆಂದು ತಿಳಿದು ನಾನು ಗದ್ಗದಿತನಾದೆ. ನಾನು ಅವರ ಹೃದಯಕ್ಕೆ ಅಷ್ಟು ಸಮೀಪದವನಾಗಿಬಿಟ್ಟೆ ಎಂಬುದೇ ನನಗೀಗ ಉಳಿದಿರುವ ಸಮಾಧಾನ. ಅವರು ಹಾಕಿಕೊಟ್ಟ ವೃತ್ತಿಯ ಆದರ್ಶಗಳೇ ಇಂದು ನಾನು ಯಶಸ್ವಿ ವಕೀಲನಾಗಲು ಕಾರಣವಾಗಿದೆ. ಅಂತಹ ನನ್ನ ಗುರುಗಳು ಹಾಗೂ ಪ್ರೀತಿಯ ಮಾಮ ನಮ್ಮನ್ನಗಲಿರುವುದು ತುಂಬಲಾರದ ಹಾನಿಯಾಗಿದೆ ಹಾಗೂ ವಯಕ್ತಿಕವಾಗಿ ಒಂದು ದಿವ್ಯ ಚೇತನವನ್ನು ಕಳೆದುಕೊಂಡು ಬರಿದು ಬರಿದು ಎನಿಸುತ್ತಿದೆ.

ನನ್ನ ಮೊದಲ ಗುರು

❁ ಅರುಂಧತಿ ವಿ. ಕುಲಕರ್ಣಿ,

ನನ್ನ ಮತ್ತು ಶ್ರೀ ದೇಸಾಯಿಯವರ ಪ್ರಥಮ ಭೇಟಿ ೮೮ರ ಜುಲೈ ಕೊನೆ ವಾರದಲ್ಲಿ ಎಂದು ಹೇಳಬಹುದು. ನಾನು ಆ ದಿನ ಶ್ರೀಮತಿ ಸರಿತಾ ದೇಸಾಯಿಯವರನ್ನು ಭೇಟಿಯಾಗಲು ಮತ್ತು ಅವರಲ್ಲಿ ಜೂನಿಯರ್ ವಕೀಲಳಾಗಿ ಸೇರ್ಪಡೆ ಹೊಂದುವ ವಿಚಾರವಾಗಿ ಅನುಮತಿ ಪಡೆಯಲು ಹೋಗಿದ್ದೆ. ಆದರೆ ಸರಳ ಮುಗ್ಧ ಸ್ವಭಾವದ ಶ್ರೀ ಕುಸುಮಾಕರ ದೇಸಾಯಿಯವರ ಮೊದಲ ಪರಿಚಯ ನನಗೆ ಯಾವುದೇ ಸಂಕೋಚ, ಭೀತಿ ಅಥವಾ ಮುಜುಗರ ತರದೇ ತುಂಬಾ ಆತ್ಮೀಯವಾಗಿತ್ತು. ಅದೇ ಮೊದಲ ಭೇಟಿ ಎಂಬ ಭಾವನೆ ಬಗದೇ ಒಂದೇ ಕುಟುಂಬದ ಒಬ್ಬ ಸದಸ್ಯರ ಭೇಟಿಯಾದಂತೆ ಮನಸ್ಸಿಗೆ ತುಂಬಾ ಮುದ ನೀಡಿತು.

ನಾನು ಜ್ಯೂನಿಯರಶಿಪ್‌ಗಾಗಿ ಶ್ರೀಮತಿ ಸರಿತಾ ದೇಸಾಯಿಯವರ ಹತ್ತಿರ ಇದ್ದರೂ ನನ್ನ ಮೊದಲ ಗುರುಗಳು ಶ್ರೀ ದೇಸಾಯಿಯವರೇ. ಇಂದು ನಾನು ಏನಾದರೂ ಅಲ್ಪವಾದರೂ ಸಾಧಿಸಿದ್ದರೆ ಅದರ ಮೊದಲ ಕಾಣಿಕೆ ಶ್ರೀ ದೇಸಾಯಿಯವರಿಗೆ ಸಲ್ಲುತ್ತದೆ. ಸರಿಯಾಗಿ ಕೆಲಸ ನಡೆಸಿದಾಗ ಕೂಡಲೇ ಹೊಗಳುತ್ತಿದ್ದರು. ಅದೇ ತಪ್ಪಾದಾಗ ನಯವಾಗಿ ತಿದ್ದುತ್ತಿದ್ದರು. ಮೊದಲ ದಿನವೇ ಕೌಟುಂಬಿಕ ಪ್ರಕರಣದಲ್ಲಿ ನನ್ನಿಂದ ದಾವಾ ಬರೆಸಿದ್ದು ಅಲ್ಲದೇ ಮಧ್ಯಂತರ ಅರ್ಜಿಯ ಮೇಲೆ ವಾದ ಮಾಡಲು ಹೇಳಿ ಹುರಿದುಂಬಿಸಿದ್ದರು. ಒಟ್ಟಿನಲ್ಲಿ ನನ್ನನ್ನು ಜ್ಯೂನಿಯರ್ ಎಂದು ಪರಿಗಣಿಸದೇ ಮಗಳಂತೆ ನೋಡಿಕೊಳ್ಳುತ್ತಿದ್ದರು.

ಅವರ ಇನ್ನೊಂದು ವಿಷಯ ನನಗೆ ಬಹಳ ಪರಿಣಾಮ ಬೀರಿದ್ದೆಂದರೆ ದೇಸಾಯಿಯವರ ಮತ್ತು ಅವರ ಶ್ರೀಮತಿಯವರ ಸುಮಧುರ ದಾಂಪತ್ಯ. ಸತಿಪತಿಗಳ ಮಾತು, ನಗು ಒಬ್ಬರ ಮೇಲೆ ಇನ್ನೊಬ್ಬರಿಗೆ ಇದ್ದ ಅಪಾರ ಪ್ರೀತಿ ಕಾಳಜಿ ತುಂಬಾ ಮೆಚ್ಚುವಂಥದ್ದು. ಮತ್ತು ಈ ಕಾಲದಲ್ಲಿ ಇಂಥವರು ಕಾಣಸಿಗುವುದು ತುಂಬಾ ವಿರಳ. ರಾಜಕೀಯದಲ್ಲಿಯ ಅವರ ಆಳವಾದ ಅನುಭವ, ವೈಚಾರಿಕತೆ, ಸರಳತೆ ಒಂದೇ ಎರಡೇ, ಅವರ ಮಾತುಗಳನ್ನು ಕೇಳುತ್ತಾ ಕುಳಿತರೆ ವೇಳೆ ಸರಿದುದೇ ತಿಳಿಯುತ್ತಿರಲಿಲ್ಲ.

ಪ್ರಾಣಿಗಳ ಮೇಲೆ ತುಂಬಾ ಪ್ರೀತಿ. ದಿನಾಲು ಸಾಯಂಕಾಲ ತಮ್ಮ ಪ್ರೀತಿಯ ನಾಯಿಗಳಾದ ಜ್ಯೂಲಿ, ರಾಣಾ ಜೊತೆ ತಪ್ಪದೇ ವಾಯು ವಿಹಾರಕ್ಕೆ ಹೋಗುತ್ತಿದ್ದರು. ಊಟ ತಿಂಡಿಗಳಲ್ಲಿ ಸಹ ರುಚಿ-ಶುಚಿ, ಹಿತಮಿತ ಎಲ್ಲವೂ ಅನುಕರಣೀಯ.

ಒಂದು ಸಲವಂತೂ ಶ್ರಾವಣ ಸಂಪತ್ತು ಶುಕ್ರವಾರದಂದು ಲಕ್ಷ್ಮೀಪೂಜೆಯ ವೇಳೆಗೆ, ತಮ್ಮ ಶ್ರೀಮತಿಯವರೊಂದಿಗೆ ತಾವೂ ದನಿಗೂಡಿಸಿ ಭಾಗ್ಯದ ಲಕ್ಷ್ಮಿಬಾರಮ್ಮ ಹಾಡು ಹಾಡಿದಾಗ

ನಾನು ಆಶ್ಚರ್ಯ ಚಕಿತಳಾಗಿದ್ದೆ. ಅಷ್ಟೊಂದು ವೈವಿಧ್ಯಮಯ ಗುಣಗಳು ಅವರಲ್ಲಿದ್ದವು.

ಹೆಂಡತಿಯ ಹಂತ ಹಂತದ ಅಭಿವೃದ್ಧಿಯಲ್ಲಿ ಕ್ರಿಯಾತ್ಮಕವಾಗಿ ಸಹಕರಿಸಿ ಸ್ಪಂದಿಸಿ ಖುಷಿಪಡುತ್ತಿದ್ದರು. ಯಾರ ಬಗ್ಗೆಯೂ ಸಣ್ಣತನ, ಹಗುರ ಮಾತು, ದ್ವೇಷ ನಿಷ್ಠೂರ ಇಂಥವುಗಳು ಅವರ ಬಳಿ ಸುಳಿಯಗೊಡಲೂ ಬಿಡುತ್ತಿರಲಿಲ್ಲ. ಎತ್ತರದ ಧೀಮಂತ ವ್ಯಕ್ತಿತ್ವದಂಥದೇ ಗುಣ ಸಹ ಅವರದಾಗಿತ್ತು. ಎರಡು ಸಲದ ಹೃದಯದ ಶಸ್ತ್ರ ಚಿಕಿತ್ಸೆಗಳಿಂದ ದೇಹ ಕೃಶವಾಗಿದ್ದರೂ ಮಾತು, ನಡತೆಗಳಲ್ಲಿ ಧೀಮಂತಿಕೆಯನ್ನು ಉಳಿಸಿಕೊಂಡು ಬಂದಿದ್ದರು.

ಕೊನೇ ವೇಳೆಯಲ್ಲಿ ಬೆಂಗಳೂರಿನಲ್ಲಿ ನೆಲೆಸಿದ ಕಾರಣ ಅವರ ಅನಾರೋಗ್ಯದ ವೇಳೆಯಲ್ಲಿ ಅವರನ್ನು ಭೇಟಿಯಾಗಲು ಆಗಲಿಲ್ಲ ಎಂಬ ಕೊರಗು ಈಗಲೂ ನನ್ನಲ್ಲಿ ಉಳಿದಿದೆ. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ ಮತ್ತು ಅವರ ಆಸೆಗಳನ್ನು ಅವರ ಶ್ರೀಮತಿಯವರು ನೆರವೇರಿಸಲಿ ಎಂದು ಹಾರೈಸುವೆ.

ಶಿಷ್ಯ ವತ್ಸಲ

✿ ವಿದ್ಯಾ ಕುಲಕರ್ಣಿ

ನಾನು ಶ್ರೀಮತಿ ವಿದ್ಯಾ ಜಿ. ಕುಲಕರ್ಣಿ, ವೃತ್ತಿಯಲ್ಲಿ ವಕೀಲಳು. ನಾನು ಶ್ರೀ ಹಾಗೂ ಶ್ರೀಮತಿ, ಸರಿತಾ ದೇಸಾಯಿ ಅವರ ಶಿಷ್ಯಳು ಅಂತ ಹೇಳಲು ತುಂಬಾ ಅಭಿಮಾನವೆನಿಸುತ್ತದೆ. ಹೆಮ್ಮೆ ಎನಿಸುತ್ತದೆ.

ಶ್ರೀ ಕುಸುಮಾಕರ ದೇಸಾಯಿಯವರು ನಮ್ಮನ್ನಗಲಿ ೭-೮ ತಿಂಗಳು ಆಗಿವೆ. ಅವರ ವ್ಯಕ್ತಿತ್ವ, ವಿಚಾರಗಳು ಹಾಗೂ ಜೀವನ ಶೈಲಿ ಎಷ್ಟು ಉನ್ನತಮಟ್ಟದ್ದು ಎಂಬ ಅರಿವು ಯಾವಾಗಲೂ ಅಚ್ಚಳಿಯದೇ ಪ್ರತಿಬಿಂಬಿಸುತ್ತವೆ.

ನಾನು ೧೯೯೧ ರಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಲು ಮೊದಲ ಹೆಜ್ಜೆಯಾಗಿ, ಹಿರಿಯ ನ್ಯಾಯವಾದಿಗಳ ಕಚೇರಿಯ ಹುಡುಕಾಟದಲ್ಲಿ ಭೆಟ್ಟಿಯಾದದ್ದು ಶ್ರೀ ಹಾಗೂ ಶ್ರೀಮತಿ ಕುಸುಮಾಕರ ದೇಸಾಯಿ ಅವರನ್ನು ನನಗೆ ಪರಿಚಯಿಸಿದವರು ನಮ್ಮ ಆತ್ಮೀಯ ಸ್ನೇಹಿತೆ ಶ್ರೀಮತಿ ಸುಧಾ ಕರಲಗಿ.

ಅವರ ಮನೆಗೆ ಮೊದಲ ಸಾರಿ ಹೋದಾಗ ಸ್ವಾಗತವಾದದ್ದು, ಮುದ್ದಾದ ಎರಡು ನಾಯಿಗಳಿಂದ. ಮನದಲ್ಲಿ ಹೆದರಿಕೆ, ಕಾತರತೆಯಿಂದ ಒಳಗಡೆ ಹೋಗಲೊ ಬೇಡವೋ ಎಂಬ ಅಳುಕಿನಿಂದ ಇದ್ದಾಗ ಶ್ರೀಮತಿ ಸರಿತಾ ದೇಸಾಯಿ ಅವರು "ಬನ್ನಿ ಒಳಗಡೆ, ಅವು ಏನೂ ಮಾಡುವದಿಲ್ಲ ಹೆದರಬೇಡಿ" ಎಂದು ನಾಯಿಗಳನ್ನು ಎತ್ತಿಕೊಂಡಾಗಲೇ ಒಳಗೆ ಕಾಲಿಟ್ಟೆವು.

ಅಷ್ಟರಲ್ಲಿ ಶ್ರೀ ಕುಸುಮಾಕರ ದೇಸಾಯಿ ಅವರು ಹೊರಗಡೆ ಬಂದಾಗ, ಅವರ ಗಂಭೀರ ವ್ಯಕ್ತಿತ್ವ ಸ್ವಲ್ಪ ಗಾಬರಿ ತಂದರೂ ಅಷ್ಟೇ ಆತ್ಮೀಯನಗುವಿನೊಂದಿಗೆ ನನ್ನ ಸ್ನೇಹಿತೆ ಜೊತೆ ಮಾತನಾಡಿದಾಗ ಸ್ವಲ್ಪ ತಲೆಭಾರ (Tension) ಕಡಿಮೆಯಾಯಿತು. ಸ್ವಲ್ಪ ಹೊತ್ತಿನಲ್ಲಿಯೇ ಆತ್ಮೀಯ ವಾತಾವರಣ ಮೂಡಿಬಂತು. ನಂತರ ನಮ್ಮ ಭೇಟಿಯ ಉದ್ದೇಶದ ಬಗ್ಗೆ ಚರ್ಚೆಯಾಯಿತು. ನನ್ನ ಶಿಷ್ಯವೃತ್ತಿಯ ನಿವೇದನೆ ಮಂಜೂರು ಆಯಿತು.

ನನಗೆ ವೃತ್ತಿಯಲ್ಲಿ ತರಬೇತಿ ಕೊಡುವವರಲ್ಲಿ ದೇಸಾಯಿ ಅವರ ಪಾತ್ರ ಬಹು ಮಹತ್ವದ್ದಿದೆ. ಅತ್ಯಂತ ಉತ್ಸಾಹದಿಂದ ಓಂ. ನಾಮದಿಂದ ಪ್ರಾರಂಭಿಸಿ ನ್ಯಾಯಾಲಯದ ಕಾರ್ಯಕಲಾಪಗಳಲ್ಲಿ ನ್ಯಾಯವಾದಿಯಾಗಿ ತೊಡಗಿಸುವವರ ಹಂತದವರೆಗೆ ಶಿಕ್ಷಣ ಕೊಟ್ಟರು ಅಂದರೆ ಅತಿಶಯೋಕ್ತಿಯಾಗಲಾರದು.

ಅವರು ಹೇಳಿದ ಎರಡು ಮಾತುಗಳು ನನ್ನನ್ನು ವೃತ್ತಿಯಲ್ಲಿ ತೊಡಗಿಸಲಿಕ್ಕೆ ಹಾಗೂ ಸ್ಥಿರವಾಗಿ ನಿಲ್ಲಲು ಸಹಾಯವಾಗಿವೆ. ಮೊದಲನೆಯದಾಗಿ ಸಂಸಾರದ ಜವಾಬ್ದಾರಿಯೊಂದಿಗೆ ಶೇ. 30 ರಷ್ಟು ನಿಯಮಿತ ವೇಳೆಯನ್ನು ವಕೀಲವೃತ್ತಿಗೆ ಹಾಕಿದರೆ ಯಶಸಿಗುತ್ತದೆಂಬ ಭರವಸೆ,

ಕಾರ್ಯದಲ್ಲಿ ಉತ್ಸಾಹ ಮೂಡಿಸಿತ್ತು. "ವೃತ್ತಿಯಲ್ಲಿ ಏಕಾಗ್ರತೆ, ನಿಷ್ಠೆ, ಪ್ರಾಮಾಣಿಕತೆ ಮುಖ್ಯ. ನಿನ್ನಲ್ಲಿ ಯಾವ ಅಳುಕೂ ಬೇಡ" ಎಂದು ಧೈರ್ಯತುಂಬಿದರು.

ಶ್ರೀಮತಿ ಸರಿತಾ ದೇಸಾಯಿಯವರು ಒಂದುಸಲ ಮಧ್ಯಂತರ ಅರ್ಜಿಯ, ವಾದವನ್ನು ಮಾಡಲು ಒಪ್ಪಿಸಿದ್ದರು. ಪ್ರಥಮ ಬಾರಿ ಇದ್ದ ಕಾರಣ ನಾನು ಬಹು ಕಷ್ಟಪಟ್ಟು ತಯಾರಿಯನ್ನು ಮಾಡಿದ್ದೇ ಮಾಡಿದ್ದು, ಆದರೂ ನಾನು ದೇಸಾಯಿ ಅವರಮುಂದೆ "ಸರ್ ನನಗೆ ಏನೋ ಹೆದರಿಕೆ" ಅಂದಾಗ ಅವರ ಉತ್ತರ ಎಂದೆಂದಿಗೂ ನೆನಪಿನಲ್ಲಿಡುವಂತಹದು.

"ನೀನು ಏನೂ ಹೆದರಬೇಡ, ಧೈರ್ಯವಾಗಿ ನೀನು ಹೇಳಬೇಕಾದಂತಹ ವಿಷಯವನ್ನು ಹೇಳಿಬಿಡು, ಅವರು- ನ್ಯಾಯಾಧೀಶರು, ಕಾನೂನಿನಂತೆ ಮಾಡುತ್ತಾರೆ, ನಿನಗಂತೂ ಕಟ್ಟಿ ಹಾಕುವದಿಲ್ಲ "ಎಂದು ಹಾಸ್ಯದಿಂದ ಅಂದ ಮಾತು ನನಗೆ ಧೈರ್ಯ ಹಾಗೂ ಆತ್ಮವಿಶ್ವಾಸ ತುಂಬಲು ಸಂಪೂರ್ಣ ಸಹಾಯವಾಯಿತು.

ಶ್ರೀ ದೇಸಾಯಿ ಅವರ ಜೊತೆ ಕಾನೂನಿನ ಬಗ್ಗೆ ಚರ್ಚೆ ಮಾಡಿದಾಗ ಅವರಿಗಿರುವ ಆಳವಾದ ಜ್ಞಾನ, ಪಾಂಡಿತ್ಯ ಹಾಗೂ ಉತ್ಸಾಹ ಅಚ್ಚರಿಪಡಿಸುತ್ತಿತ್ತು. ಕಾನೂನಿನಲ್ಲಿರುವ ಆಸಕ್ತಿಯಂತೂ ಹೇಳಲು ಅಸಾಧ್ಯವಾದದ್ದು, ಅವರ ಜೊತೆ ವಿಷಯ ಚರ್ಚೆ ಮಾಡಿದಾಗೆಲ್ಲ ನಮಗೆ ಒಂದು ಕಾನೂನಿನ ವಿಷಯವನ್ನು ಹೇಗೆ ಅರ್ಥೈಸಬೇಕು. ಹಾಗೂ ವಿಷಯವನ್ನು ಎಷ್ಟು ಕೋನಗಳಿಂದ ವಿಚಾರಮಾಡಬೇಕು. ಎಷ್ಟು ಮುಂಜಾಗ್ರತೆ ವಹಿಸಬೇಕೆಂಬ ವಿಷಯದ ಬಗ್ಗೆ ಅಮೃತ-ಮಂಥನ ಆಗುತ್ತಿತ್ತು. ಕೆಲವೊಂದು ಸಲ ನನಗೆ ವೇಳೆಯ ಅಭಾವ ಇದ್ದಾಗ ತುರ್ತಾಗಿ ದೂರವಾಣಿ ಮೂಲಕ ಡಿಕ್ಟೇಶನ್ ಕೊಟ್ಟಿದ್ದಾರೆಂಬುದು ಶ್ರೀ ದೇಸಾಯಿಯವರ ಅವಶ್ಯಕತೆಗೆ ಸ್ಪಂದಿಸುವ ಸ್ವಭಾವಕ್ಕೆ ಒಂದು ನಿದರ್ಶನ.

ಶ್ರೀ ದೇಸಾಯಿ ಅವರ ಜ್ಞಾನದಾಹ ಅಪಾರವಾಗಿತ್ತು. ಅವರ ಮನೆಗೆ ವಿತರಣೆ ಆಗುತ್ತಿದ್ದ ಕನ್ನಡ, ಆಂಗ್ಲ, ಮರಾಠಿ ದೈನಿಕ ವಾರಪತ್ರಿಕೆಗಳು, ಮಾಸಿಕಗಳು ಯಾವದೇ ವಾಚನಾಲಯಕ್ಕೆ ಕಡಿಮೆಯಾಗಿರಲಿಲ್ಲ. ಅಷ್ಟೆಲ್ಲ ವಿಷಯಗಳನ್ನು ಓದಿ ಅರಗಿಸಿಕೊಳ್ಳುವದು ಕೇವಲ ಜ್ಞಾನದಾಹಿಗಳಿಗೆ ಮಾತ್ರ ಸಾಧ್ಯ. ಅದನ್ನು ನಾನು ಸ್ವಂತ ನೋಡಿಯೇ ನಂಬಿದ್ದೇನೆ.

ಈ ಜ್ಞಾನದಾಹ ಬಹುಶಃ ಅವರನ್ನು ವೈಚಾರಿಕ ಸಿದ್ಧಾಂತಕ್ಕೆ ಮತ್ತು ಸ್ವಾತಂತ್ರ್ಯ ಯೋಧನಾಗಲು ಪ್ರೇರೇಪಿಸಿರಬಹುದು. ಲೋಕಮಾನ್ಯ ಟಿಳಕರ "ಸ್ವಾತಂತ್ರ್ಯ ನನ್ನ ಜನ್ಮಸಿದ್ಧ ಹಕ್ಕು" ಸಿದ್ಧಾಂತವನ್ನು ಅವರು ಅಕ್ಷರಶಃ ತಮ್ಮಲ್ಲಿ ಅಳವಡಿಸಿಕೊಂಡಿದ್ದರು. ೭೦ರ ದಶಕದಲ್ಲಿಯ ಭೀಕರ ಕನಸು ಅನ್ನಬಹುದಾದ ಸ್ವಾತಂತ್ರ್ಯ ಹರಣದ ಸಂದರ್ಭದಲ್ಲಿ ಅದನ್ನು ಧೈರ್ಯವಾಗಿ ಧಿಕ್ಕರಿಸಿದವರಲ್ಲಿ ದೇಸಾಯಿ ಅವರು ಒಬ್ಬರು. ಅದೆಷ್ಟು ಜನರಿದ್ದರು ಆಗ? ಕೆಲವೇ ಕೆಲವು ಧೈರ್ಯಶಾಲಿಗಳು. ಈ ಭಾಗದ ಅನೇಕಾನೇಕ ರಾಜಕಾರಣಿಗಳಿಗೆ ಏನು ಸಂಭವಿಸುತ್ತಿದೆ, ಎನ್ನುವ ವಿಚಾರಕ್ಕೆ ಕೂಡ ಸ್ಪಂದಿಸುವ ಮಾನಸಿಕ, ಸಾಮಾಜಿಕ,

ವೈಚಾರಿಕತೆಯ ಗಟ್ಟಿತನವಿರಲಿಲ್ಲ. ಶ್ರೀ ದೇಸಾಯಿ ಅವರು ಸರಕಾರಕ್ಕೆ ಹಸೋ ಪ್ರತಿಭಟಿಸಿ ಜೈಲಿಗೆ ಹೋಗಿದ್ದಾರೆ ಎಂದು ಅನೇಕರು ಭಾವಿಸಿರಬಹುದು. ಆದರೆ ಈ ಕುಚೇಷ್ಟೆಯು ಬಹಳ ದಿನ ಉಳಿಯಲಿಲ್ಲ. ನಂತರ ಸಂಭವಿಸಿದ್ದು ಸರ್ವವಿದಿತ.

ಇಂತಹ ಸಂದರ್ಭವಲ್ಲಿ ಕೇವಲ ಧೈರ್ಯಶಾಲಿಗಳಷ್ಟೇ ಮಿಂಚುತ್ತಾರೆ. ಅವರ ಪ್ರತಿಭೆ ಹೊರಗೆ ಗೋಚರಿಸುತ್ತದೆ. ಈ ಪ್ರತಿಭೆ ಕೇವಲ ಸಾಂದರ್ಭಿಕವಾಗಿರುವದಿಲ್ಲ. ಇದಕ್ಕೆ ಆಳವಾದ ಮಾನಸಿಕ, ದೈಹಿಕ ಹಾಗೂ ವೈಚಾರಿಕತೆಯ ನೆಲೆಗಟ್ಟು ಅವಶ್ಯ. ಮೇಲೆ ತಿಳಿಸಿದ ಸಂದರ್ಭ ಶ್ರೀ ದೇಸಾಯಿ ಅವರ ಸಾಮಾಜಿಕ ಕಾಳಜಿಯ ಒಂದು ನಿದರ್ಶನ ಮಾತ್ರ.

ಈ ಕಾರಾಗೃಹವಾಸದಿಂದ ಅವರಿಗೆ ಅನೇಕ ಸಮಾನ ಮನಸ್ಕರ ಸಹವಾಸ, ಇತರ ರಾಜಕೀಯ ಅತಿಥಿಗಳಿಂದ ದೊರೆತು ಶ್ರೀ ದೇಸಾಯಿಯವರ ವ್ಯಕ್ತಿತ್ವ ಇನ್ನೂ ಹೆಚ್ಚಿನ ಶ್ರೇಣಿ ಹೋಗಲು ಪೂರಕವಾಯಿತು.

ಇಂತಹ ಪ್ರಕರಣಗಳ ಬಗ್ಗೆ ಶ್ರೀ ದೇಸಾಯರ "ಸಂಜೀವಿನಿ"ಗೆ ಭೆಟ್ಟಿಕೊಟ್ಟ ಶ್ರೀ ರಾಮಕೃಷ್ಣ ಹೆಗಡೆ, ಮಧು ದಂಡವತೆ, ಜಾರ್ಜ್ ಫರ್ನಾಂಡೀಸ್, ಸುರೇಂದ್ರ ಹೆಗಡೆ, ಸ್ವರ್ಗಸ್ಥ ಶ್ರೀ ಜೆ.ಎಚ್. ಪಟೇಲ ಮೋಹನ್ ಸಾದಿಕ್ ಅಲಿ, ಮುಂತಾದ ಅನೇಕ ರಾಜಕಾರಣಿಗಳು ಮನೆಗೆ ಬಂದಾಗ ಫೋಟೊ ಕಂಡಿದ್ದೆ. ಅವರ ಜ್ಯೂನಿಯರ ಆದ ಮೇಲಂತೂ ಅನೇಕ ರಾಜಕಾರಣಿಗಳು, ಸಾಹಿತಿಗಳು, ಕಲಾವಿದರು ಅವರಲ್ಲಿಗೆ ಬಂದಾಗಲೆಲ್ಲ ನಾನು, ಸುಧಾಬಾಯಿ ಅಲ್ಲಿ ಇರುತ್ತಿದ್ದೆವು. ನಾವು ಪ್ರಾಸಂಗಿಕ ಸಾಕ್ಷಿಗಳು.

ಶ್ರೀ ಕುಸುಮಾಕರ ದೇಸಾಯರು ಬಹುಭಾಷಾ ಪಂಡಿತರು. ಮರಾಠಿ, ಉರ್ದು, ಕನ್ನಡ, ಇಂಗ್ಲಿಷ್, ಹಿಂದಿ ಎಲ್ಲ ಭಾಷೆಗಳಲ್ಲಿ ಯಾವದೇ ವಿಷಯವನ್ನು ಸರಳವಾಗಿ ನಿರರ್ಗಳವಾಗಿ ಸಂಭಾಷಿಸುತ್ತಿದ್ದರು.

ಇವರು ತಮ್ಮ ದೂರದೃಷ್ಟಿಯಿಂದಾಗಿ, ಜಲಮಂಡಳಿಯ ಅಧ್ಯಕ್ಷರಿದ್ದಾಗ ಅನೇಕ ಅಡಚಣೆಗಳಿದ್ದರೂ ಗುಲ್ಬರ್ಗಾ ಮಹಾನಗರಕ್ಕೆ ಕುಡಿಯುವ ನೀರಿನ ಪೂರೈಕೆಗಾಗಿ ಭೀಮಾ ನದಿಯ ಯೋಜನೆಯನ್ನು ರೂಪಿಸಿದರು. ಅದರ ಅನುಷ್ಠಾನದಿಂದಲೇ ಗುಲ್ಬರ್ಗಾದ ಜನತೆಯ ನೀರಿನ ಅಭಾವ ನೀಗಿದೆ. ಅಂದರೆ ಇಲ್ಲಿಯ ಜನತೆ ಎಷ್ಟು ಉಪಕೃತರಿದ್ದರೂ ಕಡಿಮೆಯೇ ಅನಿಸುವದು. ಒಂದು ಭವ್ಯ ಕಟ್ಟಡದ ಬಾಳ್ವಿಕೆಗೆ ವಿನ್ಯಾಸ ನಿರ್ಮಿಸುವದಕ್ಕಿಂತ ಕರ್ತೃವಿನ ಜಾಣ್ಮೆ ಮುಂದಾಲೋಚನೆ ಮುಖ್ಯ. ಶ್ರೀ ದೇಸಾಯಿ ಅವರ ಈ ಕೊಡುಗೆ ಮಾತ್ರ ಅವಿಸ್ಮರಣೀಯ. ಅವರ ಇನ್ನೊಂದು ಕೊಡುಗೆ ಎಂದರೆ ಜಲಮಂಡಳಿಯ ದಿನಗೂಲಿ ನೌಕರರ ಸೇವೆ ಖಾಯಂ ಗೊಳಿಸಿದ್ದು.

ನನ್ನ ವಕೀಲ ವೃತ್ತಿಗೆ ಗಟ್ಟಿಯಾದ ಅಡಿಪಾಯ ಹಾಕಿದ ಶ್ರೀ ಹಾಗೂ ಶ್ರೀಮತಿ ದೇಸಾಯಿ ಅವರಿಗೆ ನಾನು ಚಿರಋಣಿ. ಅದರಷ್ಟೇ ಮಹತ್ವಪೂರ್ಣವಾದದ್ದು ಅಂದರೆ ನನ್ನನ್ನು ತಮ್ಮ

ಗುರುಸಮಾನರಾದ ಹಿರಿಯ ನ್ಯಾಯವಾದಿ ಶ್ರೀ ಕೆ.ಭೀಮಸೇನರಾವ ಅವರ ಕಡೆಗೆ ಶಿಷ್ಯವೃತ್ತಿಯನ್ನು ಮುಂದುವರಿಸಲು ಅನುವು ಮಾಡಿಕೊಟ್ಟ ಸಂದರ್ಭವು ಮರೆಯಲಾರದಂತಹದು. ದೇಸಾಯಿ ದಂಪತಿಗಳು ಅವರ ಆರೋಗ್ಯ ತಪಾಸಣೆಗಾಗಿ ಬೆಂಗಳೂರಲ್ಲಿ ನೆಲೆಸುವಾಗ ಶ್ರೀ ಭೀಮಸೇನರಾವ್ ಬಳಿ ಹೆಚ್ಚು ಕಲಿಯಲು ಕಳಿಸಿದ್ದು ಇಂದು ಸ್ವತಂತ್ರವಾಗಿ ವೃತ್ತಿಗಿಳಿದು ನನಗೂ ಜ್ಯೂನಿಯರ್ಸ್ ಬಂದಿದ್ದಾರೆಂದಾಗ ಅಕಾರ ಕಲಿಸಿದ್ದ ಆ ಗುರುಗಳನ್ನು ಹೇಗೆ ಮರೆಯಲಿ?

ಶ್ರೀ ದೇಸಾಯಿ ಅವರ ಪ್ರತಿಭೆ ಮೇರು ಪರ್ವತ ಸದೃಶ್ಯವಾದರೆ, ಶ್ರೀ ಕೆ. ಭೀಮಸೇನರಾವ ಅವರ ಪಾಂಡಿತ್ಯ ಸಜ್ಜನಿಕೆ, ಸಾಗರ ಸದೃಶ್ಯ. ಇಂತಹ ಗುರುಗಳ ಮಾರ್ಗದರ್ಶನದಲ್ಲಿ ಹಾಗೂ ನನ್ನ ಪತಿಯ ಸಹಕಾರದಿಂದ ನ್ಯಾಯವಾದಿಯಾಗಿ ಶ್ರಮಿಸುತ್ತಿದ್ದೇನೆ. ನನಗೆ ಅವರು ಕೇವಲ 'ಗುರುಗಳು' ಎಂಬ ಭಾವನೆಗಷ್ಟೇ ಸೀಮಿತಕ್ಕೆ ಉಳಿಯದೆ, ತವರು ಮನೆಯ ಪ್ರೀತಿ-ವಾತ್ಸಲ್ಯ ನೀಡಿ ತಮ್ಮ ಜೊತೆಗೆ ಊಟಕ್ಕೆ ಕರೆದೊಯ್ಯುತ್ತಿದ್ದರು. ಕೋರ್ಟಿಗೆ ಜೊತೆಗೇ ಕರೆದ್ಯೊಯ್ಯುತ್ತಿದ್ದರು. ಅಲ್ಲದೆ ಮಹಿಳೆಯರ ಹಾಗೂ ಶೋಷಿತರ ಪರವಾಗಿ ಧೈರ್ಯದಿಂದ ನೈತಿಕ ನೆಲೆಗಟ್ಟಿನಲ್ಲಿ ಸೇವೆ ಸಲ್ಲಿಸಲು ಕೊಂಚ ಸಮಯವನ್ನು ಮೀಸಲಿಡಲು ಸಹಾಯವಾಗಿದೆ. ನನ್ನ ರೇಡಿಯೋ ಭಾಷಣವಿರಲಿ ಬೇರೆ ಸಾರ್ವಜನಿಕ ಭಾಷಣವಿರಲಿ ಮೊದ ಮೊದಲು ಧೈರ್ಯ ತುಂಬಿ ಪಾಯಿಂಟ್ಸ್ ಹೇಳಿ ಹುರಿದುಂಬಿಸುತ್ತಿದ್ದ ದೇಸಾಯಿಯವರು ಎಲ್ಲ ಅರ್ಥದಲ್ಲಿ ನನಗೆ ಗುರು- ತಂದೆ ಆಗಿದ್ದರು.

ತಂದೆ-ತಾಯಿಯ ಸಮಾನರು

❁ ಮಾನವೇಂದ್ರ ರೆಡ್ಡಿ

ಶ್ರೀ ಕುಸುಮಾಕರ ದೇಸಾಯಿ ಮತ್ತು ಶ್ರೀಮತಿ ಸರಿತಾ ದೇಸಾಯಿ ಅವರು, ನನ್ನ ರಕ್ತಸಂಬಂಧಿಗಳಲ್ಲ, ಬಂಧುಗಳಲ್ಲ, ಬಳಗವೂ ಅಲ್ಲ. ಅವರ ಜಾತಿಯವರೂ ಅಲ್ಲ. ಆದರೆ, ಅವರು ನನಗೆ ಸರ್ವಸ್ವವೂ ಆಗಿದ್ದರು. ನನಗೆ ಹೆತ್ತ ತಂದೆ-ತಾಯಿಗಳಿದ್ದರೂ, ಇವರಿಬ್ಬರೂ ತಂದೆ-ತಾಯಿ ಸ್ಥಾನದಲ್ಲಿ ನಿಂತು ಪ್ರೀತಿಯ ಧಾರೆ ಎರೆದು, ಇಂದು ನಾನು, ನನ್ನ ಹೆಂಡತಿ ಈ ಸ್ಥಾನಕ್ಕೆ ಬರಲು, ಸಮಾಜದಲ್ಲಿ ಗೌರವಯುತವಾಗಿ ಬಾಳಲು ಕಾರಣರಾಗಿದ್ದಾರೆ.

ನಾನು ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ರೆಡ್ಡಿ (ಮಾನವೇಂದ್ರ ರೆಡ್ಡಿ) ಮನೆತನದವನು. ಆರ್ಯ ಸಮಾಜ ಶಿಸ್ತಿನಲ್ಲಿ ಬೆಳೆದು ಬಂದಿದ್ದು, ಓದಿದ್ದು ಹೈದರಾಬಾದಿನ ಹಿಂದಿ ಮಾಧ್ಯಮ. ಚಿಂಚೋಳಿ ತಾಲೂಕಿನಲ್ಲಿ ಹುಟ್ಟಿ ಬೆಳೆದ ಕನ್ನಡಿಗನಾಗಿದ್ದರೂ, ಕನ್ನಡ ಓದು-ಬರಹ ಬರುತ್ತಿರಲಿಲ್ಲ.

ಪದವಿ ಮುಗಿಸಿ ಕಲಬುರ್ಗಿಯಲ್ಲಿ ಎಲ್.ಎಲ್.ಬಿ. ಓದುತ್ತಿರುವಾಗ, ಶ್ರೀ ಕುಸುಮಾಕರ ದೇಸಾಯಿ ಅವರೂ ನಮಗೆ ಪಾಠ ಹೇಳುತ್ತಿದ್ದರು. ನಮ್ಮ ಪ್ರಾಚಾರ್ಯ ಶ್ರೀ ಪಂಢರಪುರಕರ ಅವರು, ಕುಸುಮಾಕರ ದೇಸಾಯಿ ಅವರನ್ನು ಪರಿಚಯ ಮಾಡಿಸಿ, "ಇವರೊಬ್ಬ ಪ್ರತಿಭಾವಂತ ಹಾಗೂ ಗೌರವಾನ್ವಿತ ವಕೀಲರು. ಇವರಿಂದ ನೀನು ಸಹಾಯ ಪಡೆದುಕೊ" ಎಂದು ಪರಿಚಯ ಮಾಡಿಕೊಟ್ಟರು.

ಅವರು ನನ್ನಲ್ಲಿ ಅದೇನು ವಿಶೇಷ ಕಂಡರೋ ಗೊತ್ತಿಲ್ಲ. ತಮ್ಮ ಮನೆಯಲ್ಲಿಟ್ಟುಕೊಂಡು ಪಾಠ ಹೇಳತೊಡಗಿದರು. ಅವರ ಮನೆಯ ಒಬ್ಬ ಸದಸ್ಯನಾಗಿ, ಊಟ-ವಸತಿ ಎಲ್ಲ ಅವರ ಮನೆಯಲ್ಲೇ ನಡೆಯಿತು. ಅವರ ಮನೆಯಲ್ಲಿ ನನ್ನಂತೆ ಅವರ ಬಂಧುಗಳು ಮತ್ತು ಕೆಲವು ವಿದ್ಯಾರ್ಥಿಗಳು ಓದುತ್ತಿದ್ದರು. ನಾನೂ ಕುಸುಮಾಕರ ದೇಸಾಯಿ ಅವರ ಮನೆಯ ಸದಸ್ಯನಾದೆ.

ಆರಂಭದಲ್ಲಿ ನನಗೆ ಮುಜುಗರವೆನಿಸಿದರೂ, ನಂತರ ಕುಸುಮಾಕರ ದಂಪತಿಗಳ ಪ್ರೀತಿಯಲ್ಲಿ ನಾನು ನನ್ನ ತಂದೆ-ತಾಯಿಗಳನ್ನೇ ಮರೆತು, ಆ ಮನೆಯ ಸದಸ್ಯನಾದೆ. ದೇಸಾಯಿ ಅವರು ನನಗೆ ಹೇಳಿಕೊಟ್ಟಿರುವ ಪಾಠ ನನ್ನ ಜೀವನದಲ್ಲಿ ಎಂದೂ ಮರೆಯುವಂತಿಲ್ಲ.

ಒಂದು ರೀತಿಯಲ್ಲಿ ನಾನು ಹಸಿ ದಡ್ಡನಾಗಿದ್ದೆ. ಹಿಂದಿ ಮಾಧ್ಯಮ ಓದಿದ್ದರಿಂದ ಇಂಗ್ಲೀಷ ತುಂಬ ದುರ್ಬಲವಾಗಿತ್ತು. ನನ್ನ ಇಂಗ್ಲೀಷ ಭಾಷೆ ಓದಿ ನಕ್ಕು, ಏನು ಮಾಡಬೇಕೆಂದು ಅವರೇ ನಿರ್ಧರಿಸಿದರು. ತಪ್ಪಾದಾಗ, ಗದರಿಸಿ ಶಾಲಾ ಮಕ್ಕಳಂತೆ ಹತ್ತತ್ತು ಸಲ ಬರೆಸತೊಡಗಿದರು. ನಾನು ಬೇಜಾರಿಲ್ಲದೇ ಅವರು ಹೇಳಿದಂತೆ ಮಾಡುತ್ತಿದ್ದೆ.

ಆರಂಭದಲ್ಲಿ ನನಗೆ ಅವರ ಗಂಭೀರ ಮುಖಮುದ್ರೆ ಕಂಡು ಹೆದರಿಕೆಯಾಗುತ್ತಿದ್ದರೂ, ನಂತರ ಅವರ ಮೃದು ಹೃದಯದ ನಿಷ್ಕಲ್ಮಷ ಪ್ರೀತಿಯ ಅರಿವಾಯಿತು. ಹಗಲು ಹೊತ್ತಿನಲ್ಲಿ

ಶಿಸ್ತಿನ ಶಿಕ್ಷಕರಾಗಿದ್ದ ದೇಸಾಯರು, ಸಂಜೆಯಾಗುತ್ತಲೇ ಅಷ್ಟೇ ಪ್ರೀತಿಯಿಂದ ತಮ್ಮೊಂದಿಗೆ ಊಟಕ್ಕೆ ಕರೆಯುತ್ತಿದ್ದರು. ಸಂಜೆ ಎಲ್ಲರನ್ನೂ ಕರೆದು, ಒಟ್ಟಿಗೇ ಊಟಕ್ಕೆ ಕೂಡುವುದು ಅವರ ಪದ್ಧತಿ. ಒಬ್ಬ ಸದಸ್ಯ ಬರಲು ತಡವಾದರೂ ಕಾಯುತ್ತಿದ್ದರು. ನನಗಂತೂ ಅವರು ಎಂದೂ ಬಿಟ್ಟು ಊಟ ಮಾಡುತ್ತಿರಲಿಲ್ಲ. ಊಟಕ್ಕೆ ಕುಳಿತಾಗ ಜಗತ್ತಿನ ಎಲ್ಲ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದರು. ಚರ್ಚೆಯಲ್ಲಿ ಎಲ್ಲರೂ ಭಾಗವಹಿಸಬೇಕು. ಯಾರಾದರೂ ಮುಖ ಸಣ್ಣಗೆ ಮಾಡಿ ಕುಳಿತರೆ, ಅವರ ಮುಖ ಅರಳುವಂತೆ ನಗಿಸುವ ಕಲೆ ಅವರಿಗೆ ಕರಗತವಾಗಿತ್ತು.

ಅವರಿಗಿರುವ ಲೋಕಜ್ಞಾನ, ಇತಿಹಾಸ, ರಾಜಕೀಯ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಕಾನೂನು ಜ್ಞಾನ ಅಪಾರ. ಜ್ಞಾಪಕ ಶಕ್ತಿಯೂ ಅಗಾಧವಾಗಿತ್ತು. ಅಲ್ಲದೇ ಅವರು ಕನ್ನಡ, ಇಂಗ್ಲೀಷ, ಹಿಂದಿ, ಉರ್ದು, ಮರಾಠಿ ಎಲ್ಲ ಭಾಷೆಗಳ ಪ್ರಭಾವ ಹೊಂದಿದ್ದರು. ಪ್ರತಿಯೊಂದು ಭಾಷೆಯ ಸಾಹಿತ್ಯದ ಮೇಲೆಯೂ ಪ್ರಭುತ್ವ ಹೊಂದಿದ್ದರು. ಎಲ್ಲವನ್ನೂ ನಮಗೆ ಹೇಳುತ್ತಿದ್ದರು. ಆದ್ದರಿಂದ ಅವರೊಂದಿಗೆ ಸಂಜೆಯ ಊಟವನ್ನು ನಾನು ಎಂದೂ ತಪ್ಪಿಸುತ್ತಿರಲಿಲ್ಲ.

ಮುಂದೆ ನನ್ನ ಎಲ್.ಎಲ್.ಬಿ. ಮುಗಿದ ನಂತರ ಮುಂದೇನು ಮಾಡಬೇಕೆಂದು ಅವರೇ ನಿರ್ಧರಿಸಿ, ಅವರ ಸಹಾಯಕ (ಜೂನಿಯರ್) ಆಗಿ ವಕೀಲಿ ವೃತ್ತಿ ಆರಂಭಿಸಿದೆ.

ಪ್ರತಿದಿನ ಯಾವ ಯಾವ ಕೇಸುಗಳನ್ನು ಹಾಜರಾಗಿ ಏನೇನು ಮಾಡಬೇಕೆಂದು ಎಲ್ಲ ತಯ್ಯಾರಿ ನನ್ನಿಂದಲೇ ಮಾಡಿಸುತ್ತಿದ್ದರು. ಕೋರ್ಟಿನಲ್ಲಿ ಹಾಜರಾಗಿ ಏನು ಮಾಡಬೇಕೆಂದು ಎಲ್ಲಾ ಹೇಳಿ ಕಳಿಸುತ್ತಿದ್ದರು. ಏನಾದರೂ ತಪ್ಪಾದರೆ ಹೇಗೆ? ಎಂಬ ಅಳುಕು ನನ್ನಲ್ಲಿರುತ್ತಿತ್ತು. ಅದನ್ನು ಮನಗಂಡ ಅವರು, “ನೀನು ಹೋಗು ನಾನು ಹೇಳಿದಂತೆ ಮಾಡು. ಮುಂದೇನಾದರೂ ಆಗಲಿ. ನಾನು ನೋಡಿಕೊಳ್ಳುತ್ತೇನೆ” ಎಂದು ಧೈರ್ಯ ತುಂಬಿ ಕಳಿಸುತ್ತಿದ್ದರು.

ತಪ್ಪಾದರೂ ನಮ್ಮಲ್ಲಿ ಬರುವ ಕಕ್ಷಿದಾರರಿಗೆ ಹಾನಿಯಾಗದಂತೆ ಮುಂದೇನು ಮಾಡಬೇಕೆಂಬುದನ್ನೂ ಹೇಳಿಕೊಡುತ್ತಿದ್ದರು. ಕಕ್ಷಿದಾರರ ವಿಶ್ವಾಸ ಎಂದೂ ಕಳೆದುಕೊಳ್ಳಬಾರದು. ಅವರಿಗೆ ನ್ಯಾಯ ದೊರಕಿಸಿಕೊಡುವುದೇ ನಮ್ಮ ಧ್ಯೇಯ ಎಂಬುದನ್ನು ಮೇಲಿಂದ ಮೇಲೆ ಹೇಳಬೇಕು. ಈ ಧೈರ್ಯವೇ ನನಗೆ ಆತ್ಮಸ್ಥೈರ್ಯದಿಂದ ಕೋರ್ಟ್ ಎದುರಿಸುವಂತೆ ಮಾಡುತ್ತಿತ್ತು.

ಅವರು ಗಂಭೀರ ಮುಖಮುದ್ರೆ ಹೊಂದಿದ್ದರೂ, ಅದರ ಹಿಂದೆ ಎಲ್ಲರನ್ನೂ ನಗಿಸುವ ಇನ್ನೊಂದು ಮುಖವಿತ್ತು. ಕೋರ್ಟಿನಲ್ಲೂ ಕೂಡ ಎಲ್ಲರನ್ನೂ ನಗಿಸುತ್ತ ಲೀಲಾಜಾಲವಾಗಿ ಮಾತಾಡುತ್ತಿದ್ದರು. ಕೋರ್ಟಿನಲ್ಲಿ ಅನೇಕ ಬಾರಿ ನ್ಯಾಯಾಧೀಶರು ಗಂಭೀರ ವಿಚಾರ ನಡೆದಾಗಲೂ, ದೇಸಾಯರ ಮಾತಿನ ಮೋಡಿಗೆ ತಾವು ನ್ಯಾಯಾಧೀಶರೆಂಬುದನ್ನು ಮರೆತು ಗೊಳ್ಳೆಂದು ನಕ್ಕದ್ದುಂಟು.

ಕಾನೂನು ಪುಸ್ತಕಗಳು ಸದಾ ಅವರ ನಾಲಿಗೆಯ ಮೇಲಿದ್ದವು. ಪುಸ್ತಕವನ್ನು ತೆಗೆಯದೇ

ಇಂಥ ಪುಟದಲ್ಲಿದೆ ನೋಡು ಎಂದು ಹೇಳುತ್ತಿದ್ದರು. ಅಂಥ ಅಗಾಧವಾದ ಜ್ಞಾಪಕಶಕ್ತಿ ಅವರದು. ನಾನು ಕಾನೂನಿನ ಎಬಿಸಿಡಿ ಕಲಿತದ್ದೇ ಅವರಿಂದ. ನನ್ನನ್ನು ಪ್ರತಿಯೊಂದು ಹಂತದಲ್ಲೂ ತಿದ್ದುತ್ತಿದ್ದರು. ಅವರನ್ನು ಕೇಳದೇ ಏನನ್ನೂ ಮಾಡದಷ್ಟು ಅವರಿಗೆ ಅವಲಂಬಿತನಾಗಿದ್ದೆ. "ನೀನು ಸ್ವತಂತ್ರವಾಗಿ ಈ ಊರಲ್ಲಿ ಒಬ್ಬ ಉತ್ತಮ ಮತ್ತು ಬುದ್ಧಿವಂತ ವಕೀಲನಾಗಬೇಕೆಂಬುದು ನನ್ನ ಅಪೇಕ್ಷೆಯಾಗಿದೆ" ಎಂದು ಹೇಳುತ್ತಿದ್ದರು.

ದೇಸಾಯಿ ಅವರು ಸ್ವಾತಂತ್ರ್ಯ ಹೋರಾಟಗಾರರು, ರಾಜಕಾರಣಿಯೂ ಆಗಿರುವುದರಿಂದ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಹಿರಿಯ ರಾಜಕಾರಣಿಗಳೊಂದಿಗೆ ಗಾಢ ಸಂಪರ್ಕ ಹೊಂದಿದ್ದರು. ಯಾವ ರಾಜಕಾರಣಿಗಳು ಬಂದರೂ, ಇವರ ಮನೆಗೆ ಬಂದು ಆತಿಥ್ಯ ಸ್ವೀಕರಿಸುತ್ತಿದ್ದರು. ರಾಮಕೃಷ್ಣ ಹೆಗಡೆ, ಎಸ್.ಆರ್. ಬೊಮ್ಮಾಯಿ ಬರುತ್ತಿದ್ದರು. ಜಾರ್ಜ್ ಫರ್ನಾಂಡಿಸ್, ಮಧುಲಿಮೆಯ, ಮಧು ದಂಡವತೆ, ರಾಜನಾರಾಯಣ, ಜೆ.ಎಚ್. ಪಟೇಲ್, ಎಸ್.ಎಂ. ಕೃಷ್ಣ, ಕಾಗೋಡು ತಿಮ್ಮಪ್ಪ, ಮುಂ. ಸೋಸಲಿಸ್ಟ್ ಮಿತ್ರರಾಗಿದ್ದರು. ಪತ್ರಕರ್ತರಾದ ಖಾದ್ರಿ ಶಾಮಣ್ಣ, ವಿ.ಎನ್. ಸುಬ್ಬರಾವ್ ಅವರೊಂದಿಗೂ ಅಪಾರ ಸ್ನೇಹ. ಇವರಲ್ಲಿ ಅನೇಕರು ಇವರ ಮನೆಗೆ ಬಂದು ಆತಿಥ್ಯ ಸ್ವೀಕರಿಸಿದವರೇ.

ಅವರೊಂದಿಗೆ ಯಾವ ಜನ್ಮದ ಋಣಾನುಬಂಧವೋ ಗೊತ್ತಿಲ್ಲ. ಮನೆಗೆ ಯಾವುದೇ ಅತಿಥಿಗಳು ಬಂದರೂ, "ಇವನು ನನ್ನ ಮಗ ಎಂದು ಹೇಳಿ, ನನ್ನಿಂದಲೇ ಎಲ್ಲ ಸೇವೆಯನ್ನು ಮಾಡಿಸುತ್ತಿದ್ದರು. ಅವರೊಂದಿಗೆ ನನಗೆ ಪರಿಚಯ ಮಾಡಿಸಿ", ನನ್ನ ನಂತರ ಎಲ್ಲ ಇವನೇ ನೋಡಿಕೊಳ್ಳುವದು, ನನ್ನಲ್ಲಿರುವ ಸ್ನೇಹ ನನ್ನ ಮಗನಿಗೂ ತೋರಿಸಿ ಎಂದೂ ಹೇಳುತ್ತಿದ್ದರು. ಈ ದಿಸೆಯಲ್ಲೇ ನನಗೆ ಪ್ರತಿಯೊಂದೂ ಹಂತದಲ್ಲೂ ತಿದ್ದುತ್ತಿದ್ದರು. ನಿನಗೆ ನನ್ನಲ್ಲಿರುವ ಎಲ್ಲ ಗುಣಗಳೂ ಇವೆ. ನೀನು ನನ್ನಂತೆಯೇ ಆಗಬೇಕು ಎಂದು ಉತ್ಸಾಹ ತುಂಬುತ್ತಿದ್ದರು.

ನನ್ನ ಮದುವೆ ಸಂದರ್ಭದಲ್ಲಿ ದೇಸಾಯಿ ದಂಪತಿಗಳೇ ಪುಣ್ಯಾವಾಚನಕ್ಕೆ ಕುಳಿತು ಮದುವೆ ಮಾಡಿದರು. ಶ್ರೀಮತಿ ಸರಿತಾಬಾಯಿ ಅವರೇ ನನ್ನ ಹೆಂಡತಿಗೆ ಮನೆತುಂಬಿಸಿಕೊಂಡರು. ಈ ವಿಷಯದಲ್ಲಿ ನನ್ನ ತಂದೆಯವರು ಒಂದಿಷ್ಟೂ ಬೇಸರಿಸಿಕೊಳ್ಳಲಿಲ್ಲ. "ನಾನು ನಿನಗೆ ಹೆತ್ತಿರಬಹುದು. ಆದರೆ ನಿನಗೆ ರೂಪ ಕೊಟ್ಟವರು ಅವರು, ಅವರೇ ನಿನ್ನ ನಿಜವಾದ ತಂದೆ-ತಾಯಿ. ನಿನ್ನ ಮದುವೆ ಅವರೇ ಮಾಡಿಕೊಟ್ಟಿರುವುದರಿಂದ ಇನ್ನು ನೀನು ಅವರ ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳುವದು ನಿನ್ನ ಜವಾಬ್ದಾರಿ" ಎಂದು ನನ್ನ ತಂದೆಯವರೇ ನನಗೆ ಬುದ್ಧಿ ಹೇಳಿದರು. ಆಗ ನನ್ನ ಬಾಯಿಯಿಂದ ಯಾವುದೇ ಮಾತು ಬರಲಿಲ್ಲ. ದೇಸಾಯರ ಕಾಲು ಹಿಡಿದು ಬಿಟ್ಟೆ. ನನ್ನ ತಂದೆ-ತಾಯಿ ಈ ಗಳಿಗೆಯನ್ನು ಕಣ್ಣುತುಂಬಿಕೊಂಡು ನೋಡಿ ಸಂತೋಷಪಟ್ಟರು.

ನನ್ನಲ್ಲಿ ದೇಸಾಯಿ ಅವರದೇ ಎಲ್ಲ ಗುಣಗಳಿವೆ. ನೀನು ನನ್ನಂತೆಯೇ ಆಗಬೇಕೆಂದು ಹೇಳುತ್ತಿದ್ದ ಅವರು, ಮುಂದೆ ನನ್ನ ಪತ್ನಿ ಅರುಣಾಳಿಗೂ, ಶ್ರೀಮತಿ ಸರಿತಾಬಾಯಿ ಅವರಂತೆ ವಕೀಲರನ್ನಾಗಿ ಮಾಡಬೇಕೆಂಬ ಆಸೆ ಹೊಂದಿದ್ದರು. ಅದಕ್ಕಾಗಿ ನನ್ನವಳಿಗೆ ಬಿ.ಎ. ಓದಲು

ಸಲಹೆ ಮಾಡಿದರು. ಅವಳು ಆಂಧ್ರ ಪ್ರದೇಶದ ಜಹಿರಾಬಾದಿನವಳು. ಕನ್ನಡ ಭಾಷೆಯೇ ಗೊತ್ತಿರಲಿಲ್ಲ. ಓದಿದ್ದು ತೆಲುಗು ಮಾಧ್ಯಮ, ಇಲ್ಲಿ ಹೇಗೆ ಓದುವದು ಎಂದು ಆತಂಕ ವ್ಯಕ್ತಪಡಿಸಿದಾಗ, ನೀನೇನೂ ಚಿಂತೆ ಮಾಡಬೇಡ. ನಾನಿದ್ದೇನೆ ಎಂದು ಶ್ರೀಮತಿ ಸರಿತಾಬಾಯಿ ಅವರು ಧೈರ್ಯ ತುಂಬಿದ್ದಷ್ಟೇ ಅಲ್ಲದೇ ಕಾಲೇಜಿಗೂ ಸೇರಿಸಿದರು. ಬಿ.ಎ. ಪದವಿ ಪಡೆದ ನಂತರ ಎಲ್.ಎಲ್.ಬಿ.ಗೂ ಸೇರಿಸಿದರು. ನಾವಿಬ್ಬರೂ ವಕೀಲರಾದಾಗ ಅವರು ತುಂಬ ಸಂತೋಷಪಟ್ಟರು.

ನಮಗೆ ಮದುವೆಯಾದ ನಂತರವೂ ಬೇಗ ಮಕ್ಕಳಾಗಲಿಲ್ಲವೆಂದು ನಮಗಿಂತ ಹೆಚ್ಚು ಚಿಂತೆ ದೇಸಾಯಿ ದಂಪತಿಗಳಿಗೆ ಆಗಿತ್ತು. ಮೇಲಿಂದ ಮೇಲೆ ಯಾರಾದರೂ ಒಳ್ಳೆಯ ಡಾಕ್ಟರಲ್ಲಿ ತೋರಿಸಿಕೊಂಡು ಬನ್ನಿ ಎಂದು ನಮಗೆ ಪೀಡಿಸುತ್ತಿದ್ದರು. ದೇಸಾಯಿ ಅವರು ಬೆಂಗಳೂರಿನಲ್ಲಿದ್ದಾಗ, ನೀವು ಡಾಕ್ಟರಲ್ಲಿ ಹೋಗಲೇಬೇಕೆಂದು ಪಟ್ಟು ಹಿಡಿದು ಕಳಿಸಿದರು. ಮುಂದೆ ನನಗೆ ಮಗುವಾದಾಗ, ನಮಗಿಂತ ಹೆಚ್ಚು ಸಂತೋಷ ಪಟ್ಟವರು ದೇಸಾಯಿ ದಂಪತಿಗಳು. "ಈ ಒಂದು ಕೊರತೆ ತುಂಬಿ ನನ್ನ ಮನಸ್ಸಿಗೆ ಸಮಾಧಾನ ತಂದಿದ್ದೀಯ. 'ಮೈ ಅಬ್ ನಾನಾ ಬನ್‌ಗಯಾ" (ನಾನೀಗ ಅಜ್ಜನಾಗಿದ್ದೇನೆ) ಎಂದು ಸಂತೋಷಪಟ್ಟು ಸಿಹಿ ಹಂಚಿದರು.

ನಂತರ ನನಗೆ ಸರ್ಕಾರಿ ವಕೀಲನಾಗುವ ಅವಕಾಶ ಕಲ್ಪಿಸಿಕೊಟ್ಟರು. ನನ್ನ Intigrity honesty ಬಗ್ಗೆ ದೇಸಾಯಿಯವರಿಗೆ ಅಭಿಮಾನವಿತ್ತು. ಈ ಹುದ್ದೆಯ ಮೇಲೆ ಅನೇಕರು ಕಣ್ಣಿಟ್ಟಿದ್ದರು. ಅವರ ಆಸೆ ಈಡೇರಲಿಲ್ಲವೆಂದು ನನ್ನ ವಿರುದ್ಧ ದೂರು ನೀಡಿದರು. ಈ ಬಗ್ಗೆ ಅಂದು ಕಾನೂನು ಮಂತ್ರಿಯಾಗಿದ್ದ ಎಂ.ಸಿ. ನಾಣಯ್ಯ ಅವರು, ಖುದ್ದಾಗಿ ದೂರಿನ ಬಗ್ಗೆ ತನಿಖೆ ನಡೆಸಿದಾಗ, ನಾನು ಅತ್ಯಂತ ಸಮರ್ಥ ವ್ಯಕ್ತಿ. ಸರ್ಕಾರಿ ಸೇವೆಗೆ ಇವರು ಅತ್ಯಂತ ಯೋಗ್ಯ ಎಂದು ವರದಿ ಸಲ್ಲಿಸಿದಾಗ, ನಾಣಯ್ಯ ಅವರು ದೇಸಾಯಿ ಅವರನ್ನು ಕರೆದು "ನಿಮ್ಮ ಹುಡುಗ ಅತ್ಯಂತ ಯೋಗ್ಯ ವ್ಯಕ್ತಿಯಾಗಿದ್ದಾನೆ. ಅವನ ವಿರುದ್ಧ ನೀಡಿರುವ ದೂರು ಆಧಾರ ರಹಿತ ಎಂದು ಸಾಬೀತಾಗಿದೆ. ಅವರಿಗೆ ಇನ್ನೊಂದು ಅವಧಿಗೆ ಮುಂದುವರೆಸುತ್ತಿದ್ದೇನೆ' ಎಂದು ಹೇಳಿದರು. ನನಗೆ ಇನ್ನೊಂದು ಅವಧಿ ದೊರೆಯದಿದ್ದರೂ ಪರವಾಗಿಲ್ಲ ದೇಸಾಯಿಯವರಿಗೆ ಶಿಷ್ಯನಿಂದ ಕಳಂಕ ಬರಲಿಲ್ಲವಲ್ಲ ಎಂದು ಸಂತೋಷಪಟ್ಟೆ. ದೇಸಾಯಿ ಅವರೂ ಕೂಡ ನನ್ನನ್ನು ಕರೆದು, "ನೀನು ಈಗ ಸಮರ್ಥ ವಕೀಲನಾಗಿದ್ದೀ, ನನಗೆ ಸಮಾಧಾನವಾಯಿತು" ಎಂದು ಬೆನ್ನು ತಟ್ಟಿದರು.

ಅವರ ಹೃದಯ ಶಸ್ತ್ರ ಚಿಕಿತ್ಸೆಯಾದಾಗ, ಮೊದಲು ಎಚ್ಚರ ಬಂದಾಗ ನೋಡಿದ್ದು ನನ್ನನ್ನೇ. ನಂತರ ನನ್ನ ಸಂಬಂಧಿಕರು ತೀರಿ ಹೋಗಿರುವ ಸುದ್ದಿ ತಿಳಿದು "ನೀನು ಅಲ್ಲಿಗೆ ಹೋಗಿ ಬಾ" ಎಂದು ಅವರೇ ಬಲವಂತದಿಂದ ಕಳಿಸಿದರು. ನನಗೆ ನನ್ನವರೆಂದರೆ ದೇಸಾಯಿ ದಂಪತಿಗಳ ಹೊರತು ಯಾರೂ ಇಲ್ಲ ಎಂಬ ಭಾವನೆ ಬಂದು ಬಿಟ್ಟಿತ್ತು. ಅವರು ಏನೇ ಮಾಡಿದರೂ ಎಲ್ಲದಕ್ಕೂ ನಾನು ಬೇಕು. ಮನೆಯಲ್ಲಿ ಬಟ್ಟೆ ತಂದರೆ, ಅದರಲ್ಲಿ ನನಗೊಂದು ಪಾಲು.

ಯಾವುದಾದರೂ ಹೊಸ ಸಿಹಿ ತಿಂಡಿ ತಂದರೆ ನಾನು ಮನೆಗೆ ಬರುವವರೆಗೂ ಆ ಪ್ಯಾಕೆಟ್ ತೆರೆಯುತ್ತಿರಲಿಲ್ಲ. ನಾನು ಬಂದ ನಂತರವೇ ಹೊಸ ಸ್ವೀಟ್ ಪ್ಯಾಕ್ ಬಿಚ್ಚಿ ಎಲ್ಲರಿಗೂ ಕೊಡುತ್ತಿದ್ದೆ. ಒಂದು ಸಲ ಬೆಂಗಳೂರಿನಿಂದ ಅಧಿಕ ಇಳುವರಿಯ ತೆಂಗಿನ ಸಸಿಗಳನ್ನು ತಂದು ತಮ್ಮ ತೋಟದಲ್ಲಿ ನೆಟ್ಟರು. ಅದರಲ್ಲೂ ನನಗೊಂದಷ್ಟು ಸಸಿಗಳನ್ನು ಕೊಟ್ಟು ನನ್ನ ತೋಟದಲ್ಲಿ ನೆಡಲು ಹೇಳಿದರು. ಪ್ರತಿಯೊಂದರಲ್ಲೂ ನನ್ನ ಸಂತೋಷದಲ್ಲೇ ದೇಸಾಯಿ ಅವರು ತಮ್ಮ ಸಂತೋಷ ಕಾಣುತ್ತಿದ್ದರು.

ನಾನು ಮನೆ ಕಟ್ಟುವಾಗ ಪ್ರತಿಯೊಂದು ಹಂತದಲ್ಲೂ ನನಗೆ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ಪ್ರತಿದಿನ ತಪ್ಪದೇ ಬಂದು ನೋಡಿ ಹೋಗುತ್ತಿದ್ದರು. ಮನೆ ಪೂರ್ತಿಯಾದಾಗ, ತದ್ರೂಪ ಅವರ ಮನೆಯ ಮಾದರಿಯಲ್ಲೇ ನಿರ್ಮಾಣವಾದಾಗ, ಅವರಿಗಾದ ಸಂತೋಷ ಅಷ್ಟಿಷ್ಟಲ್ಲ. 'ಮನೆ-ಮನಸ್ಸು ಎರಡೂ ಒಂದೇ ಆಯಿತು' ಎಂದು ಅವರು ಆನಂದದಿಂದ ಹೇಳಿದರು.

ಅವರಿಗೆ ಹೃದಯ ಚಿಕಿತ್ಸೆಯಾಗಿದ್ದರಿಂದ ಆಗಾಗ ಬೆಂಗಳೂರಿಗೆ ಹೋಗಿ ಬರುತ್ತಿದ್ದರು. ಚಿಕಿತ್ಸೆಗಾಗಿ ಬೆಂಗಳೂರಿನಲ್ಲೇ ಮನೆಯನ್ನೂ ಮಾಡಿದರು. ಕಲಬುರ್ಗಿಗೆ ಬಂದಾಗಲೊಮ್ಮೆ ನಮ್ಮಲ್ಲೇ ಇರುತ್ತಿದ್ದರು. ಈ ಮನೆಗೆ ಬಂದಾಗ ಏನೋ ಒಂದು ರೀತಿಯ ಆನಂದವಿರುತ್ತದೆ ಎಂದು ಹೇಳುತ್ತಿದ್ದರು. ಮೊಮ್ಮಕ್ಕಳೊಂದಿಗೆ ತಮಾಷೆಯಿಂದ ಮಕ್ಕಳಂತೆ ಆಟವಾಡುತ್ತ ಸಂತೋಷಪಡುತ್ತಿದ್ದರು.

ಅವರ ವಿಶ್ರಾಂತ ಜೀವನವೆಲ್ಲ ನಮ್ಮ ಮನೆಯಲ್ಲೇ ಕಳೆಯಬೇಕೆಂಬುದು ನನ್ನ ಅಪೇಕ್ಷೆಯಾಗಿತ್ತು. ನನ್ನ ಇಂಗಿತವನ್ನು ಶ್ರೀಮತಿ ದೇಸಾಯಿ ಅವರಿಗೂ ಹೇಳಿದೆ. "ನಾನೂ ನಿನ್ನಲ್ಲೇ ಇರುತ್ತಿದ್ದೆ. ಆದರೆ, ಇವರಿಗೆ ಮೇಲಿಂದ ಮೇಲೆ ವೈದ್ಯರಿಗೆ ತೋರಿಸಬೇಕಲ್ಲ ಏನು ಮಾಡುವದು" ಎಂದು ತುಂಬ ಬೇಜಾರು ಪಟ್ಟುಕೊಂಡು ಹೇಳಿದರು.

ಮುಂದೆ ಕೆಲವೇ ದಿನಗಳಲ್ಲಿ ದೇಸಾಯರು ಬೆಂಗಳೂರಿನಲ್ಲಿರುವಾಗಲೇ ಇಹಲೋಕ ತ್ಯಜಿಸಿದರು. ನನಗೆ ಮತ್ತು ನನ್ನ ಕುಟುಂಬಕ್ಕೆ ತೀವ್ರ ಆಘಾತ ಉಂಟಾಯಿತು. ಕೆಲವು ದಿನಗಳವರೆಗೆ ಈ ಆಘಾತದಿಂದ ಚೇತರಿಸಿಕೊಳ್ಳುವದೂ ಕಷ್ಟವಾಯಿತು. ಅವರು ನಮ್ಮನ್ನಗಲಿ ಒಂದು ವರ್ಷವಾಗುತ್ತಿದೆ.

ಇಂದು ಅವರು ಭೌತಿಕವಾಗಿ ನಮ್ಮೊಂದಿಗಿಲ್ಲದಿದ್ದರೂ, ಅವರ ಆತ್ಮ ಇನ್ನೂ ನಮ್ಮೊಂದಿಗೇ ಇದೆ ಎಂದು ನನಗೆ ಭಾಸವಾಗುತ್ತದೆ. ಪ್ರತಿಯೊಂದು ಕ್ಷಣದಲ್ಲೂ ಅವರು ಹೇಳಿದ ಪ್ರತಿಯೊಂದು ನನ್ನ ನೆನಪಿನಲ್ಲಿದೆ. ಇದರಿಂದ ಅವರು ಯಾವಾಗಲೂ ನನ್ನೊಂದಿಗಿದ್ದು, ನನಗೆ ಜೀವನದ ಹಾಗೂ ವೃತ್ತಿಗೂ ಮಾರ್ಗದರ್ಶನ ಮಾಡುತ್ತಿದ್ದಾರೆ ಎಂದೇ ನಾನು ಭಾವಿಸುತ್ತೇನೆ.

ಒಂದು ನೆನಪು

❁ ಕಾಶೀನಾಥರಾವ ಬೇಲೂರೆ

ನಾನು ಇವರ ಜೊತೆಯಲ್ಲಿ ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಕಾರ್ಯಮಾಡಿದ್ದೇನೆ. ಅದನ್ನೆಲ್ಲ ಇವತ್ತು ನೆನಸಿಕೊಂಡರೆ ಒಂದು ದೀರ್ಘ ಲೇಖನವಾಗುತ್ತದೆ. ಅವರು ಒಬ್ಬ ಪ್ರಾಮಾಣಿಕ ರಾಜಕಾರಣಿಯಾಗಿ ಬೆಳೆದಿದ್ದರು. ಅಷ್ಟೇ ಅಲ್ಲ, ಸಾಮಾಜಿಕವಾಗಿ ಪ್ರಮಾಣಿಕತೆಯಿಂದ ಮತ್ತು ನಿಯಮ ಬದ್ಧತೆಯಿಂದ ಅವರು ನಡೆದುಕೊಂಡಿದ್ದರು. ನಮ್ಮಲ್ಲಿ ಅವರು ಗುಲ್ಬರ್ಗಾ ಗಂಜಿನಲ್ಲಿ ಬೀದರ, ಗುಲಬರ್ಗಾ, ರಾಯಚೂರು, ಕಾರ್ಯಕರ್ತರನ್ನು ಸಭೆಗೆ (ಮೀಟಿಂಗ್) ಕರೆಸಿದ್ದರು. ಆ ಸಭೆಯಲ್ಲಿ ನಾನು ಉಪಸ್ಥಿತನಿದ್ದೆ. ಸಭೆಯು ಸಮಾಪ್ತವಾದ ನಂತರ ನಾವೆಲ್ಲರೂ ಸಾಧನ ಪ್ರಕಾರ ಹೊರಟೆವು. ಅವರಿಗೆ ಒಂದು ರಿಕ್ಷಾ ತಂದು "ಮನೆಗೆ ಇದರಲ್ಲಿ ಕುಳಿತು ಹೋಗಿ" ಎಂದು ಕೇಳಿಕೊಂಡೆವು. ಆದರೆ ಅದಕ್ಕವರು ಸಿದ್ಧರಾಗಲಿಲ್ಲ. ಏಕೆಂದರೆ ರಿಕ್ಷಾದಲ್ಲಿ ಕುಳಿತು, ಅವನು ನೂಕಿಕೊಂಡು ಹೋಗುವದು ಅವರಿಗೆ ಸರಿಯೆನಿಸಲಿಲ್ಲ. ಅದಕ್ಕೆ ಕಾಲು ನಡಿಗೆಯಿಂದಲೇ ಮನೆಗೆ ಸಿದ್ಧರಾಗಿದ್ದರು. ಹಾಗೆ ಸಾಮಾಜಿಕ ದೃಷ್ಟಿಯಿಂದ ಅದು ಅವರಿಗೆ ಸರಿಯೆನಿಸಲಿಲ್ಲ. ಈ ತತ್ವವನ್ನು ಅವರು ತನ್ನ ಇಡಿಯ ಜೀವನದಲ್ಲಿ ಅಳವಡಿಸಿಕೊಂಡು ಹೋದರು.

ತುರ್ತುಪರಿಸ್ಥಿತಿಯಲ್ಲಿ ನಾವು ಅವರು ಜೆ.ಎಚ್. ಪಟೇಲ ಒಂದೇ ಕೋಣೆಯಲ್ಲಿ ಇರುತ್ತಿದ್ದೆವು. ಆಗಸ್ಟ್ ೧೫ ರಂದು ಜೈಲಿನಿಂದ ಒಬ್ಬನಾದರೂ ತುರ್ತು ವಿರುದ್ಧ ಮಾತಾಡಬೇಕು ಎಂದು ಅವರ ಸ್ನೇಹಿತರಿಂದ ಬಿ.ಆರ್. ಪಾಟೀಲ ಅವರಿಗೆ ಹೇಳಿಕಳಿಸಿದ್ದರು. ಹಾಗೆ ಹೇಳಿದ ಪ್ರಕಾರ, ಆಗಸ್ಟ್ ೧೫ ರಂದು ಎಮರ್ಜೆನ್ಸಿ ವಿರುದ್ಧ ಬಿ.ಆರ್. ಪಾಟೀಲ ಮಾತಾಡಿದರು. ಕೊನೆಗೆ ಅವರೂ ಸೆರೆಮನೆ ಸೇರಬೇಕಾಯಿತು.

ಹೀಗೆ ಹೇಳುತ್ತಾ ಹೋದರೆ ಮುಗಿಯದ ನೆನಪುಗಳು ಒಟ್ಟಾರೆ ಅವರು ಆದರ್ಶರಾಗಿದ್ದರು.

ನಾ ಕಂಡ ದೇಸಾಯಿ

❁ ಈಶ್ವರಪ್ಪ ಚಾಕೊತೆ

ಉಸ್ಮಾನಿಯಾ 'ಲಾ' ಕಾಲೇಜದಿಂದ ಪಾಸಾಗಿ ಹೈದ್ರಾಬಾದ್‌ದಲ್ಲಿ ಕೆಲವು ದಿವಸ ವಕಾಲತ್ ಮಾಡಿ ೧೯೬೯ರಲ್ಲಿ ಬೀದರಕ್ಕೆ ಬಂದೆ. ಅಂದಿನ ದಿನಗಳಲ್ಲಿ ಸಮಾಜವಾದದ ಬಗ್ಗೆ ಯುವಕರಲ್ಲಿ ಹೆಚ್ಚಿನ ಒಲವು. ವಿದ್ಯಾರ್ಥಿ ಜೀವನದಿಂದ ನಾನು ಮಹಾತ್ಮಾ ಗಾಂಧೀ, ಡಾ. ರಾಮಮನೋಹರ ಲೋಹಿಯಾ ಹಾಗೂ ರಾಷ್ಟ್ರದ ಸ್ವಾತಂತ್ರ್ಯದ ಸಲುವಾಗಿ ಪ್ರಾಣ ತೆತ್ತವರಿಂದ ಸ್ಫೂರ್ತಿ ಪಡೆದು, ಸಂಯುಕ್ತ ಸೋಷಲಿಸ್ಟ ಪಕ್ಷದ ಸಕ್ರಿಯ ಸದಸ್ಯನಲ್ಲದೆ, ಜಿಲ್ಲೆಯ ಸದಸ್ಯರಲ್ಲಿ ಒಬ್ಬನಾಗಿದ್ದೆ.

ಬೀದರ ಜಿಲ್ಲೆಯಲ್ಲಿ ಬೆರಳಿನ ಮೇಲೆಣಿಸುವಷ್ಟು ಜನ ಮತ್ತು ಗುಲಬರ್ಗಾದಲ್ಲಿ ಪ್ರಮುಖರಾದ ಡಾ. ದೇವುಳಗಾಂವಕರ, ಹಣಮಂತರಾವ ಜಮ್ಗಿ, ತೀವಾರಿ, ತಿಮ್ಮಾಜಿ ವೀರಣ್ಣ ಮತ್ತು ಕುಸುಮಾಕರ ದೇಸಾಯಿಯವರಿದ್ದರು. ಆ ದಿನಗಳಲ್ಲಿ ಸಮಾಜವಾದಿ ಪಕ್ಷ ಕರ್ನಾಟಕದಲ್ಲಿ ಹಳೆಮೈಸೂರು ವಿಭಾಗದಲ್ಲಿ ಮೈಸೂರು, ಶಿವಮೊಗ್ಗಾ, ಬಿಟ್ಟರೆ ಹೈದ್ರಾಬಾದ ಕರ್ನಾಟಕದ ಬೀದರ, ಗುಲಬರ್ಗಾ, ರಾಯಚೂರ ಮತ್ತು ಕೆಲ ಮಟ್ಟಿಗೆ ಬಳ್ಳಾರಿ ಸಮಾಜವಾದಿ ಪಕ್ಷದ ಚಟುವಟಿಕೆಗಳ ಪ್ರಮುಖ ಕೇಂದ್ರಸ್ಥಾನಗಳಾಗಿದ್ದವು.

ಈ ಆಂದೋಲನದ ಪ್ರಮುಖ ವ್ಯಕ್ತಿಗಳಲ್ಲಿ ಶಾಂತವೇರಿ ಗೋಪಾಲಗೌಡರು, ಸ್ವ. ಜೆ.ಎಚ್. ಪಟೇಲ, ಎಸ್. ಬಂಗಾರಪ್ಪ, ಕಾಗೋಡ ತಿಮ್ಮಪ್ಪ, ಕೋಣಂದೂರು ಲಿಂಗಪ್ಪ, ವೈ.ಆರ್. ಪರಮೇಶ್ವರಪ್ಪ, ಕೆ.ಜಿ. ಮಹೇಶ್ವರಪ್ಪ, ಚಂದ್ರಶೇಖರ್ ಎಸ್., ವೆಂಕಟರಾಮ ಮತ್ತು ಪ್ರೊ. ನಂಜುಂಡಸ್ವಾಮಿ ಇತ್ಯಾದಿ ಇದ್ದರು.

ನಮ್ಮ ಭಾಗದ ರಾಯಚೂರ ಜಿಲ್ಲೆಯಲ್ಲಿ ಎಮ್. ನಾಗಪ್ಪ ವಕೀಲರು, ಬಳ್ಳಾರಿಯಲ್ಲಿ ತಿಮ್ಮಪ್ಪ ಎಲಿಗಾರ, ಎಮ್.ಪಿ. ಪ್ರಕಾಶ, ಬೀದರ ಜಿಲ್ಲೆಯ ಕಿಶನರಾವ್ ವಕೀಲರು, ದಯಾನಂದ ಬಿರಾದಾರ್ ವಕೀಲರು ಕಾಶಿನಾಥರಾವ ಬೆಲುರೆ, ವೈಜನಾಥ ಪಾಟೀಲ ಮತ್ತು ಹಿರಾಚಂದ ವಾಘಮೊರೆ ಇತ್ಯಾದಿ ಪ್ರಮುಖ ವ್ಯಕ್ತಿಗಳಿದ್ದರು.

ಕುಸುಮಾಕರ ದೇಸಾಯಿಯವರು ನಾನು, ಸೊಲಸಾರ್, ಶಿಬಿರ, ಮತ್ತು ಚರ್ಚಾಕೂಟಗಳಲ್ಲಿ ಆಗಾಗ್ಗೆ ಭೆಟ್ಟಿಯಾಗುತ್ತಿದ್ದೆವು. ನನಗೆ ಸರಿಯಾಗಿ ನೆನಪಿದೆ. ಅವರು ಡಾ. ಲೋಹಿಯಾರವರ ವಿಚಾರ ಸಾಕಷ್ಟು ತಿಳಿದುಕೊಂಡಿದ್ದರು. ಸಮಾಜವಾದಿ ವಿಚಾರದಲ್ಲಿ ಅವರು ಯಾರನ್ನಾದರ ದಂಗು ಬಡಿಸುವ ಸಾಮರ್ಥ್ಯ ಹೊಂದಿದವರು. ಜೊತೆಗೆ ಗಾಂಧಿಯವರ ಪಕ್ಕಾ ಅನುಯಾಯಿ. ಯಾವಾಗಲೂ ಖಾದಿಯನ್ನೇ ಧರಿಸುವವರು. ಬೇರೆ ಬಟ್ಟೆ ಧರಿಸಿದ್ದು ನಾನು ನೋಡಿಯೇ ಇಲ್ಲಾ. ಗ್ರಾಮೀಣ ಕರ-ಕುಶಲತೆಯ ಬಗ್ಗೆ ತುಂಬಾ ಆಸಕ್ತಿ

ಉಳ್ಳವರು. ಅದನ್ನು ಬೆಳೆಸಿ ಉಳಿಸಿಕೊಂಡು ಹೋಗಬೇಕೆನ್ನುವವರಾಗಿದ್ದರು.

ಅವರ ಮಾತೃಭಾಷೆ ಕನ್ನಡವಾಗಿದ್ದರೂ ಉರ್ದು ಮತ್ತು ಹಿಂದಿಯಲ್ಲಿ ಸಾಕಷ್ಟು ಹಿಡಿತವನ್ನು ಹೊಂದಿದ್ದರು. ಮುಸ್ಲಿಂ ಪಂಡಿತರ ಹಾಗೂ ಉರ್ದು ಭಾಷೆಯಲ್ಲಿ ಪ್ರವೀಣರಾಗಿದ್ದವರ ಜೊತೆ "ಫಾರ್ಸಿ ಉರ್ದು"ದಲ್ಲಿ ಮಾತಾಡಿದರೆ ಎದುರಿನವರನ್ನು ಬಾಯಿ ಮುಚ್ಚಿಸಿ ದಂಗು ಬಡಿಸುವ ವ್ಯಕ್ತಿಯಾಗಿದ್ದರು.

ಅವರು ಎಂದೂ ಯಾವುದೆ ಹುದ್ದೆಗಳಿಗೆ ಇಚ್ಛೆ ಪಟ್ಟವರಲ್ಲ. ಮತ್ತು ಅದರ ಸಲುವಾಗಿ ಯಾರ ಬಾಲ ಬಡಿದವರಲ್ಲ. ಒಂದು ವೇಳೆ ಆಕಸ್ಮಾತಾಗಿ ಯಾವುದೇ ಸ್ಥಾನ ಅಥವಾ ಹುದ್ದೆ ಬಂದಲ್ಲಿ ಪ್ರಾಮಾಣಿಕತೆ, ನಿಷ್ಠೆ, ಜನಸಾಮಾನ್ಯರಿಗೆ ಅದರಿಂದ ಪೂರ್ಣ ಲಾಭವಲ್ಲದೆ, ದಕ್ಷತನದಿಂದ ನಿಭಾಯಿಸಿಕೊಂಡು ಹೋಗುವ ಸಮರ್ಥರಿದ್ದು, ಆ ಸ್ಥಾನಕ್ಕೆ ಗೌರವತಂದು ಕೊಡುವಂಥವರಾಗಿದ್ದರು.

ಒಂದು ಸಾರಿ ಕುಸುಮಾಕರ ದೇಸಾಯಿಯವರು ಬೀದರಕ್ಕೆ ಬಂದಾಗ, ಮಾನವಚಾಲಿತ ರಿಕ್ಷಾದಲ್ಲಿ ಕೂಡುವ ಸಂಭವ ಬಂದಿತ್ತು. ರಿಕ್ಷಾದಲ್ಲಿ ಕೂಡಲು ನಿರಾಕರಿಸಿದರು. ಕಾರಣ ಕೇಳಿದ್ದೇ, ಒಬ್ಬ ಮನುಷ್ಯನನ್ನು ರಿಕ್ಷಾದಲ್ಲಿ ಕೂಡಿಸಿ. ಇನ್ನೊಬ್ಬ ಮನುಷ್ಯನಿಂದ ಎಳೆಸುವದು ಶೋಷಣೆಯ ಪ್ರತೀಕ." ಫ್ಯೂಡಲ್ ಸಿಸ್ಟಮ್" ಎಂದು ಬಣ್ಣಿಸಿದರು. ಇದು ನನ್ನ ತಲೆಯಲ್ಲಿ ಇಂದಿಗೂ ಅಚ್ಚು ಹಸುರಾಗಿ ಉಳಿದಿದೆ. ಎಷ್ಟು ಸೂಕ್ಷ್ಮ ವಿಚಾರ ಮಾನವನ ಬಗ್ಗೆ ಕಳ-ಕಳಿ ಇತ್ತೆಂದು ತೋರಿಸುತ್ತದೆ.

ದೇಸಾಯಿಯವರು ಹುಟ್ಟು ಬ್ರಾಹ್ಮಣರಾದರೂ ಸಮಾಜದಲ್ಲಿನ ಜಾತಿ-ವ್ಯವಸ್ಥೆ ಬಗ್ಗೆ ತೀವ್ರ ಆಕ್ರೋಶ ಮತ್ತು ಅಸಮಾಧಾನಿಯಾಗಿದ್ದರು. ಸ್ವಾತಂತ್ರ್ಯ ಸಂಗ್ರಾಮದ ಆಂದೋಲನದಿಂದ ಸಮಾಜವಾದಿ ಆಂದೋಲನ, ನಂತರ ತುರ್ತು ಪರಿಸ್ಥಿತಿಯಲ್ಲಿ ಕಾರಾಗ್ರಹವಾಸ, ಅನ್ಯಾಯ, ಶೋಷಣೆ, ಉಚ್ಚ-ನೀಚ, ಮೂಢನಂಬಿಕೆಗಳ ವಿರುದ್ಧ ಸತತ ಚಿಂತಕ. ಸಮಯ ಬಂದಲ್ಲಿ ಸಂಘರ್ಷಕ್ಕಿಳಿಯುವ ಮನೋಭಾವದವರಿದ್ದರು.

ಇಂತಹ ಒಬ್ಬ ಸರಳ ಜೀವಿ. ಸ್ವಚ್ಛ ಜೀವನ. ಸೈದ್ಧಾಂತಿಕವಾಗಿ ಸ್ಪಷ್ಟ ನಿಲುವು ಹೊಂದಿದ, ತಮಗೆ ಸರಿಯಿದ್ದಿದ್ದು, ಮುಚ್ಚು ಮರೆಯಿಲ್ಲದೆ, ಖಡಾ-ಖಂಡಿತ ಹೇಳುವ ಅಪರೂಪದ ವ್ಯಕ್ತಿ, ನಾಕಂಡ ಕುಸುಮಾಕರ ದೇಸಾಯಿಯವರು.

ದಳ-೦೩

ರಾಜಕೀಯ ಬಂಧುಗಳು

ಮಹಾನ್ ಸಾಧಕ

❁ ರಾಮಕೃಷ್ಣ ಹೆಗಡೆ

ಹೈದರಾಬಾದ್ ಕರ್ನಾಟಕ ಹಲವಾರು ಪ್ರತಿಭಾನ್ವಿತರನ್ನು ರಾಷ್ಟ್ರ ಸೇವೆಗಾಗಿ ನೀಡಿದೆ. ಅವರಲ್ಲಿ ಕೂಡಲೇ ನೆನಪಿಗೆ ಬರುವವರು ಗುಲ್ಬರ್ಗದ ಹೆಸರಾಂತ ದೇಸಾಯಿ ಮನೆತನದವರು. ಶ್ರೀ ಕುಸುಮಾಕರ ದೇಸಾಯಿಯವರು ಈ ಮನೆತನದಿಂದ ಬಂದವರು. ಕರ್ನಾಟಕದ ಏಕೀಕರಣದ ನಂತರ ಗುಲ್ಬರ್ಗ ಹಲವಾರು ರಾಜಕೀಯ ಧುರೀಣರನ್ನು ಕಂಡಿದೆ. ಆದರೆ ಜನಮನದಲ್ಲಿ ಇತರೇ ಸಮಕಾಲೀನ ರಾಜಕಾರಣಿಗಳಿಗಿಂತ ವಿಭಿನ್ನರಾಗಿ ತಮ್ಮದೇ ಆದ ಛಾಪು ಮೂಡಿಸಿದ ವ್ಯಕ್ತಿ ಕುಸುಮಾಕರ ದೇಸಾಯಿವರು. ಅವರಿಗೆ ಇದ್ದದ್ದು, ರಾಜಕೀಯ ಒಂದೇ ಮುಖದ ಪರಿಚಯ. ಅವರ ಇನ್ನೊಂದು ಮುಖವಾದ ಹಾಗೂ ಸಾಂಕ್ರಾಮಿಕ ರಾಜಕೀಯ ಪಿಡುಗಾದ ಜಾತೀಯತೆ, ಸ್ವಜನ ಪಕ್ಷಪಾತ ಇವುಗಳಿಂದ ಬಲುದೂರವಿದ್ದರು. ಅವರು ತಮ್ಮ ಅಂತ್ಯ ಕಾಲದವರೆಗೂ ಸಮಾಜಕ್ಕೆ ಹಾಗೂ ದೀನದಲಿತರ ಏಳಿಗೆಗಾಗಿ, ನಿಸ್ವಾರ್ಥ, ಪ್ರಾಮಾಣಿಕ ಸೇವೆ ಮಾಡಿದ ಅಪರೂಪದ ರಾಜಕಾರಣಿ. ಅವರು ತಮ್ಮ ಸ್ವಾರ್ಥಕ್ಕಾಗಿ ಯಾರನ್ನೂ, ಯಾವುದಕ್ಕೂ ಯಾಚಿಸಿದವರು ಅಲ್ಲ.

ಇವರ ಪೂರ್ವಜರು ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ಸ್ವಾತಂತ್ರ್ಯದ ನಂತರದಲ್ಲೂ ದೀರ್ಘಕಾಲ ಸೆರೆಮನೆವಾಸ ಅನುಭವಿಸಿ ದೇಶಕ್ಕಾಗಿ ಅಮೂಲ್ಯ ಕೊಡುಗೆ ನೀಡಿರುವವರು. ಈ ಹಿನ್ನೆಲೆಯಲ್ಲಿ ಬೆಳೆದುಬಂದ ಶ್ರೀ ದೇಸಾಯಿಯವರು ಬಾಲ್ಯದಿಂದಲೇ ರಾಷ್ಟ್ರೀಯ ಭಾವನೆ, ಸಾಮಾಜಿಕ ಕಳಕಳಿ, ಸೇವಾಮನೋಭಾವ, ಪರರ ಕಷ್ಟ-ಸುಖಗಳಿಗೆ ಸ್ಪಂದಿಸುವ ಗುಣವನ್ನು ಮೈಗೂಡಿಸಿಕೊಂಡರು. ಇದರಿಂದಾಗಿಯೇ ಸಾಮಾಜಿಕ ಕಂಟಕಗಳಾದ ಜಾತೀಯತೆ, ಸ್ವಜನ ಪಕ್ಷಪಾತ, ಸ್ವಾರ್ಥದ ಸೋಂಕು ಇವೇ ಮೊದಲಾದ ಅನಿಷ್ಟಗಳಿಂದ ಬಹು ದೂರ ಉಳಿದಿದ್ದರು. ಈ ಕಾರಣದಿಂದಾಗಿಯೇ ಇವರು ಜನಮನದಲ್ಲಿ ತಮ್ಮದೇ ಆದ ಸ್ಥಾನವನ್ನು ಗಳಿಸಿದ್ದರು.

ಸ್ವಾತಂತ್ರ್ಯ ಪೂರ್ವದಲ್ಲಿಯೇ ಇವರ ಒಡನಾಟ ಸಮಾಜ ಸುಧಾರಕ ಶ್ರೀ ದೇವುಳಗಾಂವಕರ ಜೊತೆಗಿತ್ತು. ಇಂತಹ ಅಪ್ರತಿಮ ರಾಷ್ಟ್ರಪ್ರೇಮಿಗಳ ನಿಕಟವರ್ತಿಗಳಾದ ಇವರಿಗೆ ಸಮಾಜವಾದದ ಪ್ರಭಾವ ಸಾಕಷ್ಟು ಬೀರಿತ್ತು. ಇವರಿಂದ ಉತ್ತೇಜಿತರಾದ ಕುಸುಮಾಕರದೇಸಾಯಿಯವರು ಸಮಾಜವಾದವನ್ನೇ ತಮ್ಮ ಜೀವನದ ಸಂಗಾತಿಯನ್ನಾಗಿಸಿಕೊಂಡರು. ಸಮಾಜವಾದದ ಪ್ರಮುಖ ವ್ಯಕ್ತಿಗಳಾದ ಸುರೇಂದ್ರ ಮೋಹನ್, ಮಧುದಂಡವತೆ, ನಾನಾಸಾಹೇಬಗೋರೆ, ರಾಜನಾರಾಯಣರಂತಹ ನಾಯಕರ ಒಡನಾಟದಿಂದ ಹಾಗೂ ಮಾರ್ಗದರ್ಶನದಿಂದ ಸಮಾಜವಾದಿ ಸಿದ್ಧಾಂತವನ್ನು ತಮ್ಮ ಜೀವನದ ಗುರಿಯನ್ನಾಗಿಸಿಕೊಂಡು ಅದರಲ್ಲಿ ಪರಿಪೂರ್ಣತೆಯನ್ನು ಸಾಧಿಸಿ, ತಮ್ಮ ಸಂಪೂರ್ಣ

ಸಮಯವನ್ನು ಇದಕ್ಕಾಗಿಯೇ ಮೀಸಲಿಟ್ಟ ಮಹಾನ್ ಸಾಧಕ.

ಜಾತಿ, ಮತ, ಪಂಗಡಗಳ ಭೇದವಿಲ್ಲದೇ ಸಮಾಜದಲ್ಲಿ ಎಲ್ಲರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದವರಲ್ಲಿ ಶ್ರೀ ದೇಸಾಯಿಯವರು ಅಗ್ರಗಣ್ಯರು. ಅಂಧಶ್ರದ್ಧೆ, ಮೂಢನಂಬಿಕೆಗಳ ವಿರುದ್ಧ ಜನಜಾಗೃತಿಗೊಳಿಸಿ, ಸ್ವಪ್ರಯತ್ನದಿಂದ ಜನರಿಗಾಗಿ ಏನೆಲ್ಲಾ ಮಾಡಬಹುದು ಸಮಾಜಕ್ಕೆ ಯಾವ ರೀತಿಯಲ್ಲಿ ಸೇವೆ ಸಲ್ಲಿಸಬಹುದು ಎನ್ನುವುದನ್ನು ಪರಿಣಾಮಕಾರಿಯಾಗಿ ಸಾಧಿಸಿ ತೋರಿಸಿದ್ದಾರೆ. ಜಾತೀಯತೆಯ ಸೋಂಕು ಇವರಿಂದ ಬಲು ದೂರವಿದ್ದರೂ ಇವರು ಸ್ವಾರ್ಥಪರ ರಾಜಕೀಯ, ಜಾತಿವಾದಿ ರಾಜಕಾರಣದಿಂದ ರೋಸಿಹೋಗುತ್ತಿದ್ದರು. ನ್ಯಾಯಯುತವಾಗಿ ಸಿಗಬೇಕಿದ್ದ ಅನೇಕ ಸ್ಥಾನಮಾನಗಳಿಂದ ವಂಚಿತರಾದರೂ ಅದನ್ನು ತೋರ್ಪಡಿಸಿಕೊಳ್ಳದೇ ಇದ್ದದ್ದು ಅವರಲ್ಲಿದ್ದ ಬಹುದೊಡ್ಡ ಗುಣ. ವಿಧಾನಸಭಾ ಚುನಾವಣೆಯಲ್ಲಿ ಇವರು ಪರಾಜಿತರಾದುದು ಈ ಕಾರಣದಿಂದ ಎಂಬುದು ಕಾಕತಾಳೀಯ. ಇದನ್ನು ಬಹಳ ಲಘುವಾಗಿ ಪರಿಗಣಿಸಿ ಎಂದಿನಂತೆ ತಮ್ಮ ಕಾರ್ಯಚಟುವಟಿಕೆಗಳಲ್ಲಿ ಮುನ್ನಡೆಯುತ್ತಿದ್ದರು. ಅವರ ಕಾರ್ಯ ಚಟುವಟಿಕೆ ಸಮಾಜ ಸೇವೆಗಷ್ಟೆ ಸೀಮಿತವಾಗಿರದೇ ಪತ್ರಿಕಾ ರಂಗಕ್ಕೂ ಕಾಲಿಟ್ಟರು. ಹೈದರಾಬಾದ್‌ನಿಂದ ಅವಿಭಾಜಿತ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ವತಿಯಿಂದ ಪ್ರಕಟವಾಗುತ್ತಿದ್ದ 'ನ್ಯೂ ಲೈನ್' ದಿನಪತ್ರಿಕೆ ಹಾಗೂ 'ಫ್ರೀಡಮ್' ವಾರಪತ್ರಿಕೆಗಳ ನೇತೃತ್ವವನ್ನು ವಹಿಸಿ ಅದರ ಸಂಪಾದಕರಾಗಿ ಪತ್ರಿಕೆ ಹೆಚ್ಚು ಹೆಚ್ಚು ಜನಪ್ರಿಯವಾಗಲು ಕಾರಣೀಭೂತರಾದರು. ಆಗ ಅವರು ಕೇವಲ 19-20 ವರ್ಷದ ಯುವಕರಾಗಿದ್ದರು.

ನ್ಯಾಯಶಾಸ್ತ್ರದಲ್ಲಿ ಸಂಪೂರ್ಣ ಪಾಂಡಿತ್ಯ ಪಡೆದಿದ್ದ ದೇಸಾಯಿಯವರು ನ್ಯಾಯಶಾಸ್ತ್ರ ಬೋಧನೆಯನ್ನು ತಮ್ಮ ಹವ್ಯಾಸವನ್ನಾಗಿಸಿಕೊಂಡು, ನ್ಯಾಯಶಾಸ್ತ್ರ ಬೋಧಕರಾಗಿಯೂ ಕಾರ್ಯನಿರ್ವಹಿಸಿದರು ಈ ವಿಷಯದಲ್ಲಿ ಅವರಿಗಿದ್ದ ಪರಿಣತಿ, ಅಪ್ರತಿಮ ಪಾಂಡಿತ್ಯ ಅವರ ಬೋಧನಾ ಕ್ರಮ, ಅವರ ವಾಗ್ಝರಿ, ವಿದ್ಯಾರ್ಥಿಗಳನ್ನು ವಿಷಯದಲ್ಲಿ ತಲ್ಲೀನರಾಗುವಂತೆ ಮಾಡಿ ಅವರು ಸ್ವಯಂ ಪರಿಪೂರ್ಣತೆಯನ್ನು ಸಾಧಿಸುವ ಮಜಲಾಯಿತು. ಅವರಲ್ಲಿ ಶಿಕ್ಷಣ ಪಡೆದ ಅನೇಕ ವಿದ್ಯಾರ್ಥಿಗಳು ಅವರ ಪಾಠ ಪ್ರವಚನದ ವಾಗ್ಝರಿಯನ್ನು ಇಂದಿಗೂ ನೆನೆಪಿಸಿಕೊಳ್ಳುತ್ತಾರೆ. ಅವರ ಶಿಷ್ಯರು ಉನ್ನತ ಹುದ್ದೆಯಲ್ಲಿದ್ದಾರೆ. ಸುಪ್ರೀಂ ಕೋರ್ಟ್ ನ್ಯಾಯಾಧೀಶರಾಗಿದ್ದಾರೆ. ಇದು ಅವರಲ್ಲಿದ್ದ ಪ್ರಬುದ್ಧ ಪಾಂಡಿತ್ಯಕ್ಕೆ ಒಂದು ನಿದರ್ಶನ. ವಿದ್ಯಾರ್ಥಿ ದೆಸೆಯಿಂದಲೇ ಚಳುವಳಿಗಳ ಮುಂಚೂಣಿಯಲ್ಲಿರುತ್ತಿದ್ದ ಇವರಿಗೆ ಜೈಲುವಾಸ ಹೊಸದೇನೂ ಆಗಿರಲಿಲ್ಲ. ತುರ್ತು ಪರಿಸ್ಥಿತಿಯಲ್ಲಿ ಅತಿ ಹೆಚ್ಚಿನ ಶಿಕ್ಷೆ ಅನುಭವಿಸಿದವರಲ್ಲಿ ಒಬ್ಬರಾಗಿದ್ದ ಇವರು ಇದೇ ಸಮಯದಲ್ಲಿ ಸಮಾಜವಾದಿ ಧುರೀಣರಾದ ಪ್ರೊ. ಮಧು ದಂಡವತೆ, ಎನ್.ಜಿ. ಗೋರೆ, ಸುರೇಂದ್ರ ಮೋಹನರಂತಹ ರಾಜಕೀಯ ಧುರೀಣರ

ಒಡನಾಟದಿಂದ ಪರಿಪಕ್ವ ಸಮಾಜವಾದಿ ರಾಜಕೀಯ ಧುರೀಣರಾಗಿ ಹೊರಹೊಮ್ಮಿದ್ದರು.

ನಾನು ಮುಖ್ಯಮಂತ್ರಿಯಾಗಿದ್ದಾಗ ಅವರನ್ನು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಿದಾಗ ಅವರನ್ನು ಹುದ್ದೆಯನ್ನು ಸ್ವೀಕರಿಸಲು ಒಪ್ಪಿಸುವುದೇ ತ್ರಾಸದಾಯಕವಾಯಿತು. ತಮಗಾಗಿ ತಮ್ಮ ಸ್ವಾರ್ಥಕ್ಕಾಗಿ ಎಂದೂ ಯಾರನ್ನೂ ಬೇಡದ ಇವರು, ಈ ಮಂಡಳಿಯ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳಲು ಒಪ್ಪಿದ್ದು ನನಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡಿತು. ತಮಗೆ ಒಪ್ಪಿಸಿದ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ಸಮರ್ಪಕವಾಗಿ ನಿರ್ವಹಿಸಿ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಗುಲ್ಬರ್ಗ ನಗರ ನೀರು ಸರಬರಾಜು ಯೋಜನೆಯಾದ "ಭೀಮಾ ಯೋಜನೆ"ಯನ್ನು ಪೂರ್ಣಗೊಳಿಸಿ, ಗುಲ್ಬರ್ಗ ನಗರಕ್ಕೆ ಶಾಶ್ವತವಾಗಿ ಕುಡಿಯುವ ನೀರನ್ನು ಒದಗಿಸಿದ ಕೀರ್ತಿ ಇವರಿಗೆ ಸಲ್ಲಬೇಕು. ಗುಲ್ಬರ್ಗದ ಜನತೆ ಇಂದಿಗೂ ಸ್ಮರಿಸುತ್ತಿದೆ. ಅವರನ್ನು "ಆಧುನಿಕ ಭಗೀರಥ" ಎಂದು ಕರೆಯುತ್ತಿದೆ. ಹೈದರಾಬಾದ್-ಕರ್ನಾಟಕ ಪ್ರದೇಶವನ್ನು, ಅದರಲ್ಲೂ ಗುಲ್ಬರ್ಗ ನಗರವನ್ನು ಪರಿಪೂರ್ಣತೆಯ ಸುಂದರ ನಗರವನ್ನಾಗಿಸಬೇಕೆಂಬುದು ಇವರ ಆಸೆ. ಅದಕ್ಕಾಗಿ ಹಲವಾರು ಯೋಜನೆಗಳನ್ನು ರೂಪಿಸಿದರು. ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಸ್ವ ಪರಿಪೂರ್ಣತೆ, ಪ್ರಬುದ್ಧತೆಯನ್ನು ಶ್ರೀಸಾಮಾನ್ಯರೂ ಪಡೆಯಬೇಕೆನ್ನುವ ಯೋಜನೆ ಇದಾಗಿತ್ತು. ಈ ಯೋಜನೆಯ ಫಲ ಸಮಾಜದ ಎಲ್ಲ ವರ್ಗದವರಿಗೂ ಜಾತಿ, ಮತ ಬೇಧಗಳಿಲ್ಲದೆ ಸಮಾನ ಹಂಚಿಕೆಯಾಗಿ ಒಂದು ಸಂತೃಪ್ತ ಕ್ರಾಂತಿಕಾರಿ ಯೋಜನೆ ಇದಾಗಬೇಕೆಂಬುದೇ ಇವರ ಕನಸಾಗಿತ್ತು.

ಆದರೆ ಈ ಕನಸು ನನಸಾಗುವುದಕ್ಕೆ ಮೊದಲೇ ನಮ್ಮಿಂದ ದೂರವಾದರು. ಶೋಷಿತ ಹಾಗೂ ತುಳಿತಕ್ಕೆ ಒಳಗಾದ ಅತಿ ಹಿಂದುಳಿದ ಬಡ ಜನರಿಗಾಗಿ, ರಾಜ್ಯಾಂಗದತ್ತವಾದ ಸಾಮಾಜಿಕ ನ್ಯಾಯ ಒದಗಿಸಲು ಪೂರಕವಾದ, ಹಲವಾರು ಕಾರ್ಯಕ್ರಮಗಳನ್ನು ಸ್ವಯಂ ಸೇವಾ ಸಂಸ್ಥೆಗಳು ಮುಂದೆ ಬಂದು ಫಲಾನುಭವಿಗಳನ್ನು ಗುರುತಿಸಿ, ಯೋಜನೆಗಳು ಸಮರ್ಪಕವಾಗಿ ಮಧ್ಯವರ್ತಿಗಳ ನೆರವಿಲ್ಲದೆ ಜನರಿಗೆ ದೊರಕಿಸುವ ಇಂಗಿತವನ್ನು ಅನೇಕ ಬಾರಿ ವ್ಯಕ್ತಪಡಿಸಿದ್ದರು.

ಈ ನಿಟ್ಟಿನಲ್ಲಿ ಇವರ ಧರ್ಮಪತ್ನಿ ಶ್ರೀಮತಿ ಸರಿತಾರವರು ಸಹ ಸಾಕಷ್ಟು ದುಡಿದಿದ್ದಾರೆ. ಆದರೂ ಅದು ಇನ್ನೂ ಪೂರ್ಣತೆಯನ್ನು ಸಾಧಿಸಲು ಸಾಧ್ಯವಾಗಿಲ್ಲ. ಇಂತಹ ಸಾಮಾಜಿಕ ಕಳಕಳಿಯ ಪರಿಪೂರ್ಣ ನಿಸ್ವಾರ್ಥ ಜನಸೇವಕರನ್ನು ನಾವು ನೆನಪಿಸಿಕೊಳ್ಳುವುದು ಅವರು ರೂಪಿಸಿದ್ದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದೇ ನಮ್ಮ-ನಿಮ್ಮೆಲ್ಲರ ಕರ್ತವ್ಯ. ಅದಕ್ಕಾಗಿ ನಾವು ಮಾಡಬೇಕಾಗಿರುವುದು ಅವರ ಯೋಜನೆಗಳನ್ನು ಕಾರ್ಯಗತ ಮಾಡುವುದೇ ಆಗಿದೆ. ಪ್ರತಿವರ್ಷ ಅವರ ಪುಣ್ಯತಿಥಿಯ ದಿನದಂದು ಅವರಿಗೆ ಪ್ರಿಯವಾದ ನ್ಯಾಯಶಾಸ್ತ್ರ, ಸಮಾಜವಾದ ಹಾಗೂ ದೀನದಲಿತರ ಏಳಿಗೆಗಾಗಿ ಪೂರಕವಾಗುವ ಕಾರ್ಯಾಗಾರ

ಶಿಬಿರಗಳು, ಚರ್ಚಾಸ್ಪರ್ಧೆ ಇತ್ಯಾದಿಗಳನ್ನು ಏರ್ಪಡಿಸಿ ಅವರ ಆಸೆ ಪೂರೈಸಬೇಕಾದದ್ದು ಇಂದಿನ ಅವಶ್ಯಕತೆ. ಈ ಬಗ್ಗೆ ಅವರ ಅಭಿಮಾನಿಗಳೆಲ್ಲರೂ ಚಿಂತಿಸಬೇಕಾಗಿದೆ. ಅವರ ಕನಸನ್ನು ನನಸಾಗಿಸುವುದು ಇದರಿಂದ ಮಾತ್ರ ಸಾಧ್ಯ ಎನ್ನುವುದು ನನ್ನ ಅನಿಸಿಕೆ.

ಡಿಸೆಂಬರ್ ೨೦೦೩ ರಂದು ಅವರ ಮೊದಲನೆಯ ಪುಣ್ಯತಿಥಿ. ಅವರ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಅವರ ಅಭಿಮಾನಿಗಳು ಪಣ ತೊಡುತ್ತಾರೆಂಬ ನಂಬಿಕೆ ನನಗಿದೆ.

ಸ್ವಾತಂತ್ರ್ಯಯೋಧ

❁ ಹಾರನಹಳ್ಳಿ ರಾಮಸ್ವಾಮಿ

ಹೈದರಾಬಾದ್ ರಾಜ್ಯದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ಪಾತ್ರ ವಹಿಸಿದ ಹಿರಿಯ ನಾಯಕರಲ್ಲಿ ಕಲ್ಬುರ್ಗಿಯ ಶ್ರೀ ಕುಸುಮಾಕರ ದೇಸಾಯಿ ಅವರು ಒಬ್ಬರು. ಮೊದಲಿನಿಂದಲೂ ಸಮಾಜವಾದದ ಹಿನ್ನೆಲೆಯಲ್ಲಿ ಕೆಲಸ ಮಾಡಿ ರಾಷ್ಟ್ರೀಯ ಭಾವನೆಯನ್ನು ಬೆಳೆಸಿಕೊಂಡು, ಅಂದಿನ ಯುವಜನತೆಗೆ ನಾಯಕರಾಗಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡವರು. ಶ್ರೀಸ್ವಾಮಿ ರಮಾನಂದತೀರ್ಥರವರ ನಾಯಕತ್ವದಲ್ಲಿ ಹೈದರಾಬಾದಿನಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ಸ್ವಾತಂತ್ರ್ಯಾನಂತರ ಭಾರತದೊಡನೆ ರಾಜ್ಯವು ಸೇರ್ಪಡೆಯಾಗಬೇಕೆಂಬ ಹೋರಾಟದಲ್ಲೂ ದುಡಿದವರು.

ಕಲ್ಬುರ್ಗಿಯಲ್ಲಿ ವಕೀಲ ವೃತ್ತಿಯನ್ನು ನಡೆಸಿ ಬಹು ಪ್ರಭಾವಶಾಲಿ ವಕೀಲರೆಂದು ಹೆಸರು ಪಡೆದಿದ್ದರು. ಅಲ್ಲದೆ ಕಾನೂನು ಕಾಲೇಜಿನಲ್ಲಿ ಉಪಾಧ್ಯಾಯರಾಗಿಯೂ ಕೆಲಸ ಮಾಡಿದ್ದರು.

ಹೈದರಾಬಾದಿನಲ್ಲಿ ರಜಾಕಾರರ ಹಾವಳಿಯಿಂದ ತತ್ತರಿಸಿಹೋಗಿದ್ದ ಜನರಿಗೆ ಸಾಂತ್ವನ ಹೇಳುವುದರ ಜೊತೆಗೆ ತೀವ್ರ ಹೋರಾಟವನ್ನು ನಡೆಸಿದ್ದರು. ರಜಾಕಾರರು ಮತ್ತು ಪೊಲೀಸರ ದೌರ್ಜನ್ಯದಿಂದ ಕಲ್ಬುರ್ಗಿ ಜೈಲಿನಲ್ಲಿ ಇವರ ಚಿಕ್ಕಪ್ಪ ಅಸುನೀಗಿದರು. ಇಷ್ಟೆಲ್ಲ ತ್ಯಾಗ ಬಲಿದಾನಗಳನ್ನು ಮಾಡಿದ ಕುಟುಂಬದವರಾಗಿದ್ದ ಇವರು ರಾಜ್ಯಮಟ್ಟದಲ್ಲಿ ವಿಶೇಷ ಜನಾದರಣೆ ಪಡೆದವರಾಗಿದ್ದರು.

ಸ್ವಾತಂತ್ರ್ಯ ಹೋರಾಟಗಾರರು ಒಬ್ಬೊಬ್ಬರಾಗಿ ನಿಧನರಾಗುತ್ತಿದ್ದಾರೆ. ಅವರ ನೆನಪು, ಅವರು ಮಾಡಿದ ಸೇವೆ ಮುಂದಿನ ಜನಾಂಗಕ್ಕೆ ಆದರ್ಶಪ್ರಾಯವಾಗಿರಬೇಕು. ಇಂದಿನ ಯುವಜನತೆ, ಸ್ವಾತಂತ್ರ್ಯಪೂರ್ವದ ಯುವಜನತೆಯಲ್ಲಿದ್ದ ಆದರ್ಶ ಮತ್ತು ದೇಶಪ್ರೇಮವನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯ ಇದೆ. ಶ್ರೀ ಕುಸುಮಾಕರ ದೇಸಾಯಿ ಅವರ ಪತ್ನಿ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿ ಅವರು ಸಧ್ಯದಲ್ಲಿ ಲೋಕಶಿಕ್ಷಣ ಟ್ರಸ್ಟಿನ ಧರ್ಮದರ್ಶಿಯಾಗಿ ಕೆಲಸ ಮಾಡುತ್ತಿದ್ದಾರೆ. ವಿಧಾನ ಪರಿಷತ್ತಿನ ಸದಸ್ಯರಾಗಿ ಆರು ವರ್ಷ ರಾಜ್ಯಮಟ್ಟದಲ್ಲಿ ಜನಸೇವೆ ಮಾಡಿದ್ದಾರೆ. ಅಲ್ಲದೇ ಉತ್ತಮ ಬರಹಗಾರರು. ಹೀಗೆ ಪತಿ-ಪತ್ನಿಯರಿಬ್ಬರೂ ದೇಶಕ್ಕಾಗಿ, ಸಮಾಜಕ್ಕಾಗಿ ದುಡಿಯುತ್ತಿರುವ ಅಂಶ ಆದರ್ಶಪ್ರಾಯವಾದುದು.

ಕಲಬುರ್ಗಿ ಜನತೆಯ ಋಣ ತೀರಿಸಿದವರು

❁ ಧರ್ಮಸಿಂಗ

ದಿವಂಗತ ಕುಸುಮಾಕರ ದೇಸಾಯಿ ಅವರು ನನಗಿಂತ ೧೨-೧೫ ವರ್ಷ ಹಿರಿಯರು. ವಯಸ್ಸಿನಲ್ಲಿ ಮಾತ್ರವಲ್ಲದೇ ಅನುಭವ-ವೃತ್ತಿಯಲ್ಲಿ ಹಾಗೂ ರಾಜಕೀಯದಲ್ಲೂ ನನಗೆ ಹಿರಿಯರು.

ನನ್ನ ಅಣ್ಣಾ ಧರ್ಮವೀರ ರಘುವಂಶಿ ಅವರು ಕುಸುಮಾಕರ ಅವರೊಂದಿಗೆ ತುಂಬ ಸ್ನೇಹ ಹೊಂದಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಅವರು ವಿದ್ಯಾರ್ಥಿಯಾಗಿದ್ದಾಗಲೇ ಕಾಲೇಜಿಗೆ ಶರಣು ಹೊಡೆದು ಹೋರಾಟಕ್ಕಿಳಿದವರು. ನಾನಿನ್ನೂ ಚಿಕ್ಕವನಿದ್ದೆ. ಸ್ವಾಮಿ ರಾಮಾನಂದತೀರ್ಥರ ನಾಯಕತ್ವದಲ್ಲಿ ನಡೆದ ಹೈದರಾಬಾದ ವಿಮೋಚನೆ ಹೋರಾಟದಲ್ಲಿ ನನ್ನ ಅಣ್ಣಾ ಹಾಗೂ ಕುಸುಮಾಕರ ಅವರು ಜೊತೆ ಜೊತೆಯಾಗಿಯೇ ಕೆಲಸ ಮಾಡುತ್ತಿದ್ದರೆಂದು ಮನೆಯಲ್ಲಿ ಮಾತನಾಡುವುದರಿಂದ ತಿಳಿಯುತ್ತಿತ್ತು.

ಅವರುಗಳ ಹೋರಾಟದ ರೋಮಾಂಚಕಾರಿ ಘಟನೆಗಳನ್ನು ಕೇಳಿ, ನಮಗೂ ಇಂಥ ಹೋರಾಟ ಮಾಡಬೇಕೆಂಬ ಉತ್ಸಾಹವಿದ್ದರೂ ನಾವಿನ್ನೂ ಹುಡುಗರಾದ್ದರಿಂದ 'ಇದೆಲ್ಲ ನಿನಗೆ ಬೇಡ' ಎಂದು ಮನೆಗೆ ಕಳಿಸುತ್ತಿದ್ದರು. ಆದರೂ ಅವರ ಹೋರಾಟದ ಘಟನೆಗಳನ್ನು ಆ ಸಂದರ್ಭದಲ್ಲೇ ಕುತೂಹಲದಿಂದ ಕೇಳಿತಿಳಿದು ಸಂತೋಷಪಡುತ್ತಿದ್ದೆ.

ಇಂಥ ಹೋರಾಟದ ಸಂದರ್ಭದಲ್ಲೇ ಕುಸುಮಾಕರ ಅವರಿಗೆ ಸಮಾಜವಾದಿ ನಾಯಕರುಗಳೊಂದಿಗೆ ಸಂಪರ್ಕ ಬೆಳೆಯಿತು. ರಾಮಕಿಶನರಾವ್, ಜಗನ್ನಾಥರಾವ್ ಚಂಡ್ರಕಿ, ಅಚ್ಯುತ ಪಟವರ್ಧನ, ಗೋವಿಂದರಾವ ಶ್ರಾಫ್, ಕೃಷ್ಣಾಚಾರ್ಯ ಜೋಶಿ, ಡಾ. ಮೇಲುಕೋಟೆ, ದಿಗಂಬರರಾವ್ ಬಿಂದು, ಹಣಮಂತರಾವ್ ಕಕ್ಕೇರಿ, ಮೋಹನ ಧಾರಿಯಾ, ಮಧು ದಂಡವತೆ, ಮಧು ಲಿಮಯೆ, ಗೋಪಾಲಗೌಡ, ಜೆ.ಎಚ್. ಪಟೇಲ ಮುಂತಾದ ಪ್ರಮುಖರೊಂದಿಗೆ ಗಾಢಸ್ನೇಹ ಹೊಂದಿದ್ದರು. ಇದೇ ಸಂದರ್ಭದಲ್ಲಿ ಅವರು ಸಮಾಜವಾದಿಗಳಾದರು.

ನಾವೂ ಕೂಡ ಸಮಾಜವಾದಿ ವಿಚಾರಧಾರೆ ಹೊಂದಿರುವುದರಿಂದ ಕುಸುಮಾಕರ ದೇಸಾಯಿ ಅವರಂಥ ಹಿರಿಯರೊಂದಿಗೆ ಉತ್ತಮ ಸ್ನೇಹ ಬೆಳೆಯಿತು. ನಾನು ಮತ್ತು ಪ್ರೊ. ಬಸವರಾಜ ಪಾಟೀಲ ಓಕಳಿ ಅವರೆಲ್ಲ ಸೇರಿ, ೧೯೫೫ರಲ್ಲಿ ಓಕಳಿ ಗ್ರಾಮದಲ್ಲಿ ಯುವ ಸಮಾವೇಶ ನಡೆಸಿದೆವು. ಕುಸುಮಾಕರ ದೇಸಾಯಿ ಅವರು ಈ ಸಮಾವೇಶದಲ್ಲಿ ಭಾಗವಹಿಸಿ, ನಮಗೆಲ್ಲ ಉತ್ಸಾಹ ತುಂಬಿದರು.

ಅವರೆಂದೂ ತಮ್ಮ ತತ್ವಗಳೊಂದಿಗೆ ರಾಜಿ ಮಾಡಿಕೊಳ್ಳದ ವ್ಯಕ್ತಿಯಾಗಿದ್ದರು. ಸಮಾಜವಾದವನ್ನೇ ಅಚಲವಾಗಿ ನಂಬಿಕೊಂಡಿದ್ದರು. ಕುಸುಮಾಕರ ದೇಸಾಯಿ ಅವರು ಎಂದೂ ಅಧಿಕಾರದ ಹಿಂದೆ ಬಿದ್ದವರಲ್ಲ. ಅವರು ರಾಜಕಾರಣಿಯಾಗಿದ್ದರೂ, ಮೂಲ ವೃತ್ತಿ

ವಕೀಲಿಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ತಮ್ಮ ವೃತ್ತಿಯನ್ನು ಮಾಡುತ್ತಿದ್ದರು. ಕಲಬುರ್ಗಿ ಜಿಲ್ಲೆಯಲ್ಲಿ ಅತ್ಯಂತ ಪ್ರತಿಷ್ಠಿತ ವಕೀಲರಲ್ಲಿ ಅವರೂ ಒಬ್ಬರಾಗಿದ್ದರು.

ರಾಜ್ಯದಲ್ಲಿ ಜನತಾಪಕ್ಷ ಅಧಿಕಾರಕ್ಕೆ ಬಂದಾಗ, ಕುಸುಮಾಕರ ದೇಸಾಯಿ ಅವರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ರಾಜ್ಯ ಅಧ್ಯಕ್ಷರಾಗಿ ನೇಮಕಗೊಂಡರು. ಈ ಸಂದರ್ಭದಲ್ಲಿ ಅವರು ಮೊದಲು ಕೈಗೆತ್ತಿಕೊಂಡ ಕೆಲಸವೆಂದರೆ, ಕಲಬುರ್ಗಿ ನಗರದ ಕುಡಿಯುವ ನೀರಿನ ಶಾಶ್ವತ ಪರಿಹಾರಕ್ಕಾಗಿ ಭೀಮಾ ಬ್ಯಾರೇಜ್ ಯೋಜನೆ.

ಈ ಯೋಜನೆಗೆ ಅವರ ಪಕ್ಷದಲ್ಲೇ ಆಂತರಿಕವಾಗಿ ಕೆಲವರು ವಿರೋಧ ವ್ಯಕ್ತಪಡಿಸಿದರು. ಕುಸುಮಾಕರದೇಸಾಯಿ ಅವರ ಈ ಯೋಜನೆಗೆ ಬೆಂಬಲಿಸದೇ ಅಡ್ಡಿಯುಂಟು ಮಾಡಿದರು. ಹೀಗಾಗಿ ಯೋಜನೆಗೆ ಮಂಜೂರಾತಿ ದೊರೆಯಲಿಲ್ಲ. ಈ ವಿಷಯ ನಮಗೆಲ್ಲ ಗೊತ್ತಾಯಿತು. ಆಗ ಕಲಬುರ್ಗಿ ನಗರ ಕುಡಿಯುವ ನೀರಿನ ತೀವ್ರ ಸಮಸ್ಯೆಯನ್ನು ಎದುರಿಸುತ್ತಿತ್ತು.

ಭೀಮಾ ಯೋಜನೆ ಜಾರಿಗೆ ಬಂದರೆ, ನೀರಿನ ಸಮಸ್ಯೆ ಶಾಶ್ವತವಾಗಿ ಪರಿಹಾರವಾಗುತ್ತದೆ ಎಂದು ನಾಗರಿಕ ಸಮಿತಿ ಚಳವಳಿ ನಡೆಸಿತು. ನಗರದ ನೀರಿನ ಸಮಸ್ಯೆಯ ಅರಿವು ನನಗೂ ಇರುವುದರಿಂದ ಈ ಹೋರಾಟಕ್ಕೆ ನಮ್ಮ ಪಕ್ಷವೂ ಬೆಂಬಲಿಸಿತು. ಎಲ್ಲಾ ರಾಜಕೀಯ ಪಕ್ಷಗಳೂ ಸೇರಿ ಹೋರಾಟ ಆರಂಭಿಸಿದಾಗ, ಆಡಳಿತ ಪಕ್ಷದಲ್ಲಿದ್ದುಕೊಂಡವರೇ ಮೌನವಾಗಿರುವದು ಕುಸುಮಾಕರ ದೇಸಾಯಿ ಅವರಿಗೆ ನುಂಗಲಾರದ ತುತ್ತಾಗಿತ್ತು.

ಹೆಗಡೆಯವರು, ಖುದ್ದಾಗಿ ಈ ಕುರಿತು ವರದಿ ತರಿಸಿಕೊಂಡರು. ಈ ಯೋಜನೆಗೆ ಪಕ್ಷದ ಆಂತರಿಕ ವಲಯದಲ್ಲಿ ಯಾಕೆ ವಿರೋಧವಿದೆ ಎಂಬುದನ್ನು ತಿಳಿದುಕೊಂಡರು. ಇದು ಕೇವಲ ರಾಜಕೀಯ ದ್ವೇಷದಿಂದ ಎಂದು ಅರ್ಥ ಮಾಡಿಕೊಂಡ ಅವರು, ಕುಸುಮಾಕರ ದೇಸಾಯಿ ಅವರು ಸಾರ್ವಜನಿಕ ಹಿತಾಸಕ್ತಿಯಿಂದ ಈ ಯೋಜನೆ ಜಾರಿಗೆ ತರಬೇಕೆಂದು ಬಯಸಿರುವದನ್ನು ಗಮನಕ್ಕೆ ತೆಗೆದುಕೊಂಡು, ಭೀಮಾ ಯೋಜನೆಗೆ ಮಂಜೂರಾತಿ ನೀಡಿದರು. ಕುಸುಮಾಕರ ದೇಸಾಯಿ ಅವರು ಆರಂಭಿಸಿದ ಭೀಮಾ ಯೋಜನೆಯನ್ನು ಮುಂದೆ ನಮ್ಮ ಸರಕಾರದ ಅಧಿಕಾರಾವಧಿಯಲ್ಲಿ ಪೂರ್ಣಗೊಳಿಸಲಾಯಿತು.

ಇಂದು ರಾಜ್ಯದ ಅನೇಕ ನಗರ ಪಟ್ಟಣಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ತಲೆದೋರಿ, ವಾರಕ್ಕೊಮ್ಮೆ-ಹತ್ತು ದಿನಗಳಿಗೊಮ್ಮೆ ನೀರು ಸರಬರಾಜು ನಡೆಯುತ್ತಿದ್ದರೆ, ಭೀಮಾ ಯೋಜನೆಯಿಂದಾಗಿ ಕಲಬುರ್ಗಿ ನಗರದ ಜನತೆಗೆ ನಿತ್ಯ ನೀರು ಸರಬರಾಜು ಮಾಡಲು ಸಾಧ್ಯವಾಗುತ್ತಿದೆ. ಇಂದು ಕುಸುಮಾಕರ ದೇಸಾಯಿ ಅವರು ನಮ್ಮೊಂದಿಗಿಲ್ಲ. ಅವರು ನಮ್ಮನ್ನಗಲಿ ಸುಮಾರು ಒಂದು ವರ್ಷ ಸಮೀಪಿಸುತ್ತಿದೆ. ಆದರೆ, ಅವರು ತಮಗೆ ದೊರೆತ ಅಲ್ಪಾವಧಿಯ ಅಧಿಕಾರದಲ್ಲೇ ಕಲಬುರ್ಗಿ ನಗರದ ಜನತೆಯ ಋಣ ತೀರಿಸಿ, ಭೀಮಾ ನೀರು ಯೋಜನೆಯ ಮೂಲಕ ಜನರ ಮನದಲ್ಲಿ ಶಾಶ್ವತವಾಗಿ ಉಳಿದಿದ್ದಾರೆ.

ಧಿಮಂತ ನಾಯಕ

❀ ಮಲ್ಲಿಕಾರ್ಜುನ್ ಖರ್ಗೆ

ಶ್ರೀ ಕುಸುಮಾಕರ ದೇಸಾಯಿ ಅವರು ನನಗಿಂತ ಹಿರಿಯರು. ನನ್ನ ಆತ್ಮೀಯರಲ್ಲಿ ಒಬ್ಬರಾಗಿದ್ದರು. ಶ್ರೀಯುತರು ಪ್ರಜಾ ಸೋಸಿಯಲಿಸ್ಟ್ ಪಕ್ಷ ಹಾಗೂ ಜನತಾ ಪಕ್ಷ ಮುಂತಾದ ಸಂಸ್ಥೆಗಳಲ್ಲಿ ಸಂಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದರು. ನನ್ನ ಮತ್ತು ಅವರ ರಾಜಕೀಯ ಚಿಂತನೆ, ಹೋರಾಟದ ದಾರಿ ೧೯೭೮ ರಲ್ಲಿ ಬೇರೆಯಾದರೂ ಕೂಡ ನಮ್ಮಿಬ್ಬರ ನಡುವೆ ವೈಯಕ್ತಿಕ ಪ್ರೀತಿ-ವಿಶ್ವಾಸಗಳಿಗೆ ಎಂದೂ ಕೊರತೆ ಬರಲಿಲ್ಲ.

ಶ್ರೀ ದೇಸಾಯಿ ಅವರು ಮೂಲತಃ ವಕೀಲರಾಗಿ ತಮ್ಮ ಅಪಾರ ತಿಳಿವಳಿಕೆ ಹಾಗೂ ಕಾನೂನು ಜ್ಞಾನವನ್ನು ಲಾಹೋಟಿ ಕಾನೂನು ಕಾಲೇಜಿನಲ್ಲಿ ಗೌರವ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುವುದರ ಮೂಲಕ, ನೂರಾರು ವಿದ್ಯಾರ್ಥಿಗಳಿಗೆ ತಮ್ಮ ಕಾನೂನು ಜ್ಞಾನ ಸಂಪತ್ತನ್ನು ಧಾರೆ ಎರೆದು, ವಿದ್ಯಾರ್ಥಿಗಳ ಗೌರವಕ್ಕೆ ಪಾತ್ರರಾಗಿದ್ದರು. ಅವರು ರೈತ ಚಳುವಳಿ, ಕಾರ್ಮಿಕ ಚಳುವಳಿ ಹಾಗೂ ಅಸಂಘಟಿತ ಕಾರ್ಮಿಕ ಸಂಘಟನೆಗಳ ಹೋರಾಟಕ್ಕೆ ಪ್ರೋತ್ಸಾಹ ಹಾಗೂ ಬೆಂಬಲ ನೀಡಿದ ಒಬ್ಬ ಪ್ರತಿಭಾನ್ವಿತ ಕಾನೂನು ತಜ್ಞರಾಗಿದ್ದರು. ಹಾಗೂ ಈ ಸಂಘಟನೆಯ ಬಗ್ಗೆ ಅಪಾರ ಪ್ರೀತಿ ವಿಶ್ವಾಸವಿಟ್ಟು ಕೆಲಸ ಮಾಡಿದವರು. ಅವರು ಯಾವುದೇ ಪಕ್ಷದಲ್ಲಿದ್ದಾಗ ಆ ಪಕ್ಷದ ತತ್ವ ಸಿದ್ಧಾಂತಗಳನ್ನು ತಮ್ಮ ಜೀವನದುದ್ದಕ್ಕೂ ಅನುಸರಿಸಿಕೊಂಡು ಬಂದ ಒಬ್ಬ ನಾಯಕರಾಗಿದ್ದರು. ಜೆ.ಪಿ. ಚಳುವಳಿಯಲ್ಲಿ ಪಾಲ್ಗೊಂಡು ತುರ್ತುಪರಿಸ್ಥಿತಿಯಲ್ಲಿ ಸೆರೆಮನೆ ವಾಸ ಅನುಭವಿಸಿದ ದೇಸಾಯಿ ಅವರು ಪಕ್ಷ ರಾಜಕಾರಣದ ರುಚಿಯನ್ನೂ ಉಂಡವರು. ಚಿತ್ತಾಪುರದಿಂದೊಮ್ಮೆ ಚುನಾವಣೆಗೆ ಸ್ಪರ್ಧಿಸಿ ಸೋತಿದ್ದರೂ ಚುನಾವಣೆಯ ಸೋಲು-ಗೆಲುವುಗಳಿಂದಾಗಿ ವಿಚಲಿತರಾಗದಂತಹ ಮನೋಸ್ಥೈರ್ಯವನ್ನು ಬೆಳೆಸಿಕೊಂಡಿದ್ದರು. ಶ್ರೀ ದೇಸಾಯಿ ಅವರು ಮೂಲತಃ ಶ್ರಮ ಜೀವಿ. ೧೯೮೩ ರಲ್ಲಿ ಶ್ರೀ ರಾಮಕೃಷ್ಣ ಹೆಗಡೆ ಅವರ ಆಡಳಿತಾವಧಿಯಲ್ಲಿ ಶ್ರೀ ದೇಸಾಯಿ ಅವರು ನಗರ ನೀರು ಸರಬರಾಜು ಮಂಡಳಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ವಿವಿಧ ಕಾರ್ಯಹೊಣೆಗಳ ನಡುವೆಯೂ ತಮ್ಮ ಸಾಹಿತ್ಯದ ಆಸಕ್ತಿಯನ್ನು ನಿರಾತಂಕವಾಗಿ ಮುಂದುವರೆಸಿದ ಶ್ರೀ ದೇಸಾಯಿ ಅವರು ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿ ಅವರಿಗೆ ಸೃಜನಶೀಲ ಸಾಹಿತ್ಯ ರಚನೆಗೆ ಸಾಕಷ್ಟು ಬೆಂಬಲ, ಉತ್ತೇಜನ ನೀಡಿದ್ದರು. ಶ್ರೀ ದೇಸಾಯಿ ಅವರು ನಿಧನರಾಗಿ ವರ್ಷ ತುಂಬಿದ ಈ ಸಂದರ್ಭದಲ್ಲಿ ಸಂಸ್ಮರಣಾ ಗ್ರಂಥವನ್ನು ಹೊರತರಲು ಅವರ ಅಭಿಮಾನಿಗಳು ತೀರ್ಮಾನಿಸಿರುವುದು ಶ್ಲಾಘನೀಯ. ಅವರ ಈ ಪ್ರಯತ್ನ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

ರಾಷ್ಟ್ರಭಕ್ತ

❁ ಆರ್.ವಿ. ದೇಶಪಾಂಡೆ

ಕಳೆದ ವರ್ಷ ನಿಧನರಾದ ಶ್ರೀ ಕುಸುಮಾಕರ ಸಂಜೀವರಾವ್ ದೇಸಾಯಿ ಬದುಕಿನಲ್ಲಿ ಮೌಲ್ಯಗಳನ್ನು ಪಾಲಿಸಿದ ಒಬ್ಬ ಅಪರೂಪದ ನಾಯಕರಾಗಿದ್ದಾರೆ. ಅವರು ಕರ್ನಾಟಕದ ರಾಜ್ಯ ನಗರ ನೀರು ಸರಬರಾಜು ಮಂಡಳಿಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ನಮ್ಮ ಸಂಪರ್ಕ ಹೆಚ್ಚಾಯಿತು. ಆಗ ನಾನು ರಾಮಕೃಷ್ಣ ಹೆಗಡೆಯವರ ಸಚಿವ ಸಂಪುಟದಲ್ಲಿ ಸಣ್ಣ ಕೈಗಾರಿಕಾ ಸಚಿವನಾಗಿದ್ದೆ. ಶ್ರೀ ರಾಮಕೃಷ್ಣ ಹೆಗಡೆ ಅವರಿಗೆ ಶ್ರೀ ಕುಸುಮಾಕರ ದೇಸಾಯಿ ಬಗೆಗೆ ಅಪಾರ ವಿಶ್ವಾಸ. ಹೈದ್ರಾಬಾದ-ಕರ್ನಾಟಕದಿಂದ ಬಂದ ನಾಯಕರಲ್ಲಿ ಶ್ರೀ ಕುಸುಮಾಕರ ದೇಸಾಯಿ ಅವರಿಗೆ ವಿಶಿಷ್ಟ ಸ್ಥಾನವಿದೆ. ಇದಕ್ಕೆ ಮುಖ್ಯ ಕಾರಣ ಅವರೆಂದೂ ಸ್ಥಾನಮಾನಗಳಿಗೆ ಆಸೆಪಟ್ಟವರಲ್ಲ. ನಿಸ್ವಾರ್ಥ ಸೇವೆಯ ಮೂಲಕ ಜನಮನವನ್ನ ಗೆದ್ದವರು. ಈ ತ್ಯಾಗ ಅವರಿಗೆ ಮನೆತನದಿಂದಲೇ ಬಂದ ಬಳುವಳಿಯಾಗಿದೆ. ಇವರ ಚಿಕ್ಕಪ್ಪ ರಾಘವೇಂದ್ರ ದೇಸಾಯಿ ಅವರು ಈಗಿನ ಕೊಪ್ಪಳ ಜಿಲ್ಲೆ ಕುಕನೂರಿನಲ್ಲಿ 'ವಿದ್ಯಾನಂದ ಗುರುಕುಲ'ವೆಂಬ ರಾಷ್ಟ್ರೀಯ ಶಾಲೆಯನ್ನು ಸ್ಥಾಪಿಸಿದ್ದರು. ಕುಸುಮಾಕರ ದೇಸಾಯಿ ಅವರು ಸಹ ಇಲ್ಲೇ ವಿದ್ಯಾಭ್ಯಾಸ ಮಾಡಿದ್ದರು. ಆ ಕಾರಣ ಬಾಲ್ಯದಲ್ಲೇ ಅವರಿಗೆ ರಾಷ್ಟ್ರೀಯ ವಿಚಾರಗಳು ಅಂತರ್ಗತವಾಗಿದ್ದವು. ಮಹಾತ್ಮಾಗಾಂಧೀಜಿ ಅವರ ತತ್ವಗಳಿಂದ ಪ್ರೇರಿತರಾಗಿದ್ದ ದೇಸಾಯಿ ನೈಜ ಅರ್ಥದಲ್ಲಿ 'ರಾಷ್ಟ್ರ ಭಕ್ತ'ರಾಗಿದ್ದರು.

ಭಾರತ ೧೯೪೭ ರಲ್ಲಿ ಸ್ವಾತಂತ್ರ್ಯ ಪಡೆದರೂ ಹೈದ್ರಾಬಾದ ಕರ್ನಾಟಕಕ್ಕೆ ಈ ಸ್ವಾತಂತ್ರ್ಯ ದೊರೆಯಲು ಮತ್ತೊಂದು ವರ್ಷ ಕಾಯಬೇಕಾಗಿತ್ತು. ಹೈದ್ರಾಬಾದ ವಿಮೋಚನಾ ಚಳವಳಿಯನ್ನು ಆ ಕಾಲದ ದೇಶಭಕ್ತರು ಸಂಘಟಿಸದಿದ್ದರೆ, ಭಾರತದ ಸ್ಥಿತಿ ಏನಾಗುತ್ತಿತ್ತೋ, ಅದು ಊಹೆಗೆ ಸಿಲುಕದ ವಿಚಾರ. ಅಂತಹ ವಿಮೋಚನಾ ಚಳವಳಿಗೆ ತಮ್ಮನ್ನು ತೆತ್ತುಕೊಂಡ ಯುವಕರಲ್ಲಿ ಕುಸುಮಾಕರ ದೇಸಾಯಿ ಒಬ್ಬರು.

ಸಮಾಜವಾದಿ ತತ್ವಗಳು ಕುಸುಮಾಕರ ದೇಸಾಯಿ ಅವರಿಗೆ ಪ್ರಿಯವಾದ ವಿಚಾರ. ಜಯಪ್ರಕಾಶ ನಾರಾಯಣ, ಜೆ.ಬಿ. ಕೃಪಾಲಾನಿ, ಆಚಾರ್ಯ ನರೇಂದ್ರ ದೇವ್ ಮೊದಲಾದವರ ಆದರ್ಶಗಳಿಗೆ ತಮ್ಮನ್ನು ತೆತ್ತುಕೊಂಡರು. ಸ್ವಾತಂತ್ರ್ಯ ಹೋರಾಟದ ಫಲಗಳನ್ನು ಅನುಭವಿಸಬೇಕೆಂಬ ಸ್ವಾರ್ಥ ಶ್ರೀ ದೇಸಾಯಿ ಅವರಲ್ಲಿದ್ದರೆ ಅವರೆಂದೂ ಕಾಂಗ್ರೆಸ್ ಬಿಡುತ್ತಿರಲಿಲ್ಲ. ಸಕ್ರಿಯ ರಾಜಕಾರಣ ಬಿಟ್ಟು ಸಮಾಜವಾದಿ ಚಳವಳಿಗೆ ಹೋಗುತ್ತಿರಲಿಲ್ಲ.

೧೯೫೪ ರಲ್ಲಿ ಕಾನೂನು ಪದವಿ ಪಡೆದ ಕುಸುಮಾಕರ ದೇಸಾಯಿ ಅವರು ಭೂ ಕಾರ್ಮಿಕರ ಹಾಗೂ ಕಾರ್ಮಿಕ ಸಂಘಟನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ತುಲನಾತ್ಮಕ

ಸಂವಿಧಾನ ಶಾಸ್ತ್ರ ಹಾಗೂ ನ್ಯಾಯ ಶಾಸ್ತ್ರಗಳಲ್ಲಿ ಸ್ನಾತಕೋತ್ತರ ಪದವಿಪಡೆದ ಅವರು, ಪ್ರಸಿದ್ಧ ವಕೀಲರಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ಬಹಳ ಕಾಲದಿಂದಲೂ ಖ್ಯಾತರಾಗಿದ್ದರು. ಗುಲ್ಬರ್ಗಾ ಜಿಲ್ಲೆಯ ವಕೀಲ ಸಂಘದ ಅಧ್ಯಕ್ಷರಾಗಿ ವಕೀಲರ ಶ್ರೇಯಸ್ಸಿಗೆ ಸಾಕಷ್ಟು ಶ್ರಮಿಸಿದ್ದಾರೆ. ಈ ಕಾಲದಲ್ಲಿ ಕುಸುಮಾಕರ ದೇಸಾಯಿ ಅವರು ಹತ್ತಾರು ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿ ಗುಲ್ಬರ್ಗಾ ಜನತೆಯ ಮೆಚ್ಚಿಗೆ ಪಡೆದಿದ್ದಾರೆ.

ಹೋರಾಟದ ಮನೋಭಾವ ದೇಸಾಯಿ ಅವರಿಗೆ ಮೊದಲಿನಿಂದಲೂ ಬೆಳೆದು ಬಂದಿದೆ. ವಿವಿಧ ಸಂಘಟನೆಗಳ ಮೂಲಕ ವ್ಯವಸ್ಥೆಯನ್ನು ಪ್ರತಿಭಟಿಸಿ ಕಾರಾಗೃಹಕ್ಕೆ ಹೋದವರಲ್ಲಿ ಶ್ರೀ ದೇಸಾಯಿ ಅವರಿಗೆ ಪ್ರಥಮ ಸ್ಥಾನ. ವಿದ್ಯಾರ್ಥಿ ದೆಸೆಯಿಂದಲೂ ಅವರಲ್ಲಿ ಹೋರಾಟದ ಕೆಚ್ಚು ಮನೆ ಮಾಡಿಕೊಂಡಿದೆ. ಯಾವುದೇ ಆಮಿಷಗಳಿಗೆ ಬಲಿಯಾಗದೇ ಸಮಾಜದ ಎಲ್ಲ ಸ್ತರದ ಜನರ ನೋವು-ನಲಿವುಗಳನ್ನು ಅರಿತು ಅದಕ್ಕೆ ಸ್ಪಂದಿಸುವ ಅಪರೂಪದ ಗುಣ ಅವರಲ್ಲಿತ್ತು.

ಪತ್ರಿಕೋದ್ಯಮ ಶ್ರೀ ದೇಸಾಯಿ ಅವರ ಪ್ರಿಯವಾದ ಹವ್ಯಾಸವಾಗಿತ್ತು. 'ನ್ಯೂ ಲೈನ್' ದಿನಪತ್ರಿಕೆ ಮತ್ತು 'ಫ್ರೀಡಮ್' ವಾರಪತ್ರಿಕೆಯ ಸಂಪಾದಕರಾಗಿ ಅವರು ಸೇವೆ ಸಲ್ಲಿಸಿದ್ದಾರೆ.

ಸಮಾಜವಾದಿ ನೆಲೆಯಿಂದ ಬಂದ ಕುಸುಮಾಕರ ದೇಸಾಯಿ ೧೯೭೭ ರಲ್ಲಿ ಸ್ಥಾಪಿತವಾದ ಜನತಾಪಕ್ಷದ ಕಾರ್ಯಕಾರಿ ಸಮಿತಿಯಲ್ಲಿದ್ದರು. ಕರ್ನಾಟಕದ ರಾಜಕಾರಣದಲ್ಲಿ ಗುಣಾತ್ಮಕ ಬದಲಾವಣೆಗೆ ಶ್ರಮಿಸಿದ ಹಿರಿಯರಲ್ಲಿ ಅವರು ಒಬ್ಬರು. ಅವರ ಆದರ್ಶ ನಡೆ-ನುಡಿ ಎಲ್ಲ ಯುವಕ-ಯುವತಿಯರಿಗೂ ಸದಾ ಆದರ್ಶಪ್ರಾಯವಾದುದು.

ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಮಂಡಳಿ ಅಧ್ಯಕ್ಷರಾಗಿ ಗ್ರಾಹಕರ ಅಗತ್ಯಗಳಿಗೆ ಅನುಗುಣವಾಗಿ ಸ್ಪಂದಿಸಿದವರಲ್ಲಿ ಶ್ರೀದೇಸಾಯಿ ಪ್ರಮುಖರು. ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಮಂಡಳಿಯನ್ನು ಹೊಸ ಅಗತ್ಯಗಳಿಗೆ ತಕ್ಕಂತೆ ಸಜ್ಜುಗೊಳಿಸಿದ ಕೀರ್ತಿ ಅವರದು.

ದಿವಂಗತ ಕುಸುಮಾಕರ ದೇಸಾಯಿ ಅವರ ವಿಚಾರ ಮಾತನಾಡುವಾಗ ಅವರ ಪತ್ನಿ, ನನ್ನ ಸಹೋದರಿ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿ ಅವರ ವಿಷಯವನ್ನು ಪ್ರಸ್ತಾಪಿಸದಿದ್ದರೆ ದೊಡ್ಡ ಲೋಪವಾದೀತು. ವಕೀಲ ವೃತ್ತಿ, ದೈವಶ್ರದ್ಧೆ, ಸಮಾಜ ಸೇವೆ, ಪತ್ರಿಕೋದ್ಯಮ, ರಾಜಕಾರಣ, ಸಾಹಿತ್ಯ ಸೇವೆ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಅವರಿಬ್ಬರದು ಸಮಾನ ಅಭಿರುಚಿ. ಅವರದು ಆದರ್ಶ ದಾಂಪತ್ಯ. ಸದಾ ಪ್ರಗತಿಯ ವಿಚಾರದಲ್ಲಿ ನಿರ್ದಿಷ್ಟ ಧೋರಣೆ.

ಹರಪನಹಳ್ಳಿಯ ಶ್ರೇಷ್ಠ ಹರಿದಾಸ ಪರಂಪರೆಯ ಭೀಮಕ್ಕನ ಮನೆತನದಿಂದ ಬಂದ ಶ್ರೀಮತಿ ಸರಿತಾ ಅವರು ಕನ್ನಡದ ಶ್ರೇಷ್ಠ ಹಾಸ್ಯ ಸಾಹಿತಿ ಬೀಚಿ ಅವರ ತಂಗಿ. ಶ್ರೀ ಕುಸುಮಾಕರ ದೇಸಾಯಿ ಅವರನ್ನು ವಿವಾಹವಾದ ನಂತರ ಶ್ರೀಮತಿ ಸರಿತಾ ಅವರು ಮತ್ತಷ್ಟು ಎತ್ತರಕ್ಕೆ ಬೆಳೆದ ಮಹಾಸಾಧಕಿ. ಇವರಿಬ್ಬರ ಬದುಕು-ಸಾಧನೆ ಸಾಮಾನ್ಯವಾದುದಲ್ಲ.

ಭಾರತೀಯ ಸಂಸ್ಕೃತಿಯಲ್ಲಿ ಹಿರಿಯರಿಗೆ ಪೂಜನೀಯ ಸ್ಥಾನವಿದೆ. ಅವರನ್ನು ದೇವರಂತೆ

ಆರಾಧನೆ ಮಾಡಲಾಗುತ್ತದೆ. ಎಲ್ಲ ಜಾತಿ, ಮತ ಹಾಗೂ ಪಂಗಡದವರು ಒಂದಲ್ಲ ಒಂದು ಸಂದರ್ಭದಲ್ಲಿ ತಮ್ಮ ಹಿರಿಯರನ್ನು ಪೂಜಿಸಿ ಅವರ ಸ್ಮರಣೆ ಮಾಡಿಕೊಳ್ಳುತ್ತಾರೆ. ಮಕ್ಕಳಿಗೆ ಅವರುಗಳ ಹೆಸರನ್ನಿಡುತ್ತಾರೆ. ಪ್ರತಿವರ್ಷ ಅವರ ಹೆಸರಿನಲ್ಲಿ ಪೂಜೆ ಮಾಡುತ್ತಾರೆ. ಅವರ ಹೆಸರಿನಲ್ಲಿ ದಾನ ಧರ್ಮಗಳನ್ನು ಮಾಡುತ್ತಾರೆ. ಒಟ್ಟಾರೆ ಆ ಹಿರಿಯ ಚೇತನದ ಆಶೀರ್ವಾದದಿಂದ ನಮ್ಮ ಕುಟುಂಬಕ್ಕೆ ಒಳ್ಳೆಯದಾಗಬೇಕೆಂಬ ಆಶಯ ಎಲ್ಲರಲ್ಲೂ ಇರುತ್ತದೆ. ಕುಸುಮಾಕರ ದೇಸಾಯಿ ಅವರಂತಹ ದೊಡ್ಡ ಚೇತನ ನಮ್ಮ ಸಮಾಜದ ಮೇಲೆ ಸದಾ ಕಾಲ ಇರಬೇಕು. ಎಲ್ಲ ಬಂಧನಗಳಿಂದಲೂ ಬಿಡುಗಡೆ ಹೊಂದಿ ಸದಾ ಮಾನವ ಕುಲಕ್ಕೆ ಒಳಿತು ಬಯಸುತ್ತಿದ್ದ ಶ್ರೀ ಕುಸುಮಾಕರ ದೇಸಾಯಿ ಅವರ ನೆನಪು ಸದಾ ಕಾಲ ನಮ್ಮೊಳಗಿರಲಿ. ಅವರ ಆಶೀರ್ವಾದ ಈ ಸಮಾಜಕ್ಕೆ ಯಾವಾಗಲೂ ದೊರೆಯಲಿ. ಅವರ ಆದರ್ಶ ನಡೆ-ನುಡಿ ಮುಂದಿನ ಪೀಳಿಗೆಗೆ ಮಾರ್ಗದರ್ಶನ ನೀಡುವಂತಾಗಲಿ. ಇಂತಹ ಹಿರಿಯರ 'ಸ್ಮರಣೆ'ಯಿಂದ ನಾವು ಯಥೇಚ್ಛವಾದ ಜೀವನೋತ್ಸಾಹವನ್ನು ಪಡೆಯೋಣ.

ನಿಷ್ಠ ಸಮಾಜವಾದಿ

❁ ವೈಜನಾಥ ಪಾಟೀಲ

ಒಂದು ಕಾಲಕ್ಕೆ ದೇಶದಲ್ಲಿ ಸಮಾಜವಾದದ ಉಗ್ರ ಚಳವಳಿ ನಡೆಯಿತು. ರಾಮಮನೋಹರ ಲೋಹಿಯಾ ಅವರ ನೇತೃತ್ವದಲ್ಲಿ ಸಮಾಜವಾದಿ ಚಳವಳಿಗೆ ಬೆಂಬಲಿಸಿ ಅನೇಕರು ಈ ಚಳವಳಿಗೆ ಧುಮುಕಿದರು. ಇವರಲ್ಲಿ ಬಹುತೇಕ ಜನರು ಸುಶಿಕ್ಷಿತರು, ಉನ್ನತ ವಿದ್ಯಾವಂತರು, ವಿಚಾರವಾದಿಗಳಿದ್ದರು. ಅಂಥ ವಿಚಾರವಾದಿಗಳಲ್ಲಿ ಅಪರೂಪದ ವ್ಯಕ್ತಿತ್ವ ಹೊಂದಿದ ವ್ಯಕ್ತಿ ಕಲಬುರ್ಗಿಯ ಕುಸುಮಾಕರ ದೇಸಾಯಿ ಅವರು.

ಕುಸುಮಾಕರ ದೇಸಾಯಿ ಅವರ ಕುಟುಂಬವೇ ಸ್ವಾತಂತ್ರ್ಯ ಯೋಧರ ಮನೆತನಕ್ಕೆ ಸೇರಿದ್ದು. ಅವರ ತಂದೆ ದಿ. ಸಂಜೀವರಾವ್ ದೇಸಾಯಿ ಅವರು ಪ್ರಸಿದ್ಧ ವಕೀಲರಾಗಿದ್ದು, ಆದಾಯ ತರುವ ವಕೀಲಿ ವೃತ್ತಿಯನ್ನು ಬಿಟ್ಟು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ದಿ. ಸಂಜೀವರಾವ ದೇಸಾಯಿ ಅವರ ಮನೆಯೇ ಸ್ವಾತಂತ್ರ್ಯ ಹೋರಾಟದ ತಾಣವಾಗಿತ್ತು. ಇಂಥ ಮನೆತನದಲ್ಲಿ ಹುಟ್ಟಿದ ಕುಸುಮಾಕರ ದೇಸಾಯಿ ಅವರೂ ತಂದೆಯ ರಕ್ತ ಹಂಚಿಕೊಂಡು ಬಂದ ಮಗನಾಗಿ ಸ್ವಾತಂತ್ರ್ಯ ಹೋರಾಟಗಾರರಾಗಿಯೇ ರೂಪುಗೊಂಡರು.

ಹೈದರಾಬಾದ ನಿಜಾಮ ಸರ್ಕಾರದ ಕೊನೆಯ ದಿನಗಳಲ್ಲಿ 'ರಜಾಕರರ ಹಾವಳಿ' ಎಂದು ಕರೆಯುವ ಆ ದಿನಗಳಲ್ಲಿ ಕುಸುಮಾಕರ ದೇಸಾಯಿ ಅವರು, ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದರು. ಓದಿಗೆ ಶರಣು ಹೊಡೆದು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ವಿದ್ಯಾರ್ಥಿಗಳ ತಂಡವನ್ನು ಕಟ್ಟಿಕೊಂಡು ನಿಜಾಮ ಶಾಹಿ ದಬ್ಬಾಳಿಕೆಯನ್ನು ಪ್ರತಿಭಟಿಸಲು ಬೀದಿಗಿಳಿದರು. ಈ ಸಂಬಂಧ ಅನೇಕ ಬಾರಿ ಜೈಲಿಗೂ ಹೋಗಿಬಂದರು.

ಅಚ್ಚರಿಯ ಸಂಗತಿ ಎಂದರೆ, ತಮ್ಮ ಮಗ ಕುಸುಮಾಕರ ದೇಸಾಯಿ ಅವರ ಹೋರಾಟಕ್ಕೆ ತಂದೆಯ ಸಂಪೂರ್ಣ ಬೆಂಬಲವಿತ್ತು. ಮಗ ಶಾಲೆ ಬಿಟ್ಟಿದ್ದಾನೆಂಬ ಒಂದಿನಿತೂ ಚಿಂತೆಯಿಲ್ಲದೇ, ದೇಶದ ಸ್ವಾತಂತ್ರ್ಯ ಮುಖ್ಯ. ನಂತರ ಮಕ್ಕಳು ಮತ್ತು ಕುಟುಂಬ ಎಂದು ಸಂಜೀವರಾವ ಅವರು ನಂಬಿದವರು. ಅದರಂತೆಯೇ ನಡೆದುಕೊಂಡರು. ಹುಲಿಯ ಹೊಟ್ಟೆಯಲ್ಲಿ ಹುಲಿಯೇ ಹುಟ್ಟುತ್ತದೆ ಎಂಬಂತೆ ಕುಸುಮಾಕರ ದೇಸಾಯಿ ಅವರು ರಜಾಕಾರರ ವಿರುದ್ಧದ ಚಳವಳಿಯಲ್ಲಿ ಮುಂಚೂಣಿಯಲ್ಲಿದ್ದು ನಾಯಕತ್ವ ವಹಿಸಿದ್ದರು.

ನಂತರ ನಡೆದ ಪೊಲೀಸ್ ಕಾರ್ಯಾಚರಣೆಯಲ್ಲಿ ಪೊಲೀಸ್ ಪಡೆಯೊಂದಿಗೆ ಕುಸುಮಾಕರ ದೇಸಾಯಿ ಅವರು ಕಲಬುರ್ಗಿಗೆ ಆಗಮಿಸಿದಾಗ, ಈ ಮಹಾನಗರದ ಜನತೆಗೆ ನಿಟ್ಟುಸಿರು ಬಿಡುವಂತಾಯಿತು. ಅವರಿಗೆ ಭವ್ಯ ಸ್ವಾಗತ ಒಂದೆಡೆ. ಮತ್ತೊಂದೆಡೆ ರಜಾಕಾರರು

ಭೂಗತರಾಗಿ ತಲೆ ಮರೆಸಿಕೊಂಡು ಓಡತೊಡಗಿದರು. ೧೯೪೮ ರಲ್ಲಿ ಹೈದರಾಬಾದ, ನಿಜಾಮನ ಅರಸೊತ್ತಿಗೆಯಿಂದ ವಿಮೋಚನೆಗೊಂಡು ಭಾರತದ ಒಕ್ಕೂಟ ಸೇರಿತು. ಈ ಸಂದರ್ಭದಲ್ಲಿ ಕುಸುಮಾಕರ ದೇಸಾಯಿ ಅವರ ಸೇವೆಯನ್ನು ಎಂದೂ ಮರೆಯುವಂತಿಲ್ಲ.

ಸ್ವಾತಂತ್ರ್ಯಾ ನಂತರ ಲೋಹಿಯಾ ಅನುಯಾಯಿಯಾಗಿ ಸಮಾಜವಾದಿಯಾದ ಕುಸುಮಾಕರ ದೇಸಾಯಿ ಅವರು, ಯಾವುದೇ ಬೂಟಾಟಿಕೆ ಇಲ್ಲದ ಅಪ್ಪಟ ಸಮಾಜವಾದಿಯಾಗಿ, ತಮ್ಮ ನಡೆ-ನುಡಿಯಲ್ಲೂ ಅದನ್ನು ರೂಢಿಸಿಕೊಂಡು ಬಂದರು. ಅಪ್ಪಟ ರಾಷ್ಟ್ರವಾದಿಯೂ ಆಗಿದ್ದ ಕುಸುಮಾಕರ ದೇಸಾಯಿ ಅವರು, ೧೯೭೫ರಲ್ಲಿ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ದೇಶದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಿದಾಗ, ಲೋಕನಾಯಕ ಜಯಪ್ರಕಾಶ ನಾರಾಯಣ ಅವರ ಸಂಪೂರ್ಣ ಕ್ರಾಂತಿಯ ಕರೆಗೆ ಓಗೊಟ್ಟು, ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಕಲಬುರ್ಗಿಯಲ್ಲಿ ಪ್ರಥಮವಾಗಿ ಬಂಧನಕ್ಕೊಳಗಾದ ವ್ಯಕ್ತಿ.

ವಕೀಲಿ ವೃತ್ತಿಯಲ್ಲಿ ಅಪಾರ ಪ್ರೌಢಿಮೆಯನ್ನು ಹೊಂದಿರುವ ಕುಸುಮಾಕರ ದೇಸಾಯಿ ಅವರು ಹಣಕ್ಕೆ ಎಂದೂ ಬೆಲೆ ಕೊಟ್ಟವರಲ್ಲ. ತತ್ವ ಸಿದ್ಧಾಂತಗಳು ಅವರ ಮೂಲ ಮಂತ್ರವಾಗಿದ್ದವು. ಅದಕ್ಕಾಗಿ ಅವರು ಎಂದೂ ರಾಜಿ ಮಾಡಿಕೊಂಡವರಲ್ಲ. ತುರ್ತು ಪರಿಸ್ಥಿತಿ ಮುಗಿದು ೧೯೭೭ ರಲ್ಲಿ ಪ್ರಜಾಪ್ರಭುತ್ವದ ಮೇಲೆ ನಂಬಿಕೆಯನ್ನಿಟ್ಟ ಎಲ್ಲ ಪಕ್ಷಗಳೂ ಒಂದಾಗಿ ಜನತಾಪಕ್ಷ ಜನ್ಮತಳೆದಾಗ, ಅವರಲ್ಲಿ ಕುಸುಮಾಕರ ದೇಸಾಯಿ ಅವರು ಸಂಸ್ಥಾಪಕರಲ್ಲೊಬ್ಬ ಪ್ರಮುಖರಾಗಿದ್ದು, ಕಲಬುರ್ಗಿ ಜಿಲ್ಲೆಯ ಜನತೆಯ ಹೆಮ್ಮೆಯ ಸಂಗತಿಯಾಗಿದೆ.

ಅಧಿಕಾರಕ್ಕೆ ಎಂದೂ ಬೆನ್ನು ಹತ್ತದ ದೇಸಾಯಿ ಅವರು, ತಮ್ಮ ವಕೀಲಿ ವೃತ್ತಿಯೊಂದಿಗೆ ಸಮಾಜ ಸೇವೆಯನ್ನು ಮಾಡಿಕೊಂಡು ಬಂದವರು. ಅವರ ಪ್ರತಿಯೊಂದು ನಿಲುವಿಗೂ ಬೆಂಬಲವಾಗಿ ನಿಂತವರು; ಅವರ ಶ್ರೀಮತಿ ಸರಿತಾ ದೇಸಾಯಿ ಅವರು. ತಮ್ಮ ಪತಿ ತೆಗೆದುಕೊಳ್ಳುವ ನಿರ್ಧಾರದಲ್ಲಿ ಅವರಿಗೆ ಅಚಲ ನಂಬಿಕೆ. ಅಂತಲೇ ಅವರದು ಅನ್ಯೋನ್ಯ ದಾಂಪತ್ಯವೆಂದು ಹೇಳಬಹುದು.

ಕುಸುಮಾಕರ ದೇಸಾಯಿ ಅವರು ಅಧಿಕಾರಕ್ಕೆ ಬೆನ್ನು ಹತ್ತಲಿಲ್ಲವೆಂದೇ ಅವರಿಗೆ ಯಾವುದೇ ಅಧಿಕಾರ ಬೇಗ ದೊರೆಯಲಿಲ್ಲ. ಅವರೆಂದೂ ತತ್ವ ಸಿದ್ಧಾಂತಗಳಿಗೆ ರಾಜಿ ಮಾಡಿಕೊಂಡವರಲ್ಲ. ಅಲ್ಲದೇ ನೇರ ನಡೆ-ನುಡಿ ನಿಷ್ಠುರವಾದಿಯಾದ್ದರಿಂದ ಬಹಳಷ್ಟು ಜನ ಅವರನ್ನು ಗರ್ವಿಷ್ಠ ಎಂದು ಕರೆಯುತ್ತಿದ್ದರೂ ಅವರು ಎಷ್ಟೊಂದು ಸ್ನೇಹಜೀವಿ ಎಂಬುದನ್ನು ನಾನು ಅತ್ಯಂತ ಹತ್ತಿರದಿಂದ ನೋಡಿದ್ದೇನೆ. ಇಂಥ ವ್ಯಕ್ತಿಯನ್ನು ರಾಮಕೃಷ್ಣ ಹೆಗಡೆಯವರು ಗುರುತಿಸಿ, ಕರ್ನಾಟಕ ಜಲಮಂಡಳಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದರು.

ಈ ಅಧಿಕಾರದ ಋಣವನ್ನು ದೇಸಾಯಿ ಅವರು ಇಟ್ಟುಕೊಳ್ಳಲಿಲ್ಲ. ಕರ್ನಾಟಕದ ಅನೇಕ

ನಗರ-ಪಟ್ಟಣಗಳು ಕುಡಿಯುವ ನೀರಿನ ತೀವ್ರ ಸಮಸ್ಯೆಗಳನ್ನು ಎದುರಿಸುತ್ತಿರುವವನ್ನು ಗಮನಿಸಿ, ಕಲಬುರ್ಗಿಯೂ ಸೇರಿದಂತೆ ನೀರಿನ ಸಮಸ್ಯೆಯನ್ನು ಬಗೆಹರಿಸಿದರು.

ಕಲಬುರ್ಗಿ ಒಂದು ನಿರ್ಜಲ ಪ್ರದೇಶ, ಕುಡಿಯಲು ನೀರಿಗೂ ಗತಿಯಿಲ್ಲದ ಜಿಲ್ಲೆ ಎಂದು ರಾಜ್ಯದ ಜನತೆ ಕರೆಯುತ್ತಿದ್ದರು. ದೇಸಾಯಿ ಅವರ ಸಾಹಸದ ಫಲವಾಗಿ ಮುಂದಿನ ೩೦ ವರ್ಷಗಳವರೆಗೂ ಕುಡಿಯುವ ನೀರಿಗೆ ಕೊರತೆಯಾಗದಂತೆ ಭೀಮಾ ಯೋಜನೆಯನ್ನು ಜಾರಿಗೊಳಿಸಿದ ಶ್ರೇಯಸ್ಸು ದೇಸಾಯಿ ಅವರಿಗೆ ಸಲ್ಲುತ್ತದೆ. ದೇಸಾಯಿ ಅವರು ಇಂದು ನಮ್ಮೊಂದಿಗಿಲ್ಲ. ಆದರೆ ಕಲಬುರ್ಗಿಯಲ್ಲಿ ನಾವು ಕುಡಿಯುವ ನೀರು ದೇಸಾಯಿ ಅವರ ಸಾಹಸದ ಫಲ ಎಂದು ಧೈರ್ಯವಾಗಿ ಹೇಳಬಲ್ಲೆ. ಇಡೀ ಕಲಬುರ್ಗಿ ಜನತೆಯ ಪರವಾಗಿ ಅವರಿಗೆ ಕೃತಜ್ಞನಾಗಿದ್ದೇನೆ.

ಸಜ್ಜನ

✽ ಡಿ.ಬಿ. ಚಂದ್ರೇಗೌಡ

ಶ್ರೀ ಕುಸುಮಾಕರ ದೇಸಾಯಿಯವರು ನನಗೆ ಬಹಳ ಆತ್ಮೀಯರಾಗಿದ್ದವರು. ನಮ್ಮಿಬ್ಬರ ವೃತ್ತಿಯೂ ವಕೀಲಿಯೇ.

ಹೈದರಾಬಾದ-ಕರ್ನಾಟಕದ ರೂವಾರಿಯಾದ ಶ್ರೀ ದೇಸಾಯಿಯವರದು ಪರಿಪೂರ್ಣ ಬಾಳ್ವೆ. ಸ್ವಾತಂತ್ರ್ಯ ಹೋರಾಟಗಾರರ ಮನೆತನದಿಂದ ಬಂದ ಇವರು ಮಹಾತ್ಮಾಗಾಂಧಿಯವರಿಂದ ಪ್ರಭಾವಿತರಾಗಿ ಚಿಕ್ಕ ವಯಸ್ಸಿನಿಂದಲೇ ಖಾದಿಯನ್ನು ತೊಡಲು ಆರಂಭಿಸಿ, ದೇಶದ ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹ ಮತ್ತು ಚಳುವಳಿಗಳಲ್ಲಿ ಭಾಗವಹಿಸಿ ಅವಿರತವಾಗಿ ಶ್ರಮಿಸಿದವರು. ಸ್ವಾತಂತ್ರ್ಯಕ್ಕಾಗಿ ಸೆರೆಮನೆಗೂ ಹೋಗಿಬಂದರು. ಆಸೆ ಆಮಿಷಗಳಿಗೆ ಒಳಗಾಗದೇ ಭ್ರಷ್ಟ ವ್ಯವಸ್ಥೆಯಲ್ಲೂ ಜನಸೇವೆಯೇ ಜನಾರ್ಧನನ ಸೇವೆಯೆಂದು ಭಾವಿಸಿ ಬಾಳಿದ ಧೀಮಂತ ವ್ಯಕ್ತಿತ್ವ ಇವರದು. ಕಾರ್ಮಿಕರ ಸಂಘಟನೆ ಮತ್ತು ಸಮಾಜವಾದಿ ಸೇವೆಗಳಲ್ಲಿ ಕಾರ್ಯತತ್ಪರರಾದ ದೇಸಾಯಿಯವರು ೧೯೫೫ರಲ್ಲೇ ಗುಲ್ಬರ್ಗಾ ನಗರಪಾಲಿಕೆಗೆ ಚುನಾಯಿತರಾಗಿದ್ದರು. ೧೯೭೪ ರಲ್ಲಿ ಗುಲ್ಬರ್ಗಾ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿ ಕೆಲಸ ನಿರ್ವಹಿಸಿದರು.

ಆಂಗ್ಲ ಪತ್ರಿಕೆಗಳಾದ 'ಫ್ರೀಡಮ್' ಮತ್ತು 'ನ್ಯೂಲೈನ್'ಗಳಿಗೆ ಸಹಸಂಪಾದಕರಾಗಿ ಕೆಲಸ ನಿರ್ವಹಿಸಿ ಪತ್ರಿಕೋದ್ಯಮದಲ್ಲೂ ತಮ್ಮ ಛಾಪೊತ್ತಿದರು. ಕರ್ನಾಟಕ ಜಲಮಂಡಳಿಯ ಅಧ್ಯಕ್ಷರಾಗಿ ಇವರ ಸೇವೆ ಸ್ತುತ್ಯಾರ್ಹವಾದುದು. ತಮ್ಮ ಸತಿ ಲೇಖಕಿ, ವಕೀಲೆ ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯೆ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯವರೊಡನೆ ಕೈಗೂಡಿಸಿ ಸಲ್ಲಿಸಿರುವ ಸಮಾಜ ಸೇವೆ ಎಲ್ಲರ ಮನದಲ್ಲೂ ಅಚ್ಚೊತ್ತಿದೆ.

ಇವರ ಸಹಜ ಸೌಮ್ಯಗುಣ ಹಾಗೂ ಆತ್ಮಸ್ಥೈರ್ಯ ಇಂದಿನವರಿಗೆ ಆದರ್ಶಪ್ರಾಯವಾದುದು. ಇವರ ನಿಧನ ವೈಯಕ್ತಿಕವಾಗಿ ನನಗೆ ತುಂಬಲಾರದ ನಷ್ಟ. ೭೨ ವಸಂತಗಳ ಅರ್ಥಪೂರ್ಣ ಜೀವನ ನಡೆಸಿ ಅಸ್ತಂಗತರಾದ ಶ್ರೀ ಕುಸುಮಾಕರ ದೇಸಾಯಿಯವರ ಸೇವಾಕೈಂಕರ್ಯದ ಜ್ಯೋತಿಯು ಅವರ ಪತ್ನಿಯ ಮೂಲಕ ಹೀಗೆಯೇ ಬೆಳಗುತ್ತಿರಲಿ ಎಂಬುದು ನನ್ನ ಆಶಯ.

ನೆಲೆ ನಿಂತ ನೆನಪು

❀ ಡಾ. ಎ.ಬಿ. ಮಾಲಕರಡ್ಡಿ

ಶ್ರೀ ಕುಸುಮಾಕರ ದೇಸಾಯಿ ಅವರ ಹೆಸರು ಹೈದ್ರಾಬಾದ್ ಕರ್ನಾಟಕ ಪ್ರಾಂತದಲ್ಲಿ ಅತ್ಯಂತ ಜನಜನಿತವಾಗಿದೆ. ಅವರು ವಿಶಿಷ್ಟ ವ್ಯಕ್ತಿತ್ವ ಹೊಂದಿದ್ದರು. ಅವರ ನೆನಪು ಅವರ ವಿಚಾರಧಾರೆಗಳು, ಸರಳ ಸಜ್ಜನಿಕೆಯ ಅಪ್ಪಟ ರಾಷ್ಟ್ರಪ್ರೇಮದ ಸಿಹಿ ನೀರಿನ ಜರತೆಯಂತೆ ಕಾಣುತ್ತವೆ. ಅವರು ಇಂದು ನಮ್ಮೊಡನೆ ಇಲ್ಲದಿರಬಹುದು, ಆದರೆ ಅವರ ಸಮ್ಮೋಹಿನಿ ಎಂದೆಂದಿಗೂ ಮರೆಯದ ಅನುಭವವಾಗಿದೆ. ನನ್ನ ಮತ್ತು ಅವರ ಸಂಬಂಧವು ಕೇವಲ ಸ್ನೇಹತ್ವವಾಗಿರದೆ ಹಲವಾರು ಆಚಾರ ವಿಚಾರಗಳಲ್ಲಿ ಸಾಮ್ಯತೆಯಿದ್ದುದರಿಂದ ಆ ಅಪರೂಪದ ವ್ಯಕ್ತಿತ್ವದ ಆಕರ್ಷಣೆ ನನ್ನನ್ನು ಅತ್ಯಂತ ಗಾಢವಾಗಿ ಸೆಳೆದದ್ದರಲ್ಲಿ ಆಶ್ಚರ್ಯವೇನಿಲ್ಲ.

ರಾಷ್ಟ್ರೀಯವಾದಿ ಹಿನ್ನೆಲೆಯುಳ್ಳ ಮನೆತನದಲ್ಲಿ ಜನಿಸಿದ್ದ ಶ್ರೀ ಕುಸುಮಾಕರ ದೇಸಾಯಿ ಅವರ ತಂದೆ ದಿವಂಗತ ಸಂಜೀವರಾಯರು ನಮ್ಮ ಭಾಗದ ಪ್ರಸಿದ್ಧ ವಕೀಲರಾಗಿದ್ದರು. ಇವರು ವಕೀಲಿ ವೃತ್ತಿಗೆ ತಿಲಾಂಜಲಿ ಇತ್ತು, ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು. ದಿವಂಗತ ಸಂಜೀವರಾಯರ ಮನೆ ಸ್ವಾತಂತ್ರ್ಯ ಹೋರಾಟಗಾರರ ಪ್ರಮುಖ ತಾಣವಾಗಿತ್ತು. ಇಂಥ ರಾಷ್ಟ್ರಭಕ್ತರ ಮನೆತನದಲ್ಲಿ ಹುಟ್ಟಿದ ಕುಸುಮಾಕರ ದೇಸಾಯಿ ಅವರು ಕೂಡ ಸ್ವಾತಂತ್ರ್ಯ ಹೋರಾಟಗಾರರಾಗಿಯೇ ರೂಪುಗೊಂಡರು. ವಿದ್ಯಾರ್ಥಿ ದೆಸೆಯಲ್ಲಿಯೂ ಕೂಡ ಅವರು ವಿದ್ಯಾರ್ಥಿಗಳ ತಂಡವನ್ನು ಕಟ್ಟಿಕೊಂಡು ಅನೇಕ ಚಳವಳಿಗಳನ್ನು ನಡೆಸಿದುದಲ್ಲದೇ ಹೈದರಾಬಾದ್ ನಿಜಾಮ ಸರ್ಕಾರದ ಕೊನೆಯದಿನಗಳ ರಜಾಕಾರರ ಹಾವಳಿ ಎಂದು ಹೇಳುವ ಆ ಸಂದರ್ಭದಲ್ಲಿ ನಿಜಾಮಶಾಹಿ ದಬ್ಬಾಳಿಕೆಯ ವಿರುದ್ಧ ಪ್ರತಿಭಟನೆಯ ಮುಂದಾಳತ್ವವನ್ನು ವಹಿಸಿದ್ದರು. 'ಬೆಳೆಯುವ ಪೈರು ಮೊಳಕೆಯಲ್ಲಿಯೇ' ಎಂಬಂತೆ ತನ್ನ ಬಾಲ್ಯವಸ್ಥೆಯಲ್ಲಿಯೇ ಕ್ರಾಂತಿಕಾರಕ ವಿಚಾರಗಳತ್ತ ಒಲವು ತೋರಿಸಿದುದಲ್ಲದೇ, ಅಪ್ಪಟ ರಾಷ್ಟ್ರಪ್ರೇಮದ ದ್ಯೋತಕವಾಗಿ ಚಳವಳಿಗಳಲ್ಲಿ ಭಾಗವಹಿಸುತ್ತ, ಇಂಟರ್‌ಮೀಡಿಯೇಟ್ ಹಂತದ ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದುದನ್ನು ಕಾಣಬಹುದಾಗಿದೆ.

೧೯೪೭ ರ ಸ್ವಾತಂತ್ರ್ಯ ಚಳುವಳಿ ಸಂದರ್ಭದಲ್ಲಿ ಎರಡು ತಿಂಗಳ ಕಾಲ ಸೆರೆಮನೆ ವಾಸ ಅನುಭವಿಸಿದ ದೇಸಾಯಿಯವರು ಬಿಡುಗಡೆ ನಂತರ ಹೈದ್ರಾಬಾದ್ ಮಹಾರಾಷ್ಟ್ರದ ಗಡಿ ಪ್ರದೇಶ "ಕೆಸರ್ ಜಾವಳ್"ಗೆಯಲ್ಲಿ ಸಶಸ್ತ್ರ ಭೂಗತ ಹೋರಾಟಗಾರರನ್ನು ಸಂಘಟಿಸಿದರು. ಅಲ್ಲದೇ ಹೈದ್ರಾಬಾದ್ ಸ್ಟೇಟ್ ಕಾಂಗ್ರೆಸ್ ನಡೆಸುತ್ತಿದ್ದ ಆಂಗ್ಲ ಪತ್ರಿಕೆಗಳಾದ 'ನ್ಯೂ ಲೈನ್' ದಿನಪತ್ರಿಕೆ ಮತ್ತು 'ಫ್ರೀಡಮ್' ವಾರಪತ್ರಿಕೆಯ ಸಹ ಸಂಪಾದಕರಾಗಿಯೂ ಕೂಡ ಸೇವೆ ಸಲ್ಲಿಸಿದರು. ಅತ್ಯಂತ ಕ್ರಿಯಾಶೀಲರಾಗಿದ್ದ ಅವರ ಸಹನಶೀಲತೆ, ಸಂಯಮ,

ಸೇವಾಮನೋಭಾವ ಹಾಗೂ ದೂರದೃಷ್ಟಿ ಮೌಲ್ಯಗಳು ಅನುಕರಣೀಯವಾಗಿವೆ. ಅವರು ಎಂತಹ ಸಂದರ್ಭದಲ್ಲೂ ಆತ್ಮಸ್ಥೈರ್ಯವನ್ನು ಕಳೆದುಕೊಂಡವರಲ್ಲ. ಅತ್ಯಂತ ನಿಷ್ಠೆ, ಪ್ರಾಮಾಣಿಕತೆ ಹಾಗೂ ಸರಳ ಸಜ್ಜನಿಕೆಗಳ ನಡುವೆ ನಿಷ್ಠುರ ವ್ಯಕ್ತಿತ್ವವನ್ನು ಹೊಂದಿದ್ದರೂ ಸಹ ಅವರಲ್ಲಿ ಹೊರ ಹೊಮ್ಮುತ್ತಿದ್ದ ಹಾಸ್ಯ ಪ್ರಜ್ಞೆ ಎಂತಹವರನ್ನೂ ಬೆರಗುಗೊಳಿಸುತ್ತಿತ್ತು.

ವಕೀಲಿ ವೃತ್ತಿಯಲ್ಲಿ ಅಪಾರ ಪ್ರೌಢಿಮೆ ಹೊಂದಿದ್ದ ಅವರು, ಸೇವಾ ಮನೋಭಾವನೆಗೆ ಪೂರಕವಾಗಿ ಕಾರ್ಮಿಕ ಸಂಘಟನೆ ಹಾಗೂ ಹಲವಾರು ಸಮಾಜವಾದಿ ಸೇವೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅಪ್ಪಟ ಲೋಹಿಯಾ ಅನುಯಾಯಿಯಾಗಿ ಸಮಾಜವಾದ ತತ್ವ ಮತ್ತು ಸಿದ್ಧಾಂತಗಳಲ್ಲಿ ಅಪಾರವಾದ ನಂಬಿಕೆಯನ್ನಿಟ್ಟುಕೊಂಡಿದ್ದ ಅವರು ಅಧಿಕಾರಕ್ಕಾಗಿ ಎಂದೂ ಬೆನ್ನುಹತ್ತಲಿಲ್ಲ. ಅಂತೆಯೇ ಅವರು ತಮ್ಮ ವಕೀಲಿ ವೃತ್ತಿಯೊಂದಿಗೆ ಕೊನೆಯವರೆಗೂ ಸಮಾಜ ಸೇವೆಯನ್ನು ಮಾಡುತ್ತ ಬಂದರು. ತತ್ಪರಿಣಾಮ ಪ್ರಪ್ರಥಮ ಬಾರಿಗೆ ೧೯೫೯ರಲ್ಲಿ ಗುಲ್ಬರ್ಗಾ ನಗರ ಪಾಲಿಕೆಗೆ ಸಮಾಜವಾದಿ ಪಕ್ಷದಿಂದ ಕೌನ್ಸಿಲರ್ ಆಗಿ ಚುನಾಯಿತರಾದರು. ಅವರು ಎಂದೂ ನಂಬಿದ ತತ್ವ ಮತ್ತು ಸಿದ್ಧಾಂತಗಳಿಂದ ದೂರ ಸರಿದು ರಾಜಿ ಮಾಡಿಕೊಳ್ಳುತ್ತಿರಲಿಲ್ಲ. ಹಿಡಿದ ಕೆಲಸವನ್ನು ಪೂರ್ಣಗೊಳಿಸುವ ಹಠವಿರುತ್ತಿತ್ತು. ಗುಲ್ಬರ್ಗಾ ನಗರವು ಮಳೆಗಾಲ ಅಥವಾ ಬೇಸಿಗೆ ಎನ್ನದೆ ಕುಡಿಯುವ ನೀರಿಗಾಗಿ ಸಂಕಷ್ಟವನ್ನು ಎದುರಿಸಬೇಕಾಗುತ್ತಿತ್ತು. ಈ ಮಧ್ಯೆ ೧೯೮೫ ರಲ್ಲಿ ಅವರನ್ನು ಸರ್ಕಾರ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಿತು. ಆ ವೇಳೆಯಲ್ಲಿ ಗುಲ್ಬರ್ಗಾ ನಗರಕ್ಕೆ ಶಾಶ್ವತವಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಭೀಮಾ ನದಿಯಿಂದ ಪೂರೈಕೆ ಮಾಡಲು ಅವರು ಅವಿರತವಾಗಿ ಶ್ರಮಿಸಿದ್ದೂ ಅಲ್ಲದೆ ಅದರಲ್ಲಿ ಅವರು ಅಭೂತಪೂರ್ವ ಯಶಸ್ಸನ್ನೂ ಕಂಡರು. ಗುಲ್ಬರ್ಗಾ ಜನತೆಯ ಬಹುಕಾಲದ ಕನಸು ನನಸಾಯಿತು. ಈ ಮಹಾತ್ಕಾರ್ಯಕ್ಕಾಗಿ ಕುಸುಮಾಕರ ದೇಸಾಯಿಯವರನ್ನು ಗುಲ್ಬರ್ಗಾ ಜನತೆ ಎಂದಿಗೂ ಸ್ಮರಿಸದೇ ಇರಲಾರದು. ಅವರ ಈ ಎಲ್ಲಾ ಶ್ರೇಯಸ್ಸಿಗೆ ಬೆಂಬಲವಾಗಿ ನಿಂತು ಸ್ಫೂರ್ತಿ ತುಂಬಿದವರು ಅವರ ಧರ್ಮಪತ್ನಿ ಹಾಗೂ ಹೆಸರಾಂತ ಸಾಹಿತಿ ಮತ್ತು ವಿಧಾನ ಪರಿಷತ್ತಿನ ಮಾಜಿ ಸದಸ್ಯೆ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯವರು ಎಂದರೆ ಅತಿಶಯೋಕ್ತಿಯಾಗಲಾರದು.

ಶ್ರೀ ಕುಸುಮಾಕರ ದೇಸಾಯಿ ಅವರು ಇಂದು ಭೌತಿಕವಾಗಿ ನಮ್ಮೊಂದಿಗೆ ಇಲ್ಲದಿದ್ದರೂ ಕೂಡ ಅವರ ನಡೆ-ನುಡಿ, ಆಚಾರ-ವಿಚಾರಗಳು, ದೂರದೃಷ್ಟಿ, ಸೇವಾ ಮನೋಭಾವ ಹಾಗೂ ಅವರು ಮಾಡಿರುವ ಕೆಲಸಗಳು ನಮ್ಮ ಜೊತೆ ಇವೆ. ಈ ಹಿನ್ನೆಲೆಯಲ್ಲಿ ಅವರ ಅಗಲಿಕೆ ಗೌಣವಾಗಿ ಅವರು ಯಾವಾಗಲು ಎದುರಿಗಿದ್ದಂತೆ, ನಮ್ಮ ಜೊತೆ ಮಾತನಾಡುತ್ತಿದ್ದಂತೆ, ಸಮಾಜದ ಸೇವೆಗೆ ಪ್ರೇರೇಪಿಸುತ್ತಿದ್ದಂತೆ ಕಾಣುತ್ತದೆ.

ಗಟ್ಟಿತನ- ದಿಟ್ಟ ವ್ಯಕ್ತಿತ್ವ

❁ -ಖಮರುಲ್ ಇಸ್ಲಾಮ್

ನಾನು ವಿದ್ಯಾರ್ಥಿಯಾಗಿದ್ದಾಗಲೇ ಕುಸುಮಾಕರ ದೇಸಾಯಿ ಅವರು ಒಬ್ಬ ಪ್ರಸಿದ್ಧ ವಕೀಲರೆಂದು ತಿಳಿದಿತ್ತು. ನಾನು ರಾಜಕೀಯಕ್ಕೆ ಬಂದ ನಂತರ, ಅವರೊಬ್ಬ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಸಮಾಜವಾದಿ ಧುರೀಣರೆಂದು ಅವರ ಇನ್ನೊಂದು ಮುಖದ ಪರಿಚಯವಾಯಿತು.

ನಾನು ಅನೇಕ ಸಮಾಜವಾದಿಗಳನ್ನು ನೋಡಿದ್ದೇನೆ. ಅವರೆಲ್ಲ ನಂತರ ಬೇರೆ ಬೇರೆ ಪಕ್ಷಗಳೊಂದಿಗೆ ಗುರುತಿಸಿಕೊಂಡು ಅಧಿಕಾರ ಹಿಡಿದರು. ಕುಸುಮಾಕರ ದೇಸಾಯಿ ಅವರು, ಎಂದೂ ತಾವು ನಂಬಿರುವ ತತ್ವಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಅಧಿಕಾರದ ಹಿಂದೆ ಹೋಗಲಿಲ್ಲ. ಇಂಥ ರಾಜಕೀಯ ನನಗೆ ಬೇಡ ಎಂದು ವಕೀಲಿ ವೃತ್ತಿಯನ್ನೇ ನಿಷ್ಠೆಯಿಂದ ಮಾಡಿಕೊಂಡು, ಸಮಾಜವಾದವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ನಡೆದುಕೊಂಡು ಬಂದವರು.

ಅವರು ತೀರ ಹತ್ತಿರದಿಂದ ಪರಿಚಯವಾಗಿದ್ದೆಂದರೆ ಭೀಮಾ ಯೋಜನೆ ಅನುಷ್ಠಾನ ಸಂದರ್ಭದಲ್ಲಿ. ಆಗ ಕುಸುಮಾಕರ ದೇಸಾಯಿ ಅವರು ರಾಜ್ಯ ಜಲಮಂಡಳಿಯ ಅಧ್ಯಕ್ಷರಾಗಿದ್ದರು. "ಅಧ್ಯಕ್ಷರಾಗಿ ಕಾರಿನಲ್ಲಿ ಮೆರೆಯಲು ನಾನು ಬಂದಿಲ್ಲ. ಏನಾದರೂ ಮಾಡಬೇಕಾಗಿದೆ. ಮೊದಲು ನನ್ನ ಜಿಲ್ಲೆಯಲ್ಲೇ ಕುಡಿಯುವ ನೀರಿನ ಸಮಸ್ಯೆ ಇದೆ. ಅದನ್ನು ಬಗೆಹರಿಸುವ ವಿಚಾರವಿದೆ. ಅದಕ್ಕಾಗಿ ಭೀಮಾ ನದಿಯಿಂದ ಕಲಬುರ್ಗಿ ನಗರಕ್ಕೆ ನೀರು ಪೂರೈಸುವ ಯೋಜನೆ ರೂಪಿಸುತ್ತಿದ್ದೇನೆ" ಎಂದು ನಾನು ಅವರಿಗೆ ಅಭಿನಂದಿಸಲು ಹೋದಾಗ ಹೇಳಿದರು.

"ಕೃಷ್ಣಾ ಯೋಜನೆಯ ಎಲ್ಲ ಕಾಲುವೆಗಳೂ ಕೊನೆಗೊಳ್ಳುವದು ಭೀಮಾ ನದಿಗೆ. ಆದ್ದರಿಂದ ಭೀಮಾ ನದಿ ಮುಂದಿನ ದಿನಗಳಲ್ಲಿ ಯಾವುದೇ ಕಾರಣಕ್ಕೂ ಬತ್ತುವದಿಲ್ಲ. ಆದ್ದರಿಂದ ಭೀಮಾ ನದಿಗೆ ಬ್ಯಾರೇಜು ನಿರ್ಮಿಸಿ ನೀರು ಸರಬರಾಜು ಯೋಜನೆ ಜಾರಿಗೆ ತಂದರೆ, ಕಲಬುರ್ಗಿ ನಗರಕ್ಕೆ ಕುಡಿಯುವ ನೀರಿನ ಸಮಸ್ಯೆ ಎಂದೂ ಬರುವದಿಲ್ಲ. ಈ ಸಮಸ್ಯೆ ಶಾಶ್ವತವಾಗಿ ಪರಿಹಾರವಾಗುತ್ತದೆ" ಎಂದರು.

ನಾನು ಕಲಬುರ್ಗಿ ನಗರದ ಶಾಸಕನಾಗಿರುವುದರಿಂದ ಕುಸುಮಾಕರ ದೇಸಾಯಿ ಅವರ ದೂರಾಲೋಚನೆ ಕಂಡು ಸಂತೋಷವಾಯಿತು. "ಇದಕ್ಕೆ ನನ್ನ ಸಂಪೂರ್ಣ ಸಮ್ಮತಿ ಇದೆ. ಇಬ್ಬರ ಉದ್ದೇಶವೂ ಒಂದೇ. ನಗರಕ್ಕೆ ಸಮರ್ಪಕ ಕುಡಿಯುವ ನೀರು ಪೂರೈಸುವದು" ಎಂದು ಹೇಳಿ ಅಭಿನಂದಿಸಿ ಬಂದೆ.

ಮುಂದೆ ಈ ಯೋಜನೆಗೆ ಸರ್ಕಾರದಿಂದ ಮಂಜೂರಾತಿ ದೊರೆಯಲಿಲ್ಲ. ಈ ಯೋಜನೆ ಜಾರಿಗೆ ಬಂದರೆ, ಕುಸುಮಾಕರ ದೇಸಾಯಿಗೆ ಶ್ರೇಯಸ್ಸು ಹೋಗುತ್ತದೆಂದು ಅವರದೇ ಪಕ್ಷದ ಕೆಲವು ಮುಖಂಡರು, ಭೀಮಾ ಯೋಜನೆಗೆ ಅಡ್ಡಗಾಲು ಹಾಕಿ ಮಂಜೂರಾಗದಂತೆ ತಡೆದರು.

ಈ ಸುದ್ದಿ ನನಗೂ ಗೊತ್ತಾಯಿತು. ಕೂಡಲೇ ಇದಕ್ಕೆ ಕಾರಣವೇನೆಂದು ಪರಿಶೀಲಿಸಿದಾಗ, "ಈ ನೀರು ಕುಡಿಯಲು ಯೋಗ್ಯವಲ್ಲ" ಎಂದು ಯಾರೋ ಹೇಳಿದರಂತೆ. ಅದಕ್ಕಾಗಿ ಮಂಜೂರಾತಿ ನೀಡಲಾಗುವದಿಲ್ಲವೆಂದು ಸಂಬಂಧಪಟ್ಟವರು ಬೇಜವಾಬ್ದಾರಿಯಿಂದ ಉತ್ತರಿಸಿದರು.

ಕುಡಿಯಲು ನೀರು ಅಗತ್ಯ. ಆದರೆ ಅದರ ಜೊತೆಯಲ್ಲೇ ನೀರು ಕುಡಿಯಲು ಯೋಗ್ಯವಾಗಿರಬೇಕಾದ್ದು ಮುಖ್ಯ. ನಾನು ಕುಸುಮಾಕರ ದೇಸಾಯಿ ಅವರನ್ನು ತರಾಟೆಗೆ ತೆಗೆದುಕೊಳ್ಳಲು ಅವರಲ್ಲಿಗೆ ಹೋಗಿ ಪ್ರಸ್ತಾಪಿಸಿದಾಗ, ಅವರು ಯೋಜನೆ ರೂಪಿಸುವ ಮೊದಲೇ, ಕೇಂದ್ರ ಸರ್ಕಾರದ ಸಂಸ್ಥೆಯೊಂದರಿಂದ ಭೀಮಾ ನೀರನ್ನು ಪರೀಕ್ಷೆ ಮಾಡಿಸಿ ವರದಿಯನ್ನು ತರಿಸಿಕೊಂಡಿದ್ದನ್ನು ತೋರಿಸಿದರು. ನನಗೆ ಅಚ್ಚರಿಯಾಯಿತು.

ಭೀಮಾ ಯೋಜನೆ ವಿಳಂಬದಲ್ಲಿ ರಾಜಕೀಯ ನಡೆಯುತ್ತಿದೆ ಎಂಬುದು ಅರಿವಾಯಿತು. ಈ ಯೋಜನೆ ಅನುಷ್ಠಾನಗೊಳ್ಳದಿದ್ದರೆ, ಕಲಬುರ್ಗಿಯ ಜನತೆ ಕಷ್ಟ ಅನುಭವಿಸಬೇಕಾಗುತ್ತದೆ. ಆದ್ದರಿಂದ ಸರ್ಕಾರಕ್ಕೆ ಪತ್ರ ಬರೆದು, ಭೀಮಾ ಯೋಜನೆಗೆ ಮಂಜೂರಾತಿ ನೀಡದಿದ್ದರೆ, ನಾನು ಈ ಕ್ಷೇತ್ರದ ಶಾಸಕನಾಗಿ ಜನರೊಂದಿಗೆ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದೆ. ನಂತರ ಸತ್ಯ ಸಂಗತಿಯನ್ನು ಬಯಲು ಮಾಡಿ ಹೋರಾಟಕ್ಕಿಳಿದೆ. ತಿಂಗಳು ಗಟ್ಟಲೇ ಹೋರಾಟ ನಡೆಯಿತು.

ಒಂದು ನಗರದ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಆಡಳಿತ ಪಕ್ಷದವರೇ ತಮ್ಮ ಸ್ವಾರ್ಥಕ್ಕಾಗಿ ಅಡ್ಡಿ ಮಾಡಿದ್ದರಿಂದ ಜನರ ಮುಂದೆ ಮುಖ ತೋರಿಸದಂಥ ಪರಿಸ್ಥಿತಿ ತಂದುಕೊಂಡಿದ್ದರು. ಅವರೆಲ್ಲ ಕುಸುಮಾಕರ ದೇಸಾಯಿ ಮತ್ತು ನನ್ನ ನಡುವೆ ರಾಜಕೀಯ ಸಂಬಂಧ ಕಲ್ಪಿಸಿ ಅವರಿಗೆ ಕಳಂಕ ತರಲೂ ಪ್ರಯತ್ನಿಸಿದರು.

ಆದರೆ ಕುಸುಮಾಕರ ದೇಸಾಯಿ ಗಟ್ಟಿ ವ್ಯಕ್ತಿತ್ವದ ಮನುಷ್ಯ. "ನಾನು ಜನರ ಸೇವೆಗೆ ನಿಂತಿದ್ದೇನೆ. ಕಲಬುರ್ಗಿ ನಗರದ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕುವದಾದರೆ, ನಾನು ಯಾವುದೇ ಕಳಂಕ ನನ್ನ ತಲೆಯ ಮೇಲೆ ಹಾಕಿಕೊಳ್ಳಲು ಸಿದ್ಧ. ನಿಮ್ಮ ಹೋರಾಟ ಸರ್ಕಾರದ ವಿರುದ್ಧವಾದರೆ, ನನ್ನ ಹೋರಾಟ ನೀರಿಗಾಗಿ" ಎಂದು ಹೇಳಿದರು. ಅಷ್ಟೇ ಅಲ್ಲ, "ಭೀಮಾ ಯೋಜನೆಗೆ ಸರ್ಕಾರ ಒಪ್ಪಿಕೊಳ್ಳದಿದ್ದರೆ, ನಾನು ಅಧ್ಯಕ್ಷನಾಗಿದ್ದೇನು ಪ್ರಯೋಜನ ಮಂಡಳಿಯ ಅಧ್ಯಕ್ಷ ಪದವಿಗೆ ರಾಜೀನಾಮೆ ಕೊಡಲೂ ಸಿದ್ಧ"ವೆಂದು ಬಹಿರಂಗ ಹೇಳಿಕೆ

ನೀಡಿದಾಗ, ಸರ್ಕಾರ ಇಕ್ಕಟ್ಟಿಗೆ ಸಿಕ್ಕಿಕೊಂಡಿತು. ಈಗಾಗಲೇ ಯಾರದೋ ಮಾತು ಕೇಳಿ, ಯೋಜನೆಗೆ ಮಂಜೂರಾತಿ ನೀಡದೇ ಅನಗತ್ಯ ಕಳಂಕ ಕಟ್ಟಿಕೊಂಡಾಗಿದೆ. ಕುಸುಮಾಕರ ರಾಜೀನಾಮೆ ನೀಡಿದರೆ, ನಮ್ಮ ಸರ್ಕಾರದ ಮಾನ ಬೀದಿ ಪಾಲಾಗುತ್ತದೆಂದು, ವಿರೋಧಿಗಳನ್ನು ಕರೆದು ಛೀಮಾರಿ ಹಾಕಿ, ಭೀಮಾ ಯೋಜನೆಗೆ ಮಂಜೂರಾತಿ ನೀಡಿರುವದಾಗಿ ಸಂಜೆ ನಾಲ್ಕು ಗಂಟೆ ಸುಮಾರಿಗೆ ನಮಗೆ ಫ್ಯಾಕ್ಸ್ ಸಂದೇಶ ತಲುಪಿತು. ನಾವು ಸತ್ಯಾಗ್ರಹವನ್ನು ಹಿಂತೆಗೆದುಕೊಂಡೆವು.

ಒಬ್ಬ ಮನುಷ್ಯನ ಪ್ರಯತ್ನ ಪ್ರಾಮಾಣಕವಾಗಿದ್ದರೆ, ಅವನು ಅಧಿಕಾರಕ್ಕೆ ಅಂಟಿಕೊಂಡು ಕೂಡುವದಿಲ್ಲ ಎಂಬುದನ್ನು ನಾನು ನನ್ನ ರಾಜಕೀಯ ಜೀವನದಲ್ಲಿ ಕುಸುಮಾಕರ ದೇಸಾಯಿ ಅವರಿಂದ ಕಲಿತೆ. ಮುಂದೆ ಭೀಮಾ ಯೋಜನೆ ಕಾಮಗಾರಿಯನ್ನೂ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರೇ ಸ್ವತಃ ಕಲಬುರ್ಗಿಗೆ ಬಂದು ಅಡಿಗಲ್ಲು ನೆರವೇರಿಸಿ, ಈ ಯೋಜನೆ ಮಂಜೂರಾತಿಗೆ ಕುಸುಮಾಕರ ದೇಸಾಯಿ ಅವರು ಪಟ್ಟಿರುವ ಶ್ರಮವನ್ನೂ ಕುರಿತು ಮಾತನಾಡಿ, 'ಈ ಕುಸುಮಾಕರ ಸಾಮಾನ್ಯ ಮನುಷ್ಯನಲ್ಲ. ಈತ ಆಧುನಿಕ ಭಗೀರಥ' ಎಂದು ಬಣ್ಣಿಸಿ ಶುಭಕೋರಿದರು.

ಆದರೆ ಕುಸುಮಾಕರ ದೇಸಾಯಿ ಅವರಿಗೆ ಇದರಿಂದ ಸಮಾಧಾನವಾಗಲಿಲ್ಲ. 'ಭೀಮಾ ನೀರು ಕಲಬುರ್ಗಿ ನಗರದ ನಲ್ಲಿಗಳಲ್ಲಿ ಹರಿದಾಗ ಮಾತ್ರ ನನ್ನ ಶ್ರಮ ಸಾರ್ಥಕವಾಗುತ್ತದೆ' ಎಂದು ಅದೇ ಕ್ಷಣದಲ್ಲಿ ಮುಖ್ಯಮಂತ್ರಿಗಳಿಗೆ ಮಾರುತ್ತರ ನೀಡಿದರು.

ಕಾಮಗಾರಿ ಬಹುಬೇಗ ಪ್ರಾರಂಭವಾಯಿತು. ಮುಂದೆ ೧೯೯೩ರಲ್ಲಿ ಈ ಯೋಜನೆ ಆರಂಭವಾಗಿ, ಕಳೆದ ಒಂದು ದಶಕದಿಂದಲೂ ಕಲಬುರ್ಗಿ ನಗರದ ಕುಡಿಯುವ ನೀರಿನ ಸಮಸ್ಯೆಗೆ, ಭೀಮಾ ಯೋಜನೆಯಿಂದ ಶಾಶ್ವತ ಪರಿಹಾರ ದೊರಕಿದಂತಾಗಿದೆ.

ಸ್ವಾತಂತ್ರ್ಯ ಯೋಧರ ಮನೆತನದಿಂದ ಬಂದಿರುವ ಕುಸುಮಾಕರ ದೇಸಾಯಿ ಅವರ ತಂದೆ ಸಂಜೀವರಾವ ದೇಸಾಯಿ ಅವರೂ ಹೆಸರುವಾಸಿಯಾಗಿದ್ದರು. ಅವರ ಚಿಕ್ಕಪ್ಪ ಭೀಮಸೇನರಾವ ದೇಸಾಯಿ ಅವರು ಹೋರಾಟದಲ್ಲಿ ಪ್ರಾಣವನ್ನೇ ಬಲಿಕೊಟ್ಟು ಹುತಾತ್ಮರಾದವರು. ಆ ಮನೆತನದ ಹೆಸರು ಉಳಿಸಲು ಕುಸುಮಾಕರ ದೇಸಾಯಿ ಅವರು ಕಲಬುರ್ಗಿ ನಗರದ ಜನತೆಯ ಪಾಲಿಗೆ 'ಭಗೀರಥ'ರಾಗಿದ್ದಾರೆ.

ಅವರ ಈ ಕಾರ್ಯವನ್ನು ಎಂದೂ ಮರೆಯಲಿಕ್ಕಾಗುವದಿಲ್ಲ. ಕುಸುಮಾಕರ ದೇಸಾಯಿ ಅವರು ಇಂದು ನಮ್ಮೊಂದಿಗಿಲ್ಲ. ಆದರೆ ಅವರು ಜಾರಿಗೊಳಿಸಿದ ಭೀಮಾ ಯೋಜನೆ ನಮ್ಮೊಂದಿಗಿದೆ. ಕುಸುಮಾಕರ ಹೆಸರು ಶಾಶ್ವತವಾಗಿ ಉಳಿಯುವಂತೆ ಮಾಡುವದು ನಮ್ಮೆಲ್ಲರ ಕರ್ತವ್ಯವಾಗಿದೆ.

ಅಪರೂಪದ ವ್ಯಕ್ತಿ

❁ ಕೆ.ಜೆ. ಮಹೇಶ್ವರಪ್ಪ

ನಾನು ಮತ್ತು ಶ್ರೀ ಕುಸುಮಾಕರ ದೇಸಾಯಿಯವರು ಸಮಾನ ವಯಸ್ಕರು ಮತ್ತು ಸಮಾನ ಮನಸ್ಕರು ಆಗಿದ್ದೆವು. ಅವರು ತಮ್ಮ ಸಾರ್ವಜನಿಕ ಜೀವನ ಪರ್ಯಂತ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಚಿಂತೆಗಿಂತ ಆಯಾ ಕಾಲಕ್ಕೆ ಸಂಭವಿಸಿದ ಐತಿಹಾಸಿಕ, ರಾಜಕೀಯ ಮತ್ತು ಸಾಮಾಜಿಕ ಘಟನಾವಳಿಗಳ ಕಾಲದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವ ಪ್ರವೃತ್ತಿಯನ್ನು ಜೀವನದ ಉದ್ದಕ್ಕೂ ಬೆಳೆಸಿಕೊಂಡು ಬಂದವರು.

ದೇಶದ ಸ್ವಾತಂತ್ರ್ಯ ಹೋರಾಟವೇ ಇರಲಿ, ಹೈದರಾಬಾದ್ ವಿಮೋಚನಾ ಚಳವಳಿಯೇ ಇರಲಿ ಮತ್ತು ತುರ್ತು ಪರಿಸ್ಥಿತಿಯ ವಿರುದ್ಧ ನಡೆದ ಚಳುವಳಿಯೇ ಆಗಿರಲಿ ಅವರು ನಿರ್ವಹಿಸಿದ ಪಾತ್ರ ಅವರ ಜೀವನದ ಪ್ರಮುಖ ಘಟನಾವಳಿಗಳಾಗಿದ್ದವು. ಎಷ್ಟೋ ಜನ ಮುಖಂಡರೆನ್ನಿಸಿಕೊಂಡವರು, ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಬ್ರಿಟಿಷ್ ಏಜೆಂಟರಾಗಿ ಕೆಲಸ ಮಾಡಿದವರು, ಸ್ವಾತಂತ್ರ್ಯದ ನಂತರದ ದಿನಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿ ದೊಡ್ಡ ದೊಡ್ಡ ಅಧಿಕಾರ ಸ್ಥಾನಗಳನ್ನು ಅಲಂಕರಿಸಿ ಮೆರೆದರು. ಆದರೆ ಸಾರ್ವಜನಿಕ ಜೀವನದಲ್ಲಿ ರಾಜಕಾರಣದಲ್ಲಿ ದೇಸಾಯಿಯವರಂಥವರನ್ನು ಕಾಣುವುದು ವಿರಳ. ಅವರು ನಂಬಿದ ಮೌಲ್ಯಗಳನ್ನು ಕೊನೆಯವರೆಗೂ ಉಳಿಸಿಕೊಂಡು ಸಾರ್ಥಕ ಜೀವನ ನಡೆಸಿದವರು. ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡು ಬೆಳೆದವರು. ಸ್ವಾತಂತ್ರ್ಯದ ನಂತರದ ದಿವಸಗಳಲ್ಲಿ ಅಧಿಕಾರಕ್ಕಾಗಿ ನೂಕುನುಗ್ಗಲು ನಡೆದಾಗಲೂ ಮೌಲ್ಯಾಧಾರಿತ ರಾಜಕಾರಣಕ್ಕೆ ಕಟಿಬದ್ಧರಾಗಿದ್ದವರು.

ಕುಸುಮಾಕರ ದೇಸಾಯಿಯವರು ಸ್ವಾತಂತ್ರ್ಯಾನಂತರದಲ್ಲಿಯೂ ಸಹ ರಾಜಕೀಯ, ಸಾಮಾಜಿಕ ವ್ಯವಸ್ಥೆಯಲ್ಲಿ ಪರಿವರ್ತನೆ ತರುವಂತಹ ಕೆಲಸದ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಅದಕ್ಕಾಗಿ ಶ್ರಮಿಸುವ ಮತ್ತು ಪ್ರವಾಹದ ಎದುರಿನಲ್ಲಿ ಈಜುವ ಪ್ರವೃತ್ತಿಯನ್ನು ಜೀವನದಲ್ಲಿ ಆಯ್ಕೆ ಮಾಡಿಕೊಂಡಿರುವಂತಹ ಹೆಗ್ಗಳಿಕೆ ದೇಸಾಯಿಯವರದು. ಗಾಂಧಿ ಲೋಹಿಯ ಮತ್ತು ಜೆ.ಪಿ.ಯಂತಹ ಮಹಾನ್ ನಾಯಕರುಗಳಿಂದ ಸ್ಫೂರ್ತಿ ಪಡೆದು ಸಾರ್ಥಕ ಜೀವನ ನಡೆಸಿದರು. ೧೯೫೪ರಲ್ಲಿ ವಕೀಲ ವೃತ್ತಿಯನ್ನು ಪ್ರಾರಂಭಿಸಿದರೂ ಸಹ ತಮ್ಮ ರಾಜಕೀಯ ಚಟುವಟಿಕೆಗಳನ್ನು ಕಡೆಗಣಿಸಲಿಲ್ಲ. ೧೯೫೯ ರಲ್ಲಿ ಸಮಾಜವಾದಿ ಪಕ್ಷದಿಂದ ಗುಲ್ಬರ್ಗ, ನಗರ ಪಾಲಿಕೆ ಸದಸ್ಯರಾಗಿ ಆಯ್ಕೆಯಾದರು. ಅವರು ಎಲ್.ಎಲ್.ಎಂ. ಪದವಿಯನ್ನು ಪಡೆದು ಗುಲ್ಬರ್ಗ ಕಾನೂನು ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾಗಿ ಅನೇಕ ಸಂಸ್ಥೆಗಳಿಗೆ ಕಾನೂನು ಸಲಹೆಗಾರರಾಗಿ ಕೆಲಸ ಮಾಡಿದರು. ತುರ್ತು ಪರಿಸ್ಥಿತಿ ವಿರುದ್ಧ ಹೋರಾಟ ಮಾಡಿ ಜೈಲು ವಾಸವನ್ನು ಅನುಭವಿಸಿದರು. ಅವರು ಜೀವನದಲ್ಲಿ ವಿವಿಧ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ನಾಲ್ಕು ಬಾರಿ

ಬಂಧನಕ್ಕೊಳಗಾಗಿ ಜೈಲುವಾಸ ಅನುಭವಿಸಿದರು. ಕರ್ನಾಟಕದಲ್ಲಿ ವೈಚಾರಿಕತೆ, ರಸಿಕತೆ, ಸ್ನೇಹಪರತೆ ಇವೆಲ್ಲಾ ವಿಶಿಷ್ಟ ಗುಣಗಳನ್ನು ಮೈಗೂಡಿಸಿಕೊಂಡ ಅಪರೂಪದ ರಾಜಕಾರಣಿ.

ಇಂತಹ ಒಬ್ಬ ರಾಜಕಾರಣಿ ನನ್ನ ಆಪ್ತ ಸ್ನೇಹಿತರಾಗಿದ್ದರು ಎಂಬುದು ನನಗೊಂದು ಹೆಮ್ಮೆ. ಎಲ್ಲಕ್ಕೂ ಮಿಗಿಲಾಗಿ ಅವರ ಪತ್ನಿ ಶ್ರೀಮತಿ ಸರಿತಾರವರು ಅವರ ವಕೀಲ ವೃತ್ತಿಯಲ್ಲಿ, ರಾಜಕಾರಣದಲ್ಲಿ, ಸಾಹಿತ್ಯಿಕ ಹಾಗೂ ಎಲ್ಲ ಸಾಮಾಜಿಕ ಚಟುವಟಿಕೆಗಳಲ್ಲಿ ಸಹಭಾಗಿತ್ವದ ಸುಂದರ ಜೋಡಿಯಾಗಿದ್ದರು. ಕರ್ನಾಟಕ ರಾಜಕಾರಣದಲ್ಲಿ ಅಪರೂಪದ ಸ್ನೇಹಮಯ ವ್ಯಕ್ತಿತ್ವ ಅವರದು. ಸಮಾಜವಾದಿ ಸಂಘಟನೆಗಾಗಿ ಗುಲ್ಬರ್ಗ ಜಿಲ್ಲೆಯಲ್ಲಿ ದಿವಂಗತ ಗೋಪಾಲಗೌಡರು, ಶ್ರೀ ಜೆ.ಎಚ್. ಪಟೇಲರವರು ಮತ್ತು ನಾನು ಪ್ರವಾಸ ಮಾಡಿದಾಗಲೆಲ್ಲ ಅವರ ಮನೆಯಲ್ಲಿ ಆತಿಥ್ಯ ಸ್ವೀಕರಿಸದೇ ಬರುತ್ತಿರಲಿಲ್ಲ. ಇಂತಹ ಧೀಮಂತ ರಾಜಕಾರಣಿಯ ಹೆಸರಿನಲ್ಲಿ ಗುಲ್ಬರ್ಗದಲ್ಲಿ ಸೂಕ್ತ ಸ್ಮಾರಕ ನಿರ್ಮಿಸಬೇಕೆಂದು ಈ ಮೂಲಕ ಸೂಚಿಸ ಬಯಸುತ್ತೇನೆ.

ಪ್ರತಿಭಾನ್ವಿತ

✽ ಡಾ. ಎಂ.ಆರ್. ತಂಗಾ.

ದಿವಂಗತ ಶ್ರೀ ಕುಸುಮಾಕರ ದೇಸಾಯಿಯವರು ಒಬ್ಬ ಸ್ವಾತಂತ್ರ್ಯ ಹೋರಾಟಗಾರರು, ರಾಜಕೀಯ ನೇತಾರರು ಹಾಗೂ ಸುಪ್ರಸಿದ್ಧ ವಕೀಲರಾಗಿ ಈ ಭಾಗದ ಜನಮನದಲ್ಲಿ ನೆಲೆಸಿದ್ದರು.

ಕುಸುಮಾಕರ ದೇಸಾಯಿಯವರ ಸೋದರ ಶ್ರೀ ಹೇಮಂತ ದೇಸಾಯಿಯವರು ನಾನು ಇಬ್ಬರೂ ನೂತನ ವಿದ್ಯಾಲಯ ಶಾಲೆಯ ವಿದ್ಯಾರ್ಥಿಗಳು, ಸಹಪಾಠಿಗಳು. ಇದರಿಂದಾಗಿ ನಮ್ಮಿಬ್ಬರ ಆಟ, ಪಾಠಗಳೆಲ್ಲವೂ ಅವರ ಮನೆಯಲ್ಲಿಯೇ. ಹೀಗಾಗಿ ಅವರ ಪರಿಚಯ ಹಾಗೂ ನನ್ನ ಸಂಬಂಧಿಕರಲ್ಲೊಬ್ಬರಾದವರು ಮಾಜಿ ಕೇಂದ್ರ ಸಚಿವರು ಹಾಗೂ ಮಾತೃಭೂಮಿಯ ಸಂಪಾದಕರಾದ ಶ್ರೀ ಎಂ.ಪಿ.ವೀರೇಂದ್ರಕುಮಾರರವರು ಹಾಗೂ ಶ್ರೀ ಕುಸುಮಾಕರ ದೇಸಾಯಿಯವರು ಆತ್ಮೀಯ ಗೆಳೆಯರಾಗಿದ್ದರು. ಇದರಿಂದಾಗಿ ನಮ್ಮ ಮತ್ತು ಅವರ ಬಾಂಧವ್ಯಗಳು ಘನಿಷ್ಠವಾಗಿ ಬೆಳೆದುಬಂದವು. ಮುಂದೆ ಈ ಭಾಗದಲ್ಲಿ ಆ ದಿನಗಳಲ್ಲಿ ಉನ್ನತ ಅಭ್ಯಾಸದ ಅನುಕೂಲ ಇಲ್ಲದಿದ್ದಾಗ ನಾನು ಹಾಗೂ ಹೇಮಂತ ದೇಸಾಯಿ ಹೈದ್ರಾಬಾದನಲ್ಲಿ ಉಸ್ಮಾನಿಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಾಗಿದ್ದೆವು. ಆ ಸಂದರ್ಭದಲ್ಲಿ ಶ್ರೀ ಕುಸುಮಾಕರ ದೇಸಾಯಿಯವರು ಉರ್ದು ಮಾಧ್ಯಮದಲ್ಲಿ ಬಿ.ಎಸ್ಸಿ. ಅಭ್ಯಾಸ ಮಾಡುತ್ತಲಿದ್ದರು. ಅವರು ಇಸಾಮಿಯಾ ಬಜಾರದಲ್ಲಿ ಮನೆ ಮಾಡಿಕೊಂಡಿದ್ದರು. ಅವರ ಮನೆಗೆ ಹೋಗಿಬರುತ್ತಲಿದ್ದೆವು.

ನಂತರದ ದಿನಗಳಲ್ಲಿ ನನ್ನ ನವಜೀವನ, ನರ್ಸಿಂಗ್‌ಹೋಮ್ ಮತ್ತು ಕ್ಲಿನಿಕ್‌ನ್ನು ಅವರ ಮನೆಯ ಪಕ್ಕದಲ್ಲಿಪ್ರಾರಂಭಿಸಿದೆ. "ಲವ್ ದೈ ನೇಬರ್" ಇದು ಅಕ್ಷರಶಃ ಸತ್ಯವಾಗಿತ್ತು.

ಸನ್ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದಾಗ ಶ್ರೀ ಕುಸುಮಾಕರ ದೇಸಾಯಿಯವರು ಕರ್ನಾಟಕ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಲಿಯ ಚೇರಮನ್‌ರಾಗಿದ್ದರು. ಆಗ ಗುಲಬರ್ಗಾ ನಗರಕ್ಕೆ ಭೋಸಗಾ ಕೆರೆಯಿಂದ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿತ್ತು. ಬೆಳೆಯುತ್ತಿರುವ ನಗರ ಹಾಗೂ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಭೀಮಾ ನದಿಯಿಂದ ಗುಲಬರ್ಗಾ ನಗರ ನೀರು ಪೂರೈಕೆ ಯೋಜನೆ ಕೈಕೊಂಡಲ್ಲಿ ನೀರಿನ ಬವಣೆಯಿಂದ ಹೊರಬರಬಹುದೆಂದು ತಿಳಿದು ಭೀಮಾ ನೀರು ಸರಬರಾಜು ಯೋಜನೆ ಕೈಗೆತ್ತಿಕೊಂಡರು. ಆದರೆ ನೀರು ದೋಷಪೂರಿತವಿದೆ, ಕುಡಿಯಲು ಯೋಗ್ಯವಿಲ್ಲವೆಂಬ ವಿರೋಧದ ಮಧ್ಯೆಯೂ ಧೃತಿಗೆಡದೆ; ಇದಾವುದನ್ನು ಲೆಕ್ಕಿಸದೆ ನೀರು ಕುಡಿಯಲು ಯೋಗ್ಯವಾಗಿರುವದನ್ನು ಮನಗಂಡು ಪಟ್ಟುಹಿಡಿದು ಭಗೀರಥ ಪ್ರಯತ್ನದಿಂದ ಯೋಜನೆಯನ್ನು ಪೂರ್ಣಗೊಳಿಸಿದರು. ಅವರ ಈ ಮುಂದಾಲೋಚನೆ ಮೆಚ್ಚುಗೆಗೆ ಅರ್ಹವಾಗಿದೆ. ಇದರಿಂದಾಗಿ ನಗರಕ್ಕೆ ನೀರಿನ ಸೌಲಭ್ಯ ಉಂಟಾಗಿದೆ. ಬೆಣ್ಣೆತೊರೆ

ಯೋಜನೆ ನೆಟ್ಟಿ ಕುಳಿತಿದ್ದೇ ಆಗಿದ್ದರೆ ಇಂದಿಗೂ ಗುಲಬರ್ಗಾ ಸೀಲಿನ ಬವಣೆಯಿಂದ ಬಳಲುತ್ತಿತ್ತೋ ಏನೊ?

ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದಾಗ ಜಯಪ್ರಕಾಶ ನಾರಾಯಣರವರ ಪ್ರಭಾವದಿಂದಾಗಿ ತುರ್ತು ಪರಿಸ್ಥಿತಿಯನ್ನು ಬಲವಾಗಿ ವಿರೋಧಿಸಿ ಅಧಿಕಾರ ಶಾಹಿಯ ವಿರುದ್ಧ "ಭಾರತ ಮಾತಾ ಕೀ ಜೈ" ಎಂದು ಘೋಷಣೆಗಳನ್ನು ಕೂಗುತ್ತ ಕೈಯಲ್ಲಿ ರಾಷ್ಟ್ರೀಯ ಧ್ವಜವನ್ನು ಹಿಡಿದು ಈಗಿನ ಸೂಪರ್ ಮಾರ್ಕೆಟ್. ಸ್ಥಳ ಪ್ರತಿಭಟಿಸಿದ ಗುಲಬರ್ಗದ ಮೊತ್ತ ಮೊದಲ ವ್ಯಕ್ತಿ ಶ್ರೀ ಕುಸುಮಾಕರದೇಸಾಯಿಯವರು. ಇದು ಪ್ರಜಾಪ್ರಭುತ್ವದಲ್ಲಿದ್ದ ಅವರ ನಂಬಿಕೆ ಹಾಗೂ ಅವರ ಧೈರ್ಯವನ್ನು ಎತ್ತಿ ತೋರಿಸುತ್ತಿತ್ತು. ಇದಕ್ಕಾಗಿ ಕೆಲಕಾಲ ಸೆರೆಮನೆಯನ್ನು ಕಂಡರು.

ಶ್ರೀ ದೇಸಾಯಿಯವರು ಲೋಹಿಯಾವಾದಿಗಳು. ಹಿರಿಯ ನಾಯಕರುಗಳಾದ ಶ್ರೀ ಸುರೇಂದ್ರ ಮೋಹನ, ಮಧುದಂಡವತೆ, ಜಾರ್ಜ್ ಫರ್ನಾಂಡಿಸ್ ಹಾಗೂ ಜೆ.ಎಚ್. ಪಟೇಲರೊಂದಿಗೆ ಸಂಪರ್ಕವಿರಿಸಿಕೊಂಡವರಾಗಿದ್ದರು.

ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯವರು ವಿಧಾನ ಪರಿಷತ್ ಸದಸ್ಯರಾಗಿ ೬ ವರ್ಷಗಳ ಕಾಲ ಇದ್ದರು. ಆ ದಿನಗಳಲ್ಲಿ ಶ್ರೀ ಕುಸುಮಾಕರ ದೇಸಾಯಿಯವರ ಸಂಪರ್ಕ ಬರುತ್ತಿತ್ತು.

ಶ್ರೀ ಕುಸುಮಾಕರದೇಸಾಯಿಯವರು ವಿಧಾನ ಮಂಡಳದಲ್ಲಿ ಬಂದಿದ್ದೇ ಆಗಿದ್ದರೆ ಅವರ ಪ್ರತಿಭೆಗೆ ಪುರಸ್ಕಾರ ಸಿಗುತ್ತಲಿತ್ತು. ಆದರೆ ರಾಜಕಾರಣದಲ್ಲಾದ ಸ್ಥಿತ್ಯಂತರ ಹಾಗೂ ಅನೇಕ ಕಾರಣಗಳಿಂದಾಗಿ ಅವರು ವಂಚಿತರಾದರು.

ಕಲಬುರ್ಗಿಯ ಕುಸುಮ

❀ ಲೀಲಾದೇವಿ ಆರ್. ಪ್ರಸಾದ

"ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ"ಯೆಂಬ ನುಡಿಯನ್ನು ಸುಭಾಷಿತಕಾರರು ಹೇಳಿದ್ದಾರೆ. ಈ ಉಕ್ತಿ ಕುಸುಮಾಕರ ದೇಸಾಯಿ ಅವರಿಗೆ ಹೋಲುತ್ತದೆ. ರಾಷ್ಟ್ರ ಚಿಂತನೆಯಲ್ಲಿ ವಜ್ರದಂತೆ ಕಠೋರ ನಿರ್ಧಾರವನ್ನು ಮೈಗೂಡಿಸಿಕೊಂಡು ಸಾಮಾಜಿಕ ಚಿಂತನೆಯಲ್ಲಿ ಮಲ್ಲಿಗೆಯ ಮೃದುಮನಸ್ಸಿನಂತೆ ವರ್ತಿಸುತ್ತಿದ್ದ ಸಮಾಜವಾದಿ ಚಿಂತಕ, ನಾಡಿನ ಏಳ್ಗೆಗೆ ಹೋರಾಟಮಾಡಿದ ಕಲಬುರ್ಗಿಯ ಕುಸುಮಾಕರ ಸಂಜೀವರಾವ ದೇಸಾಯರು ಇಂದು ನೆನಪು ಮಾತ್ರ.

ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಿಂದ ಬಂದ ಕುಸುಮಾಕರ ದೇಸಾಯಿ ಅವರು ೧೯೪೭ರ ಆಗಸ್ಟ್ ತಿಂಗಳ ಸತ್ಯಾಗ್ರಹದಲ್ಲಿ ಹಾಗೂ ಹೈದಾರಾಬಾದ ವಿಮೋಚನೆಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದವರು. ಹೈದ್ರಾಬಾದನ ರಜಾಕಾರರ ಪೈಶಾಚಿಕ ಕೃತ್ಯಗಳನ್ನು ಹೈದರಾಬಾದ್ ಕರ್ನಾಟಕದಲ್ಲಿ ಎದುರಿಸಿ ನಿಂತವರು. ಲೋಹಿಯಾ ಅವರ ಸಿದ್ಧಾಂತದಿಂದ ಪ್ರೇರಿತರಾದ ಸಮತಾವಾದಿ ಪಕ್ಷದ ಮೂಸೆಯಲ್ಲಿ ಮೂಡಿ ಬಂದವರು. ಹಾಗೂ ಪ್ರಜಾ ಸಮಾಜವಾದಿ ಪಕ್ಷ, ಎಸ್.ಎಸ್.ಪಿ. ಪಕ್ಷ, ತದನಂತರ ಜನತಾ ಪಕ್ಷದ ರಾಜಕೀಯ ವಾಹಿನಿಯಲ್ಲಿ ನೆಲೆನಿಂತವರು.

೧೯೭೫-೭೭ರ ತುರ್ತು ಸನ್ನಿವೇಶದ ಕರಾಳ ದಿನಗಳಲ್ಲಿ ಇಂದಿರಾ ಪ್ರಭುತ್ವವನ್ನು ಎದುರಿಸಿ ನಿಂತವರು ಹಾಗೂ ತುರಂಗ ವಾಸವನ್ನು ಕಂಡವರು. ಇದೇ ನಿಟ್ಟಿನಲ್ಲಿ ಕರ್ನಾಟಕದಲ್ಲಿ ರೂಪುಗೊಂಡ "ಜನತಾ ಪಕ್ಷ"ಕ್ಕೆ ಸಕ್ರಿಯವಾಗಿ ಸೇವೆ ಸಲ್ಲಿಸಿದವರಲ್ಲಿ ಮುಖ್ಯರು. ಕಲಬುರ್ಗಿಯ ಪುರಸಭೆಗೆ ನಾಲ್ಕು ವರ್ಷಗಳ ಕಾಲ ಸೇವೆಸಲ್ಲಿಸಿ ಹಾಗೂ ಕಲಬುರ್ಗಿಯ ಅನೇಕ ಜನಪರ ಅಭಿವೃದ್ಧಿ ಕಾರ್ಯಗಳಲ್ಲಿ ಅವಿಸ್ಮರಣೀಯ ಸೇವೆ ಸಲ್ಲಿಸಿದರು. ಅವರ ಕಾರ್ಯತತ್ಪರತೆಯನ್ನು ಕಂಡು ಜನತಾ ದಳ ಸರಕಾರ ಅವರನ್ನು ಕರ್ನಾಟಕ ರಾಜ್ಯದ ನಿಗಮದ ನಗರ ಪಟ್ಟಣಗಳ ನೀರು ಸರಬರಾಜು ಹಾಗೂ ಒಳಚರಂಡಿ ನಿಗಮದ ಅಧ್ಯಕ್ಷರನ್ನಾಗಿ ನೇಮಿಸಿತ್ತು. ತನ್ಮೂಲಕ ಕಲಬುರ್ಗಿಯ ಜನರ ನೀರಿನ ದಾಹಕ್ಕೆ ತಂಪನೆರೆದವರು. ಅದರ ಕಾರಣವೇ 'ಕಲಬುರ್ಗಿ ಭಗೀರಥ'ನೆಂಬ ಅಭಿಮಾನಕ್ಕೆ ಪಾತ್ರರಾದರು.

ದೇಸಾಯರು ತಮ್ಮ ಸಾಮಾಜಿಕ ರಾಜಕೀಯ ಚಟುವಟಿಕೆಗಳೊಡನೆ ಪತ್ರಿಕೋದ್ಯಮೆಯ ಸೇವೆಯನ್ನು ಸಲ್ಲಿಸಿ ಇಂಗ್ಲಿಷ ದೈನಿಕ "ಫ್ರೀಡಂ" ಹಾಗೂ "ಹೈದರಾಬಾದ ಸಿಟಿ" ಪತ್ರಿಕೆಗಳ ಅಂಕಣಕಾರರಾಗಿ ವರದಿಗಾರರಾಗಿ ಹಾಗೂ ಕನ್ನಡದ ಕಸ್ತೂರಿ, ಕರ್ಮವೀರ ಪತ್ರಿಕೆಗಳ ಲೇಖಕರಾಗಿ ಗುರುತಿಸಿಕೊಂಡವರು. ಅವರ ಬರವಣಿಗೆ, ಲೇಖನ, ಪ್ರಬಂಧಗಳು ಗ್ರಂಥ ರೂಪದಲ್ಲಿ ಬಂದರೆ ಸಾಹಿತ್ಯಕ್ಕೆ ಒಂದು ಅಮೂಲ್ಯ ಕೊಡುಗೆ ಆಗುತ್ತದೆ.

ದೇಸಾಯರು ತಮ್ಮ ಜೀವಿತದಲ್ಲಿ ಖ್ಯಾತ ವಕೀಲರಾಗಿ, ಜಿಲ್ಲಾ ವಕೀಲರ ಸಂಘದ

ಅಧ್ಯಕ್ಷರಾಗಿ, ಕಾನೂನು ಶಿಕ್ಷಣದ ಆಚಾರ್ಯರಾಗಿ, ಹಲವಾರು ಸಂಸ್ಥೆಗಳ ಕಾನೂನು ಸಲಹೆಗಾರರಾಗಿ ಹೆಸರು ಪಡೆದರು. ಕನ್ನಡ ಮಾತೃ ಭಾಷೆಯಾದರೂ, ಉರ್ದು, ತೆಲುಗು ಹಾಗೂ ಇಂಗ್ಲೀಷ್‌ನಲ್ಲಿ ಪರಿಣಿತಿಯನ್ನು ಪಡೆದವರು.

ಇವರ ಬಹುಮುಖಿ ವ್ಯಕ್ತಿತ್ವಕ್ಕೆ ಸರಿಹೋಗುವಂತೆ ಇವರ ಪತ್ನಿ, ನನ್ನ ಸ್ನೇಹಿತೆ ಸರಿತಾ ದೇಸಾಯಿವರ ಜೀವನವನ್ನು ಭವ್ಯಗೊಳಿಸಿದರು. ಶರಣರು ಹೇಳಿದಂತೆ "ಸತಿ-ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ"ಯೆಂಬ ನುಡಿಯಂತೆ ಇವರಿಬ್ಬರ ಜೋಡಿ, ಹೇಳಿಮಾಡಿಸಿದ ದಾಂಪತ್ಯ. ಸರಿತಾ ಕೂಡ ಪತಿಯಂತೆ ವಕೀಲ ವೃತ್ತಿಯನ್ನು ಮೈಗೂಡಿಸಿಕೊಂಡವಳು. ಅವರಂತೆಯೇ ಸಮಾಜ ಸೇವಕಳಾಗಿ, ಹಿರಿಯ ಸಾಹಿತಿಯಾಗಿ ರಾಜಕಾರಣಿಯಾಗಿ, ದೇಸಾಯರ ಜೀವನದಲ್ಲಿ ಹೋಯ್ ಕೈಯಾಗಿ ನಿಂತವಳು. ತನ್ನೆಲ್ಲ ಸಂಸಾರಿಕ, ಸಾಮಾಜಿಕ ಒತ್ತಡಗಳಲ್ಲಿಯೂ ದೇಸಾಯರ ಬೇಕು- ಬೇಡುಗಳನ್ನು ಅರಿತು ಅವರು ಅನಾರೋಗ್ಯದಿಂದ ಬಳಲುವಾಗ ತಾಯಿಯಂತೆ ಆರೋಗ್ಯವನ್ನು ನೋಡಿಕೊಳ್ಳುವದನ್ನೂ ಮರೆಯುತ್ತಿರಲಿಲ್ಲ. ಇವರಿಬ್ಬರದೂ ಎರಡು ದೇಹ ಒಂದು ಜೀವವಾಗಿ ಬದುಕಿದ ಆದರ್ಶ ದಂಪತಿಗಳು.

ಸರಿತಾ ನಾನು ರಾಜಕೀಯ ಕ್ಷೇತ್ರದಲ್ಲಿ ಒಟ್ಟಾಗಿ ಕೆಲಸ ಮಾಡುವಾಗ ಅನೇಕ ಸಲ ಕಲಬುರ್ಗಿಗೆ ಹೋಗುವ ಪ್ರಸಂಗ ಬಂದಾಗಲೆಲ್ಲ ನಾನು ದೇಸಾಯರ ಮನೆಗೆ ತಪ್ಪದೇ ಭೆಟ್ಟಿಕೊಡುತ್ತಿದ್ದೆ. ದೇಸಾಯಿ ದಂಪತಿಗಳು ನನ್ನನ್ನು ಲೀಲಕ್ಕ ಎಂದೇ ಹೆಸರಿಸಿ ಆತ್ಮೀಯವಾಗಿ ಬರಮಾಡಿಕೊಂಡು ಉಪಚರಿಸುತ್ತಿದ್ದರು. ದಂಪತಿಗಳೀರ್ವರು ರಾಜಕಾರಣದಿಂದ ಹಾಗೂ ಸಾಹಿತ್ಯದಿಂದ ನನಗೆ ಬಹಳ ಹತ್ತಿರವಾಗುತ್ತ ಬಂದವರು.

ಒಂದು ಸಲ ಸಾರ್ವಜನಿಕ ಚುನಾವಣೆ ಬಂದಾಗ್ಗೆ ಕಲಬುರ್ಗಿಯಿಂದ ಮಹಿಳಾ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ, ಸ್ಪರ್ಧಿಸಲು ಸರಿತಾಳ ಹೆಸರನ್ನೂ ಸೂಚಿಸಲಾಯಿತು. ಆದರೆ ವಿಧಾನಸಭೆಗೆ ಸ್ಪರ್ಧಿಸಲು ತನಗಿಂತಲೂ ಹೆಚ್ಚಾಗಿ ಪಕ್ಷಕ್ಕೆ ಶ್ರಮಿಸಿದ ದೇಸಾಯರಿಗೆ ಉಮೇದುವಾರಿಕೆ ಕೊಡಬೇಕೆಂದು ಹೇಳಿದ ಮಾತನ್ನು ನಾನಿನ್ನೂ ಮರೆತಿಲ್ಲ. ಇದು ಸರಿತಾಗೆ ತನ್ನ ಪತಿಯ ಬಗ್ಗೆ ಇದ್ದ ಅನನ್ಯ ಪ್ರೀತಿ-ಗೌರವವನ್ನು ಸೂಚಿಸಿತು. ಪ್ರತಿ ದಿನ ಸರಿತಾಳ ಮಾತು ಪ್ರಾರಂಭವಾಗುವದೇ, "ನಮ್ಮ ದೇಸಾಯರು, ನಮ್ಮ ದೇಸಾಯರು"ಎಂಬ ನುಡಿಯಿಂದ. ಮಕ್ಕಳಿಲ್ಲದ ಕೊರತೆ ಅವರಲ್ಲಿ ಕಾಣಲಿಲ್ಲ. ಕಾರಣ ದೇಸಾಯರಿಗೆ ಸರಿತಾ ಮಗು. ಸರಿತಾಗೆ ದೇಸಾಯರೆ ಮಗು. ಇವರದೊಂದು ಅಪರೂಪದ ಜೋಡಿಯನ್ನು ನಾನು ಬಹಳ ಹತ್ತಿರದಿಂದ ಕಂಡಿದ್ದೇನೆ.

ಸರಿತಾ ದೇಸಾಯರಿಂದ ಸರಿಯುತ್ತಲೇ ಇರಲಿಲ್ಲ. ವಿಧಿ ಅವಳನ್ನು ದೇಸಾಯರಿಂದ ಬಹು ದೂರ ಸರಿಸಿತು. ಅವರ ನೆನಪಿನ ಸುಳಿಯಲ್ಲಿ ಸರಿತಾ ಹಾಗೂ ಅವರ ಅಪಾರ ಬಂಧು-ಬಳಗದವರು ಸಲ್ಲಿಸುವ ಗೌರವ ಕೃತಿ ಇದಾಗಲೆಂದು ಹಾರೈಸುತ್ತೇನೆ.

ಆತ್ಮೀಯ ವ್ಯಕ್ತಿತ್ವ

❀ ರಾಣಿ ಸತೀಶ್

ಕುಸುಮಾಕರ ದೇಸಾಯಿ ನಾನು ಕಂಡಂತೆ ಅತ್ಯಂತ ಸರಳ ಉತ್ತಮ ವ್ಯಕ್ತಿತ್ವದ ಸದಾ ಹಸನ್ಮುಖಿ. ಸರಿತಾ ಕುಸುಮಾಕರ ದೇಸಾಯಿ ಹೆಸರೊಳಗೆ ಒಂದಾದಂತೆ, ಬದುಕಿನಲ್ಲಿ ಒಂದಾದ ದಂಪತಿಗಳು. 'ಸತಿಪತಿಗಳಿಂದ ಒಂದಾದ ಭಕ್ತಿ ಯಾವತ್ತೂ ಶಿವನಿಗೆ ಹಿತ' ಎನ್ನುವಂತೆ ಅವರ ಬದುಕಾಗಿತ್ತು.

ರಾಜಕೀಯ ಕ್ಷೇತ್ರದಲ್ಲಿ ನನಗೆ ಪರಿಚಯವಾದ ಅನ್ಯೋನ್ಯವಾದ ನಾ ಕಂಡ ದಾಂಪತ್ಯ. ಸರಿತಾರಿಂದ ಹಲವಾರು ಸಲ ಉದ್ಗಾರವಾಗುತ್ತಿದ್ದ ಶಬ್ದ "ನಮ್ ದೇಸಾಯರು" ಅವರ ಪ್ರೀತಿಗೆ ಸಾಕ್ಷಿಯಾಗಿತ್ತು.

ಕುಸುಮಾಕರ ಎಂದಾಗ ನಾನು ಎಣಿಸಿದ್ದೆ ಮಹಿಳೆಯ ಹೆಸರಿನಂತಿದೆ ಎಂದು. ಆದರೇನು ಅವರ ವ್ಯಕ್ತಿತ್ವ ಅಷ್ಟೇ ಕೋಮಲತೆಯಿಂದ ಕೂಡಿದ್ದು ಹೆಸರಿಗೆ ತಕ್ಕ ವ್ಯಕ್ತಿತ್ವದಂತೆ ಇತ್ತು.

ಹುಟ್ಟು ಸಾವಿನ ಮಧ್ಯೆ ನಾವು ಅನೇಕರ ಸ್ನೇಹವನ್ನು ಹೊಂದುತ್ತೇವೆ. ಎಲ್ಲಿಯ ಸಮುದ್ರದ ಉಪ್ಪು ಎಲ್ಲಿಯ ಬೆಟ್ಟದ ನೆಲ್ಲಿಕಾಯಿ ಎನ್ನುವ ವಚನ ಸಾಹಿತ್ಯದ ತುಣುಕಿನ ಸತ್ಯವನ್ನು ಬದುಕಿನಲ್ಲಿ ಕಾಣುತ್ತೇವೆ.

ಬದುಕಿನಲ್ಲಿ ಎಲ್ಲೊ ಹುಟ್ಟಿ ಎಲ್ಲೊ ಬೆಳೆದು ಎಲ್ಲಿಯೋ ಅಂತ್ಯ. ಅದೆಲ್ಲವೂ ಪ್ರಕೃತಿಯ ಇಚ್ಛೆಯಂತೆ. ನಾವು ಬದುಕುವ ಒಂದೊಂದು ಕ್ಷಣವೂ ದೈವ ನಿರ್ಣಾಯಕ ಎಂದು ನನ್ನ ಭಾವನೆ.

ಕುಸುಮಾಕರ ದೇಸಾಯಿಯವರನ್ನು ಸರಿತಾ ಅವರ ಮೂಲಕ ಪರಿಚಯವಾದ ಸಂದರ್ಭದಲ್ಲಿ ಅವರ ಜೊತೆ ಮಾತನಾಡಿದಷ್ಟು ಸಮಯದಲ್ಲಿ, ಇವರ ಸ್ನೇಹ ತುಂಬಾ ಹಳೆಯದೇನೋ ಎನ್ನುವಷ್ಟು ಆತ್ಮೀಯತೆ ಮೂಡಿಸಿದ್ದೇ ಇವರ ವ್ಯಕ್ತಿತ್ವದ ಪರಿಚಯವನ್ನು ಕಾಣಲು ಉತ್ತಮ ಉದಾಹರಣೆ.

ಬದುಕೇ ಒಂದು ಕಲೆ, ಬದುಕುವುದು ನಾವು ಮಾಡಿಕೊಳ್ಳುವ ಬದುಕಿನ ಸಂಬಂಧ ಹಾಗೂ ಒಪ್ಪಂದದ ಒಡಂಬಡಿಕೆಯಲ್ಲಿ. ಒಟ್ಟಾರೆ ಕುಸುಮಾಕರ ದೇಸಾಯಿ ಸ್ನೇಹಮಯಿ, ಸದಾ ಹಸನ್ಮುಖಿ.

ದೂರವಾಣಿಯಲ್ಲಿ ನಾನು ಸರಿತಾರಿಗೆ ಕರೆ ಮಾಡಿದರೆ ತನಗಾಗೇ ಆ ಕರೆ ಎನ್ನುವಷ್ಟರ ಮಟ್ಟಿಗೆ ಸ್ಪಂದಿಸುತ್ತಿದ್ದ ಆತ್ಮೀಯತೆಯನ್ನು ನಾನು ಅವರಲ್ಲಿ ಕಂಡದ್ದು, ಬದುಕು ಬರಡು ಎಂದುಕೊಳ್ಳದೆ ಹಸನಾಗಿಸಿ ಬಾಳುವ ಕಲೆ ಕುಸುಮಾಕರ ದೇಸಾಯಿ ಅವರಿಗಿತ್ತು.

ಅವರ ಮಾತಿನ ಆತ್ಮೀಯತೆ, ಸರಳತೆ, ಸ್ನೇಹಮಯ ವ್ಯಕ್ತಿತ್ವ ಎಂದೂ ನಮ್ಮಿಂದ

ಮರೆಯಾಗಲಿಕ್ಕೆ ಸಾಧ್ಯವಿಲ್ಲ. ಅವರು ನಮ್ಮ ಮುಂದೆ ಇಲ್ಲದಿರಬಹುದು. ಆದರೆ ಅವರ ಮಾತಿನ ಆತ್ಮೀಯತೆ ನಮ್ಮಿಂದ ದೂರ ಹೋಗಿಲ್ಲ.

ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯವರು ಕುಸುಮಾಕರ ದೇಸಾಯಿ ಅವರ ಪ್ರಥಮ ಪುಣ್ಯತಿಥಿಗೆ "ಅಕ್ಷರ ಪೂಜೆ"ಯ ಮೂಲಕ ಸ್ಮರಣೆಯನ್ನು ಮಾಡಿಕೊಳ್ಳುವ ಹಿನ್ನೆಲೆಯಲ್ಲಿ ಕಿರು ಲೇಖನ ಬೇಕೆಂಬ ಪತ್ರ ನನ್ನ ಕೈ ಸೇರುತ್ತಲೆ ಎಡಗೈಲಿ ಪತ್ರ ಹಿಡಿದು ಬಲಗೈಲಿ ಸ್ಪಂದಿಸಿದ್ದೇನೆ.

ಕಿರು ಸಮಯದಲ್ಲಿ ನಾನು ಕಂಡ ಕುಸುಮಾಕರನ್ನು ದೇಸಾಯಿಯವರ ಕಿರು ಲೇಖನದಲ್ಲಿ ಕಾಣಿಸಿದ್ದೇನೆ. ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿ ಅವರ ಬಾಳಿನಲ್ಲಿ ಬಂದು ಬೆಳಗಿದ ಕುಸುಮಾಕರರ ಬೆಳಕು ಸದಾ ಅವರ ಬದುಕಿಗೆ ಬೆಳಕನ್ನು ನೀಡಿ ಸಹೋದರಿಯ ಬದುಕಿಗೆ ಚೈತನ್ಯ ಕೊಡಲಿ ಎಂದು ನನ್ನ ಅನಿಸಿಕೆಯನ್ನು ಈ ಚಿಕ್ಕ ಅಕ್ಷರ ಪೂಜೆಯ ಮೂಲಕ ಹಂಚಿಕೊಳ್ಳುತ್ತೇನೆ.

ಸತ್ಯನುಡಿ

❀ ಎಸ್. ಮಲ್ಲಿಕಾರ್ಜುನಯ್ಯ

ಶ್ರೀ ಕುಸುಮಾಕರ ದೇಸಾಯಿ ಇವರ ಪ್ರಥಮ ವಾರ್ಷಿಕ ಪುಣ್ಯತಿಥಿ ಕಾರ್ಯಕ್ರಮಕ್ಕೆ 'ಸ್ಮರಣಾರ್ಥ ಮಧುರ ಸ್ಮೃತಿಗಳ ಸಂಸ್ಮರಣ ಗ್ರಂಥವನ್ನು' ಪ್ರಕಟಿಸಲು ಉತ್ಸುಕರಾಗಿ ಇದಕ್ಕೆ ಹೊಣೆಗಾರರಾದವರಿಗೆಲ್ಲಾ ಅಭಿನಂದಿಸುವೆ.

ಈ ಶುಭ ಸುಸಂದರ್ಭದಲ್ಲಿ ಹೊರ ತರಲು ಉದ್ದೇಶಿಸಿರುವ "ಸ್ಮರಣ ಸಂಚಿಕೆ" ಈ ನಾಡಿನ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯಾಗಲೆಂದು ಹಾಗೂ ನಾಡಿನ ಮೂಲೆ ಮೂಲೆಯಲ್ಲಿ ಜನತೆಗೆ ತಲುಪಲೆಂದು ಆಶಿಸುತ್ತೇನೆ. ಶ್ರೀ ಕುಸುಮಾಕರ ದೇಸಾಯಿಯವರು ಹಿರಿಯರು ಹಾಗೂ ನನ್ನ ಆತ್ಮೀಯರು. ಸತ್ಯನುಡಿ, ನೇರ ನುಡಿ ಎನ್ನುವವರು. ಇವರು ಹುಟ್ಟಿದ್ದು ೧೯೨೮ ರಲ್ಲಿ ಆಗಿನ ನಿಜಾಂ. ರಾಜ್ಯ ಎಂದೇ ಪ್ರಸಿದ್ಧವಾಗಿದ್ದ ಗುಲ್ಬರ್ಗದಲ್ಲಿ, ಇಂದಿನ ಹೈದಾರಾಬಾದ್, ಕರ್ನಾಟಕದಲ್ಲಿ ದೇಸಾಯಿಯವರು ಉನ್ನತ ಶಿಕ್ಷಣವನ್ನು ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಉರ್ದು ಭಾಷೆಯಲ್ಲಿ ಪದವಿ ಪಡೆದು ಯಶಸ್ವೀ ವಕೀಲರಾಗಿದ್ದು ಮತ್ತು ಎಲ್‌ಎಲ್‌ಎಂ ಪದವಿ ಉತ್ತೀರ್ಣರಾದವರು. ನಂತರ ಹಂತ ಹಂತವಾಗಿ ಪ್ರಖ್ಯಾತ ವಕೀಲರಾಗಿ ಹೆಸರು ಗಳಿಸಿದರು. ಇವರ ಮಾತೃಭಾಷೆ ಕನ್ನಡ, ಆದರೆ ತೆಲಗು, ಹಿಂದಿ, ಉರ್ದು, ಮರಾಠಿ, ಇಂಗ್ಲೀಷ್ ಭಾಷೆಗಳಲ್ಲಿ ತುಂಬಾ ಪರಿಣತರು ಮತ್ತು ಆಲಿಸಿ ಬರೆದು, ಓದಿ ನುಡಿಯುವಂತಹ ಮತ್ತು ದಾರ್ಶನಿಕ ದಿಗ್ಗಜರಾಗಿ ಅಸಂಖ್ಯಾತ ಅನುಯಾಯಿಗಳನ್ನು ಪಡೆದ ಪ್ರಭಾವೀವ್ಯಕ್ತಿ ದೇಸಾಯಿಯವರು.

ನನಗೆ ಇವರ ಪರಿಚಯ ತುರ್ತುಪರಿಸ್ಥಿತಿಯಲ್ಲಿ ಉಂಟಾಯಿತು. ಶ್ರೀ ಜಯಪ್ರಕಾಶ್‌ರವರ ಪ್ರಭಾವ ಇವರ ಮೇಲೆ ಬೀರಿತ್ತು. ಹುಟ್ಟು ಹೋರಾಟಗಾರರು ಸಮಾಜವಾದಿ ಹಿನ್ನೆಲೆಯಿಂದ ಬಂದವರು. ರಾಂ ಮನೋಹರ ಲೋಹಿಯಾರವರ ಪ್ರಭಾವಕ್ಕೆ ಒಳಗಾದ ಮಹಾ ಚೈತನ್ಯ ಪುರುಷ. ಕಾಯಾ, ವಾಚಾ, ಮನಸಾ ರಾಷ್ಟ್ರಪ್ರೇಮಿಗಳು, ಬಡವರು, ಬಲ್ಲಿದರು ಎಂದು ವ್ಯತ್ಯಾಸ ಕಂಡವರಲ್ಲ. ಸಹಾಯ ಹಸ್ತ ಅಪೇಕ್ಷಿಸಿ ಬಂದವರನ್ನು ಒಂದಕ್ಕೆ ನಿರಾಶರಾಗಿ ಕಳುಹಿಸಿದವರಲ್ಲ. ಅವರ ಜೀವನ ಬದುಕಿನಲ್ಲಿ ಆಶಾಕಿರಣವನ್ನು ಮೂಡಿಸಿ ಕೈಲಾದ ಸಹಾಯ ಮಾಡಿ ಕಳುಹಿಸುತ್ತಿದ್ದ ಪ್ರಜ್ಞಾವಂತ ವ್ಯಕ್ತಿ.

ಬಾರ್ ಅಸೋಸಿಯೇಷನ್ ಅಧ್ಯಕ್ಷರಾಗಿದ್ದಾಗ ಉತ್ತರ ಕರ್ನಾಟಕಕ್ಕೆ ಒಂದು 'High Court ಪೀಠಬೇಕೆಂದು ಪ್ರತಿಪಾದಿಸಿದವರಲ್ಲಿ ಇವರು ಮೊದಲಿಗರು. ಸಮಗ್ರ ಕರ್ನಾಟಕ ಒಂದು ಎಂದು ಹೇಳುವುದರಲ್ಲಿ ತಾರತಮ್ಯವಿರಬಾರದು ಅಭಿವೃದ್ಧಿಯ ಪಥದಲ್ಲಿ ಸಾಗಬೇಕು ಎಂಬ ವಾದ ಇವರದ್ದು, 'ಬೆಣ್ಣೆತೊರೆ, ಮುಲ್ಲಾಮಾರಿ ನೀರಾವರಿ ಯೋಜನೆ' ಶೀಘ್ರವಾಗಿ ಕಾರ್ಯರೂಪಕ್ಕೆ ಬರಲೆಂದು ಆಗ್ರಹಿಸುತ್ತಿದ್ದರು. ವಿಧಾನ ಪರಿಷತ್ ಸದಸ್ಯರಾಗಿದ್ದ ದಿವಂಗತ

ರೇವಣಸಿದ್ದಪ್ಪನವರ ಜೊತೆಯಲ್ಲಿ ಕಳ ಕಳಿಯಿಂದ ಇದ್ದು ಕೆಲಸ ಮಾಡಿದ್ದರು. ಭಾರತೀಯ ಜನ ಸಂಘದ ಅನಂತಶರ್ಮ ಇವರ ಮಿತ್ರರು. ಅಂದು ಅವರು ಬಿ.ಜೆ.ಪಿ. ಪ್ರಮುಖ ನಾಯಕರು. ಪ್ರಾಣೇಶ ಕುಲಗೇರಿಯವರು ಅತ್ಯಂತ ಕಟ್ಟಾ ಸಂಘಟಿತರು, ಆತ್ಮೀಯರು, ವಮ್ಮೂರು ಶ್ರೀರಾಮುಲು ಇವರ ಸಂಗಡ ನಾನು ಗುಲ್ಬರ್ಗಾಕ್ಕೆ ಹೋದಾಗಲೆಲ್ಲಾ ದೇಸಾಯಿಯವರನ್ನು ಭೇಟಿ ಮಾಡುತ್ತಿದ್ದೆ. ನಗರಸಭೆ ಕಾರ್ಯಕ್ರಮಗಳಲ್ಲಿ ಅತೀವ ಆಸಕ್ತಿ, ಕಿರಿಯ ವಕೀಲರ ಬಗ್ಗೆ ತುಂಬಾ ಆತ್ಮೀಯ ಭರವಸೆ ಹಾಗೂ ಕಾಳಜಿ ಇವು ನನ್ನ ಮನಸ್ಸಿನಲ್ಲಿ ಅಳಿಯದೇ ಉಳಿದು ನವಿರಾಗಿದೆ.

ಅತ್ಯಂತ ಸ್ನೇಹ, ಸಮಾಜ ಜೀವಿ ಅವರ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯರು ಪತಿಯ ಹೆಜ್ಜೆಯನ್ನೇ ಅನುಸರಿಸಿ ನಡೆಯುವವರು. ಇವರ ಜೀವನ ಹಾಲು ಜೇನು ಬೆರೆಸಿದಂತೆ, ಇವರನ್ನು ಭೇಟಿಯಾದ ಸಂದರ್ಭದಲ್ಲಿ ನಾನು ವಿಧಾನ ಪರಿಷತ್ ಸದಸ್ಯನಾಗಿದ್ದೆ. ಆ ಸಮಯದಲ್ಲಿ ಅನೇಕ ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಭಿನ್ನಾಭಿಪ್ರಾಯ ಬಂದರೂ ಅತ್ಯಂತ ಸಹನೆಯಿಂದ ನಮ್ರತೆಯಿಂದ ನಾನು ಹೇಳಿದ್ದನ್ನು ಆಲಿಸುತ್ತಿದ್ದರು. ಅದರ ಅರ್ಥ ಅವರು ಒಪ್ಪಿದ್ದಾರೆ ಎಂದಲ್ಲ. ಭಿನ್ನಾಭಿಪ್ರಾಯಗಳು ಇತ್ಯಾದಿ ಇದ್ದಾಗ ಅವರನ್ನು ಭೇಟಿ ಮಾಡಬೇಕೆಂಬ ಹಂಬಲ ನನಗೆ ಇದ್ದೇ ಇತ್ತು. ಹೀಗಾಗಿ ಪದೇ ಪದೇ ಗುಲ್ಬರ್ಗಾಕ್ಕೆ ಹೋದಾಗೆಲ್ಲಾ ಅವರನ್ನು ಭೇಟಿ ಮಾಡುತ್ತಿದ್ದೆ. ಹಲವಾರು ವಿಷಯಗಳನ್ನು ಚರ್ಚಿಸುತ್ತಿದ್ದೆ.

ಇಂತಹ ಸರ್ವಶ್ರೇಷ್ಠರು "ಗುಲ್ಬರ್ಗಾದ ಭಗೀರಥ". ಇವರ ಪ್ರಥಮ ವಾರ್ಷಿಕ ಪುಣ್ಯ ತಿಥಿ ಜರುಗುತ್ತಿರುವುದರಿಂದ ಅವರ ಆಚಾರ ವಿಚಾರ ನಾಡಿನ ಜನಮನದಲ್ಲಿ ಆಧ್ಯಾತ್ಮಿಕ ಮತ್ತು ಕಾಯಕ ತತ್ವಗಳು ಚೈತನ್ಯಗೊಳ್ಳಲು ಸ್ಫೂರ್ತಿದಾಯಕವಾಗಲಿ. ಈ ಸಂದರ್ಭದಲ್ಲಿ ಹೊರ ತರುತ್ತಿರುವ ಸ್ಮರಣಾರ್ಥ ಮಧುರ ಸ್ಮೃತಿಗಳ ಸಂಸ್ಮರಣಾ ಗ್ರಂಥ ಅಮೂಲ್ಯ ವಿಚಾರ ವಿನಿಮಯಗಳೊಂದಿಗೆ ಸರ್ವಾಂಗ ಸುಂದರವಾಗಿ ಮೂಡಿ ಬರಲೆಂದು ಆಶಿಸಿ, ಹಾರೈಸುತ್ತೇನೆ.

ದೇಶಭಕ್ತ- ಅಪೂರ್ವ

❀ ಇಕ್ಬಾಲ್ ಅಹ್ಮದ ಸರಡಗಿ

ವೃತ್ತಿಯಲ್ಲಿ ಹಾಗೂ ರಾಜಕೀಯದಲ್ಲಿ, ಎಲ್ಲ ಕ್ಷೇತ್ರಗಳ ಅನುಭವದಲ್ಲಿ ಕುಸುಮಾಕರ ದೇಸಾಯಿ ಅವರು ನನಗಿಂತ ತುಂಬ ಹಿರಿಯರು. ನಾನು ಕಾಂಗ್ರೆಸ್ಸಿಗನಾಗಿದ್ದರೆ, ಅವರು ಸಮಾಜವಾದಿಯಾಗಿದ್ದರು.

ಕುಸುಮಾಕರ ಅವರು ರಾಜಕೀಯದಲ್ಲಿದ್ದೂ ಇಲ್ಲದಂತಿದ್ದರು. ಯಾಕೆಂದರೆ, ಅವರೆಂದೂ ತಮ್ಮ ಹೆಸರಿಗೆ ಕಳಂಕ ತಂದುಕೊಳ್ಳದ ನಿಷ್ಕಳಂಕ ವ್ಯಕ್ತಿಯಾಗಿ ಬಾಳಿದರು. ಅದರಂತೆಯೇ ವೃತ್ತಿಯಲ್ಲೂ ದೇಸಾಯಿ ಮನೆತನದ ಘನತೆ ಮತ್ತು ಗೌರವವನ್ನು ಕಾಪಾಡಿಕೊಂಡು ಬಂದವರು.

ಅವರೊಬ್ಬ ಅತ್ಯಂತ ಜಾಣಾಕ್ಷ ವಕೀಲರೆಂದು ನಾನು ಸಮೀಪದಿಂದ ಅವರನ್ನು ಬಲ್ಲೆ. ಕಾನೂನು ಏನು ಹೇಳುತ್ತದೆ. ಯಾವ ಕಾನೂನಿನ ಪ್ರಕಾರ ತಮ್ಮ ಕಕ್ಷಿದಾರನಿಗೆ ನ್ಯಾಯ ದೊರಕಿಸಿಕೊಡಲು ಸಾಧ್ಯ ಎಂಬದನ್ನು ಅವರು ಚೆನ್ನಾಗಿ ಅರಿತವರಾಗಿದ್ದರು. ಕೋರ್ಟನ್ನು ಎಂದೂ ತಪ್ಪು ದಾರಿಗೆಳೆದವರಲ್ಲ. ಆದ್ದರಿಂದ ಜಿಲ್ಲೆಯ ಅನೇಕ ಹಿರಿಯ ವಕೀಲರು ಹಾಗೂ ನ್ಯಾಯಾಧೀಶರಿಗೂ ಕೂಡ ದೇಸಾಯಿ ಅವರ ಬಗ್ಗೆ ತುಂಬ ಗೌರವವಿತ್ತು.

ಅವರು ರಾಜಕೀಯದಲ್ಲಿದ್ದೂ ಇಲ್ಲದಂತಿದ್ದರು. ಕ್ಷುಲ್ಲಕ ರಾಜಕಾರಣ ಮಾಡುವದು, ಪ್ರಚಾರ ಪಡೆಯುವ ಜಾಯಮಾನ ಅವರದಲ್ಲ. ಅಲ್ಲದೇ ನಿಷ್ಠುರವಾದಿಯೂ ಆಗಿರುವುದರಿಂದ ಬಹಳಷ್ಟು ಜನರಿಗೆ ಇವರ ಸತ್ಯ ರುಚಿಸುತ್ತಿರಲಿಲ್ಲ. ಆದ್ದರಿಂದಲೇ ಅವರ ಜನಸಂಪರ್ಕ ಸೀಮಿತವಾಗಿತ್ತು. ಅವರ ಮನಸ್ಸನ್ನು ಅರಿತವರಿಗೇ ಕುಸುಮಾಕರ ದೇಸಾಯಿ ಅವರ ವ್ಯಕ್ತಿತ್ವ ಎಷ್ಟು ದೊಡ್ಡದೆಂಬ ಪರಿಚಯವಿತ್ತು.

ಅವರು ದೊಡ್ಡ ಸಂಕಷ್ಟಕ್ಕೆ ಸಿಕ್ಕಿ ಹಾಕಿಕೊಂಡದ್ದು ಕಲಬುರ್ಗಿ ನಗರ ಕುಡಿಯುವ ನೀರು ಪೂರೈಕೆಯ ಭೀಮಾ ಯೋಜನೆಯ ಮಂಜೂರಾತಿ ಸಂದರ್ಭದಲ್ಲಿ. ಕ್ಷುಲ್ಲಕ ರಾಜಕೀಯಕ್ಕಾಗಿ ಒಂದು ಯೋಜನೆಯನ್ನೇ ಕತ್ತು ಹಿಚುಕಿ ಕೊಲ್ಲುವ ಕುತಂತ್ರಕ್ಕೆ ತಮ್ಮ ಪಕ್ಷದವರೇ ಕಲಬುರ್ಗಿ ಜನತೆಯನ್ನು ಬಲಿಪಶುವನ್ನಾಗಿ ಮಾಡುತ್ತಿದ್ದಾರಲ್ಲ ಎಂದು ಅವರು ಬೇಸರಪಟ್ಟುಕೊಂಡು ಹೇಳಿದ್ದರು.

ಆಗ ಪಕ್ಷ ಭೇದ ಮರೆತು ಕುಸುಮಾಕರ ದೇಸಾಯಿ ಅವರ ಬೆಂಬಲಕ್ಕೆ ಅನೇಕ ಮುಖಂಡರು ನಿಂತಿದ್ದರು. ಅವರಲ್ಲಿ ನಾನೂ ಒಬ್ಬ. ಭೀಮಾ ಯೋಜನೆ ಮಂಜೂರಾದಾಗ, "ಇದು ನಿಮ್ಮದು. ನಿಮ್ಮ ಹೋರಾಟಕ್ಕೆ ದೊರೆತ ಜಯವಾಗಿದೆ. ನಾನು ನಿಮಿತ್ತ ಮಾತ್ರ"

ಎಂದು ಎಲ್ಲ ಶ್ರೇಯಸ್ಸನ್ನೂ ಜನತೆಗೆ ನೀಡಿದ ದೊಡ್ಡ ಮನಸ್ಸು ಕುಸುಮಾಕರ ದೇಸಾಯಿ ಅವರದು.

ನಂತರ ಅವರು ರಾಜಕೀಯದಲ್ಲಿ ಕಾಣಿಸಿಕೊಳ್ಳದೇ ದೂರ ಉಳಿದು ಬಿಟ್ಟರು. ಆದರೆ ರಾಜಕೀಯ ಸ್ನೇಹಿತರನ್ನು ದೂರಮಾಡಲಿಲ್ಲ. ಅವರು ಅನಾರೋಗ್ಯದಿಂದ ಹೃದಯ ಚಿಕಿತ್ಸೆ ಮಾಡಿಸಿಕೊಂಡ ನಂತರ ಬಹಳ ದಿನಗಳವರೆಗೆ ಹೊರಗೆ ಕಾಣಿಸಲಿಲ್ಲ. ಮುಂದೆ ಈ ಮಹಾಚೇತನ ನಮ್ಮನ್ನು ಅಗಲಿರುವದು ತಿಳಿದು ತುಂಬ ದುಃಖವಾಯಿತು. ದೇಸಾಯಿ ಅವರು ನಮ್ಮನ್ನಗಲಿ ವರ್ಷವಾಗುತ್ತಿದೆ. ಅವರ ನೆನಪು, ಗಂಭೀರ ವ್ಯಕ್ತಿತ್ವ, ಅವರು ಮಾಡಿರುವ ಕೆಲಸ ಸದಾ ನಮ್ಮ ಮುಂದೆ ಹಸಿರಾಗಿವೆ.

ವಿವೇಕ ಶೀಲ

❁ ಡೇವಿಡ್ ಸಿಮೆಯೋನ್

ಸ್ವಾತಂತ್ರ ಹೋರಾಟಗಾರ, ಅಪ್ಪಟ ಖಾದಿಧಾರಿ, ನಿಖರ- ಪ್ರಾಮಾಣಿಕ ನ್ಯಾಯವಾದಿ, ವಿವೇಕ ರಾಜಕಾರಣಿ, ಸ್ನೇಹಜೀವಿ, ಮಿತಭಾಷಿ ಹಾಗೂ ಕಲಬುರ್ಗಿ ಮಹಾನಗರದ ಕುಡಿಯುವ ನೀರಿನ ಸಮಸ್ಯೆಗಳ ಶಾಶ್ವತ ಪರಿಹಾರಕ ಕುಸುಮಾಕರ ದೇಸಾಯಿಯವರು ನಮ್ಮನ್ನಗಲಿದ ವಾರ್ತೆ ವೈಯಕ್ತಿಕವಾಗಿ ನನಗೆ ಇಂದಿಗೂ ಮಾನಸಿಕ ಆಘಾತವನ್ನುಂಟುಮಾಡುತ್ತದೆ.

ಕುಸುಮಾಕರ ದೇಸಾಯಿಯವರು ಕಲಬುರ್ಗಿಯ ಅಪರೂಪದ ವಿವೇಕ ರಾಜನೀತಿಯ ರಾಜಕಾರಣಿ. ಇವರು ಕರ್ನಾಟಕ ವಿಧಾನ ಮಂಡಲದ ಒಂದೂ ಮನೆಯನ್ನು ಪ್ರವೇಶಿಸದಿರುವುದೇ ಒಂದು ಪವಾಡ!!

ಸ್ವಾತಂತ್ರ ಹೋರಾಟಗಾರರಾದ ದೇಸಾಯಿಯವರು ಸಮಾಜವಾದ ತತ್ವ ಸಿದ್ಧಾಂತಗಳನ್ನು ಹೊಂದಿದವರಾಗಿ ಜೀವನವಿಡೀ ಒಂದೇ ಪಕ್ಷಕ್ಕೆ ಅಂದರೆ, ಪ್ರಜಾಸೋಷಲಿಸ್ಟ್ ಪಾರ್ಟಿ ತದನಂತರ ಜಯಪ್ರಕಾಶ್ ನಾರಾಯಣರವರ ಸಂಪೂರ್ಣ ಕ್ರಾಂತಿಯ ಆಂದೋಲನದಿಂದಾಗಿ ತುರ್ತುಪರಿಸ್ಥಿತಿಯ ಹಿನ್ನೆಲೆಯಲ್ಲಿ ಹುಟ್ಟಿದ 'ಜನತಾ ಪಕ್ಷ- ಜನತಾ ದಳ'ದಲ್ಲಿದ್ದು ನೋವು-ನಲಿವುಗಳಲ್ಲಿ ಹಾಸ್ಯ ಚಟಾಕಿಗಳಿಂದ ಜೀವನ ಸವೆಸಿದರು.

ಬಹುಶಃ ಸ್ವಾತಂತ್ರ್ಯಾ ನಂತರ ಅಂದಿನ ಕಾಂಗ್ರೆಸ್ ಪಕ್ಷ ಸೇರಿದ್ದರೆ, ಅವರ ವ್ಯಕ್ತಿತ್ವದಿಂದಾಗಿ ಅವರ ಜೀವನ ಶೈಲಿಯೇ ಸುಖಮಯ- ಆಡಂಬರದಿಂದ ಬದಲಾಗುತ್ತಿತ್ತೇನೋ. ಅನೇಕ ಸಲ ಇವರನ್ನು ಕಾಂಗ್ರೆಸ್‌ಗೆ ಆಹ್ವಾನಿಸಿದ್ದುಂಟೆಂದು ಇವರು ಖಾಸಗಿಯಾಗಿ ನನಗೆ ಹೇಳುತ್ತಿದ್ದರು. ಯಾಕೆ ಹೋಗಲಿಲ್ಲವೆಂಬುದಕ್ಕೆ ಅವರ ಉತ್ತರ-- "ಸಮಾಜವಾದ ಸಿದ್ಧಾಂತ- ಆಡಳಿತಾರೂಢ ಕಾಂಗ್ರೆಸ್ ನಡವಳಿಕೆಗೆ ಹೊಂದಾಣಿಕೆಯಾಗದು."

ಕರ್ನಾಟಕದಲ್ಲಿ ಪ್ರಥಮ ಕಾಂಗ್ರೆಸ್ಸೇತರ ಸರಕಾರ- ಜನತಾ ಪಕ್ಷ ಅಧಿಕಾರಕ್ಕೆ ಬಂದಾಗ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರ ನಾಯಕತ್ವದ ಸರ್ಕಾರ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಗೆ ಕುಸುಮಾಕರ ದೇಸಾಯಿಯವರನ್ನು ಅಧ್ಯಕ್ಷರನ್ನಾಗಿ ನಾಮಕರಣ ಮಾಡಿತು!

೧೦೦ ವರ್ಷಗಳ ಭೀಮಾನದಿ ಹರಿಯುವಿಕೆಯ ಅಂಕೆ ಸಂಖ್ಯೆಗಳ ವಿವರ ಪಡೆದು, ಹಲವು ಹಟಮಾರಿ "ಖೊಟ್ಟಿ" ರಾಜಕಾರಣಿಗಳ ವಿರೋಧ ನೀತಿಯಿಂದ ಹಲವಾರು ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಿ, ಕಲಬುರ್ಗಿ ನಗರಕ್ಕೆ ನೀರು ಸರಬರಾಜು ಯೋಜನೆಯ ನೀಲಿ ನಕಾಶೆರೂಪಿಸಿ ಅದಕ್ಕೆ ಚಾಲನೆ ನೀಡಿದ ದೂರದೃಷ್ಟಿಯ ಧೀಮಂತ

ನಾಯಕ ಕುಸುಮಾಕರ ದೇಸಾಯಿ!!

ಪ್ರಜಾಸೋಷಲಿಸ್ಟ್ ಪಾರ್ಟಿ ಮೂಲದ ದೇಸಾಯಿಯವರನ್ನು ಜೂನ್ ೧೯೭೫ರಲ್ಲಿ 'ತುರ್ತುಪರಿಸ್ಥಿತಿ' ಕಾಲದಲ್ಲಿ ರಾಷ್ಟ್ರಾದ್ಯಂತ ವಿರೋಧ ಪಕ್ಷಗಳ ಅಂದರೆ ಕಾಂಗ್ರೆಸ್ಸೇತರ ಪಕ್ಷಗಳ ನಾಯಕರನ್ನು ಬಂಧಿಸಿದಂತೆ ಬಂಧಿಸಿದಾಗ, ಕಲಬುರ್ಗಿ ಕೇಂದ್ರ ಕಾರಾಗೃಹದಲ್ಲಿ ಜೆ.ಎಚ್. ಪಟೇಲರೊಂದಿಗೆ ಜೈಲುವಾಸಿಯಾಗಿದ್ದರು.

ಜನತಾ ಪಕ್ಷದ ಉದಯವಾದಾಗ, ನಾನೂ ಕಾಂಗ್ರೆಸ್ ಫಾರ್ ಡೆಮೋಕ್ರಸಿಯಿಂದ ಜನತಾ ಪಕ್ಷ ಸೇರಿದೆನು, ಆಗ ಚಿರಪರಿಚಿತ ದೇಸಾಯಿಯವರೊಡನಾಟ ಗಾಢವಾಯಿತು. ಜನತಾ ಪಕ್ಷ ತದನಂತರದ ಜನತಾ ದಳದ ಸಭೆಗಳಲ್ಲಿ 'ಗೊತ್ತುವಳಿಗಳ ಕರಡು' ರೂಪಿಸುವುದು, ಜಿಲ್ಲಾ ಮುಖಂಡರ ಸಭೆಗಳಲ್ಲಿ ಜಿಲ್ಲಾ ರಾಜಕೀಯದ, ಜಿಲ್ಲಾ ಅಭಿವೃದ್ಧಿಯ ನಿರ್ಧಾರಗಳಲ್ಲಿ ವಿವೇಕಯುತ ಸಲಹೆ ಸೂಚನೆಗಳನ್ನು ಕೊಡುತ್ತಿದ್ದುದು, ಇದಕ್ಕೆ ಸಂಬಂಧಿಸಿದ ಬರವಣಿಗೆ ಮಾಡುವುದು ಇವರ ವಿಶೇಷತ್ವ!

ಒಂದು ಕಾಲದಲ್ಲಿ ಪ್ರಜಾಸೋಷಲಿಸ್ಟ್ ಪಾರ್ಟಿಯ ಮುಖಂಡರಾಗಿದ್ದ ಕುಸುಮಾಕರ ದೇಸಾಯಿಯವರು ಅನೇಕ ರಾಷ್ಟ್ರೀಯ ನಾಯಕರ ನೇರ ಸಂಪರ್ಕ ಹೊಂದಿದ್ದರು. ಚುನಾವಣಾ ಪ್ರಚಾರಾರ್ಥ ಕಲಬುರ್ಗಿಗೆ ಅವರುಗಳು ಬಂದರೆ, "ಕುಸುಮಾಕರ ಕಹಾಹೈ? ಉನ್‌ಸೇ ಮಿಲನಾ ಹೈ" ಎಂಬುದಾಗಿಯೇ ಹೇಳುತ್ತಿದ್ದರು. ನಾನು ಅನೇಕ ಸಂದರ್ಭಗಳಲ್ಲಿ ಇವರ ಮನೆಗೆ ಹಲವು ಮುಖಂಡರನ್ನು ಕರೆದೊಯ್ದುದ್ದುಂಟು.

ಪ್ರೊ. ಮಧುದಂಡವತೆ, ಮಧುಲಿಮಯೇ, ಜೆ.ಎಚ್. ಪಟೇಲ್, ಪೀಲೂಮೋದಿ, ಅಣ್ಣಾಹಜಾರೇ, ಇತ್ಯಾದಿ, ಇತ್ಯಾದಿ ನಾಯಕರನ್ನು ಹಲವು ಸಂದರ್ಭಗಳಲ್ಲಿ ಇವರನ್ನು ರಾತ್ರಿ ಊಟಕ್ಕೆ ಆಹ್ವಾನಿಸಿದಾಗ, ತೆರೆಮರೆಯಲ್ಲಿ ಅಂದಿನ ಹಲವು ರಾಜಕಾರಣಿಗಳು ಕುಸುಮಾಕರ ದೇಸಾಯಿ "ಡಿನ್ನರ್ ಪೊಲಿಟಿಕ್ಸ್" ಮಾಡುತ್ತಾರೆಂದು ಪಿಸುಗುಟ್ಟಿದ್ದನ್ನು ಕೇಳಿಸಿಕೊಂಡಿದ್ದೇನೆ. ಇಂತಹ "ಡಿನ್ನರ್ ಪೊಲಿಟಿಕ್ಸ್‌ಗಳಿಂದ" ದೇಸಾಯಿಯವರು ರಾಷ್ಟ್ರಮಟ್ಟದಲ್ಲಾಗಲಿ ಅಥವಾ ರಾಜ್ಯ ಮಟ್ಟದಲ್ಲಾಗಲಿ ಯಾವ ಸ್ಥಾನವನ್ನು ಪಡೆಯಲಿಲ್ಲ. ಅವರ ಹಳೆಯ ಒಡನಾಟದ ಸಂಬಂಧಗಳು ನವೀಕರಿಸಲ್ಪಡುತ್ತಿದ್ದವು. ಹಾಗೂ ರಾಷ್ಟ್ರ-ರಾಜ್ಯ ರಾಜಕೀಯ ಏರುಪೇರುಗಳ ಬಗ್ಗೆ ವಿಶ್ಲೇಷಿಸುತ್ತಿದ್ದುದಾಗಿ ಕೇಳಿದ್ದೇನೆ.

ದೇಸಾಯಿಯವರ ಬುದ್ಧಿವಂತಿಕೆ, ವಿವೇಕತನ ಬಹುಶಃ ಹಲವು ನಾಯಕರಿಗೆ ಭಯಹುಟ್ಟಿಸಿರಬಹುದು. ಹೀಗಾಗಿ ಅವರನ್ನು ರಾಜ್ಯಸಭೆಯ ಅಥವಾ ಕರ್ನಾಟಕ ವಿಧಾನ ಪರಿಷತ್ತಿನ ಸ್ಥಾನಕ್ಕೆ ಸೂಚಿಸದೆ, ಅವರ ಧರ್ಮಪತ್ನಿ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯವರನ್ನು ಕರ್ನಾಟಕದ ಮೇಲ್ಮನೆ ಸದಸ್ಯರನ್ನಾಗಿ ಮಾಡಿದರು. ಇದರರ್ಥ ಶ್ರೀಮತಿ ದೇಸಾಯಿಯವರು ಅಜ್ಞರೆಂದಲ್ಲ. ಇವರೂ ಸಕ್ರಿಯ ರಾಜಕೀಯದಲ್ಲಿದ್ದೂ ಒಮ್ಮೆ ೧೯೭೮ರಲ್ಲಿ

ಚಿತ್ತಾಪೂರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ ಇವರು ನ್ಯಾಯವಾದಿಗಳೂ, ಲೇಖಕಿಯಾಗಿ ಹಾಗೂ ವಿಮರ್ಶಕರಾಗಿ ಒಬ್ಬ ಆದರ್ಶ ಗೃಹಿಣಿಯಾಗಿ, ಅತಿಥಿ ಸತ್ಕಾರಗಳಲ್ಲಿ ಮೇಲುಗೈ ಸಾಧಿಸಿದವರು.

ದೇಸಾಯಿಗಳು "ಆದರ್ಶ ದಂಪತಿಗಳು."

ಎತ್ತರಗಾತ್ರದ, ಸುಂದರಮಯವಾಗಿದ್ದ ಇವರೀರ್ವರೂ ಜೊತೆಯಾಗಿ ನ್ಯಾಯಾಲಯದ ಆವರಣದಲ್ಲಿದ್ದಾಗ ಖಾದಿ ಬಿಳಿ ಪ್ಯಾಂಟು, ಖಾದಿ ಕಪ್ಪು ಕೋಟು, ಕಪ್ಪು ಟೈ, ಕಪ್ಪು ಬೂಟುಗಳನ್ನು ಧರಿಸಿದ ದೇಸಾಯಿಯವರ ಎಡಗಡೆ, ಶ್ರೀಮತಿ ದೇಸಾಯಿಯವರು ಎಡ ಅರ್ಧಕ್ಕೆ ಮೇಲೆತ್ತಿ ಕಪ್ಪುಗೌನನ್ನು ಹಿಡಿದುಕೊಂಡು ಗಾಂಭೀರ್ಯದಿಂದ ನಡೆಯುತ್ತ ಸಾಗುವುದನ್ನೂ ಹಾಗೂ ಸಾಯಂಕಾಲಗಳಲ್ಲಿ ಅಲ್ಪವಿಹಾರಾರ್ಥ ಎರಡು ಫಮೇರೇನಿಯನ್ ನಾಯಿಗಳೊಂದಿಗೆ ನಡೆದಾಡುತ್ತಿರುವುದನ್ನು ನೋಡಿದಾಗ, ನನ್ನ ಮನಸ್ಸಿನಲ್ಲಿ ಒಂದು ತರಹದ ಸಂತೋಷ, ಅಭಿಮಾನ, ಪ್ರೀತಿ ಉಕ್ಕಿಬರುತ್ತಿತ್ತು.

ಪೂನಾ (ಪುಣೆ) ಮೂಲದ ಪಂಡಿತರಾಮಾಬಾಯಿಯವರ ಮೂಲಕ ಅನಾಥ ಮಹಿಳೆಯರಿಗಾಗಿ "ಜನಾನಾ ಮಿಶನ್"ಕಲಬುರ್ಗಿ ನಗರದ ಉದ್ಯಾನವನದ ರಸ್ತೆ (ಗಾರ್ಡನ್ ರೋಡ್) ಯಲ್ಲಿರುವ ದೇಸಾಯಿ ದಂಪತಿಗಳ ಮನೆ "ಸಂಜೀವಿನಿ"ಯ ಪಕ್ಕದ ದೊಡ್ಡ ಆವರಣದಲ್ಲಿ ೧೯೦೦ರ ಆದಿಭಾಗದಲ್ಲಿ ಪ್ರಾರಂಭವಾಯಿತು. ಅದನ್ನು ೧೯೪೦ ರ ದಶಕದಲ್ಲಿ 'ಶಾಂತಿಸದನ ಬಾಲಕಿಯರ ವಸತಿ ಗೃಹ' ಎಂಬುದಾಗಿ ಹೆಸರಿಸಲಾಗಿದೆ.

ನನ್ನ ಮದುವೆಯ ಮೊದಲು ನನ್ನ ಧರ್ಮಪತ್ನಿ ಶ್ರೀಮತಿ ಸುಜಾನ್, ವಿಜಯ ವಿದ್ಯಾಲಯದಲ್ಲಿ ಉಪಾಧ್ಯಾಯಿನಿಯಾಗಿ ಆಯ್ಕೆಗೊಂಡು ಶಾಂತಿಸದನದಲ್ಲಿ ಬೇರೇ ಹಲವು ಉಪಾಧ್ಯಾಯನಿಯರೊಂದಿಗೆ ಸುಮಾರು ಐದು ವರ್ಷಗಳ ಕಾಲ ಅಂದರೆ ೧೯೭೦ ರಿಂದ ೧೯೭೫ರವರೆಗೆ ವಾಸವಾಗಿದ್ದಳು. ಶಾಂತಿಸದನದಲ್ಲಿ ಕಲಬುರ್ಗಿ ಜಿಲ್ಲೆಯ ಹಳ್ಳಿಗಳಿಂದ ಬಂದ ಸುಮಾರು ೨೦೦ ಬಾಲಕಿಯರು ವಿಜಯ ವಿದ್ಯಾಲಯದಲ್ಲಿ ಕಲಿಯಲು ವಾಸವಾಗಿರುತ್ತಿದ್ದರು. ನನ್ನ ಪತ್ನಿ ಸುಜಾನ್ ಹಾಗೂ ಆಕೆಯ ಸಹಪಾಠಿಗಳಿಗೆ ದೇಸಾಯಿ ದಂಪತಿಗಳು 'ಅಂಕಲ್-ಆಂಟಿ'ಯಾಗಿದ್ದರು. ಪ್ರತಿಸಲವು ಅವರನ್ನು ಕಂಡಾಗ ಬಾಲಕಿಯರು ಹಾಗೂ ಎಲ್ಲರೂ ಗುಡ್‌ಮಾರ್ನಿಂಗ್, ಗುಡ್‌ಈವನಿಂಗ್ ಆಂಟಿ-ಅಂಕಲ್ ಎಂದೇ ಶುಭಾಶಯಗಳನ್ನು ಕೋರುತ್ತಿದ್ದರು.

ನಮ್ಮ ಮದುವೆ ದಿನಾಂಕ: ೬-೫-೧೯೭೫ರಲ್ಲಿ ಆದ ನಂತರ "ಅಂಕಲ್- ಆಂಟಿ"ಯ ಸಂಬಂಧ ಮುಂದುವರೆದು, ಜನತಾ ಪಕ್ಷ ಉದಯದ ನಂತರ ಅದು ಗಾಢವಾಯಿತು. ಈ ಸಂಬಂಧದ ಹಿನ್ನೆಲೆಯಲ್ಲಿ ದೇಸಾಯಿಯವರು ಹಾಗೂ ಶ್ರೀಮತಿ ದೇಸಾಯಿಯವರು ನನ್ನನ್ನು ಏಕವಚನದಿಂದ ಸಂಬೋಧಿಸುತ್ತಿದ್ದರು. ಶ್ರೀಮತಿ ದೇಸಾಯಿಯವರು ನನ್ನನ್ನು ಇಂದಿಗೂ

ಅದೇ ತರಹದಿಂದ "ಇವ ಡೇವಿಡ್ ನಮ್ಮಪ್ಪ. ನೀನು ಈಗ ಎಲ್ಲಿಗೆ ನಡಿದಿ?....."ಎಂದೇ ಆತ್ಮಿಯವಾಗಿ ಪ್ರೀತಿ-ಅಕ್ಕರೆಯಿಂದ ಮಾತಾಡಿಸುವರು.

ಹಲವು ಸಂದರ್ಭಗಳಲ್ಲಿ ದೇಸಾಯಿಯವರು ತಮ್ಮ ಕನಸಿನ ಕೂಸು 'ಭೀಮಾ ನೀರು ಸರಬರಾಜು ಯೋಜನೆ'ಯ ಬಗ್ಗೆ ವಿವಿಧ ರೀತಿಯ ಕನಸುಗಳನ್ನು ರೂಪಿಸಿ ನನ್ನೊಂದಿಗೆ ವಿಶ್ಲೇಷಿಸಿದ್ದುಂಟು.

ಭೀಮಾ ಯೋಜನೆ ಕಲಬುರ್ಗಿ ತಾಲೂಕಿನ ಸರಡಗಿ ಯಲ್ಲಿ ರೂಪಿತವಾಗಿದೆ. (ಬತ್ತದ, ಗ್ರಾಮದ ಬಳಿ ಸುಮಾರು ೨೧ ಕಿ.ಮೀ. ದೂರದಲ್ಲಿ).

ಭೀಮಾ ನದಿಗೆ ಅಡ್ಡವಾಗಿ ಕಟ್ಟಿರುವ ಗೋಡೆಯಿಂದ ತಡೆದಿರುವ ಹಿನ್ನೀರಿನ ನೋಟದ ಹಿನ್ನೆಲೆಯಲ್ಲಿ, ನದಿ ದಂಡೆಯ ಮೇಲೆ ಸುಮಾರು ೧೦೦ ಎಕರೆ ಭೂಮಿಯಲ್ಲಿ ಕಲಬುರ್ಗಿ ನಗರದ ಹಾಗೂ ಸುತ್ತ ಮುತ್ತಲಿನ ಜನರಿಗೆ ಹಾಗೂ ಬಾಲಕ-ಬಾಲಕಿಯರಿಗೆ ಆಕರ್ಷಕ ಸುಂದರವಾದ ಹೂದೋಟ, ಕಾರಂಜಿ ಇತ್ಯಾದಿಗಳನ್ನು ನಿರ್ಮಿಸುವ ಕನಸು ಕಾಣುತ್ತಿದ್ದರು!

ದೇಸಾಯಿಯವರಿಗೆ ಚಳಿಗಾಲದಲ್ಲಿ 'ಅಸ್ತಮಾ' ಬಾಧಿಸುತ್ತಿದ್ದುದು ನನಗೂ ಆಗಾಗ ಆತಂಕ ಮೂಡಿಸುತ್ತಿತ್ತು. ಅವರೊಂದಿಗೆ ಮಾತನಾಡುವುದು- ಹರಟುವುದು "ಟೈಂಪಾಸ್‌ಗಲ್ಲ" ಒಂದು ವಿಶೇಷ ಅನುಭವಕ್ಕಾಗಿ, ಜ್ಞಾನಾರ್ಜನೆಗಾಗಿ ಎಂಬುದು ನನ್ನ ಅಭಿಮತ!

ಕುಸುಮಾಕರ ದೇಸಾಯಿಯವರು ನಮ್ಮನ್ನಗಲಿ ಬಹುದೂರ ಹೋಗಿದ್ದಾರೆ.

ಕುಸುಮಾಕರ ದೇಸಾಯಿಯವರ ಕನಸು-- "ಕಲಬುರ್ಗಿ ಮಹಾನಗರ ಜನತೆಯ ಎಲ್ಲರಿಗೂ ಸಾಕಷ್ಟು ಕುಡಿಯುವ ನೀರು ಸಿಕ್ಕಬೇಕು. ಸರಡಗಿ (ಬ) ಆಕರ್ಷಣೀಯ ಪ್ರೇಕ್ಷಣೀಯ ತಾಣವಾಗಬೇಕು.

ಇದು ಸಾಧ್ಯವೆ? ಚುನಾಯಿತ ಪ್ರತಿನಿಧಿಗಳು, ಪರಿಸರ ಪ್ರೇಮಿಗಳು, ಬುದ್ಧಿ ಜೀವಿಗಳು ಸ್ಪಂದಿಸುವರೆ?

ಸರಡಗಿ (ಬ) ಗ್ರಾಮದ ಬಳಿ ಭೀಮಾ ನದಿ ಹಿನ್ನೀರಿಗೆ 'ಕುಸುಮಾಕರ ದೇಸಾಯಿ ಸರೋವರ'ವೆಂದು ಹೆಸರಿಸಬಹುದೆ?

ಇವುಗಳ ಅನುಷ್ಠಾನದಿಂದ ದೇಸಾಯಿಯರ ಆತ್ಮಕ್ಕೆ ಚಿರಶಾಂತಿ!

ದಳ-೦೪

ವೃತ್ತಿ ಬಾಂಧವರು

ಹಸನ್ಮುಖಿ

❁ ಬಿ. ಶ್ರೀನಿವಾಸ ರೆಡ್ಡಿ

ಶ್ರೀ ಕುಸುಮಾಕರ ದೇಸಾಯಿ ಇವರು ಬಹಳ, ಸೌಮ್ಯ ಹಾಗೂ ಹಸನ್ಮುಖಿ ಸ್ವಭಾವದವರಾಗಿದ್ದರು. ಇವರು ಎಲ್ಲರನ್ನು ಬಹಳ ಗೌರವದಿಂದ ಕಾಣುತ್ತಿದ್ದರು. ಇವರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು. ದಿವಂಗತರು ನಗರ ಜಲಮಂಡಳಿಯಲ್ಲಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಅವರ ಜೊತೆಯಲ್ಲಿ ಕೆಲಸ ಮಾಡಿದ ಸಂದರ್ಭದಲ್ಲಿ ನಾನು ಅವರಲ್ಲಿ ಕಂಡ ಸರಳ, ಸೌಮ್ಯ ಹಾಗೂ ಜನಪರ ಸೇವೆಯ ಬಗ್ಗೆ ನನ್ನ ಅನಿಸಿಕೆಗಳು ಈ ಕೆಳಕಂಡಂತಿವೆ.

ದಿವಂಗತ ಕುಸುಮಾಕರ ದೇಸಾಯಿಯವರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷರಾಗಿ ದಿನಾಂಕ ೪-೧೧-೮೫ ರಿಂದ ೩-೫-೧೯೮೮ರ ವರೆಗೆ ಸೇವೆಯನ್ನು ಸಲ್ಲಿಸಿರುತ್ತಾರೆ. ಇವರು ಮೂಲತಃ ಸಮಾಜವಾದಿಯಾಗಿದ್ದು, ಸಮಾಜದ ಅಭಿವೃದ್ಧಿಗಾಗಿ ತಮ್ಮ ಜೀವಮಾನವನ್ನೇ ತೇಯ್ದ ವ್ಯಕ್ತಿ. ಅವರ ಮುಖದಲ್ಲಿ ಸದಾ ಹಸನ್ಮುಖತೆ ಎದ್ದು ಕಾಣುತ್ತಿತ್ತು. ನಾಡಿನ ಜನತೆಗಾಗಿ ಏನಾದರೂ ಒಳ್ಳೆಯ ಕೆಲಸಗಳನ್ನು ಮಾಡಬೇಕು ಎನ್ನುವುದು ಅವರ ಹಂಬಲ.

ಇಂತಹವರ ಜನಪರ ಸೇವಾ ಮನೋಭಾವವನ್ನು ಗುರುತಿಸಿದ ಘನ ರಾಜ್ಯ ಸರ್ಕಾರವು ಇವರನ್ನು ನಗರ ಜಲಮಂಡಳಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ೧೯೮೫ ರಲ್ಲಿ ನೇಮಿಸಿತು. ಇದು ಇವರ ಸಮಾಜ ಸೇವೆಗೆ ಸಂದ ಗೌರವ. ಜನತೆಗೆ ಶುದ್ಧ ನೀರು ಸರಬರಾಜು ಮಾಡುವ ಸತ್ಕಾರ್ಯವನ್ನು ಇವರು ಜಲಮಂಡಳಿ ಅಧ್ಯಕ್ಷರಾದ ಸಂದರ್ಭವಲ್ಲಿ ಸದುಪಯೋಗ ಪಡಿಸಿ ಕೊಂಡರು. ಇವರು ಮೇಧಾವಿಗಳು. ಸಮರ್ಥ ಆಡಳಿತಗಾರರು ಆಗಿದ್ದರು. ಶ್ರೀಯುತರು ನಗರ ಜಲಮಂಡಳಿಯ ಅಧ್ಯಕ್ಷರಾಗಿದ್ದ ತಮ್ಮ ಸೇವಾವಧಿಯಲ್ಲಿ ಜಲಮಂಡಳಿ ಅಧಿಕಾರಿಗಳು ಮತ್ತು ನೌಕರರರೊಂದಿಗೆ ಸಹಕಾರ ಮತ್ತು ಸಹಬಾಳ್ವೆಯೊಂದಿಗೆ ರಾಜ್ಯದ ಅನೇಕ ಪಟ್ಟಣಗಳಿಗೆ ನೀರು ಸರಬರಾಜು ಯೋಜನೆಗಳನ್ನು ರೂಪಿಸುವಲ್ಲಿ ಹಾಗೂ ಕಾರ್ಯಗತಗೊಳಿಸುವಲ್ಲಿ ಹೆಚ್ಚು ಒತ್ತು ಕೊಡುತ್ತಿದ್ದರು. ಒಂದು ಪ್ರಮುಖ ಉದಾಹರಣೆಯೆಂದರೆ ಅಂದಿನ ದಿನಗಳಲ್ಲಿ ಉತ್ತರ ಕರ್ನಾಟಕದ ಕಲಬುರ್ಗಿ ನಗರದ ಜನತೆಗೆ ನೀರಿನ ತೀವ್ರ ಅಭಾವವಿದ್ದು ಬಹಳ ಕಷ್ಟಕರ ಪರಿಸ್ಥಿತಿ ಇತ್ತು. ದಿವಂಗತರು ಈ ಬಗ್ಗೆ ತುಂಬು ಕಾಳಜಿ ವಹಿಸಿ ಧೀಮಾನದಿಯಿಂದ ಕಲಬುರ್ಗಿ ನಗರಕ್ಕೆ ನೀರು ಸರಬರಾಜು ವ್ಯವಸ್ಥೆಯ ಯೋಜನೆಯನ್ನು ನಿರೂಪಿಸುವಲ್ಲಿ ಸರ್ಕಾರದ ಮಟ್ಟದಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸಿ ಕಡೆಗೂ ಈ ನಿಟ್ಟಿನಲ್ಲಿ ಜಯಶೀಲರಾಗಿ ಈ ದಿನ ಗುಲ್ಬರ್ಗಾ ನಗರ ಜನತೆಗೆ ಈಗ ಈ ಶಾಶ್ವತ ಮೂಲದಿಂದ ನೀರು ಸರಬರಾಜು ಆಗುತ್ತಿರುವುದು ಇವರ ಜನಪರ ಕಾಳಜಿಗೆ ಉತ್ತಮ ನಿದರ್ಶನವಾಗಿದೆ. ಇಂತಹ ಜನಪರ

ಕಾರ್ಯಗಳನ್ನು ಇವರು ಸಾಕಷ್ಟು ಮಾಡಿರುವುದು ಶ್ರೀಯುತರನ್ನು ಬಲ್ಲವರಿಗೆ ತಿಳಿದ ವಿಷಯ. ಒಟ್ಟಿನಲ್ಲಿ ದಿವಂಗತ ಮಾನ್ಯ ಕುಸಮಾಕರ ದೇಸಾಯಿಯವರು ಇಂದು ನಮ್ಮ ಜೊತೆಯಲ್ಲಿ ಇಲ್ಲದಿದ್ದರೂ ಅವರು ಮಾಡಿರುವ ಸತ್ಕಾರ್ಯಗಳು ಅಮರವಾಗಿವೆ.

ಇವರ ಪ್ರಥಮ ವಾರ್ಷಿಕ ಪುಣ್ಯತಿಥಿಯು ಡಿಸೆಂಬರ್ ೨೦೦೩ರ ಮೂರನೇ ವಾರದೊಳಗೆ ಜರುಗುತ್ತಿರುವುದು ಹಾಗೂ ಅವರ ಸ್ಮರಣಾರ್ಥ ಗ್ರಂಥವನ್ನು ಪ್ರಕಟಿಸುತ್ತಿರುವುದು ಬಹಳ ಗೌರವದ ವಿಚಾರ.

ಕರ್ಮಯೋಗಿ

✿ ಎ. ಹೆಚ್. ಪಾಂಡುರಂಗ

ಶ್ರೀ ಕುಸುಮಾಕರ ದೇಸಾಯಿಯವರು ನನಗೆ ಪರಿಚಯವಾಗಿದ್ದು ೧೯೭೩ನೇ ಇಸವಿಯಲ್ಲಿ. ಆಗ ನಾನು ಕಲಬುರ್ಗಿಯಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದೆ. ನಂತರ ನನಗೆ ವರ್ಗವಾದ ಕಾರಣ ಪರಿಚಯ ಸ್ವಲ್ಪ ಮಟ್ಟಿಗೆ ದೂರವಾಯಿತು. ೧೯೮೭ನೇ ಇಸವಿಯಲ್ಲಿ ಮತ್ತೆ ಕಲಬುರ್ಗಿಯಲ್ಲಿ ಅದರಲ್ಲೂ ಅವರು ಅಧ್ಯಕ್ಷರಾಗಿದ್ದ ಜಲಮಂಡಳಿಯಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುವ ಅವಕಾಶ ಒದಗಿಬಂತು. ಈ ೧೪ ವರ್ಷದ ಅಂತರದಲ್ಲಿ ನಾನು ದೇಸಾಯಿಯವರಲ್ಲಿ ಯಾವ ಬದಲಾವಣೆಯನ್ನು ಕಾಣಲಿಲ್ಲ. ಮೊದಲು ಹೇಗೆ ಸರಳ ಸ್ವಭಾವದವರಾಗಿದ್ದರೊ ಹಾಗೇ ಇದ್ದರು. ಅದೇ ಪ್ರೀತಿ, ಅದೇ ವಿಶ್ವಾಸ, ಅದೇ ಹಾಸ್ಯ. ಅಧ್ಯಕ್ಷರಾದ ಮೇಲೆ ಅವರು ನನ್ನ ಮುಂದೆ ಪದೆ ಪದೆ ಹೇಳುತ್ತಿದ್ದ ಮಾತು "ಸಾಹೇಬರೆ, ನಾನು ಈಗ ಒಂದು ಉನ್ನತ ಸ್ಥಾನದಲ್ಲಿದ್ದೇನೆ. ಇಂತಹ ಅವಕಾಶ ಮತ್ತೆ ಬರಲಿಕ್ಕಿಲ್ಲ. ಆದ್ದರಿಂದ ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸುವುದು ನನ್ನ ಪ್ರಥಮ ಕರ್ತವ್ಯ. ಈ ದೆಸೆಯಲ್ಲಿ ಸರ್ವ ಪ್ರಯತ್ನ ಮಾಡಿ ಜನಗಳ ಕುಡಿಯುವ ನೀರಿನ ಬವಣೆಯನ್ನು ಹೋಗಲಾಡಿಸಬೇಕು, ಈ ದೆಸೆಯಲ್ಲಿ ಬಹಳಷ್ಟು ನಗರಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ತಯಾರು ಮಾಡಿ ಸರ್ಕಾರದ ಮಂಜೂರಾತಿಗೆ ಕಳುಹಿಸಿದ್ದರು.

ಇವರು ಅಧ್ಯಕ್ಷರಾದ ಕಾಲದಲ್ಲಿ ಕಲಬುರ್ಗಿ ನಗರದಲ್ಲಿ ಕುಡಿಯುವ ನೀರಿನ ಹಾಹಾಕಾರ ಬಹಳ ಇತ್ತು. ಈ ನಗರಕ್ಕೆ ಶಾಶ್ವತವಾದ ಕುಡಿಯುವ ನೀರಿನ ಯೋಜನೆಯನ್ನು ತಯಾರು ಮಾಡಲು ಭೀಮಾನದಿಯಿಂದ ನೀರು ತರಲು ಒಂದು ಯೋಜನೆಯನ್ನು ತಯಾರು ಮಾಡಿಸಿ ಸರ್ಕಾರದ ಮಂಜೂರಾತಿಯನ್ನು ಪಡೆದು ಇವರು ಅಧ್ಯಕ್ಷರಾದ ಕಾಲದಲ್ಲಿಯೆ ಕೆಲಸವನ್ನು ಪ್ರಾರಂಭಿಸಿದರು. ಇವತ್ತು ಕಲಬುರ್ಗಿ ಜನ ನೀರಿನ ತೊಂದರೆಯನ್ನು ಅನುಭವಿಸಬೇಕಾಗಿಲ್ಲ. ಈ ಕೀರ್ತಿ ಮತ್ತು ಹೆಮ್ಮೆ ದೇಸಾಯಿಯವರಿಗೆ ಸಲ್ಲತಕ್ಕದ್ದು. ಶ್ರೀ ದೇಸಾಯಿಯವರ ಪ್ರತಿಯೊಂದು ಜನೋಪಯೋಗಿ ಕೆಲಸದಲ್ಲಿ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯವರ ಬೆಂಬಲ ಸಹಕಾರ ಇದ್ದೇ ಇರುತ್ತಿತ್ತು. ಶ್ರೀ ದೇಸಾಯಿಯವರು ಎಷ್ಟು ಕಾರ್ಯ ಪ್ರವೃತ್ತರಾಗಿದ್ದರೊ ಅಷ್ಟೇ ಹಾಸ್ಯ ಪ್ರವೃತ್ತಿಯನ್ನು ಬೆಳೆಸಿಕೊಂಡು ಬಂದಿದ್ದರು. ಅಧಿಕಾರಿಗಳನ್ನು ಬಹಳ ಗೌರವದಿಂದ ಕಾಣುತ್ತಿದ್ದರು. ಸಲಹೆಗಳು ಯಾರ ಕಡೆಯಿಂದ ಬಂದರೂ ಅದನ್ನು ಹಗುರವಾಗಿ ಕಾಣುತ್ತಿರಲಿಲ್ಲ. ಇದೊಂದು ಬಹಳ ದೊಡ್ಡ ಗುಣ ದೇಸಾಯಿಯವರಲ್ಲಿ. ಕೆಲವು ರಾಜಕೀಯ ಬೆಳವಣಿಗೆಯಿಂದ ಎಲ್ಲಾ ಅಧ್ಯಕ್ಷರುಗಳು ತಮ್ಮ

ಅವಧಿಗಿಂತ ಮುಂಚೆ ರಾಜೀನಾಮೆ ನೀಡುವ ಪ್ರಸಂಗಬಂದಾಗ ಯಾವ ಯೋಚನೆಯನ್ನುಮಾಡದೆ ರಾಜಿನಾಮೆ ಕೊಟ್ಟರು. ಇವರು ಅಧಿಕಾರವನ್ನು ಹುಡುಕಿಕೊಂಡು ಹೋದವರಲ್ಲ. ಅಧಿಕಾರ ಇವರನ್ನು ಹುಡುಕಿಕೊಂಡು ಬಂತು. ಈಗಿನ ರಾಜಕೀಯ ವಾತಾವರಣದಲ್ಲಿ ದೇಸಾಯಿಯಂಥವರು ಸಿಗುವುದು ಬಹಳ ಅಪರೂಪ. ತಮ್ಮ ಗೌರವ, ಸ್ವಾಭಿಮಾನ ಮತ್ತು ನಿಷ್ಠೆಯನ್ನು ಕಾಪಾಡಿಕೊಂಡು ಬಂದ ಮಹಾನ್ ವ್ಯಕ್ತಿ.

ಇವರ ಅಗಲಿಕೆಯಿಂದ ಇಡೀ ಸಮಾಜ ಅನಾಥವಾಗಿದೆ. ಇವರ ದೇಶಪ್ರೇಮ ಮತ್ತು ರಾಜ್ಯಕ್ಕೆ ನೀಡಿದ ಸೇವೆ ಅಮೋಘವಾದದ್ದು. ಈತ ನಿಜವಾಗಲೂ ಒಬ್ಬ ಕರ್ಮಯೋಗಿ.

ಅಕ್ಷರ ನಮನ

✽ ಬ. ಲ. ಸುರೇಶ,

ಹುಟ್ಟು ಸೃಷ್ಟಿಯ ಪ್ರತೀಕ, ಬಾಳು ಸ್ಥಿತಿಯ ಸಂಕೇತ, ಸಾವು ಲಯದ ಪ್ರತಿರೂಪ. ಪಂಚಭೂತಗಳಿಂದ ಮೂರ್ತರೂಪ ಪಡೆದ ಮನುಷ್ಯ, ಹುಟ್ಟು ಮತ್ತು ಸಾವು ಎಂಬ ಎರಡು ಅಲೌಕಿಕ ವಿಷಯಗಳಿಂದ ಬಂಧಿ. ಇವೆರಡೂ ಆಳ- ಅಳತೆಗೆ ನಿಲುಕದ ಸಂಗತಿ. ಆದರೆ ಸ್ಥಿತಿ ಪ್ರತಿಯೊಬ್ಬ ವ್ಯಕ್ತಿಯನ್ನು ಎಲ್ಲಿಂದ ಎಲ್ಲಿಗೆ ಬೇಕಾದರೂ ಕೊಂಡೊಯ್ಯುವುದು. ಆಡಿಸಿದಂತೆ ಆಡುವುದು, ಓಡಿಸಿದಂತೆ ಓಡುವುದು, ಬುದ್ಧಿ ವಿವೇಕ ಎಂಬ ಚಕ್ರಕ್ಕೆ, ಮನಸ್ಸೆಂಬ ಕುದುರೆಕಟ್ಟಿ, ಸಾಧಕ ಮನೋಭಾವದೊಂದಿಗೆ ಧನ್ಯತೆಯ ಸವಾರಿ ಮಾಡಿದವರು ಮಾತ್ರ ಬದುಕಲ್ಲಿ ಸಾರ್ಥಕತೆ ಪಡೆಯುತ್ತಾರೆ. ಅದಕ್ಕೆ ಅಪಾರವಾದ ಶ್ರದ್ಧೆ, ಸಹನೆ, ಗುಣ, ನಡತೆ, ಸಹಿಷ್ಣುತೆ, ಮಾನವೀಯತೆ, ಕರುಣೆಬೇಕು. ಇವನ್ನೆಲ್ಲಾ ಮೈಗೂಡಿಸಿಕೊಂಡಾಗ ಒಂದು ಪರಿಪೂರ್ಣ ವ್ಯಕ್ತಿತ್ವ ಹೊರ ಹೊಮ್ಮುತ್ತದೆ. ಅದು ಧನ್ಯವಾಗುತ್ತದೆ. ಇಂತಹ ಒಬ್ಬ ಪರಿಪೂರ್ಣ, ಧೀರೋದ್ಧಾತ್ತ ಸಾಧಕ, ಸಾರ್ಥಕ, ಮೇರು ವ್ಯಕ್ತಿ, ಸ್ವಾತಂತ್ರ್ಯಹೋರಾಟಗಾರರು ಸಮಾಜಸೇವಾ ಧುರೀಣರು, ರಾಜಕೀಯ ಮುತ್ಸದ್ದಿಯು ಆದ ಶ್ರೀ ಕುಸುಮಾಕರ ದೇಸಾಯಿಯವರು.

ಮೇಲೆ ಬರೆದ ಸಾಲು ಬರಿ ಹೊಗಳಿಕೆಯಲ್ಲ, ಯಾರನ್ನೂ ಸುಮ್ಮನೆ ಹೊಗಳುವ ಅಭ್ಯಾಸವೂ ನನಗಿಲ್ಲ. ಒಳ್ಳೆವ್ಯಕ್ತಿಗಳನ್ನು, ವ್ಯಕ್ತಿತ್ವವನ್ನು, ಗೌರವಿಸಿ, ಆದರಿಸಿ, ಸತ್ಕರಿಸಿ, ಆಶೀರ್ವಾದ ಪಡೆಯುವ ಮನೋಭಾವ ನನಗೆ ಅಂತರ್ಗತವಾಗಿ ಬಂದಿದ್ದು.

ಇಂದು 'ಸಮಾಜ ನನಗೇನು ಕೊಟ್ಟಿದೆ?' ಎಂಬ ಪ್ರಶ್ನೆ ಕೇಳುವವರೇ ಹೆಚ್ಚು; ಆದರೆ "ಸಮಾಜಕ್ಕೆ ನಾನೇನು ಕೊಟ್ಟಿದ್ದೇನೆ?" ಎಂಬ ಪ್ರಶ್ನೆ ತಮ್ಮಲ್ಲೇ ಕೇಳಿಕೊಳ್ಳುವವರು ತುಂಬಾ ವಿರಳ. ಅಂತಹವರ ಸಾಲಿನ ಜೇಷ್ಠತಮರಾಗಿ ಶ್ರೀ ಕುಸುಮಾಕರ ಸಂಜೀವರಾವ್ ದೇಸಾಯಿಯವರು ನಿಲ್ಲುತ್ತಾರೆ. ಬದುಕಿನುದ್ದಕ್ಕೂ ಅವರಲ್ಲಿ ಒಂದು ಕಮಿಟ್‌ಮೆಂಟ್ ಇತ್ತು. ಕೃತಕತೆಯನ್ನು ಅವರೆಂದು ಪ್ರದರ್ಶಿಸಿದವರಲ್ಲ. ಸಂತೋಷವಾದಾಗ ಅವರ ದೇಹ ಗಾತ್ರದ ನಗು; ಗಂಭೀರ ಚಿಂತನೆಯಲ್ಲಿ, ಆಲೋಚನೆಯಲ್ಲಿ ಗಡುಸಾದ ಮುಖ, ಮೌನ ಪ್ರತಿಕ್ರಿಯೆ, ಒಂದು ರೀತಿಯಲ್ಲಿ ಅವರ ಆಜಾನುಬಾಹು ನಿಲುವೇ ಎದುರಿರುವ ವ್ಯಕ್ತಿಯಲ್ಲಿ ಗೌರವ ಮರ್ಯಾದೆ ಹೆಚ್ಚಿಸುವಂತದ್ದು. ಅವರ ದೇಹ ತೂಕಕ್ಕೂ ದುಪ್ಪಟ್ಟಾಗಿದ್ದು ಅವರ ಆದರ್ಶ. ಅವರ ವ್ಯಕ್ತಿತ್ವದ ಬಗ್ಗೆ ಬರೆಯುವಷ್ಟು ದೊಡ್ಡವ್ಯಕ್ತಿ ನಾನಲ್ಲ. ಆದರೂ ಅವರ ಒಡನಾಟ, ಪ್ರೀತಿ, ಮಮತೆ ಮತ್ತು ಪ್ರಭುತ್ವದಲ್ಲಿ ಇದ್ದಿದ್ದರಿಂದ ಕೆಲವಾರು ವಿಷಯಗಳ ಬಗ್ಗೆ ಕೃತಜ್ಞತಾಭಾವದಿಂದ ಅನುಭವ ಮತ್ತು ಅನುಭಾವವನ್ನು ಬಿಚ್ಚಿಡುತ್ತಿದ್ದೇನೆ.

೧೯೮೦ರ ಅಂತ್ಯದಲ್ಲಿ ಅವರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ

ಮಂಡಲಿಯ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ಅದು ಜನತಾಪಕ್ಷದ ಸರ್ಕಾರ. ಆಗಿನ ಮುಖ್ಯಮಂತ್ರಿಗಳು ಶ್ರೀ ರಾಮಕೃಷ್ಣ ಹೆಗಡೆಯವರು. ಒಂದು ಉತ್ತಮ ವ್ಯಕ್ತಿತ್ವಕ್ಕೆ ಸುಂದಗೌರವವೂ ಹೌದು. ಕನ್ನಡ, ಹಿಂದಿ, ಆಂಗ್ಲ, ಉರ್ದು ಭಾಷೆಯನ್ನು ಸಮರ್ಥವಾಗಿ ಬಳಸಬಲ್ಲ ಬಹುಭಾಷಿಕರಾದ ಶ್ರೀ ಕುಸುಮಾಕರರು, ಜಾತಿಯಲ್ಲಿ ಬ್ರಾಹ್ಮಣರಾದರೂ ಜಾತ್ಯತೀತರಾಗಿದ್ದವರು. ಕೇವಲ ಜಾತ್ಯತೀತರು ಮಾತ್ರವಲ್ಲ ಮತಾತೀತರೂ ಹೌದು. ಗಂಡು ಹೆಣ್ಣು ಎಂಬ ಸೃಷ್ಟಿಯ ಬಗ್ಗೆ ಮಾತ್ರ ನಂಬಿಕೆಯುಳ್ಳವರು. ಅವರು ಆದರ್ಶದ ಮಾತುಗಳನ್ನು ಬರೀ ಆಡಿದರಲ್ಲ, ಬದುಕಲ್ಲಿ ಆದರ್ಶವನ್ನು ಅಳವಡಿಸಿಕೊಂಡವರು. ಪರಿಶಿಷ್ಟ ಜಾತಿಯವರೊಬ್ಬರನ್ನು ಮಗನಂತೆ ಸಾಕಿದ ಮಹಾನ್ ಚೇತನ.

ಅವರು ಕರ್ನಾಟಕ ಜಲಮಂಡಳಿಯ ಅಧ್ಯಕ್ಷರಾಗಿ ನೇಮಕವಾದಾಗ ನಾನು ಮಂಡಲಿಯಲ್ಲಿ ಬೆರಳಚ್ಚುಗಾರನಾಗಿದ್ದೆ. ಹೈದರಾಬಾದ್ ಕರ್ನಾಟಕ ಎನಿಸಿದ ಕಲಬುರ್ಗಿಯ ಆ ತುದಿಯಲ್ಲಿ ಇದ್ದು ಕನ್ನಡದ ಕೆಚ್ಚನ್ನು ಮೈಗೂಡಿಸಿಕೊಂಡ ಅವರು, ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಮರುದಿನವೇ, ಕನ್ನಡದಲ್ಲಿ ಪತ್ರವ್ಯವಹರಿಸಲು, ಕನ್ನಡ ಶೀಘ್ರಲಿಪಿಗಾರರೊಬ್ಬರು ಬೇಕೆಂದು ಕೇಳಿದಾಗ, ಶೀಘ್ರಲಿಪಿಗಾರರ ಅಲಭ್ಯದ ಎದುರು, ಕನ್ನಡ ಶೀಘ್ರಲಿಪಿಗಾರರ ಪರ್ಯಾಯವಾಗಿ ಅಧಿಕಾರಿಗಳ ಆದೇಶದಂತೆ ನಿಂತಿದ್ದು ನಾನು. ಕನ್ನಡ ನನ್ನ ಅಂತಃಸತ್ವವಾದ್ದರಿಂದ ನನಗೆ ಶೀಘ್ರಲಿಪಿಯ ಅವಶ್ಯಕತೆ ಅಂದಿನ ದಿನಗಳಲ್ಲಿ ಇರಲಿಲ್ಲ. ಯಾರು ಎಷ್ಟೇ ವೇಗವಾಗಿ ಮಾತನಾಡಿದರೂ ಅದನ್ನು ಅಕ್ಷರದಲ್ಲೇ ದಾಖಲಿಸಿಕೊಳ್ಳುವ ಹವ್ಯಾಸ ದೈವದತ್ತವಾಗಿ ಬಂದಿತ್ತು. ಆರಂಭದ ದಿನಗಳಲ್ಲಿ ಅವರ ಎದುರು ನಿಂತು ಮಾತನಾಡುವುದಕ್ಕೂ ನಾನು ಹೆದರುತ್ತಿದ್ದೆ. ಕುಳಿತುಕೋ ಎಂದರೂ ಕುಳಿತುಕೊಳ್ಳಲು ಭಯ. ನನ್ನಲ್ಲಿನ ಭಯವನ್ನು ಹೊಡೆದೋಡಿಸಿ ಬದುಕಿನ ಭರವಸೆಯತ್ತ ಕರೆದೊಯ್ದು ಶ್ರೀ ಕುಸುಮಾಕರ ದೇಸಾಯಿಯವರು ನನಗೆ ಚಿರಸ್ಮರಣೀಯರು.

ಅಂದಿನ ದಿನಗಳಲ್ಲಿ ನಾನು ಕಥೆ-ಕವನ-ನಾಟಕ-ಕಾದಂಬರಿ-ರೇಡಿಯೋ ನಾಟಕಗಳನ್ನು ಬರೆಯುತ್ತಿದ್ದೆ; ಅದೊಂದು ಹುಚ್ಚು. ಹುಚ್ಚಿಗೆ ಕಿಚ್ಚಿಟ್ಟು ಬೆಳೆಸಿದ್ದು ಕುಸುಮಾಕರರ ಧರ್ಮಪತ್ನಿ, ಖ್ಯಾತಲೇಖಕಿ, ವಕೀಲರೂ ಆದ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯವರು. ಅದೊಂದು ಆದರ್ಶ ದಾಂಪತ್ಯ. ಅಲ್ಲಿ ಕೇವಲ ಅನುಭವ ಇರಲಿಲ್ಲ, ಅನುಭಾವವಿತ್ತು. ಕೇವಲ ಆದರ್ಶವಿರಲಿಲ್ಲ, ಆದರ್ಶವನ್ನು ಬದುಕಲ್ಲಿ, ಸಮರ್ಥವಾಗಿ ತರುವ ಸಂಕಲ್ಪವಿತ್ತು. ಸಂಕಲ್ಪ ಮಾತ್ರ, ಅಲ್ಲ ಸಾಧನೆ ಇತ್ತು. ಸಾಧನೆಯ ಹಿಂದೆ ಅಪಾರವಾದ ಪರಿಶ್ರಮ, ಗುಣ, ನಡತೆ ಇತ್ತು.

ನಾನು ಇಂದು ಈ ಮಟ್ಟಕ್ಕೆ ಬೆಳೆಯಲು ಆ ದಂಪತಿಗಳ ಹಾರೈಕೆ, ಮಾರ್ಗದರ್ಶನ, ಸಹಾಯ, ಸಹಕಾರವೂ ಒಂದು ಕಾರಣ. ಸ್ವಾತಂತ್ರ್ಯ ಹೋರಾಟದ ದಿನಗಳನ್ನು ಶ್ರೀ

ಕುಸುಮಾಕರರು ಆಗಾಗ ನೆನಸಿಕೊಳ್ಳುತ್ತಿದ್ದರು. ಅವರು ಮಂಡಲಿಯ ಅಧ್ಯಕ್ಷರು, ನಾನೊಬ್ಬ ಸಾಮಾನ್ಯ ಬೆರಳಚ್ಚುಗಾರ. ಎತ್ತಣಿಂದೆತ್ತ ಸಂಬಂಧ. ನಾನು ಆರಂಭದಲ್ಲಿ ಭಯಗೊಂಡರೂ ಆಮೇಲೆ ಅವರ ಅನುಭವಗಳನ್ನು ವಿಶ್ರಾಂತಿ ವೇಳೆಯಲ್ಲಿ ಕೇಳುತ್ತಾ ಹತ್ತಿರದವನಾಗಿದ್ದೆ. ಹುಟ್ಟಿನಿಂದ ಅಂದಿನವರೆಗಿನ ತಮ್ಮ ಅನುಭವವನ್ನು ಎಳೆವಳೆಯಾಗಿ ಬಿಚ್ಚುತ್ತಿದ್ದರು. ಅವರಲ್ಲಿ ಅಧಿಕಾರಿ- ನೌಕರ ಎಂಬ ಭೇದವಿರಲಿಲ್ಲ. ತಮ್ಮ ವಾಹನ ಚಾಲಕನನ್ನೂ ಸ್ನೇಹಿತನಂತೆ, ಮಗನಂತೆ ಕಾಣುವ ವಿಶಾಲ ಮನಸ್ಸು. ಅವರೊಬ್ಬ ವ್ಯಕ್ತಿಯಾಗಿ ನನಗೆ ಕಾಣಲೇ ಇಲ್ಲ. ಒಂದು ಶಕ್ತಿಯಾಗಿದ್ದರು, ಆ ಶಕ್ತಿಯ ಗುರಿ ವಿಶ್ವಪಥವಾಗಿತ್ತು.

ಶ್ರೀ ದೇಸಾಯಿಯವರು, ವಕೀಲರು, ಪತ್ರಿಕೋದ್ಯಮಿ, ರಾಜಕೀಯ ಮುತ್ಸದ್ಧಿಯಾಗಿ, ಸಮಾಜವಾದದ ತಳಹದಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಜನಮನ್ನಣೆ ಗಳಿಸಿದವರು. ಕರ್ನಾಟಕ ಜಲಮಂಡಲಿ ಅಧ್ಯಕ್ಷರಾಗಿದ್ದಾಗಲೂ ಅಧಿಕಾರದ ಅಮಲೇರಿಸಿಕೊಳ್ಳದೇ, ಖರ್ಚಿಯ ವ್ಯಾಮೋಹದಿಂದಾಚೆ ನಿಂತು ಸಮರ್ಥ, ದಕ್ಷ ಸೇವೆ ಸಲ್ಲಿಸಿದ್ದು ಅವರ ಆದರ್ಶ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಇಂದು ಜಲಮಂಡಲಿಯಲ್ಲಿ ೧೬೦೦ ಜನರು ಅವರ ಹೆಸರು ಹೇಳಿಕೊಂಡು ಊಟಮಾಡುತ್ತಾರೆ. ದಿನಗೂಲಿಗಳಿಗೆ ಕೆಲಸಕ್ಕೆ ತಕ್ಕ ವೇತನ ಕೊಡಿಸಿದ ಅನ್ನದಾತರು ಹೌದು ಕುಸುಮಾಕರರು.

ಬದುಕಲ್ಲಿ ಅವರು ಏನನ್ನೂ ಬಯಸಿ ಬೇಡಲಿಲ್ಲ. ಬಂದಿದ್ದನ್ನು ತಿರಸ್ಕರಿಸದೇ ಅದಕ್ಕೆ ನ್ಯಾಯ ಒದಗಿಸಲು ಪ್ರಯತ್ನಿಸಿ ಯಶಸ್ಸು ಕಂಡರು. ಅವರ ಬಾಲ್ಯ-ಯೌವ್ವನ-ಸ್ವಾತಂತ್ರ್ಯ ಹೋರಾಟದ ವಿಸ್ತೃತಗಾಥೆಯನ್ನು ನನ್ನ “ಅವರಿಗಿದು ಬೇಕಿರಲಿಲ್ಲ” ಎಂಬ ಕವನದಲ್ಲಿ ಬಿಚ್ಚಿಟ್ಟಿದ್ದೇನೆ. ಶ್ರೀ ಕುಸುಮಾಕರ ದೇಸಾಯಿಯವರ ಶರೀರ ಮಣ್ಣಲ್ಲಿ ಮಣ್ಣಾದರೂ ಅವರ ಅಂತರಾತ್ಮ ವ್ಯಕ್ತಿತ್ವ, ಧ್ಯೇಯ, ಆದರ್ಶ, ಮಾನವೀಯ ಗುಣ, ವಿಶ್ವಧರ್ಮ ನನ್ನ ಕಣ್ಮುಂದೆ ಇದೆ. ಕುಸುಮ ಬಾಡಿದರೂ ಅದರ ಗಂಧ ಬಾಡುವುದಿಲ್ಲ. ಆಘ್ರಾಣಿಸೆಂದು ಬೇಡುವುದಿಲ್ಲ. ಸ್ವಾರ್ಥಾತೀತವಾದ ಬದುಕು ಜನಾನುರಾಗಿ ವ್ಯಕ್ತಿತ್ವವನ್ನು ರೂಪಿಸುತ್ತದೆ.

ಸಾರ್ಥಕ ಸೇವೆಯಲ್ಲಿ ಧನ್ಯರಾದ ತೀರ್ಥರೂಪ ಕುಸುಮಾಕರರೇ ನಿಮಗಿದೋ ಅಕ್ಷರ ನಮನ.

ಓ ನನ್ನ ಚೇತನ ಆಗು ನೀ ಅನಿಕೇತನ

❀ ಲಲಿತಾ ಯು. ಎಲ್

ರಾಷ್ಟ್ರಕವಿ ಕುವೆಂಪುರವರ ಈ ಮಾತು ನನ್ನ ತಂದೆಯ ಸಮಾನರಾದ ಪೂಜ್ಯ ಕುಸುಮಾಕರ ದೇಸಾಯಿಯವರ ಬದುಕಿಗೆ ಅನ್ವರ್ಥಕವಾಗುತ್ತದೆ. ದೇಸಾಯಿಯವರ ದೇಹ ಭಸ್ಮವಾಗಿರಬಹುದು. ಆದರೆ ಅವರ ಒಂದೊಂದು ಕೆಲಸವೂ ಬತ್ತದೆ ಜೀವಂತ ಸೆಲೆಯಾಗಿ ನಿಂತಿದೆ.

ನೋಡಿದ ತಕ್ಷಣ ಎಂತಹವರಿಗಾದರೂ ಗೌರವ ಭಾವನೆ ಮೂಡಿಬರುವ ರಾಜಠೀವಿಯ ವ್ಯಕ್ತಿತ್ವ ಹೊಂದಿದ, ರಾಜಕೀಯ ರಂಗದಲ್ಲಿ ದೊಡ್ಡ ಹೆಸರು ಮಾಡಿದವರು ಮಾನ್ಯ ಕುಸುಮಾಕರ ದೇಸಾಯಿಯವರು. ನಾನು ಬೆಂಗಳೂರಿಗೆ ಬಂದ ಹೊಸದರಲ್ಲಿ ಅಂದರೆ ೧೯೮೫ ರಲ್ಲಿ ಜನತಾ ಪಾರ್ಟಿ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರ ೨ನೇ ಬಾರಿ (ಶ್ರೀಮತಿ ಇಂದಿರಾಗಾಂಧಿಯವರ ನಿಧನದ ನಂತರ) ಆಡಳಿತಕ್ಕೆ ಬಂದಾಗ, ಎಲ್ಲಾ ಮಂಡಳಿ- ನಿಗಮಗಳ ಅಧ್ಯಕ್ಷರ ಆಯ್ಕೆ ಆಗಿರುವ ಸಂದರ್ಭದಲ್ಲಿ ಮಾನ್ಯ ಕುಸುಮಾಕರ ದೇಸಾಯಿಯವರು ಜಲಮಂಡಳಿಯ ಅಧ್ಯಕ್ಷರು ಆಗಿದ್ದರು. ಒಮ್ಮೆ ಶ್ರೀಮತಿ ಸರಿತಾ ದೇಸಾಯಿಯವರು ಜನತಾ ದಳ ಕಛೇರಿಗೆ ಬಂದಿದ್ದಾಗ ಶ್ರೀ ರಮೇಶ ಬಂದಗದ್ದೆಯವರು ಸರಿತಾರವರಿಗೆ ನನ್ನನ್ನು ತೋರಿಸಿ "ನಿಮ್ಮ ಯಜಮಾನರು ಜಲಮಂಡಳಿಯ ಅಧ್ಯಕ್ಷರು ಆಗಿದ್ದಾರೆ ಅವರಿಗೆ ಹೇಳಿ ಈ ಹುಡುಗಿಗೆ ಒಂದು ಕೆಲಸವನ್ನು ಜಲಮಂಡಳಿಯಲ್ಲಿ ಕೊಡಿಸಿರಿ" ಎಂದಾಗ ತಕ್ಷಣ ಶ್ರೀಮತಿ ಸರಿತಾ ದೇಸಾಯಿಯವರು ಒಪ್ಪಿಕೊಂಡು, ಒಮ್ಮೆ ಬಂದು ಮಾನ್ಯ ದೇಸಾಯಿಯವರನ್ನು ನೋಡಲು ಹೇಳಿ, ಒಂದೆರಡು ತಿಂಗಳಲ್ಲಿ ನನಗೆ ಜಲಮಂಡಳಿಯಲ್ಲಿ ಬೆರಳಚ್ಚು ಗಾರ್ತಿಯಾಗಿ ಕೆಲಸ ನೀಡಿ ನನ್ನ ಜೀವನಕ್ಕೊಂದು ದಾರಿ ತೋರಿಸಿದ ಮಹಾನ್ ದೇವತೆಗಳು ಈ ದಂಪತಿಗಳು.

ಸರಿತಾ ದೇಸಾಯಿ ಮತ್ತು ಕುಸುಮಾಕರ ದೇಸಾಯಿ ಇಬ್ಬರ ದಾಂಪತ್ಯ ಜೀವನವು ಎಂತಹವರೂ ಸಂತೋಷಪಡುವಂಥ ಆದರ್ಶ ದಾಂಪತ್ಯ ಜೀವನ. ನಾನು ಈ ದಿನ ಇಂತಹ ಒಳ್ಳೆಯ ಬಾಳು ನಡೆಸಲು ಅವರೇ ಕಾರಣಕರ್ತರು.

ನಾನು ಆಗೊಮ್ಮೆ ಈಗೊಮ್ಮೆ ಯಾವಾಗಲಾದರೂ ಹೋಗಿ ಈ ದಂಪತಿಗಳನ್ನು ಮಾತನಾಡಿಸಿಕೊಂಡು ಬರುತ್ತಿದ್ದೆನು. ಒಮ್ಮೆ ಹೋಗಿ ನೋಡಿದಾಗ ಅವರಿಗೆ ಹುಷಾರಿರಲಿಲ್ಲದಿದ್ದರೂ ಸಂತೋಷ- ಸಂಭ್ರಮದಿಂದ ಮಾತನಾಡಿಸಿದ್ದರು. ಬದುಕಿಗೆ ಆಧಾರವಾದ ಈ ನನ್ನ ತಂದೆಯ ಸೇವೆಯನ್ನು ಒಂದು ದಿನವಾದರೂ ಮಾಡಬೇಕೆಂದು ಅಂದು ನಾನು ಮನಸ್ಸಿನಲ್ಲಿ ಅಂದುಕೊಂಡು ಮನೆಗೆ ಹಿಂದಿರುಗಿದೆನು. ಅಷ್ಟರಲ್ಲಿ ಹಲವು ಜಂಜಾಟಗಳಿಂದ ನನಗೆ ಹೋಗಲು ಆಗಲಿಲ್ಲ. ನನ್ನ ಮಗನ ಮುಂಜಿಗೆ ಕರೆದು,

ದಂಪತಿಗಳಿಬ್ಬರಿಗೂ ೨ ಶಾಲು ತಂದು ಇಟ್ಟಿದ್ದೆನು. ಹೋಗಿ ಶಾಲನ್ನು ಹೊದಿಸಿ ನೋಡಿ ಮಾತನಾಡಿಸಿ ಬರೋಣವೆಂದರೂ ಇಂದು ನಾಳೆ ಎಂದು ಅದೂ ಕೂಡ ನನ್ನಿಂದ ಆಗಲಿಲ್ಲ.

ಒಂದು ದಿನ ನನಗೆ ಬೆಳಿಗ್ಗೆ ಕಛೇರಿಗೆ ಹೊರಡುವಾಗ ಬಿ.ಎಲ್. ಸುರೇಶನ ದೂರವಾಣಿ ಸಂದೇಶದ ಮುಖಾಂತರ ದೇಸಾಯಿಯವರು ಇನ್ನಿಲ್ಲವೆಂಬ ದುಃಖದ ವಿಷಯ ತಿಳಿದು ನನಗೆ ಒಂದು ರೀತಿಯ ಆಘಾತವಾಯಿತು. ಮನಸ್ಸು ಭಾರವಾಯಿತು. ತುಂಬಾ ದುಃಖವಾಯಿತು. ತಂದಿಟ್ಟ ಶಾಲು ನನ್ನಲ್ಲೇ ಉಳಿಯಿತು. ಇಂದಿಗೂ ಆ ದುಃಖ ನನ್ನ ಮನದಾಳದಲ್ಲಿ ಕಾಡುತ್ತಿದೆ. ಒಂದೇ ಒಂದು ಸಲ ನಾನು ಮಾತನಾಡಿಸಿ ಬರಬೇಕಾಗಿತ್ತು ಎಂದು ಯಾವಾಗಲೂ ಅನ್ನಿಸುತ್ತಾ ಇರುತ್ತದೆ.

ಜಲಮಂಡಳಿಯ ಅಧ್ಯಕ್ಷರಾಗಿದ್ದಾಗ ೧೫೦೦ ದಿನಗೂಲಿ ನೌಕರರಿಗೆ **"ಸಮಾನ ಕೆಲಸ ಸಮಾನ ವೇತನ"** ಎಂದು ಮಾಡಿ **ಅನ್ನದಾತರೆನ್ನುವ ಪುಣ್ಯ** ಕಟ್ಟಿಕೊಂಡರು. **"ಭೀಮಾ ಯೋಜನೆ"** ಭೀಮನಂತೆ ಗುಲಬುರ್ಗಾ ಜನತೆಗೆ **"ಭಗೀರಥ"** ರಾಗಿದ್ದಾರೆ. ಜಲಮಂಡಳಿಯಲ್ಲಿ ಇಂದಿಗೂ ಕುಸುಮಾಕರ ದೇಸಾಯಿಯವರು ಜಲ ಮಂಡಳಿಯ ಅಧ್ಯಕ್ಷರಾಗಿದ್ದಾಗಿನ ಕಾಲ ಎಷ್ಟು ಚೆನ್ನಾಗಿತ್ತು ಎಂದು ಇಂದಿಗೂ ನೆನೆಸುತ್ತಾರೆ.

ನನಗೆ ಜೀವನಮಾರ್ಗ ನೀಡಿದ ಮಹಾಚೇತನ ಎಂದು ಪ್ರತಿ ದಿನಾ ನಾನು ಅವರಿಗೆ ನನ್ನ ನಮನವನ್ನು ಸಲ್ಲಿಸುತ್ತೇನೆ. ಈ ಅಪರೂಪದ ದಂಪತಿಗಳ ನೆನಪಿನಲ್ಲಿ ಸದಾ ನಾನಿರುವೆ. ಅವರ ಹೃದಯ ತುಂಬಿದ ಪ್ರೀತಿಯ ನುಡಿಗಳು ನನ್ನ ಮನದಲ್ಲಿ ಮೊಳಗುತ್ತಿವೆ. ನನ್ನ ತಂದೆ ಸತ್ತಿಲ್ಲ ಇದ್ದಾರೆ ಎಂದು ನನ್ನ ಮನ ಪ್ರತಿಧ್ವನಿಸುತ್ತಿರುತ್ತದೆ. ನನ್ನ ಉಸಿರಿರುವವರೆಗೂ ಅವರ ನೆನಪನ್ನು ಮರೆಯಲು ಅಸಾಧ್ಯ.

ಕುಸುಮ ನಮನ

❁ ಹಾ.ವಿ. ಮಂಜುಳಾ ಶಿವಾನಂದ

ಭೀಮಾ ಯೋಜನೆಯನು
ಭೀಮನಂತೆ ಮಾಡಿ
ಕಲುಬುರ್ಗಿ ಜನತೆಯ
ಉಸಿರಿಗೆ ನೀರೆರೆದರು.

ಸಮಾನ ಕೆಲಸ
ಸಮಾನ ವೇತನ ಎಂಬುದಾ ತಂದು
ದಿನಗೂಲಿ ನೌಕರರಿಗೆ
ಬದುಕ ನೀಡಿದರು

ಸರಿಯಿತು ಸರಿತಾರ
ಬಾಳಿನಿಂದ ಕುಸುಮ
ಇನ್ನೂ ಪಸರಿಸಿದೆ ಎಲ್ಲೆಲ್ಲೂ
ನಿತ್ಯ ನಿರಂತರ ಪರಿಮಳ

ದಳ-೦೫

ಸಂಬಂಧಿಕರು

ಮುದ್ದುಮುಖದ ಮಗು

✽ ಸತ್ಯಭಾಮಾ ದೇಸಾಯಿ

ಸುಮಾಕರ ತೀರಿಕೊಂಡ ಸುದ್ದಿ ಕೇಳಿ ನನಗ ಭಾಽಳ ಸಂಕಟಾ ಆತು. ಕುಸುಮಾಕರನ ಕಾಕಾ ಶ್ರೀ ಪಿ.ಬಿ. ದೇಸಾಯಿ ಅವರನ್ನ ಮದಿವ್ಯಾಗಿ ಅವರ ಮನಿಗಿ ನಡೀಲಿಕ್ಕ ನಾ ಬಂದಾಗ ಕುಸುಮಾಕರ 5 ವರ್ಷದ ಹುಡುಗ. ನನಗ ಚೊಚ್ಚಿಲ ಮಗ ಹುಟ್ಟಿದಾಗ ಹದಿನಾರ ವರ್ಷದಾಕಿ ಇದ್ದೆ. ಕುಸುಮಾಕರ ನನಗ ಧಾರವಾಡ ಕಕ್ಕಿ ಅಂತನಽ ಅಂತಿದ್ದ. ನಾವು ಸೂಟಿಯೊಳಗ ಕಲಬುರ್ಗಿಗಿ ಹೋದರ "ಧಾರವಾಡ ಕಕ್ಕಿ ಬಂದ್ಲು, ಧಾರವಾಡ ಕಕ್ಕಿ ಬಂದ್ಲು" ಅಂತ ಕುಣೀತಿದ್ದ. ನಾವು ಊರಿಗೆ ಹೊಂಟರ ನಮ್ಮ ಟಾಂಗಾದ ಹಿಂದಿನ ಫಳಿ ಹಿಡಕೊಂಡು ಸ್ಟೇಶನ್ ತನಕಾ ಓಡಿ ಬರತಿದ್ದಾ. ಭಾಽಳ ತುಂಟ ಇದ್ದ. ಆದರ ಎಲ್ಲಾರ್ನೂ ಭಾಽಳ ಹಚಗೋತಿದ್ದ.

ದೊಡ್ಡಾಂವ ಆದಮ್ಯಾಲೆ, ಎಲ್ಲಾವರಾಗೂ ಕೀರ್ತಿ ಪಡದ. ಅವನಿಗೆ ತಕ್ಕ ಹೇಣ್ತಿ ಸರಿತಾ. ಇಬ್ಬರೂ ಬಿಟ್ಟಿ ಇರ್ತಿದ್ದಿಲ್ಲಾ. ಆಚ್ಚೀವರ್ಷ ಇಬ್ಬರೂ ಗಂಡಾ- ಹೇಣ್ತಿ ದೀಪಾವಳಿಗಿ ಇಲ್ಲಿ ಬಂದಿದ್ರು. ಎಷ್ಟು ಚ್ಯಾಷ್ಟಿ ಮಾಡ್ತಿದ್ದಾ, ಯಾವಾಗಲೂ ನಕ್ಕೋತ ಇರ್ತಿದ್ದಾ. ಯಾವಾಗಲೂ ಮಾತಾಡಕೋತ ಇರ್ತಿದ್ದಾ. ಅಂವಾ ಈಗ ಇಲ್ಲಂದ್ರ ಹೇಳಾಕ ಬರಲಾದಷ್ಟು ಕಸಿವಿಸಿ ಆಗ್ತದ. ಆದರ ಈಗಲೂ ಅವನ ನೆನಪಾದರ; ಅಂವಾ ಟಾಂಗಾದ ಹಿಂದ ಓಡಿ ಬರೂದು ನೆನಪಾಗ್ತದ. ಐದು ವರ್ಷದಂವಾ ಇದ್ದಾಗಿನ ಮುದ್ದು ಮುಖಾನಽ ನೆನಪಾಗ್ತದ....

ಎಂತಿದ್ರೂ ನನ ಗಂಡ ಸರದಾರ....

❁ ಸರಿತಾ ಕುಸುಮಾಕರ ದೇಸಾಯಿ

ನಾನು ಕುಮಾರಿ ಸರಸ್ವತಿ ರಾಯಸಂ. ಹರಪನಹಳ್ಳಿಯ ರಾಯಸಂ ಮನೆತನದಲ್ಲಿ ಹುಟ್ಟಿದ್ದು, ಕಲ್ಬುರ್ಗಿಯ ವಕೀಲರಾಗಿದ್ದ ಕುಸುಮಾಕರ ದೇಸಾಯಿಯವರೊಡನೆ ಹಿರಿಯರು ನಿಶ್ಚಯಿಸಿದಂತೆ ೧೨-೧೨-೧೯೬೧ರಲ್ಲಿ ಮಧ್ಯಾಹ್ನ ೧೨ ಗಂ. ಹರಪನಹಳ್ಳಿಯಲ್ಲಿ ಲಗ್ನವಾದೆ. ಕುಸುಮಾಕರ್ ಔಟ್ ಎಂಬ Greetings ಗೆಳೆಯನಿಂದ ಬಂದಿತ್ತು. ನನಗೆ ಅವರಿಗೆ ವಯಸ್ಸಿನ ಅಂತರವಿತ್ತು. ಅವರ ಹಾಗೂ ನನ್ನ ಮನೆತನದ ಪರಿಸರ ಒಂದೇ ಇತ್ತು. ಇಬ್ಬರದೂ ಗುಂಪಿನ ಮನೆ. ಶ್ರೀಮಂತರಲ್ಲದಿದ್ದರೂ ಸಜ್ಜನರೆಂಬ ಅಭಿದಾನ. ಸುಮಾರು ೪೧-೪೨ ವರ್ಷಗಳ ವೈವಾಹಿಕ ಜೀವನ ಏಳು-ಬೀಳುಗಳನ್ನು ಕಂಡರೂ ನಮ್ಮದು ಅತ್ಯಂತ ಸುಖೀ ದಾಂಪತ್ಯ, ಅನ್ಯೋನ್ಯ ದಾಂಪತ್ಯ. ಆದರ್ಶ ದಾಂಪತ್ಯ ಎಂದು ಜನರಿಂದ ಶ್ಲಾಘನೆ. ಇಬ್ಬರಲ್ಲಿ ಸ್ವಭಾವ ಭಿನ್ನತೆ ಇರಲಿಲ್ಲವೆ? ಸಾಕಷ್ಟು ಇತ್ತು. ಆದರೂ ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳಲೇ ಬೇಕಿತ್ತು.


ನಾದಿನಿ ಮಕ್ಕಳು ಕುಸುಮಾಮ-ಕುಸುಮಾಮಿ ಎಂದು ನಮಗೆ ಕರೆಯುತ್ತಿದ್ದರಿಂದ ಅದನ್ನೇ ನಾವು ಪರಸ್ಪರರು ಕರೆದುಕೊಳ್ಳುತ್ತಿದ್ದೆವು. ಏಕಾಂತದಲ್ಲಿ ನಾನು ಅವರಿಗೆ "ಸರೂ."

ಅವರ ಸ್ವಭಾವಕ್ಕೂ, ನನ್ನ ಸ್ವಭಾವಕ್ಕೂ ಅಜಗಜಾಂತರ. ಆದರೂ ಹೊಂದಾಣಿಕೆಯ ಬೆಸುಗೆ ಬಿಗಿದಿದ್ದರಿಂದ ನಮಗಿಬ್ಬರಿಗೂ ಹೆಮ್ಮೆ ಎನಿಸುತ್ತಿತ್ತು. ಅವರ ಬೌದ್ಧಿಕ ಮಟ್ಟವೆಲ್ಲಿ? ನಾನೆಲ್ಲಿ? ಅವರು highly intelectual . ಅವರ ಆ ಎತ್ತರದ ಬೌದ್ಧಿಕ ಮಟ್ಟಕ್ಕೆ ನಾನು ಬೆಳೆಯಲು ನಲ್ವತ್ತು ವರ್ಷ ಹೆಣಗಬೇಕಾಯಿತು. ಅದೂ ಒಂದು ತಪಸ್ಸು. ನಿಜಕ್ಕೂ ಗಂಡ ಬಹಳ ಬುದ್ಧಿವಂತನಾದರೆ ಹೆಂಡತಿಗೆ ಬಹಳ ಕಷ್ಟ. ತನ್ನ ಮಟ್ಟದ ಬೌದ್ಧಿಕ ಸ್ತರದವರೊಡನೆ ಮಾತ್ರ ಅವರು ಸ್ನೇಹವೃದ್ಧಿ ಮಾಡಿಕೊಳ್ಳಬಯಸುತ್ತಿದ್ದರು. ಹೀಗಾಗಿ ಅವರ ಬಗ್ಗೆ ಅನೇಕರ ತಪ್ಪು ಭಾವನೆಗಳಿಗೆ ಎಡೆ ಮಾಡಿಕೊಟ್ಟಿತ್ತು. "ನಿನ್ನ ಗಂಡನಿಗೆ ಸೊಕ್ಕು". "ನಿನ್ನ ಗಂಡ ಗರ್ವಿಷ್ಟ". "ನಿನ್ನ ಗಂಡ ಎಲ್ಲರೂ ಜುಜುಬಿ ಅಂತ ತಿಳಿದಾನೆ..... ಸ್ವತಃಕ್ಕೆ ಏನು ತಿಳಿದಾನೆ"? ಎಂದು ಮಿತ್ರರು ನನಗೆ ಕೇಳುತ್ತಿದ್ದುದು ನಿಜ. ಈ ಬಗ್ಗೆ ಸುಧಾರಣೆಗೆ ಪ್ರಯತ್ನಪಟ್ಟಾಗ ಕುಸುಮಾಮ ಒಂದೇ ಶಬ್ದದಲ್ಲಿ.... "ತಮ್ಮಲ್ಲಿಲ್ಲದ ಅಪೂರ್ವ ಜ್ಞಾನ ಸಂಪತ್ತು ನಮ್ಮಲ್ಲಿದೆ ಎಂದು ಅವರು ಸಂಕಟ ಪಟ್ಟರೆ ನಾನೇನು ಮಾಡ್ಲಿ---- ಇವನೂ ನಮ್ಮಂಗಿಲ್ಲ.... ಬೇರೆಯೇ ಇದ್ದಾನೆ ಎಂದು ಹೊಟ್ಟೆಕಿಚ್ಚು ಪಟ್ಟರೆ ಸ್ಸಾರಿ..... I can't Suffer fools.... ಅಂತಹವರನ್ನು ಕಂಡು Forgive them where they fail in truth and in ther wisdom make me wise ಎಂದು ದೇವರಲ್ಲಿ ಬೇಡುವೆ. ನನ್ನ ದಾರಿ ನನಗೆ ಎಂದು ಗಂಭೀರವಾಗಿ ಬಿಡುತ್ತಿದ್ದರು. ಆತನಿಗೆ Superior complex ಎಂದು ಪಕ್ಷದ

ಕಾರ್ಯಕರ್ತರಲ್ಲಿ ಹಲವರು ಹೇಳುತ್ತಿದ್ದುದು ನನ್ನ ಕಿವಿಯಲ್ಲೂ ಬಿದ್ದಿದೆ. ಆದರೆ ಅವರನ್ನು ಅರ್ಥ ಮಾಡಿಕೊಂಡವರು ಅವರ ಆತ್ಮೀಯರಾಗಿದ್ದಾರೆ.

ಅವರ ತ್ಯಾಗ ತತ್ವನಿಷ್ಠೆ, ಕರ್ತವ್ಯಪ್ರಜ್ಞೆ, ಪ್ರಾಮಾಣಿಕತೆ ಅವರ ಅಂತಃಕರಣ ಅರ್ಥ ಮಾಡಿಕೊಂಡು ಕುಸುಮಾಮನ್ನ ಹೊಗಳಿದಾಗ, ಒಂದು ವರ್ಗ, "ನಿಮಗೊತ್ತಿಲ್ಲ ಸುಮ್ಮನಿರ್ರಿ" ಎನ್ನುತ್ತಿದ್ದದ್ದು, ಏನು ಗೊತ್ತಿಲ್ಲವೆಂಬುದನ್ನು ಕೇಳಿದರೆ ಅವರ ಬಳಿ ಉತ್ತರವಿಲ್ಲ.

ಕುಸುಮಾಮನ ಬೌದ್ಧಿಕ ಮಟ್ಟವೇ ಅವರಿಗೆ ಶತೃಗಳನ್ನೂ ನಿರ್ಮಿಸಿತ್ತು. ತನಗಿಂತ



70 ವರ್ಷ ತುಂಬಿದ ಸಂದರ್ಭದಲ್ಲಿ ಸಮಾರಂಭ ಮುಗಿದ ನಂತರ ಪತ್ನಿ ಸಹಿ

ಬುದ್ಧಿವಂತನನ್ನು ಗೌರವಿಸುವರು ರಾಜಕೀಯ ವಲಯದಲ್ಲಿ ಬಹಳ ವಿರಳ ಮಂದಿ. ಹೀಗಾಗಿ ಕುಸುಮಾಮ ಹಲಕೆಲವರಿಗೆ ನಿಗೂಢ ವ್ಯಕ್ತಿ. ಅವರ ಮೂಡ್ ಚೆನ್ನಾಗಿದ್ದ ಹೊತ್ತಿನಲ್ಲಿ ನಾನು ಛೇಡಿಸುತ್ತಿದ್ದೆ. "ರಾಮಕೃಷ್ಣ ಹೆಗಡೆಯವರು ನಿಮಗಿಂತ ಬಹಳ ಬುದ್ಧಿವಂತರೆಂದು ನೀವೇ ಹೇಳುತ್ತಿರುತ್ತೀರಿ! ಎಲ್ಲ ವರ್ಗದವರಿಗೂ ಅವರು ಹೇಗೆ ಬೇಕಾಗಿದ್ದಾರೆ"? ಎಂದು ಕೇಳಿದಾಗ "ಅವರಿಗೆ ಅಧಿಕಾರವಿದೆ. ಅಲ್ಲದೇ ಮೂರ್ಖರನ್ನೂ ಸಹಿಸುವಷ್ಟು ಸಹನೆ ಅವರಲ್ಲಿದೆ" ಎನ್ನುತ್ತಿದ್ದರು.

ಹೆಗಡೆಯವರೊಡನೆ ಟೆಲಿಫೋನ್‌ನಲ್ಲೇ ವಿಚಾರ ವಿನಿಮಯ ಸಾಗುವುದು. ಅವರಿಗೆ ಅದು ಸಂಭ್ರಮ. ಅದರಂತೇ ಜೆ.ಎಚ್. ಪಟೇಲರ ವೈಚಾರಿಕತೆ, ಹಾಸ್ಯ ಪ್ರಜ್ಞೆ, ಓದುವ ಹಂಬಲ ಅವರಿಗೆ ಬಹಳ ಹಿಡಿಸುತ್ತಿತ್ತು. ನನ್ನಣ್ಣ ಜೀಜಿ ನನ್ನ ದೊಡ್ಡ ಅಣ್ಣನ (ಶೀನಣ್ಣ) ವ್ಯಕ್ತಿತ್ವಕ್ಕೆ

ಬಹಳ ಆದರ ತೋರಿಸುತ್ತಿದ್ದ. ಬೀಜಿ ನನಗೆ ಗೇಲಿ ಮಾಡುತ್ತಿದ್ದ.... "ನಿನ್ನ ಗಂಡ ಕುಸುಮಾಕರ ಪಕ್ಕಾ ಇದ್ದಾನೆ. ಬೌದ್ಧಿಕ ಚರ್ಚೆ, ದೇಶ-ವಿದೇಶದ ಹರಟೆ, ಕುಡಿತಕ್ಕೆ ನನಗೆ ಕಂಪನಿ ಕೊಡ್ತಾನೆ... ನನ್ನಣ್ಣ ಹೈಯಣ್ಣನ ಪ್ರೀತಿ ಗಳಿಸ್ಯಾನೆ.... ಖಾದಿ ಧರಿಸಿ, ದೇಶ-ಜೈಲ್ ಎಂದು ಆತನ ಪ್ರೀತಿನ್ನೂ ಗಳಿಸ್ಯಾನೆ ಎಂದಾಗ "ಭೀಮಣ್ಣಾ, ನನ್ನ ಗಂಡ ಕುಡೀತಾನೆ. ಆದರೆ ನೀನು ಕುಡುಕ" ಎಂದಿದ್ದೆ. " ಸೀತಾ ಸಹ ಮೊದ ಮೊದಲು ನನ್ನ ಬಗ್ಗೆ ಹೀಗೇ ಹೇಳುತ್ತಿದ್ದಳು" ಎನ್ನುತ್ತಿದ್ದ.

ಕನ್ಯೆಯಾಗಿ ದೇಸಾಯಿ ಮನೆತನ, ಅವರ ಮನೆ ನೋಡಲು ನಾನು ಹೈಯಣ್ಣ ಹೋಗಿದ್ದಾಗ, ಕುಸುಮಾಮನ ರೂಂ ಎಂದು ತೋರಿಸಿದರು. ಅಲ್ಲಿ ಖಾಲಿ ಬ್ರಾಂದಿ ಬಾಟ್ಲಿ ನೋಡಿದ್ದೆ. ನಾನು ಕುಸುಮಾಮನ್ನ ಮನಸಾರೆ ಒಪ್ಪಿದ್ದೇನೊ ಇಲ್ಲವೋ ತಿಳಿದುಕೊಳ್ಳಲು ಕಲ್ಬುರ್ಗಿಯ ಗಾಜಿಪುರದ ಹನುಮಾನ್ ದೇವಸ್ಥಾನದ ಬಳಿ ಕಟ್ಟೆಯಲ್ಲಿ ಹೈಯಣ್ಣನ ಜೊತೆ ಕುಳಿತು ಚರ್ಚಿಸುವಾಗ ನಾನು ಬಾಟ್ಲಿ ಬಗ್ಗೆ ಹೈಯಣ್ಣಗೆ ಹೇಳಿದ್ದೆ. "ಛೀ ಹುಚ್ಚೀ, ಆ ಹುಡುಗನ ವಿನಯ ಸಂಸ್ಕಾರ ನೋಡಿದರೆ ನನಗನಿಸೂದಿಲ್ಲ" ಎಂದಿದ್ದ. "ಮಿತಿ ಇದ್ದರೆ ಪರವಾಯಿಲ್ಲವಲ್ಲ" ಎಂದಿದ್ದೆ. ಲಗ್ನಕ್ಕಿಂತ ಮೊದಲು ಕುಸುಮಾಮ ಹರಪನಹಳ್ಳಿಗೆ ಬಂದು ನನ್ನ ಏಕಾಂತದಲ್ಲಿ ಕರೆದು "ನಾನು ಅಸ್ತಮಾ ಪೇಷಂಟ್. ಯಾವಾಗಲೂ ಗೋಲ್ಕಂಡ ಬ್ರಾಂಡಿ ಮನೆಯಲ್ಲಿರುತ್ತದೆ. ನೀನು ಬಂದಾಗ ಅದು ಕಾಣದಿರಲಿ ಎಂದು ನನ್ನ ತಂಗಿ ಮುಚ್ಚಿಡಲು ಹೋದಾಗ ನಾನೇ ಮುಚ್ಚುಮರೆ ಬೇಡ ಎಂದು ನನ್ನ ರೂಂನಲ್ಲಿ ಇಟ್ಟಿದ್ದೆ. ನಾನು drinks ತಗೋತೀನಿ. ಆದ್ರ ಬಹಳ ಅಪರೂಪ" ಎಂದಿದ್ದರು.

ಹಣದ ಬಗ್ಗೆ ನಿಷ್ಕಾಳಜಿ-ದುಂದುವೆಚ್ಚ: ಕುಸುಮಾಮನ ದುಂದುವೆಚ್ಚ, unplanning ಎಂದೆಲ್ಲ ಅವರ ಅವಗುಣಗಳನ್ನು, ಅವರ ಎದುರು ಹೇಳಲಿಕ್ಕಾಗದವರು ನನ್ನ ಎದುರು ಬೈಯುತ್ತಿದ್ದರು. "ಅವನದು uncompromising nature. ಮೂರ್ಖತನದಿಂದ ಹಣ ಕಳೆಯುತ್ತಾನೆ. He is unfit for today's politics. ವಕಾಲತ್‌ನಲ್ಲೂ ಫೀಸು ಬಹಳ ಕಡಿಮೆ ತಗೋತಾನೆ, ವಕಾಲತ್‌ನಲ್ಲಿ ಗಳಿಸಿದ್ದನ್ನು ಪಾಲಿಟಿಕ್ಸ್‌ಗೆ ಖರ್ಚು ಮಾಡುತ್ತಾನೆ. Status mantain ಮಾಡುವುದಿಲ್ಲ. ಚಪರಾಸಿಗಳನ್ನು ತನ್ನ ಜೊತೆಗೇ ಕೂಡಿಸಿಕೊಂಡು ಚಹ ಕುಡೀತಾನೆ.... ಬೇಡಿದವರಿಗೆ ನಾವು ಹತ್ತು ರೂಪಾಯಿ ಕೊಟ್ಟರೆ ಇಂವ ನೂರು ರೂಪಾಯಿ ಕೊಡ್ತಾನೆ.... ಇಂವ ಶ್ರೀಮಂತನೇ........ ಕಿಸೆಯಲ್ಲಿ ರೊಕ್ಕ ಇರದಿದ್ದರೂ ಸೊಕ್ಕೇ ಬಹಳ. ಉದ್ರಿ ಸಾಲ ಮಾಡಿಯಾದರೂ ಭಾರಿ ಬೆಲೆಯ ಖಾದಿ ಬಟ್ಟೆ, ಗರಿ ಮುರಿಯಾದ ಇಸ್ತ್ರಿ ಬಟ್ಟೆ ಹಾಕ್ತಾನೆ. ಶೌಕೀನ್ ಇದ್ದಾನೆ. ಹೆಂಡ್ತಿ ಅಂತ ನಿಮಗೆ ಹಣ security ಮಾಡ್ತ್ಯಾನೇನು? ನಾನು ಅಪ್ರಮಾಣಿಕನಲ್ಲ ಎಂಬ ಗರ್ವ, ಸ್ವಾಭಿಮಾನ, ಸೊಕ್ಕು ಅವನಲ್ಲಿದೆ" ಇತ್ಯಾದಿ ಇತ್ಯಾದಿ.

ನೀವು ಹೇಳುವುದೆಲ್ಲ ನಾನು ಒಪ್ಪಿಕೊಳ್ಳುತ್ತೇನೆ. ಅದೆಲ್ಲ ಆಪಾದನೆಗಳಿಗೆ ನನ್ನಲ್ಲಿ ಸಕಾರಣ ಉತ್ತರಗಳಿವೆ ಎನ್ನುತ್ತಿದ್ದೆ. "ಅವರಿಗೆಲ್ಲ ಹೀಗೆ ಹೇಳಿದೆ" ಎಂದು ತಿಳಿದಾಗ ಕುಸುಮಾಮ "Wonderful. ನನ್ನನ್ನು ಅರ್ಥಮಾಡಿಕೊಂಡ ಕೆಲವೇ ಮಂದಿಯಲ್ಲಿ ನೀನೂ ಇದ್ದೀದಿ ಎಂಬುದೇ ನನಗೆ ದೊಡ್ಡ ಸಮಾಧಾನ. You are not only my wife, you are my life" ಎಂದು ಸಂತೃಪ್ತಿಭಾವ ತಾಳುತ್ತಿದ್ದರು.

ಆದರೆ ಅವರ ಈ ಸ್ವಭಾವದಿಂದ ನಾನು ಒಳಗೊಳಗೇ ಬಾಧೆ ಪಡುತ್ತಿರಲಿಲ್ಲವೇ? ಆ ಕಥೆಯೇ ಬೇರೆ.

ಯಾರಿಗೂ ಮೋಸ ಮಾಡಬಾರದು, ಸುಳ್ಳು ಹೇಳಬಾರದು ಎಂಬುದನ್ನು ಪಾಲಿಸುತ್ತಿದ್ದವರು ಬೇರೆಯವರ ಮೋಸಕ್ಕೆ ಬಲಿಯಾಗುತ್ತಿದ್ದರು. ವಕೀಲಿಯ ವಿಚಕ್ಷಕ ಬುದ್ಧಿ ಸದಾ ಜಾಗೃತವಿದ್ದರೂ, ಅದೇ ವೇಳೆಗೆ ಒಬ್ಬ ಮನುಷ್ಯ "ಗಾಡಿ ಖರ್ಚಿಗೆ ಹಣವಿಲ್ಲ. ಜೇಬು ಕತ್ತರಿಸಿದ್ದಾರೆ. ನೂರು ರೂಪಾಯಿ ಕೊಡಿರಿ" ಎಂದು ಬೇಡಿದಾಗ ಸುಲಭವಾಗಿ ಕೊಟ್ಟು ಬಿಡುತ್ತೀರಲ್ಲ ಎಂದು ಬೇರೆಯವರು ಕೇಳಿದಾಗ- ನಕ್ಕು ಬಿಟ್ಟು "ನೂರು ರೂಪಾಯಿ ಮೋಸ ಹೋದರೆ ದೊಡ್ಡದಲ್ಲ- ಆ ಮನುಷ್ಯನಿಗೆ ಆ ನೂರು ರೂಪಾಯಿ ಅವಶ್ಯವಿದ್ದಲ್ಲಿ ನಾನು ಕೊಡದಿದ್ದಲ್ಲಿ ನನಗೇ ನೋವಾಗುತ್ತಿತ್ತಲ್ಲ" ಎನ್ನುತ್ತಿದ್ದರು.

ಇಂಜಿನಿಯರ್, ಎಂ.ಎ.,ಎಂ.ಎಸ್.ಸಿ. ಓದುತ್ತಿರುವ ವಿದ್ಯಾರ್ಥಿಗಳ ಫೀಸಿಗೆ ಹಣ ಕೇಳಿದಾಗ ಕುಸುಮಾಮ ತಮ್ಮಲ್ಲಿದ್ದ ಎಲ್ಲ ಹಣ ಕೊಟ್ಟು ಬಿಡುತ್ತಿದ್ದರು. "ಏ ದಾನಶೂರ ಕರ್ಣ.... ಎಲ್ಲ ಹಣಕೊಟ್ಟೆ.... ಮನೆಯಲ್ಲಿ ಎಣ್ಣೆ ಇಲ್ಲ" ಎಂದು ನಾನೆಂದರೆ- "ಕುಸುಮಾಮಿ, ಎಣ್ಣೆ ತಿಂದರೆ ದಪ್ಪ ಆಗುತ್ತಿ.... ಸೌಟು ಕಾಯಿಸಿ ಸಾರಿನಲ್ಲಿ ಅದ್ದು, ಚುಂಯಿ ಅನ್ನುತ್ತದೆ. ಅದೇ ಒಗ್ಗರಣೆ ಆಯಿತಾ"? ಎನ್ನುತ್ತಿದ್ದರು. ಸ್ವಲ್ಪ ಸಾಮಾನು ತರಿಸುವುದು, ತಂದು ಕೊಡಲಿಕ್ಕೆ ಗಂಡು ಹುಡುಗರನ್ನು ಗೋಗರಿಯುವುದು ನನಗೆ ತಲೆ ಬೇಸರದ ಕೆಲಸವಾಗಿತ್ತು. ನೆಗೆಣ್ಣಿಯರು, ಊರಿಂದ ಬಂದವರು "ತಿಂಗಳ ಸಾಮಾನು ತರಿಸಿಟ್ಟುಕೊಳ್ಳಬಾರದೇ" ಎನ್ನುತ್ತಿದ್ದಾಗ ಇಂತಹ ಸಂಸಾರ ಭಾರ... ನಾನೇ ಜಿಪುಣೆ ಏನೋ ಎಂಬಂತೆ ಅವರ ತಪ್ಪು ಕಲ್ಪನೆ.... ಉಪದೇಶ. ನನಗೆ ನೋವಾಗುತ್ತಿತ್ತು. ಅಂತಹ ಸಮಯದಲ್ಲಿ ನನ್ನ ಹೊಟ್ಟೆಯ ಸಂಕಟ ಯಾರಲ್ಲಿ ಹೇಳಿಕೊಳ್ಳಲಿ? ತವರಿನವರಲ್ಲಿ ಇವರು ಬಹಳ ದೊಡ್ಡ ಶ್ರೀಮಂತರೆಂಬ ಭಾವನೆ. ಇವರ ದೊಡ್ಡಸ್ತಿಕೆ ಕಂಡು ಆಗರ್ಭ ಶ್ರೀಮಂತರೆಂಬ ಭಾವನೆ. ಅಲ್ಲಿ ಬಾಯಿ ಬಿಚ್ಚುತ್ತಿರಲಿಲ್ಲ.

ಕಲಬುರ್ಗಿಯಲ್ಲಿ ಪ್ರಸಿದ್ಧ ವಕೀಲರಾಗಿದ್ದ ಎಸ್.ಆರ್. ಜಾಗೀರ್ದಾರ್ ವಕೀಲರಲ್ಲಿ ಕುಸುಮಾಮ ಕೇಸುಗಳನ್ನು ಚರ್ಚಿಸಲು ಹೋಗುವಾಗ ನನ್ನನ್ನು ಕರೆದೊಯ್ಯುತ್ತಿದ್ದರು. ಹಾಗೇ ಕುಸುಮಾಮನ ಮಿತ್ರ ಆರ್. ಜೆ. ದೇಸಾಯಿ ದಂಪತಿಗಳಲ್ಲಿಗೆ ಹೋಗುತ್ತಿದ್ದೆವು. ಜಾಗೀರ್ದಾರ್

ವೈನಿ ಹಾಗೂ ಆರ್.ಜೆ.ಮಿಸಸ್ ವಿಜಯಾ ದೇಸಾಯಿಯವರಲ್ಲಿ ನನಗೆ ಆತ್ಮೀಯತೆ, ಸಲಿಗೆ ಇತ್ತು. ನನ್ನ ತಳಮಳ ಹೇಳಿಕೊಳ್ಳುತ್ತಿದ್ದೆ. ವೈನಿ-ಜಾಗೀರದಾರ್ ಇವರನ್ನು ಸಲಿಗೆಯಿಂದ ಅಳಿಯನೆಂದು, ನಾನು ತಮ್ಮ ಮಗಳೆಂದೂ ಕರೆಯುತ್ತಿದ್ದರು. ಪ್ರಸಂಗ ಬಂದಾಗ ಇವರಿಗೆ ಬುದ್ಧಿ ಹೇಳುತ್ತೇನೆಂದು, "ಅವನು ಹೇಳಿದ್ದಕ್ಕೆಲ್ಲಾ ತಾಳ ಹಾಕೇದಿ. ಅವನನ್ನು ತಿದ್ದುವುದು ನಿನ್ನ ಕೈಯಲ್ಲೇ ಇದೆ" ಎಂದು ಬೈಯುತ್ತಿದ್ದರು.

ನಾನೇಕೆ ಅವರ ಈ ದುಂದುವೆಚ್ಚ, ಹಣದ ನಿಷ್ಕಾಳಜಿ ಬಗ್ಗೆ ತಿದ್ದಲಿಕ್ಕೆ ಪ್ರಯತ್ನಿಸಲಿಲ್ಲ? ಎದುರು ಮಾತಾಡುತ್ತಿರಲಿಲ್ಲ? ಅದಕ್ಕೆ ಬಲವಾದ ಕಾರಣವಿದೆ.

ನಾನಿನ್ನೂ ಕುಮಾರಿ ಸರಸ್ವತಿ ರಾಯಸಂ ಆಗಿದ್ದೆ. ಅಂದರೆ ನಮ್ಮ ಮದುವೆಗಿಂತ ಮೊದಲು ಕುಸುಮಾಮ ನಮ್ಮ ಪರಸ್ಪರ ಒಪ್ಪಿಗೆಯಾದ ನಂತರ ಹರಪನಹಳ್ಳಿಗೆ ಬಂದು ನನ್ನೊಡನೆ ಏಕಾಂತದಲ್ಲಿ ಮಾತನಾಡಲು ಬಯಸಿದಾಗ ಹಿರಿಯರಿಗೆ ಕೊಂಚ ಆತಂಕ. ನಾನು ಬೆಂಗಳೂರಿನ ಮಹಾರಾಣೀಸ್ ಕಾಲೇಜ್‌ನಲ್ಲಿ ಇಂಟರ್‌ಮೀಡಿಯೇಟ್ ಓದಿ ಬಂದಿದ್ದೆ. ಭಾವಿ ಜೀವನ, ಗಂಡ, ಅತ್ತೆ ಮನೆ, ಬಗ್ಗೆ ನನ್ನದೇ ಆದ ಕಲ್ಪನೆಗಳಿದ್ದವು. ನಾನು ಒಪ್ಪಿದೆ. ಕುಸುಮಾಮಾ ಕರೆದು ತುಂಬಾ ಅಪ್ಯಾಯತೆಯಿಂದ ಮಾತನಾಡುತ್ತ "ನೋಡ್ರಿ, ನಮ್ಮ ಲಗ್ನ ಹಿರಿಯರು ನಿಶ್ಚಯಿಸಿದ್ದಾರೆ. ಆದರೆ ಇನ್ನೂ ಕಾಲ ಮಿಂಚಿಲ್ಲ. ನನ್ನಲ್ಲಿಯ ಕೆಲವು ದೋಷ, ದುರ್ಗುಣ ಹೇಳಿ ಬಿಡುತ್ತೇನೆ. ತಾವು ಅವೆಲ್ಲ ಸ್ವೀಕೃತವೆನಿಸಿದರೆ, ನೀವು ಸಂಪೂರ್ಣ ಒಪ್ಪಿದರೆ ಮಾತ್ರ....."

"ಏನು..... ಹೇಳಿ..."ಎಂದೆ ಧೈರ್ಯದಿಂದ.

"ನಾವೇನೂ ಶ್ರೀಮಂತರಲ್ಲ. ನಮ್ಮಪ್ಪ ಶ್ರೀಮಂತನಲ್ಲ... ಆದರೂ ಯಾವ ಶ್ರೀಮಂತನಲ್ಲೂ ಇಲ್ಲದ ಹಣದ ಧೋರಣೆಗಳಿವೆ. ಹಣದ ಬಗ್ಗೆ ನಿಷ್ಕಾಳಜಿ, ಒಂದು ತರಹದ ಸೊಕ್ಕು ನನ್ನಲ್ಲಿ ಗುರುತಿಸಬಹುದು. ಮತ್ತೊಂದು ಮಾತು. ನಮ್ಮದು ಏಕತ್ರ ಕುಟುಂಬ. ಒಬ್ಬೊಬ್ಬರದು ಒಂದೊಂದು ಸ್ವಭಾವ. ಮುಖ್ಯವಾಗಿ ನಮ್ಮ ತಂದೆ ಹಾಗೂ ನನ್ನ ಸಣ್ಣ ತಂಗಿನ್ನ ಸರಿಯಾಗಿ ನೋಡಿಕೊಂಡು, ಅವರ ಪ್ರೀತಿ ಗಳಿಸಿದರೆ ಸಾಕು" ಎಂದಾಗ

"ನಿಮ್ಮ ಪ್ರೀತಿ ಗಳಿಸಬೇಕಾದರ"? ಎಂದೆ.

"ತುಂಟೀ"..... ಎಂದಷ್ಟೇ ನಕ್ಕು "ನಿಮ್ಮ ಒಪ್ಪಿಗೆ ಇದ್ದರೆ ಸರಿ, ಇಲ್ಲದಿದ್ದಲ್ಲಿ ಈಗಲೂ ಒಲ್ಲೆ" ಎನ್ನಬಹುದು ಎಂದರು. ಈ ಮನುಷ್ಯ ಎಷ್ಟು ಪ್ರಾಮಾಣಿಕ ಎನಿಸಿ ಅವರ ಕೈಗಳನ್ನು ಹಿಡಿದು ಕಣ್ಣಿಗೊತ್ತಿಕೊಂಡು ನನ್ನ ಸಂಪೂರ್ಣ ಒಪ್ಪಿಗೆ ಇದೆ ಎಂದೆ. ಕುಸುಮಾಮನ ಮುಖ ಅರಳಿತ್ತು. ಈ ಮೂರು ಹೆಸರುಗಳಲ್ಲಿ ನಿಮಗೆ ಯಾವುದನ್ನು ಆರಿಸಲಿ ಎಂದು "ಅರುಂಧತಿ" "ಪೂರ್ಣಿಮಾ" - "ಸರಿತಾ" ಎಂದಾಗ "ಸರಿತಾ ಇರಲಿ" ಎಂದೆ. ಮೇಲಿನ ವಾಗ್ದಾನದಂತೆ ನಾನು ಸರಸಾಳಿಂದ ಸರಿತಾ ಆಗಿದ್ದು ಅವರ ಹಣದ ದುಂದುವೆಚ್ಚವನ್ನು ಸಹಿಸಲೇ ಬೇಕಾಗಿತ್ತು.

ಕುಸುಮಣ್ಣ ಕಟ್ಟು ಕಟ್ಟು ನೋಟು ತಂದು ಇಡುತ್ತಾನೆ. ಈಕಿನೇ ಜಿಪುಣೆ ಎಂದು ತಿಳಿಯುವಂತಾಯಿತು. ಸಾಲ ಮಾಡುವುದು, ಅಸಲು ತೀರಿಸುವ ಅವಸರವೇ ಇಲ್ಲದೇ ಬಡ್ಡಿ ಕಟ್ಟುವುದು ಸಾಗಿತ್ತು. ಮನೆ ಖರ್ಚು, ಹಣ ಬಂದಿದ್ದು- ಹೋಗಿದ್ದು ಲೆಕ್ಕವಿಡುವುದು ಅವರಿಗೆ ಸೇರುತ್ತಿರಲಿಲ್ಲ. ಅವರದೆಲ್ಲ ಠೋಕ ಲೆಕ್ಕ. ಇಂತಿಷ್ಟು ಬಂತು, ಇಂತಿಷ್ಟು ಹೋಯಿತು. ಯಾವ ಬಾಬ್ತಿಗೆ ಎಷ್ಟು ಗೊತ್ತಾಗುತ್ತಿರಲಿಲ್ಲ. ಇನ್‌ಕಮ್ ಟ್ಯಾಕ್ಸ್ ಕಟ್ಟಿಲ್ಲವೆಂಬ ನೋಟೀಸ್ ಬಂದಾಗ ನಾನು ತಾರೀಕು ಮತ್ತು ಯಾವ ಬ್ಯಾಂಕಿನ ಚೆಕ್ ನಂಬರ್ ಕೊಡಲಾಗಿದೆ ಎಂಬುದನ್ನು ನನ್ನ ದಿನಚರಿಯಿಂದ ಓದಿ ತೋರಿಸಿ, Income tax ನವರಿಗೆ ತಿಳಿಸಿದಾಗ ಆ ಕ್ಷಣಕ್ಕೆ ನನ್ನ ಬಗ್ಗೆ ಹೆಮ್ಮೆ ಎನಿಸಿದ್ದರೂ, “ಈ ನಿನ್ನ ಮಾರ್ವಾಡಿ ಲೆಕ್ಕ ಬರೆಯುವುದು ನನಗೆ ಸೇರುವುದಿಲ್ಲ” ಎನ್ನುತ್ತಿದ್ದರು.

ಒಮ್ಮೆ ಮಿತ್ರನೊಬ್ಬ ಏನೂ ಅರಿಯದ ಅಮಾಯಕ, ಏನೂ ಅರಿಯದ ತನ್ನ ಪತ್ನಿಗೆ ತನ್ನ ಹಣಕಾಸಿನ ವ್ಯವಹಾರ ತಿಳಿಸದೇ, ಡೈರಿಯಲ್ಲೂ ನಮೂದಿಸದೇ, ಮಿತ್ರರಿಗೂ ಹೇಳದೇ ಇದ್ದಕ್ಕಿದ್ದಂತೆ ಹಾರ್ಟಫೇಯಿಲ್ ಆಗಿ ತೀರಿಕೊಂಡಾಗ ಸಾಲಗಾರರು ಆತನ ಪತ್ನಿಗೆ ಕೊಟ್ಟ ಕಿರುಕುಳ ತಿಳಿದುಕೊಂಡ ಕುಸುಮಾಮ ಅಂದಿನಿಂದ ನನಗೆ, ತಾನು ಸಾಲ ಪಡೆದಾಗ ಯಾರಿಂದ ಎಷ್ಟು ಎಂಬುದನ್ನು ತಿಳಿಸತೊಡಗಿದರು. ಸಾಲ ತಂದು ದುಂದು ವೆಚ್ಚ ಮಾಡುವ ಅಗತ್ಯವಿತ್ತೆ ಎನಿಸಿದರೂ ನನ್ನ ಬಾಯಿ ಕಟ್ಟಿತ್ತು. ಮೊದಲೇ ವಚನ ಕೊಟ್ಟಿದ್ದೆ! “ಊಪರ್ ಶೇರ್‌ವಾನಿ ಅಂದರ್ ಪರೇಶಾನಿ” ಎನಿಸುತ್ತಿತ್ತು!

ಮುಂದೆ ನನ್ನನ್ನು ವಕೀಲಳನ್ನಾಗಿ ಮಾಡಿದ ಮೇಲೆ ಗಳಿಸಿ, ಅವರು ಮಾಡಿದ ಸಾಲ ತೀರಿಸಿ ಋಣಮುಕ್ತರನ್ನಾಗಿ ಮಾಡಿದ ಮೇಲೆ ಕುಸುಮಾಮಗೆ ನನ್ನ ಮೇಲೆ ಅತ್ಯಂತ ಅಭಿಮಾನ ಮೂಡಿತ್ತು.

****

ಕುಸುಮಾಮನಲ್ಲಿ ಬರೀ ಅವಗುಣಗಳೇ ಇದ್ದುವೆ?

ಛೆ.....ಛೆ... ಅವರು ಅಂತಃಕರಣದ, ಮಾನವೀಯ ಗುಣಗಳ ಖಣಿಯಾಗಿದ್ದರು. ಆದರೆ ಅವರು ಅಪಾರ್ಥಕ್ಕೆ ಕಾರಣರಾಗಿದ್ದು ಅವರಲ್ಲಿ ಇತರರು ಕಂಡ ಲೋಪ- ದೋಷಗಳು, ಜನ ಸಾಮಾನ್ಯರಿಗಿಂತ ಅವರು ಭಿನ್ನವಾಗಿದ್ದುದು ಅದಕ್ಕೆ ಕಾರಣಗಳು.

ಇದರ ಹಿನ್ನೆಲೆ ತಿಳಿಸುವುದು ನನ್ನ ಕರ್ತವ್ಯವೆಂದು ತಿಳಿದು, ಮೊದಲು ಅವರ ಅವಗುಣಗಳ ಬಗ್ಗೆ ಜನರಾಡಿಕೊಳ್ಳುತ್ತಿದ್ದುದನ್ನು ತಿಳಿಸಲಿಚ್ಛಿಸುವೆ. ಅವರ ಸಮಗ್ರ ವ್ಯಕ್ತಿತ್ವ ಚಿತ್ರಿಸುವುದು ಕಷ್ಟದ ಕಾರ್ಯ. ಒಟ್ಟಿನಲ್ಲಿ ಅವರ ಸುಗುಣಗಳನ್ನೂ ಪ್ರೀತಿಸಿದೆ. ಅವರ ಅವಗುಣಗಳನ್ನೂ ಪ್ರೀತಿಸಿದೆ.

ಕುಸುಮಾಮ ಎಲ್ಲರೂ ತಿಳಿದಂತೆ ನನಗೆ ತಾಳಿಕಟ್ಟಿದ ಗಂಡ. ಆದರೆ ನನ್ನ ಪಾಲಿಗೆ ಕೇವಲ

ಅವರು ಗಂಡ ಮಾತ್ರ ಆಗಿರದೇ ಒಬ್ಬ ಸಖ, ಸ್ನೇಹಿತ, ಹಿತೈಷಿ, ಮಾರ್ಗದರ್ಶಕ, ಗುರು ಎಲ್ಲ ಆಗಿದ್ದರು. ಸರ್ವಸ್ವವಾಗಿದ್ದರು. ಅದ್ದರಿಂದಲೋ ಏನೋ ಅನೇಕರು ನಮ್ಮದು ಅನ್ಯೋನ್ಯ ದಾಂಪತ್ಯ ಎಂದು ಕರೆದರು!

ಕುಸುಮಾಮನ ಅವಗುಣಗಳು

ನನ್ನೊಡನೆ ಅವರ ಲಗ್ನವಾದ ಹೊಸದರಲ್ಲಿ "ಕುಸುಮಣ್ಣನ ಸಿಟ್ಟು ನಿಮಗೆ ಗೊತ್ತಿಲ್ಲ. ನರಸಿಂಹ ಅವತಾರ ತಾಳಿಬಿಡ್ತಾನೆ" ಎಂದು ತಂಗಿಯರು ಹೇಳಿದರೆ, "ಸುಮ್ಮಿ, ಕೈ ಹಿಡಿದ ಗಂಡನಿಗೆ ಅಂಜಿಲ್ಲ, ಮಾವನವರ ಅಂಜಿಕೆಯಿಲ್ಲ... ಆದರೆ ಈತನಿಗೇ ಅಂಜಿ ನಡೀಬೇಕಾಗಿದೆ" ಎಂದು ಅತ್ತಿಗೆಯರ ಪ್ರಲಾಪ. ಇಷ್ಟು ಸಹೃದಯಿ, ಇಷ್ಟು ಅಂತಃಕರಣಿ, ಇಷ್ಟು ನಗುನಗುತ್ತ ಇರುವ ಇವರಿಗೆ ಹೀಗೆ ಹೇಳ್ತಾರಲ್ಲ ಎನಿಸಿತ್ತು. ಆದರೆ ಅವರ ಮುಂಗೋಪಿತನ, ಅಕಾರಣ ಸಿಟ್ಟು- ಸೆಡವು ನನ್ನ ಅನುಭವಕ್ಕೆ ಬರಲು ತಡವಾಗಲಿಲ್ಲ. ತಂದೆ, ಅಣ್ಣಂದಿರು- ಅಕ್ಕಂದಿರಿಗೆ ಅತ್ಯಂತ ವಿಧೇಯರಾಗಿರುತ್ತಿದ್ದ ಅವರು ಚಿಕ್ಕವರು ತಮಗೆ ಹೆದರುವಂತೆ ನಡೆದುಕೊಳ್ಳುತ್ತಿದ್ದರು.

ಲಗ್ನವಾದ ಹೊಸದರಲ್ಲಿ ರಿಟೈಯರ್ ಜಡ್ಜ್ ಅಶ್ವತ್ಥರಾವ್ ಮನೆಗೆ ನನ್ನ ಕರೆದೊಯ್ದು ಪರಿಚಯಿಸಿದಾಗ ನಾನು, ಅವರ ಕಾಲಿಗೆ ಬಗ್ಗಿ ನಮಸ್ಕರಿಸಿದಾಗ "ಇಲ್ಲಿ ಬಾಮ್ಮ ಕೂತುಕೋ" ಎಂದು ಆ ಹಿರಿಯರು ತಮ್ಮ ಪಕ್ಕಕ್ಕೇ ಕೂಡಿಸಿಕೊಂಡು, ಬಳ್ಳಾರಿಯಲ್ಲಿ ತಾವು ಕೆಲಸ ಮಾಡಿದ್ದು, ಹರಪನಹಳ್ಳಿಯ ದೇವಸ್ಥಾನಗಳು, ಅಲ್ಲಿಯ ಜನರ ಜೀವನ ಸಂಸ್ಕೃತಿ ಬಗ್ಗೆ ಮನಬಿಚ್ಚಿ ಮಾತನಾಡಿದ್ದು ಆತ್ಮೀಯವೆನಿಸಿ ನಾನೂ ನಿಸ್ಸಂಕೋಚತನದಿಂದ ಅವರೊಡನೆ ಮಾತನಾಡಿ ಅವರ ಹೆಂಡತಿ ಮಕ್ಕಳಿಗೆಲ್ಲ ಮಾತನಾಡಿಸಿ ಬಂದೆ. ಹೊರಟು ಬರುವಾಗ ದಾರಿಯಲ್ಲಿ ಕುಸುಮಾಮ ನನ್ನೊಡನೆ ಮಾತನಾಡದೇ ನನ್ನ ಕೆಂಗಣ್ಣಿನಿಂದ ನೋಡುತ್ತಿದ್ದುದ್ದು ಯಾಕೆ ಎಂದು ತಿಳಿಯದೇ ಗಲಿಬಿಲಿಗೊಂಡೆ. ನಂತರ ಸಿಟ್ಟಿನ ಪಟಾಕಿ ಸರ ಬಿಚ್ಚಿಹೋಗಿತ್ತು.- "ಅಶ್ವತ್ಥರಾಯರು ಯಾರಂತ ತಿಳಿದೀದಿ? ಅವರ ಜೊತೆ ಕುಂಟಪಿಲ್ಲೆ ಆಡಿದ್ಯಾ, ಬುಗುರಿ ಆಡಿದ್ಯಾ? ಅಂಥ ಹಿರಿಯರ ಜೊತೆಗೆ ನೀನು ಮಾತನಾಡಿದ್ದು? ಹರಪನಹಳ್ಳಿ ಎಂದ ಕೂಡ್ಲೇ ಸಾಕು... ಬಿಚ್ಚಿದಿ ಪುರಾಣ. ಸ್ವಲ್ಪರS ಗಾಂಭೀರ್ಯ ಬೇಡವೆ? ನನಗೆ ಅವರ ಜೊತೆ ಮಾತನಾಡಲು ಬಿಟ್ಟೆಯಾ? ದೇವರು ಬಾಯಿ ಕೊಟ್ಟಾನೆ ಅಂತ... ಮಾತನಾಡುವುದೇ...? Authentic ಆಗಿ ವಿಷಯ ಗೊತ್ತಿದ್ದರೆ ಬಾಯಿ ಬಿಚ್ಚು, ಬುರುಡಿ ಬಿಚ್ಚಬೇಡ. ಇನ್ನೂ ನೀನು ಭಾಳ ಓದಬೇಕು. ಅರಗಿಸಿಕೊಳ್ಳಬೇಕು. ನನ್ನ ಹೆಂಡ್ತಿಯಾಗಿ ನನಗೆ ಅವಮಾನ ಪ್ರಸಂಗ ತರಬೇಡ" ಎಂದವರೇ ಭರ ಭರ ಹೆಜ್ಜೆ ಹಾಕಿ ನನ್ನ ಹಿಂದಿರುಗಿ ನೋಡದೇ ಹೊರಟು ಬಿಟ್ಟರು.

ಮನೆಗೆ ಬಂದು ತಪ್ಪಾಯಿತೆಂದು ಕಾಲು ಹಿಡಿದೆ.

ಲಗ್ನವಾಗಿ ಒಂದು ತಿಂಗಳಾಗಿರಲಿಲ್ಲ. ದೊಡ್ಡತ್ತಿಗೆ, ಸಣ್ಣ ಅತ್ತಿಗೆ ಮುಂತಾದ ಹಿರಿಯರೆಲ್ಲ

ಊರಿಗೆ ಹೋಗಿ ಬಿಟ್ಟರು. ಬೆಳಿಗ್ಗೆ ಅಡಿಗೆಗೆ ತಿಪ್ಪವ್ವ ಇದ್ದರು. ಸಂಜೆಗೆ ಅವರ ಕಿರಿ ತಂಗಿ ಅಡಿಗೆ ಮನೆ ನೋಡಿಕೊಳ್ಳುತ್ತಿದ್ದಳು. ನಾನೂ ಸಹಾಯ ಮಾಡುತ್ತಿದ್ದೆ. ತಮ್ಮ ಮಿತ್ರರು ೩-೪ ಜನ ಊಟಕ್ಕೆ ಸಾಯಂಕಾಲ ಬರಲಿದ್ದಾರೆಂದು, ಅವರು ರಾತ್ರಿ ೮ ಗಂಟೆಗೆ ಮುಂಬೈಗೆ ಹೋಗಲಿದ್ದಾರೆಂದೂ, ೭ ಗಂಟೆಗೆ ಊಟ ರೆಡಿ ಇರಬೇಕೆಂದು ಕುಸುಮಾಮ ನನಗೆ ಹೇಳಿದ್ದರು. ಆ ಪ್ರಕಾರ ಅಡಿಗೆ ಅಭ್ಯಾಸವಿಲ್ಲದ ನಾನು ಏನೆಲ್ಲ ಅಡಿಗೆ ಸಿದ್ಧಗೊಳಿಸಿದೆ. ೭ ಗಂಟೆಗೆ ಅತಿಥಿಗಳಿಗೆ ಊಟಕ್ಕೆ ಬಡಿಸುತ್ತಿದ್ದೆ. ಡಾಕ್ಟರ್ ದೇವುಳ್ ಗಾಂವ್‌ಕರ್ ನನಗೆ ಲಗ್ನಕ್ಕಿಂತ ಮೊದಲೇ ಪರಿಚಿತರು. ಅವರೂ ಊಟಕ್ಕೆ ಬಂದಿದ್ದರು. ಅವರು ಉಣ್ಣುವುದು ಎಂತಹ ಸ್ಪೀಡ್ ಎಂದರೆ ಬಡಿಸುವುದು ನನ್ನಿಂದ ತಡವಾಗುತ್ತಿತ್ತು. ಅಷ್ಟರಲ್ಲಿ ಬಡಿಸುವಾಗ ನೋಡ್ತೀನಿ, ಒಳಗೆ ಮಕ್ಕಳಿಗೆ ಗುಣಿ (ಇವರ ಅಣ್ಣನ ಮಗಳು) ಬಡಿಸಿಬಿಟ್ಟಿದ್ದುಳು, ಅನ್ನ ಇನ್ನೊಂದು ಗುಂಡಿ ಆಗಬೇಕಿದೆ, ಎದೆ ಒಡೆದು ಗಾಬರಿಯಾದೆ, ಬಂದ ಅತಿಥಿಗಳಿಗೆ ಅನ್ನ ಕಡಿಮೆ ಆದರೆ? ಗುಣಿಗೆ ಹೀಗೇಕೆ ಅವಸರ ಪಟ್ಟೆ ಎಂದು ಕೇಳಲೂ ಸಂಕೋಚ. ಬೆಳಗ್ಗಿನ ಅನ್ನದಲ್ಲಿ ಸ್ವಲ್ಪ ಬಿಸಿ ಅನ್ನ ಬೆರೆಸಿ ತಂದು ಹಾಕಿದೆ. ಕುಸುಮಾಮಗೆ ಗೊತ್ತಾಯಿತು

ಅವರ ಸಿಟ್ಟು ನೆತ್ತಿಗೇರಿತು. ಕೆಂಗಣ್ಣಿನಿಂದ ನನ್ನ ನೋಡಿದ್ದು ನನ್ನ ಉಸಿರೇ ಉಡುಗಿತು. ಆದರೂ ಅತಿಥಿಗಳೆಲ್ಲರೂ ಅಡಿಗೆ ಸೊಗಸಾಗಿತ್ತೆಂದು ನನ್ನ ಹೊಗಳಿ ಹೋದರು. ಆದರೆ ಕುಸುಮಾಮ? ರಾತ್ರಿ ಪೂರಾ ಬೈಗಳು! ನಾನು ಊಟ ಸಹ ಮಾಡಲಿಲ್ಲ. "ಯಾಕ ಮಾಡಿಲ್ಲ ಮಾಡಿ ಬಾ" ಎಂದು ಅವರು ಹೇಳಲಿಲ್ಲ. ನಾದಿನಿ ಗಾಯಿತ್ರಕ್ಕ "ಭಾಭಿ, ಊಟ ಮಾಡು ಬರ್ರೀ... ಕುಸುಮಣ್ಣನ ಸಿಟ್ಟು ಇನ್ನೂ ಏನು ಕಂಡೀರಿ" ಎಂದಳು.

ಮರುದಿವಸ ನಿನ್ನೆ ಏನೂ ನಡದೇ ಇಲ್ಲ ಎಂಬಂತೆ ಅವರ ವ್ಯವಹಾರ! ಸಮಾಧಾನಗೊಂಡೆ. "ಗುಣಿ ಚಿಕ್ಕ ಹುಡುಗಿ, ನೀನು ಯಜಮಾನಿ. ನಿನ್ನನ್ನು ಕೇಳಿ ಮಾಡಿಟ್ಟ ಅನ್ನ ಮಕ್ಕಳಿಗೆ ಬಡಿಸಬೇಕಿತ್ತು. ಅತಿಥಿಗಳ ಊಟದ ನಂತರ ಬಡಿಸು ಎಂದು ಹೇಳಬಹುದಿತ್ತು. ಅಥವಾ ಇನ್ನೊಂದು ತಪ್ಪೇಲಿ ಅನ್ನ ಆದ ಮೇಲೆ ಮಕ್ಕಳಿಗೆ ಬಡಿಸಬಹುದಿತ್ತು. ಊರಿಗೆ ಹೊರಟ ಅತಿಥಿಗಳಿಗೆ ಅನ್ನ ಕಡಿಮೆ ಬರಬೇಕೆ? ಇದೇ ಏನು ನಿನ್ನ ಯಜಮಾನಿತನ? ಎಲ್ಲರಿಗೂ ಖುಷ್ ಮಾಡುವ ಪ್ರವೃತ್ತಿ ನಿನ್ನದು. ಸ್ವಂತಿಕೆ ಇಲ್ಲ. Slavish mentality''. ಎಂದೆಲ್ಲ ನನ್ನ ಅವಗುಣಗಳನ್ನು ನನ್ನಲ್ಲಿ ಹುಡುಕಿ ಹೇಳುವಾಗ ನಾನು ಮೌನಿ ಆದೆ.

ಇನ್ನು ವಕೀಲಿ ವೃತ್ತಿಯಲ್ಲಿ ಸತತ ನನಗೆ ಸಂಬಾಳಿಸಬೇಕಾಗುತ್ತಿತ್ತು. ಪಕ್ಷಕಾರ (client) ತನ್ನ ಕೇಸು ಪದೇ ಪದೇ ಹೇಳಿದ್ದೇ ಹೇಳಿದರೆ, ಬೇರೆ ವಕೀಲರು ಹೀಗೆ ಅಂತಾರೆ ಎಂದು ಹೇಳಿದ್ದೇ ಆದರೆ ಅವನ ಫೈಲ್ ಬೀಸಿ ಎಸೆದು get-out ಎಂದು ಒಳಗೆ ಬಂದು ಬಿಡುತ್ತಿದ್ದರು. ನಾನು ಅವನಿಗೆ ತಿಳಿಸಿ ಹೇಳಿ ಅವರಲ್ಲಿ ವಿಶ್ವಾಸವಿದ್ದರೆ ಕೇಸು ಕೊಡು, ಬೇರೆ

ವಕೀಲರ ಸುದ್ದಿ ಬೇಡ ಎಂದು ಸಂಬಾಳಿಸುತ್ತಿದ್ದೆ.

ಒಂದು ಬ್ಯಾಂಕಿನ ನೂರಾರು ಕೇಸುಗಳು ಇವರ ಪಾಲಿಗೆ ಬಂದು, ಅನೇಕ ಕ್ಲಿಷ್ಟ ಪ್ರಕರಣಗಳೂ ಇವರ ಜಾಣ್ಮೆಯಿಂದ ಡಿಕ್ರಿ ಆಗಿದ್ದವು. ಒಮ್ಮೆ ಮ್ಯಾನೇಜರ್ ಫೋನ್‌ನಲ್ಲಿ 20 ನಿಮಿಷ ಮಾತನಾಡುತ್ತ ಇವರನ್ನು ಅಲಕ್ಷಿಸಿದಾಗ, ಸಿಟ್ಟಿನಿಂದ ಮನೆಗೆ ಬಂದು ಬಿಟ್ಟರು. ನಂತರ ಅವರು ಫೋನ್ ಮಾಡಿದರೂ ಉತ್ತರಿಸಲಿಲ್ಲ. ಅವರು ಮನೆಗೇ ಬಂದಾಗ 'ಭಾಳ ಕೇಸು ಕೊಟ್ಟು ನನ್ನ ಮೇಲೆ ಉಪಕಾರ ಮಾಡೀನಿ ಅಂದುಕೊಂಡಿರೇನು? ನೀವು ಇನ್ನು ಮುಂದೆ ಬೇರೆ ವಕೀಲನ್ನ ನೋಡಿಕೊಳ್ಳಿ' ಎಂದು ಬಿಟ್ಟರು. ಹೆಡ್ ಆಫೀಸ್‌ಗೂ ಅದರಂತೆ ತಿಳಿಸಿ ಬಿಟ್ಟಾಗ ಹೆಡ್ ಆಫೀಸ್‌ರರು ಬಂದು ಮ್ಯಾನೇಜರ್‌ದು ತಪ್ಪಾಯಿತೆಂದೂ ಅವರನ್ನು ಟ್ರಾನ್ಸಫರ್ ಮಾಡುವುದಾಗಿ ತಿಳಿಸಿದ ಮೇಲೆಯೇ ಕುಸುಮಾಮ ತಣ್ಣಗಾದದ್ದು. ಆ ಬಡಪಾಯಿ ಅಂತಹ ಅಕ್ಷಮ್ಯ ಅಪರಾಧ ಮಾಡಿದ್ದನೆ ಎಂದು ನನಗನಿಸಿತ್ತು.

ಗೋಲ್ಡ್ ಕಾರ್ಡ್ ಕೊಟ್ಟಿದ್ದ ಬ್ಯಾಂಕಿನವರು ಕೊಟ್ಟ ಸಾಲದ ಬಗ್ಗೆ ಪದೇ ಪದೇ ಕೇಳಿದ್ದು ತಪ್ಪೆ? ಒಮ್ಮೆ ಮ್ಯಾನೇಜರ್ ಇವರು ಮತ್ತೆ ಮತ್ತೆ ಸಾಲ ಪಡೆಯುವ ಬಗ್ಗೆ ಹಗುರ ಮಾತಾಡಿದ, ಒಮ್ಮೆ ಶಾಂತವಾಗಿಯೇ ಇವರು ಹೇಳಿದ್ದರು- ನೋಡಿ ನಾನು ಸಾಲ ಪಡೆಯುವುದು ರಂಡೀ ಬಾಜಿ ಮಾಡ್ಲಿಕ್ಕೆ ಅಲ್ಲ, ಇಸ್ಪೀಟು ಜೂಜಿಗಾಗಿ ಅಲ್ಲ, ಪರದೇಶಿ ಹುಡುಗರ್‍ನ ಓದಿಸುತ್ತಿದ್ದೇನೆ.... ಒಬ್ಬ ಹುಡುಗನ ಮೆಡಿಕಲ್ ಸೀಟಿಗಾಗಿ ಸ್ವಲ್ಪ deposit ಇಡಲು ಬೇಕಾಗಿದೆ. ನನ್ನ ಆಸ್ತಿ ಸೆಕ್ಯುರಿಟಿಗೆ ಕೊಡ್ತಿದ್ದೀನಿ ಅಲ್ಲs.

ಸಾಲವೇನೋ ಕೊಟ್ಟು ಅದನ್ನು ಪದೇ ಪದೇ ಕೇಳತೊಡಗಿದಾಗ ಮೂರು ವರ್ಷದೊಳಗೆ Acknowledgement of liability ಬರೆದು ಕೊಡ್ತಿನಿ ಎಂದರೂ ಒಮ್ಮೆ ಮ್ಯಾನೇಜರ್ ಅವಮಾನ ಮಾಡಿದನೆಂದು "ಆ ಬ್ಯಾಂಕಿನಲ್ಲಿ ಕಾಲಿಡುದಿಲ್ಲ. ನಿನ್ನ ಬಂಗಾರ ತಾ, ಮಾರಿ ಅವರ ಸಾಲ ತೀರಿಸಿ ಬರ್ತೀನಿ" ಎಂದಂತೇ ಮಾಡಿ, ಅಲ್ಲಿಯ ತಮ್ಮ ಅಕೌಂಟ್ close ಮಾಡಿಬಿಟ್ಟರು. ಕೊಂಚ Compromising nature ಇದ್ದಿದ್ದರೆ ಎಂದು ನನಗನಿಸುತ್ತಿತ್ತು. ಗಂಜಿ ಕಾಸಿಕೊಂಡು, ಕುಡಿದು ಬದುಕೋಣ. ಇವರ ಹಂಗು ಬೇಡ ಎಂದು ತಮ್ಮದೇ ಸರಿ ಎಂಬ ಹಠ.

ಕೋರ್ಟಿನಲ್ಲಿ: ಒಮ್ಮೆ ಒಬ್ಬ Add D.J. ಒಬ್ಬರು ಕುಸುಮಾಕರನಿಗೆ ಕಾಯ್ದೆ ಬಲ್ಲ ಸೊಕ್ಕು ಭಾಳ ಅದ. ಅವರ ಆಫೀಸ್ ಬಂದ್ ಮಾಡಿಯೇ ಹೋಗ್ತೀನಿ ಎಂದು ಗಟ್ಟಿಯಾಗಿಯೇ ಹೇಳಿದ್ದರು. ಬೆಂಚ್‌ಕ್ಲರ್ಕ್ ಇವರ ಬಳಿ ಓಡಿ ಬಂದು ಸಾಹೇಬ್ರೆ.... ನಮ್ಮ ಕೋರ್ಟಿನಲ್ಲಿರುವ ನಿಮ್ಮ ಕೇಸುಗಳನ್ನು ಟ್ರಾನ್ಸ್‌ಫರ್ ಮಾಡಿಕೊಳ್ರೀ ಅಥವಾ Adjournment application ಕೊಟ್ಟು ಬಿಡ್ರಿ ಎಂದ. "ಇವರ್‍ಯಾರು? ನನ್ನ ಅದೃಷ್ಟ ಬರೀತಾರಾ... ಕೊಡುವವ ದೇವರು.... ಕಾಯ್ದೆಯಲ್ಲಿ ತನಗೆ ತಿಳಿಯದಿದ್ದನ್ನು ತಿಳಿಸಿದಕ್ಕೆ ನನಗೇ

ಅಂತಾರೇನು?"

ಶುರುವಾಯಿತು ಕಾಳಗ. ಸುಮಾರು ೧೭-೧೮ ಕೇಸುಗಳು ಇವರ ವಿರುದ್ಧವಾದವು. Appallant ಇದ್ದರೆ Dismiss Respondant ಪರ ಇದ್ದರೆ Appeal allow ಆಗತೊಡಗಿತು. ನಾನು ಹೆದರಿದೆ. "Adjournment ಪಡೀರಿ" ಎಂದೆ. "ಸಾಧ್ಯವಿಲ್ಲ". ಎಂದು ಕೇಸು ಕರೆದಾಗ ವಿನಯ ನಮ್ರತೆಯಿಂದ "ರೆಡಿ" ಎನ್ನುತ್ತಿದ್ದರು. ಜಡ್ಜ್ ಮುಖದಲ್ಲಿ ಅಚ್ಚರಿ ಇರುತ್ತಿತ್ತು. ಇವರು ಏನೂ ಹಗುರ ಮಾತಾಡಲಿಲ್ಲ. ಎಷ್ಟು ನಮ್ರತೆ ತೋರಿಸ್ತೀರಲ್ಲ. ಆ ಕೇಸುಗಳೇ ಹಾಗಿದ್ದವು ಎಂಬಂತೆ ಎಂದಾಗ "ನಾನು ಕುರ್ಚಿಗೆ ಮರ್ಯಾದೆ ಕೊಡ್ತೀನಿ. ಅವರು ಹೊಲಸು ಭಾವನೆಯಿಂದ ವೈಯಕ್ತಿಕ ಸಿಟ್ಟು ಇಟ್ಟುಕೊಂಡರೆ ನಾನೇನು ಮಾಡ್ಲಿ" ಎಂದರು. ಆ ಪ್ರಕರಣಗಳ Clientsನ್ನೆಲ್ಲ ಕರೆಸಿ ಹೇಳಿದರು. ನನ್ನ ಮೇಲೆ ವಿಶ್ವಾಸವಿದ್ದರೆ ಸರಿ, ಇಲ್ಲದಿದ್ದಲ್ಲಿ ಬೇರೆ ವಕೀಲರಿಗೆ ಕೇಸು ಕೊಡಬಹುದು. ನಮಗೆ ಆಶ್ಚರ್ಯ ಕಾದಿತ್ತು. 'ಸಾಹೇಬ್ರೇ, ನೀವೇ ನಮ್ಮ ವಕೀಲರು. ಬೇರೆ ಎಲ್ಲೂ ಹೋಗುವುದಿಲ್ಲ. "ಹೈಕೋರ್ಟ್ ಇದ್ದೇ ಇರ್‍ತದಲ್ಲ ಬಿಡ್ರಿ' ಅವರೆಲ್ಲರ ವಿಶ್ವಾಸಕ್ಕೆ ಗಂಟಲುಬ್ಬಿ ಕುಸುಮಾಮ ಹೇಳಿದ್ದರು. ಹೈಕೋರ್ಟ್ ಖರ್ಚು ನೀವು ಕೊಡಬೇಕಿಲ್ಲ. ಕೇಸು ಗೆದ್ದಾಗ ನೀವು ತಿಳಿದದ್ದು ಕೊಡೀರಂತೆ!"

ಹಣಕಾಸಿನ ವ್ಯವಹಾರ ನಿಭಾಯಿಸುತ್ತಿದ್ದ ನನಗೆ ಚಿಂತೆ ಮುತ್ತಿತು.

ತೀರ ಇತ್ತೀಚಿನ ಘಟನೆ. ೧೯೯೯ರಲ್ಲಿ ನಾನು ಮುಂದಿನ ವರ್ಷ ರಿಟೈಯರ್ ಆಗುವವಳಿದ್ದೆ. ಅವರಂತೂ ೧೯೮೫ರಿಂದಲೇ ಪ್ರಾಕ್ಟೀಸ್ ಬಿಟ್ಟಿದ್ದರು. ಅಭಿಮಾನಿ ಜಿಲ್ಲಾ ನ್ಯಾಯಾಧೀಶರೊಬ್ಬರು ಫೋನ್ ಮಾಡಿ, "ದೇಸಾಯಿಯವರೇ, ನಿಮ್ಮನ್ನು ಕೇಳದೇ ಹೈಕೋರ್ಟಿಗೆ ನಿಮ್ಮ ಹೆಸರು ಸೂಚಿಸಿದ್ದೆ. ಈ ಊರಲ್ಲಿ **'ಪರ್ಮನೆಂಟ್ ಲೋಕ್ ಅದಾಲತ್'** ಮಾಡಲಿದ್ದು ಪ್ರಕರಣಗಳನ್ನು ತ್ವರಿತ ಇತ್ಯರ್ಥಗೊಳಿಸಲು ಪರಸ್ಪರ ರಾಜಿ ಮಾಡಿಸುವ ಕೆಲಸಕ್ಕೆ ನಿಮ್ಮನ್ನು ಹಾಗೂ ಶ್ರೀ ಗೌರಿಶಂಕರ ಕಳಾಸಕರ್‌ರವರನ್ನು ನೇಮಿಸಲು ಕೇಳಿದ್ದು ಹೈಕೋರ್ಟ್ ಒಪ್ಪಿದೆ. ನೀವು ನಿತ್ಯ ಬರಬೇಕಿಲ್ಲ. ಸಿವಿಲ್ ಡ್ರೆಸ್‌ನಲ್ಲಿಯೇ ಬರಬಹುದು. ಕೇವಲ ೨-೩ ಗಂಟೆಗಳ ಕೆಲಸ. ದಯಮಾಡಿ ಒಪ್ಪಿಕೊಳ್ಳಬೇಕು" ಎಂದಾಗ ನಾನು, ಮಾನವೇಂದ್ರ, ಕೃಷ್ಣಮೂರ್ತಿ ಅವರನ್ನು ಒಪ್ಪಿಸಿದೆವು. ಕಾನೂನು ಅಂದರೆ ಕುಸುಮಾಮಗೆ ಪಂಚಪ್ರಾಣ. ಎರಡೆರಡು ಬೈಪಾಸ್ ಆಗಿ ಮನೆಯಲ್ಲಿದ್ದ ಅವರಿಗೆ ಆ ಕಾರ್ಯದಲ್ಲಿ ಮನಸ್ಸು ಹರಿಸಲು ಒಳ್ಳೆಯದಾಗುವುದು ಎಂದು ಹಿಗ್ಗಿದೆವು. ೬-೭ ತಿಂಗಳಾಗಿತ್ತು. ಕಮಿಟಿಯ ಸಿವಿಲ್ ಜಡ್ಜ್ ಸೆಕ್ರೆಟರಿ, 'ದೇಸಾಯಿಯವರೇ, ನೀವು ಎಷ್ಟು ದಿವಸ ಹಾಜರಾಗಿದ್ದೀರಿ. ಎಲ್ಲ ವಿವರ ಕೊಟ್ಟು ನಿಮ್ಮ ಪಗಾರದ bill ನೀವೇ ತಯಾರು ಮಾಡಿ ಕೊಡಿರಿ' ಎಂದರಂತೆ. "ಯಾಕೆ? ಇಷ್ಟು ದಿವಸ ನೀವೇ ಹಾಜರಿ ನೋಡಿ ಬಿಲ್ ಪಾವತಿ ಮಾಡುತ್ತಿದ್ದಿರಿ ಈಗೇಕೆ? ನಾನು ಸಂಬಳಕ್ಕೆ ಕೈ ಚಾಚುವ ನಿಮ್ಮ ನೌಕರನಲ್ಲವಲ್ಲ "ಎಂದರು."

ನೀವಾಗಿ ಬಿಲ್ ಕೊಡದಿದ್ದರೆ ಹಣ ಸಂದಾಯ ಸಾಧ್ಯವಿಲ್ಲ" ಅಂದರಂತೆ. ಸರಿ, ಎಂದು ಬಂದವರೆ ರಾಜೀನಾಮೆ ಕಳಿಸಿದರು. ಜಿಲ್ಲಾ ನ್ಯಾಯಧೀಶರು ಬದಲಿಯಾಗಿ ಹೋಗಿದ್ದರು. ಒಂದು ವರ್ಗದ ಜನಕ್ಕೆ ಇವರು ಜಸ್ಟ್ಸರಂತೆ ಕೆಲಸ ನಿರ್ವಹಿಸುವುದು ಬೇಡವಾಗಿತ್ತು. ನನ್ನ ಸರ್ವೀಸ್ ಬೇಡವೆನಿಸಿದರೆ ನಾನಲ್ಲಿ ಒಂದು ಕ್ಷಣವೂ ನಿಲ್ಲುವುದಿಲ್ಲ ಎಂಬುದು ಇವರ ಹಠ. ಹಣಕಾಸಿನ ಲಗಾಮು ಹಿಡಿದಿದ್ದ ನನಗೆ ಸರ್ಕಸ್ ಪ್ರಾರಂಭ. ಆದರೆ ಅವರ ಸ್ವಾಭಿಮಾನ ನನಗೆ ಅಭಿಮಾನವೆನಿಸಿತು.

ಇದೇ ತರಹ ಸಾಮಾಜಿಕ ಕಾರ್ಯಕ್ಷೇತ್ರದಲ್ಲಿ ಅವರು ನಷ್ಟ ಅನುಭವಿಸಿದರೂ ಎಂದೂ ತಮ್ಮದು ತಪ್ಪು ಎಂದು ಕೊರಗುತ್ತಿರಲಿಲ್ಲ. ಅಭಿಮಾನದಿಂದ ತಲೆ ಎತ್ತಿ ತಿರುಗುತ್ತಿದ್ದರು. ಶ್ರೀಭಗವತಿ ಚರಣವರ್ಮಾ ಅವರ 'ಧುಪ್ಪಲ್', 'ಥಕೇ ಪಾವ್' ಕಿರು ಕಾದಂಬರಿಗಳಿಂದ ಅವರಿಗೆ ಸಮಾಧಾನ, ಪ್ರೇರಣೆ, ನೆಮ್ಮದಿ ಸಿಕ್ಕುತ್ತಿತ್ತು. 'ಕುಸುಮಾಮಿ.... ಮ್ಯಾಡಂ ನೀನೇ ಹೇಳು, ನಾನು ತಪ್ಪು ಮಾಡಿದೆನಾ' ಎಂದು ನನ್ನ ಸಮಜಾಯಿಷಿ ಕೇಳುತ್ತಿದ್ದರು. ನನ್ನ ಕೇಳುವುದಕ್ಕಿಂತ ಮೊದಲೇ ನಿರ್ಣಯ ತೆಗೆದುಕೊಂಡು ಕಾರ್ಯಪ್ರವೃತ್ತರಾಗಿ ಬಿಡುತ್ತಿದ್ದರು.

ನೂತನ ವಿದ್ಯಾಲಯ ಸಂಸ್ಥೆಯ ವಿದ್ಯಾರ್ಥಿಗಳ ಆಟದ ಮೈದಾನವನ್ನೂ ಕಾನೂನು ಬದ್ಧವಾಗಿ ಮರಳಿ ಸಂಸ್ಥೆಗೇ ದೊರಕಿಸಿಕೊಡುವಲ್ಲಿ ಇವರ ಬುದ್ಧಿ ಚಾತುರ್ಯಕ್ಕೆ ದೊಡ್ಡ ನಿದರ್ಶನವಾಗಿ ಎಲ್ಲರೂ ಕುಸುಮಾಮನನ್ನು ಹೊಗಳಿದ್ದರು. ಅಂತಹ ಸಂಸ್ಥೆಯ ಕಾರ್ಯಕಾರಿ ಸದಸ್ಯರಾಗಿದ್ದ ಇವರಿಗೆ, ಸಂಸ್ಥೆಯ ಅಧ್ಯಕ್ಷರು ಮೀಟಿಂಗ್‌ನಲ್ಲಿ ಅವಮಾನಕರವಾಗಿ ಮಾತನಾಡಿದರೆಂದು ಮನೆಗೆ ಬಂದವರೇ ತಮ್ಮ ರಾಜೀನಾಮೆ ಕಳಿಸಿಬಿಟ್ಟರು. ಎಂತಹ ಪ್ರಸಂಗದಲ್ಲೂ ಅದರ ಆವರಣದಲ್ಲಿ ಕಾಲಿಡಲಿಲ್ಲ. ಮಿತ್ರರು, ಮಾಸ್ತರರು ಉಳಿದ ಸದಸ್ಯರು ಅವರ ಮನವೊಲಿಸಲು ಎಷ್ಟು ಪ್ರಯತ್ನಿಸಿದರೂ ಊಹೂಂ ಜಪ್ಪಯ್ ಎನ್ನಲಿಲ್ಲ. ಹಾಗೆಂದು ಅಧ್ಯಕ್ಷರನ್ನು ದ್ವೇಷಿಸಲಿಲ್ಲ. ಯಥಾ ರೀತಿ 'ಬನ್ನಿ' ಹಬ್ಬದಲ್ಲಿ ಅವರಿಗೆ ಪಾದ ಮುಟ್ಟಿ ನಮಸ್ಕರಿಸಿದರು, ಅವರೊಡನೆ ವಿಶ್ವಾಸದಿಂದ ಹರಟೆ ಹೊಡೆಯುತ್ತಿದ್ದರು, ಮರ್ಯಾದೆ ಕೊಡುತ್ತಿದ್ದರು. ನೋಡಿದವರಿಗೆ ಈ ಸಂಬಂಧ ಅಚ್ಚರಿ ಎನಿಸುತ್ತಿತ್ತು. ನಾನೇ ಈ ಬಗ್ಗೆ ಪ್ರಶ್ನಿಸಿದ್ದೆ- "ಆ ಮೀಟಿಂಗ್ ಬೇರೆ..... ನಮ್ಮ ವೈಯಕ್ತಿಕ ಸಂಬಂಧನೇ ಬೇರೆ.... ಅವರೂ ದೊಡ್ಡವರು. ನನ್ನಷ್ಟೇ ಹಠಮಾರಿ- ಪ್ರಾಮಾಣಿಕ, ನೇರ ನಡೆನುಡಿಯವರು. ಅಲ್ಲಿ ನನ್ನ ಸರ್ವೀಸಸ್ ಬೇಡ ಅವರಿಗೆ ಎನಿಸಿ ದೂರವಾದೆ.... ಆದರೆ ದುಷ್ಕರ್ಮಿಗಳು ನನಗೆ ನೂತನ ವಿದ್ಯಾಲಯಕ್ಕೆ ಸಂಬಂಧವೇ ಇಲ್ಲ ಎಂದು ಭಾವಿಸಿ ಅಧ್ಯಕ್ಷರ ಮನೆಗೆ ಉರಿ ಹಚ್ಚಲು ಬಂದರೆ, ವಕೀಲನಾಗಿ ನಾನು ಅಧ್ಯಕ್ಷರನ್ನು ರಕ್ಷಿಸಲೇಬೇಕಲ್ಲ! ಇದೆಲ್ಲ ನಿನಗೆ ಅರ್ಥವಾಗುವುದಿಲ್ಲ ಬಿಡು" ಎಂದರು. "ಅಲ್ಲಾ ಆ ಶಾಲೆಯ ಮಾಸ್ತರಗಳು ನಿಮ್ಮನ್ನು ಪುನಃ ಬರಲು ಎಷ್ಟು ಹೇಳಿದರಲ್ಲ" ಎಂದೆ. "ಹುಚ್ಚೀ..... ನಾನು ಓದಿದ ಶಾಲೆ-- ನಮ್ಮಪ್ಪ ಹಾಗೂ ದೇವುಳಗಾಂವಕರ್ ಕುಟುಂಬ

ಆ ಸಂಸ್ಥೆಯ ಪೋಷಕರು. ಕಷ್ಟಪಟ್ಟು ಸಂಸ್ಥೆ ಕಟ್ಟಿದ್ದಾರೆ. ಅಂತಹ ಶಾಲೆಗೆ, ಸಂಸ್ಥೆಗೆ ನಾನು ದ್ರೋಹ ಬಗೆತೀನಾ? Never. ಈ ಮಾಸ್ತರರನ್ನು, ಅಧ್ಯಕ್ಷರ ವಿರುದ್ಧ ಎತ್ತಿ ಕಟ್ಟಿ, ವಿದ್ಯಾರ್ಥಿಗಳನ್ನು ಬಳಸಿಕೊಂಡು ನಾನು ಅಧ್ಯಕ್ಷರ ವಿರುದ್ಧ ಸೆಡ್ಡು ಹೊಡೆಯಬೇಕಾ? ವಿದ್ಯಾಕ್ಷೇತ್ರದಲ್ಲಿ ಅಶಿಸ್ತು, ಗೊಂದಲ ಹಬ್ಬಿಸುವ ಕೀಳು ರಾಜಕೀಯ ಮಾಡಿ, ಅಧ್ಯಕ್ಷ-ಸೆಕ್ರೆಟರಿ ಆಗಿ ಮೆರೆಯಬೇಕೆ? ನಾನು ಯಾವಾಗಲೂ ಆ ವಿದ್ಯಾ ಸಂಸ್ಥೆಗೆ ಕಾನೂನು ರಕ್ಷಕನಾಗಿ ವಕಾಲತ್ ಮಾಡುತ್ತ ಹಿತೈಷಿ ಆಗಿರುತ್ತೇನೆ. ಅಲ್ಲಿ ಪದಾಧಿಕಾರಿಯಾಗಿ ಮೀಟಿಂಗ್‌ನಲ್ಲಿ ಅಪಮಾನ ಮಾಡಿದಾಗ ಎಲ್ಲರ ಬಾಲ ಬಡಿಯುತ್ತ ಹಲ್ಲು ಗಿಂಜುತ್ತ, ಕೋಪ-ತಾಪ ಅವಮಾನ ನುಂಗಿಕೊಂಡಿರಲೇ"? ಎಂದಾಗ "ನಿಮ್ಮದೇ ಸರಿ"ಎಂದೆ.

ಆಗವರು ಭಗವತೀಚರಣ ವರ್ಮಾ ಅವರ ಈ ಸಾಲುಗಳನ್ನು ಹೇಳಿದ್ದರು.

ಹಮ್ ಕೋ ಭೀ ವೈಭವ ಔರ್ ಸಫಲತಾ ಕಾ ಮೋಹ ಹೈ

ಕಿಂತು ಕರೇ ಕ್ಯಾ ಹಮ್ ಹೈ ಕಾಯರ್ ಧರ್ಮ ಔರ್ ಇಮಾನ್‌ಕಾ

ಹಮ್ ನೇ ತೋ ಸಿಖಾ ಹೈ ಚಲನಾ ಸೀನಾ ತಾನ್‌ಕೇ!

"ನನ್ನಂಥವನನ್ನು ಕೈಹಿಡಿದು ನೀನೂ ಕಷ್ಟ ಅನುಭವಿಸಬೇಕಾಗುತ್ತದೆ" ಎಂದು ನಸು ನಕ್ಕಾಗ ನನ್ನ ಕೊರಗು ಮಾಯವಾಗಿ ಅಭಿಮಾನ ಹೆಪ್ಪುಗಟ್ಟಿತ್ತು.

ರಾಜಕೀಯ ಕ್ಷೇತ್ರದಲ್ಲಿ ಅನೇಕ ಘಟನೆಗಳಿದ್ದರೂ ಒಂದು ಘಟನೆ ನನಗೆ ಬರೆ ಕೊಟ್ಟಿದೆ.

"ಬರಲಿರುವ ಲೋಕಸಭೆ ಚುನಾವಣೆಗೆ ನೀನೇ ಅಭ್ಯರ್ಥಿ. ಕಾರ್ಯಕರ್ತರನ್ನು ಸಿದ್ಧಗೊಳಿಸಿ ಮತಕ್ಷೇತ್ರದಲ್ಲಿ ಓಡಾಡಿ ಬಾ" ಎಂದು ವರಿಷ್ಠರು ಸೂಚನೆ ಕೊಟ್ಟಿದ್ದರಿಂದ ಕುಸುಮಾಮ ಹೆಚ್ಚಿನ ಹುರುಪಿನಿಂದ ಓಡಾಡತೊಡಗಿದ್ದರು. "ನೋಡು ಕುಸುಮಾಮಿ, ನಾವು ಪಂಚಾಯತ್ ಚುನಾವಣೆಯಿಂದ ಪ್ರತಿ ಚುನಾವಣೆಗೆ ಬೇರೆಯವರಿಗಾಗಿ ಮತ ಯಾಚಿಸುತ್ತಾ ತಿರುಗುತ್ತಿದ್ದೆವು.... ಅಂತಾ ವರಿಷ್ಠರಿಗೆ ನನ್ನ ಹೆಸರು ನೆನಪಿಗೆ ಬಂದಿದೆ" ಎಂದರು". ೧೪-೧೫ ವರ್ಷದವರಿದ್ದಾಗಲೇ ಶ್ರೀಧರ ವಾಮನ ನಾಯಿಕ್, ಎಂ.ಪಿ. ಅವರ ಪಿ.ಎ. ಆಗಿ ದಿಲ್ಲಿ ಪಾರ್ಲಿಮೆಂಟ್ ಅನುಭವ ನಿಮಗಿದೆ ಬಿಡಿರಿ. ಎಂದೆ ಆ ಕಾಲ ಬಂದೇ ಬಿಟ್ಟಿತು. ಅಭ್ಯರ್ಥಿಗಳ ಪಟ್ಟಿ ಬಿಡುಗಡೆಯಾಗಲಿತ್ತು. ನಾನು ಬೆಂಗಳೂರಿಗೆ ಹೊರಟಿದ್ದೆ. ಬಸ್ ತುಮಕೂರಿನಲ್ಲಿ ನಿಂತಾಗ ಪೇಪರ್ ಕೊಂಡು ನೋಡಿದೆ. ಗುಲ್ಬರ್ಗಾ ಅಭ್ಯರ್ಥಿ ಶ್ರೀ ವಿದ್ಯಾಧರ ಗುರೂಜಿ ಎಂದಿತ್ತು. ಬೆಂಗಳೂರು ತಲುಪಿ ಮೀಟಿಂಗ್‌ಗೆ ಹಾಜರಿ ಹಾಕಿದೆ. ಬೇಸರ ಮುತ್ತಿತ್ತು. ರಾತ್ರಿ ಕುಸುಮಾಮಗೆ ಫೋನ್ ಮಾಡಿದರಾಯ್ತು ಎಂದುಕೊಂಡು ಶ್ರೀ ರಾಮಕೃಷ್ಣ ಹೆಗಡೆಯವರ ಮನೆಗೆ ಹೋದೆ. ನನ್ನ ನೋಡಿದ ಕೂಡಲೇ ಹೆಗಡೆಯವರು "ಸರಿತಾರವರೇ ನಿಮ್ಮ ಗಂಡಗೆ ಸಿಟ್ಟು ಬಹಳ ಇದೆಯಾ" ಎಂದರು. ಜೊತೆಗೆ ಬೊಮ್ಮಾಯಿಯವರೂ ಇದ್ದರು. ಹೊರಗೆ ಜನರ ಜಾತ್ರೆಯಿತ್ತು. 'ಯಾಕೆ ಏನಾಯ್ತು'? ಎಂದೆ, "ನಿನ್ನೆ ರಾತ್ರಿ ನಿಮ್ಮ ಯಜಮಾನರಿಗೆ

ನಾನೇ ಮುದ್ದಾಂ ಫೋನ್‌ನಲ್ಲಿ ಮಾತನಾಡಿ ನೀವು ನಾಮಿನೇಶನ್ ಫೈಲ್ ಮಾಡಿ ಎಂದೆ. ಹೆಗಡೆಯವರೂ ಹೇಳಿದರು. "ಸಾಧ್ಯವಿಲ್ಲ ಸಾಧ್ಯವಿಲ್ಲ" ಎಂದಷ್ಟೇ ಉತ್ತರಿಸಿ ಫೋನ್ ಕಟ್ ಮಾಡಿ ಬಿಟ್ಟರು." ಎಂದು ಬೊಮ್ಮಾಯಿಯವರು ಹೇಳಿದರು. "ನೀನಾದರೂ ಹಾಕು ಎಂದು ಹೇಳಿದೆ. ನೀನು ಊರಲ್ಲಿ ಇಲ್ಲವೆಂದೂ ತಿಳಿಯಿತು" ಎಂದು ಹೆಗಡೆಯವರು ಎಂದಾಗ ನನ್ನ ಸಿಟ್ಟು ನೆತ್ತಿಗೇರಿತು. "ನಮ್ಮನ್ನು ಏನಂತ ತಿಳಿದೀರಿ-- ಚುನಾವಣೆ ಅಭ್ಯರ್ಥಿ ಯಾರಾಗಬೇಕು ಎಂಬುದನ್ನು ನೀವು ಕೊನೆಗಳಿಗೆವರೆಗೆ ನಿರ್ಧರಿಸಿಕೊಳ್ಳದೇ ನೀನೂ ನಾಮಿನೇಷನ್ ಹಾಕು, ನೀನೂ ಹಾಕು... ಕೊನೆಯ ನಿರ್ಧಾರದಂತೆ ಟಿಕೆಟ್ ದೊರಕಿ ಬಾಕಿ ಎಲ್ಲರೂ ನಾಮಿನೇಶನ್ ವಾಪಸ್ ಪಡೆಯಬೇಕು. ನಾವಿಬ್ಬರೂ ಅದಕ್ಕೆ ಇದ್ದೇವೆ. ಟಿಕೆಟ್ ಯಾರಿಗೂ ಕೊಡುವಾಗ ನಮಗೇಕೆ ನಾಮಿನೇಶನ್ ಹಾಕಿಸುತ್ತೀರಿ? ನಿಮ್ಮ ತೊಳಲಾಟ ನಮಗಾಗಿ ಬೇಡ.... ನಾವಿಬ್ಬರೂ ಪಕ್ಷ ಬಿಟ್ಟು ಹೋಗುವುದೂ ಇಲ್ಲ. ನೀವು ಯಾರಿಗೆ ಟಿಕೇಟ್ ಕೊಡ್ತೀರೋ ಅವರಿಗೆ ಪ್ರಾಮಾಣಿಕವಾಗಿ ದುಡೀತೇವೆ. ಪಾರ್ಟಿ ಆಫೀಸ್ ಕಸ ಸಹ ಬಳೀತೇವೆ ಬಿಡ್ರಿ" ಎಂದು ಹೊರಟು ಬಂದಾಗ ಹೆಗಡೆಯವರಿಗೆ ನನ್ನ ನೋವು ಅರ್ಥವಾಗಿ ವಿಷಾದದಿಂದ ನೋಡುತ್ತಿದ್ದರು. ಎಲ್ಲರೂ ನನ್ನ ಮುಖ ನೋಡತೊಡಗಿದ್ದರು. ಕುಸುಮಾಮ ನೋವು ನುಂಗಿ "ಸಾಧ್ಯವಿಲ್ಲ" ಎಂದಷ್ಟೇ ಹೇಳಿದ್ದರು. ನಾನು?

ದಾರಿಯಲ್ಲಿ ಕುಸುಮಾಮಗೆ ಫೋನು ಮಾಡಿದೆ "ಯಾಕೆ ಹಾಗೆ ಬಿರುಸು ಮಾತಾಡಿದೆ ನೀನು? ನಮ್ಮ limitations ನಮಗೆ ಗೊತ್ತಿಲ್ಲವೆ.... ಬ್ರಾಹ್ಮಣರು...ಹಣವಿಲ್ಲ... ಗೆಲ್ಲುವ ಕುದುರೇನ ಹುಡುಕುತ್ತಾರೆ... ಹೋಗಲಿ ಬಿಡು... ಬೇಗ ಬಂದು ಬಿಡು" ಎಂದರು. ನೀವೇಕೆ ಹಾಗೆ 'ಸಾಧ್ಯವಿಲ್ಲ' ಎಂದು ಬಿರುಸಾಗಿ ಹೇಳಿದಿರಿ?" ಎಂದೆ ಬೆಳಿಗ್ಗೆ ವಿದ್ಯಾಧರ ಗುರೂಜಿಯವರ ಜೊತೆಗೆ ಮೆರವಣಿಗೆಯಲ್ಲಿ ಹೋಗಿ ನಾಮಿನೇಶನ್ ತುಂಬಿಕೊಟ್ಟು ಹಾಕಿಸಿದ್ದೆ. ರಾತ್ರಿ ನಾಳೆ ನೀನು ಹಾಕು ಅನ್ನುತ್ತಾರೆ? ನನ್ನ ಇಲ್ಲಿಯ ಸ್ಥಾನಮಾನ ಗೌರವ ಏನಾಗಬೇಕು? ಹಿಂದುಳಿದವರ ವಿಶ್ವಾಸಕ್ಕೆ ಎರವಾಗಲಿ? ಎಂದರು. ಇದೇ ಮಾತನ್ನು ನಾನು ನಂತರ ಹೆಗಡೆಯವರಿಗೆ ಫೋನ್‌ನಲ್ಲಿ ತಿಳಿಸಿದಾಗ "ಇದನ್ನು Detail ಅವರು ಆಗಲೇ ಹೇಳಬಹುದಿತ್ತಲ್ಲ ಸರಿತಾ" ಎಂದರು. "ವರಿಷ್ಠರಾದ ನಿಮ್ಮದೂ ತಪ್ಪಲ್ಲವೆ... ಅಭ್ಯರ್ಥಿ ಯಾರು ಎಂದು ಸ್ಪಷ್ಟವಾಗಿ ಮೊದಲೇ ವಿಚಾರ ಮಾಡಿರಬೇಕಲ್ಲವೆ?" ಎಂದೆ. ಈ ಘಟನೆಯಿಂದ ದೇಸಾಯಿಯವರಿಗೆ ಬಹಳ ಸಿಟ್ಟು ಇದೆ ಎಂದು ಎಲ್ಲರೂ ತಿಳಿದರು. ಆದರೆ ಅದು ಅಕಾರಣ ಸಿಟ್ಟು ಅಲ್ಲವೆಂದು ನನಗೆ ಕುಸುಮಾಮನ ಮೇಲೆ ಅಭಿಮಾನವೆನಿಸಿತ್ತು. ಪಕ್ಷದ ಗೆಲುವಿಗಾಗಿ ಇಬ್ಬರೂ ದುಡಿದೆವು.

೧೯೮೫ರಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾಗ ಕುಸುಮಾಮನನ್ನು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಚೇರಮನ್ ಆಗಿ

ನೇಮಕ ಮಾಡುವ ಮುನ್ನ ಖಾದ್ರಿ ಶ್ಯಾಮಣ್ಣ, ಯು.ಆರ್. ಅನಂತಮೂರ್ತಿ ಹೆಗಡೆಯವರಲ್ಲಿ "ದೇಸಾಯಿಯವರನ್ನು ಮನೆಯಲ್ಲೇ ಕೂಡಿಸಿ ಬಿಟ್ಟಿರುವಿರಿ "ಎಂದು ಇವರ ಪರವಾಗಿ ವಾದಿಸಿದ್ದರು". ಸರಿ, ಅವರನ್ನು ಭೆಟ್ಟಿಯಾಗಲು ಹೇಳಿರಿ" ಎಂದಾಗ ಖಾದ್ರಿಯವರು "ಅವನು ಬಹಳ ಸ್ವಾಭಿಮಾನಿ. ಬರಲಿಕ್ಕಿಲ್ಲ ನೋಡೋಣ. ನಾನು ಆತನಿಗೆ ಫೋನ್ ಮಾಡ್ತೀನಿ" ಎಂದು ಇವರಿಗೆ ಫೋನ್ ಮಾಡಿ "ಬೆಂಗಳೂರಿಗೆ ಬರೋಲ್ಲವಾ" ಎಂದು ಕೇಳಿದಾಗ..... "ಅಲ್ಲಿ ಮ್ಯಾಚ್ ನೋಡಲು ಬರ್ತೀನಿ" ಎಂದರಂತೆ. ಮ್ಯಾಚ್‌ಗೆಂದು ಬಂದವರನ್ನು ಶ್ಯಾಮಣ್ಣ ಹೆಗಡೆಯವರ ಬಳಿ ಕರೆದೊಯ್ದಾಗ ಹೆಗಡೆಯವರು ಶ್ಯಾಮಣ್ಣ ಮೊದಲೇ ಮಾತನಾಡಿದ್ದರಂತೆ. ಹೆಗಡೆಯವರ ಮನದ ಇಂಗಿತ ಅರಿತು, ಕುಸುಮಾಮ ಹೇಳಿದ್ದು- I dont want any reward, I want involvement" ಎಂದಾಗ ಹೆಗಡೆಯವರು ಯಾವ ಭಾವ ಪ್ರಕ್ಷಪಡಿಸದೆ 'ಸರಿ' ಎಂದು ಕರ್ನಾಟಕದಲ್ಲಿ ಮಳೆ ಬಾರದೇ ನೀರಿನ ಬರದ ಹಾಹಾಕಾರವಿದ್ದಾಗ ಜಲಮಂಡಳಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದರು.

ನನ್ನ ಕರೆದು "ಕುಸುಮಾಮಿ- ನೀನು ಬೆಂಗಳೂರಲ್ಲಿ ನನ್ನ ಜೊತೆಗೆ ಇರಬೇಡ.... ಯಾಕೆಂದರೆ, ಇದೆಲ್ಲ Political appointment. ಅಥವಾ ನಾನೇ ಯಾವಾಗ ರಾಜೀನಾಮೆ ಕೊಟ್ಟು ಬರ್ತೀನೋ? ನೀನು ವಕೀಲಿ ವೃತ್ತಿಯಲ್ಲಿ ತೊಡಗಬೇಕು" ಎಂದರು. ಅದರಂತೆ ನಾನು ವೃತ್ತಿ ನಿರತಳಾದೆ.

ವಕೀಲ ಸಂಘದಲ್ಲಿ ಕುಸುಮಾಮಗೆ ಬೀಳ್ಕೊಡುವ ಸಮಾರಂಭ ಏರ್ಪಟ್ಟಾಗ ಕುಸುಮಾಮ ತಾವು ಪುನಃ ಕರಿಯ ಕೋಟು ಹಾಕುವುದಿಲ್ಲವೆಂಬ ತಮ್ಮ ಮನಸ್ಸಿನ ನಿರ್ಧಾರ ಸೂಕ್ಷ್ಮವಾಗಿ ಪ್ರಕಟಿಸಿದ್ದು ಅನೇಕರಿಗೆ ಆಘಾತ ಎನಿಸಿತು. ಲಾ ಕಾಲೇಜ್‌ನಲ್ಲೂ ಹಾಗೇ ಪ್ರಕಟಿಸಿದ್ದರು. 'ಮಗ ಆ ಹುದ್ದೆ ಪರ್ಮನೆಂಟ್ ಅಂತಾ ತಿಳಿದಾನೇನು'? ಎಂದು ಕೆಲವರೆಂದರೆ, "ಹಾಗೇಕೆ ಹೇಳಿದರ್ರಿ.... ವಕೀಲವೃತ್ತಿಗೆ ಮಿತ ಹಾಕ್ತಾರಲ್ಲ" ಎಂದು ಕೆಲವರು ಕೇಳಿದರು. ಏಕಾಂತದಲ್ಲಿ ನಾನು ಇದೇ ಪ್ರಶ್ನೆ ಹಾಕಿದಾಗ ಅವರು ಕೊಟ್ಟಿದ್ದ ಉತ್ತರ ಅನೇಕರ ಪ್ರಶ್ನೆಗಳಿಗೆ ಪರಿಹಾರ. "ಕುಸುಮಾಮಿ- No enogh for greedy, every thing is enough for needy. ನಾನು ಚೇರ್‌ಮನ್ ಪದವಿ ಮುಗಿಸಿ ಪುನಃ ಕರಿಯ ಕೋಟು ಹಾಕಿದರೆ ಜಡ್ಜಸ್ ಮೇಲೆ ಏನೋ ಒತ್ತಡ ಹಾಕಿದಂತಾಗಬಹುದು. ಅಲ್ಲದೇ ನೀನು ಸ್ವತಂತ್ರವಾಗಿ ವೃತ್ತಿಯಲ್ಲಿ ಕೀರ್ತಿ ಪಡೆಯಬೇಕು. ನಿನ್ನ ಜೊತೆಗೆ Compitationಗೆ ಇಳಿಯಲಿ? ಮಾನವೇಂದ್ರ ಮತ್ತು ಕೃಷ್ಣಮೂರ್ತಿ, ನಿನಗೆ ಮನೆಯಲ್ಲಿ ವಕೀಲರಾಗಲು ಸಹಾಯ ಮಾಡ್ತೀನಿ. ನಾನೇ ಗಳಿಸುತ್ತ ದೊಡ್ಡ ವಕೀಲನೆಂದು ಬೀಗಿದರೆ ಜ್ಯೂನಿಯರ್ಸ್‌ಗೆ ಕೇಸುಗಳು ಬೇಡವೆ"? ಎಂದಾಗ ಅವರ ನಿರ್ಧಾರ ತುಂಬು ಮನಸ್ಸಿನಿಂದ ಸ್ವಾಗತಿಸಿದೆ. ಅವರ ಈ ತ್ಯಾಗ ಭಾವ ತಿಳಿಯದೇ ಏನೇನೋ ಆಡಿಕೊಂಡರು.

ಮುಂದೆ ಎಂತಹ ಪ್ರಸಂಗ ಬಂದರೂ, ಅವರು ಕರಿಯ ಕೋಟು ಹಾಕಲಿಲ್ಲ. ಕೋರ್ಟ್ ಹಾಲ್‌ಗೆ ಬರಲಿಲ್ಲ. ನುಡಿದಂತೆ ನಡೆದ ಧೀಮಂತರವರು.

****

ಅಂತಿಂಥವನಲ್ಲ ನನ ಗಂಡ: ಎಲ್ಲರಿಗೂ ತಮ್ಮ ತಮ್ಮ ಗಂಡ ಎಂದರೆ ಪ್ರೀತಿ-ಪ್ರೇಮ ಸರ್ವ ಸಾಮಾನ್ಯ ವಿಷಯ. ಆದರೆ ನನಗೆ, ಈ ಗಂಡ ಅಂತಿಂಥವನಲ್ಲ. ನನ್ನ ಪ್ರಾಣ, ನನ್ನ ಸರ್ವಸ್ವವೇ ಆಗಿದ್ದ. ಬಹುಶಃ ನಮಗೆ ಮಕ್ಕಳಿರಲಿಲ್ಲವಾದ್ದರಿಂದ ಪರಸ್ಪರರು ಅಷ್ಟು ಅನ್ಯೋನ್ಯವಾಗಿದ್ದಿರಬಹುದು. ಅವರು ಸದ್ಗುಣಗಳ ಗಣಿಯಾಗಿದ್ದರು. ನಿದರ್ಶನ ವಿವರಿಸಿ ಬರೆದರೆ ಒಂದು ಪುಸ್ತಕವನ್ನೇ ಬರೆಯಬೇಕಾಗುತ್ತದೆ ಈ ಕಿರು ಲೇಖನದಲ್ಲಿ ಬರೆಯಲು ಸಾಧ್ಯವೇ ಇಲ್ಲ.

'ನನ್ನ ಹೆಂಡ್ತಿ, ನನ್ನ ಹೆಂಡ್ತಿ' ಎಂದು ನನ್ನ ಸದಾ ಕಟೆದು ಕಟೆದು ತಮ್ಮ ಅಭಿರುಚಿಯ ಛಾಂಚಾದಲ್ಲಿ ನನ್ನ ಹಾಕಿ ಮೂರ್ತಿಯನ್ನಾಗಿ ಮಾಡಿದ ರೂವಾರಿ ಕುಸುಮಾಮ.

ನಾನು ಸಿನಿಮಾ ಪತ್ರಿಕೆ ಓದಿದರೆ, ಸಿನಿಮಾ ನೋಡಿದರೆ ಅವರಿಗೆ ಸರಿಬರುತ್ತಿರಲಿಲ್ಲ. ``time weste ಮಾಡಬೇಡ. ನಾನು ಗುರುತು ಹಾಕಿಟ್ಟ ಅಂಶಗಳನ್ನು ಓದಿರು, ನಾನು ಕೋರ್ಟಿನಿಂದ ಬಂದ ಮೇಲೆ discuss ಮಾಡೋಣ"ವೆಂದು Times of India, India today, Readers digest, Hindu ಇವುಗಳಲ್ಲದೆ ತಮಗೆ ಸೇರಿದ್ದ How to write a novel (Irving walace) fountain head (Lau Raud), ಮುಂತಾದ ಇಂಗ್ಲೀಷ್ ಕಾದಂಬರಿಗಳನ್ನು ಓದಲು ನನಗೆ ಅಭ್ಯಾಸವಿರಲಿಲ್ಲ. ಬಹಳ Slow ಆಗಿ ಓದುತ್ತಿದ್ದೆ. "೫೦ ಪುಟ ಓದಿದ ಮೇಲೆ ನಿನಗೇ Intrest ಬರುತ್ತದೆ. ಓದು ಓದು" ಎಂದು ದುಂಬಾಲು ಬೀಳುತ್ತ ಆ ಅಭಿರುಚಿ ನನ್ನಲ್ಲಿ ಜಾಗೃತಗೊಳಿಸಿದರು. ಸ್ವತಃ ಕುಸುಮಾಮಾ ಸಾಹಿತ್ಯ ಪ್ರೇಮಿ, ಸಂಗೀತ ಪ್ರೇಮಿಗಳಾಗಿದ್ದರು.

೧೯೬೪ರಲ್ಲಿ ಗುಲ್ಬರ್ಗದಲ್ಲಿ ಮೆಡಿಕಲ್ ಕಾಲೇಜ್ ಆದ ಕೂಡಲೇ ಅರ್ಜಿ ಹಾಕಿಸಿ ಅಣ್ಣಾರಾವ್ ಗುಣಮುಖಿ ಶಿಕ್ಷಣ ಮಂತ್ರಿಗಳನ್ನು, ಶ್ರೀ ರಾಮಪುರೆಯವರನ್ನು ಕಂಡು ಪ್ರಯತ್ನಿಸಿ ಗುಲ್ಬರ್ಗದಲ್ಲೇ ಸೀಟು ದೊರಕಿಸಿದರು. ಮುಂದೆ CBZ combination ನನ್ನದಾಗಿದ್ದರಿಂದ ಬಳ್ಳಾರಿ ಅಥವಾ ಬೆಂಗಳೂರಿನಲ್ಲಿ ಗವರ್ನ್‌ಮೆಂಟ್ ಸೀಟು ಸಿಕ್ಕಾಗ ನಾನು ಮನೆ-ಜವಾಬ್ದಾರಿ ಬಿಟ್ಟು ಹೋಗಲು ತಯಾರಾಗಲಿಲ್ಲ. ನಿರಾಶಳಾಗಿದ್ದೆ.

ನನ್ನಲ್ಲಿ ಹುರುಪು ತುಂಬಿ ಬಿ.ಎ. ಪಾಸಾಗಿ ಎಲ್.ಎಲ್.ಬಿ ಓದಲು ಮಾರ್ಗದರ್ಶನ ಮಾಡಿದರು. ಬಿಳಿಯ ಕೋಟು ತಪ್ಪಿ ಕರಿಯ ಕೋಟು ಧರಿಸುವಂತಾದಾಗ ನಾನೇ ಹೈದರಾಬಾದ್ ಕರ್ನಾಟಕದ ಪ್ರಥಮ ಮಹಿಳಾ ವಕೀಲಳೆಂದು ಪ್ರಥಮವಾಗಿ Enroll

ಮಾಡಿಸಿದರು. ವಕೀಲ ಡ್ರೆಸ್ಸಿನಲ್ಲಿ ತಮ್ಮ ಜೊತೆಗೆ ಕೋರ್ಟಿಗೆ ಕರೆದೊಯ್ಯಾಗ ಅನಿರ್ವಚನೀಯ ಆನಂದ ಪಟ್ಟವರು ಕುಸುಮಾಮ. ವಕೀಲ ವೃತ್ತಿಯ ಒಳ-ಹೊರಗೆ ತಿಳಿಸಿ ಹೇಳಿ ಹೇಳಿ ವಕೀಲಳನ್ನಾಗಿ ಮಾಡಿದರು. ನನ್ನ ಗಳಿಕೆ ಮೀರಿದಾಗ "ಕುಸುಮಾಮಿ ಸರಕಾರಕ್ಕೆ ಮೋಸ ಮಾಡಬಾರದು ಇನ್ನು ಮೇಲೆ Income tax ಕೊಡಬೇಕು" ಎಂದು ಸಲಹೆ ನೀಡಿದ್ದರು.

ನಮ್ಮ ಲಗ್ನದ ವರ್ಧಂತಿ ದಿವಸ ನನಗೆ ಹೊಸ ಸೀರೆ ತರಲಾಗುತ್ತಿರಲಿಲ್ಲವೆಂದು ೧೦ನೇ ವರ್ಷಕ್ಕೆ ಖಾದಿ ಭಂಡಾರ ಬೆಂಗಳೂರಲ್ಲಿ ಬಿ.ಎಚ್. ಇನಾಮ್‌ದಾರ್ ಅವರ ನೆರವಿನಿಂದ ೧೦ ರೇಶ್ಮೆ ಸೀರೆ ಕೊಡಿಸಿ ಆಗ ಅಲ್ಲಿ ಜರುಗಿದ್ದ ಸಾಹಿತ್ಯ ಸಮ್ಮೇಳನದಲ್ಲಿ ಮೆರೆಸಿ, ತಾನೇ ಫೋಟೋ ತೆಗೆದು ಆನಂದಿಸಿದ್ದು ಅವರೇ! ನನಗೆ ಹೊರ ಜಗತ್ತಿನ ಅರಿವು, ಜ್ಞಾನ ಬರಲಿ, ನನ್ನ ಸೃಜನಶೀಲತೆಯಲ್ಲಿ ಹೊಸತನ ಮೂಡಲಿ ಎಂದು ನನ್ನ ಅನುಭವಕ್ಕಾಗಿ Flight ಮೂಲಕ ಮಂಗಳೂರು, ಬೆಂಗಳೂರು, ಹೈದರಾಬಾದ್ ಕರೆದೊಯ್ದು, ತಿರುಗಾಡಿಸಿ ಸಂತಸಪಟ್ಟವರು ಅವರೇ. ನನ್ನ ಎಂ.ಎಲ್.ಸಿ. ನೇಮಕ ಕುಸುಮಾಮನ ತ್ಯಾಗದಿಂದ, ಅವರ ಮಾರ್ಗದರ್ಶನದಿಂದ ಮಾತ್ರ. ಸಾಧ್ಯವಾದದ್ದು ೬ ವರ್ಷ ಅವಧಿ ಮುಗಿದು ಊರಿಗೆ ಕರೆದೊಯ್ಯಲು ಕುಸುಮಾಮ ಬಂದಿದ್ದು, ನನ್ನ ಸಂಗಾತಿ ಮಿತ್ರರಿಗೆ "'ನೋಡ್ರಪ್ಪಾ ಈಕಿ ಶಾಸಕಿ ಆಗಿ ನನ್ನ ಬಿಟ್ಟಿದ್ದದ್ದು ನನಗೆ ಸೆಕೆ ಆಗಿತ್ತು. ಈಗ ಶಾಸಕಿ ಅಲ್ಲ ಮತ್ತೆ ನನ್ನ ಸಖಿ ತಿಳಿಯಿತೇ" ಎಂದು ನಗಿಸಿದ್ದಾಗ "ಸಾಹೇಬ್ರ, ಹೆಂಡ್ತಿ ಸಹವಾಸದಲ್ಲಿ ನೀವೂ ಸಾಹಿತಿ ಆಗಿಬಿಟ್ರಲ್ಲಾ" ಎಂದಿದ್ದರು. ಎಷ್ಟೋ ಜನಕ್ಕೆ ಗೊತ್ತಿಲ್ಲ ಕುಸುಮಾಮ ಸ್ವತಃ ಸಾಹಿತಿ ಎಂದು. ನನ್ನ ಲಗ್ನ ಅವರೊಡನೆ ಆಗುವುದಕ್ಕಿಂತ ಮೊದಲು ಅವರ ಲೇಖನಗಳನ್ನು ನಾನು "ಕಸ್ತೂರಿ"ಯಲ್ಲಿ ಓದಿದ್ದೆ. ಅವರು ಸಾಹಿತ್ಯ ಪ್ರೇಮಿ ಮಾತ್ರ ಅಲ್ಲ, ಸ್ವತಃ ಸಾಹಿತಿ ಆಗಿದ್ದರು. ಅವರು ಬಿ.ಎಸ್.ಸಿ. ಓದುತ್ತಿದ್ದಾಗ ಅವರು ಬರೆದಿದ್ದ 'ಟೊಳ್ಳು ಬುರುಜು' ಕಥೆಗೆ ಪುರಸ್ಕಾರ ಬಂದು ಆಗ ಪ್ರಕಟವಾದ "ಒರಗಲ್ಲು" ಎಂಬ ಕಥಾ ಸಂಗ್ರಹದಲ್ಲಿ ಸೇರಿದೆ. ನನ್ನೊಡನೆ ಲಗ್ನವಾದ ಹೊಸದರಲ್ಲಿ ಅವರು ಬರೆದಿದ್ದು "ನಮಗೂ ಓಂಬುಡುಸುಮ್ಯಾನ್ ಬೇಡವೆ" "ಬ್ರಿಟಿಷ ಪಾರ್ಲಿಮೆಂಟಿನ ವೈಚಿತ್ರ್ಯಗಳು" ಮುಂತಾದ ಲೇಖನಗಳು. ಅವರು ಜಲಮಂಡಳಿ ಅಧ್ಯಕ್ಷರಾಗಿದ್ದಾಗ ಸುರೇಶ್ ಹೆಬ್ಳೀಕರ್ ನಿರ್ದೇಶನದಲ್ಲಿ ತಯಾರಾದ "ನೀರಿಗೇಕೆ ಕಾಸು" ಡಾಕ್ಯುಮೆಂಟರಿ ಫಿಲ್ಮ್‌ಗೆ ಕಥೆ ಪರಿಕಲ್ಪನೆ ಕುಸುಮಾಮನದೇ. ನನ್ನನ್ನು ಅಗಲುವ ಮುಂಚೆ ಅವರ ಕೈ ಬರಹದಲ್ಲೇ ಬರೆದಿಟ್ಟಿರುವ "ಕೈ ಚಳಕ" ಭಗವತೀ ಚರಣ ವರ್ಮಾ ಅವರ ಧುಪ್ಪಲ್ ಹಿಂದಿ ಕಾದಂಬರಿಯ ಕನ್ನಡಾನುವಾದ ಅವರ ಸಾಹಿತ್ಯ ಪ್ರೇಮದ ಮೂಕಸಾಕ್ಷಿಯಾಗಿ ನನ್ನ ಬಳಿ ಇದೆ.

ಕುಸುಮಾಮ- ಹೆಣ್ಣು-ದೃಷ್ಟಿಕೋನ: ಕುಸುಮಾಮ ರಸಿಕ. No woman is ugly,

some are more beautiful than others ಎಂಬುದು ಅವರ Motto. ಕುಸುಮಾಮನ ವಿದ್ಯಾರ್ಥಿ ದೆಸೆಯಲ್ಲೇ ಹುಡುಗಿಯರು ಇವರ ಮೇಲೆ ವಿಶ್ವಾಸವಿಟ್ಟು ನಡೆದುಕೊಳ್ಳುತ್ತಿದ್ದರಂತೆ. ಇವರ ಜೊತೆ ಮಾತು, ಹರಟೆ ಬಯಸುತ್ತಿದ್ದವರಿಗೆ ಕಡಿಮೆಯಿಲ್ಲದಿಲ್ಲ. ಈ ಬಗ್ಗೆ ತಮ್ಮಲ್ಲಿ ಒಂದು ತರಹದ ಪಾಪಪ್ರಜ್ಞೆ ಇದ್ದುದ್ದರಿಂದ ಹುಡುಗಿಯರ ಸಂಗ ಬೆಳೆಸಲಿಲ್ಲವಂತೆ. ನಾನು ಮೊದಲ ರಾತ್ರಿ ಕುಸುಮಾಮನ್ನ ಕೇಳಿದ್ದೆ. "ನೀವು ಯಾರನ್ನೂ ಪ್ರೀತಿಸಿರಲಿಲ್ಲವೇ?" ಕುಸುಮಾಮ ಸತ್ಯ ಸಂಗತಿ ಹೇಳಿದ್ದರು. "ನಾನು ಪ್ರೀತಿಸಿದ್ದೆ ಒಬ್ಬಳನ್ನು. ಆದರೆ ನಮ್ಮದು untelectual love. ನಾನೆಂದೂ ಅವಳ ಕೈ ಹಿಡಿಯಲಿಲ್ಲ. Kiss ಕೊಡಲಿಲ್ಲ. ಬರೀ ಬರೀ discussion. ನಾವು ಶ್ರೀಮಂತರಲ್ಲ ಅವಳು ಶ್ರೀಮಂತರ ಮಗಳು, ನಮ್ಮ ಗುಂಪಿನ ಮನೆ, ಮುಂದೆ ನನ್ನ ಜವಾಬ್ದಾರಿಗಳು, ದೇಶ ಸ್ವಾತಂತ್ರ್ಯಕ್ಕಾಗಿ ನನ್ನ ನಿಲುವು. ಸರಕಾರದ ವಿರುದ್ಧದ ಹೋರಾಟ. ಇವುಗಳ ವೈಚಾರಿಕ ಭಿನ್ನತೆ ಎನಿಸಿ ಆ ಪ್ರೇಮ ಪ್ರಕರಣಕ್ಕೆ ಮುಕ್ತಾಯ ಹಾಡಿದೆ" ಎಂದಿದ್ದರು.

ಯಾರಾದರೂ 'ನಡತೆ ಕೆಟ್ಟವಳು' ಎಂದು ಒಬ್ಬಳಿಗೆ ದೂರಿದಾಗ ಕುಸುಮಾಮ "ಛೀ- ಆ ಹೆಣ್ಣುಮಗಳ ಹಿನ್ನೆಲೆ ಏನೋ...... ಯಾಕೆ ಎಂತು ಎಂದು ಅವಳ ಮನಸ್ಥಿತಿ ತಿಳಿಯದೇ ಹಾಗೇಕೆ ಹೇಳ್ತಾರೆ" ಎಂದು ಹಾಗೆ ಹೇಳಿದವರನ್ನು ಬೈಯುತ್ತಿದ್ದರು. ಕುಸುಮಾಮನ ವಕೀಲ ಮಿತ್ರರೆಲ್ಲರೂ ವಿವಾಹಿತರೇ. ಅವರೆಲ್ಲ ಟ್ರಿಪ್ ಹೋದಾಗ ಹೆಣ್ಣು-ಸೆಕ್ಸ್- ಬಗ್ಗೆ ಚರ್ಚೆ ನಡೆದಿತ್ತು ನಮ್ಮಲ್ಲಿ "ಶ್ರೀರಾಮ" ಯಾರು? ದೇವರಾಣೆ ಮಾಡಿ ಹೇಳಬೇಕೆಂದಾಗ, ಕುಸುಮಾಮ ತಟ್ಟನೇ ಆಣೆ ಮಾಡಿ ಹೇಳಿದ್ದು ನಾನು ಅವರೆಲ್ಲರೂ 'ನಿಜ ನೀನು ಶ್ರೀರಾಮ ಇದ್ದೀದಿ ಎಂದು ಗೊತ್ತಿತ್ತು. ಆದರೆ ನಮಗೂ ತಿಳಿಯದೇ ಇದ್ದ ವಿಷಯವಿತ್ತೇನೋ ಎಂಬ ಆತಂಕವಿತ್ತು. ಈಗ ಸಮಾಧಾನವಾಯ್ತು. ಛಾಫಿ ಲಕ್ಕಿ ಇದ್ದಾರೆ' ಎಂದರಂತೆ. ಆ ಮಿತ್ರರೇ ಊರಿಗೆ ಬಂದು ನನಗೆ ತಿಳಿಸಿದಾಗ ಕುಸುಮಾಮನ ಬಗ್ಗೆ ಹೆಮ್ಮೆ ಎನಿಸಿತ್ತು.

ನನ್ನ ವಕೀಲಳನ್ನಾಗಿ ಮಾಡಿದಾಗ ಅವರ ಮಿತ್ರರು ಕೆಲವರು ಕೋರ್ಟಿನಲ್ಲಿ "೩೦೦-೪೦೦ ಜನ ಗಂಡಸರಲ್ಲಿ ನಿನ್ನ ಹೆಂಡತಿ ಕೆಲಸಕ್ಕೆ ಬರುವುದು ಸರಿಯಲ್ಲ..... ಅವಳಿಗೆ ರೂಪ ವಯಸ್ಸು ಇದೆ...... ಎಚ್ಚರಿಕೆ" ಎಂದರಂತೆ. ಕುಸುಮಾಮಗೆ ನನ್ನ ಮೇಲೆ ಅತ್ಯಂತ ವಿಶ್ವಾಸ. ಆ ವಿಶ್ವಾಸಕ್ಕೆ ಧಕ್ಕೆ ತರದಂತೆ ನಾನು ಎಚ್ಚರ ವಹಿಸಿದೆ. ನಾನು ವಕೀಲಿ ಪ್ರಾರಂಭಿಸಿದ ಕೆಲವೇ ತಿಂಗಳಲ್ಲಿ ಕುಸುಮಾಮ ತುರ್ತು ಪರಿಸ್ಥಿತಿಯಿಂದಾಗಿ ಸೆರೆಮನೆ ಸೇರಿದರು. ಎಂದೂ ಅವರು ನನ್ನ ಬಗ್ಗೆ ಅವಿಶ್ವಾಸ ತಾಳಲಿಲ್ಲ. ಅವರದು ದೊಡ್ಡ ಮನಸ್ಸು!

ವಿಶ್ವ ಕುಟುಂಬಿ ಕುಸುಮಾಮ: ಕುಸುಮಾಮಗೆ ಮಕ್ಕಳ ಮೇಲೆ ಬಹಳ ಪ್ರೀತಿ. ತಂಗಿ ಬಾಣಂತಿತನಕ್ಕೆ ಬಂದರೆ ಬಾಣಂತಿ ರೂಂನಲ್ಲೇ ಮಗುವಿನ ಜೊತೆಗೆ ಮಗುವಾಗಿ ಬಿಡುತ್ತಿದ್ದರು. ಮಕ್ಕಳ ಮೇಲೆ ನನಗೂ ಬಹಳ ಆಸೆ ಇತ್ತು. ಪಕ್ಕದ ಮನೆಯ ಚಿಕ್ಕಮಗುವನ್ನು ನಾನು ಎತ್ತಿಕೊಂಡು ಬಂದಿದ್ದೆ. ಕುಸುಮಾಮಗೆ ಸರಿ ಬರಲಿಲ್ಲ. ನನ್ನ ಹತ್ತಿರ ಕೂಡಿಸಿಕೊಂಡು

ತಿಳಿಹೇಳಿದರು. "ನಿನ್ನ ಈ ವರ್ತನೆ ನನಗೆ ಸರಿ ಬರುವುದಿಲ್ಲ. ಮನೆಯ ಮಕ್ಕಳನ್ನು ಆಡಿಸಿ ನಲಿಯುತ್ತಿರುವಿ. ಸಂತೋಷ. ಆದರೆ ಮಂದಿ ಮಕ್ಕಳನ್ನು ನೀನು ಎತ್ತಿಕೊಳ್ಳುವುದು ನನಗೆ ಸರಿ ಬರುವುದಿಲ್ಲ. ಇವತ್ತೇ ಕೊನೆ. ಇನ್ನೆಂದೂ ಈ ತಪ್ಪು ಮಾಡಬೇಡ" ಎಂದರು. ಅಂದಿನಿಂದ ಎಷ್ಟೇ ಮುದ್ದು ಬರಲಿ, ಮಂದಿ ಮಕ್ಕಳನ್ನು ಆಡಿಸುವುದನ್ನು ಬಿಟ್ಟುಬಿಟ್ಟೆ!

ಮದುವೆ ಆದ ಹೊಸದರಲ್ಲಿ ಮಕ್ಕಳ ಬಗ್ಗೆ ಇಬ್ಬರಿಗೂ ಕನಸುಗಳಿದ್ದುವು. ನಮಗೆ ಮಕ್ಕಳಾಗುವುದಿಲ್ಲ ಎಂಬ ಕಠೋರ ಸತ್ಯ ಎದುರಾದಾಗ... ಸಾದಿಸಿ ಪುನಃ ಪುನಃ ಬಾಣಂತಿತನಕ್ಕೆ ಬಂದಾಗ ನನ್ನ ಮನಸ್ಥಿತಿ?! ಕುಸುಮಾಮ ಅರ್ಥಮಾಡಿಕೊಂಡಿದ್ದರು. ಅವರ ಹಿತವಚನಗಳು ನಮ್ಮಂತಹ ಮಕ್ಕಳಿಲ್ಲದ ದಂಪತಿಗಳಿಗೆಲ್ಲ ಮಾರ್ಗದರ್ಶಕ. ನನ್ನ ಮನಸ್ಸಿನ ಸಮಾಧಾನಕ್ಕಾಗಿ ತನ್ನ ಸೋದರಮಾವನ ಮಕ್ಕಳು, ತಾಯಿ-ತಂದೆ ಇಲ್ಲದ ಪರದೇಶಿ ಮಕ್ಕಳಿಗೆ ಆಶ್ರಯವಿತ್ತರು. ಆ ಮಕ್ಕಳಿಗೆ ತಾಯಿಯಾಗಿ ಅತೀವ ಮಮಕಾರ ತೋರಿಸಿ ಬೆಳೆಸತೊಡಗಿದಾಗ ನನ್ನ ಆಗಲೇ ಎಚ್ಚರಿಸಿದರು."ನನ್ನ ಮಾವನ ಮಕ್ಕಳು ನಿನ್ನ ಮಕ್ಕಳಲ್ಲ. ಇಲ್ಲಿ ಆಶ್ರಯ ಕೊಟ್ಟಿದ್ದೇವಷ್ಟೆ. ಓದಿಸಿ ಅವರ ಕಾಲ ಮೇಲೆ ಅವರು ನಿಲ್ಲುವಂತೆ ಮಾಡುವುದು ನಮ್ಮ ಕರ್ತವ್ಯ. ಅವರಿಂದ ನೀನು ಏನನ್ನೂ Expect ಮಾಡಬೇಡ. ನಮ್ಮ ಮುಪ್ಪಿನ ಕಾಲದಲ್ಲಿ ಆಸರೆ ಆಗ್ತಾರೆ ಎಂಬ ಆಶೆ ಇಟ್ಟುಕೊಳ್ಳಬೇಡ. 'ನನಗೆ ನೀನು- ನಿನಗೆ ನಾನು' ಅಷ್ಟೇ ಅಂದು ಅವರು ಎಚ್ಚರಿಸಿದ್ದು ಇಂದು ನನ್ನ ಈ ಅರವತ್ತೈದು ವರ್ಷದ ಒಂಟಿ ಜೀವನದಲ್ಲಿ ಎಷ್ಟು ನಿಜವಾಯಿತಲ್ಲ! ಎಂದು ಸಖೇದಾಶ್ಚರ್ಯವಾಗಿದೆ.

"ನೇಕಿ ಕರ್ ದರಿಯಾ ಮೇ ಡಾಲ್" ಎಂಬುದು ಅವರ ಫಿಲಾಸಫಿ. ಅವರ ಕಕ್ಕಿ ಸುಶೀಲಾ ಕಕ್ಕಿ ಪದೇ ಪದೇ ಹೇಳುತ್ತಿದ್ದರು. ಕುಸುಮ್ ನಿನಗೆ ಮಕ್ಕಳಿಲ್ಲ ಅಂತ ಯಾರು ಹೇಳ್ತಾರೆ? ಯಾರದೋ ಮಕ್ಕಳ ಉತ್ಕರ್ಷ ಕಂಡು ಹಿಗ್ಗುವ, ಅನಾಥ ಮಕ್ಕಳಿಗೆ ಓದಿಸಿ ವಿದ್ಯಾವಂತರನ್ನಾಗಿ ಮಾಡುತ್ತಿರುವ ನೀನು ವಿಶ್ವ ಕುಟುಂಬಿ! ನಿಜ, ಇದು ಅಕ್ಷರ ಸಹ ಸತ್ಯ!!

ಈ ಇಳಿ ವಯಸ್ಸಿನಲ್ಲಿ ಒಂಟಿ ಜೀವನದಲ್ಲಿ ಬಾಳಿನ ನೆನಪಿನ ಬುತ್ತಿ ಬಿಚ್ಚಿ ಉಣ್ಣುವಾಗ ನಾನು ಸಾಕಿದ ಮೂಕ ಪ್ರಾಣಿಗಳು, ಅವುಗಳ ಪ್ರಾಮಾಣಿಕ ಪ್ರೀತಿ, ವಾತ್ಸಲ್ಯ, ಕೊಟ್ಟ ಸುಖಕ್ಕೆ ಮನಸ್ಸು ಮುದಗೊಳ್ಳುತ್ತಿದೆ.

ಕಲ್ಲಿನ ಖಣಿ ಬಿಸಿನೆಸ್: ನಾನು ಬಿ.ಎ.ಎಲ್.ಎಲ್.ಬಿ. ಆಗುವುದಕ್ಕಿಂತ ಮೊದಲು ಕುಸುಮಾಮ ನನ್ನ ಬಗ್ಗೆ ಬಹಳ ಕೊರಗತೊಡಗಿದರು. "ಕುಸುಮಾಮಿ ಮುಂದ ನನ್ನ ತಮ್ಮಂದಿರ ಲಗ್ನವಾದಾಗ ನಿನ್ನ ನೆಗ್ಣೆಣ್ಣಿಯರು ಕಲಿತವರು, ಡಾಕ್ಟರ್ಸ್, ಇಂಜಿನಿಯರ್ಸ್ ಆಗಿದ್ದಲ್ಲಿ ನಿನಗೆ Inferiority Complex develop ಆಗಿಬಿಡಬಹುದು. ಬಿ.ಎ. ಮಾಡುತ್ತಾ ನಿನ್ನ ಹೆಸರಿನಲ್ಲಿ ಬಿಸಿನೆಸ್ ಮಾಡೋಣ" ಎಂದು ವಿಚಾರ ಮಾಡತೊಡಗಿದರು. ಬೆಂಗಳೂರು ಮಹಾರಾಣೀಸ್ ಕಾಲೇಜ್‌ನಲ್ಲಿ ಇಂಟರ್ ಮಿಡಿಯೇಟ್ ಸೈನ್ಸ್ ಓದಿ ಇಂಟರ್ ಕಾಲೇಜ್ ಡಿಬೇಟ್‌ನಲ್ಲಿ ಪ್ರೈಜಸ್ ಪಡೆದಿದ್ದೆ. "ಶಾಸ್ತ್ರೀಯ ನಾಟ್ಯ, ಸಂಗೀತ ಎಲ್ಲ ಕಲಿತ ನಿನ್ನಂಥವಳನ್ನು

ಯಾರ್‍ಯಾರದೋ ಸಂಸಾರ ಕೂಡಿರುವ ಈ ನಮ್ಮ ಅಡಿಗೆ ಮನೆಯಲ್ಲಿ ಇರುವಂತೆ ಮಾಡಿರುವ ನನಗೆ ನೋವಾಗುತ್ತಿದೆ. ನೀನೂ ಗಳಿಸುವಂತಾಗಬೇಕು. ಸಮಾಜದಲ್ಲಿ ನಿನ್ನದೇ ಆದ ಸ್ಥಾನಮಾನ ನಿನಗಿರಬೇಕು" ಎನ್ನುತ್ತ ಭಂಕೂರನಲ್ಲಿ ಹೊಲ ಖರೀದಿಸಿ ಅಲ್ಲಿ ಕಲ್ಲುಗಳು ಉತ್ತಮ ದರ್ಜೆಯವು ದೊರಕುವುದೆಂದು ನನ್ನ ಹೆಸರಿನಲ್ಲಿ ಬಿಸಿನೆಸ್ ಪ್ರಾರಂಭಿಸಿದರು. ನನಗೆ ಅನುಭವ ಬರಲಿ ಎಂದು ಶನಿವಾರ, ಆದಿತ್ಯವಾರ ಕರೆದೊಯ್ಯತೊಡಗಿದರು. ಬ್ಯಾಂಕಿನಿಂದ ಸಾಲ ತಂದು ಪ್ರಾರಂಭವಾಗಿ ಕಲ್ಲುಗಳು ಮುಂಬೈ-ಕಲ್ಕತ್ತಾಕ್ಕೂ ರವಾನೆ ಆಗುತ್ತಿದ್ದುವು. ಒಳ್ಳೆ ಆರ್ಡರ್ಸ್ ಬರತೊಡಗಿದುವು. ರಾಯಚೂರ್ ಮಾಮ ಎಂಬ ವಯಸ್ಕ ಪಾರ್ಟನರ್ ಆದ ಕುಸುಮಾಮ ತನ್ನ ವಿಶ್ವಾಸಿ ಬಲಗೈ ಬಂಟನನ್ನು ಮೇನೇಜರ್ ಎಂದು ನೇಮಿಸಿ ಹುರುಪಿನಿಂದ ಪ್ರಾರಂಭಿಸಿದರು. ಮುಂದೆ ದೇಶದಲ್ಲಿ ತುರ್ತು ಪರಿಸ್ಥಿತಿ ಸಾರಿದಾಗ ಕುಸುಮಾಮ ಖಣಿ, ನಾಗನಹಳ್ಳಿ ಹೊಲದ ಉಸ್ತುವಾರಿ, ತನ್ನ ಆಫೀಸ್ ಎಲ್ಲ ಸಂಬಾಳಿಸಲು ನನ್ನನ್ನು ಬಿಟ್ಟು ತುರ್ತು ಪರಿಸ್ಥಿತಿ ವಿರುದ್ಧ ಸತ್ಯಾಗ್ರಹ ಮಾಡಿ ಸೆರೆಮನೆ ಸೇರಿದರು. ಮೊದಲು ನನಗೆ ಕುಸುಮಾಮ ಕುಟುಂಬ ಪೋಷಣೆ ಮಾತ್ರ ಹೊರಿಸಿದ್ದ. ಈಗ ಹೊಲದಲ್ಲಿ ಬೆಳೆದು ನಿಂತ ಕಬ್ಬು, ಕಲ್ಲಿನ ಖಣಿಯ ಬಿಸಿನೆಸ್, ಅದೇ ವಕೀಲಿಗೆ ಕಾಲಿಟ್ಟಿದ್ದ ನನಗೆ ತನ್ನ ಆಫೀಸ್ ಸಂಭಾಳಿಸುವ ಜವಾಬ್ದಾರಿ ಹಾಕಿಬಿಟ್ಟರು. ಎಲ್ಲ ಹೊಸ ಅನುಭವ. ಈಜಲಿಕ್ಕೂ ಬರದಿದ್ದವರನ್ನು ಬಾವಿಗೆ ನೂಕಿದಂತಾಗಿತ್ತು ನನ್ನ ಸ್ಥಿತಿ!

ಕುಸುಮಾಮಗೆ ದೇಶದ ಕಾಳಜಿಯ ಮುಂದೆ, ಕುಸುಮಾಮಿ ಆಗಲಿ, ಹೊಲ, ಖಣಿ ಆಗಲಿ ಯಾವುದೂ ಲಕ್ಷ್ಯವಿರಲೇ ಇಲ್ಲ.

ಕುಸುಮಾಮ-ತುರ್ತು ಪರಿಸ್ಥಿತಿ: ಇದರ ಬಗ್ಗೆ ಬರೆಯಲಿಕ್ಕೆ ನನಗೆ ಉಸಿರು ಕಟ್ಟಿದಂತಹ ಅನುಭವ. ಆ ಕಷ್ಟ ಪರಿಸ್ಥಿತಿಯಲ್ಲಿ ನಮ್ಮವರು ಯಾರು? ಎಂಬ ಪಾಠ ಸರಿಯಾಗಿ ಆಯಿತು. ನಾನು ಅವರ ಆಫೀಸು ಮುಚ್ಚಿ ತವರಿಗೆ ಸೇರಲಿಲ್ಲ. ಬದಲಾಗಿ ಕುಸುಮಾಮನ ತರಬೇತಿಯಿಂದಾಗಿ ಕಲ್ಲು ಖಣಿಯ ವಹಿವಾಟು, ವಕೀಲಿ, ಬೆಳೆದು ನಿಂತ ಕಬ್ಬನ್ನು ಘಾಣ ಬೆಲ್ಲ ಮಾಡಿಸುವ ಕೆಲಸ, ನಾದಿನಿಯ ಲಗ್ನ ಕಾರ್ಯದಲ್ಲಿ ಮಗ್ನಳಾದೆ. ನನಗೆ ಸುತ್ತಮುತ್ತಲಿನ ಆಗುಹೋಗುಗಳ ಅರಿವೇ ಇಲ್ಲದೇ ನನ್ನಲ್ಲಿ ಸ್ವಂತ ವ್ಯಕ್ತಿತ್ವ ರೂಪಿಸಿಕೊಳ್ಳಬೇಕೆಂಬ ಪರಿಶ್ರಮವಾಗಲಿ, ರಾಜಕೀಯ ಆಸ್ಥೆಯಾಗಲಿ ಇರಲಿಲ್ಲ. ಇದೊಂದು ಘೋರ ಆಪತ್ತು, ನನಗೆ ಒದಗಿದ ವಿಪತ್ತು ಎಂಬಷ್ಟು ದುಃಖ. ಮನೆಯ ಘಟನೆಗಳ ಬಗ್ಗೆ ಹಣಕಾಸಿನ ಗೋಳು ಬಗ್ಗೆ ಹೇಳಿಕೊಂಡರೆ, ಸೆರೆಮನೆಯಲ್ಲಿ ಸೋಲಜನಿತ್ಸಿನರ 'ಕ್ಯಾನ್ಸರ್ ವಾರ್ಡ್', 'ಫಸ್ಟ್ ಸರ್ಕಲ್' ಓದಿ ಕಲ್ಲಾಗಿ ಬಿಟ್ಟಿದ್ದ ಕುಸುಮಾಮ, ನನ್ನ ಯಾವ ಭಾವನೆಗಳಿಗೂ ಸ್ಪಂದಿಸದೇ ಮನೆ ವ್ಯವಹಾರದ ಯಾವುದನ್ನೂ ಕಿವಿಗೆ ಹಾಕಿಕೊಳ್ಳದೇ ಎರಡು ಸಮಾಧಾನದ ಮಾತೂ ಆಡದೇ, ಕೇವಲ ದೇಶದ ಭಾರವನ್ನೆಲ್ಲ ಹೊತ್ತ ಆದಿಶೇಷನೋ ಎಂಬಂತೆ ವರ್ತಿಸುವುದು ವಿಚಿತ್ರವೆನಿಸಿತ್ತು. ಜೈಲ್‌ನಿಂದ ಹೊರಬಂದರೂ ಮೀಸಾದಲ್ಲಿ ಪುನಃ ಬಂಧಿಸುವರೆಂಬ ಆತಂಕ

ನನಗೆ. ದೇಶದ ಬಿಕ್ಕಟ್ಟಿನ ಬಗ್ಗೆ ಚಿಂತೆ ಅವರಿಗೆ. ಕಲ್ಲಿನ ಖಣಿಯ ಮಾಲಿಕಳಾಗಿದ್ದ ನನ್ನನ್ನು, ಸದಾ ಕೇಸುಗಳಲ್ಲಿ ಚಿತಾಪುರ ಕೋರ್ಟಿಗೆ ಅಪರಾಧಿಯನ್ನಾಗಿ ಎಳೆಸುತ್ತಿದ್ದ ಅಂದಿನ ಸರ್ಕಾರ, ತೆರಿಗೆಗಳ ಖೊಟ್ಟಿ ಪ್ರಕರಣಗಳನ್ನು ಸೃಷ್ಟಿಸಿ ನನ್ನ ಸತಾಯಿಸುತ್ತಿದ್ದಾಗ, ಆರ್ಥಿಕ ಮುಗ್ಗಟ್ಟಿನಲ್ಲೂ ಸೆರೆಮನೆಯಲ್ಲಿದ್ದವರಿಗಾಗಿ ರುಚಿ ರುಚಿ ತಿಂಡಿ ಸರಬರಾಜು ಮಾಡಬೇಕಾಗುತ್ತಿತ್ತು. ಅವರ ಬದಲು ನಾನೇ ಸೆರೆಮನೆಯಲ್ಲಿದ್ದರೆ ಒಂದು ಬಂಡಲ್ ಪೇಪರ್ ತಂದು ಹಾಯಾಗಿ ಬರೆಯುತ್ತ ದಿನ ಕಳೆಯಬಹುದಿತ್ತು ಎನಿಸುತ್ತಿತ್ತು.

ಇಷ್ಟೆಲ್ಲ ಪಾಡುಪಡುತ್ತಿರುವ ಬಗ್ಗೆ ನನ್ನ ಎಳ್ಳಷ್ಟೂ ಸಹಾನುಭೂತಿ ಇಲ್ಲವಲ್ಲ ಎಂಬ ಕಳವಳದಿಂದಲೇ ತಾ. ೧೧-೨-೧೯೭೬ ರಂದು ಅತೀ ಉದ್ವಿಗ್ನಳಾಗಿ ನಾನು ಕುಸುಮಾಮನ ಭೆಟ್ಟಿಗೆ ಜೈಲ್‌ಗೆ ಹೋದಾಗ ಭೆಟ್ಟಿಗಾಗಿ ಬಹಳ ಹೊತ್ತು ಕಾಯಬೇಕಾಯ್ತು. ಬಂದವರೇ "ನೀನು ಬೆಂಗಳೂರಿಗೆ ಹೋಗಬೇಕು. ಮಧುದಂಡವತೆ ಹಾಗೂ ಹೆಗಡೆಯವರು ಒಂದೇ ಕಡೆ ಜೈಲ್‌ನಲ್ಲಿದ್ದಾರೆ. ಖಾದ್ರಿ ಶ್ಯಾಮಣ್ಣ, ಕೆ.ಎಸ್. ಹೆಗಡೆಯವರನ್ನು ಕಾಣಬೇಕು... ಹಾ, ಸ್ವರಾಜ್ಯದ ಪ್ರತಿಗಳನ್ನು ಕೆಲವರಲ್ಲಿ ಹಂಚಬೇಕು" ಎಂದೆಲ್ಲ ರಾಜಕೀಯ ಪುಢಾರಿಯ ಕೆಲಸದ ಬಗ್ಗೆ ಆದೇಶ ಕೊಟ್ಟಾಗ- ತಾಪತ್ರಯಗಳ ಬಗ್ಗೆ ಹೇಗೆ ಹೇಳಲಿ ಎನಿಸಿ ನನ್ನ ಕಣ್ಣಾಲಿಗಳಲ್ಲಿ ನೀರು ತುಂಬಿ ಬಂತು. "ನಿಮ್ಮ ವಕೀಲಿ, ಒಕ್ಕಲುತನ, ಖಣಿ ಬಿಸಿನೆಸ್, ಮನೆ ಇಷ್ಟೆಲ್ಲ ಜವಾಬ್ದಾರಿ ನಿಭಾಯಿಸುವುದು ನಿಮಗೆ ಸಹಕಾರ ಕೊಡುತ್ತಿಲ್ಲವೆ" ಎಂದೆ. ನನ್ನ ಕಣ್ಣುಗಳಲ್ಲಿ ನೀರು ಕಂಡವರೇ ಸಿಟ್ಟಿನಿಂದ- "ನೀನು ನನ್ನ ಹೆಂಡ್ತಿಯಾಗಲು ಲಾಯಕ್ ಇಲ್ಲ. ನಡಿ ಇಲ್ಲಿಂದ.... ಮಹಾರಾಷ್ಟ್ರದ ಹೆಣ್ಣು ಮಕ್ಕಳನ್ನು ನೋಡು. ತಾವಾಗಿ ಜೈಲ್‌ಗೆ ಮುನ್ನುಗ್ಗುತ್ತಿದ್ದಾರೆ.... ಏನು ಹಚ್ಚೀದಿ... ಬೆಲ್ಲದ ಘಾಣ, ಖಣಿ, ವಕೀಲಿ ಹಾಳಾಗಿ ಹೋಗಲಿ... ದೇಶ ಎಲ್ಲಿ ಹೋಗ್ತಾ ಅದ... ಅರಿವು ಅದಾ ನಿನಗೆ?" ಎಂದವರೇ ಸರಕ್ಕನೇ ೨ ನಿಮಿಷದಲ್ಲಿ ಭೆಟ್ಟಿ ಮುಗಿಸಿ ಒಳಹೊರಟು ಬಿಟ್ಟಾಗ ದಿಗ್ಭ್ರೂಢಳಾಗಿ ಬಿಟ್ಟೆ!

ಎಂತಹ ಆಪ್ಯಾಯಮಾನವಾಗಿದ್ದ ನಮ್ಮ ದಾಂಪತ್ಯ! ಜೋಡು ಹಕ್ಕಿಗಳಂತೆ ನಲಿಯುತ್ತಿದ್ದ ನಾವು! ಎಂದೂ ಅವರಿಂದ ಬಿರುನುಡಿ ಅನ್ನಿಸಿಕೊಂಡಿರಲಿಲ್ಲ! ಒಗ್ಗಿನಿಂದ ಆರತಿ ಮಾಡಿ, ಸೆರೆಮನೆಯಲ್ಲಿ ಅವರಿಂದ ಹಿತನುಡಿ ಸಿಗಲಿಲ್ಲವೆಂಬ ಕೊರಗು ನನ್ನದು. ಹೆಂಡತಿಯನ್ನೇ ಬಿ.ಎ. ಓದಿಸಿ ಎಲ್.ಎಲ್.ಬಿ. ಓದಿಸಿ ವಕೀಲಳನ್ನಾಗಿ ಮಾಡಿದೆ, ಆದರೂ ಆ ಸೀಮಿತ ಪರಿಮಿತಿಯಿಂದ ಮೇಲೇರದೇ, ಕುಟುಂಬದ ಸಮಸ್ಯೆಗಳನ್ನೇ ಹೇಳುತ್ತಾಳಲ್ಲ ಎಂಬ ಕೊರಗು ಅವರದು. ಅಂತೂ ಅಂದು ಇಡೀ ರಾತ್ರಿ ನಾನು ನನ್ನ ಸ್ವವಿಮರ್ಶೆ ಮಾಡಿಕೊಂಡೆ. ಮರು ದಿವಸ ಕೋರ್ಟಿನಲ್ಲಿ ಕೈದಿಯೊಬ್ಬ ತಂದುಕೊಟ್ಟ ಕುಸುಮಾಮನ ಕಠೋರ ನೀತಿಯ ಪತ್ರ ಕೈಸೇರಿತು. ನನ್ನನ್ನು ಹೊಸ ಮನುಷ್ಯಳನ್ನಾಗಿ ಮಾಡಿ ನನ್ನ ಕಣ್ಣು ತೆರೆಸಲು ಪ್ರೇರಣೆಯಾಯಿತು. ಒಂದು ಆದರ್ಶ ಒಂದು ತತ್ವಕ್ಕಾಗಿ ಹೋರಾಡುವಾಗ ಸಾಂಸಾರಿಕ ತಾಪತ್ರಯಗಳು ಗೌಣವಾಗಬೇಕಲ್ಲದೆ, ವ್ಯಕ್ತಿಗಿಂತ ಸಮಾಜವೇ ದೊಡ್ಡದು ಅನ್ನಿಸಿತು.

ಕುಸುಮಾಮನ ಆ ಪತ್ರದಿಂದ ಹೊಸ ಆತ್ಮ ವಿಶ್ವಾಸ, ಹೊಸ ಧೈರ್ಯದಿಂದ ಜಗತ್ತನ್ನೇ ಜಯಿಸಬಲ್ಲೆನೆಂಬ ಉತ್ಸಾಹದಿಂದ ಕುಸುಮಾಮನ ಪತ್ರ ಕಣ್ಣಿಗೊತ್ತಿಕೊಂಡು ರಾಜಕೀಯ ಮಾಹಿತಿ ಪಡೆಯಲು, "ಸ್ವರಾಜ್ಯ" ಪ್ರತಿ ಹಂಚಲು ಬೆಂಗಳೂರಿಗೆ ಹೊರಟು ಬಿಟ್ಟೆ!

ನಂತರವೇ ನನ್ನಣ್ಣ ಬೀchi ಅಭಿಮಾನದಿಂದ "ಸರಸ, ನೀನು ಅಕಾರಾಂತ ಪುಲ್ಲಿಂಗ" ಎಂದ. ಕುಸುಮಾಮ ಅತ್ಯಂತ ಸಂತಸದಿಂದ "ಇನ್ನು ನಿನಗೆ ಮೀಸೆ ಬಂತು ಬಿಡು" ಎಂದಿದ್ದ.

ಕುಸುಮಾಮ - ಸಂಜೀವಿನಿ - ನಾಗನಹಳ್ಳಿ ತೋಟ: ಎಲ್ಲರ ಸುಖಕ್ಕಾಗಿ, ಎಲ್ಲರ ಒಳಿತಿಗಾಗಿ ತನ್ನ ಕಷ್ಟ ಕಾರ್ಪಣ್ಯ ನುಂಗಿ ನಿಸ್ವಾರ್ಥ, ಪ್ರಾಮಾಣಿಕತನದಿಂದ ಸಂಸಾರ ನೊಗ ಹೊತ್ತಿದ್ದ ಕುಸುಮಾಮಗೆ ಕಕ್ಕನ ಮಕ್ಕಳಲ್ಲಿ ಕೆಲವರು, "ನಮ್ಮ ದೊಡ್ಡಪ್ಪ ನಮಗೆ ಮಾಡಿದ" ಎನ್ನುವಂತೆ ನಡೆದುಕೊಂಡಾಗ, "ದೊಡ್ಡಪ್ಪ ಸಂಜೀವರಾಯರು ಗಳಿಸಿ ತರುತ್ತಿದ್ದರೇ? ಅವರು ವಕಾಲತ್ ಬಿಟ್ಟು ವರ್ಷಗಳೇ ಉರುಳಿದ್ದವು. ಅಪ್ಪ ಕಟ್ಟಿದ ಈ 'ದೊಡ್ಡಮನೆ' ಯಲ್ಲಿದ್ದರೆ ನಾನು ಮಾಡಿದ್ದೇನು ಎಂದು ಯಾರಿಗೂ ಎನಿಸುವುದೇ ಇಲ್ಲ. ನಾನು ಮನೆ ಕಟ್ಟಿಸಿಕೊಂಡು ಬೇರೆ ಇದ್ದರೆ ಅವರಿಗೆ ಬೆಲೆ ತಿಳಿದೀತು. ಯಾರಿಗೆ ನಾನು ಬೇಕೋ, ಅವರು ಬಂದು ನನ್ನಲ್ಲಿರಲಿ" ಎಂದೆನಿಸತೊಡಗಿತು ಅವರಿಗೆ.

ಅವರ ತಂದೆಯವರು ಇರುವವರೆಗೆ ಆ ವಿಚಾರ ತಳ್ಳಿಹಾಕಿದ್ದರು. ತಂದೆ ತೀರಿಕೊಂಡ ೪-೫ ವರ್ಷಗಳ ನಂತರವೇ ಅವರ ತಂದೆಯಿಂದ ಬಂದ ಸ್ಥಳದಲ್ಲಿ "ಸಂಜೀವಿನಿ" ಮನೆ ಕಟ್ಟಲು ಪ್ರಾರಂಭಿಸಿದರು. ಆಗ ತಮ್ಮ ಕೈಯಲ್ಲಿದ್ದುದು ಕೇವಲ ಮೂರು ಸಾವಿರ ರೂಪಾಯಿ. ಮನೆ ಕಟ್ಟಲು ಮುಂದೆ ಬಂದವರು ಪ್ರಸಿದ್ಧ ಕಂಟ್ರಾಕ್ಟರ್ ವರ್ಗೀಸ್. ಹೌಸಿಂಗ್ ಬೋರ್ಡ್ ಸಾಲ, ಬ್ಯಾಂಕ್ ಸಾಲ ಪಡೆದು ೧೯೭೧ರಲ್ಲಿ ಮನೆ ಸಿದ್ಧವಾಯಿತು. "ದೊಡ್ಡಮನೆ" ಗೆ ಅವರ ದೊಡ್ಡಣ್ಣ ಗ್ರೀಷ್ಮಕುಮಾರ, ದೊಡ್ಡತ್ತಿಗೆ (ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ರಿಟೈರ್ ಆಗಿ) ಬಂದರು. ಎರಡನೇ ಅಣ್ಣನ ಮಗಳು ಶ್ರೀಮಂತ ಮನೆತನದ ಸೊಸೆಯಾಗಿದ್ದು, ಹಿರಿಯಮಗ ಡಾಕ್ಟರ್ ಆಗಿದ್ದ. ಇನ್ನು ತನ್ನ ಸಂಸಾರ ಧರ್ತಾಕರ್ತಾ ಆಗಿ ಫರ್ಸ್ಟ್ ಜನರೇಷನ್ ಜವಾಬ್ದಾರಿ ವಹಿಸಿಕೊಳ್ಳಲಿ ಎಂಬುದು ಕುಸುಮಾಮನ ಇಚ್ಛೆ. ಆ ಪ್ರಕಾರ ತಂದೆ-ತಾಯಿ ಇಲ್ಲದ ಇವರ ಸೋದರ ಮಾವನ ಮಕ್ಕಳು 'ಸಂಜೀವಿನಿ' ಸದಸ್ಯರಾದರು. ಕುಸುಮಾಮ ತನ್ನ ಮನೆಗೆ "ಸಂಜೀವಿನಿ" ಎಂದು ಕರೆದರು. 'ದೀವಾನೀ ಆಮ್ ದೀವಾನೀ ಖಾಸ' ಎಂದು ಡ್ರಾಯಿಂಗ್ ರೂಂಗೆ ಕರೆದರು. ನಮ್ಮ ಖಣಿಯ ಕಲ್ಲುಗಳಿಂದ ಡೆಕೋರೇಟಿವ್ ಗೋಡೆಗಳು. ಇಡೀ ಮನೆಯಲ್ಲಿ ಕುಸುಮಾಮ ತಮ್ಮ ಕಲಾ ಹೃದಯ ಎರಕ ಹೊಯ್ದರು. ಯಾರಾದರೂ ಡ್ರಾಯಿಂಗ್ ರೂಮ್‌ಗೆ ಒಳಗಡಿ ಇಡುತ್ತಲೇ "ಓಹ್ ವಂಡರ್‌ಫುಲ್. ನಿಮ್ಮ ಮನೆ ತುಂಬಾ ಕಲಾತ್ಮಕವಾಗಿದೆ" ಎಂದ ಕೂಡಲೇ ಹಿಗ್ಗಿ ಹಿಗ್ಗಿ ಬಿಡುತ್ತಿದ್ದರು. ಮಧು ದಂಡವತೆ ಬಹಳ ಹೊಗಳಿದ್ದರು. ರಾಜಕಾರಣಿಗಳು, ಸಾಹಿತಿಗಳು, ಕಲಾವಿದರು ಮನೆಗೆ ಬರುತ್ತಿರಬೇಕೆಂದು ಅವರ ಅಪೇಕ್ಷೆ. ಕೆಲವರು "ನಿಮ್ಮ ಪತ್ನಿ ಕಲಾವಿದೆ ಅದ್ದರಿಂದ..' ಎಂದ ಕೂಡಲೇ

ಕುಸುಮಾಮ ಸುಮ್ಮನೇ ಅವಳಿಗೇಕೆ Credit ಕೊಡ್ತೀರಿ every inch is planned by me only" ಎನ್ನುತ್ತಿದ್ದರು. front elevation ಗೋಡೆ, ಕಂಪೌಂಡ್ ಇವು ಮನೆ ಕಟ್ಟಿ ಎಷ್ಟೋ ವರ್ಷಗಳ ನಂತರ ಸಾಧ್ಯವಾಯಿತು.

ಹಣಕಾಸಿನ ಅಡಚಣೆ. ಅನುಕೂಲವಾದಾಗ ಗೌಂಡಿನ್ನ ಹೈದರಾಬಾದ್‌ಗೆ ಕರೆದೊಯ್ದು "ಕಸ ಕಸಾಯಿ ಗಥಾಯಿ" ತೋರಿಸಿ ಅದರಂತೆ ಮಾಡಿದರು. ತಾವು ಎಂದೋ 'ಕಸ್ತೂರಿ'ಯಲ್ಲಿ ಓದಿದ್ದ ಚೀನಾ ಭಾಷೆಯ ಸಂಕೇತದ ಲೇಖನಕ್ಕಾಗಿ ಕಾರ್ತೋಟಗೆ ಪತ್ರ ಬರೆದು ಭೀಮರಾಯರನ್ನು ಕಳಿಸಿ ತರಿಸಿ ಕಂಪೌಂಡ್‌ಗೆ ಆ ಸಂಕೇತ ಮಾಡಿಸಿದರು. ಕುಸುಮಾಮಿ, "ನನಗೆ ಎಲ್ಲದರಲ್ಲಿ perfection ಇರಬೇಕು. ತಿಳೀತೆ"? ಎನ್ನುತ್ತ ಅಷ್ಟು ಆಶೆಯಿಂದ "ಸಂಜೀವಿನಿ" ಯನ್ನು ಕಟ್ಟಿಸಿದ್ದ ಕುಸುಮಾಮ ತಮ್ಮ ಅನಾರೋಗ್ಯದಿಂದಾಗಿ ಬೆಂಗಳೂರಿನಲ್ಲಿ ನೆಲೆಸುವಂತಾದಾಗ ಒದ್ದಾಡಿ ಒದ್ದಾಡಿದ್ದು ಸಂಕಟವೆನ್ನಿಸುತ್ತದೆ. "ಸಂಜೀವಿನಿ"ಯೂ ಅವರಿಗೆ ಉಳಿಯಲಿಲ್ಲ.

ನಾಗನಹಳ್ಳಿ ತೋಟ : ಅವರಿಗೆ ಒಕ್ಕಲುತನ, ತೋಟವೆಂದರೆ ಅತೀವ ಸೆಳೆತವಿತ್ತು. ನಾಗನಹಳ್ಳಿಯ ಹೊಲಕ್ಕೆ ಹಣ ಸುರಿದು ಸುರಿದು ಬಾವಿ ತೋಡಿಸಿದ್ದು ತೋಟ ಸಮೃದ್ಧವಾಗಿ ಹುಲುಸಾಗಿದ್ದಾಗ ಊರೇ ಬಿಡಬೇಕಾದ ಪರಿಸ್ಥಿತಿ ಬಂದಿತ್ತು ಹಣದ ವ್ಯವಸ್ಥೆಗಾಗಿ ಬೇರ್‍ಯಾರಿಗೋ ಮಾರಾಟ ಮಾಡಿದಾಗ ಕುಸುಮಾಮ ಬಹಳ ಒದ್ದಾಡಿದ್ದರು.

೧೯೯೯ರಿಂದಲೇ ಕುಸುಮಾಮ ಒಳಗೇ ಕೊರಗತೊಡಗಿದರು. ಎರಡೆರಡು ಬೈಪಾಸ್ ಸರ್ಜರಿ. ಪೇಶೆಂಟ್ ಆಗಿದ್ದಾಗ ಅವರು ಎದೆಗುಂದಲಿಲ್ಲ. "ಕುಸುಮಾಮಿ -- ಕಷ್ಟ ನಷ್ಟಗಳು ದೇಹಬಾಧೆ, ರೋಗ-ರುಜಿನಗಳಿಗೆ ನಾನು ಅಂಜುವುದಿಲ್ಲ. ಆದರೆ ನಾನು ನಂಬಿದ ಆದರ್ಶ ತತ್ವಗಳಿಗೆ ಕುಠಾರ ಪೆಟ್ಟು ಬಿದ್ದಾಗ ಅಂಜುತ್ತೇನೆ" ಅನ್ನುತ್ತಿದ್ದರು. ಅವರ ಈ ನೋವು ನನಗೆ ಅರ್ಥವಾಗುತ್ತಿತ್ತು. ಶಾಸಕರೆಲ್ಲ ನಾವೂ tirp ಹೊರಟಾಗ ಕುಸುಮಾಮ "ವಾಘಾ ಬಾರ್ಡರ್", ಅಮೃತಸರ, ಸಿಮ್ಲಾ ನೋಡಲು ಇಚ್ಛೆ ವ್ಯಕ್ತಪಡಿಸಿದರು ಎರಡೆರಡು ಬೈಪಾಸ್ ಪೇಶೆಂಟ್ ಭೂಪ 'ಬರ್ತೀನಿ' ಎಂದಾಗ ದೇವರ ಮೇಲೆ ಭಾರ ಹಾಕಿ ಕರೆದೊಯ್ದು. ಆಶ್ಚರ್ಯವೆಂದರೆ ಉಳಿದ ಶಾಸಕರೂ ಅವರ ಕಂಪನಿ ಮೆಚ್ಚಿದ್ದರು. ಇವರ conversation ಕಲೆ, ಇವರ knowledge ನೋಡಿ ದಂಗಾಗಿದ್ದರು.

೧೯೯೯ ರಿಂದ ಕುಸುಮಾಮ ಒಳಗೇ ಕೊರಗತೊಡಗಿದರು. ಅವರೂ ಶಾಸಕರ ಜೊತೆಗೆ Trip ಬಂದರು. ಅವರಿಗೆ "ವಾಘಾ ಬಾರ್ಡರ್" ನೋಡುವ ಇಚ್ಛೆ, ಸಿಮ್ಲಾ, ಅಮೃತಸರ ನೋಡಿರಲಿಲ್ಲವೆಂದು ಬರಲು ಬಯಸಿದ್ದರು. ನನಗೆ ಭಯ. ಎರಡೆರಡು ಬೈಪಾಸ್ ಮಾಡಿಸಿಕೊಂಡ ಭೂಪ ಅಸ್ತಮಾ ಬೇರೆ. ದೇವರೇ ಗತಿ ಎಂದು ಅವರ ರಿಪೋರ್ಟ್ಸ್ ಎಲ್ಲ ಪ್ಯಾಕ್ ಮಾಡಿ ಕರೆದೊಯ್ದೆ. ಆಶ್ಚರ್ಯವೆಂದರೆ Trip ಪೂರ್ತಿ ಆರಾಂ ಇದ್ದರು. ನನ್ನ ಸಹ ಶಾಸಕರನ್ನು ನಗಿಸಿದರು. ಹರಟೆ ಹೊಡೆದರು.

ಗುಲ್ಬರ್ಗಾ ತಲುಪಿದ ಮೇಲೆ ಯಥಾ ರೀತಿ ಕೊರಗು. ಯಾಕೆ ಎಂದು ನನಗೆ ಹೊಳೆಯಿತು. ಅವರ ತಂದೆಯ ವಿಲ್ ಪ್ರಕಾರ ಕುಸುಮಾಮ ಅವರ ಹಿರಿಯಣ್ಣ ಇಬ್ಬರೂ Executors. ತಂದೆಯ ಇಚ್ಛೆಯ ಪ್ರಕಾರ ಕರ್ತವ್ಯಗಳನ್ನು ನಿಭಾಯಿಸಿದ್ದಾಯ್ತು. ಅಷ್ಟು ಅವರ ಮನೆ ಬಿದ್ದುಹೋಗಿ ಅದನ್ನು ಮಾರಿ ಎಲ್ಲ ವಾರಸುದಾರರಿಗೆ ಹಂಚುವ ಯೋಜನೆಯಿಂದ ಕೋರ್ಟಿಗೆ ಪರವಾನಿಗಿ ಬೇಡಿದ್ದರು. ಆದರೆ ಅಣ್ಣನ ಮಗ ಇವರಿಬ್ಬರ ಮೇಲೆ ತಡೆಯಾಜ್ಞೆ ದಾವಾ ಮಾಡಿದ್ದ. ಸುಮಾರು ೨೦ ವರ್ಷ ಬಡಿದಾಡಿ ಎಲ್ಲ ಕೋರ್ಟ್‌ಗಳಲ್ಲಿ ಕುಸುಮಾಮನಂತೇ ಆಗಿದ್ದರೂ ಹೈಕೋರ್ಟಿನಲ್ಲಿ ಬಿದ್ದಿತ್ತು. ಅದೇ ಕೊರಗು ಹಚ್ಚಿಕೊಂಡಿದ್ದರು. ಎಂತಹ ಮನೆತನ? ಹೇಗಾಯ್ತು? ಕುಸುಮಾಮನಿಂದ ಕೆಲ ತಮ್ಮಂದಿರು, ತಂಗಿ ಒಂದಲ್ಲ ಒಂದು ಕಾರಣದಿಂದ ದೂರವಾಗಿ ಇತ್ತೀಚಿಗೆ ಅವರಿಗೆ ಯಾರಿಗೆ ಯಾರೂ ಇಲ್ಲವೆನಿಸಿ ಒಂದು ತರಹದ ಏಕಾಂತ ಬಯಸತೊಡಗಿದರು. ಆಧ್ಯಾತ್ಮಿಕ ಪುಸ್ತಕಗಳನ್ನು ಹೆಚ್ಚು ಓದತೊಡಗಿದರು. ತಮ್ಮ ತಂದೆಯವರು ಮಾಡುತ್ತಿದ್ದ ಅನಂತವ್ರತವನ್ನು ಮುಂದುವರೆಸಿದರು. ಹನುಮ ಜಯಂತಿ ಅಂತೂ ಶ್ರದ್ಧೆಯಿಂದ ಅವರಿಂದ ಧಾರೆ ಪಡೆದು ವ್ರತ ಆಚರಿಸುತ್ತಿದ್ದರು. ಇತ್ತೀಚಿಗೆ ಹರಿಕಥಾಮೃತಸಾರ ಗೀತ ಪಾಠ ಮಾಡಿಕೊಳ್ಳುತ್ತಿದ್ದರು. ಭಾವನಾಜೀವಿಯೂ ಹೌದು. ದೇಶಭಕ್ತಿ ಗೀತೆ ಪ್ರಸಾರವಾದಾಗ ಭಾವವಿಭೋರರಾಗಿ ಬಿಡುವುದು. ಯಾವುದೋ ಲೋಕದಲ್ಲಿ ತೇಲುತ್ತ ಕನಸಿನ ಭಾರತ ಕಾಣುತ್ತಿದ್ದರು. ತೀರಿದ ತಂದೆಯ ಬಗ್ಗೆ ವಿಷಯ ಬಂದರೆ ಅಳಲಿಕ್ಕೆ ಶುರು ಮಾಡುತ್ತಿದ್ದರು. ಅಸಲು ಕುಸುಮಾಕರನನ್ನು ಕಳೆದುಕೊಂಡು ಬಿಟ್ಟೆ ಎನಿಸುತ್ತಿತ್ತು. ಆ ಧೈರ್ಯ, ಆ ಸಾಹಸ ಪ್ರವೃತ್ತಿ ಆ ಛಾತ್ರ ಹೃದಯ ಎಲ್ಲಿ ಹೋಯಿತು ಎಂದು ನನಗೆ ದುಃಖವಾಗುತ್ತಿತ್ತು. ಈ ಬಗ್ಗೆ ನಾನು ಅವರಿಗೆ ಧೈರ್ಯ ಹೇಳಲು ಹೋದರೆ, 'ಕುಸುಮಾಮಿ, ನಾನು ದೈಹಿಕ ನೋವಿಗೆ ಅಂಜಲಿಲ್ಲ. ಎರಡೆರಡು ಬೈಪಾಸ್ ಸರ್ಜರಿಗೆ ಎದೆಗುಂದಲಿಲ್ಲ. ಆದರೆ ನಾನು ನಂಬಿದ ತತ್ವ, ಆದರ್ಶಗಳಿಗೆ ಕುಠಾರ ಪೆಟ್ಟು ಬಿದ್ದಾಗ ಬಳಲಿ ಬಳಲಿ ನೋವು ಅನುಭವಿಸುತ್ತಿದ್ದೇನೆ. ದೊಡ್ಡ ಕುಟುಂಬ, ಆದರ್ಶ ಎಂಬ ಯಜಮಾನನಾಗಿ ನೋವು ನುಂಗಿದ್ದೇ ಬಹಳ' ಎನ್ನುತ್ತ ಮತ್ತೂ ಹೇಳುತ್ತಿದ್ದಮ್ಮು- 'ಕುಸುಮಾಮಿ, ನೀನು ನನ್ನ ಹೆಂಡ್ತಿ ಎಂಬ ಕಾರಣಕ್ಕೆ ನಿನ್ನ ಇಲ್ಲಿ ದ್ವೇಷಿಸುತ್ತಿದ್ದಾರೆ. ಕೀಳು ರಾಜಕೀಯ, ನೀನು ಸಾಹಿತಿ, ಈ ಭಾಗದ ಪ್ರಥಮ ಮಹಿಳಾ ವಕೀಲಳು, ಪಕ್ಷ ಸಂಘಟನೆಗೆ ಈ ಭಾಗದಲ್ಲಿ ಸಕ್ರಿಯ ದುಡಿದವಳು. ಆದರೆ ನಮ್ಮ ಪಕ್ಷದವರೇ ನಿನ್ನನ್ನು ಮುಂದೆ ಹೋಗಲು ಬಿಡುವುದಿಲ್ಲ. ನಿನಗೆ ಜೀವನದಲ್ಲಿ Recognition ಬೇಡವೆ? ವ್ಯಕ್ತಿಯ ಗುಣಗ್ರಾಹಿತ್ವವಿಲ್ಲದವರೊಡನೆ ಹೇಸಿಗೆ ಬರುತ್ತಿದೆ" ಎಂದಾಗ- 'ನೋಡ್ರಿ, ನಾನು ನಿಮ್ಮ ಹೆಂಡ್ತಿ ಎಂಬ ಪದವಿ ನನಗೆ ಸಾಕು. My Strength is Strength of ten because my heart is pure ಎಂಬ ನೀವು ನಂಬಿದ್ದ ಆದರ್ಶ ಬದುಕು ನನ್ನದೂ. ಅದೇ ನನಗೆ ತೃಪ್ತಿ' ಎಂದಾಗ ನನ್ನ ಹಣೆಗೆ ಮುತ್ತಿಟ್ಟು 'ನನಗೆ ಈಗ ಸಮಾಧಾನವಾಯ್ತು. ಎಲ್ಲರೂ ನನ್ನ ಬಿಟ್ಟು ದೂರಸರಿದಂತೆ ನೀನು ನನ್ನ

ಕೈಬಿಡುವುದಿಲ್ಲವಲ್ಲ' ಎನ್ನುತ್ತಿದ್ದರು.

ನಾನು ಸರಳಬಾರದು, ಸಹಿಸಿಕೊಳ್ಳಬೇಕು. ಸರಳಿವಾಗ ಅನುಕಂಪದ ಬದಲು ಅವರಿಗೆ ಬಹಳ ಸಿಟ್ಟು ಬರುತ್ತಿತ್ತಲ್ಲ. ಹೀಗಾಗಿ ನನಗೆ ಕ್ಯಾನ್ಸರ್ ಆದಾಗಲೂ ನಾನು ಆಗಿದೆ ಎಂಬುದನ್ನು ಬಹಳ ಸಹಜವಾಗಿ ಸ್ವೀಕರಿಸಿದಾಗ ಅವರು ತಲ್ಲಣಗೊಂಡರು. ಮಾನಸಿಕವಾಗಿ ರೋಗಗಳನ್ನು ನಾನು ಯಾರಿಗೂ ಹೇಳದೇ ನುಂಗಿಕೊಳ್ಳುವಂತೆ ಮಾಡಿದ್ದು ನಾನು ತಪ್ಪಿದೆನೆ ಎಂಬ ತಪ್ಪಿತಭಾವಕ್ಕೆ ಸಿಲುಕಿ ಕೊರಗತೊಡಗಿದರು.

೨೦೦೦ನೇ ಇಸ್ವಿಯಲ್ಲಿ ಅವರಿಗೆ ಥೈರಾಯಿಡ್ ಆಗಿದ್ದು treatment ಪ್ರಾರಂಭವಾದಾಗ ಅವರು ಜೀವನೋತ್ಸಾಹ ಕಳೆದುಕೊಂಡರು. ನಮ್ಮ ಜ್ಯೂನಿಯರ್ಸ್ ಮಾನವೇಂದ್ರರೆಡ್ಡಿ ಕೃಷ್ಣಮೂರ್ತಿಯವರನ್ನು ಬಹಳ ಹಚ್ಚಿಕೊಂಡು ಅವರ ಕಂಪನಿಯನ್ನು ಸದಾ ಬಯಸತೊಡಗಿದರು. 'ಕುಸುಮಾಮಿ... ನಾವು ಯಾರ್‍ಯಾರಿಗೋ ಮಾಡಿದ್ದು, ದೇವರು ನನಗೆ ಈ ಶಿಷ್ಯರನ್ನು ಕಳಿಸಿದ್ದಾನೆ ನೋಡು' ಎನ್ನುತ್ತಿದ್ದರು. ನಾನು ಮಾಜಿ ಶಾಸಕಿ ಆಗುವುದನ್ನೇ ಕಾಯುತ್ತಿದ್ದೆ. ಸಂಪೂರ್ಣ ಅವರ ಆರೈಕೆ ಮಾಡಲು ಸಿದ್ಧಳಾದೆ. ಆದರೆ ಅವರ ಚಿಕಿತ್ಸೆಗಾಗಿ ನಾನು ಬೆಂಗಳೂರಿಗೆ Shift ಆಗಬೇಕಾಯ್ತು. ಗುಲ್ಬರ್ಗಾ ಜಲ-ನೆಲ, ಅಲ್ಲಿಯ ಬಿಸಿಲು ಎಲ್ಲ ಪ್ರೀತಿಸುತ್ತಿದ್ದ ಕುಸುಮಾಮ ಬಹಳ ಕಷ್ಟದಿಂದ ಬೆಂಗಳೂರಿಗೆ ಹೊಂದಿಕೊಳ್ಳತೊಡಗಿದರು. ಆದರೆ ೨೦೦೧ರಲ್ಲಿ ನಾನು ರಿಟೈರ್ ಆಗಿ ಕೇವಲ ೨-೩ ವರ್ಷ ಅವರ ಸೇವೆಗೆ ಅವಕಾಶ ಸಿಕ್ಕಿತ್ತು. "ನಿನ್ನ ಸಾಹಿತ್ಯ, ಕಲೆ ಎಲ್ಲ ಬಿಟ್ಟು ನನ್ನ ಸೇವೆ ಮಾಡಬೇಕಾಯ್ತು" ಎಂದು ಪೇಚಾಡಿದಾಗ "ಕುಸುಮಾಮ, ನೀನು ನನಗೆ ಸ್ಥಾನಮಾನ ಕೊಟ್ಟೆ, ಎಲ್ಲ ಸುಖಪಟ್ಟೆ. ಈಗ ನಿನ್ನ ಕಷ್ಟದಲ್ಲಿ ನಾನು ಕಷ್ಟಪಟ್ಟರೆ ಸಂಕೋಚವೇಕೆ?" ಎಂದಾಗ ಅಂತರ್ಮುಖಿ ಆಗಿಬಿಡುತ್ತಿದ್ದರು.

ಎರಡು ಸಾವಿರದ ಎರಡನೇ ಇಸ್ವಿ ಡಿಸೆಂಬರ್ ತಿಂಗಳು. 'ನನ್ನ ಅವಸಾನ ಕಾಲ ಸಮೀಪಿಸುತ್ತಿದೆ. ಎಲ್ಲರನ್ನೂ ಕರೆಸಿ ಭೆಟ್ಟಿ ಮಾಡಿಸು' ಎನ್ನತೊಡಗಿದರು. ತಲೆಯ ಹತ್ತಿರ ಪಂಚಾಂಗ ಇಟ್ಟುಕೊಂಡು ನೋಡುತ್ತಿದ್ದರು.ನವೆಂಬರ್ ೧೬. ಅಸ್ತಮಾ ಪೀಡಿತರಾಗಿದ್ದ ಅವರನ್ನು ಸೇಂಟ್ ಜಾನ್ ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದೆ. ೧ಲಕ್ಕೆ Discharge ಮಾಡಿದಾಗ ಉಲ್ಲಸಿತರಾಗಿ ಬಂದಿದ್ದರು. ಆದರೆ ಅವರ ತಂದೆಯ Will Case ಚಿಂತೆ ಮುತ್ತಿತ್ತು.

ಹೊಸ ವರುಷ ಕಾಲಿಟ್ಟಂತೆ ತಾ. ೨ ರಂದು ಕುಸುಮಾಮನ ಮಿತ್ರ ಜಸ್ಟೀಸ್ ಮುರಲೀಧರರಾವ್ ಅಗಲಿದ್ದರು. ನಾನು ಅವರಿಗೆ ತಿಳಿಸಿರಲಿಲ್ಲ. ೨ನೇ ತಾರೀಕು ಧಾರಾವಾಹಿಗಳನ್ನು ನೋಡಿ, ತಮ್ಮನ ಹೆಂಡ್ತಿ ಗೀತಳಿಂದ ಹಾಡು ಹೇಳಿಸಿ, ತಾವೂ ಹೇಳಿ, ನಗು ನಗುತ್ತ ರಾತ್ರಿ ೧೧.೩೦ಕ್ಕೆ ನಮ್ಮನ್ನು ಬಿಟ್ಟು ಅಗಲಿದರು.

ಕುಸುಮಾಮ ಎಲ್ಲೂ ಹೋಗಿಲ್ಲ, ಅವರ ಸ್ಮೃತಿ ನನ್ನಲ್ಲಿ ಜೀವಂತವಾಗಿದೆ.

ನಮ್ಮ ಅಣ್ಣ

❁ ಅನಿರುದ್ಧ ದೇಸಾಯಿ,

ಸರಿತಾ ಭಾಭಿ ಅವರಿಂದ ಸ್ವಾತಂತ್ರ್ಯ ಹೋರಾಟಗಾರ, ಲೋಹಿಯಾವಾದಿ, ರಾಜಕೀಯ ನೇತಾರ, ಸಹೃದಯದ ಕುಸುಮಾಕರ ದೇಸಾಯಿ ಅವರ ಸ್ಮರಣಾರ್ಥ ಸಂಸ್ಮರಣಾ ಗ್ರಂಥದ ಪ್ರಕಟಣೆಯ ವಿಚಾರ ತಿಳಿದಾಗಿನಿಂದಲೇ ನಾನು ಬರೆಯಬೇಕಾದ ವಿಷಯದ ಬಗ್ಗೆ ಯೋಚನೆ ಪ್ರಾರಂಭವಾಯಿತು.

ಶ್ರೀ ಕುಸುಮಾಕರ ದೇಸಾಯಿ ಸಮಾಜದಲ್ಲಿ, ರಾಜಕೀಯದಲ್ಲಿ, ಅಡ್ವೋಕೇಟರ ಗುಂಪು, ಮುಂತಾದ ದೊಡ್ಡ ಗುಂಪಿನಲ್ಲಿ ಇದ್ದರೂ ವೈಶಿಷ್ಟ್ಯದಿಂದ ಬಹಳ ಎತ್ತರದವರೆಂದು ಗುರ್ತಿಸಲ್ಪಡುವ ವ್ಯಕ್ತಿ. ಅವರ ಬಗ್ಗೆ ಸಮಾಜದ ಧುರೀಣರು, ರಾಜಕೀಯ ಮುಖಂಡರು ಅಡ್ವೋಕೇಟರುಗಳು, ಅವರನ್ನು ಬಹಳ ಸಮೀಪದಿಂದ ನೋಡಿದವರು. ಪ್ರೀತಿ ಅಭಿಮಾನ, ಗೌರವಗಳಿಂದ ನೋಡಿದವರು ಸಾವಿರಾರು ಜನರಿದ್ದಾರೆ. ಅವರು ಬಹಳ ಸಾಮರ್ಥ್ಯದಿಂದ ಕುಸುಮಾಕರರ ಜೀವನದ ಯಶೋಗಾಥೆ ಬರೆಯಬಲ್ಲರು. ಆದರೆ ಅವರ ಬಾಲ್ಯ, ವಿದ್ಯಾರ್ಥಿ ಜೀವನ ಹಾಗೂ ಮನೆತನದ ಆಗು ಹೋಗುಗಳಲ್ಲಿನ ಪಾತ್ರ, ಇದನ್ನು ಬರೆಯಬಲ್ಲವರು ಖಂಡಿತ ಬಹಳ ಜನರಿಲ್ಲ. ಕೆಲವೇ ಜನರಲ್ಲಿ ಖಂಡಿತ ನಾನೂ ಒಬ್ಬ ಎಂದುಕೊಂಡಿದ್ದೇನೆ.

ಶ್ರೀ ಕುಸುಮಾಕರ ದೇಸಾಯಿ ಮನೆಯಲ್ಲಿ ಮಾತ್ರ ಕುಸುಮಾಕರ (ಹಿರಿಯರಿಗೆ), ಬಹಳ ಬೇಕಾದವರಿಗೆ ಕುಸುಮ, ನಮ್ಮೆಲ್ಲ ಚಿಕ್ಕವರಿಗೆ ಕುಸುಮಣ್ಣ.

ನಾನು ಚಿಕ್ಕಂದಿನಲ್ಲಿಯೇ ಆತನಿಂದ ಬಹಳ ಪ್ರಭಾವಿತನಾದ ವ್ಯಕ್ತಿ. ಅದಕ್ಕೆ ಕಾರಣ ಮೊದಲನೆಯದು ಆತನೊಡನೆ ನನಗಿದ್ದ ಸಾಮೀಪ್ಯ. ಒಂದು ರೀತಿಯಲ್ಲಿ ಇಂಟರಮಿಡಿಯಟ್‌ವರೆಗಿನ ನನ್ನ ವಿದ್ಯಾರ್ಥಿಜೀವನ ಮುಗಿಯುವವರೆಗೆ ನಾನು ಆತನ ನೆರಳೇ ಆಗಿರಬಹುದೇನೋ ಎಂದುಕೊಂಡಿದ್ದೇನೆ.

ನಾನು ಕುಸುಮಣ್ಣನ ಚಿಕ್ಕಪ್ಪ ಶ್ರೀ ರಾಘವೇಂದ್ರ ದೇಸಾಯಿ ಕುಕನೂರ ಎಂದೇ ಪ್ರಸಿದ್ಧರಾದ (ವಿದ್ಯಾನಂದ ಗುರುಕುಲ ಕುಕನೂರ) ರಾಷ್ಟ್ರೀಯ ಶಾಲೆಯ ಸಂಸ್ಥಾಪಕರ ಹಿರಿಯ ಮಗ. ನಾನು ೭ನೇ ಇಯತ್ತೆವರೆಗೆ ಕುಕನೂರಲ್ಲಿ ಓದಿ, 8ನೇ ವರ್ಗ ಹೈಸ್ಕೂಲ ವಿದ್ಯಾಭ್ಯಾಸಕ್ಕೆಂದು ಕಲಬುರ್ಗಿಗೆ, ನಮ್ಮ ದೊಡ್ಡಪ್ಪನವರಾದ ಶ್ರೀ ಸಂಜೀವರಾವ ದೇಸಾಯಿ ಅಡ್ವೋಕೇಟರು ಅವರಲ್ಲಿ ಬಂದವ. ಆದರೆ ಅದಕ್ಕೂ ಮೊದಲಿನಿಂದಲೇ ನನಗೆ ತಿಳಿದಂತೆ. ಪ್ರತಿ ಬೇಸಿಗೆ ರಜಾದಿನಗಳಲ್ಲಿ ಹಿಂದಿನ ಮೀಟರ್‌ಗೇಜ (MSM) ಎಮ್.ಎಸ್.ಎಮ್. ರೈಲಿನಲ್ಲಿ, ಬನ್ನಿಕೊಪ್ಪ ಗದಗ-ಹುಟಗಿವರೆಗೆ ನಂತರ ಕಲಬುರ್ಗಿವರೆಗೆ "GIP" ರೈಲಿನಲ್ಲಿ ಪ್ರವಾಸಮಾಡುತ್ತಿದ್ದವ. ಆ ನೆನಪೇ, ಆಗಿನ ಅನುಭವಗಳೇ ಇಂದಿಗೂ ನನ್ನನ್ನು

ಪುಳಕಿತಗೊಳಿಸುತ್ತಿದ್ದಂಥವು.

ಕಲಬುರ್ಗಿಗೆ ಓದಲು ಬಂದಾಗ ಮೊದಲು ನಾನು ಕಲಬುರ್ಗಿ ಮನೆಗೆ, ಹೆಚ್ಚಾಗಿ ಶಾಲೆಯ ವಾತಾವರಣಕ್ಕೆ, ಚಿಕ್ಕ ಊರು ಕುಕನೂರಿನಿಂದ ಕಲಬುರ್ಗಿ ಪಟ್ಟಣದ ವಾತಾವರಣಕ್ಕೆ ಹೊಂದಿಕೊಳ್ಳಬೇಕಾಗಿತ್ತು. ನಾನು ಸೇರಿದ ಶಾಲೆ, ನಮ್ಮ ತಂದೆಯವರು ಹಿಂದೆ ಅಭ್ಯಾಸ ಮಾಡಿದ ನೂತನ ವಿದ್ಯಾಲಯ. ಅಲ್ಲಿ ಮರಾಠಿ ವಿದ್ಯಾರ್ಥಿಗಳ ಪ್ರಭಾವ ಸಾಕಷ್ಟಿತ್ತು. ಹೀಗಾಗಿ ನನಗೆ ಮರಾಠಿ ಮಿತ್ರರೂ ಆದರು. ನಾನು ಮರಾಠಿ ಕಲಿಯಬೇಕೆಂದು ನಿರ್ಧಾರಮಾಡಿಕೊಂಡು, ಕುಸುಮಣ್ಣನನ್ನೇ ಮಾರ್ಗದರ್ಶನ ನೀಡಲು ಕೇಳಿದೆ. ಅದಕ್ಕೆ ಆತ ಮೊದಲು ಮರಾಠಿ ಮಾತನಾಡಲು ಪ್ರಯತ್ನಿಸು, ತಿಳಿಯದಿದ್ದಾಗ 'ಮ್ಹಣಜೆಕಾಯ್" (ಅಂದರೆ ಏನು ?) ಎಂದು ಕೇಳು, ಎದುರಿಗಿದ್ದವರು ನಿನಗೆ ತಿಳಿಸುತ್ತಾರೆ ಎಂದು ಮೊದಲು ಪಾಠ ಪ್ರಾರಂಭಿಸು ಎಂದ ಅಂದೇ ಶಾಲೆಯಲ್ಲಿ ಗೆಳೆಯನೊಬ್ಬ, ನಾನು ಕೇಳಿದ ಪ್ರಶ್ನೆಯೊಂದಕ್ಕೆ "ಹೋಯ" ಹೌದು ಎಂದು ಕೂಡಲೇ ನನ್ನ ಮೊದಲ ಪಾಠದಂತೆ 'ಮ್ಹಣಜೆಕಾಯ್'ಎಂದು ಮರುಪ್ರಶ್ನೆಹಾಕಿದೆ. ಆತ ತಬ್ಬಿಬ್ಬಾದ. ಮನೆಯಲ್ಲಿ ಈ ವಿಷಯ ದೊಡ್ಡ ನಗೆಗೆ ಕಾರಣವಾಯಿತು. ಅಂತೆಯೇ ಒಂದು ಹೊಸ ನಿರ್ಧಾರವೂ ಆಯಿತು. ಹೇಗೂ ಕುಸುಮಣ್ಣನ ಬಹಳ ಮಂದಿ ಗೆಳೆಯರು ಮರಾಠಿ ಮಾತನಾಡುವವರಿದ್ದರು. ನಾನು ಅಂದಿನಿಂದ ಮರಾಠಿ ಗುಂಪಿನಲ್ಲಿ ಸೇರಿದೆ. ನಾವಿಬ್ಬರೂ ಮರಾಠಿಲ್ಲಿಯೇ ಮಾತಾಡಲು ಪ್ರಾರಂಭಿಸಿದೆವು. ನನಗೆ ಆತ "ತುಕ್ಯಾ" ಮರಾಠಿಯಲ್ಲಿ ಪ್ರಿಯವಾದ ಶಬ್ದ ಮಿತ್ರನಿಗೆ, ಎಂದು ಬೋಧಿಸಲು ಪ್ರಾರಂಭಿಸಿದ. ಹೊರಗಿನವರು ಬಂದಾಗ ಮಾತ್ರ ನನ್ನ ಪರಿಚಯ "ತುಕೋಜಿರಾವ" ಆಗುತ್ತಿತ್ತು.

ಈ ಒಪ್ಪಂದದಲ್ಲಿಯೂ ಒಂದು ವಿಶೇಷತೆ ಇತ್ತು. ಮರಾಠಿಯಲ್ಲಿ ಮಾತನಾಡಿದಾಗ ಗೆಳೆಯರಂತೆ. "ಕಾಯರೇ" "ಏನಪಾ" ಎಂದು ಬೋಧನೆ ಇರಬಹುದಾಗಿತ್ತು. ಆದರೆ ಅಣ್ಣಾ-ತಮ್ಮ ಎಂದು ಸಂಭಾಷಣೆ ಇದ್ದಾಗ ಅದು ಖಂಡಿತವಾಗಿಯೂ ಕನ್ನಡದಲ್ಲಿಯೇ ಇರುತ್ತಿತ್ತು. ಹೀಗೆ ಅಣ್ಣಾ ನನ್ನ ಗೆಳೆಯನೂ ಆಗಿದ್ದ. ಕಲಬುರ್ಗಿಯ ಕನ್ನಡ ೧೯೫೦-೫೧ರ ಸುಮಾರಿಗೆ ಬಹಳಷ್ಟು ಮರಾಠಿ-ಉರ್ದು ಮಿಶ್ರಿತವಾಗಿತ್ತು. ಮಾತನಾಡುವ ಶೈಲಿ ಕೂಡ ವಿಶಿಷ್ಟವೇ ಆಗಿತ್ತು. ಅದನ್ನು ಆತ ಚೆನ್ನಾಗಿಯೇ ಅನುಕರಣೆ ಮಾಡುತ್ತಿದ್ದ. ನಾವು ಕನ್ನಡದಲ್ಲಿ ಮಾತನಾಡುವಾಗ "ನಾಹೀ" ನಾನೂಹೀ (.......ಸಹಿತ) "ನೀಹಿ" ನೀನೂಹಿ. (ನೀನೂ ಸಹಿತ) ಎನ್ನುವ ಶೈಲಿಯಲ್ಲಿ ಮಾತನಾಡುತ್ತಿದ್ದೆವು.

ಈ ಭಾಷೆಗೆ ಅನುಗುಣವಾಗಿ ನಾನು ಮನೆಯಲ್ಲಿ ಪ್ರೀತಿಯಿಂದ ಕರೆಯಲ್ಪಡುವ "ಅನ್ನಿ" ಬದಲಾಗಿ ಹೊರಗಿನವರು ಬಂದಾಗ "ಅಣಪೀರಪ್ಪ" ಆಗುತ್ತಿದ್ದೆ.

ನಾನು ಹೈಸ್ಕೂಲಿನಲ್ಲಿ 'ಹೈಯರ ಮ್ಯಾಥ್ಸ್' "ಐಚ್ಛಿಕ ಗಣಿತ" "ಆಲಾರಿಯಾಜಿ" ತೆಗೆದುಕೊಂಡೆ. ಆದರೆ "ಎಲಿಮೆಂಟರಿ" ಸಾಮಾನ್ಯ ಗಣಿತದಲ್ಲಿಯೇ "ಪ್ರೂಜಿ" ಗಿಂತ ಹೆಚ್ಚು

ಮಾರ್ಕು ಬಂದಿತ್ತು. ಅದನ್ನು ಆಳಿಸಿ ರಜೆಯಲ್ಲೂ ಎಲಿಮೆಂಟರಿ ಗಣಿತದ ಎಲ್ಲ ಕಷ್ಟಕರ "ಅಭ್ಯಾಸಗಳನ್ನು" ಹಟದಿಂದ ಬಿಡಿಸಲು ಪ್ರೋತ್ಸಾಹಿಸಿದ. ಹೀಗಾಗಿ ಶಾಲೆಯಲ್ಲಿ ಐಚ್ಛಿಕಗಣಿತದಲ್ಲಿ ಉತ್ತಮ ಅಂಕ, ಸಾಮಾನ್ಯ ಗಣಿತದಲ್ಲಿ ಸ್ವಲ್ಪದರಲ್ಲಿ 'ಪಾರು' ಎಂಬ ಬಿರುದು ತಪ್ಪಿ, ನಾನು ಒಳ್ಳೆಯ ವಿದ್ಯಾರ್ಥಿ ಆದೆ.

ಹಾಂ! ನಾನು ಕಲಬುರ್ಗಿಗೆ ಓದಲು ಬಂದ ವರ್ಷವೇ ನಮ್ಮ ತಾಯಿ ತೀರಿಕೊಂಡರು. ಹೀಗಾಗಿ ನಮ್ಮ ದೊಡ್ಡಪ್ಪ ಅವರು ನಮ್ಮ ತಮ್ಮ ತಂಗಿಯರನ್ನೂ ಕಲಬುರ್ಗಿಗೆ ಕರೆಸಿಕೊಂಡರು. ಅಂದರೆ ಮನೆಯಲ್ಲಿ ಹುಡುಗರ ದೊಡ್ಡ ದಂಡೇ ಇದ್ದಿತು. ಆ ಗುಂಪಿನಲ್ಲಿ ಹಿರಿಯ ನಮ್ಮ ಕುಸುಮಣ್ಣ.

ಮೊದಲು ಆತನ ಪ್ರಭಾವ, ಪುಸ್ತಕಗಳನ್ನು ಓದುವ ಬಗ್ಗೆ ಆಗಿತ್ತು. ಕಲಬುರ್ಗಿಯಲ್ಲಿ ಕೆರೆಯ ಮೇಲಿದ್ದ ಕೇಂದ್ರ ಗ್ರಂಥಾಲಯದ ಸದಸ್ಯನಾದ. ಆತ ನನ್ನನ್ನು ಗ್ರಂಥಾಲಯಕ್ಕೆ ಪರಿಚಯಿಸಿ ಒಂದು ಕಾರ್ಯಕ್ರಮ ಹಾಕಿಕೊಟ್ಟ. ನಾವಿಬ್ಬರೂ ದಿನಾಲು ಒಂದು ಕನ್ನಡ ಪುಸ್ತಕ ಓದಲೇಬೇಕು. ಅದನ್ನು ಪಾಲಿಸಲೆಂದು ನಾನು ಸಾಧಾರಣವಾಗಿ ಎರಡು ದಿವಸಗಳಿಗೊಮ್ಮೆ ಯಾದರೂ ಗ್ರಂಥಾಲಯಕ್ಕೆ ಹೋಗಿ ಕನ್ನಡ ಪುಸ್ತಕಗಳನ್ನು ತಂದು ದಿನಕ್ಕೊಂದು ಲೆಕ್ಕದಲ್ಲಿ ಓದಬೇಕಾಗಿತ್ತು. ಅದನ್ನು ಒಂದು ವರ್ಷ ಪಾಲಿಸಿದೆ. ಒಂದು ಹಂತದಲ್ಲಿ ಕಲಬುರ್ಗಿ ಗ್ರಂಥಾಲಯದ ಕಾದಂಬರಿ, ಕಥೆ ವಿಭಾಗದಲ್ಲಿ ನಾವು ಓದಲಾರದ ಪುಸ್ತಕವೇ ಇಲ್ಲ ಎಂದು ಹೇಳುವಷ್ಟರ ಮಟ್ಟಿಗೆ ನಮ್ಮ ಓದಿನ ಘಟ್ಟ ಮುಟ್ಟಿತ್ತು.

ಆಗ ಕುಸುಮಣ್ಣ ಇಂಗ್ಲಿಷ ಪುಸ್ತಕಗಳನ್ನು ಓದುವ ಅಪೇಕ್ಷೆಪಟ್ಟ. ನಾನು ತಂದ ಮೊದಲ ಪುಸ್ತಕಗಳಲ್ಲಿ ಪ್ರಸಿದ್ಧ ಇಂಗ್ಲಿಷ ಕಾದಂಬರಿ "ಟೆಸ್, ಹಾರ್ಡಿಯ" ಕತೆಗಳು. ಈ ಇಂಗ್ಲಿಷ್ ಪುಸ್ತಕಗಳನ್ನು ದಿನಾಲು ಒಂದರಂತೆ ಎಂದು ನನಗೆ ಓದಲು ಕಷ್ಟವಾಯಿತು. ನಾನು ಕುಕನೂರಿನಲ್ಲಿ ಕನ್ನಡ ಹಾಗೂ ಉರ್ದು ಭಾಷೆಯಲ್ಲಿ ಕಲಿತವ. ಇಂಗ್ಲಿಷ ಪುಸ್ತಕ ಓದಲು ನನಗೆ ೫-೬ ದಿನಗಳೇ ಬೇಕಾದವು. ಅದಕ್ಕಾಗಿ ನಾನು ಆತನಿಗೆಂದೇ ಇಂಗ್ಲಿಷ ಪುಸ್ತಕಗಳನ್ನು ಗ್ರಂಥಾಲಯದಿಂದ ತರಲು ಪ್ರಾರಂಭಿಸಿದೆ. ನಾನು ಕೆಲವೊಂದು ಪುಸ್ತಕಗಳನ್ನು ಮಾತ್ರ ಓದುತ್ತಿದ್ದೆ. ಆತನ ಈ ದಿನಕ್ಕೊಂದು ಪುಸ್ತಕದ ಕ್ರಮ ಎಷ್ಟು ಆಳವಾಗಿತ್ತೆಂದರೆ ಅದರಿಂದ ಆತನ ಓದುವ ವೇಗ, ಗ್ರಹಣ ಮಾಡುವ ಶಕ್ತಿ ಅದ್ಭುತವಾಗಿ ಬೆಳೆದಿತ್ತು. ಬೆಂಗಳೂರಿನಿಂದ ಕಲ್ಬುರ್ಗಿಗೆ ರೈಲಿನಲ್ಲಿ ಬಂದರೆ (೧೯೫೬ ರ ನಂತರ ಅವಧಿ ಬಗ್ಗೆ ಹೇಳುತ್ತಿದ್ದೇನೆ) ರೇಲ್ವೆ ಸ್ಟೇಶನ್ನಿನಲ್ಲಿ ಒಂದು ಪುಸ್ತಕ ಖರೀದಿಸಿ ಕಲಬುರ್ಗಿಗೆ ಬರುವವರೆಗೆ ಅದನ್ನು ಸಂಪೂರ್ಣವಾಗಿ ಮುಗಿಸುವ ಮಟ್ಟಿಗೆ ಸಾಮರ್ಥ್ಯ ಬೆಳೆಸಿಕೊಂಡಿದ್ದ.

ಈ ವಿವರ ಬರೆಯುತ್ತಿರುವಾಗ ಏನಿಲ್ಲೆಂದರೂ ಕನಿಷ್ಠ ೬೦ ವರ್ಷಗಳ ಹಿಂದಿನ ನೆನಪನ್ನು ತಂದುಕೊಳ್ಳುತ್ತಿದ್ದೇನೆ. ಹಾಗೆಂದು ಕೆಲ ವಿಷಯಗಳ ವಿವರಣೆಯಲ್ಲಿ ಸ್ವಲ್ಪ ವ್ಯತ್ಯಾಸ

ಆಗಬಹುದು.

ಆದರೆ ಬಹಳ ವಿಷಯಗಳು ಇಂದಿಗೂ ನನ್ನ ಕಣ್ಣ ಮುಂದೆಯೇ ಇದೆ.

ಕುಸುಮಣ್ಣನು ಪುಸ್ತಕ ಓದುವುದು ಒಂದು "ಚಟ" ವೆನ್ನುವಷ್ಟು ಬಲಿಷ್ಠವಾಗಿತ್ತು. ಅದರ ಫಲವೆಂದರೆ ಆತ ಪ್ರಚಲಿತ ವಿಷಯಗಳ ಬಗ್ಗೆ ಪತ್ರಿಕೆಗಳಲ್ಲಿ ಬಂದ ಲೇಖನಗಳು, ಟೀಕೆ ಟಿಪ್ಪಣೆಗಳನ್ನು ಗ್ರಹಿಸಿ ಗೆಳೆಯರಲ್ಲಿ ಹೇಳಬಲ್ಲವನಾಗಿದ್ದ. ಅದಕ್ಕಾಗಿಯೂ ಆತನಿಗೆ ಗೆಳೆಯರಲ್ಲಿ ದೊಡ್ಡ ಬೇಡಿಕೆಯೇ ಇತ್ತು. ಬಹಳ ಮಿತ್ರರು ಆತನಿಂದ ಪ್ರಚಲಿತ ವಿಷಯಗಳ ಬಗ್ಗೆ ಮಾಹಿತಿ, ಆತನ ಅಭಿಪ್ರಾಯ ಕೇಳುತ್ತಿದ್ದರು.

ಆತ ನನಗಿಂತ ೨ ವರ್ಷ ಹಿರಿಯವ. ಶಾಲೆ, ಕಾಲೇಜುಗಳಲ್ಲಿಯೂ ಎರಡು ವರ್ಷ ಸೀನಿಯರು. ಆತನ ಗೆಳೆಯರಲ್ಲಿ ನನ್ನ ನೆನಪಿನಲ್ಲಿ ಸ್ಪಷ್ಟವಾಗಿ ಉಳಿದವನೆಂದರೆ ಕಲಬುರ್ಗಿ ಜೇಲಿನ ಡಾಕ್ಟರರಾಗಿದ್ದ ಶ್ರೀ ಶಂಕರರಾಯ ಕುಲಕರ್ಣಿ ಅವರ ಮಗ ಶ್ರೀ ಭಾನುದಾಸ ಕುಲಕರ್ಣಿ. ಬಹಳ ಮೇಧಾವಿ. ಕುಸುಮಣ್ಣನಂತೆಯೇ ಆತನೂ ಓದುವ "ಚಟಪಿದ್ದವ" ಮೇಲಾಗಿ ಶಾಖಾಧಿಕಾರಿ. ಅವರಿಬ್ಬರೂ ಸಾಧಾರಣವಾಗಿ ಮರಾಠಿ ಇಂಗ್ಲೀಷನಲ್ಲಿ ಮಾತನಾಡುತ್ತಿದ್ದರು. ನಾನು ಯಾವಾಗಲೂ ಕುಸುಮಣ್ಣನ ಹಿಂದೆಯೇ ಇರುತ್ತಿದ್ದವ. ಶ್ರೀ ಭಾನುದಾಸ ಜೊತೆಗಿನ ಚರ್ಚೆಗಳಲ್ಲಿ ಆಸಕ್ತಿಯಿಂದ ಅವರ ಮಾತು ಕೇಳುತ್ತಿದ್ದೆ. ಆದರೆ ಒಂದು ಮೋಜಿನ ವಿಷಯ ಅವರ ಬಗ್ಗೆ; ಅವರು ಕೆಲದಿನ ಪ್ರತಿದಿನ ಇಸ್ತ್ರಿ ಮಾಡಿದ ಪ್ಯಾಂಟ್, ಶರ್ಟ್ ಹಾಕಿಕೊಂಡು ಬರುತ್ತಿದ್ದವರು ಒಮ್ಮೆಲೆ ಮುದುಡಿದ ಬಟ್ಟೆ ಹಾಕಿಕೊಂಡು ಬಂಧರು. ನಾನು ಕುಸುಮಣ್ಣನನ್ನು "ಏನಿದು" ಎಂದೆ, ಆತ ಉತ್ತರಿಸಲಿಲ್ಲ. ಶ್ರೀ ಭಾನುದಾಸ ಅವರ ಮನೆಗೆ ಕರೆದುಕೊಂಡು ಹೋಗಿ ಅವರ ಕೊಠಡಿ ತೋರಿಸಿದ. ಅಲ್ಲಿ ಪುಸ್ತಕಗಳ ರಾಶಿ ಜೊತೆಗೆ ಖಾದಿ ಬಟ್ಟೆಗಳ ರಾಶಿಯೂ ಇತ್ತು. ಕಾರಣ ಇಷ್ಟೆ. ಒಂದು ಸಲಕ್ಕೆ ೧೦-೧೨ ಜೊತೆಬಟ್ಟೆ "ಗಂಜಿ" ಮಾಡಿಸಿಕೊಂಡು ಬಂದರೆ ಅವನ್ನು ದಿನಾಲು ಒಂದರಂತೆ ಒಗೆದಷ್ಟನ್ನೇ ಹಾಕಿಕೊಂಡು, ಸಾಯಂಕಾಲ ಅದನ್ನು ಒಂದು ಮೂಲೆಗೆ ಸೇರಿಸುತ್ತ ಒಂದು ಸಲ ಬಂದ ಎಲ್ಲ ಗಂಜಿಬಟ್ಟೆ ಮುಗಿದ ನಂತರ, ಮತ್ತೆ ಮೂಲೆಯಲ್ಲಿ ಹಾಕಿದ ಬಟ್ಟೆಗಳಲ್ಲಿ ಹೊಲಸಾಗದ ಬಟ್ಟೆ ಅಥವಾ ಅದರಲ್ಲಿಯೇ ಒಳ್ಳೆಯವನ್ನು ಹುಡುಕಿ ಹಾಕಿಕೊಳ್ಳುವ ಅಭ್ಯಾಸ ಬಹಳ ಮೋಜೆನಿಸಿತು. ಬಹಳ ನಿಗರ್ವಿ ಆತ. ಬಹಳ ಚಿಕ್ಕವಯಸ್ಸಿನಲ್ಲಿಯೇ ಹೈದ್ರಾಬಾದನಲ್ಲಿ ಡಿಗ್ರಿ ಕಾಲೇಜ ಸೇರಿಕೊಂಡ ನಂತರ ತೀರಿಕೊಂಡರೆಂದು ನೆನಪು.

ಪ್ರಿಯ ಕುಸುಮಣ್ಣಾ ಹಾಗೂ ಭಾನುದಾಸ ಅವರು ತಮ್ಮ ಮೈತ್ರಿಯಲ್ಲಿ ಬಹಳ ಹೊಂದಿಕೊಂಡವರಾಗಿದ್ದರು. ತಮ್ಮ ಸಾಯಂಕಾಲದ "ವಾಕಿಂಗನಲ್ಲಿ" ಹೊಸಪುಸ್ತಕಗಳ, ರಾಜಕೀಯ, ಸಾಮಾಜಿಕ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿದ್ದರು. ಅದು ಸಾಮಾನ್ಯವಾಗಿ ಮರಾಠಿಯಲ್ಲಿಯೇ (ಒಓಗೆಂದಾಗ-ನಾನು ಜೊತೆಗೇ ಇರುತ್ತಿದ್ದೆನೆಂದು ಮತ್ತೆ ಮತ್ತೆ

ಹೇಳಬೇಕಾಗಿಲ್ಲ) ಈ ರೀತಿಯಾಗಿಯೂ ನನಗೆ ಮರಾಠಿ ಭಾಷೆ ಬಗ್ಗೆ ಹೆಚ್ಚಿನ ಆಸಕ್ತಿ ಬೆಳೆಯಿತು ಹಾಗೂ 'ನವಕಾಳ' ಪತ್ರಿಕೆ ದಿನಾಲು ತಪ್ಪದೇ ಓದುವಂತಾಯಿತು.

ಕುಸುಮಣ್ಣನ ಓದುವ ಅದ್ಭುತ ಆಸಕ್ತಿಯಿಂದ ಆತನು-ಕನ್ನಡ, ಇಂಗ್ಲಿಷ, ಮರಾಠಿ-ಉರ್ದು ಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದಿದ್ದ ಎನ್ನಬಹುದು. ಆತನ ವಿವಿಧ ವಿಷಯಗಳ ಆಳವಾದ ಅಭ್ಯಾಸ ಅಧ್ಯಯನಗಳಿಂದ ಮುಂದೆ ಬೇರೆ ಬೇರೆ ಪ್ರಚಲಿತ ಸಮಸ್ಯೆಗಳ ಪರಿಹಾರಗಳ ಬಗ್ಗೆ ರಾಜಕೀಯ ಸಂಘಟನೆಗಳಿಗೆ ಯೋಜನೆಗಳನ್ನು ಬರೆದುಕೊಡುವಷ್ಟು ಸಾಮರ್ಥ್ಯ ಬೆಳೆದಿತ್ತು. ಹೈದ್ರಾಬಾದಿನಿಂದ ಸಂಸತ್ತಿಗೆ ಆಯ್ಕೆ ಆದ ಶ್ರೀಧರ ವಾಮನ ನಾಯಕರಂಥ ಸಂಸದರೂ ಕೂಡ ಈತನ ಸಾಮರ್ಥ್ಯ ಮೆಚ್ಚಿ 'ದಿಲ್ಲಿಗೆ' ಪಾರ್ಲಿಮೆಂಟಗೆ ನಡೆವಾಗ ಸಹಾಯಕ್ಕೆಂದು ಕರೆದುಕೊಂಡು ಹೋಗಿದ್ದರು.

ಈ ಬರಹದಲ್ಲಿ ಆತನ ಜೊತೆಗಿನ ನನ್ನ ಅನುಭವದ ಘಟನೆ ಬರೆಯುವಾಗ ಜೀವನ ಚರಿತ್ರೆ ಬರೆಯುವಂತೆ-ಸಂಬಂಧಿತ ವಿಷಯಗಳನ್ನು ಒಂದರ ಹಿಂದೆ ಒಂದು ಪೋಣಿಸುವುದು ಆಗದು. ಕಾರಣ ನೆನಪಾದಂತೆ ಸಂಬಂಧಿಸಿದ ವಿವರಗಳನ್ನು ಬರೆದುಕೊಂಡು ಹೋಗುತ್ತಿದ್ದೇನೆ. ಕಲಬುರ್ಗಿಯ ಕಾಲೇಜನಲ್ಲಿ ಆತನು ಇಂಟರ್‌ಮಿಡಿಯೆಟ್‌ಗಾಗಿ ಇಂಗ್ಲಿಷ ಮಿಡಿಯಂನಿಂದ ಮ್ಯಾಟ್ರಿಕ್ ಪಾಸಾಗಿದ್ದರೂ ಉರ್ದು ಮೀಡಿಯಂ ಸೇರಬೇಕಾಯಿತು. ನಂತರ ಹೈದ್ರಾಬಾದಿಗೆ ವರ್ಗಾಯಿಸಿಕೊಂಡ. ಅಲ್ಲಿ ಮತ್ತೆ ಆತನ ಅಭ್ಯಾಸದ ಕ್ರಮ ಮುಂದುವರೆಯಿತು. ವಿಶೇಷವಾಗಿ ರಾಜಕೀಯ ಚಟುವಟಿಕೆಗಳಿಗೆ ಹೆಚ್ಚಿನ ಚಾಲನೆ ದೊರೆಯಿತೆನ್ನಬಹುದು. ಅಲ್ಲಿ ಸಮಾಜವಾದಿ ತತ್ವಕ್ಕೆ ಮಾರು ಹೋದ ಆತ ತನ್ನ ಸಹಪಾಠಿಗಳಲ್ಲಿ, ಸ್ನೇಹಿತರಲ್ಲಿ ಅಂಥವರನ್ನೇ ಆರಿಸಿಕೊಂಡ. ಅವರಲ್ಲಿ ಶ್ರೀ ಕಾನಡೆ ಒಬ್ಬರು. ಶ್ರೀ ಕಾನಡೆ ಎತ್ತರದ ಗೌರವಯುತ ವ್ಯಕ್ತಿ (ಮನುಷ್ಯ). ಆತನೂ ನಂತರ ಲಾ ಮಾಡಿಕೊಂಡು ಭಾಷಾವಾರು ಪ್ರಾಂತರಚನೆ ನಂತರ ಮುಂಬಯಿ ಸೇರಿ ಅಲ್ಲಿ ಹೈಕೋರ್ಟ್ ಜಡ್ಜ ಆದರು. ಇವರೆಲ್ಲಾ ತಮ್ಮ ರಾಜಕೀಯ ತತ್ವಗಳಿಗಾಗಿ ಬದ್ಧರಾದವರು. ಯಾವ ಕಾರಣಕ್ಕಾಗಿಯೂ ತಮ್ಮ ನಿಷ್ಠೆ ಬದಲಾಯಿಸದವರು.

ಈಗ ಮತ್ತೆ ಕಲಬುರ್ಗಿಯ ವಿದ್ಯಾರ್ಥಿ ಹಾಗೂ ರಾಜಕೀಯ ಜೀವನಕ್ಕೆ ಬರುತ್ತೇನೆ.

ಕಲಬುರ್ಗಿಯ ಮಿತ್ರರಲ್ಲಿ ಶ್ರೀ ದೇವೇಂದ್ರಕೃಷ್ಣ ಅವರನ್ನು ನೆನೆಯಬೇಕು. ಅವರೂ ಪೋಲೀಸ ಅಧಿಕಾರಿಯ ಮಗ. ಚಕ್ಕರಕಟ್ಟೆಯ ಹತ್ತಿರ, ಹಿಂದಿನ ಸರಕಾರದಲ್ಲಿ ವಿದ್ಯಾಖಾತೆ ಮಂತ್ರಿ ಆಗಿದ್ದ, ಶ್ರೀ ಅಣ್ಣಾರಾವ ಗುಣಮುಖಿ ಅವರ ಮನೆಯ ಹಿಂದಿನ ಭಾಗದಲ್ಲಿ ಇದ್ದರು. ಆತನ ಇಬ್ಬರು ತಂಗಿಯರು, ನಮ್ಮ ತಂಗಿಯರು ಕಮಲಾ ಹಾಗೂ ಗಾಯಿತ್ರಿ ಅವರ ಸಹಪಾಠಿಗಳು. ಹಿಂದೀ ಮನೆಯ ಭಾಷೆ.

ಶ್ರೀ ದೇವೇಂದ್ರ, ಕುಸುಮಣ್ಣನ ಕಲಬುರ್ಗಿ ಕಾಲೇಜಿನ ಮಿತ್ರ. ರಾಜಕೀಯ ಆಂದೋಲನದಿಂದ ಎಷ್ಟು ಪ್ರಭಾವಿತನಾಗಿದ್ದನೆಂದರೆ ಹೈದ್ರಾಬಾದಿನ ರಜಾಕಾರರ ಮುಷ್ಟ

ಕೃತ್ಯಗಳಿಂದ ಸರಕಾರದ ವಿರುದ್ಧ ಆಂದೋಲನದಲ್ಲಿ ಭಾಗವಹಿಸಲು, ಅದು ಬಾರ್ಡರ ಕ್ಯಾಂಪಿನಲ್ಲಿ ಸೇರಿ ಉಗ್ರ ಪ್ರತೀಕಾರಕ್ಕೂ ಸಿದ್ಧ ಎನ್ನುವ ಮಟ್ಟಿಗೆ ಆಗ ಹೈದ್ರಾಬಾದ್ ರಾಜ್ಯದ ಸೀಮೆಗಳಲ್ಲಿ ನಡೆಯುತ್ತಿದ್ದ ಕ್ಯಾಂಪಗಳಿಂದ ಪ್ರಭಾವಿತನಾಗಿದ್ದ. ಅವರಿಬ್ಬರೂ ಸೇರಿ ಕೆಲ ಕೈಬಾಂಬುಗಳನ್ನು ಪಡೆದರು. ಅದರಲ್ಲಿ ಒಂದನ್ನಾದರೂ ಕಲಬುರ್ಗಿಯಲ್ಲಿ ಸ್ಫೋಟಿಸಬೇಕೆಂಬುದೇ ಅವರ ಉದ್ದೇಶ. (ಈ ವಿಷಯ ಬಹುಶಃ ಎಲ್ಲಿಯೂ ಉಲ್ಲೇಖವಾಗಿಲ್ಲ ಎಂದು ನನ್ನ ಕಲ್ಪನೆ) ಅದನ್ನು ಎಲ್ಲಿ ಸ್ಫೋಟಿಸಬೇಕು ಎಂಬುದನ್ನು ಚರ್ಚಿಸಿದಾಗ ಕಲಬುರ್ಗಿಯ ಚೌಕ ಪೊಲೀಸ ಸ್ಟೇಶನ್ನಿನ ಪಕ್ಕದಲ್ಲಿ ಇರುವ ಸದರ (ಜನರಲ್) ಪೋಸ್ಟ ಆಫೀಸ-ಗೋಡೆಯಲ್ಲಿ ಕಟ್ಟಲಾದ ಪೋಸ್ಟ್ ಡಬ್ಬಿಯೇ ಪ್ರಶಸ್ತವೆಂದು ಅನಿಸಿತು. ಹಾಗೆ ಬಾಂಬ್ ಸ್ಫೋಟಿಸಲು ಬಾಂಬಿನ 'ಬತ್ತಿ' Ignition wireಗೆ ಬೆಂಕಿ ಕೊರೆದು ಡಬ್ಬಿಯಲ್ಲಿ ಒಗೆದದ್ದೆ ತಡ ಅಲ್ಲಿ ಮೊದಲೇ ಸಿದ್ಧವಾಗಿರಿಸಿದ್ದ ವೇಗದ ಸೈಕಲ್ ಮೇಲೆ ಶಾಲು ಹಾಕಿ ಕುಳಿತರಾಯಿತು. ಇಳಿಜಾರಿಕೆ ಇರುವ ಕಾರಣ ಸೈಕಲ್ ಒಳ್ಳೆ ವೇಗದಿಂದ ಹಿಂದಿನ ಜಿಲ್ಲಾಧಿಕಾರಿ ಕಚೇರಿ ಸರ್ಕಲ್‌ಗೇಸೆ ಯಾವ ಶ್ರಮವೂ ಇಲ್ಲದೆ ಬಂದು ಬಿಡುವುದು. ಆಗ ಆಗುವ ಸ್ಫೋಟದ ಶಬ್ದದ ಹಾಗೂ ಉಂಟಾಗುವ ಗಡಿಬಿಡಿಯಲ್ಲಿ ಯಾರೂ ಈ ಕೃತ್ಯ ಎಸಗಿದರು? ಯಾರಿಂದ ಎಂಬ ಕಲ್ಪನೆ ಕೂಡ ಮಾಡರು. ಹಾಗೂ ಈ ಯೋಜನೆ ಜಾರಿ ಆಗುವುದು ಶ್ರೀದೇವೇಂದ್ರನ ಕಡೆಯಿಂದ ಪೊಲೀಸ ಅಧಿಕಾರಿಯ ಮಗ. ಸ್ಫುರದ್ರೂಪಿ ಬೇರೆ, ಅನುಮಾನಕ್ಕೆ ಕಾರಣವೇ ಬಾರದು ಎಂದು ಕಲ್ಪನೆ ಮಾಡಲಾಯಿತು. ಆದರೆ ಬಾಂಬಿನ "ಬತ್ತಿಗೆ" ಬೆಂಕಿ ತಗಲಿದ ನಂತರದ ಕಾಲಾವಕಾಶ ಎಷ್ಟು ಎಂಬುದನ್ನು ಲೆಕ್ಕಚಾರ ಹಾಕಿದಾಗ ೧೦-೨೦ ಸೆಕೆಂಡುಗಳೂ ಸಿಗಲಿಕ್ಕಿಲ್ಲ ಎಂದು ತಿಳಿಯಿತು. ಯೋಜನೆಯಂತೆ ಹೆಚ್ಚಿನ ಅವಕಾಶ ಸಿಗದೇ ಬಾಂಬು ದೇವೇಂದ್ರನ ಹಾಜರಾತಿಯಲ್ಲೇ ಸ್ಫೋಟಗೊಳ್ಳುವಿಕೆ, ಆತನು ಸಿಕ್ಕು ಬೀಳುವಿಕೆ ನಂತರ ಊರಲ್ಲಿ ನಡೆಯಬಹುದಾದ ಪ್ರತೀಕಾರದ ಸಾಧ್ಯತೆ ವಿಚಾರ ಮಾಡಿದಾಗ ಈ ಯೋಜನೆ ಕೈಬಿಡಬೇಕೆಂದೂ ನಾವು ಶಾಂತಿ ಮಂತ್ರ ಪಠಿಸುವುದೇ ಸೂಕ್ತ ಎಂದೂ ಪ್ರಕರಣಕ್ಕೆ ಅಲ್ಲಿಗೇ ಮುಕ್ತಾಯ ಹಾಡಲಾಯಿತು. ಈ ಯಶಸ್ವಿಯಾಗದ ಯೋಜನೆ ಬಗ್ಗೆ ಏಕೆ ಉಲ್ಲೇಖಮಾಡುತ್ತಿದ್ದೇನೆಂದು ನಾನೇ ಪ್ರಶ್ನೆ ಹಾಕಿಕೊಂಡೆ. ಇದು ಆಗಿನ ಸಂದರ್ಭದಲ್ಲಿ ನಿಜಾಂ ಸರಕಾರದ ವಿರುದ್ಧ ಯಾವುದೇ ಪ್ರತೀಕಾರದ ಯೋಜನೆ ಸರಿಯೇ ಎನ್ನಿಸುತ್ತಿತ್ತು. ನಂತರದ ದಿನಗಳಲ್ಲಿ ಶ್ರೀ ಭೈರಪ್ಪಾ ಭೂಸನೂರು-ಶ್ರೀ ದಿಗಂಬರಾವ ಕಲಮಣಕರ ಮುಂತಾದವರೊಡನೆ "ಕೇಸರ ಜವಳಗಾ" ಬಾರ್ಡರ ಕ್ಯಾಂಪನಲ್ಲಿ ಗಡಿ ಕ್ಯಾಂಪು ಕಾರ್ಯ ಚಟುವಟಿಕೆಗೂ ಪೀಠಿಕೆ ಆಗಿತ್ತೆನ್ನಬಹುದು. ನಂತರದ ಘಟನೆಗಳಲ್ಲಿ ಪ್ರಮುಖವಾಗಿ ನನ್ನ ನೆನಪಿನಲ್ಲಿ ಇದ್ದುದು-ಕಲಬುರ್ಗಿಯಲ್ಲಿ-ನವೆಂಬರ, ಡಿಸೆಂಬರ ೧೯೪೭ ರ ಅವಧಿಯಲ್ಲಿಯ ಘಟನೆಗಳು.

ಡಿಸೆಂಬರದ ೧೯೪೭ ಮೊದಲ ವಾರದಲ್ಲಿ, ನಮ್ಮ ವಿದ್ಯಾರ್ಥಿಗಳ ತಂಡ ಬೇರೆ ಬೇರೆ

ಗುಂಪುಗಳನ್ನು ಮಾಡಿಕೊಂಡು ಬಾಜಾರದಲ್ಲಿ ಪಿಕೆಟಿಂಗ ಮಾಡಿ ಅಂಗಡಿಗಳನ್ನು ಮುಚ್ಚಲು ಪ್ರಯತ್ನಿಸುತ್ತಿತ್ತು. ಈ ಕಾರ್ಯದಲ್ಲಿ ನಾನು ಹಾಗೂ ನನ್ನ ಗೆಳೆಯ ಶ್ರೀ ಗುನ್ನಾಳ ಕೃಷ್ಣ ದಸ್ತಗಿರಿ ಆಗಿ ಚೌಕಪೊಲೀಸ ಸ್ಟೇಶನ್ನಿನಲ್ಲಿ ಇಡಲ್ಪಟ್ಟೆವು. ಆಗ ನಮಗೆ ಊಟ ಕೊಡಲೆಂದು ಕಲಬುರ್ಗಿಯಲ್ಲಿಯೇ ಇದ್ದ ಕುಸುಮಣ್ಣ ಬಂದ. ನಾನು ಆತ-ಇಬ್ಬರೂ ಸ್ಟೇಟ್ ಕಾಂಗ್ರೇಸ್ ಆಂದೋಲನದಲ್ಲಿ ಭಾಗಿಗಳಾಗಿ ಇಬ್ಬರೂ ಜೇಲು ಸೇರಬೇಕೆಂದುಕೊಂಡಿದ್ದವರು. ಆದರೆ ಆತ ಹೈದ್ರಾಬಾದಿನ ವಿದ್ಯಾರ್ಥಿಗಳ ಸತ್ಯಾಗ್ರಹಿಗಳ ಮೊದಲ ತಂಡದಲ್ಲಿಯೇ ದಸ್ತಗಿರಿ ಆಗಿ ಜೇಲುವಾಸ ಅನುಭವಿಸಿ ಬಿಡುಗಡೆ ಆಗಿ ಕಲಬುರ್ಗಿಗೆ ಬಂದಿದ್ದ. ಆ ದೃಷ್ಟಿಯಿಂದ ನಾನೂ ಬಂಧಿತನಾಗಿ ಇಚ್ಛಿತ ಕಾರ್ಯದಲ್ಲಿ ಯಶಸ್ವಿಯಾಗಿದ್ದೆ. ಈಗ ಜೇಲು ಸೇರುವ ಮಾರ್ಗದಲ್ಲಿ ಇದ್ದೆ. ಆತ ನನ್ನ ಸಂತೋಷ ಗ್ರಹಿಸಿ Congratulation ಎಂದು ಹೇಳಿದ. ಅಲ್ಲಿದ್ದ ಸಬ್ ಇನ್ಸ್‌ಪೆಕ್ಟರ್‌ನಿಗೆ ರೇಗಿ ಹೋಯಿತು. ತನ್ನೆದುರೇ ಸರಕಾರದ ವಿರೋಧಿ ಚಟುವಟಿಕೆಗಳಿಗಾಗಿ ಬಂಧಿತನನ್ನು ಅಭಿನಂದಿಸುವುದೇ? ಕೂಗಾಡಿದ "ಏನು ಈತ ನಿನ್ನ ತಮ್ಮನೇ? ತನ್ನ ಅಯೋಗ್ಯ ಕಾರ್ಯಗಳಿಗಾಗಿ ಬಂಧಿತನಾದ ಇವನು- ಭಾಷಣ ಮಾಡುತ್ತಾನೆ. ಸ್ವಾಮಿ ರಾಮಾನಂದ ತೀರ್ಥನಾಗಿದ್ದಾನೆ. ವಿದ್ಯಾರ್ಥಿಗಳನ್ನು ತಪ್ಪು ದಾರಿಗೆ ಪ್ರಚೋದಿಸುತ್ತಾನೆ. ಜೇಲಿನ ರೊಟ್ಟಿ ಕಡಿಯಲಿ ಆಗ ಗೊತ್ತಾಗುತ್ತದೆ".

ಸಪ್ಟೆಂಬರ ೧೯೪೮ ರಲ್ಲಿ ಹೈದ್ರಾಬಾದಿನ ಪತನವಾಗಿ ನಾವು ಮತ್ತೆ ಹೈದ್ರಾಬಾದಿನ ಕಾಲೇಜಿಗೆ ನಮ್ಮ ಅರ್ಧಕ್ಕೆ ನಿಂತ ವಿದ್ಯಾಭ್ಯಾಸ ಮುಂದುವರೆಸಲು ಸೇರಿಕೊಂಡೆವು. ನಾನು ಡಿಗ್ರಿ ಪಡೆದು ಸರಕಾರಿ ಕೆಲಸಕ್ಕೆ ವಿಧಾನಸಭಾ ಸಚಿವಾಲಯದಲ್ಲಿ, ನಂತರ ಚುನಾವಣೆ ಇಲಾಖೆಗೆ ಕೆಲಸಕ್ಕೆ ಸೇರಿಕೊಂಡು ಸಾಯಂಕಾಲ 'ಕಾಯಿದೆ' ಕಾಲೇಜಿಗೆ ಸೇರಿಕೊಂಡೆ.

ನನಗೂ ಮುಂಚಿತ ಕುಸುಮಣ್ಣನೂ ಲಾ ಕಾಲೇಜಿನ ವಿದ್ಯಾರ್ಥಿ. ಅಲ್ಲಿ ವಿದ್ಯಾರ್ಥಿ ಸಂಘ ಮುಂತಾದ ಚಟುವಟಿಕೆಗಳಲ್ಲಿ ಮುಳುಗಿದ್ದ ಆತನಿಗೆ ಸ್ನೇಹಿತರೂ ಬಹಳ. ಒಳ್ಳೆಯ ಪ್ರತಿಭಾವಂತ ವಿದ್ಯಾರ್ಥಿಗಳೂ, ರಾಜಕೀಯದಲ್ಲಿ ಮಹತ್ವ ಪಡೆದವರೂ (ಪೊಲೀಸ ಕಾರ್ಯಾಚರಣೆಯ ಹಿನ್ನೆಲೆಯಲ್ಲಿ) ಅದರಲ್ಲೂ ಬಾಬುರಾವ ವರ್ಮಾ ಮುಂತಾದವರೂ ಸೇರಿದ್ದರು.

ಇವರು ಹೈದ್ರಾಬಾದಿನ ರಾಜಕೀಯದಲ್ಲಿ ಗಣ್ಯವ್ಯಕ್ತಿ ಎನಿಸಿದರು. (ಆಂಧ್ರ ಲೋಕಸೇವಾ ಆಯೋಗದ ಅಧ್ಯಕ್ಷರೂ ಆದರೆಂದು ಕೇಳಿದ್ದೆ). ಹೈದ್ರಾಬಾದಿನಲ್ಲಿ ಆತನಿಗೆ ಸಮಾಜವಾದಿ ಗೆಳೆಯರು, ಕಾಂಗ್ರೆಸಿನ ಕೆಲ ಹಿರಿಯ ಮುಖಂಡರು ಬಹಳ ಆಪ್ತರಾಗಿದ್ದರೆಂದೇ ಹೇಳಬೇಕು. ಅದರಲ್ಲಿ ಪ್ರಮುಖವಾಗಿ ಶ್ರೀ ದಿಗಂಬರಾವ ಕಲಮಣಕರ, ಶ್ರೀ ಮುರಳೀಧರ ಕಾನಡೆ ಸೇರುತ್ತಾರೆ. ಶ್ರೀ ವ್ಹಿ.ಎಚ್. ದೇಸಾಯಿ, ಇಂಗ್ಲಿಷ್ ಪತ್ರಿಕೋದ್ಯಮಿ, ಶ್ರೀ ಜಿ.ಎಸ್. ಮೇಲುಕೋಟಿ ಅವರಂಥ ಹಿರಿಯ ಕಾಂಗ್ರೆಸ್ ಮುಖಂಡರಿಗೂ ಆತ ಬೇಕಾದವನಾಗಿದ್ದ. ಶ್ರೀ

ದೇಸಾಯಿ ಅವರ ಜೊತೆಗೆ ಸೇರಿ ಒಳ್ಳೆ ಪತ್ರಕರ್ತನೇ ಆಗಿದ್ದ. ನಿಯತವಾಗಿ ಲೇಖನ ಬರೆಯುವುದನ್ನು ಅಭ್ಯಾಸ ಮಾಡಿಕೊಂಡಿದ್ದ. ಇಂಗ್ಲೀಷನಲ್ಲಿ ಕನ್ನಡದ ಲೇಖನ ಬರೆಯುತ್ತಿದ್ದ. ನಂತರ 'ನಾಗರಿಕ' ಕಲಬುರ್ಗಿ ಪತ್ರಿಕೆಯಲ್ಲಿಯೂ ಸಹಾಯಕ ಸಂಪಾದಕನಾಗಿ ಸ್ವಲ್ಪದಿನ ಕಾರ್ಯಮಾಡಿದ. ಹೈದ್ರಾಬಾದಿನ ಗೆಳೆಯರಲ್ಲಿ ಸತ್ಯೇಂದ್ರನಾಥ ಮಾಯಣಕರ. ಅವರನ್ನು ನೆನೆಯಬೇಕು ಬಹಳ ಸರಳ ಮನುಷ್ಯ. ನಂತರ ಅವರು ಎಮ್‌ಎಸ್‌ಸಿ (ಪಿ.ಎಚ್.ಡಿ ಕೂಡ ಮಾಡಿದರೆಂದು ಕೇಳಿದೆ). ಅವರು ನನಗೆ ಕುಸುಮಣ್ಣನ ತಮ್ಮನೆಂಬ ಅಭಿಮಾನದಲ್ಲಿ ಐಚ್ಛಿಕ ಗಣಿತ. ಬಿ.ಎಸ್.ಸಿ. ಸ್ಥಾನದಲ್ಲಿ ಹೇಳುತ್ತಿದ್ದರು. ಈ ವೇಳೆಗೆ ನಮ್ಮ ಅಣ್ಣಾ ಶ್ರೀ ಗ್ರೀಷ್ಮಕುಮಾರದೇಸಾಯಿ ಅವರು ಹೈದ್ರಾಬಾದಿನಿಂದ ವರ್ಗವಾಗಿ ಬೇರೆ ಕಡೆಗೆ ಹೋಗಬೇಕಾಯಿತು. ಆದರೆ ನಾವೆಲ್ಲರಿದ್ದ ಮನೆ (ಅದು ನಂತರ ಬಹಳ ಮಂದಿ, ನಮ್ಮ ಬಂಧುಗಳು-ಗೆಳೆಯರು ಎಲ್ಲರಿಗೂ ಒಂದು ಆಧಾರವಾಗಿ- "೬೦, ಇಸಾಮಿಯಾ ಬಾಜಾರ" ಎಂದೇ ಪ್ರಸಿದ್ಧಿ ಪಡೆಯಿತು) ನಾವು ವಾಸಕ್ಕಾಗಿ ಉಪಯೋಗಿಸಿಕೊಂಡು, ನಮ್ಮ ಅಭ್ಯಾಸ ಮುಂದುವರೆಸಿದೆವು. ಆಗ ಮನೆಯಲ್ಲಿ ನಾನು ಕುಸುಮಣ್ಣ ಇಬ್ಬರೇ ಇದ್ದೆವು. ಆಗಾಗ ಗೆಳೆಯರೊಬ್ಬರು ಊಟಕ್ಕೆ ಸೇರಿಕೊಳ್ಳುತ್ತಿದ್ದರು.

ನಮಗೆ ಊಟಕ್ಕಾಗಿ ಒಬ್ಬ ಮರಾಠಿ ಹೆಣ್ಣುಮಗಳು ಅಡಿಗೆ ಮಾಡಲು ಬರುತ್ತಿದ್ದರು. ಒಳ್ಳೆಯ ದಪ್ಪರೊಟ್ಟಿ ಝುಣಕಾ ಮಾಡುತ್ತಿದ್ದರು. ಬೆಳಿಗ್ಗೆ ಬಹಳ ತೀವ್ರವೇ ಕೆಲಸಕ್ಕೆ ಬರುತ್ತಿದ್ದರು. ಬಂದವರು ನಮ್ಮನ್ನು ನಿದ್ದೆಯಿಂದ ಎಬ್ಬಿಸಲು ಬಾಗಿಲು ಬಡಿಯುತ್ತಿದ್ದರು. ಅದು ನಮ್ಮ ಪಕ್ಕದ ಮನೆಯಲ್ಲಿದ್ದ ಗೆಳೆಯರಿಗೆ ಬೇಸರ ಎನಿಸುತ್ತದೆಂದುಕೊಂಡೆ. ಅದಕ್ಕಾಗಿ ಆ ಹೆಣ್ಣುಮಗಳಿಗೆ, ನಮ್ಮ ಕುಟುಂಬದ ಹೆಸರು ಕುಸುಮಾಕರ. (ಎಷ್ಟಾದರು ಆಕೆ ಮಹಾರಾಷ್ಟ್ರೀಯಳು. 'ಕರ' ಎಂದ ಕೂಡಲಿ ಮನೆತನದ ಅಡ್ಡ ಹೆಸರು ಎಂದುಕೊಳ್ಳಲು ಕಷ್ಟವಾಗಲಿಲ್ಲ) ಎಂದು ಹೇಳಿದೆ-ಆಕೆ ಬಂದು ಮರುದಿನದಿಂದ 'ಏ-ಕುಸುಮಾಕರ' ಎಂದೇ ಎಬ್ಬಿಸಲು ಪ್ರಾರಂಭಿಸಿದಳು. ಕುಸುಮಾಕರ ಎಂದು ಕೂಗಿದಾಗ, ನಾನು ಏಳಬೇಕಾದ ಪ್ರಮೇಯ ಇರಲಿಲ್ಲವಾಗಿ, ನಾನು ಸಮಾಧಾನದಿಂದ ನಿದ್ದೆ ಮಾಡುವಂತಾಯಿತು. ಆದರೆ ಇದು ೪-೫ ದಿವಸಗಳಿಗಿಂತ ಹೆಚ್ಚಿಗೆ ಮುಂದುವರೆಯಲಿಲ್ಲ. ಆಕೆಯನ್ನೇ ಕೇಳಿ ಕುಸುಮಾಕರ ಎಂದು ಕೂಗುವ ಕಾರಣ ತಿಳಿದುಕೊಂಡ. ಕುಸುಮಣ್ಣ ಆಕೆಗೆ ಹೇಳಿದ. ಇನ್ನು ಮೇಲೆ 'ಅನ್ನಿ' ಎಂದೇ ಕೂಗಬೇಕು, ಒಬ್ಬರು ಎದ್ದೇ ಏಳುತ್ತಾರೆ ಎಂದು. ಅದೇ ಪದ್ಧತಿ ಮುಂದುವರೆದು ನಾನು ಮಾಡಿದ ತಪ್ಪಿಗೆ ಶಿಕ್ಷೆ ಎಂದು ನಾನೇ ತಪ್ಪದೇ ಮೊದಲು ಏಳುವಂತಾಯಿತು. ಈ ಅವಧಿಯಲ್ಲಿ ಹೈದ್ರಾಬಾದಿನ ಕನ್ನಡ ಸಾಹಿತ್ಯ ಮಂದಿರದ ಚಟುವಟಿಕೆಗಳಲ್ಲಿ, ನಾಡಹಬ್ಬ, ಮುಂತಾದ ಕಾರ್ಯಕ್ರಮಗಳಲ್ಲಿ ಡಾ. ಹೇಮಂತ ಅವರೊಡನೆ (ನಾನೂ ಸೇರಿ) ನಾಟಕ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಆಸಕ್ತಿ ವಹಿಸಿ ನಾಟಕದ ಪ್ರಾಕ್ಟೀಸಿಗೆ ಇಬ್ಬರೂ

ಹೋಗುತ್ತಿದ್ದೆವು.

ಆತನು ಬರೆಯುತ್ತಿದ್ದುದು ವಿಶೇಷವಾಗಿ ಇಂಗ್ಲಿಷನಲ್ಲಿಯೇ. ಆದರೂ ಕನ್ನಡ ಭಾಷೆಯಲ್ಲಿಯೂ ಸಾಕಷ್ಟು ಸಾಮರ್ಥ್ಯದಿಂದ ಬರೆಯಬಲ್ಲವನಾಗಿದ್ದ. ಆಗ ಸಾಹಿತ್ಯ ಮಂದಿರದಿಂದ ಕನ್ನಡ ಕಥೆಗಳ ಸ್ಪರ್ಧೆ ಏರ್ಪಡಿಸಿದರು. ಅದು ಆಗ ಕೆಲವು "ಜಾಣ" ರೆಂದೆನಿಸಿಕೊಂಡ, ಸರಕಾರಿ ಕೆಲಸದಲ್ಲಿಯೂ ಒಳ್ಳೆಯ ಕೆಲಸ ಪಡೆದು ಕೊಂಡವರು ಕೆಲವರು ಬಹುಮಾನ ಪಡೆಯುವವರೆಂದು ಈ ಸಂದರ್ಭದಲ್ಲಿ ಕೆಲ ಹೆಸರುಗಳ ಕೂಡ ಚಾಲ್ತಿಯಲ್ಲಿ ಬಂದವು. ಆ ಸ್ಪರ್ಧೆಯಲ್ಲಿ ಕುಸುಮಣ್ಣನೂ ಭಾಗವಹಿಸುವೆನೆಂದ. ಒಂದು ಕಥೆಯ ಹಂದರವನ್ನು ಹೇಳಿದ, ನನ್ನ ಅಭಿಪ್ರಾಯದಲ್ಲಿ ಕಥೆ ಬಹಳ ಚೆನ್ನಾಗಿತ್ತು. ಅದು ತಾಜಮಹಲದ ಕಟ್ಟಡದ ಹಿನ್ನೆಲೆಯದು. ಕಥೆಯ ತಲೆಬರಹ "ಟೊಳ್ಳುಬುರುಜು" ನಾನು "ಖಂಡಿತವಾಗಿ ನಿನಗೆ ಬಹುಮಾನ ಬರಲೇಬೇಕು. ಇದು ನಿನ್ನ ಮೊದಲ ಪ್ರಯತ್ನವೆಂದು ಅನುಮಾನ ಪಡಬೇಕಿಲ್ಲ ಬರೆಯಲೇಬೇಕು" ಎಂದು ಹಟ ಹಿಡಿದೆ. ಬರೆದು ಸ್ಪರ್ಧೆಗೆ ಕಳಿಸಿಯೂ ಆಯಿತು. ಈತನ ಹೆಸರು ಕನ್ನಡ ಲೇಖಕ ಎಂದೂ ಯಾರಿಗೂ ಗೊತ್ತಿರದು. ಬಹುಮಾನ "ಗಿಟ್ಟಿಸುವವರು" ಎಂಬುವ 'ಲಾಬಿ' ಗುಂಪಿನಲ್ಲಿ ಈತನ ಹೆಸರು ಸೇರಲು ಸಾಧ್ಯವೇ ಇರಲಿಲ್ಲ. ಆದರೆ ಪರಿಣಾಮ ಬಂದಾಗ ಎಲ್ಲರೂ ಆಶ್ಚರ್ಯ ಪಡುವಂತೆ ಆತನ ಮೊದಲ ಕತೆ "ಟೊಳ್ಳು ಬುರುಜು" ಗೆ ಕತೆಗಳ ನಿರ್ಣಾಯಕರು ಬಹಳ ಹೊಗಳಿ ವಿಶೇಷ ಕತೆ ಎಂದು ವಿಶೇಷ ಬಹುಮಾನ ಘೋಷಿಸಿದರು. ಆಗ ಕೆಲ ಜನರಿಗೆ "ಕಾಫಿ ಹೌಸ" ಕುಸುಮಾಕರ ಎಂದು ಸಾಯಂಕಾಲದ ವೇಳೆಯ ಹೀರೋ ಆಗಿದ್ದ ಕುಸುಮಣ್ಣ ಲೇಖಕನೂ ಕೂಡ ಎಂಬ ಮುದ್ರೆ ಸಂಪಾದಿಸಿದ. ಹೈದ್ರಾಬಾದಿನ ಕೋಠಿಯ 'ಇಂಡಿಯಾ ಕಾಫಿ ಹೌಸ' ಕಾಫಿ ಪ್ರಿಯರಿಗೆ ತಪ್ಪಿಸಲಾರದ ಜಾಗೆ. ಅದರಲ್ಲಿ ಕುಸುಮಣ್ಣ ಮತ್ತೆ ಗೆಳೆಯ ದೇವೇಂದ್ರನೂ ಹೈದ್ರಾಬಾದಿಗೆ ಬಂದು ಸೇರಿದ್ದ. ಆತನ ಇತರ ಕಾಲೇಜಿನ ಗೆಳೆಯರು "ಸೋಷಿಯಲಿಸ್ಟ್" ಗೆಳೆಯರು, ರಾಜಕೀಯ ಸಾಮಾಜಿಕ ನಾಯಕ ವಿಷಯಗಳ ಬಗ್ಗೆ ಆಸಕ್ತಿಯಿಂದ ಚರ್ಚೆ ಮಾಡುವ ಬೇರೆ ಬೇರೆ ಜನರು ಬಂದು ಸೇರುತ್ತಿದ್ದರು. ಮೊದಲು "y.m.i.s Library" ನಂತರ ಕಾಫಿ ಹೌಸ. ಯಾರಿಗೊ ಟೊಪ್ಪಿಗೆ ಹಾಕಿ ಕಾಫಿ ಕುಡಿಯಲು ಬರುವ ಗುಂಪಲ್ಲ ಅದು.

ನಾನೂ ಒಂದೆರಡು ಸಲ ಭಾಗವಹಿಸಿದ್ದೆ. ಆದರೆ, ದಿನಾಲು ನಿನ್ನೊಬ್ಬನದೇ ಖರ್ಚು ಸಾಕು ನಾನೂ ಸೇರುವುದಿಲ್ಲ ಎಂದು ದೂರವಿರುತ್ತಿದ್ದೆ. ಆತನೇ ನನಗೆ ಸದಸ್ಯತ್ವ ಕೊಡಿಸಿದ. ಸುಲ್ತಾನ ಬಾಜಾರದ ymis ಲೈಬ್ರೇರಿಯಲ್ಲಿ ಒಂದು ಕಟ್ಟಿಗೆಯ ಆರಾಂ ಕುರ್ಚಿ ಗಟ್ಟಿ ಮಾಡಿಕೊಂಡಿದ್ದೆ. ನನಗೆ ಎಷ್ಟು ಅಭ್ಯಾಸವಾಗಿತ್ತೆಂದರೆ ಕುಸುಮಣ್ಣನೇ "ನಿನ್ನ ಕುರ್ಚಿ ಮೇಲೆ ಬೇರೆ ಯಾರೂ ಸಾಯಂಕಾಲ ಕೂಡದಂತಾಗಿದೆ ಈಗ" ಎಂದು ಚೇಷ್ಟೆ ಮಾಡುವಷ್ಟು ಪ್ರಸಿದ್ಧಿ ಆಗಿದ್ದೆ.

"ಕಾಫಿ ಹೌಸ" ತಪ್ಪಿಸಲು ಸಾಧ್ಯವಿಲ್ಲ ಎಂದಾಗ ಅಂತೂ ಆಗಾಗ 'ಕಾಫಿ' ತೀರ್ಥದ ಖರ್ಚು ವಹಿಸಬೇಕಾಗುತ್ತಿತ್ತು ಎಂಬುದು ನಿರ್ವಿವಾದ. ಒಂದು ಸಲ ನಾನು ಮನೆಯಿಂದ ಹೊರಡುವಾಗ ನನ್ನ ಜೇಬು ನೋಡಿಕೊಂಡೆ, ಹಣವೇ ಇರಲಿಲ್ಲ. ಎಲ್ಲಿ ಹೋಗಿರಬಹುದು ಎಂದು ಯೋಚಿಸಿದೆ. ಆಗ ಬಂದ ನನ್ನ ಸಮೀಪ ಬಂಧು ಒಬ್ಬರು, "ಕುಸುಮಾಕರ ತೆಗೆದುಕೊಂಡಿರಬೇಕು. ನಿನಗೆ ಹೇಳಬೇಕಾಗಿತ್ತು ಎಂದರು. ನನಗೆ ಬಹಳ ಬೇಸರ ಎನಿಸಿತು. ಅವರಿಗೆ ಹೇಳಿದೆ" ಉತ್ಪ್ರೇಕ್ಷೆ ಅಲ್ಲ ಕುಸುಮಣ್ಣನ ಜೇಬಿನಲ್ಲಿ ನೂರಾರು ರೂಪಾಯಿ ಇದ್ದರೂ ನಾನು ತೆಗೆದುಕೊಂಡರೆ, "ನೀನು ತೆಗೆದುಕೊಂಡೆ ಏನು" ಎಂದೂ ಕೇಳದ ಉದಾರಿ ನಮ್ಮ ಅಣ್ಣ'. ಇವತ್ತು ಒಂದು ದಿವಸ ನನ್ನ ಹಣ ಆತ ನಿಜವಾಗಿ ತೆಗೆದಿದ್ದರೆ ನನಗೆ ಅದೇ ಹೆಮ್ಮೆ ಎಂದೆ'.

ನಾನು ಲಾ ಕಾಲೇಜನಲ್ಲಿ ಸೇರಿಕೊಂಡಾಗ, ಒಂದು ಉದ್ದೇಶವಿತ್ತು. ಲಾ ಮಾಡಿಕೊಂಡು, ವಕೀಲನಾಗಬೇಕೆಂದು, ಅದಕ್ಕೆ ಒಂದು ಕಾರಣ ಕುಸುಮಣ್ಣ ಡಾಕ್ಟರ ಆಗಬೇಕೆಂದು ಬಯಸಿದ್ದ. ಆದರೆ ಕಾರಣಾಂತರಗಳಿಂದ ಆ ವಿಚಾರ ಬಿಡಬೇಕಾಯಿತು. ಮತ್ತು ವಕೀಲಿ ವೃತ್ತಿಯನ್ನೇ ಆರಿಸಿಕೊಂಡ. ಹೀಗಿರುವಾಗ ನಾನು ಮತ್ತೆ ಕಲಬುರ್ಗಿಯಲ್ಲಿ "ಒಂದೇ ಮನೆ" ಯಲ್ಲಿ ಇಬ್ಬರು ವಕೀಲ ಎಂದರೆ ಆಗದು ಎಂದು ಸರಕಾರಿ ಕೆಲಸಕ್ಕೆ ಸೇರುವ ನಿರ್ಧಾರ ಮಾಡಿ ಅದರಂತೆ ಉದ್ಯೋಗ ಹುಡಕುತ್ತ ಇದ್ದೆ. ಈ ಸಂದರ್ಭದಲ್ಲಿ ನನಗೆ ಹೈದ್ರಾಬಾದಿನ ಭೂ ಸುಧಾರಣೆಯ ನಾಯಬ ತಹಶೀಲ್ದಾರ ಹುದ್ದೆ, ಸಿಕ್ಕು ಆಗಿನ ಮಹಾರಾಷ್ಟ್ರದ ಜಿಲ್ಲೆಯಾದ 'ಬೀಡ'ಗೆ ನನ್ನ ನೇಮಕವಾಯಿತು. ಆಗ ಹೇಳಿದ. "ಅನ್ನಿ". ಇನ್ನು ಬೀಡ ಜಿಲ್ಲೆಯ ಮರಾಠಿಯನ್ನು ದೇವರೇ ಕಾಪಾಡಬೇಕು (ದೇವಾನೀಚ ಸಂಭಾಳಯಲಾ ಪಾಹಿಜೆ).

ನಾನು ನನ್ನ ಲಾ ಕೊನೆಯ ವರ್ಷದ ಹಾಜರಿ ಮುಗಿಸಿದ್ದರೂ ಪರೀಕ್ಷೆ ಬರೆಯದೇನೇ 'ಬೀಡ' ಗೆ ಪ್ರಯಾಣ ಬೆಳೆಸಿದೆ. ಆದರೆ ೧-೨ ವರ್ಷಗಳ ನಂತರ ರಜೆ ಹಾಕಿಕೊಂಡು 'ಲಾ' ಪರೀಕ್ಷೆ ಮುಗಿಸಲೆಂದು "೬೦ ಇಸಾಮಿಯಾ ಬಾಜಾರಿಗೆ" ಹೈದ್ರಾಬಾದಿಗೆ ಬಂದೆ. ಆಗ ನನ್ನ ಜೊತೆಗೆ ಶ್ರೀ ದಿಗಂಬರ ಕಲಮಣಕರ ಅವರೂ ಪರೀಕ್ಷೆ ಕಟ್ಟಿದ್ದರು. ಅವರು '೬೦ ಇಸಾಮಿಯಾ ಬಾಜಾರ ಸೇರಿದ್ದರು. ಇಬ್ಬರೂ ಒಂದೇ ಅಭ್ಯಾಸ ಕೆಲ ವಿಷಯದಲ್ಲಿ ಮಾಡಿದೆವು. ಇದೇ ವೇಳೆಗೆ ಕುಸುಮಣ್ಣ ತನ್ನ ಮೊದಲನೇ ಎಲ್.ಎಲ್.ಎಮ್. ಪರೀಕ್ಷೆ ಕಟ್ಟಲೆಂದು ಕಲಬುರ್ಗಿಯಿಂದ ಬಂದು '೬೦ ಇಸಾಮಿಯಾ ಬಾಜಾರ ಮತ್ತೆ "ಆಬಾದ' ('ತುಂಬಿಸಿದ) ಮಾಡಿದ.

ನಾನು ಯಾವಾಗಲೂ 'ಜ್ಯುರಿಸ್ ಪ್ರುಡೆನ್ಸ' ಓದುತ್ತಿರುವುದನ್ನು ಕಂಡ ಕುಸುಮಣ್ಣ,"ಏನು ನಿನ್ನ ಪರೀಕ್ಷೆಗೆ ಇದೊಂದೇ ವಿಷಯ ಇದ್ದಂತೆ ಓದುತ್ತಿಯಲ್ಲಾ. ಬೇರೆ ವಿಷಯಗಳ ಕಡೆಗೂ ಗಮನ ನೀಡು" ಎಂದ ಅದಕ್ಕೆ. "ಈ ವಿಷಯ ಯಾಕೋ ತಲೆಗೆ ಹತ್ತಲೊಲ್ಲದು. ಇದರಲ್ಲಿ

ಪಾಸಾದರೆ ಸಾಕು ನಾನೂ 'ಕಾಯದೆ ಡಿಗ್ರಿ" ಪಡೆದುಕೊಂಡಂತೆ ಎಂದೆ. "ಜ್ಯುರಿಸಪ್ರುಡೆನ್ಸ ಕಠಿಣವೆನಿಸಿದರೂ ಒಳ್ಳೆಯ ವಿಷಯ. ಚೆನ್ನಾಗಿ ಓದು" ಎಂದ.

ನಮ್ಮ ಪರೀಕ್ಷೆ "ಲಾ ಡಿಗ್ರಿ" ಹಾಗೂ ಮೊದಲ ಎಲ್.ಎಲ್.ಎಮ್ (L.L.M) ಪರೀಕ್ಷೆಗಳು ಒಂದೇ ಕೇಂದ್ರದಲ್ಲಿ ನಡೆಯುತ್ತಿದ್ದವು. ಅದು ಮಧ್ಯಾಹ್ನ ದಿನಾಲು ಒಂದು ಪೇಪರು. ಬಸ್ಸಿನಿಂದ ನಾವು ಹೋಗುತ್ತಿದ್ದೆವು. ಹೋಗುವಾಗ ಕುಸುಮಣ್ಣಾ ತನ್ನ ಪೇಪರಿನ ಬಗ್ಗೆ ಬಹಳ ಅಂಜಿಕೊಂಡಂತೆ "ಪೇಪರುಗಳನ್ನು ಹೇಗೆ ಬಿಡಿಸುತ್ತೇನೋ" ಎಂದುಕೊಂಡು ಮಾತನಾಡುತ್ತಿದ್ದ, ಹಾಗೆಯೇ "ನಾನು ಇಷ್ಟರಮಟ್ಟಿಗೆ ಪರೀಕ್ಷೆ ಬಗ್ಗೆ ಹೇಳುತ್ತಿದ್ದೇನೆ ನೀನು ಪರೀಕ್ಷೆಗೆ ಕೂಡದವನಂತೆ ನಿಶ್ಚಿಂತನಾಗಿದ್ದೀಯಲ್ಲಾ" ಎಂದೇ ಆಕ್ಷೇಪಿಸಿದ. ನಾನು ಹೇಳಿದೆ. "ಕುಸುಮಣ್ಣಾ ನೀನು ಓದಿದ ಪುಸ್ತಕಗಳಲ್ಲಿ ೧೦% ಓದಿ ಅರಗಿಸಿಕೊಂಡರೂ ನಾನು ಜಗತ್ತಿನ ಯಾವ ಪರೀಕ್ಷೆಯಲ್ಲಿಯೂ ಖಂಡಿತ ಪಾಸು. ಪರೀಕ್ಷೆ 'ಹಾಲ' ಗೇ ನೀನು ಹೋಗಲು ಅಂಜಿದರೆ ಪಾಸಾಗುವುದು ಹೇಗೆ? 'ಹಾಲ್ ನಲ್ಲಿ ಹೋದ ನಂತರ, ನಮ್ಮನ್ನು ಹೊರಗೆ ಬಿಡಲಾರೆವು ಎಂದು ಹೇಳುವವರು ಯಾರೂ ಇರಲಾರರಲ್ಲವೆ" ಎಂದೆ. ಒಂದು ಕ್ಷಣ ನನ್ನನ್ನು ದಿಟ್ಟಿಸಿದ ".......ಮೀ ಪರೀಕ್ಷೇತ ಪಾಸ" ಎಂದ. ಖಂಡಿತ ಪಾಸಾದ. ಇದು ಸುಮಾರು ೧೯೫೮-೫೯ ರ ಅವಧಿ. ಮುಂದೆ ಸರಕಾರೀ ಕೆಲಸದಲ್ಲಿ ಇದ್ದ ನನ್ನ ವರ್ಗಾವಣೆ ಕಲಬುರ್ಗಿ ಜಿಲ್ಲೆಗೇ ಆಯಿತು. ಆಗ ಕುಸುಮಣ್ಣಾ ಕಲಬುರ್ಗಿಯ ಮೇಧಾವಿ ವಕೀಲ. ಪ್ರತಿವಾರ ರಜೆಯಲ್ಲಿ ನಾನು ಕಲಬುರ್ಗಿಯಲ್ಲಿಯೇ ಇರುತ್ತಿದ್ದೆ. ಆಗ ಆತನ ಕೋರ್ಟ ಕೇಸಗಳ, ಅದರಲ್ಲಿನ ಕಾನೂನಿನ ನಾಜೂಕು ಪ್ರಚಲಿತ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿದ್ದ. ನನಗೆ ಯಾವಾಗಲೂ ಕಾಯಿದೆಯ ಪ್ರಕರಣಗಳ ಬಗ್ಗೆ ಚರ್ಚೆ ಮಾಡಲು ಆಸಕ್ತಿ. ಆತನು ಗೆದ್ದ ಪ್ರಕರಣಗಳ ವಿವರ ತಿಳಿಯಲು ಕುತೂಹಲವಿರುತ್ತಿತ್ತು. ವಿಶೇಷವಾಗಿ ಕಾಯಿದೆಯಲ್ಲಿನ "ಬಾರೀಕ" (Nuances) ಬಗ್ಗೆ ತಿಳಿಸುತ್ತಿದ್ದ (ಆತ ಲಾ ಕಾಲೇಜಿನಲ್ಲಿ ಲೆಕ್ಚರರ ಎಂದೂ ಕೆಲದಿನ ಕೆಲಸ ಮಾಡಿದ್ದ).

ಮುಂದೆ ನನ್ನ ಸರಕಾರೀ ಸೇವೆ ಬಗ್ಗೆ ಲೋಕಸೇವಾ ಆಯೋಗದಿಂದ ಕಾಯಂ ತಹಶೀಲ್ದಾರ ಹುದ್ದೆ ಬಗ್ಗೆ ಒಪ್ಪಿಕೊಳ್ಳದ ಕಾರಣ, ಹೈಕೋರ್ಟಿಗೆ ಹೋಗಬೇಕೆಂದು ನನಗೆ ತೋಚಿತು. ಅದರ ಬಗ್ಗೆ ಕುಸುಮಣ್ಣನೊಡನೆ ಸಮಾಲೋಚನೆ ಮಾಡಿದರೆ ಆತ ನನ್ನ ಪ್ರಕರಣದಲ್ಲಿ ಹುರುಳಿಲ್ಲ ಎನ್ನುವಂತೆ ಮೊದಲು ಲಕ್ಷವೇ ಕೊಡಲಿಲ್ಲ ಎಂಬಂತಾಯಿತು. ಒಂದು ದಿನ ಬೇಜಾರಾಗಿ 'ಕಾಯಬಾಬಾ..ಮಿ ತುಝು ಮೊಕಿಲ್ಲ ನಪ್ಪೆ. ಮ್ಹಣೂನ ಮಾಝಾ ಕೇಸ ನಾನು ನಿನ್ನ 'ಮೊಕೀಲ್' (client) ಅಲ್ಲ ಅದಕ್ಕಾಗಿ ನನ್ನ ಪ್ರಕರಣ ನೋಡಲು ನಿನಗೆ ವೇಳೆ ಇಲ್ಲ "ಎಂದೆ. ನನ್ನ ಮಾತಿನಲ್ಲಿಯ ನಿರಾಶೆಯ ಧ್ವನಿ ಗುರುತಿಸಿದ ಆತ ನನ್ನ ಪ್ರಕರಣ ವಿವರ ಕೂಡಲೇ ಪಡೆದುಕೊಂಡು ಚರ್ಚಿಸಿ "ತು ಕ್ಯಾ ತೂ ಜಿಂಕಣಾರ" "ನೀನು ಗೆದೆಯುತ್ತಿ" ಎಂದು ಕೇಸು ಹೈಕೋರ್ಟಿನಲ್ಲಿ ಹಾಕಲು ವಕೀಲರ ನೇಮಕ ಮುಂತಾದ್ದು ಎಲ್ಲವಕ್ಕೂ ವ್ಯವಸ್ಥೆ ಮಾಡಿದ.

ನಾನು ಗೆದ್ದಾಯಿತು.

ಕುಸುಮಣ್ಣ ಮನೆಯ ಎಲ್ಲ ತಮ್ಮ ತಂಗಿಯರಿಗೆ ಮಾರ್ಗದರ್ಶಕ ಮುಂದಾಳು. ಕಿರಿಯರು ಹೆಚ್ಚಿನ ಅಭ್ಯಾಸಕ್ಕಾಗಿ ಸ್ಪರ್ಧಾ ಪರೀಕ್ಷೆಗೆ ಕೂಡುವುದಾಗಲಿ, ಕೆಲಸದ ಪ್ರಯತ್ನಕ್ಕೆ ಆಗಲಿ ಆತನ ಸಲಹೆ ಸಹಾಯ ಬೇಕೆ ಬೇಕು ಎಂದಿತ್ತು.

ಆತ ಕಲಬುರ್ಗಿಯಲ್ಲಿ ವಕೀಲಿ ವೃತ್ತಿ ಮಾಡುತ್ತಲಿದ್ದಾಗ ಆತನ ಮದುವೆ-ಹರಪನಹಳ್ಳಿಯಲ್ಲಿ ನಡೆಯಿತು. ೧೯೬೧-೬೨ ರಲ್ಲಿ ಆಗ ನಾವು ಆತನ ತಮ್ಮಂದಿರು ಗೆಳೆಯರು ಹರಪನಹಳ್ಳಿಯಲ್ಲಿ ತುಂಬಾ ಗಲಾಟೆ ಮಾಡಿದ ನೆನಪು (ಈ ವಿಷಯಬೇಕೆಂದೇ ಹೆಚ್ಚಾಗಿ ಬರೆಯುತ್ತಿಲ್ಲ) ಮುಂದೆ ನನ್ನ ಲಗ್ನವಾಗಿ, ನನ್ನ ಹೆಂಡತಿ ಡಾಕ್ಟರ ಸಾಹೇಬ ಎಂದು ಬಹಳ ಅಭಿಮಾನ ಪಡುತ್ತಿದ್ದ. ಡಾಕ್ಟರ ಸಾಹೇಬ ಎಂದು ಆಗಾಗ್ಗೆ ಸಣ್ಣ ಪುಟ್ಟ ಮನೆಮಂದಿಯ ಆರೋಗ್ಯದ ಬಗ್ಗೆ ಕೇಳುತ್ತಿದ್ದ (ನಮ್ಮ ದೊಡ್ಡಪ್ಪ ಅವರೇ ಬಹಳ ಹಿರಿಯ ಅನುಭವ ಉಳ್ಳ ಆಯುರ್ವೇದ ಡಾಕ್ಟರರಾಗಿದ್ದರು. ವಕೀಲಿ ವೃತ್ತಿಯ ಜೊತೆಗೆ ವೈದ್ಯಕೀಯವನ್ನು ಅಭಿರುಚಿ (ಹಾಬಿ) ಯ ವಿಷಯ ಮಾಡಿಕೊಂಡಿದ್ದರು ನಮ್ಮ ಮನೆ ಹುಡುಗರಿಂದ ತುಂಬಿದ್ದರೂ ಯಾರೂ ಹೊರಗಿನ ಡಾಕ್ಟರನ್ನು ಎಂದೂ ಕಾಣಬೇಕಾದ ಪ್ರಸಂಗ ಬರಲೇ ಇಲ್ಲ).

ಕುಸುಮಣ್ಣನ ಕಲಬುರ್ಗಿಯ ವಕೀಲಿ ವೃತ್ತಿಯಲ್ಲಿ ವಕೀಲರಲ್ಲದೇ ಇತರ ಮಿತ್ರರೂ ಇದ್ದರು. ಅವರಲ್ಲಿ ನನ್ನ ನೆನಪಿನಲ್ಲಿ ಇದ್ದವರು ಶ್ರೀ ಮಲ್ಲಾಪುರ ಶ್ರೀನಿವಾಸರಾಯರು. ಸಾಧಾರಣವಾಗಿ ಸಾಯಂಕಾಲ ಸಾಧ್ಯವಾದಾಗಲೆಲ್ಲ ಮನೆಗೆ ಬಂದು ಕುಸುಮಣ್ಣನೊಡನೆ ಮನೆಯ ಹೊರಗಿನ ಕಟ್ಟೆಯಲ್ಲಿ ಕುಳಿತುಕೊಂಡು ರಾಜಕೀಯ ಸಾಮಾಜಿಕ ವಿಷಯಗಳ ಬಗ್ಗೆ ಮಾತನಾಡುತ್ತಿದ್ದರು. ಅವರು ವೃತ್ತಿಯಲ್ಲಿ ಸರಕಾರೀ ಕೆಲಸದಲ್ಲಿ 'ಅಬಕಾರಿ' ಇಲಾಖೆಯಲ್ಲಿ ಇದ್ದವರು. ಶ್ರೀ ಚಂದ್ರಕಿ ಜಗನ್ನಾಥರಾಯರು, ದತ್ತಾತ್ರೇಯ ಅವರಾದಿ, ಭೀಮಸೇನರಾವ ತವಗ ಮುಂತಾದ ಕಲಬುರ್ಗಿಯ ಗಣ್ಯರೊಡನೆ ಒಳ್ಳೆಯ ಸಂಬಂಧ ಇಟ್ಟುಕೊಂಡಿದ್ದರು. ಅವರಿಗೆ ಎಲ್ಲ ಕಡೆಗೆ ಗೌರವ ಸ್ಥಾನವಿತ್ತು. ಅವರ ಜೊತೆಗೆ ಕಿಶನರಾವ ಸಿ.ಐ.ಡಿ. ಕೂಡ ಒಬ್ಬರು. ಅವರೆಲ್ಲರ ಚರ್ಚೆಗಳಲ್ಲಿ ನಾನು ಮೌನವಾಗಿ ಭಾಗವಹಿಸುತ್ತಿದ್ದೆ. ಶ್ರೀ ಮಲ್ಲಾಪುರ ಶ್ರೀನಿವಾಸರಾಯರು ಗೌರವರ್ಣದ ಎತ್ತರದ ವ್ಯಕ್ತಿ. ಯಾವ "ಭಿಡೆ" ಇಲ್ಲದೇ ಬಿಚ್ಚು ಮನಸ್ಸಿನಿಂದ ಪ್ರೀತಿ ಅಭಿಮಾನದಿಂದ ಮಾತನಾಡುವವರು.

ನನ್ನ ಇಲ್ಲಿಯವರೆಗಿನ ಬರಹ ನನ್ನ ಗಾಥ ಸಂಬಂಧವಿದ್ದ ಪ್ರಕರಣಗಳ ವಿವರಗಳ ಬಗ್ಗೆ ಮಾತ್ರ ಇದೆ. ವಕೀಲಿ ಪಾಸಾದ ನಂತರ ಆತ ವಕೀಲಿ ವೃತ್ತಿಯಲ್ಲಿ ಪಡೆದ ಯಶಸ್ಸು, ರಾಜಕೀಯದಲ್ಲಿ ಏರಿದ ಎತ್ತರ. ಮುಂತಾದ ಬಗ್ಗೆ ಬರೆಯಲು ಆತನ ಬಹಳ ಜನ ಮಿತ್ರರು ಇದ್ದಾರೆ. ಅವರು ಹೆಚ್ಚಿನ ಅಧಿಕಾರದಿಂದ ಈ ಬಗ್ಗೆ ಬರೆಯಬಲ್ಲರು. ಅದಕ್ಕಾಗಿ ಈ ಬಗ್ಗೆ ಹೆಚ್ಚಿಗೆ ಬರೆಯುತ್ತಿಲ್ಲ.

ಕೊನೆಯ ವಿಷಯವೆಂದು ಆತನಿಂದ ಬಂದ ಒಂದು ಮೆಚ್ಚಿಗೆಯ ಪತ್ರದ ಉಲ್ಲೇಖ ಮಾಡಬೇಕೆಂದಿದೆ. ನಮ್ಮ ತಂದೆ ದಿವಂಗತ ರಾ. ಭೀ. ದೇಸಾಯಿ ಅವರು ೧೯೨೨ರಲ್ಲಿ ಸ್ಥಾಪಿಸಿದ ಸಂಸ್ಥೆ. ಕುಸುಮಣ್ಣ ವಿದ್ಯಾನಂದ ಗುರುಕುಲದ ಮಾಜಿ ವಿದ್ಯಾರ್ಥಿಯೂ ಹೌದು (ಆತನ ಪ್ರವೇಶ ಸಂಖ್ಯೆ ೭೧೯ ಪ್ರವೇಶ ದಿನಾಂಕ ೧೭ನೇ ಅಮರದಾದ ೧೩೪೪ ಫಸಲಿ ಒಂದೇ ವರ್ಷ ಕುಕನೂರಲ್ಲಿ ಇದ್ದ) ೧೯೯೩ ಮಾರ್ಚನಲ್ಲಿ ರಾಷ್ಟ್ರಪತಿ ಅವರಿಂದ ರಾಷ್ಟ್ರಪ್ರಶಸ್ತಿ ದೊರೆತು ಆ ಸಂದರ್ಭದಲ್ಲಿ ತನ್ನ ಪತ್ರದಲ್ಲಿ "ದೀಪಾವಳಿಯ ಶುಭ ಗಳಿಗೆಯಲ್ಲಿ ವಿದ್ಯಾನಂದ ಗುರುಕುಲವು ರಾಷ್ಟ್ರಮಟ್ಟದ ಶ್ರೇಷ್ಠ ಶೈಕ್ಷಣಿಕ ಸಂಸ್ಥೆ ಎಂದು ಪುರಸ್ಕಾರ, ಮನ್ನಣೆ ಪಡೆದ ಸುವಾರ್ತೆಯಿಂದ ಪುಳಕಿತನಾದೆ. ನನ್ನ ಅಲ್ಪ ಬದುಕು ರೂಪಿಸಲು ಅಡಿಪಾಯ ಹಾಕಿದ ಸಂಸ್ಥೆಯ ಒಬ್ಬ ವಿದ್ಯಾರ್ಥಿ ನಾನೂ ಎಂಬ ಅರಿವು ಗರ್ವದಿಂದ ಹೆಮ್ಮೆ ಪಡುವಂಥ ಮೆರಗು ನೀಡಿದೆ, ಈ "ವಾರ್ತೆ" ಎಂದು ಬರೆದ

ಇದೇ ಸಂದರ್ಭದಲ್ಲಿ ನನಗೆ ಬರೆದ ಪತ್ರ,

ಪ್ರಿಯ ಅನ್ನಿ

'ಮಾರ್ಚ ೧೯೯೪ ರ ಮೊದಲ ತೇದಿ ಮಾತೃಭೂಮಿಗಾಗಿ ತಮ್ಮ ಸರ್ವಸ್ವ, ಶ್ರಮ, ಸಪನೆಗಳ ಸಮರ್ಪಣೆಗಳ ಯೋಗದಾನ ಮಾಡಿದ ಜೇಣಕಲ್ ದೇಸಾಯಿ ಮನೆತನದ ಪರವಾಗಿ ಅವರ ಪ್ರತಿನಿಧಿಯಾಗಿ ಸ್ವತಂತ್ರ ಭಾರತದ ರಾಷ್ಟ್ರಪತಿಗಳಿಂದ ಮನ್ನಣೆ ಪುರಸ್ಕಾರ ಗುರುಕುಲಕ್ಕಾಗಿ ಪಡೆಯುತ್ತಿರುವ ಚಿತ್ರವು ದೂರದರ್ಶನದ ಹಿಂದಿ ಮತ್ತು ಇಂಗ್ಲಿಷ್ ಸಮಾಚಾರ ಅವತರಣಿಕೆಗಳಲ್ಲಿ ಕಂಡಾಗ. ಸಣ್ಣಪ್ಪ, ಅಜ್ಜ, ರಾಘಣ್ಣ ಕಾಕಾ, ರಂಗಣ್ಣ ಕಾಕಾ, ಭೀಮಣ್ಣ ಕಾಕಾ ಅವರ ಬದುಕಿನ ಬಲಿದಾನದ ಸಾರ್ಥಕತೆಯನ್ನು ನೆನಸಿಕೊಂಡಾಗ ಹರ್ಷ ಉಲ್ಲಾಸಗಳಿಂದ ಕ್ಷಣಕಾಲ ಚಿರಂತನ ಅನುಭವಿಸಿದೆ. ದಿ. ರಾಘಣ್ಣಕಾಕಾ ಅವರ ಜೇಷ್ಠ ಪುತ್ರನಾಗಿ ಈ ಗೌರವಕ್ಕೆ ನೀನೇ ಭಾದ್ಯಸ್ಥನಾಗಿರುವೆ'.

ಕುಸುಮಣ್ಣ ರಜಾಕಾರ ಕಾಲದಲ್ಲಿ ಜೇಲು ಕಂಡು, ತನ್ನ ಕಾರ್ಯ ಮುಗಿದು, ಬಹಳ ದೊಡ್ಡದನ್ನು ಸಾಧಿಸಿದೆ ಎನ್ನಲಿಲ್ಲ. not resting on ears ಮತ್ತೆ ತುರ್ತು ಪರಿಸ್ಥಿತಿಯನ್ನು ಕೇಂದ್ರ ಸರಕಾರ ಘೋಷಿಸಿದಾಗ ಮತ್ತೆ ಕಲಬುರ್ಗಿಯಲ್ಲಿ ಜೇಲು ಸೇರಲು ಮೊದಲಿಗನೇ ಆದ. ಮನೆಯ ಚಿಂತೆ ಹೇಗೆ ನಡೆದೀತು ಎನ್ನಲಿಲ್ಲ, ಜಿಮ್ಮೇದಾರಿ ಮರೆತಿರಲಿಲ್ಲ. ತುರ್ತು ಪರಿಸ್ಥಿತಿ ಎಂದೇ ಜೇಲು ಸೇರಿದ. ಅಲ್ಲಿ ಕೂಡ ಆತನಿಗೆ ಒಳ್ಳೆಯ ಸ್ನೇಹಿತರು ಸಿಕ್ಕರು. ನಾನು ನನ್ನ ತಮ್ಮ ಅರವಿಂದನೊಡನೆ ಆತನನ್ನು ಜೇಲಿನಲ್ಲಿ ಕಾಣಲು ಹೋದಾಗ ಆತನ ಸ್ನೇಹಿತರನ್ನು ಮಾತನಾಡಿಸಲು ಅವಕಾಶ ಸಿಕ್ಕಿತು. ಜೇಲಿನ ಆಗಿನ ಡಾಕ್ಟರ ಬಡಶೇಷಿ ಎನ್ನುವರು. ಆತನು ಶ್ರೀ ಜೆ.ಎಚ್. ಪಟೇಲ (ಮಾಜಿ ಮುಖ್ಯಮಂತ್ರಿ) ಮುಂತಾದವರೊಡನಿದ್ದ ಕೊಠಡಿಗೇ ಕರೆದುಕೊಂಡು ಹೋಗಿ ಭೇಟಿ ಮಾಡಿಸಿದರು.

ಇಲ್ಲಿಯವರೆಗೆ ಕೇವಲ ಹೊಗಳಿಕೆಯನ್ನೆ ಬರೆದಿದ್ದೇನೆನ್ನ ಬೇಡಿ. ಕೆಲವರಿಗೆ ಆತನ ಉಚ್ಚಮಟ್ಟದ ಬುದ್ಧಿ, ಭಾಷಾ ಜಾಣ್ಮೆ ಗೆಳೆಯರಿಗಾಗಿ, ಬಂಧು ಬಳಗದವರಿಗಾಗಿ 'ಕೈಬಿಟ್ಟು' ಖರ್ಚು ಮಾಡುವ ಮನಸ್ಸುಗಳ ನಡುವೆಯೂ ಆತನ ಬಗ್ಗೆ ಕೆಲವರಿಗೆ ಸ್ವಲ್ಪ ಬೇಜಾರು ಇದ್ದುದೂ ನನಗೆ ಗೊತ್ತು. ಆದರೆ ಅದು ಆತನ ಒಟ್ಟಾರೆ ವ್ಯಕ್ತಿತ್ವದ ಮೇಲೆ ಪರಿಣಾಮ ಬೀರದು. ನೇ ಕೌಂಕು ಬದ್'ನ ಕಪಲಾಯಿ ಯೊಫರಜಂದ ಐಫರಜಂದ್

ಹೋ ಏಕಹಾದಾ ಅದಾ ತುಮ್ಹೆನ ಪಸಂದ

ಅನಾರಕೆ ಲತಾಫರಮೆ, ಕಮಿನಹೋ

ಗರ ಹೋ ಸಡೇ ಗಲೇ ದಾನೆ ಚಂದ

(ನಮ್ಮ ದೊಡ್ಡಪ್ಪ ಅವರು ಒಂದು ಸಂದರ್ಭದಲ್ಲಿ ಹೇಳಿದುದು)

ಒಳ್ಳೆಯವರ ಯಾವದೋ ಒಂದು ನಡೆನುಡಿ ನಿನಗೆ ರುಚಿಸಲಿಲ್ಲ ಎಂದು ಅವರನ್ನು ಕೆಟ್ಟವರೆಂದು ಕರೆಯಬೇಡ ಮಗನೆ. ಒಳ್ಳೆಯ ದಾಳಿಂಬೆ ಹಣ್ಣಿನ ೪-೫ ಕಾಳುಗಳು ಕೆಟ್ಟಿದೆ ಅಥವಾ ಕೊಳಿತಿವೆ ಎಂದು ಇಡೀ ದಾಳಿಂಬೆ ಹಣ್ಣಿನ ರುಚಿಯಲ್ಲಿ ವ್ಯತ್ಯಾಸವಾಗದು.

ದಾರಿ ದೀಪ

✽ ಡಾ. ಶ್ರೀದರ್ಶನ ದೇಸಾಯಿ

ಕುಸುಮಣ್ಣಾ ನನ್ನ ಜೀವನದ ಒಂದು ದೊಡ್ಡ ಆಧಾರಸ್ತಂಭ. ಮತ್ತು ಧ್ರುವತಾರೆಯಾಗಿದ್ದರು. ನನ್ನ ವೈಯಕ್ತಿಕ ಮತ್ತು ವೃತ್ತಿ ಜೀವನ, ಅಣ್ಣಾನು ತೋರಿಕೊಟ್ಟ ಮಾರ್ಗದ ಮೇಲೇ ನಡೆಯುತ್ತಿದೆ. ಕುಸುಮಣ್ಣಾ ನನ್ನ ಆದರ್ಶ ಅಣ್ಣಾನಾಗಿದ್ದ. ಆತ ಅಗಲಿ ಹೋಗಿದ್ದು ನನ್ನ ಬಾಳಿನ ದೊಡ್ಡ ಆಘಾತ. ಮನುಷ್ಯ ಜೀವನ ನಶ್ವರ. ಆತನೂ ಚಿರಂಜೀವಿಯಲ್ಲವೆಂದು, ನಿಸರ್ಗ ನಿಯಮವೆಂದು ನನಗೂ ಗೊತ್ತು. ಆದರೂ ಆತ ಸತ್ತಿಲ್ಲ. ಅಂಥವರಿಗೆ ಸಾವಿಲ್ಲ ಎನಿಸುತ್ತದೆ. ಹತ್ತು ಜನರಿಗೆ ಆ ಬಾಳಿಗೆ ಆಸರೆಯಾಗಿದ್ದ ಹೆಮ್ಮರದಂತೆ ಇದ್ದ ನನ್ನಣ್ಣಾ ನನ್ನ ಮನಸ್ಸಿನಾಳದಲ್ಲಿ ಅಚ್ಚಳಿಯದೇ ತನ್ನ ವ್ಯಕ್ತಿತ್ವ ಅಚ್ಚೊತ್ತಿದ್ದು ಸತ್ತೂ ಬದುಕಿದ್ದಾನೆಂದೇ ಭಾವಿಸುತ್ತಿರುವೆ. ನನ್ನ ಮನಃಪಟಲದಲ್ಲಿ ಮೂಡಿರುವ ಆತನ ಸವಿ ನೆನಪಿನ ಕೆಲ ಪ್ರಸಂಗಗಳನ್ನು ಹಂಚಿಕೊಳ್ಳುವುದು ಆತನಿಗೆ ನಾನು ತೋರುವ ಶ್ರದ್ಧಾಂಜಲಿ ಎಂದು ತಿಳಿದಿರುವೆ.

ನನಗೆ ಕುಸುಮಣ್ಣಾನಿಗೆ ೧೨-೧೩ ವರ್ಷಗಳ ಅಂತರವಿರುವುದರಿಂದ ಚಿಕ್ಕವನಾಗಿದ್ದಾಗ ನಾನು ಎದುರು ನಿಂತು ಹೆಚ್ಚು ಮಾತನಾಡುತ್ತಿರಲಿಲ್ಲ. ಅದು ಒಂದು ತರಹ ಗೌರವ ಕೊಡುವ ಪದ್ಧತಿ ಅಷ್ಟೇ. ಆದರೆ ಕುಸುಮಣ್ಣಾ ನನ್ನ ಈ ತರಹದ ಸಂಕೋಚತನ ಹೋಗಲಾಡಿಸಿದ್ದಷ್ಟೇ ಅಲ್ಲ, ನನಗಾಗಿ ಮನೆಗೆ ಬರುತ್ತಿದ್ದ ನನ್ನ ಸಹಪಾಠಿಗಳು, ಮಿತ್ರರೊಂದಿಗೆ ಸಲಿಗೆ ತೋರಿಸಿ ಮಾತನಾಡಿಸುತ್ತಿದ್ದ. ನನ್ನ ಓದು- ಬರಹ ಬೆಳವಣಿಗೆಯಲ್ಲಿ ಆಸ್ಥೆವಹಿಸುತ್ತಿದ್ದ, ನಾನು ಆರು ತಿಂಗಳ ಮಗುವಾಗಿದ್ದಾಗ ನಮ್ಮ ತಾಯಿಯನ್ನು ಕಳೆದುಕೊಂಡಿದ್ದೆ, ನನ್ನ ಅಣ್ಣಂದಿರು ಅಕ್ಕಂದಿರು ಎಲ್ಲರೂ ನನ್ನನ್ನು ಅಕ್ಕರೆಯಿಂದ ಕಾಣುತ್ತಿದ್ದರು. ನನ್ನ ತಂದೆ ವಕೀಲರಾಗಿದ್ದರು. ನನ್ನ ಕಕ್ಕನವರ ಮಕ್ಕಳು ನಾವು ಎಲ್ಲರೂ ಒಟ್ಟಿಗೇ ಬೆಳೆದೆವು.

೧೯೫೮-೧೯೫೯ರಲ್ಲಿ ಕುಸುಮಣ್ಣಾ ನಮ್ಮ ತಂದೆ ಜೊತೆಗೆ ಇನ್ನೂ ವಕೀಲಿ ವೃತ್ತಿ ಕಲಿಯುತ್ತಿದ್ದ. ೧೯೫೯ರಲ್ಲಿ ನಾನು ಮ್ಯಾಟ್ರಿಕ್ ಹೈಯರಸ್ಕೂಲ ಸರ್ಟಿಫಿಕೇಟ್ ಪರೀಕ್ಷೆಯ ಸಿದ್ಧತೆ ಮಾಡುತ್ತಿದ್ದೆ. ಪರೀಕ್ಷೆ ಮಾರ್ಚ್ ತಿಂಗಳಲ್ಲಿ ಇತ್ತು. ಒಂದು ದಿನ ಅಂದರೆ ೨೭ ಜನವರಿ ಅಂದು ನಾನು ಅಭ್ಯಾಸ ಮಾಡುತ್ತಿದ್ದಾಗ ಕುಸುಮಣ್ಣಾ ನನ್ನ ಹತ್ತಿರ ಬಂದು ಕುಳಿತು ನನ್ನ ತಲೆ ಸವರಿ-" ಪುಟ್ಟ ನೀನು ಮ್ಯಾಟ್ರಿಕ್‌ನ ವಾರ್ಷಿಕ ಪರೀಕ್ಷೆಯಲ್ಲಿ ಸೆಕೆಂಡ್‌ಕ್ಲಾಸ್‌ನಲ್ಲಿ ಪಾಸಾದರೆ, ನಿನಗೆ ಒಂದು Western trouser ಹೊಲಿಸಿ ಕೊಡ್ತೀನಿ. ಆ ಕಾಲದಲ್ಲಿ Western Trouser ಅಂದರೆ ಒಂದು ಅಪರೂಪದ ಉಡುಪಾಗಿತ್ತು. ಕುಸುಮಣ್ಣನ ಈ ಪ್ರೋತ್ಸಾಹದ ಮಾತನ್ನು ನಾನು ಪೆನ್ಸಿಲ್‌ನಿಂದ ನಮ್ಮ ತಂದೆಯವರ ಕೋಣೆ ಗೋಡೆಯ ಮೇಲೆ ಬರೆದಿಟ್ಟೆ. ೨೭ ಜನವರಿ ಎಂದು ಆ ಮಾತು ನೆನಪಿನಲ್ಲಿ ಉಳಿಯಿತು. ನನ್ನ ಮ್ಯಾಟ್ರಿಕ್ ಪರೀಕ್ಷೆಯ

ರಿಸಲ್ಟ್ ಘೋಷಿಸಿದಾಗ ನಾನು ಸೆಕೆಂಡ್‌ಕ್ಲಾಸ್‌ನಲ್ಲಿ ಉತ್ತೀರ್ಣನಾಗಿದ್ದೆ. ಎಲ್ಲರಿಗಿಂತ ಹೆಚ್ಚು ಕುಸುಮಣ್ಣನಿಗೆ ಸಂತಸವಾಗಿತ್ತು. Western Trouser ಹೊಲಿಸುವ ನೆಪವೊಡ್ಡಿ ಕುಸುಮಣ್ಣ ನನ್ನ ಜೀವನದ ತಿರುವಿಗೆ ಕಾರಣನಾಗಿದ್ದ. ನನ್ನ ಜೀವನದ ಅಭಿವೃದ್ಧಿಗಾಗಿ ಅನೇಕ ಬಾರಿ ಪ್ರೋತ್ಸಾಹದಿಂದಾಗಿ ನನ್ನಲ್ಲಿ ಸಕಾರಾತ್ಮಕ (Positive) ದೃಷ್ಟಿಕೋನ ಜಾಗೃತವಾಯಿತು, ಅಂತ ನನಗೆ ಎನಿಸುತ್ತಿದೆ.

೧೯೫೫ರಲ್ಲಿ ನಾನು ಕಾಲೇಜ್ ಕಟ್ಟೆ ಏರಿದ್ದೆ. ನನ್ನ ವಯಸ್ಸು ೧೬ ವರ್ಷ. ಡಿಸೆಂಬರ್ ತಿಂಗಳಲ್ಲಿ ನನ್ನ ಕಾಲೇಜ್ ಸಹಪಾಠಿಗಳು (Govt Arts & Science College Gulbarga) ಆಲ್ ಇಂಡಿಯಾ Educational tour ಹೋಗಲು ಸಿದ್ಧತೆ ಮಾಡಿದ್ದರು. ನನಗೂ ಅವರೊಂದಿಗೆ ಹೋಗುವ ಪ್ರಬಲ ಇಚ್ಛೆ. ನನ್ನ ಇಚ್ಛೆಯನ್ನು ಕುಸುಮಣ್ಣನಿಗೆ ವ್ಯಕ್ತಪಡಿಸಿದ್ದೆ. ಮನೆಯ ಆರ್ಥಿಕ ಪರಿಸ್ಥಿತಿ ಸಮಾಧಾನಕಾರಕವಿರಲಿಲ್ಲ. ಅಪ್ಪನ ಗಳಿಕೆ, ಕುಸುಮಣ್ಣನ ಅಲ್ಪ ಗಳಿಕೆಯಿಂದ ದೊಡ್ಡ ಕುಟುಂಬ ನಡೆಯುತ್ತಿತ್ತು. ಆಗ ಕುಸುಮಣ್ಣ ನಮ್ಮ ದೊಡ್ಡ ಮನೆಯ ನಡುವಿನ ಕೋಣೆಯಲ್ಲಿ ಪ್ರೀತಿಯಿಂದ ನನಗೆ ತಿಳಿವಳಿಕೆ ಹೇಳಿದ್ದ. "ಪುಟ್ಟೀ ನಿನ್ನ ಆಯುಷ್ಯ ಇನ್ನು ತುಂಬ ದೊಡ್ಡದಿದೆ. ನಿನಗೆ ಈಗ ಕೇವಲ ೧೬ ವರ್ಷಗಳು. ಇನ್ನೂ ನಿನಗೆ ೮೪ ವರ್ಷವಿದೆಯಲ್ಲ. ಈ ದೀರ್ಘಾಯುಷ್ಯದಲ್ಲಿ ನೀನು ಸಂಪೂರ್ಣ ಭಾರತದೇಶ ಮಾತ್ರವಲ್ಲ ಪರದೇಶಗಳಿಗೂ ಹೋಗಿ ಬರುವೆ. ಸಧ್ಯ ನಿನ್ನ ನಿರಾಶೆಯನ್ನು ಮನಸ್ಸಿನಿಂದ ತೆಗೆದುಬಿಡು" ಎಷ್ಟು ಹಿತವಾಗಿ ನನ್ನನ್ನು ಸಮಾಧಾನ ಪಡಿಸಿದ್ದ, ಈಗ ನಾನು ಕಾಲೇಜ್ ಟೀಮು ಮುಖ್ಯಸ್ಥನಾಗಿ ಸಿಂಗಾಪೂರ ಮಲೇಶಿಯಾ ಅಲ್ಲದೆ ದೇಶದ ಮೂಲೆ ಮೂಲೆ ತಿರುಗಿ ಬರುವಾಗಲೆಲ್ಲ ಕುಸುಮಣ್ಣನ ಹಿತವಚನ ನೆನೆಸುವೆ.

೧೯೬೧ರಲ್ಲಿ ನಾನು ಶಾರೀರಿಕ ಶಿಕ್ಷಣದ ಸಲುವಾಗಿ ಲಕ್ಷ್ಮೀಬಾಯಿ ನ್ಯಾಷನಲ್ ಕಾಲೇಜ್ ಆಫ್ ಫಿಜಿಕಲ್ ಎಜ್ಯುಕೇಶನ್ ಗ್ವಾಲಿಯರ್‌ಗೆ ಸೇರಿದೆ. ಅದೇ ವರ್ಷ ಕುಸುಮಣ್ಣನ ಮದುವೆ ಹರಪನಹಳ್ಳಿಯಲ್ಲಿ ಡಿಸೆಂಬರ್‌ನಲ್ಲಿತ್ತು. ನಾನು ಲಗ್ನಕ್ಕೆ ಬರದೇ Tourನಲ್ಲಿದ್ದೆ. ಮುಂದೆ ರಜೆಗೆ ಗುಲ್ಬರ್ಗಾಕ್ಕೆ ಬಂದಾಗ ಕುಸುಮಣ್ಣ ನಾನು ಲಗ್ನಕ್ಕೆ ಬರಲಿಲ್ಲವೆಂದು ಬೈಯದೇ ನನ್ನ ಕೂಡಿಸಿಕೊಂಡು ಹೇಳಿದ್ದ-- "ಪುಟ್ಟೀ ನೀನು ನಿನ್ನ ಶಿಕ್ಷಣದ Career ಪ್ರಗತಿ ಪಥದಲ್ಲಿ ಸಾಗಬೇಕಾದರೆ Inter university Tournamentನಲ್ಲಿ ಭಾಗವಹಿಸುವುದು ಅತ್ಯಂತ ಅವಶ್ಯಕ. ಇದರಿಂದ ನಿನ್ನ Career ಜೀವನದಲ್ಲಿ ಮತ್ತು ಸಮಾಜದಲ್ಲಿ ನಿನಗೆ ಸ್ಥಾನಮಾನ ಸಿಗುವುದು." ಈ ಶಬ್ದಗಳು ನನ್ನ ಕಿವಿಗಳಲ್ಲಿ Master Degree ಪಡೆಯದೇ ಅಲ್ಪ ಪಗಾರದಲ್ಲಿ ನಿನ್ನ ಜೀವನ ನಿರ್ವಹಣೆ ಹೇಗೆ ಸಾಧ್ಯ? ಮುಂದಿನ ಭವಿಷ್ಯ ಯೋಚಿಸು. ಈಗ ಹೇಗಾದರೂ ಕಷ್ಟಪಟ್ಟು ಓದು ಮುಂದುವರಿಸು", ಎಂದು ಹೇಳಿದತಾಯ್ತು ನಾನು ಕುಸುಮಣ್ಣನ ಉಪದೇಶದಂತೆ ಅದೇ ವರ್ಷ Lakshmi bai National of

Physical education course (MPEd)ಗೆ ಸೇರಿದೆ. ಕುಸುಮಣ್ಣ ಹೀಗೆ ನನಗೆ ಮಾತ್ರವಲ್ಲ ನಮ್ಮ ಕಕ್ಕನ ಮಕ್ಕಳಿಗೂ ಹೊಸ ಹೊಸ ವೃತ್ತಿ ತರಬೇತಿಗೆ ಮಾರ್ಗದರ್ಶನ ಮಾಡಿ ದೇಸಾಯಿ ಅಣ್ಣ ತಮ್ಮಂದಿರು ಸಮಾಜದಲ್ಲಿ ಉನ್ನತ ಪದವಿ ಪಡೆಯ ಯೋಗ್ಯರೆನಿಸಬೇಕೆಂದು ತಾನು ಶ್ರಮಿಸುತ್ತಿದ್ದ. ಆತ ಮನಸ್ಸು ಮಾಡಿದ್ದರೆ ಮನೆಯ ಹೊಣೆಗಾರಿಕೆ ಬಿಟ್ಟು ತನ್ನ ಭವಿಷ್ಯ ರೂಪಿಸಲು ಬೆಂಗಳೂರಿಗೆ ಹೈಕೋರ್ಟ್‌ನಲ್ಲಿ ಪ್ರಾಕ್ಟೀಸ್‌ಮಾಡಿ ಆತನ ಮಿತ್ರರಂತೆ ಹೈಕೋರ್ಟ್ ಜಡ್ಜಸ್ ಆದಂತೆ ತಾನೂ ಆಗಬಹುದಿತ್ತು. ಆದರೆ ಕುಸುಮಣ್ಣ ಕಲ್ಬುರ್ಗಿಯನ್ನೇ ಕಾರ್ಯಕ್ಷೇತ್ರಮಾಡಿಕೊಂಡು ದೊಡ್ಡಕುಟುಂಬದ ಸದಸ್ಯರನ್ನು ಪೋಷಿಸುತ್ತ ಅಲ್ಲೇ ಉಳಿದ. ಗಂಧದಂತೆ ದೇಹ ಸವಿಸಿ ಪರರ ಜೀವನ ಸುಗಂಧಮಯ ಮಾಡಿದ.

೧೯೬೬ರಲ್ಲಿ Post Graduate degree (MPEd) ಯನ್ನು ಪಡೆದೆ. ಕುಸುಮಣ್ಣನ ಸಹಕಾರ ಮಾರ್ಗದರ್ಶನದಿಂದಾಗಿ, ನಾನು ವೃತ್ತಿಯಲ್ಲಿ ಒಂದೊಂದೇ ಮೆಟ್ಟಿಲೇರುತ್ತ ನಡೆದೆ. ನಾಗಪುರ ವಿಶ್ವವಿದ್ಯಾಲಯದಲ್ಲಿ ಕ್ರೀಡಾ ನಿರ್ದೇಶಕ ಹಾಗೂ ಕುಲ ಸಚಿವ (Registrar) ಸ್ಥಾನಗಳನ್ನು ಅಲಂಕರಿಸುವಂತಾಗಿದ್ದು ಕುಸುಮಣ್ಣನ ಪರಿಶ್ರಮ ಆಶೀರ್ವಾದವೇ ಕಾರಣ. Post Graduation degree (PHD) ಡಿಗ್ರಿಯನ್ನು ನಾಗಪುರ ವಿಶ್ವವಿದ್ಯಾಲಯದಿಂದ ಪಡೆದೆ. ಅದರ ಶ್ರೇಯಸ್ಸು ಕುಸುಮಣ್ಣಗೇ ಸಲ್ಲುತ್ತದೆ. ಅದೇ ವರ್ಷ ನಾನು ವಿಕ್ರಂ ಯೂನಿವರ್ಸಿಟಿ ಉಜ್ಜೈಯನಿ (M.P)ಯ ಕ್ರಿಕೆಟ್ ಮತ್ತು ಕಬಡ್ಡಿ ಸಂಘಗಳ ಪ್ರತಿನಿಧಿತ್ವ All India Inter University Cricket ಮತ್ತು Kabaddi tournamentಗಳಲ್ಲಿ ಭಾಗವಹಿಸುವ ಸಂಧಿ ದೊರಕಿತ್ತು. ಒಂದಲ್ಲ ಎರಡು ಆಟಗಳಲ್ಲಿ ಭಾಗವಹಿಸುವ ಅವಕಾಶ ನನಗೆ ದೊರಕಿತ್ತು. ಕುಸುಮಣ್ಣನ ಪ್ರೋತ್ಸಾಹ ಉಪದೇಶದ ಫಲವಾಗಿ ನಾನು ಆ ದಿಸೆಯಲ್ಲಿ ನಡೆಯತೊಡಗಿದೆ. ಆತನ ಅಂದಿನ ಒಂದೊಂದೂ ಮಾತು ಹಿತವಚನ ಇಂದಿಗೂ ನನ್ನ ಕಿವಿಯಲ್ಲಿ ಮೊಳಗುತ್ತಿದೆ.

೧೯೬೪ರಲ್ಲಿ ನಾನು Bachelar of Physical education BPEd ಪದವಿಯಲ್ಲಿ ಉತ್ತೀರ್ಣನಾಗಿ ಕಲ್ಬುರ್ಗಿಗೆ ಬಂದೆ. ಆಗ ಏಪ್ರಿಲ್ ತಿಂಗಳು. ನಮ್ಮ ಮನೆ ಪದ್ಧತಿ ಪ್ರಕಾರ ಹಿರಿಯರಿಗೆ ಬಗ್ಗಿ ಚರಣಸ್ಪರ್ಶಮಾಡಿ ನಮಸ್ಕಾರ ಮಾಡುವ ಸಂಪ್ರದಾಯ. ಅದೇ ರೀತಿ ನಾನು ನಮ್ಮ ತಂದೆಯವರಿಗೆ ನಮಸ್ಕರಿಸಿ ಕುಸುಮಣ್ಣನ ಹತ್ತಿರ ಬಂದು ಬಗ್ಗಿ ನಮಸ್ಕಾರ ಮಾಡಿದೆ. ಕುಸುಮಣ್ಣನ ರೂಢಿಯ ಪ್ರಕಾರ ಬಗ್ಗಿ ನಮಸ್ಕಾರ ಮಾಡಿದಾಗ ನನ್ನ ಬೆನ್ನಿನ ಮೇಲೆ ಒಂದು ಪ್ರೀತಿಯ ಗುದ್ದು ಹಾಕಿ ನನಗೆ ಹೇಳಿದ್ದ- Shetteps (ಪ್ರೀತಿಯಿಂದ ಹಾಗೆ ಕರೆಯುತ್ತಿದ್ದ) Your education is incomplete without a post graduate degree in that Profession. ನನ್ನ ಮನಸ್ಸಿನ ತುಮುಲ ಕುಸುಮಣ್ಣನಿಗೆ ಅರಿವಾಗಿತ್ತೇನೋ- ಆಗ ನಾನು ಯೋಚಿಸಿದ್ದು--- ಬರೀ ನನ್ನ Career ಅಂತ ಮನೆಯಿಂದ ದೂರ

ಜವಾಬ್ದಾರಿಗಳಿಂದ ದೂರವಾಗಿದ್ದೀನಿ...... ಇನ್ನು ನೌಕರಿ ಹಿಡಿದು ಕುಸುಮಣ್ಣನಿಗೆ ಸಹಾಯಕನಾಗಿ ನಿಲ್ಲಬೇಕು. ಅದನ್ನು ಗ್ರಹಿಸಿ ಆತ ಹೇಳಿದ್ದು, "ಪುಟ್ಟೀ...... ಮನೆ ಚಿಂತಿ ಮಾಡಬ್ಯಾಡ...... ಹೇಗೂ ನಡೆಯುತ್ತಿದೆ. ನಾಳೆ ನಿನ್ನ ಲಗ್ನವಾಗಿ ಹೆಂಡ್ತಿ--ಮಕ್ಕಳನ್ನು ಸಾಕಬೇಕಾಗುತ್ತದೆ". ನನ್ನ ಎಲ್ಲ ಪುಸ್ತಕ ಮತ್ತು ಇತರ ವಸ್ತುಗಳನ್ನು ಮದ್ರಾಸ್‌ನಲ್ಲೆ ಇಟ್ಟಿದ್ದೆ. ಎಲ್ಲ ಸಾಮಾನುಗಳನ್ನು ಕಲ್ಬುರ್ಗಿಗೆ ತರಲು ಸಿದ್ಧತೆ ಮಾಡಿ ಊರಿಂದ ಹೊರಡುವಾಗ ಕುಸುಮಣ್ಣನಿಗೆ ಬಗ್ಗಿ ಸಮಸ್ಕಾರ ಮಾಡಲು ಹತ್ತಿರ ಹೋದೆ. ಯಥಾ ಪ್ರಕಾರ ಬಗ್ಗಿದಾಗ ಕುಸುಮಣ್ಣ ಪ್ರೀತಿಯಿಂದ ನನ್ನ ಬೆನ್ನಿನ ಮೇಲೆ ಗುದ್ದಿದ ಅನಂತರ ಹೇಳಿದ..... "ಪುಟ್ಟೀ..... ಶೇರ್ ಪಿಂಜರೆಮೆ ಫಸಾ ಹುವಾ ತೂ ಕ್ಯಾ ಹುವಾ..... ಶೇರ್ ಗೋಸ್ತ ಹಿ ಖಾಯಗಾ ಘಾಸ ನಹಿ...... ನೀನು ನಿಮ್ಮ ಕಾಲೇಜಿನ ಪ್ರಿನ್ಸಿಪಾಲರ ಜೊತೆ ಭೆಟ್ಟಿಗೆ ಹೋದಾಗ--- ಮಾತುಕತೆ ಮಾಡುವಾಗ ನಿನ್ನ Self dignityಯನ್ನು ಲಕ್ಷ್ಯದಲ್ಲಿಟ್ಟು ಮಾತಾಡು."

ಕುಸುಮಣ್ಣನ ಹೇಳಿಕೆಯ ಪ್ರಕಾರ ಪ್ರಿನ್ಸಿಪಾಲರ ಜೊತೆಗೆ ನಾನು ನನ್ನ ತಲೆ ಎತ್ತಿಯೆ ಮಾತಾಡಿದ್ದೆ.

೬ ಜೂನ್ ೧೯೭೪ನೆ ದಿನ ನನಗೆ ನಾಗಪುರ ವಿಶ್ವವಿದ್ಯಾಲಯದಿಂದ ಕ್ರೀಡಾ ನಿರ್ದೇಶಕ (Dirctor of Physical Education) ಸ್ಥಾನದ Interview call ಬಂದಿತ್ತು. ಆಗ ನಾನು ಕಲ್ಬುರ್ಗಿಯಲ್ಲಿದ್ದೆ. ಕುಸುಮಣ್ಣ- ಭಾಭಿ (ಅತ್ತಿಗೆ) ನನ್ನ ಮದುವೆಗಾಗಿ ಕನ್ಯಾ ಆಯ್ಕೆ ಮಾಡಿದ್ದರು. ನಮ್ಮ ಮನೆ ಪದ್ಧತಿ ಪ್ರಕಾರ- ಕುಸುಮಣ್ಣನ ಇಚ್ಛೆಯಂತೆ No Catte show ಕನ್ಯಾ ನೋಡುವುದು. ಶಿರಾ-ಉಪ್ಪಿಟ್ಟು ತಿನ್ನುವುದು..... ಒಲ್ಲೆ ಎನ್ನುವುದು ಇರಲಿಲ್ಲ. ನೋಡುವುದು ಒಂದೇ ಕನ್ಯೆ ಲಗ್ನವಾಗುವುದೂ ಅವಳನ್ನೇ. ಅವಳು ಬೇಕಾದರೆ ಒಲ್ಲೆ ಎನ್ನಬಹುದು. ಆದರೆ ಕನ್ಯೆ ನೋಡುವಾಗ ಕುಸುಮಣ್ಣ- ಅತ್ತಿಗೆ ಪೂರ್ವಭಾವಿಯಾಗಿ ಕನ್ಯೆಯ ಸ್ವಭಾವ ಮನೆತನ ನನ್ನ ಸ್ವಭಾವಕ್ಕೆ ಹೊಂದಾಣಿಕೆಯಾಗಬಹುದೇ? ಎಲ್ಲ ಅವರೇ Decide ಮಾಡುತ್ತಿದ್ದರು. ಹಿರಿಯ ಅತ್ತಿಗೆಗೆ ದೊಡ್ಡತ್ತಿಗೆ ಎಂದು ಎರಡನೇಯವರಿಗೆ ಸಣ್ಣತ್ತಿಗೆ ಎಂದೂ ಮೂರನೇವರಾದ ಕುಸುಮಣ್ಣನ ಪತ್ನಿ-ಸರಿತಾರವರಿಗೆ ಅತ್ತಿಗೆ ಎಂದೂ ನಾಲ್ಕನೇ ಅಣ್ಣನ ಹೆಂಡ್ತಿ ಬೆಳಗಾಂವ್‌ದವರಾಗಿದ್ದರಿಂದ ವೈನಿ ಎಂದೂ ಕರೆಯುತ್ತಿದ್ದೆ. ಅತ್ತಿಗೆಗೆ ಎಲ್ಲರೂ ಭಾಭಿ ಎಂದೇ ಕರೆಯುತ್ತಿದ್ದರು. ೧೯೬೬ ರಲ್ಲಿ ನಮ್ಮ ತಂದೆ (ಸಂಜೀವರಾಯರು) ಬದರೀಯಾತ್ರೆಯಿಂದ ಮನೆಗೆ ಮರಳದೇ ದಿಲ್ಲಿಯಲ್ಲಿ ನಮ್ಮನ್ನಗಲಿದರು. ಅವರ ಕೊನೆಯ ಗಳಿಗೆಯಲ್ಲಿ ಕುಸುಮಣ್ಣ ಇದ್ದ. ನಾನು ಅತ್ತಿಗೆಯವರು ಬದರೀ ಸಮಾರಂಭದ ಸಿದ್ಧತೆಯಲ್ಲಿದ್ದಾಗ ಕುಸುಮಣ್ಣ ದಿಲ್ಲಿಯಿಂದ ಟೆಲಿಗ್ರಾಂನಿಂದ ಅಪ್ಪ ಅವರ ಅಗಲಿಕೆ ತಿಳಿಸಿದ್ದ. ನಮ್ಮ ಉಳಿದ ಅಣ್ಣಂದಿರು ಎಲ್ಲರೂ ಕಲ್ಬುರ್ಗಿಯಲ್ಲಿ ಸೇರಿದ್ದೆವು. ಕುಸುಮಣ್ಣ ಅಸ್ತಿ ವಿಸರ್ಜನೆ ಕಾರ್ಯ ಮುಗಿಸಿಕೊಂಡೇ ಬಂದ. ಅಪ್ಪ ಅವರ ಅಗಲಿಕೆ ಕುಸುಮಣ್ಣಗೆ ಸಹನಾತೀತವಾಗಿತ್ತು. ನಾವೆಲ್ಲ ಸಂಬಾಳಿಸಿದ್ದೆವು.

ನಾನು Master of Physical Education degreeಯನ್ನು ಪಡೆದ ಫಲ ಸ್ವರೂಪವಾಗಿ ನನ್ನನ್ನು Y.M.C.A. College of Physical Education Madrasನ ಉಪನ್ಯಾಸಕನಾಗಿ ನಿಯುಕ್ತಿ ಮಾಡಲಾಯಿತು. ಅಲ್ಲಿ ೧೯೬೭-೬೮ರಲ್ಲಿ ಒಂದು ವರ್ಷ ಉಪನ್ಯಾಸಕರ ಕೆಲಸ ಮಾಡಿದೆ. ೧೯೬೮ರಲ್ಲಿ ನನ್ನನ್ನು ಕೆಲಸದಿಂದ ತೆಗೆದು ಹಾಕಲಾಯಿತು. ಆಗ ನಾನಿನ್ನೂ Bachelor. ಕಾಲೇಜ್ ನಿಂದ Termination letter ನನಗೆ ಸಿಕ್ಕಾಗ ನಾನು ಹೌಹಾರಿದೆ. ಯೂನಿವರ್ಸಿಟಿಯಿಂದ ಬಂದ ಪತ್ರ Interview date ಸಹ ೧೪ ಜೂನ್ ಇತ್ತು. ನಾನು ಉಭಯ ಸಂಕಟದಲ್ಲಿ ಬಿದ್ದೆ. ಯಥಾ ಪ್ರಕಾರ ನಾನು ಕುಸುಮಣ್ಣನ ಮುಂದೆ ಮಾರ್ಗದರ್ಶನ ಪಡೆಯಲು ಪತ್ರ ಆತನ ಕೈಗಿಟ್ಟು ನಿಂತೆ. ಕುಸುಮಣ್ಣ ಹೇಳಿದ--" ಪುಟ್ಟೀ---- ಮದುವೆ ಜೀವನದ ಅತ್ಯಂತ ಮಹತ್ವದ ಘಟನೆ. ಅದನ್ನು ಮುಂದುಹಾಕಲಾಗುವುದಿಲ್ಲ. ನಾಗಪುರ ವಿಶ್ವವಿದ್ಯಾಲಯಕ್ಕೆ Vice-chancellar ಮತ್ತು Registrarಗೆ ಮದುವೆಯ Invitation Card ಜೊತೆಗೆ Interviewನ ಬೇರೆ ದಿನಾಂಕವನ್ನು ಕೊಡಲು ವಿನಂತಿ ಮಾಡುವ ಪತ್ರ ಹಾಕು." ಅದೇ ಪ್ರಕಾರ ನಾನು ನನ್ನ ಮದುವೆ ಕರೆಯೋಲೆ ಜೊತೆಗೆ ವಿನಂತಿ ಪತ್ರ ರವಾನಿಸಿದೆ. ನಿಶ್ಚಿತ ತಾರೀಕಿಗೆ ನನ್ನ ಮದುವೆ ಶೀಲಾಳೊಂದಿಗೆ ನೆರವೇರಿತು. ಆಶ್ಚರ್ಯದ ಸಂಗತಿಯೆಂದರೆ-- ನಾಗಪುರ ವಿಶ್ವವಿದ್ಯಾಲಯ ನನಗೆ ೧೨ ಜುಲೈಗೆ Interview ನಿಶ್ಚಿತ ಮಾಡಿ ನನ್ನ ಒಬ್ಬನಿಗೇ ಪರ್ಸನಲ್ ಸಂದರ್ಶನ ತೆಗೆದುಕೊಂಡದ್ದು ಮಾತ್ರವಲ್ಲ ನನ್ನನ್ನೇ Select ಮಾಡಿದರು. ಕುಸುಮಣ್ಣನ ಮುಂದಾಲೋಚನೆ Decisive mind ಮಾರ್ಗದರ್ಶನದಿಂದಾಗಿ ನಾನು ನಾಗಪುರ ವಿಶ್ವವಿದ್ಯಾಲಯದಲ್ಲಿ Director of Physical Education ಸ್ಥಾನವನ್ನು ೨೫ ವರ್ಷ ಅಲಂಕರಿಸಿ ನಾಗಪುರವನ್ನು ನನ್ನ ಕರ್ಮಭೂಮಿಯನ್ನಾಗಿ ಮಾಡಿಕೊಂಡೆ.

ಮದುವೆಯಾಗಿ ಅನೇಕ ವರ್ಷಗಳವರೆಗೆ ನನಗೆ ಮಕ್ಕಳಾಗಲಿಲ್ಲ. ದೊಡ್ಡಣ್ಣ ಹಾಗೂ ಕುಸುಮಣ್ಣಗೆ ಮಕ್ಕಳಿರಲಿಲ್ಲ. ಆದ್ದರಿಂದ ಅವರೆಲ್ಲರೂ ಬಹಳ ಚಿಂತಿತರಾಗಿದ್ದರು. ಅನೇಕ ವರ್ಷಗಳ ನಂತರ ಮೊದಲು ನಮಗೆ ಮಗಳು ನಂತರ ಮಗ ಹುಟ್ಟಿದರು. ಮಗಳು ಹುಟ್ಟಿದ ಸುದ್ದಿಗೆ ಕುಸುಮಣ್ಣನಿಗೆ ಪಹಲಿ ಭೇಟಿ ಘೀ ರೋಟಿದಲ್ಲಿ ಬರ್ತೀವಿ ಕುಸುಮಣ್ಣ ಗೃಹ ಪ್ರವೇಶದ ಸಿಹಿ ಸಹ ತರ್ತೀನಿ" ಎಂದಿದ್ದೆ.

"ಘೀರೋಟಿ" ಎಂಬ ಶಬ್ದಗಳಿಂದ "ಹೆಣ್ಣು" ಎಂಬ ಅಸಮಾಧಾನ ಬೇಡ ಎಂದು ವ್ಯಕ್ತ ಪಡಿಸಿದ್ದ. ಮಗ ಕಾರಹುಣ್ಣಿವೆ ದಿವಸ ಹುಟ್ಟಿದ್ದರಿಂದ ಕುಸುಮಣ್ಣ" Congradulations for Kara Hunime Basappa ಎಂದು ಟೆಲಿಗ್ರಾಂ ಕೊಟ್ಟಿದ್ದ. ನನ್ನ ಮಕ್ಕಳಿಬ್ಬರೂ ಕುಸುಮಣ್ಣ- ಅತ್ತಿಗೆಗೇ "ಅಪ್ಪ- ಅಮ್ಮ" ಎಂದು ಕರೆಯುತ್ತಾರೆ. ಕುಸುಮಣ್ಣಗೆ ಮಕ್ಕಳನ್ನು ಕಂಡರೆ ಬಹಳ ಮಮಕಾರ ಪ್ರೀತಿ.

ಮೂರದ ನಾಗಪುರದಿಂದ ನಾವೆಲ್ಲರೂ ಕಲ್ಬುರ್ಗಿಗೆ ಭೆಟ್ಟಿಗೆ ಹೋಗುತ್ತಿದ್ದೆವು. ಕುಸುಮಣ್ಣಗೆ ಎರಡು ಸಲ ಹೃದಯದ ಆಪರೇಶನ್ ಆದಾಗ ಅತ್ತಿಗೆಗೆ ಕ್ಯಾನ್ಸರ್ ಆದಾಗ ನಾವು ದಂಪತಿಗಳು ಅವರ ಬಳಿ ಬೇಕೇಬೇಕು. ಆತನ ಸುಖದಲ್ಲಿ- ದುಃಖದಲ್ಲಿ ನಾವಿಬ್ಬರೂ ಜೊತೆಗಿರುತ್ತಿದ್ದೆವು.

ಇತ್ತೀಚೆಗೆ ಎರಡು ವರ್ಷಗಳಿಂದ ಹೃದಯ ತಪಾಸಣೆಗೆ ಸೂಪರ್ ಹಾಸ್ಪಿಟಲ್‌ಗಾಗಿ ಕುಸುಮಣ್ಣಾ ಕಲ್ಬುರ್ಗಿ ಬಿಟ್ಟು ಬೆಂಗಳೂರಲ್ಲಿ ನೆಲೆಸಿದಾಗ ವಾರಕ್ಕೆರಡು ಫೋನ್‌ಕಾಲ್ ಇರುತ್ತಿತ್ತು.

ಡಿಸೆಂಬರ್ ೨೯ ರಂದು ೨೦೦೨ ರಲ್ಲಿ ನನ್ನ ಹೊಸ ಮನೆಯ ಗೃಹ ಪ್ರವೇಶಕ್ಕೆ ಬರಲೇ ಬೇಕೆಂದು ಆಗ್ರಹಿಸಿದಾಗ ಕುಸುಮಣ್ಣಾ "ಇದು ನನ್ನ ಅಸ್ತಮಾ ಪೀರಿಯಡ್ ತಿಂಗಳು. ಅಲ್ಲಿ ಬರಲು ತೊಂದರೆಯಾಗಿದೆ ಆದ್ದರಿಂದ ನೀನೇ ಒಮ್ಮೆ ಬಂದು ಭೆಟ್ಟಿ ಕೊಟ್ಟು ಹೋಗು" ಎಂದ. ಅದರಂತೆ ನಾನು ಡಿಸೆಂಬರ್ ೧೮ ರಂದು ಭೆಟ್ಟಿಯಾಗಿ ಆಶೀರ್ವಾದ ಪಡೆದೆ. ತಾ. ೨೯ ರಂದು ಕುಸುಮಣ್ಣಾ ಶೀಲಾ ಮಕ್ಕಳೊಡನೆ ನನ್ನೊಂದಿಗೆ ಮಾತನಾಡಿ ಶುಭ ಹಾರೈಸಿದ್ದ, ದೃಢವಾದ ಧ್ವನಿ ನಗು ನಗುತ್ತ ಮಾತನಾಡಿದ್ದ. "ಪುಟ್ಟೀ ಗೃಹ ಪ್ರವೇಶಕಾರ್ಯ ಮುಗಿದ ಕೂಡಲೇ ಬಾರಪ್ಪ ನಿನ್ನ ಪ್ಲೇನ್ ಖರ್ಚು ಕೊಡ್ತೀನಿ" ಎಂದ. ಆತನಿಗೆ ಏನೆನಿಸಿತ್ತೋ!

೨೦೦೨ ತಾ. ೩೧ ರಂದು ರಾತ್ರಿ ೧೨ ೧/೨ಗೆ ಕುಸುಮಣ್ಣಾ ಫೋನ್‌ನಲ್ಲಿ 'ಹೊಸ ವರುಷ ಹರುಷ ತರಲಿ" ಎಂದು Wishಮಾಡಿದ್ದ. ಇದ್ದಕ್ಕಿದ್ದಂತೆ ೩ನೇ ತಾ. ರಾತ್ರಿ ೧೨ ಗಂಟೆಗೆ ಕುಸುಮಣ್ಣಾ ಇನ್ನಿಲ್ಲವೆಂದು ಅತ್ತಿಗೆ ತಿಳಿಸಿದಾಗ ದೊಡ್ಡ ಆಘಾತ!

ಆತನ ಕ್ರಿಯಾ-ಕರ್ಮ ಶ್ರದ್ಧೆಯಿಂದ ಮಾಡಿದೆ. ಮಾಸಿಕ ಮಾಡುತ್ತಿರುವೆ. ಆದರೆ ಮಗುವಿದ್ದಾಗಿನಿಂದ ತನ್ನ ಮಗನಂತೇ ಸಾಕಿ ಸಲುಹಿದ ಕುಸುಮಣ್ಣನ ಋಣ ತೀರಿಸಲು ಸಾಧ್ಯವೇ?

ಬಹುಮುಖ ವ್ಯಕ್ತಿತ್ವದ ಸ್ವಾನುಭವ

❁ ರಾಯಸಂ ಶ್ರೀನಿವಾಸರಾವು

ಶ್ರೀ ಕುಸುಮಾಕರ ಸಂಜೀವರಾವು ದೇಸಾಯಿಯವರು ಶತಮಾನದಿಂದಲೂ ಸ್ವಾತಂತ್ರ್ಯ ಸಮರದಲ್ಲಿ ಪ್ರಮುಖ ಸ್ಥಾನವನ್ನು ಪಡೆದ ದೇಸಾಯಿ ವಂಶಸ್ಥ. ಕಲ್ಬುರ್ಗಿಯ ಪ್ರಸಿದ್ಧ ವಕೀಲರೂ, ಪ್ರಖ್ಯಾತಿ ಪುರುಷರೂ ಆದ ಶ್ರೀ ಸಂಜೀವರಾವ ದೇಸಾಯಿಯವರ ಪುತ್ರರು. ವಂಶದಲ್ಲಿಯೇ ಬೇರೂರಿದ ಜನತಾಸೇವೆ, ನಿಃಸ್ವಾರ್ಥತೆ, ಪರೋಪಕಾರತ್ವ, ಹಿಂದುಳಿದ ವರ್ಗದ ಉನ್ನತಿಗೆ ಸಾಹಸಪಡುವ ಮನೋವೃತ್ತಿ, ವಿದ್ಯಾರ್ಥಿಗಳಿಗೆ ತನುಮನ ಧನ ಸಹಾಯಕ ಸ್ವಭಾವ, ವೃತ್ತಿಯಲ್ಲಿ ಗೌರವ, ಖ್ಯಾತಿ ಪ್ರಖ್ಯಾತಿ, ಸ್ನೇಹ ಹಿತೈಷಿ, ದಯಾಮಯತ್ವ ಮುಂತಾದ ವಿಶೇಷ ಸದ್ಗುಣಗಳ ಸಂಪನ್ನರು. ಇಂತಹ ಕುಸಮಾಕರ ದೇಸಾಯಿಯವರು ನಮ್ಮ ಹತ್ತಿರದ ಬಂಧುಗಳೆಂದು ಹೇಳಿಕೊಳ್ಳಲು ಹೆಮ್ಮೆಪಡುತ್ತೇನೆ. ಬಂಧುಗಳೆಂದರೆ ತೀರ ಹತ್ತಿರ ಬಂಧುತ್ವ. ಶ್ರೀ ಕುಸುಮಾಕರರ ಜೀವನ ಸಂಗಾತಿ ಸರಿತಾ ಕುಸಮಾಕರ ದೇಸಾಯಿ ನನ್ನ ಒಡಹುಟ್ಟಿದ ತಂಗಿ. ನಮ್ಮ ಮನೆಯ ಹೆಸರು 'ಸರಸ' (ಸರಸ್ವತಿ).

ನನ್ನ, ಶ್ರೀ ಕುಸುಮಾಕರರ ವಾಸಸ್ಥಳ, ಕಾರ್ಯಕ್ಷೇತ್ರ, ವೃತ್ತಿ ಬೇರೆ ಬೇರೆಯಾದವುಗಳಾದ್ದರಿಂದ (ತಮಿಳನಾಡಿನ ಮದ್ರಾಸ್, ನೈವೇಲಿ) ನೈಜಾಮೆ ಕರ್ನಾಟಕದ ಗುಲ್ಬರ್ಗಾ (ಕಲ್ಬುರ್ಗಿ) ನನ್ನ ಅವರ ಪರಸ್ಪರ ಸಂಪರ್ಕ ಭೇಟಿಗಳು ವಿರಳವಾದರೂ ಆ ಕೆಲವೇ ಸನ್ನಿವೇಶಗಳಿಂದ ಅವರ ವಿವಿಧ ವ್ಯಕ್ತಿತ್ವದ ಬಗ್ಗೆ ಪೂರ್ಣ ಮಾಹಿತಿಯೇ ನನಗಾಗಿದೆ. ಕೆಲವನ್ನು ಮಾತ್ರ ಇಲ್ಲಿ ಉದಾಹರಿಸಿದ್ದೇನೆ.

ನನ್ನ ಅವರ ಪ್ರಥಮ ಪರಿಚಯ ಕಲ್ಬುರ್ಗಿಯ ಅವರ ಮನೆಯಲ್ಲಿ, ಅದು ನಾನು ನಮ್ಮಣ್ಣ ಹಯಣ್ಣ (ಹಯವದನ ರಾವು) ಅಲ್ಲಿಗೆ ಸರಸಳ ವಿವಾಹದ ಬಗ್ಗೆ ಅವರ ಷರತ್ತುಗಳನ್ನು ತಿಳಿಯಲು ಬಯಸಿ ಶ್ರೀ ಸಂಜೀವರಾಯರಲ್ಲಿಗೆ ಹೋದಾಗ. ಅಲ್ಲಿ ನಾವು ಮೂರು ದಿವಸಗಳನ್ನು ಕಳೆದರೂ, ಆದರಾತಿಥ್ಯ, ಊಟ ಉಪಚಾರಗಳಲ್ಲಿಯೇ ಕಾಲವ್ಯಾಪನೆಯಾಯಿತೇ ಹೊರತು ನಮ್ಮ ಕೆಲಸ ಆಗಲಿಲ್ಲ. ವರದಕ್ಷಿಣೆ, ವರೋಪಚಾರಗಳು, ವಸ್ತ್ರಾಭರಣಗಳು ಇವುಗಳ ಪ್ರಸ್ತಾಪವನ್ನೆತ್ತಲೇ ಆಗಲಿಲ್ಲ. ಹೀಗಿರುವಾಗ ಆಪ್ತರೊಬ್ಬರು ಬಂದು "ಶ್ರೀಯುತ ಸಂಜೀವರಾಯರಿಗಾಗಲಿ, ಅವರ ಮನೆಯ ಬೇರೆ ಯಾರಿಗೆ ಆಗಲಿ ಈ ತರಹದ ಮಾತುಕತೆಗಳು ಹಿಡಿಸವು. ವಿವಾಹಕ್ಕೆ ಅವರ ಯಾವ ಷರತ್ತೂ ಇಲ್ಲ. ದೇಸಾಯಿ ಮನೆತನದವರ ಸ್ಥಾನಮಾನಗಳಿಗೆ ತಕ್ಕಂತೆ ಗೌರವಯುತವಾಗಿ ನಮ್ಮ ಅನುಕೂಲತೆಗಳನ್ನೂ ಲಕ್ಷಿಸಿ ಶ್ಲಾಘ್ಯವಾಗಿ ಮದುವೆ ಮಾಡಿಕೊಟ್ಟರಾಯಿತು. ಈ ವಿಷಯಕ್ಕಾಗಿ ನಾವು ಬಂದಿರುವೆಂದೂ ಅವರಿಗೆ ತಿಳಿಯಬಾರದಂತೆ ನೋಡಿಕೊಳ್ಳಿರಿ" ಎಂದು ಹೇಳಿದರು. ನಮಗೆ ಸಮಾಧಾನವಾಯಿತು. ಆಮೇಲೆ ಕೆಲವು ದಿನಗಳ ನಂತರ ಶ್ರೀ ಕುಸುಮಾಕರರೇ ಈ

ವಿಷಯವನ್ನು ತಿಳಿಸಲು ಆ ಆಪ್ತರಿಗೆ ಹೇಳಿದರೆಂದು ತಿಳಿದು ಶ್ರೀ ಕುಸುಮಾಕರರ ಸೂಕ್ಷ್ಮ ಪರಿಸ್ಥಿತಿ ಗ್ರಹಣ, ಇತರರ ಕಷ್ಟ ಪರಿಹಾರಕ ಸ್ವಭಾವ, ನಿಃಸ್ವಾರ್ಥತೆ ಬಗ್ಗೆ ನನಗೆ ಅರಿವಾದುದು. ಇನ್ನೊಂದು ವಿಷಯವೇನೆಂದರೆ ಪದ್ಧತಿಯಂತೆ ಮದುವೆಯಲ್ಲಿ ಕುಸುಮಾಕರರಿಗೆ ಬಂಗಾರದ ಉಂಗುರ ನೀಡಿತ್ತು. ಅವರ ಅಭಿಲಾಷೆಯಂತೆ ಖಾದಿ ವಸ್ತ್ರಗಳ ಜೊತೆಗೆ ಅವರಿಗೆ ಅದೂ ಚಿನ್ನ ಮುಂತಾದ ಯಾವ ಆಭರಣಗಳಲ್ಲಿ ಅವರ ಅಪೇಕ್ಷೆ ಇಲ್ಲವೆಂದು ಆ ಉಂಗುರವನ್ನು ನನ್ನ ತಂಗಿಗೇ ಕೊಟ್ಟುಬಿಟ್ಟರು. ಇದರಿಂದ ಅವರಿಗೆ ಅಯಿಷ್ಟವಾದುದನ್ನು ಯಾರು ಮಾಡಿದರೂ ಆ ಮಾಡಿದವರ ಮನಸ್ಸನ್ನು ನೋಯಿಸದೇ ಅಯಿಷ್ಟತೆಯನ್ನು ತೋರುಗೊಡದೇ ಪರಿಷ್ಕಾರವನ್ನು ಮಾಡುವ ಉನ್ನತ ಔಚಿತ್ಯ, ಉದಾರತೆ ಇದೆ ಎಂದು ಅನುಭವವಾಯಿತು. ಅವರ ಮದುವೆ ಸಹ ಬಹಳ ಸರಳ ರೀತಿಯಲ್ಲಿ ಆಗಬೇಕೆಂಬುದು ಅವರ ಅಪೇಕ್ಷೆ ಆಗಿತ್ತು. ಆದರೆ ಅವರ ಬಂಧು-ಬಳಗ, ನಮ್ಮ ಬಳಗ ಜನರ ಊಟೋಪಚಾರಕ್ಕೆ ಮಿತಿ ಇರಲಿಲ್ಲ. ಬ್ಯಾಂಡ್-ವಾದನಗಳಿರಲಿಲ್ಲ. ಆಡಂಬರಗಳಿಲ್ಲ. ನನಗೆ ಸರಸ ಕೊನೆಯ ತಂಗಿ. ನಾನು eldest, ಅವಳು youngest, ಆದ್ದರಿಂದ ಕೊಂಚ ಮಟ್ಟಿಗೆ ಲಕ್ಷಣವಾಗಿಯೇ ಮದುವೆ ನೆರವೇರಿತು. ಅವರ ಚಿಕ್ಕಪ್ಪಂದಿರು ಹೇಳಿದ್ದು "ಬೀಗರು ಎಂದು ನಮ್ಮನ್ನು Big ಮಾಡಬ್ಯಾಡ್ರಿ, ನಮ್ಮ ಮನಿಗೆ ಉಭಯ ಕುಲ ನಂದಿನಿಯಾಗಿ ನಿಮ್ಮ ತಂಗಿ ಬರ್ತಾಳೆ ನಿಮ್ಮ ತ್ಯಾಗ ದೊಡ್ಡದು". ಎಂತಹ ಉದಾತ್ತ ಮನಸ್ಸು ಎಷ್ಟು ಸುಸಂಸ್ಕೃತ ನಡವಳಿಕೆ!

ಶ್ರೀ ಕುಸುಮಾಕರರು ವಿದ್ಯಾಪಕ್ಷಪಾತಿಗಳು. ಪ್ರೌಢಶಾಲೆಯ ವಿದ್ಯೆಯಾಗಲಿ, ಸಾಮಾನ್ಯ ವಿದ್ಯೆಯಾಗಲಿ, ಯಾವ ಶಾಖೆಯ ವಿದ್ಯೆಯಾಗಲಿ, ವಿಜ್ಞಾನ, ವೈದ್ಯಕೀಯ, ಕಾನೂನು ಯಾವುದೇ ಆಗಲಿ ಓದಬಯಸುವವರಿಗೆ ಎಲ್ಲ ಸೌಕರ್ಯಗಳನ್ನು ಒದಗಿಸಿ ಕೊಡುತ್ತಿದ್ದರು. ತಮ್ಮ ಬಂಧು ವರ್ಗದವರೇ ಆಗಲಿ ಬೇರೆಯವರಾಗಲೀ ಇವರ ಸಹಾಯ ಬಯಸಿ ಬಂದವರಿಗೆ ಪ್ರೋತ್ಸಾಹ ಕೊಟ್ಟು ಎಲ್ಲ ರೀತಿಯಿಂದಲೂ ಸಹಾಯ ನೀಡುತ್ತಿದ್ದರು. ಎಷ್ಟೋ ಮಂದಿ ಅವರ ಮನೆಯಲ್ಲಿಯೇ ವಾಸವಾಗಿದ್ದು ವಿದ್ಯಾಭ್ಯಾಸ ಮಾಡುತ್ತಿದ್ದರು. ಅವರ ಮನೆ ವಿದ್ಯಾರ್ಥಿಗಳಿಗೆ ತೆರೆದ ಬಾಗಿಲಿನ ಮನೆಯಾಗಿದ್ದಿತು. ಇದು ಅವರ, ಎಲ್ಲರೂ ವಿದ್ಯಾವಂತರಾಗಿ ಉನ್ನತ ಸ್ಥಾಯಿಯನ್ನು ಗಳಿಸಿ ಜನತೆಯ ಏಳಿಗೆಗೆ ಕಾರಣರಾಗಬೇಕೆಂಬ ಉತ್ಕಟೇಚ್ಛೆಯ ನಿದರ್ಶನ.

ನನ್ನ ತಂಗಿ 'ಸರಿತಾ' ಅವರ ಮನೆ ಸೇರಿದಾಗ ಅವಳು ಮಧ್ಯಮ ವರ್ಗದ ವಿದ್ಯಾವಂತೆಯಾಗಿದ್ದಳು. ಪದವೀಧರಳಾಗಬೇಕು. ಪ್ರೌಢ ವಿದ್ಯಾವತಿಯಾಗಬೇಕೆಂಬ ಇಚ್ಛೆಯಿದ್ದರೂ ಅದು ನಮ್ಮಿಂದ ಪೂರ್ತಿಗೊಳಿಸಲಾಗಿದ್ದಿಲ್ಲ. ಕುಸುಮಾಕರರು ಇದನ್ನು ಗುರುತಿಸಿ ಅವಳಿಗೆ ವಿದ್ಯಾ ವ್ಯಾಸಂಗ ಮುಂದುವರಿಸಲು ಪ್ರೋತ್ಸಾಹಿಸಿ ಪದವೀಧರಳೂ ನ್ಯಾಯವಾದಿಯೂ, ಅದೂ ಹೆಚ್ಚಿಗೆ ಪ್ರೌಢಿಮೆ ಯಶಸ್ಸು ಕೀರ್ತಿ ಗಳಿಸುವಂತೆ ಮಾಡಿದರು.

ಮತ್ತು ಅವರು ಸಾಹಿತ್ಯ ಪ್ರೇಮಿಗಳು. 'ಸರಿತಾ' ಸ್ವಲ್ಪ ಸ್ವಲ್ಪ ಸಣ್ಣ ಪುಟ್ಟ ಲೇಖನಗಳನ್ನು ಬರೆಯಲು ಕಲಿತಿದ್ದರೂ ಇವರ ಬೆಂಬಲ, ಪ್ರೋತ್ಸಾಹ, ಆಗ್ರಹಗಳಿಂದ ಅವಳು ಪ್ರೌಢ ನ್ಯಾಯವಾದಿ, ಸಾಹಿತಿಯಾಗಲು ಅನುವು ಮಾಡಿಕೊಟ್ಟರು. ಇದು ಅವರ ವಿದ್ಯಾಭಿಮಾನ, ವಿದ್ಯಾ ಪಕ್ಷಪಾತ, ಸಾಹಿತ್ಯ ಪ್ರೇಮಗಳನ್ನು ನಿದರ್ಶಿಸುತ್ತವೆ.

ಶ್ರೀ ಕುಸುಮಾಕರರು ನಿಃಸ್ವಾರ್ಥ ದೇಶ ಸೇವಕರು, ಉತ್ಕಟ ದೇಶಾಭಿಮಾನಿಗಳು, ವಿವಿಧ ಭಾಷೆಯನ್ನು ತಿಳಿದವರು, ಸತ್ಯಾಗ್ರಹಿಗಳು, ಇವುಗಳಿಂದ ರಾಜಕೀಯ ರಂಗದಲ್ಲಿ ಹೆಚ್ಚಿನ ಗೌರವ ಸ್ಥಾನಗಳು ಇವರಿಗೆ ಲಭಿಸಿದ್ದರೂ, ಪದವಿಗಳು ಸಿಕ್ಕಿರಲಿಲ್ಲ. ಅದರ ಆಸೆಯೂ ಇವರಿಗೆ ಇರಲಿಲ್ಲ. ಕಾರಾಗೃಹವಾಸ, ರಾಜಕೀಯದಿಂದ ವೃತ್ತಿಗೆ ಆತಂಕ, ಆರ್ಥಿಕ ದುಃಸ್ಥಿತಿ ಇವುಗಳಿಗೆ ಸಿಕ್ಕು ಬಿದ್ದಿದ್ದರೂ ಯಾರಿಂದಲೂ ಏನನ್ನೂ ಆಶಿಸಿದವರಲ್ಲ. ಪದವಿಯ ವ್ಯಾಮೋಹ, ಆಸೆ ಇಲ್ಲದಿರುವುದಕ್ಕೆ ಇವರು ಕರ್ನಾಟಕ ಪಟ್ಟಣ ನೀರು ಸರಬರಾಜು ಇಲಾಖೆಯ ಚೇರ್‌ಮನ್‌ರಾಗಿದ್ದು, ಪ್ರಖ್ಯಾತಿ ಪಡೆದು ಎಲ್ಲರೂ ಇವರ ಕೆಲಸವನ್ನು ಮೆಚ್ಚಿ ಹೊಗಳಿದ್ದರೂ, ಇವರು ಪಾರ್ಟಿ ಮುಖ್ಯಮಂತ್ರಿಗಳು ತ್ಯಾಗಪತ್ರ ಸಲ್ಲಿಸಬೇಕಾಗುವುದೇನೋ ಎಂಬ ಪರಿಸ್ಥಿತಿ ಬಂದಾಗ, ತಾವು ಮುಂಚಿತವಾಗಿಯೇ ತಮ್ಮ ಹುದ್ದೆಗೆ ತ್ಯಾಗಪತ್ರ ಸಲ್ಲಿಸಿಬಿಟ್ಟರು. ಇದು ಇವರ ನಿಃಸ್ವಾರ್ಥಸೇವೆ ಪದವಿಯ ವ್ಯಾಮೋಹವಿಲ್ಲದಿರುವಿಕೆಯ ನಿದರ್ಶನಗಳು.

ಇವರಿಗೆ ಜಾತಿ, ಮತ ಭೇದಗಳಿರಲಿಲ್ಲ. ಹಿಂದುಳಿದ ಜಾತಿಯವರು ಇವರ ಮನೆಯಲ್ಲಿಯೇ ಇದ್ದು ಜೀವನೋಪಾಯವನ್ನು ಕಲ್ಪಿಸಿಕೊಂಡು ಮುಂದಾಗುತ್ತಿದ್ದರು.

ಇವರು ಧೈರ್ಯಶಾಲಿಗಳು, ಸ್ವತಃ ಧೈರ್ಯಶಾಲಿಗಳಾದರೂ, ಈ ಧೈರ್ಯ, ಕಷ್ಟ ಪರಿಸ್ಥಿತಿಗಳನ್ನು ಸುನಾಯಾಸವಾಗಿ ಎದುರಿಸಿ, ಕಷ್ಟದಲ್ಲಿಯೂ ಸುಖವನ್ನು ಕಾಣುವ ಮನೋಭಾವ ಉಳ್ಳವರು. ಈ ಗುಣಗಳನ್ನು ಅವರ ಸಂಗಾತಿಯಾದ ಸರಿತಾಳಲ್ಲಿ ತುಂಬಿ ಅವಳೂ ಧೈರ್ಯವಾಗಿ ಕಷ್ಟಗಳನ್ನೆದುರಿಸಲು ಸಮರ್ಥಳನ್ನಾಗಿಸಿದ್ದರು. ಇವರು ಏಳು ಎಂಟು ತಿಂಗಳುಗಳ ಕಾಲ ಬಂಧನದಲ್ಲಿದ್ದರೂ, ಮನೆ, ಮನೆತನದ ಜವಾಬ್ದಾರಿ, ಆರ್ಥಿಕ ದುಃಸ್ಥಿತಿ ಇವುಗಳಿಗೆ ಎದೆಗೆಡದೆ ಅದರ ಇಂಬನ್ನಾದರೂ ನಮಗೆ ಯಾರಿಗೂ ತಿಳಿಯಗೊಡದಂತೆ ಎಲ್ಲವನ್ನೂ ಒಬ್ಬಳೇ ನಿಭಾಯಿಸುತ್ತಿದ್ದಳು. ಇದು ಅವರ ಶ್ರೀ ಕುಸುಮಾಕರರ ಶಿಸ್ತಿನ ಗುಣಪಾಠ ಎಲ್ಲರೂ ಕಲಿಯಬೇಕಾದುದು.

ಹೀಗೆ ವಿಶಿಷ್ಟ ಗುಣಗಳಿಂದ, ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಿದ್ದು, ದೇಹಾಲಸ್ಯದಿಂದ ಬಳಲುತ್ತಿದ್ದಾಗಲೂ, ಧ್ಯಾನ, ಯೋಗ ಮುಂತಾದವುಗಳ ಮರ್ಮವನ್ನರಿತು ಅವುಗಳನ್ನೂ ಅಭ್ಯಾಸ ಮಾಡಿ ತುಂಬು ಜೀವನವನ್ನು ನಡೆಸಿದವರು.

ಇಂತಹ ಆತ್ಮೀಯ ಬಂಧು, ಸ್ನೇಹಿತರೂ, ವಿಶ್ವಾಸಪ್ರಿಯರೂ, ಪ್ರೀತಿಯ ನಿಧಿಯೂ ಇನ್ನಿಲ್ಲವೆಂದು ಖೇದವಿದ್ದರೂ ಅವರ ಸ್ಮರಣೆಯಿಂದ ಸ್ವಲ್ಪ ಸಮಾಧಾನ.

ನಾನು ವಯಸ್ಸಿನಲ್ಲಿ ಕುಸುಮಾಕರನಿಗಿಂತ ಬಹಳ ದೊಡ್ಡವನು. ಕುಸುಮಾಕರನಲ್ಲಿ ಹಿರಿಯರ ಬಗ್ಗೆ ಬಹಳ ಗೌರವ-ವಿನೀತಭಾವವಿತ್ತು. ಇತ್ತೀಚೆಗೆ ತನ್ನ ಅನಾರೋಗ್ಯದ ಸಮಯದಲ್ಲಿ ಮದ್ರಾಸಿಗೆ ಬರಲಾಗುತ್ತಿರಲಿಲ್ಲ. ಆದರೆ ಅರ್ಧಗಂಟೆ ಫೋನ್‌ನಲ್ಲಿ ಮಾತನಾಡುತ್ತಿದ್ದರು. ಇತ್ತೀಚೆಗೆ ಆತನಿಗೆ ವೇದಾಂತದ ಬಗ್ಗೆ ಆಸಕ್ತಿ ಮೂಡಿತ್ತು. ಆರೋಗ್ಯ, ಜ್ಯೋತಿಷ್ಯ, ಉಪನಿಷತ್, ಸಂಸ್ಕೃತ, ಸಾಹಿತ್ಯ ಎಲ್ಲ ಫೋನ್‌ನಲ್ಲೇ ಕೇಳುತ್ತಿದ್ದ.

ಶ್ರೀ ಕುಸುಮಾಕರರ ಕಣ್ಮರೆ (ನಿಧನ)ಯಿಂದ ಖೇದ ವಿಷಾದಕ್ಕೊಳಗಾದವರ, ಖೇದ ವಿಷಾದಗಳು ಅವರ ಸಂಸ್ಮರಣೆಯಿಂದ ಉಪಶಮನವಾಗುತ್ತದೆ ಎಂದು ನಂಬಿರುವೆ.

"ನನ್ನ ಕುಸುಮಣ್ಣ"

❁ ಡಾ. ಶಾಂತಾ ಆನಂದ ದೇಸಾಯಿ.

ನಮ್ಮ ಮತ್ತು ಕುಸುಮಣ್ಣನ ನಡುವಿನ ಸ್ನೇಹ, ಬಾಂಧವ್ಯ ಮತ್ತು ಒಡನಾಟ ಎಷ್ಟು ಸುದೀರ್ಘ ಇತ್ತೆಂದರೆ ಅದರ ಬಗ್ಗೆ ಬರೆಯಲು ಕೂತರೆ ಎಲ್ಲಿಂದ ಶುರುಮಾಡಬೇಕು ಮತ್ತು ಎಲ್ಲಿಗೆ ನಿಲ್ಲಿಸಬೇಕು ಎನ್ನುವುದೇ ತಿಳಿಯುವುದಿಲ್ಲ.

ನಾನು ಅವರನ್ನು ಚಿಕ್ಕ ಹುಡುಗಿಯಿದ್ದಾಗಿನಿಂದ ನೋಡಿದ್ದೇನೆ ಮತ್ತು ದೈವವಶಾತ್ ಈಗ ನಾನು ಅವರ ಮನೆತನದ ಒಬ್ಬ ಸದಸ್ಯೆ, ಅವರ ತಮ್ಮನ ಹೆಂಡತಿ.

ನಾನು ಶಾಂತಾ ರಾವ್ ಇಂದ ಶಾಂತಾ ಆನಂದ ದೇಸಾಯಿ ಆಗಲಿಕ್ಕೆ ಕೂಡ ಕುಸುಮಣ್ಣ ಮತ್ತು ನನ್ನ ಪ್ರೀತಿಯ ಸರಿತಾ ಭಾಭಿಯೇ ಕಾರಣ.

ನಾನು ಸ್ಕೂಲಿನಲ್ಲಿ (ಗುಲ್ಬರ್ಗಾ) ಇದ್ದಾಗಲೇ ಕುಸುಮಣ್ಣನ ಹೆಸರು ಬಹಳ ಕೇಳುತ್ತಿದ್ದೆ. ನನ್ನ ಈ ಸ್ಕೂಲಿನ ಕಟ್ಟಡಕ್ಕೆ ಹತ್ತಿಯೇ ಶ್ರೀ ಕುಸುಮಾಕರ ದೇಸಾಯಿಯವರ ಮನೆಯ ಗೋಡೆ ಇತ್ತು. ಆಗ ನಾವು ಚಿಕ್ಕ ಹುಡುಗಿಯರೆಲ್ಲ "ಈ ಮನೆಯಲ್ಲಿ ಯಾರೋ ದೊಡ್ಡ ವ್ಯಕ್ತಿ ಇರುತ್ತಾರಂತೆ" ಎಂದು ಮಾತನಾಡಿಕೊಳ್ಳುತ್ತಿದ್ದೆವು. ಆಗಲೇ ನನ್ನ ಸಹಜವಾದ ಹುಡುಗಿಯ ಮನಸ್ಸಿನ ಮೇಲೆ ಇವರ ಬಗ್ಗೆ ಕುತೂಹಲ ಕೆರಳಿತ್ತು. ನನ್ನ ತಂದೆಯವರೂ ಕೂಡ ಇವರೊಬ್ಬರು ಗಣ್ಯವ್ಯಕ್ತಿ ಎಂದು ಮಾತನಾಡಿಕೊಂಡದ್ದನ್ನು ಕೇಳುತ್ತಿದ್ದೆ.

ನನ್ನ ವೈದ್ಯಕೀಯ ವಿದ್ಯಾಭ್ಯಾಸ ಮುಗಿಯುವ ಹೊತ್ತಿಗೆ ನನ್ನ ಸೀನಿಯರ್ ಡಾ. ವಸುಧಾ ಅನಿರುದ್ಧ ದೇಸಾಯಿ (ಈಗ ನನ್ನ ನೆಗೆಣ್ಣಿ) ನನ್ನ ಮದುವೆಯ ಪ್ರಸ್ತಾಪ ಕುಸುಮಣ್ಣನ ತಮ್ಮ (ಕಕ್ಕನ ಮಗ) ಆನಂದ ದೇಸಾಯಿ ಜೊತೆಗೆ ಮಾಡಿದಾಗ ನನಗೆ ಆದ ಹೆಮ್ಮೆ ಸಂತಸ ಅಷ್ಟಿಷ್ಟಲ್ಲ.

ಆಗಿನಿಂದ ಅಂದರೆ ೧೯೬೬ ನಿಂದ ೨೦೦೩ ವರೆಗೆ ನನ್ನ ಆತ್ಮೀಯತೆ ಕುಸುಮಣ್ಣ ಮತ್ತು ಸರಿತಾ ಬಾಬಿ ಜೊತೆಗೆ ಬಹಳ ಬಹಳ ನಿಕಟವಾಗಿ ಬೆಳೆಯಿತು. ನಾವು ಮುಂಬಯಿಯಲ್ಲಿ ಇದ್ದಾಗ ಈ ಹರೆಯದ, ಯಾವಾಗಲೂ ನವ ದಂಪತಿಗಳಂತೆ ಇರುವ ಇವರು ನಮ್ಮಲ್ಲಿ ಬಹಳ ಬಾರಿ ಬಂದದ್ದುಂಟು. ಕುಸುಮಣ್ಣನ ನಡೆಯುವ ಠೀವಿ, ಅವರ ಅಜಾನುಬಾಹುಗಳು, ಅವರ ಗಂಭೀರ ಮುಖಭಾವ ಡೀಪ್ ಧ್ವನಿ, ಖಾದಿ ಉಡುಪು ಯಾವಾಗಲೂ ನನಗೆ ಒಂದು ತರಹದ ಶ್ರದ್ಧೆ ಮತ್ತು ಗೌರವ ಭಾವ ತರುತ್ತಿತ್ತು.

ಅವರು ಅದೇ ಆಥೋರೇಟೀವ್ ಧ್ವನಿಯಲ್ಲಿ ಸರಿತಾ ಭಾಭಾಗೆ" ಎಲೈ ದುಷ್ಟ ಹೆಂಡತಿಯೇ" ಎಂದು ನಗೆಚಾಟಿಯಿಂದ ಕರೆದು ತಮ್ಮ ಅಪಾರ ಪ್ರೀತಿಯನ್ನು ಹೀಗೆ ವ್ಯಕ್ತಪಡಿಸುತ್ತಿದ್ದರು.

ನನ್ನ ಮಗಳು (ಗುಲ್ಬರ್ಗಾದಲ್ಲಿ) ಹುಟ್ಟಿದಾಗ ಅವಳ ದೊಡ್ಡ ಮೂಗು ಮತ್ತು ಮುಖದ

ಕಟ್ಟು ನೋಡಿ ಅವರು "ನಿನ್ನ ಮಗಳು ಮುಂದೆ ಶರ್ಮಿಲಾ ಟಾಗೋರ ತರಹ ಆಗುತ್ತಾಳೆ" ಎಂದು ಪ್ರೀತಿಯಿಂದ ನುಡಿದಿದ್ದರು.

ನಾನು ತಿಳಿದ ಹಾಗೆ ಅವರು ಬಹಳ ಅಭಿಮಾನಿಗಳು. ಒಂದು ಸಣ್ಣ ಸೂಕ್ಷ್ಮ ವಿಷಯದಿಂದಲೂ ಅವರ ಸ್ವಾಭಿಮಾನಕ್ಕೆ ಧಕ್ಕೆ ಆದರೆ ಅವರು ಬಹಳ ನೊಂದುಕೊಳ್ಳುತ್ತಿದ್ದರು. ನಾವಿಬ್ಬರೂ ಅವರನ್ನು ಬಹಳವಾಗಿ ಈ ಬಗ್ಗೆ ಮಾತಾಡಿ ಸಮಾಧಾನ ಮಾಡಿಕೊಳ್ಳಲಿಕ್ಕೆ ಹೇಳುತ್ತಿದ್ದೆವು.

ಅವರು ಕೆಲವು ವಿಷಯಗಳ ಬಗ್ಗೆ ಬಹಳ ಸುದೀರ್ಘ ಚರ್ಚೆ ಮಾಡುತ್ತಾ ನಮ್ಮ ಜೊತೆಗೆ ಕಾಲ ಕಳೆದುದುಂಟು.

ಅವರ ಪೊಲಿಟಿಕಲ್ ಕರಿಯರ್ ಬಗ್ಗೆ, ತಮ್ಮ ಸೋಸಿಯಾಲಿಸ್ಟ್ ವಿಚಾರಗಳು ತಾವು ಕಾರಾಗೃಹದಲ್ಲಿ ಕಳೆದ ದಿನಗಳ ಚಳುವಳಿಗಳ ಬಗ್ಗೆ ಗಣ್ಯವ್ಯಕ್ತಿಗಳ ಜೊತೆಗೆ ಆಗುತ್ತಿದ್ದ ವಿಚಾರ ಮಂಥನದ ಬಗ್ಗೆ ಬಹಳ ಆಸಕ್ತಿಯಿಂದ ಹೇಳುತ್ತಿದ್ದರು.

ಎರಡನೆಯದಾಗಿ ಅವರ ಪ್ರೀತಿಯ ವಿಷಯ ಎಂದರೆ ತಮ್ಮ ಪರಿವಾರದ ವ್ಯಕ್ತಿಗಳ ಬಗ್ಗೆ, ಇದನ್ನ ಅವರು ಬಹಳ ಸುಖ ದುಃಖಗಳ ಸಮ್ಮಿಶ್ರದಿಂದ ಹೇಳುತ್ತಿದ್ದರು.

ಅವರಿಗೆ ತಮ್ಮ ದೇಸಾಯಿ ಮನೆತನದ ಬಗ್ಗೆ ಬಹಳ ಹೆಮ್ಮೆ ಆದರ ಇದ್ದಿತ್ತು. ಇವರು ಬಹಳಷ್ಟು ಜನರಿಗೆ ಜೀವನಕ್ಕೆ ದಾರಿ ಮಾಡಿಕೊಟ್ಟಿದ್ದಾರೆ.

ಇವರಿಗೆ ತಮ್ಮ ಪರಿವಾರದಿಂದ ಸುಖ ದುಃಖ ಎರಡೂ ಆಗಿದ್ದರೂ ಕೊನೆಯ ತನಕ ತಮ್ಮವರ ಬಗ್ಗೆ ಅಭಿಮಾನ ಮಾತ್ರ ಎಂದೂ ಕಡಿಮೆ ಮಾಡಲಿಲ್ಲ.

ಅವರ ಬಗ್ಗೆ ನೆನಪು ಮಾಡುತ್ತಾ ಕುಳಿತರೆ ನನ್ನ ನೆನಪಿನ ಫಲಕದ ಮೇಲೆ ಮೂಡುವ ಚಿತ್ರಗಳಿಗೆ ಅಂತ್ಯವೇ ಇಲ್ಲ.

ಅವರು ಒಂದು ಧೃಡ ಮನಸ್ಸಿನ ವ್ಯಕ್ತಿ ಮತ್ತು ತಮ್ಮ ವಿಚಾರದಲ್ಲಿ ಬಹಳ ಆಳವಾದ ವಿಶ್ವಾಸ ಇಟ್ಟವರು. ಅದರಲ್ಲಿ ಅವರು ಸ್ವಲ್ಪವೂ ಕಾಂಪ್ರೊಮೈಸ್ ಮಾಡಿದವರಲ್ಲ. ಹೀಗಾಗಿ ಅವರು ಕೆಲವರನ್ನು ದೂರಮಾಡಿಕೊಂಡಿರಬಹುದು. ಆದರೆ ಅವರನ್ನು ಸರಿಯಾಗಿ ತಿಳಿದವರು ಮಾತ್ರ ಅವರನ್ನು ಯಾವಾಗಲೂ ಗೌರವದಿಂದ ಪ್ರೀತಿಯಿಂದ ಕಾಣುತ್ತಾರೆ. ಇಂತಹವರಲ್ಲಿ ನಾನೊಬ್ಬಳು.

ಹೀಗಿದ್ದರು ನಮ್ಮ ಭಾವ ಕುಸುಮಣ್ಣ

❁ ಗೀತಾ ದೇಸಾಯಿ

ಕುಸುಮಾಕರ ದೇಸಾಯಿಯವರು ನಮ್ಮ ಯಜಮಾನರ ದೊಡ್ಡಪ್ಪ ದಿ. ಶ್ರೀ ಸಂಜೀವ ರಾಯರ ಪುತ್ರರಾಗಿದ್ದರು. ಅವರು ನನ್ನ ಭಾವ ಆಗುವದಕ್ಕಿಂತ ಮೊದಲು ನನ್ನ ತಂದೆ ದಿ. ಶ್ರೀ ಜಯತೀರ್ಥರಾಜಪುರೋಹಿತರ ಆತ್ಮೀಯ ಗೆಳೆಯರಾಗಿದ್ದರು. ಕುಸುಮಣ್ಣ ಅವರ ತಂದೆಯವರು ಮತ್ತು ಚಿಕ್ಕಪ್ಪಂದಿರೆಲ್ಲರೂ ಆಗ ಹೈದರಾಬಾದಿನಲ್ಲಿದ್ದ ನನ್ನ ಅಜ್ಜ ದಿ. ರಾಮಚಂದ್ರ ಪಟವಾರಿಗೆ (ನನ್ನ ತಾಯಿಯ ತಂದೆ) ಚಿರಪರಿಚಿತರಾಗಿದ್ದರು. ಹೀಗಾಗಿ ಕುಸುಮಣ್ಣ ಅವರು ನನ್ನನ್ನು ನೋಡುತ್ತ ಬಂದಿದ್ದರು. ನನ್ನ ಮದುವೆ ಅವರ ಚಿಕ್ಕಪ್ಪನ ಮಗನ ಜೊತೆಗೆ ಆದ ಮೇಲೆ ಕೂಡ ಅವರು ನನಗೆ ಹೊಸಬರೆನಿಸಿರಲಿಲ್ಲ. ಅವರು ನನಗೆ ಯಾವಾಗಲೂ ತಂದೆ ಸಮಾನರಾಗಿದ್ದರು.

ನನಗೆ ಈಗ ಮೊಮ್ಮಕ್ಕಳಾಗಿದ್ದರೂ ನಾನು ಅವರ ದೃಷ್ಟಿಯಲ್ಲಿ ಚಿಕ್ಕ ಹುಡುಗಿಯೆ. ನಾನು ಅವರ ಮನೆಗೆ ಯಾವಾಗ ಹೋದರೂ ಸಲುಗೆಯಿಂದ ನನ್ನನ್ನು ನೋಡಿ "ಯಾರು ತಂಗೀ ಬಂದಾಳೇನು ಏನು ಹ್ಯಾಗಿದ್ದಿ" ಎಂದು ಹೇಳಿ ನಾನು ನಮಸ್ಕರಿಸಲು ಬಗ್ಗಿದಾಗ ಬಹಳ ಅಂತಃಕರಣದಿಂದ ಮೆತ್ತಗೆ ಬೆನ್ನಿಗೆ ಗುದ್ದುತ್ತಿದ್ದರು. ನಾವು ಮಕ್ಕಳ ಜೊತೆಗೆ ಹೋದಾಗ ಕುಸುಮಣ್ಣ ಮತ್ತು ಸರಿತಾಭಾಭಿ ಇಬ್ಬರಿಗೂ 'ಸಂಭ್ರಮ' ನನಗೂ ನನ್ನ ತವರು ಮನೆಗೆ ಬಂದಷ್ಟೇ ಸಂತೋಷ ಸಂಭ್ರಮವಾಗುತ್ತಿತ್ತು.

ನಾನು ಚಿಕ್ಕವಳಿದ್ದಾಗ ನಮ್ಮ ತಂದೆಯವರು ಗುಲ್ಬರ್ಗಾದಲ್ಲಿದ್ದರು. ನನಗೆ ಸಂಗೀತದ ಹುಚ್ಚು. ಬಹಳ ಚಿಕ್ಕವಳಿದ್ದಾಗಿನಿಂದ ಎಷ್ಟೋ ಸಮಾರಂಭಗಳಲ್ಲಿ ಪ್ರಾರ್ಥನೆ, ದೇಶಭಕ್ತಿ, ಹಾಡು, ಸಿನೆಮಾ ಹಾಡುಗಳನ್ನು ನಿರ್ಭಯದಿಂದ ಸ್ಟೇಜಿನಮೇಲೆ ಹಾಡುತ್ತಿದ್ದೆ. ಇದಕ್ಕೆಲ್ಲಾ ಹುರಿದುಂಬಿಸುವವರು ನಮ್ಮ ಕುಸುಮಣ್ಣ ಅವರೇ. ಜೊತೆಯಲ್ಲಿ ಅವರ ಕೊನೆಯ ದಿನಗಳಲ್ಲಿ ಕೂಡ ನಾನು ಭಜನೆ ಹಾಡುವುದನ್ನು ಕೇಳಿ ಆನಂದಿಸಿದ್ದರು.

ಕುಸುಮಣ್ಣ ಅವರು ಹಾಸ್ಯ ಪ್ರವೃತ್ತಿಯವರು ಅವರು ಸೀರಿಯಸ್ಸಾಗಿದ್ದಾರೆಂದು ತಿಳಿದು ಸ್ವಲ್ಪ ದಿನ ಅವರ ಜೊತೆಗಿರಲು ನಾನು ಮತ್ತು ನಮ್ಮವರು ಬೆಂಗಳೂರಿಗೆ ಹೋಗಿದ್ದೆವು. ಒಂದು ದಿನ ಸಾಯಂಕಾಲ ನಾವೆಲ್ಲರೂ ಹರಟೆ ಹೊಡೆಯುತ್ತ ಟಿವಿ ನೋಡುತ್ತ ಕುಳಿತಿದ್ದೆವು. ಆಗ ಟಿವಿಯಲ್ಲಿ ಅಮಿತಾಭ್ ಬಚ್ಚನ್ ಬಿಳೀದಾಡಿ ಬಿಟ್ಟುಕೊಂಡು ಗಂಭೀರ ಮತ್ತು ಶಾಂತ ಧ್ವನಿಯಲ್ಲಿ ಏನೋ ಹೇಳುತ್ತಿದ್ದ. ಟಿ.ವಿ. ಪಕ್ಕದಲ್ಲೇ ಕುಸುಮಣ್ಣ ಕುಳಿತಿದ್ದರು. ನಾನು ಅವರ ಕಡೆಗೊಮ್ಮೆ ಮತ್ತು ಅಮಿತಾಭ್‌ಬಚ್ಚನ್ ಕಡೆಗೊಮ್ಮೆ ನೋಡತೊಡಗಿದೆ. ಮತ್ತೆ ಕುಸುಮಣ್ಣನಿಗೆ ತಮಾಷೆ ಮಾಡುತ್ತ "ನೋಡಿ ಕುಸುಮಣ್ಣ ನೀವು ಥೇಟ ಅಮಿತಾಭಬಚ್ಚನ್ ಥರ ಕಾಣಸ್ತೀರ. ಅದೇ ಫೇಸ್ಕಟ್ ಅದೇ ಬಿಳೀಗಡ್ಡ ಮತ್ತು ಅದೇ ತರಹದ ಗಂಭೀರ ಆಳವಾದ ಧ್ವನಿ ನಿಮಗೆ

ಇದೆ" ಎಂದು. ಆಗ ಅವರು ಏನೆಂದರು ಗೊತ್ತೇ? "ಅಲ್ಲ ಗೀತಾ ನಾನು ಎಷ್ಟು ಹ್ಯಾಂಡ್‌ಸಮ್ ಇದ್ದೀನಿ. ಗೊತ್ತದ. ನಾನು ದಿನಾ ಮಾರ್ನಿಂಗ್ ವಾಕ್‌ಗೆ ಪಾರ್ಕಿಗೆ ಹೋಗ್ತೀರಬೇಕಾದ್ರೆ ಎಷ್ಟೋ ಹುಡುಗಿಯರು ತಿರುತಿರುಗಿ ನೋಡತಿರ್ತಾರ. ಒಬ್ಬಾಕಿ ಫಿಲಸ್ತ್ರಾರ ಅಂತೂ ನನ್ನ ಬೆನ್ನ ಹತ್ತಿದ್ದಳು. ಆದರೆ ಈ ದುಷ್ಟ ಹೆಂಗಸಿದ್ದಾಳಲ್ಲ (ಅವರ ಹೆಂಡತಿ ಸರಿತಾಬಾಯಿ ಕಡೆ ಕೈಮಾಡಿ) ಆಕಿ ನಾಗರಹಾವಿನ ಹೆಡೆಹಾಂಗ ನನ್ನ ಕಡೆಯೇ ದೃಷ್ಟಿ ಇಟ್ಟಾಳಲ್ಲ ಅದಕ್ಕೇನ ಮಾಡಬೇಕು" ಎಂದು ತಮಾಷೆ ಮಾಡಿದರು.

ನಮ್ಮದು ಗುಜರಾತದಲ್ಲಿ ವಾಸ. ಅವರದು ಗುಲ್ಬರ್ಗಾದಲ್ಲಿ. ನಮ್ಮ ಮತ್ತು ಅವರದು ಭೇಟಿ ಬಹಳ ಅಪರೂಪಕ್ಕೊಮ್ಮೆ ಆಗುತ್ತಿತ್ತು. ಆ ಅಲ್ಪ ಸಮಯದ ಭೆಟ್ಟಿ ಕೂಡ ನಮಗೆ ಮರೆಯಲಾಗದ ಸಂತೋಷದ ಸುಭ್ರಮದ ಘಳಿಗೆಗಳಾಗಿದ್ದವು.

ನಮ್ಮ ಮನೆಯ ಎಲ್ಲಾ ಶುಭಕಾರ್ಯಗಳಲ್ಲಿ ಈ ದಂಪತಿಗಳು ಬಂದು ಬಹಳೇ ಉತ್ಸಾಹ ಮತ್ತು ಸಡಗರದಿಂದ ಪಾಲ್ಗೊಳ್ಳುತ್ತಿದ್ದರು. ನಮ್ಮ ಸರಿತಾ ಭಾಬಿಗಂತೂ ಮದುವೆ ಸಂದರ್ಭದ ಹಾಡುಗಳನ್ನು ಹಾಡುವುದೆಂದರೆ ಆಯಿತು. ಅವರ ಉತ್ಸಾಹಕ್ಕೆ ಮಿತಿಯೇ ಇರುತ್ತಿರಲಿಲ್ಲ. ಮದುವೆ ಮನೆಯಲ್ಲೆಲ್ಲಾ ಗಂಡ ಹೆಂಡತಿ ಜೊತೆ ಜೊತೆಯಾಗಿ ಎಲ್ಲರಲ್ಲೂ ಎದ್ದು ಕಾಣುತ್ತಿದ್ದರು.

ಕುಸುಮಾಕರ ದೇಸಾಯಿಯವರು ಗುಲ್ಬರ್ಗಾದಲ್ಲಿ ಪ್ರಸಿದ್ಧ ವಕೀಲರು ಮತ್ತು ರಾಜಕೀಯ ಧುರೀಣರಾಗಿದ್ದರು. ಅವರು ಎಷ್ಟು ದೊಡ್ಡಮನುಷ್ಯರೋ ಅಷ್ಟೇ ದೊಡ್ಡ ಮನಸ್ಸಿನವರು. ಅವರ ಮನೆಯ ಸದಸ್ಯರೇ ೨೫ ಜನ ಇರುತ್ತಿದ್ದರು. ಅವರ ತಮ್ಮಂದಿರ ಮಕ್ಕಳು, ಇತರ ಬಂಧುಗಳು ಕಾರಣಾಂತರದಿಂದ ಅಲ್ಲಿಯೇ ಒಟ್ಟಿಗೇ ಇರುತ್ತಿದ್ದರು. ಹೊರಗಿನವರಿಗೆ ಅವರ ಮಕ್ಕಳು ಯಾರು? ಅವರ ತಮ್ಮಂದಿರ ಮಕ್ಕಳಾರು? ಎಂಬುದೇ ಗೊತ್ತಾಗುತ್ತಿರಲಿಲ್ಲ. ಅಷ್ಟು ಒಗ್ಗಟ್ಟು ಆ ಮನೆಯ ಜನರಲ್ಲಿತ್ತು. ಕುಸುಮಣ್ಣ ಅವರು ತಮ್ಮ ತಂದೆಯಿಂದ ಬಂದ ಈ ಸಂಪ್ರದಾಯವನ್ನು ಕೊನೆಯವರೆಗೂ ನಡೆಸಿಕೊಂಡು ಬಂದರು. ಅವರ ಮನೆಯಲ್ಲಿ ಎಷ್ಟೋ ದೂರದ ಬಂಧುಗಳು, ಬಡಹುಡುಗರು ಆಶ್ರಯ ಪಡೆದರು. ಅವರು ಕೊನೆಯವರೆಗೂ ಬಡವರಿಗೆ ಆಶ್ರಯಕೊಟ್ಟು ಅವರ ಜೀವನೋಪಾಯಕ್ಕೆ ಮಾರ್ಗಮಾಡಿಕೊಟ್ಟಿದ್ದಾರೆ.

ಅವರೆಲ್ಲರೂ ಈಗ ದೂರ ದೂರ ದೊಡ್ಡ ದೊಡ್ಡ ನೌಕರಿ ಮಾಡುತ್ತ ಸಂಸಾರಿಗಳಾಗಿ ಸುಖವಾಗಿದ್ದಾರೆ. "ಅವರಲ್ಲಿ ಕೆಲವರನ್ನು ಕರೆಸಬಹುದಿತ್ತು. ಈಗ ಇಬ್ಬರೇ ಹೇಗೆ ಇರುತ್ತೀರಿ"? ಎಂದೆ. ಮೆಲು ನಗುತ್ತ ಕುಸುಮಣ್ಣ ಹೇಳಿದ್ರು. "ಗೀತಾ....ಈಗ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೇ ಮುಪ್ಪಿನ ತಂದೆ-ತಾಯಿಯೆಂದು ಬಂದು ಅವರ ಆರೈಕೆ ಮಾಡಲು ಸಾಧ್ಯವಾಗುತ್ತಿಲ್ಲ. ಏನೋ ನಮ್ಮ ಕಕ್ಕಿ (ನಿಮ್ಮತ್ತೆ) ಪುಣ್ಯವಂತಳು. ಒಬ್ಬರಾದ ಮೇಲೆ ಒಬ್ಬ ಮಗ-ಸೊಸಿ ಬಂದು ನೋಡಿಕೊಳ್ಳುತ್ತಾರೆ. ಆ ಭಾಗ್ಯ ಎಷ್ಟು ಜನಕ್ಕೆ. ನಮಗಂತೂ ಮಕ್ಕಳೇ ಇಲ್ಲ. ಮಕ್ಕಳಂತೇ

ಸಾಕಿದೆವು. ತಮ್ಮ ಓದು ಕರಿಯರ್ ಭವಿಷ್ಯ ರೂಪಿಸಿಕೊಂಡು ದೂರವಾಗಿದ್ದಾರೆ. ಅದ್ದರಿಂದ ನಾನು ಯಾವಾಗಲೂ ಮ್ಯಾಡಂಗೆ ಹೇಳುತ್ತೇನೆ. ಯಾರಿಂದಲೂ ಏನೂ ಅಪೇಕ್ಷೆ ಮಾಡಬೇಡ ನೇಕಿ ಕರ್ ದರಿಯಾ ಮೇ ಡಾಲ್ ಅಲ್ಲವೆ?" ಕೆಲವು ಕ್ಷಣಗಳು ನಿಶ್ಶಬ್ಧವಾಯಿತು. ತಕ್ಷಣ ಕುಸುಮಣ್ಣ ತನ್ನ ಒರಿಜಿನಲ್ ಮೂಡ್‌ಗೆ ಬಂದು "ಗೀತಾ-ನಿನಗೆ ಕಟಲೆಟ್ ಮಾಡ್ಲಿಕ್ಕೆ ಬರ್ತದಾ-ನನ್ನ ಹೆಂಡ್ತಿಗೆ ಕಲಿಸವ್ವಾ" ಎಂದರು. ಭಾಭಿಗೆ ಏನು ಬರೋದಿಲ್ಲ? ಆದರೂ" ಕುಸುಮಣ್ಣ ಬ್ರೇಕ್ ಫಾಸ್ಟ್‌ಗೆ ಕಟ್‌ಲೆಟ್ ನಾನೇ ಮಾಡ್ತೀನಿ" ಎಂದೆ. "ಇವತ್ತು ಬ್ಯಾಡ ನಾಳೆ ಮಾಡು" ಎಂದ. ಭಾಬಿಗೆ ಕನ್ನಡಕ ನಂ. ಬದಲಾಗಿತ್ತು. ಮಿಂಟೋ ಆಸ್ಪತ್ರೆಗೆ ಒತ್ತಾಯದಿಂದ ಕಳಿಸಿದ್ದೆ. "ಮೋಹನ ಇರ್‍ತಾನೆ ನೀನು ಹೋಗಿ ಕಣ್ಣು ಪರೀಕ್ಷೆ ಮಾಡಿಸು. ರೆಟಿನೋಪಥಿ ಟೆಸ್ಟ್ ಮಾಡಿಸಿಕೊಂಡು ಬಾ" ಎಂದು ಭಾಬಿಗೆ ಕಳಿಸಿದೆ. 'ನಾರ್ಮಲ್' ಎಂದು ಭಾಭಿ ತಿಳಿಸಿದಾಗಲೇ ಆತಗೆ ಸಮಾಧಾನ. ನಾಲ್ಕು ಗಂಟೆಗೆ ಕುಸುಮಣ್ಣನ ರಕ್ತ ತಪಾಸಣೆಯ ರಿಪೋರ್ಟ್ ಬಂತು. ಕುಸುಮಣ್ಣ ತನ್ನ ಕಾರ್ಡಿಯಲಾಜಿಸ್ಟ್ ಡಾ. ಐಯ್ಯಂಗಾರ್‌ಗೆ ಫೋನ್ ಮಾಡಿಸಿ ತಾನೇ ತಿಳಿಸಿದಾಗ ಡಾ. ಹೇಳಿದ್ದು ಹೇಳಿದ. ನಿಮ್ಮ ಹಾರ್ಟ್ ಗಟ್ಟಿ ಮುಟ್ಟಾಗಿದೆ. ಯಾವ ಕಾಳಜಿ ಬೇಡ ಲಾಕ್ಸಿಸ್ ೨೦ ಎಂಜಿ ಕಡಿಮೆ ಮಾಡಿ ಎಂದಿದ್ದಾರೆ. ಲಾಕ್ಸಿಸ್‌ನಿಂದಾಗಿ ನಿತ್ರಾಣ ಆಗಿದ್ದೆ. ಸೋಡಿಯಂ ಟೆಸ್ಟ್ ಮಾಡಿಸಿದ್ದೆ ಎಂದ. ನಮಗೂ ಸಮಾಧಾನವಾಯಿತು. ಕುಸುಮಾಮ "ಇವತ್ತು ಗುರುವಾರ ದೇವಸ್ಥಾನಕ್ಕೆ ನೀನು ಗೀತಾ ಹೋಗಿ ಬರ್‍ರಿ" ಎಂದ. ಅದರಂತೆ ನಾವಿಬ್ಬರೂ ಹೋಗಿ ಬಂದು ಪ್ರಸಾದ ಮಂತ್ರಾಕ್ಷತೆ ಕೊಟ್ಟೆವು. ಹರಟೆ...ಹರಟೆ.....ಟಿ.ವಿ.ಯ ದಲ್ಲಿ ಮನ್ವಂತರ 'ಗರ್ವ' ಧಾರಾವಾಹಿ ಬಗ್ಗೆ ನಮಗಿಬ್ಬರಿಗೂ ತಾನು ಮೆಚ್ಚಿದ ಅಂಶ ಹೇಳಿದ. ಸಂಗೀತ ಕೇಳುವುದು ಮಲಗುವಾಗ ಕೇಶವ-ನಾರಾಯಣ ಕೇಳುತ್ತ ನಿದ್ದೆ ಹೋಗುವುದು ಕುಸುಮಣ್ಣನ ದಿನಚರಿಯಾಗಿತ್ತು. ರಾತ್ರಿ ೧೧ರ ತನಕ ಮಾತು ಮಾತು.

೩ನೇ ತಾರೀಖು ಬೆಳಿಗ್ಗೆ ಕಟ್‌ಲೆಟ್ ಮಾಡಿದೆ. ಕುಸುಮಣ್ಣಾ ರುಚಿಯಾಗಿದೆ ಎಂದು ನಾಲ್ಕು ಕಟಲೆಟ್ (ಚಿಕ್ಕ ಸೈಜಿನವು) ತಿಂದು ಹೇಳಿದ "ಗೀತಾ...ಹೀಗೆ ಮಾಡೋದು ನಿಮ್ಮ ಭಾಬಿಗೆ ಕಲಿಸಮ್ಮಾ.....ಆಲು ಜಾಸ್ತಿ ತಿಂತೀನಿ. ಮಧ್ಯಾಹ್ನ ಲಂಚ್ ಎಂದು ಬೇಡ ತಿಳಿಸಾರು ಕೊಡು ಅಷ್ಟೇ" ಎಂದ ಕುಸುಮಣ್ಣ. ಮೊದಲಿನಿಂದಲೂ ಸ್ಟ್ರಿಕ್ಟ್‌ಡಯಟಿಂಗ್ ಮಾಡುತ್ತಿದ್ದ. ಅಂತಹದರಲ್ಲಿ ಕಟಲೆಟ್ ತಿಂದದ್ದು ಭಾಬಿಗೂ ನನಗೂ ಆಶ್ಚರ್ಯವೆನಿಸಿತ್ತು. ಆದರೆ ಇತ್ತೀಚೆಗೆ ಊಟವಾದ ಮೇಲೆ ಯಾವುದಾದರೂ ಸಿಹಿ ತಿನ್ನುತ್ತಿದ್ದನಂತೆ. ಆತಗೆ ಡಯಾಬಿಟೀಸ್ ಇರಲಿಲ್ಲ.

ಅಂದು ರಾತ್ರಿ ಯಥಾ ರೀತಿ ಟಿ.ವಿ. ನೋಡಿ ಎಲ್ಲರೂ ಆತನ ಬೆಡ್‌ರೂಂನಲ್ಲಿ ಹರಟುತ್ತ ಕುಳಿತಾಗ "ಗೀತಾ ಒಂದೆರಡು ಭಜನ್ ಹೇಳವ್ವಾ" ಎಂದ. ನಾನು ಮೀರಾಭಜನ್ ಕೆಲವು

ಹಾಡಿದೆ. ಕುಸುಮಣ್ಣ ಹುರುಪಿನಿಂದ "ನಿಂದ್ರು ನಾನೂ ಹಾಡ್ತೀನಿ" ಎನ್ನುತ್ತ "ಮೇರಿ ವೀಣಾ ರೋ ರಹೀ ಹೈ" ಹಾಡಿದೆ. ಕಾಲೇಜ್ ದಿನಗಳಲ್ಲಿ ಹಾಡುತ್ತಿದ್ದನಂತೆ. ನಾವು ನಮ್ಮ ರೂಂಗೆ ಹೋಗಿ ಮಲಗಿದಾಗ ರಾತ್ರಿ ೧೧ ಗಂಟೆ. ಕೇಶವ ನಾರಾಯಣ ರಿಕಾರ್ಡ್ ಕೇಳುತ್ತ ಕುಸುಮಣ್ಣ ಮಲಗಿದ್ದ.

೧೧-೪೦ ರ ಸುಮಾರು ಭಾಬಿ ನಮ್ಮ ರೂಂ ಬಾಗಿಲು ಬಡಿದು ಎಬ್ಬಿಸಿ ನಡುಗುವ ಧ್ವನಿಯಲ್ಲಿ ಹೇಳಿದರು. ಮೋಹನ್ ನಿಮ್ಮಣ್ಣಗೇ 'ಗಂಗಾ' ಹಾಕುಬಾ ನಮಗೆ ನಂಬಲಿಕ್ಕೇ ಆಗಲಿಲ್ಲ. ಬಂದು ನೋಡಿದಾಗ ಕುಸುಮಣ್ಣ ಕೊನೆಯುಸಿರು ಎಳೆಯುತ್ತಿದ್ದ. ಡಾಕ್ಟರ್ ರಾಜೇಶ್ ಡಾ. ಜಯಂತಿ ಬಂದರು. ಡೆತ್ ಡಿಕ್ಲೇರ್ ಮಾಡಿದರು. ಅರ್ಧ ಮುಕ್ಕಾಲು ಗಂಟೆಯಲ್ಲಿ ಕುಸುಮಣ್ಣ ಇಲ್ಲ. ನನಗೆ ಇನ್ನೂ ನಂಬಲಿಕ್ಕೇ ಆಗುತ್ತಿಲ್ಲ. ಆ ಹಿರಿಯ ಜೀವಿಯ ಕೊನೆಯ ಗಳಿಗೆಯಲ್ಲಿ ನಾವೂ ಇದ್ದೆವು ಎಂಬುದಷ್ಟೇ ನಮಗೆ ಸಮಾಧಾನ!

ನನ್ನ ಚಿಕ್ಕಪ್ಪ

❁ ಜಯಸಿಂಹ

ಸುಮಾರು ಎಂಟು ತಿಂಗಳುಗಳ ಕೆಳಗೆ ಬೆಂಗಳೂರಿನಿಂದ ನನ್ನ ಚಿಕ್ಕಮ್ಮ, ಪ್ರಖ್ಯಾತ ಬರಹಗಾರ್ತಿ, ಸಾಹಿತಿ ಹಾಗೂ ರಾಜಕಾರಣಿ ಶ್ರೀಮತಿ ಸರಿತಾ ಕುಸುಮಾಕರ್ ದೇಸಾಯಿ ಇವರಿಂದ ದೂರವಾಣಿಯಲ್ಲಿ ನನ್ನ ನೆಚ್ಚಿನ ಚಿಕ್ಕಪ್ಪರಾದ ಪ್ರಖ್ಯಾತ ನ್ಯಾಯವಾದಿ, ಎಲೆಮರೆಯ ಕಾಯಿಯಂತಿದ್ದ ರಾಜಕಾರಣಿ, ಶ್ರೀ ಕುಸುಮಕುಮಾರ ದೇಸಾಯಿ ಇವರು ದೇವರಪಾದ ಸೇರಿದರೆಂಬ ವಿಷಯ ತಿಳಿದು ನನಗೆ ಮತ್ತು ನನ್ನ ಮಡದಿ ಹಾಗೂ ಮಗಳಿಗೆ ಬಹಳ ಆಘಾತವಾಯಿತು. ಅದು ನಿಜವೋ, ಕನಸೋ ಅರ್ಥವಾಗಲಿಲ್ಲ. ಮರುದಿನ ಪತ್ರಿಕೆಯಲ್ಲಿ ಅವರ ನಿಧನದ ಪ್ರಕಟಣೆ ಓದಿದ ಮೇಲೆ ಖಾತರಿಯಾಯಿತು. ಏಕೆಂದರೆ ಈ ವಿಷಯ ನಂಬಲರ್ಹವಾಗದಂತಹ ವಾರ್ತೆಯಾಗಿದ್ದಿತು. ಅವರು ಕಾಲವಾಗುವ ಎರಡು ದಿನಗಳ ಮೊದಲು ನಾವು ದೂರವಾಣಿಯಲ್ಲಿ ಅವರ ಜತೆ ಹರಟೆ ಹೊಡೆದಿದ್ದೆವು. ಆಗ ತಮ್ಮ ಇತ್ತೀಚಿನ ಧಾರವಾಡದ ಪ್ರವಾಸದಲ್ಲಿ ತಮಗೆ ಮೂಡಿದ ಸಂತೃಪ್ತಿ ಹಾಗೂ ಮೂರು, ನಾಲ್ಕು ದಿನಗಳಲ್ಲಿ ಇಲ್ಲಿ ಕಳೆದ ಸಂದರ್ಭದಲ್ಲಿಯ ಕೆಲವು ರಸ ನಿಮಿಷಗಳನ್ನು ಮೆಲುಕು ಹಾಕಿದರು.

ತಮ್ಮ ವಕೀಲಿ ವೃತ್ತಿಯಲ್ಲಿ ಎಷ್ಟೋ ನಿರಪರಾಧಿಗಳಿಗೆ ನ್ಯಾಯ ಒದಗಿಸಿ ಕೊಡುವಲ್ಲಿ ನೆರವಾಗಿದ್ದರು. ಎಷ್ಟೋ ಕಿರಿಯ ನ್ಯಾಯವಾದಿಗಳನ್ನು ನ್ಯಾಯಾಲಯಕ್ಕೆ ಪರಿಚಯಿಸಿ, ಅವರನ್ನು ಪ್ರಖ್ಯಾತರನ್ನಾಗಿ ಮಾಡಿರುವರು. ವೃತ್ತಿಪರ ಅಸೂಯೆಯನ್ನು ಬದಿಗಿಟ್ಟು ತಮ್ಮ ಸಹೋದ್ಯೋಗಿಗಳೊಂದಿಗೆ ಸಹೋದರರಂತೆ ನಡೆದುಕೊಳ್ಳುತ್ತಿದ್ದರು. ಸತಿ-ಪತಿಯರಿಬ್ಬರಿಗೂ ಪ್ರಾಣಿಗಳ ಮೇಲೆ ಎಷ್ಟು ಮಮಕಾರವಿತ್ತೆಂಬುದು ಈಗ ಪ್ರಕಟವಾಗುತ್ತಿರುವ ಕರ್ಮವೀರದಲ್ಲಿಯ ನನ್ನ ಚಿಕ್ಕಮ್ಮನ ಧಾರಾವಾಹಿಯೇ ಸಾಕ್ಷಿ. ಅಜಾನುಬಾಹುಗಳಾದ ಅವರ ಎತ್ತರದ ನಿಲುವು, ಗಡಿಯಲ್ಲಿಯ ದೇಶ ರಕ್ಷಕನಂತೆ ನಡೆಯುವ ಠೀವಿ, ಮಾತನಾಡಿದರೆ ಎಲ್ಲವನ್ನೂ ಮರೆತು ಅವರ ಮಾತನ್ನೇ ಮತ್ತೆ ಮತ್ತೆ ಕೇಳಿಸಿಕೊಳ್ಳಬೇಕೆಂಬ ಬಯಕೆ ಬರುವಂತಹ ಕಂಚು ಕಂಠ, ಇವೆಲ್ಲವುಗಳನ್ನು ನೋಡಿದ ಯಾರನ್ನಾದರೂ ಮಂತ್ರಮುಗ್ಧರನ್ನಾಗಿ ಮಾಡುತ್ತಿತ್ತು. ಕನ್ನಡ, ಇಂಗ್ಲಿಷು, ಹಿಂದಿ, ಉರ್ದು ಹಾಗೂ ಮರಾಠಿ ಭಾಷೆಗಳನ್ನು ಸುಲಲಿತವಾಗಿ ಮಾತನಾಡುತ್ತಿದ್ದರು. ಜಾತಿ, ಲಿಂಗ, ವಯಸ್ಸಿನ ಭೇದವಿಲ್ಲದೇ ಎಲ್ಲರ ಜತೆ ಬೆರೆತು ಅವರಲ್ಲಿ ಇವರಾಗಿ ಹರಟೆಯಲ್ಲಿ ಸಮಯ ಮರೆತುಬಿಡುತ್ತಿದ್ದರು.

ಅವರು ಬಾಳ ಸಂಗಾತಿಯ ಬಗ್ಗೆ ಒಂದು ನಿರ್ದಿಷ್ಟ ಗುಣಗಳನ್ನು ಅಪೇಕ್ಷಿಸಿ, ಗುಲ್ಬರ್ಗಾ, ಹೈದರಾಬಾದ, ಸೊಲ್ಲಾಪುರ, ಮುಂಬೈ ಹಾಗೂ ಇತರೆ ಕಡೆಗಳಿಂದ ತಮ್ಮ ಕನ್ಯೆಯನ್ನು ಕೊಡಲು ಮುಂದಾದ ಕನ್ಯಾಪಿತೃಗಳಿಗೆ ಸಮಾಧಾನಗೊಳಿಸಿ ಎಲ್ಲಿಯೋ ದೂರದಲ್ಲಿರುವ ಆಗಿನ ಬಳ್ಳಾರಿ ಜಿಲ್ಲೆಯ ಒಂದು ಚಿಕ್ಕ ಹಳ್ಳಿಯಾದ ಹರಪನಹಳ್ಳಿಯಲ್ಲಿದ್ದ ನನ್ನ ಚಿಕ್ಕಮ್ಮಳಾದ

ಶ್ರೀಮತಿ ಸರಸಾಳನ್ನು ವರಿಸಿ ಮದುವೆಯಾದರು. ಹಳ್ಳಿಯಲ್ಲಿ ಜನಿಸಿ ಹಳ್ಳಿಯ ವಾತಾವರಣದಲ್ಲಿ ಬೆಳೆದ ನನ್ನ ಚಿಕ್ಕಮ್ಮಗೆ ಸರಿತಾ ಕುಸುಮಾಕರ ದೇಸಾಯಿ ಎಂದು ಮರುನಾಮಕರಣ ಮಾಡಿ, ಆಕೆಯಲ್ಲಿ ಅಡಗಿಕೊಂಡಿದ್ದ ಬಹುಮುಖ ಪ್ರತಿಭೆಯನ್ನು ಬೆಳಕಿಗೆ ತಂದರು. L.L.B. ಮಾಡಿಸಿ ತಮ್ಮ ಜತೆ ವಕೀಲಿ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದರು ಅವರಲ್ಲಿ ಹುದುಗಿದ್ದ ಸಾಹಿತ್ಯದ ಪ್ರತಿಭೆ ಹಾಗೂ ಶೋಷಿತ ಸಮಾಜದ ಬಗ್ಗೆ ಇರುವ ಕಳಕಳಿಯನ್ನು ಸಾರಸ್ವತ ಲೋಕಕ್ಕೆ ಹಾಗೂ ಸಮಾಜಕ್ಕೆ ತೋರಿಸಿಕೊಟ್ಟರು.

ಎರಡು ಬಾರಿ ತೆರೆದ ಹೃದಯ ಚಿಕಿತ್ಸೆ ಮಾಡಿಸಿಕೊಂಡರೂ ಮೊದಲಿನಂತೆಯೇ ಲವಲವಿಕೆಯಿಂದಿದ್ದರು. ಕಳೆದ ದೀಪಾವಳಿಯ ಸಮಯದಲ್ಲಿ ಯಾವುದೇ ವೈಯಕ್ತಿಕ ಕೆಲಸವಿಲ್ಲದಿದ್ದರೂ ಧಾರವಾಡಕ್ಕೆ ಬಂದು ನಾಲ್ಕು ದಿನ ಎಲ್ಲ ಬಂಧುಗಳ ಮತ್ತು ಸ್ನೇಹಿತರ ಮನೆಗಳಿಗೆ ಭೇಟಿ ಇತ್ತು ಅವರೆಲ್ಲರ ಜತೆ ಹರಟೆ ಹೊಡೆದು ಆ ನಾಲ್ಕು ದಿನಗಳ ಒಡನಾಟ ಜೀವನ ಪರ್ಯಂತ ಮರೆಯದಂತೆ ಮಾಡಿ ಬೆಂಗಳೂರಿಗೆ ವಾಪಸ್ಸಾದರು. ಹಾಗೂ ಎಲ್ಲರಿಗೂ ತಪ್ಪದೇ ಬೆಂಗಳೂರಿಗೆ ಬಂದು ತಮ್ಮ ಮನೆಯಲ್ಲಿ ಕನಿಷ್ಠ ಪಕ್ಷ ಒಂದು ವಾರ ಕಳೆಯಬೇಕೆಂದು ಒತ್ತಾಯಿಸಿದ್ದರು.

ಇಳಿ ವಯಸ್ಸು, ಎರಡೆರಡು ಬಾರಿ ಶಸ್ತ್ರಚಿಕಿತ್ಸೆ, ಇಷ್ಟಾದರೂ ಧಾರವಾಡಕ್ಕೆ ಬಂದಾಗ ಎಲ್ಲರ ಮನೆಯಲ್ಲಿಯೂ ಮಕ್ಕಳೊಡನೆ ಮಕ್ಕಳಾಗಿ ಹರಟೆಹೊಡೆಯುತ್ತ, ಧಾರವಾಡದ ಪ್ರಸಿದ್ಧಿಯಾದ ದೀಪಾವಳಿಯ ಫರಾಳ ತಿನ್ನುತ್ತಾ, ನನ್ನ ಚಿಕ್ಕಮ್ಮ "ಕುಸುಮಾಮ ಫರಾಳ ಜಾಸ್ತಿ ತಿನ್ನಬೇಡಿರಿ" ಎಂದು ಅಂಗಲಾಚಿದರೂ ಮಕ್ಕಳ ಜೊತೆ ಸರಿಸರಿಯಾಗಿ ರಾಳ ತಿಂದರು. ಎಲ್ಲ ಮಕ್ಕಳನ್ನು ಕಾಣುವ ಹಂಬಲದಿಂದ ಒಂದನೆ ಮಹಡಿಯಲ್ಲಾ ಎರಡನೇ ಮಹಡಿಯನ್ನು ಹತ್ತಿ ಹರಟೆ ಹೊಡೆದು ಬಂದರು. ನನ್ನ ಚಿಕ್ಕಮ್ಮ ಅವರನ್ನು "ಕುಸುಮಾಮ" ಎಂದು ಸಂಭೋದಿಸುವದು ಎಷ್ಟು ಸಮಯೋಚಿತವಾಗಿತ್ತೆಂದರೆ, ತಮ್ಮ ಪತಿಯನ್ನು ಕೂಸಿನಂತೆಯೇ ನೋಡಿಕೊಳ್ಳುತ್ತಿದ್ದರು. ಅವರಾದರೂ ತಮ್ಮ ಪತ್ನಿಯನ್ನು "ಮೇಡಮ್" ಎಂದು ಸಂಬೋಧಿಸುತ್ತಿದ್ದರು. ಅಂದರೆ ಅವರಿಗೆ ಸ್ತ್ರೀಯರ ಬಗ್ಗೆ ಎಷ್ಟು ಗೌರವವಿತ್ತೆಂದು ತೋರಿಸಿಕೊಡುತ್ತದೆ. ಯಾರಾದರು ಹಿರಿಯರೊಡನೆ ಮಾತನಾಡುವಾಗ ನನಗೆ ವಯಸ್ಸಾಗಿದೆ. ಆದರೆ ನಾನಿನ್ನುಮುದಕನಲ್ಲ "(I am aged but I am not old)" ಎಂದು ಹೇಳುತ್ತಿದ್ದರು. ಈ ಮಾತನ್ನು ಹೇಳಲು ಹೆಚ್ಚು ಜನರಿಗೆ ಧೈರ್ಯ ಬರುವದಿಲ್ಲ.

ತಮ್ಮ ಬಂಧು ಬಳಗವನ್ನು ಭೇಟಿ ಮಾಡಿದ್ದಲ್ಲದೆ ನನ್ನ ಚಿಕ್ಕಮ್ಮನನ್ನು ಇಲ್ಲಿಯೆ ಕೆಲವು ಹಿರಿಯ ಸಾಹಿತಿಗಳನ್ನು ಭೇಟಿ ಮಾಡಲು ಕಳಿಸಿಕೊಟ್ಟರು. ಅವರ ಪೈಕಿ ಪ್ರಸಿದ್ಧ ಸಾಹಿತಿ ಶ್ರೀ ಎನ್ಕೆಯವರ ಭೇಟಿಗಾಗಿ ನನ್ನ ಚಿಕ್ಕಮ್ಮ ನನ್ನನ್ನೂ ಕರೆದುಕೊಂಡು ಹೋಗಿದ್ದರು. ಅವರು ಸಾರಸ್ವತ ಲೋಕದಲ್ಲಿ ಹಾಗೂ ವಯಸ್ಸಿನಲ್ಲಿ ಹಿರಿಯರಾದರೂ ಸಹ ನನ್ನ ಚಿಕ್ಕಮ್ಮನನ್ನು "ಅಕ್ಕ"

ಎಂದೇ ಸಂಬೋಧಿಸುತ್ತಿದ್ದರು. ಆ ಸಂದರ್ಭದಲ್ಲಿ ಒಂದೆ ಯಾವಾಗಲೋ ಕುಸುಮಾಕರ ದೇಸಾಯಿಯವರ ಸಹೋದರರ ಹಳ್ಳಿಯ ಮನೆಯಲ್ಲಿ ತಿಂದ ಬಿಸಿ ಬಿಸಿ ಕರಿಗಡುಬು, ಬೆಣ್ಣೆ ಕಾಯಿಸಿದ ತುಪ್ಪ ತಿಂದ ನೆನಪು ಮಾಡಿಕೊಂಡರು.

ದೇಸಾಯಿ ಮನೆತನದಲ್ಲಿ ಜನ್ಮತಳೆದು, ದೇಸಗತಿಯ ಗತ್ತು ರಕ್ತಗತವಾಗಿದ್ದ ದೇಶದ ಸ್ಥಿತಿ-ಗತಿಯನ್ನು ಅರಿತುಕೊಂಡು ಸ್ವಾತಂತ್ರ್ಯ ಸೇನಾನಿಯಾಗಿ ದೇಶಕ್ಕೆ ಹಾಗೂ ಹೈದ್ರಾಬಾದಿಗೆ ಸ್ವಾತಂತ್ರ್ಯ ಗಳಿಸಿಕೊಡುವಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ಸೆರೆವಾಸವನ್ನೂ ಅನುಭವಿಸಿದ್ದರು.

ಒಟ್ಟಿನ ಮೇಲೆ ಸತಿಪತಿಯರು ಹಾಲಿನಲ್ಲಿ ಸಕ್ಕರೆ ಬೆರೆಸಿದಂತೆ ತಮ್ಮ ದಾಂಪತ್ಯ ಜೀವನ ನಡೆಸಿದರು. ಅವರಿಗೆ ಇವರು ಕೂಸಾಗಿ, ಇವರಿಗೆ ಅವರು ಕೂಸಾಗಿ, ಅನ್ಯರಿಗೆ ಇಬ್ಬರೂ ಆದರ್ಶಪ್ರಾಯರಾಗಿದ್ದರು. ನನ್ನ ಚಿಕ್ಕಮ್ಮಳಾದ ಶ್ರೀಮತಿ ಸರಸಾಳನ್ನು ಸರಿತಾಳನ್ನಾಗಿ ಮಾಡಿ, ಆಕೆಯಲ್ಲಿ ಹುದುಗಿದ್ದ ಆಳೆತ್ತರದ ವ್ಯಕ್ತಿತ್ವವನ್ನು ಎಲ್ಲರಿಗೂ ಪರಿಚಯಿಸಿಕೊಟ್ಟು, ತಮ್ಮಲ್ಲಿಯ ನೋವನ್ನು ಬೇರೆಯವರೊಡನೆ ಹಂಚಿಕೊಳ್ಳದೇ ದೇಸಗತಿಯ ಠೀವಿಯಲ್ಲಿಯೇ ಸೂರ್ಯನು ಅಸ್ತಗೊಳ್ಳುವಂತೆ ಅಸ್ತಗೊಂಡರು, ಅವರ ಸಾಂಗತ್ಯದ ನೆನಪು ನಮ್ಮಲ್ಲಿ ಅಚ್ಚಳಿಯದೇ ಉಳಿಸಿ, ನಮ್ಮನ್ನೆಲ್ಲ ಬಿಟ್ಟು, ಇಹಲೋಕದ ಯಾತ್ರೆಯನ್ನು ಮುಗಿಸಿದರು.

ಈಗಲೂ ಅವರ ನೆನಪಾದಾಗ ಅವರ ಸಾಂಗತ್ಯವನ್ನು ಜ್ಞಾಪಿಸಿಕೊಂಡಾಗಲೆಲ್ಲ ಕಣ್ಣುಗಳು ತಾವಾಗಿಯೇ ಹನಿಯಿಡುವವು.

ನನ್ನ ಕುಸುಮಾಂಜಲಿ

❁ ಸೌ. ಗುಣವತಿ ಬೋರಗಾಂವಕರ

ಶ್ರೀ ಕುಸುಮಾಕರ ದೇಸಾಯಿ ನನ್ನ ಪ್ರೀತಿಯ ಕಾಕಾರಾಗಿದ್ದರು. ಅವರನ್ನು ನೆನಸಿಕೊಂಡರೆ ನನಗೆ ಹಲವಾರು ನೆನಪುಗಳು ಕಣ್ಣು ಮುಂದೆ ಕಟ್ಟಿವೆ.

ದಿ. ಶ್ರೀ ಕುಸುಮಾಕರ ದೇಸಾಯಿ ಮತ್ತು ಶ್ರೀಮತಿ ಸರಿತಾ ದೇಸಾಯಿ ಅವರ ದಾಂಪತ್ಯ ಜೀವನ ಸರಿತಾ-ಸಾಗರ ಸಂಗಮದಂತೆ ಇತ್ತು. ಆದರ್ಶ ದಾಂಪತ್ಯ ಜೀವನಕ್ಕೆ ಅವರು ಒಂದು ಮಾದರಿಯಾಗಿ ಉಳಿದರು. ಕಾಕಾರವರ ಹೆಸರಿಗೆ ತಕ್ಕಂತೆ ಮನಸ್ಸು ಬಹಳ ಮೃದುವಾಗಿತ್ತು. ಹಾಗೂ ಸರಿತಾ ಕಕ್ಕಿಯ ಹೃದಯ ಅವರ ಹೆಸರಿಗೆ ತಕ್ಕಂತೆ ವಿಶಾಲವಾಗಿತ್ತು. ಇಂತಹ ಗುಣಿ ದಂಪತಿಗಳ ಅನೂಚಾನ ನೆನಪುಗಳು ಹಾಗೂ ಅವರ ಶುಭಾಶಿರ್ವಾದಗಳು ನನಗೆ ದೊರಕಿವೆ ಎಂಬುದು ಸಂಶಯವಿಲ್ಲಾ.

ಕುಸುಮಕಾಕನ ಬಗ್ಗೆ ನನಗೆ ಏನೆಂದು ಕೃತಿರೂಪದಲ್ಲಿ ತೋರಿಸುವುದು ತೋಚುತ್ತಿಲ್ಲಾ. ಕಾಕನ ಪ್ರೀತಿ, ಪ್ರೇಮ, ವಾತ್ಸಲ್ಯ ಹಾಗೂ ಕರುಣೆ ನನ್ನಲ್ಲಿ ಅಪಾರವಾಗಿತ್ತು. ಪ್ರೇಮದ ಸಾಗರವೇ ತುಂಬಿ ಹರಿಯುವಂತಿತ್ತು.

ಚಿಕ್ಕಂದಿನಿಂದಲೂ ನನ್ನ ಶಿಕ್ಷಣಕ್ಕಾಗಿ ನಾನು ಅವರಲ್ಲಿಯೇ ಉಳಿದೆ. ನನ್ನ ತಂದೆ-ತಾಯಿ ಸೇಡಂನಲ್ಲಿ ಇದ್ದ ಕಾರಣ ನಾನು ಕಾಕನಲ್ಲಿ ಇದ್ದು ಶಾಲೆ ಹಾಗೂ ಕಾಲೇಜಿನ ಶಿಕ್ಷಣ ಪಡೆದೆ.

ಪ್ರೀತಿಯ ಕುಸುಮಕಾಕಾ ಹಾಗೂ ನನ್ನ ಪ್ರೀತಿಯ ಕಕ್ಕಿ ಅವರ ಅಚ್ಚು-ಮೆಚ್ಚಿನ "Ready-made daughter" ಆಗಿಯೇ ಉಳಿದೆ. ಅಣ್ಣನ ಮಗಳು ಎಂಬ ಭಾವನೆ ಇರಲಿಲ್ಲಾ. ಒಡ ಹುಟ್ಟಿದ ಮಗಳಂತೆ ಕಂಡ. ನನಗೆ ನೆನಪಿದ್ದ ಹಾಗೆ, ನಾನು ಚಿಕ್ಕವಳಿದ್ದಾಗ ಯಾರು ಏನಾದರು ನನ್ನ ಬಗ್ಗೆ ಗೋಳಿಟ್ಟರೇ, ಅವರ ಫಜೀತಿಯಾಗುತ್ತಿತ್ತು. ರಜೆಯಲ್ಲಿ ಸೇಡಂ ಹೋಗುವೆನೆಂದರೆ ಕಾಕಾಗೆ ತುಂಬಾ ಗೋಳು, ಬೇಜಾರು. ಚಿಕ್ಕಂದಿನಲ್ಲಿ ವ್ಯವಹಾರ, ಶಾಲೆ, ಕಾಲೇಜುಗಳ ಶಿಕ್ಷಣ ಅವರಿಂದಲೇ ಲಭಿಸಿತು.

ಒಂದು ಮುಖ್ಯವಾದ ವಿಷಯ ಅವರ ಬಗ್ಗೆ ಹೇಳುವುದಾದರೆ ಆ ಕಾಲದಲ್ಲಿಯೂ ಅವರಲ್ಲಿದ್ದ ನೂತನ ವಿಚಾರಗಳು. ನನಗೆ ನೆನಪಿದ್ದ ಹಾಗೆ, ನನ್ನ ಕಾಕನವರ ಸಹಯೋಗದಿಂದಲೇ ನನಗೆ ಜೋರ್‌ಗಾಂವಕರ್ ಮನೆತನದ ಸೊಸೆಯಾಗುವ ಸೌಭಾಗ್ಯ ದೊರೆಯಿತು. ನನ್ನ ಮದುವೆ ಗಟ್ಟಿಯಾದನಂತರ, ನನ್ನ ಯಜಮಾನರಾದ ಡಾ. ಬೋರ್‌ಗಾಂವಕರ್, ನನ್ನನ್ನು ಭೇಟಿಯಾಗಲು ಅನುಮತಿ ನೀಡಲು ಕುಸುಮಕಾಕನ ಕಡೆ ಬಂದಾಗ, ನನ್ನ ಕಾಕಾ ಅವರಲ್ಲಿ ಯಾವತರಹದ ಸಂಶಯ ಪಡದೆ ಧಾರಾಳವಾಗಿ ನನ್ನನ್ನು ಅವರ ಜೊತೆ ಹೊರಗೆ ಹೋಗುವ, ಮಾತನಾಡುವ ಅನುಮತಿಯನ್ನು ಕೊಟ್ಟರು.

ಮತ್ತೊಂದು ವಿಷಯ ಹೇಳುವುದಾದರೆ, ಆ ಕಾಲದಲ್ಲಿನ ಸುಪ್ರಸಿದ್ಧ ವಕೀಲರಾದವರೂ ಕೂಡ, ತಮ್ಮಲ್ಲಿ ಬರುವ ಜೂನಿಯರ್ ವಕೀಲರನ್ನು ಸರಳ ಮನದಿಂದ, ಒಬ್ಬ ಸಹೋದರನಾಗಿ ಅವರಿಗೆ ಕಲಿಯುವ ಅವಕಾಶ ನೇರವೇರಿಸುತ್ತಿದ್ದರು. ಯಾವ ತರಹದ ಮೇಲು-ಕೀಳು ಎಂಬುವ ಭಾವನೆ ಇಲ್ಲದೆ ಒಬ್ಬ ಒಳ್ಳೆಯ ಮಾನವನಾಗಿ ಬಾಳುವುದೇ ಅವರ ಜೀವನದ ತತ್ವ ಆಗಿತ್ತು. ಅವರಿಂದ ನಾವು ಬಹಳಷ್ಟು ಒಳ್ಳೆಯ ಸಂಸ್ಕಾರವನ್ನು ಪಡೆದಿದ್ದೇವೆ. "ಮನೆಯೇ ಮೊದಲ ಪಾಠಶಾಲೆ" ಎನ್ನುವ ಮಾತು ನಮಗೆ ಸರಿಯಾಗಿ ಲಭಿಸಿದೆ.

ನಮಗಾಗಿ ನಾವು ದುಡಿಯುವುದು ವಿಶೇಷವಲ್ಲ. ನಿಸ್ವಾರ್ಥ ಮನದಿಂದ ಬೇರೆಯವರನ್ನು ನಮ್ಮವರೆಂದು ಭಾವಿಸಿ ದುಡಿಯುವದೆ ಕಾಕನ ವೈಶಿಷ್ಟ್ಯವಾಗಿತ್ತು. ಅವರ ಅರ್ಧಾಂಗಿನಿಯಾದ ನನ್ನ ಸರಿತಾಕಕ್ಕಿಯೂ ಕೂಡ ಅವರ ತಾಳಕ್ಕೆ ತಾಳನಿಟ್ಟು ಸಹಕರಿಸುತ್ತಿದ್ದುದೂ ವಿಶೇಷ!

ಪ್ರೇಮ, ಪ್ರೀತಿ, ವಾತ್ಸಲ್ಯ ಇವೆಲ್ಲ ಅವರಲ್ಲಿ ಸವಿ ಜೇನಿನ ಗೂಡಾಗಿದ್ದವು. ಕುಸುಮಕಾಕನು ಸಮಾಜದಲ್ಲಿ ಒಬ್ಬ ಮಹಾನ್ ಅಗ್ರಗಣ್ಯ ವ್ಯಕ್ತಿ ಎನಿಸಿಕೊಂಡು ಬಾಳ್ವೆ ಮಾಡಿ ತನ್ನ ಜೀವನ ಸಾರ್ಥಕ ಮಾಡಿಕೊಂಡರು.

ನನಗೆ ಒಂದು ವಿಷಯದ ಬಗ್ಗೆ ಬಹಳ ಬೇಜಾರವಾಗುವುದೇನೆಂದರೆ, ಕಾಕನ ಅಂತ್ಯದ ದಿನಗಳಲ್ಲಿ ನನಗೆ ಅವರ ಸೇವೆ ಮಾಡುವ ಅವಕಾಶ ದೊರೆಯಲಿಲ್ಲಾ. ಆದರೆ ಇವತ್ತು ಅವರ ಬಗ್ಗೆ ಕೆಲವು ವಿಷಯಗಳನ್ನು ಕೃತಿರೂಪದಲ್ಲಿ ಹೇಳುವ ಅವಸರ ಸಿಕ್ಕಿದಕ್ಕೆ ನಾನು ಧನ್ಯಳಾಗಿದ್ದೇನೆ.

ಇಂದು, ಕುಸುಮಕಾಕಾ ನಮ್ಮ ನಡುವೆ ಇಲ್ಲದಿದ್ದರೂ ಕೂಡ, ಅವರ ನೆನಪುಗಳು ಸದಾ ನನ್ನ ಜೀವನದಲ್ಲಿ ಪರಿಮಳವಾಗಿ ಹರಡುತ್ತಿದೆ.

ದಿ. ಕುಸುಮಕಾಕನಿಗೆ ನಮ್ಮೆಲ್ಲರ ಪರವಾಗಿ,

"ಕುಸುಮಾಂಜಲಿ"

ಮಾಮಾ ಓ ಮಾಮಾ

✿ ಗುಂಡಮ್ಮ ಆರ್.

ಮಾಮ, ಮಾಮ,, ಯಾರೀ ಮಾಮ? ರಕ್ತ ಸಂಬಂಧಿಯೇ? ಬಂಧುವೆ? ಬಳಗವೇ? ಇವೆಲ್ಲಕ್ಕಿಂತ ಹೆಚ್ಚಿನವರು ನನ್ನ ಈ ಮಾಮ. ಈ ಮಾಮನ ಬಗ್ಗೆ ನಾನು ನಿಮಗೆ ಹೇಳದೇ ಇದ್ರೆ ನಿಮಗೆ ತಿಳಿಯುವುದಾದರೂ ಹೇಗೆ?

ನನ್ನ ಅಮ್ಮನ ಸೋದರತ್ತೆ ಜಾನತ್ಯ. ಈಕೆಯ ಕೊನೆಯ ಅಳಿಯನೇ ಶ್ರೀ ಕುಸುಮಾಕರ ದೇಸಾಯಿ. ಜಾನತ್ಯನ ಕಡ್ಲಿಬೆಲ್ಲವೆ ನನ್ನ ಸರಸತ್ತಿ. ಸರಸತ್ತಿಯ ಯಜಮಾನರೇ ಇವರು. ನನ್ನ ಅಮ್ಮ ಮತ್ತು ಸರಸತ್ತಿ ವರಸೆಯಲ್ಲಿ ಅತ್ತಿಗೆ ನಾದಿನಿಯರು, ಹಾಗೆಯೇ ದೇಸಾಯಿಯವರು. ನನ್ನ ಅಮ್ಮ ಅಕ್ಕ ತಮ್ಮ ನನಗೆ ಸ್ವಂತ ಸೋದರಮಾವ ಇರಲಿಲ್ಲ. ಏಕೆಂದರೆ ನನ್ನ ಅಮ್ಮ ಒಬ್ಬಳೇ ಮಗಳು. ನನಗಿದ್ದ ಈ ಕೊರತೆಯನ್ನು ತುಂಬಿದ್ದರು ನನ್ನ ಮಾಮ. ಈಗಾಗಲೇ ನನ್ನ ಈ ಮಾಮನ ಆಕೃತಿ, ಧೀರ ಗಂಭೀರ ಮುಖಬಾವ ಉಡಿಗೆ-ತೊಡಿಗೆ, ನಡೆ-ನುಡಿ, ಇವುಗಳ ಬಗ್ಗೆ ಮಾಹಿತಿ ದೊರಕಿದೆ. ನನ್ನ ಸೋದರತ್ತೆಯೂ ಎತ್ತರದ ನಿಲುವು. ಅದಕ್ಕೆ ತಕ್ಕ ಮೈಕಟ್ಟು, ಆಗಿನ ಕಾಲಕ್ಕೆ ಕಾಲೇಜುಮೆಟ್ಟಿಲು ಹತ್ತಿದ್ದು, ಬೆಂಗಳೂರಿನಲ್ಲಿ, ಹೈದರಾಬಾದಿನಲ್ಲಿ ಇದ್ದು ಬಂದವಳು. ತಕ್ಕ ವರಕ್ಕಾಗಿ ಬಹಳ ಹುಡುಕಾಟ ನಡೆದಿತ್ತು. ಹೈಯಣ್ಣ (ಬೀಜಿಯ ಅಣ್ಣ) ನನ್ನ ಅತ್ತೆಯನ್ನು ಗುಲ್ಬರ್ಗಾಕ್ಕೆ ಕರೆದುಕೊಂಡು ಹೋಗಿ ನನ್ನ ಮಾಮನವರಿಗೆ ತೋರಿಸಿಕೊಂಡು ಬಂದಾಗಿತ್ತು. ಊರಿಗೆ ಬಂದ ಕೂಡಲೇ ನನ್ನ ಅಮ್ಮ ನನ್ನತ್ತೆಗೆ "ಸರಸಾ' ಕುಲಹೀನವಾದರೂ, ವರಹೀನವಾಗಬಾರದು, ಹುಡುಗ ಠವಠವ ಅಂತಿದ್ರೆ ಒಪ್ಪು. ಇಲ್ಲದೇ ಇದ್ರೆ ಬೇಡ. ಬೇರೆ ವರ ನೋಡಿದರಾಯ್ತು" ಎಂದಳು. ಕೂಡಲೇ ನನ್ನತ್ತೆ "ಇಲ್ಲ ಯಮನಕ್ಕ ಹುಡುಗ ಅಜಾನುಬಾಹು ಠವಠವ ಅಂತಾನೇ ಇದ್ದಾನೆ. ಆದರೆ ಬಣ್ಣ ಸ್ವಲ್ಪ ಕಪ್ಪು" ಎಂದು ತನ್ನ ಸಮ್ಮತಿಯನ್ನು ಸೂಚಿಸುತ್ತಲೇ ಹೇಳಿದಳು. ಆ ಹೇಳಿಕೆಯಲ್ಲಿ ನನ್ನ ಮಾವನ ಬಗ್ಗೆ ಅಭಿಮಾನ, ಅವರನ್ನು ಒಪ್ಪಿರುವ ದೃಢತೆ ಎದ್ದು ಕಾಣುತ್ತಿತ್ತು. ಜಾನತ್ಯಾಗೂ ಇದು ಸಮಾಧಾನ ತಂದುಕೊಟ್ಟ ಸೂಚನೆಯಾಗಿತ್ತು. ಮನೆಯಲ್ಲಿ ಮದುವೆಯ ಸಂಭ್ರಮ ಪ್ರಾರಂಭವಾಯಿತು. ಉಂಡೆ, ಅತಿರಸ, ಬಟ್ಟೆ, ಬಂಗಾರ ಎಲ್ಲಾ ಸೇರುತ್ತಿರುವಾಗಲೇ ನನ್ನ ಮಾಮ ದಾವಣಗೆರೆಯಲ್ಲಿ ನಡೆಯಲಿರುವ ಒಂದು ಕಾನ್‌ಫ್ರೆನ್ಸಿಗೆ ತಮ್ಮ ಸಹೋದ್ಯೋಗಿ ಗೆಳೆಯರೊಂದಿಗೆ ಬರುವವರಿದ್ದರು. ದಾರಿಯಲ್ಲಿಯೇ ನಮ್ಮೂರು. ಅವರೆಲ್ಲರೂ ನಮ್ಮಲ್ಲಿಗೆ ಬಂದು ಉಪಾಹಾರ ಸ್ವೀಕರಿಸಿ ಮುಂದೆ ಹೊರಡುವವರಿದ್ದರು. ಆಗ ನನ್ನ ಮಾಮಾಗೆ ನನ್ನತ್ತೆಯೊಂದಿಗೆ ಏಕಾಂತದಲ್ಲಿ ಮಾತನಾಡುವ ಬಯಕೆ ಇತ್ತು. ಹಾಗಾಗಿ ಎಲ್ಲಾ ಉಪಾಹಾರ ಮುಗಿಸಿ ಹೊರಡುವ ಮುನ್ನ ನಮ್ಮ ಮನೆಯ ಕೋಣೆಯಲ್ಲಿ ನಮ್ಮಾಮ ಹೋದರು. ನಮತ್ತೆ ಮೊದಲೇ ಕೋಣೆಯಲ್ಲಿದ್ದಳು. ನನ್ನಮ್ಮ, ಜಾನತ್ಯಾ ಇಬ್ಬರೂ ನನ್ನನ್ನು ಕರೆದು, "ನೀನು ಕ್ವಾಣೆ ಒಳಗೆ ಹೋಗು. ಆ ಹುಡುಗ ಹೊರಗೆ ಬರುವವರೆಗೆ ನೀನೂ ಅಲ್ಲೇ ಇರು" ಅಂತ ಹೇಳಿ ಕಳಿಸಿದರು. ಸರಿ ನಾನು

ಒಳಹೋಗಿ ಕೈಕಟ್ಟಿ ನಿಂತೆ. ನನ್ನ ಮಾಮ ನನಗೆ 'ನೀನು ಹೊರಹೋಗು' ಅಂದರು. ನಾನು ತಕ್ಷಣ ಇಲ್ರಿಮಾಮ, ನಾನು ಹೋಗಲ್ಲ. ನೀವು ಇಲ್ಲಿರುವವರೆಗೆ ನಾನೂ ಇಲ್ಲೇ ಇರಬೇಕಂತೆ" ಅಂತ ಹೇಳಿ ನಿಂತೇ ಇದ್ದೆ. ನನ್ನ ಮಾಮಗೆ ನಗುವೂ ಬಂದಿತು. ಹಾಗೆಯೇ ನಮ್ಮ ಮನೆ-ಮನೆತನ, ಪದ್ಧತಿ ಎಲ್ಲವೂ ಅರ್ಥವಾಯಿತು. ಅವರು ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡು" ನಿನ್ನತ್ತೆಯನ್ನು ನಾನೇನೂ ಮಾಡುವುದಿಲ್ಲ. ನಡಿಹೋಗೋಣ "ಎಂದು ಕೋಣೆಯಿಂದ ಹೊರಬಂದರು. ಅವರು ಅಂದು ನನ್ನನ್ನು ಸೋದರ ಸೊಸೆಯೆಂದು ಹಿಡಿದುಕೊಂಡಿದ್ದಂತೆ ತಮ್ಮ ಕೊನೆಯ ದಿನಗಳವರೆಗೂ ಅದೇ ರೀತಿ ನಡೆಸಿಕೊಂಡು ಬಂದಿದ್ದರು. ನನ್ನ ಜೀವನದ ಪ್ರತಿಯೊಂದು ಪರಿಳಿತಗಳಲ್ಲೂ ಅವರು ನನ್ನನ್ನು ತಮ್ಮ ಬಳಿಯಲ್ಲಿಯೇ ಇರುವಂತೆ ನೋಡಿಕೊಂಡರು. ಯಾವುದೇ ಕಾರಣಕ್ಕೂ ನನ್ನನ್ನು ಅವಹೇಳನ ಮಾಡಲಿಲ್ಲ. ಅವಮಾನಿಸಲಿಲ್ಲ. ಇನ್ನು ಅವರ ಅಂತ್ಯಕಾಲಕ್ಕೆ ಬಂದರೆ ಜೀವನದ ಪ್ರತಿಯೊಂದು ಹಂತವನ್ನು ಅವರು ಕಂಡುಬಂದಿದ್ದರು. ಹಾಗಾಗಿ ದೇವರು, ವೇದಾಂತ, ಜೀವನದ ಸಾರ್ಥಕತೆ ಇವುಗಳ ಬಗ್ಗೆ ಚರ್ಚಿಸುತ್ತಿದ್ದರು. ಫೋನ್ನಲ್ಲಿ ಮಾತನಾಡಿದರು ಇದೇ ವಿಚಾರಗಳಿರುತ್ತಿದ್ದವು. ನನ್ನತ್ತೆ ಈ 'ಕುಸುಮಾಂಜಲಿ' ಯಲ್ಲಿ ನನ್ನದೊಂದು ಬರವಣಿಗೆ ಇರಲು ಬಯಸಿದಳು. ಅದಕ್ಕಾಗಿ ಈ ನಾಲ್ಕು ಮಾತು. ಇಲ್ಲಿ ನನ್ನ ಅಮ್ಮನ ಒಂದು ಕಥೆ ನೆನಪಾಗುತ್ತಿದೆ. ಆ ಕಥೆ ಹೀಗೆ ಸಾಗುತ್ತದೆ. ಒಂದೂರಿನಿಂದ ತಂದೆ-ಮಗ ಇಬ್ಬರೂ ತೀರ್ಥಯಾತ್ರೆ ಹೊರಟಿರುತ್ತಾರೆ. ಒಂದು ಊರಿನ ಬಳಿ ಬಂದಾಗ ದಾರಿಯಲ್ಲಿ ಸಿಕ್ಕ ಒಬ್ಬ ವ್ಯಕ್ತಿಯನ್ನು ತಂದೆ ಕೇಳುತ್ತಾನೆ "ಏನಪ್ಪಾ, ಈ ಊರು ತುಂಬಿದೆಯೇ ಹಾಳೊ"? ಎಂದು, ಆ ವ್ಯಕ್ತಿ "ತುಂಬಿದೆ ಹೋಗಿ" ಎಂದು ಹೇಳುತ್ತಾನೆ. ಮಗನಿಗೆ ಅನಿಸುತ್ತದೆ ಇಷ್ಟೊಂದು ಜನ ಓಡಾಡುತ್ತಿರುವಾಗ ನಮ್ಮಪ್ಪ ಯಾಕೆ ಹೀಗೆ ಕೇಳುತ್ತಿದ್ದಾರೆ ಎಂದುಕೊಳ್ಳುತ್ತಾನೆ. ಮುಂದೆ ಬಂದು ಒಂದು ಮನೆಯ ಗೃಹಿಣಿಯೊಡನೆ ತಾವು ಯಾತ್ರಾರ್ಥಿಗಳೆಂದು ಹೇಳಿದಾಗ ಆ ಮಹಿಳೆ ಅವರಿಗೆ ರಾತ್ರಿ ತಂಗುವ, ಊಟದ ವ್ಯವಸ್ಥೆ ಮಾಡುತ್ತಾಳೆ. ಆಗ ಮಗನಿಗೆ ಅರ್ಥವಾಗುತ್ತದೆ. ಈ ಊರು ತುಂಬಿದೂರು ಎಂದು. ಮಾರನೆಯ ದಿನ ಮುಂದಿನ ಊರಿಗೆ ಹೊರಟಾಗ ಎದುರಿಗೆ ಶವವನ್ನು ಸಂಸ್ಕಾರಕ್ಕಾಗಿ ಹೊತ್ತು ಹೋಗುವವರನ್ನು ನೋಡಿ "ತಂದೆ ಏನಪ್ಪಾ ಇವರು ಬದುಕಿದ್ದಾರೊ, ಸತ್ತಿದ್ದಾರೊ"? ಎಂದು ಕೇಳುತ್ತಾನೆ. ಅದಕ್ಕವನು 'ಬದುಕಿದ್ದಾನೆ' ಎಂದು ಹೇಳುತ್ತಾನೆ. ಊರೊಳಗೆ ಹೋದಾಗ ಊರಿನ ಜನರೆಲ್ಲ ಸತ್ತವನ ಗುಣಗಾನ ಮಾಡುತ್ತಿರುತ್ತಾರೆ. ಅದನ್ನು ಕೇಳಿದ ಮಗನಿಗೆ ಅರ್ಥವಾಗುತ್ತದೆ. ಅವನು ಸತ್ತು ಜನರ ಮನಸ್ಸಿನಲ್ಲಿ ಬದುಕಿದ್ದಾನೆ ಎಂದು ಈ ಕಥೆಯನ್ನು ನನ್ನಮ್ಮ ನನಗೆ ಹೇಳಿ ಮನುಷ್ಯ ಸತ್ತು ಬದುಕಬೇಕು' ಎನ್ನುತ್ತಿದ್ದಳು. ಈ ನನ್ನ ಮಾಮಗೆ ಈ ಕಥೆ ಅನ್ವಯಿಸುತ್ತದೆ ಎಂದು ನನ್ನ ಭಾವನೆ ಈ ನನ್ನ ಮಾಮನ ಪಾರ್ಥಿವ ಶರೀರ ಈಗ ಇಲ್ಲದಿರಬಹುದು. ಆದರೆ ಅವರೊಡನೆ ಕಳೆದ ಒಂದೊಂದು ನಿಮಿಷವೂ, ಆಡಿದ ಒಂದೊಂದು ಮಾತೂ ಬದುಕಿವೆ. ಅಂದಮೇಲೆ ಈಗ ನಾನು ನನ್ನ ಮಾಮ ಇಲ್ಲ ಎಂದು ಹೇಗೆ ತಿಳಿಯಲಿ?

ಅಳಿದ ಮೇಲೂ ಉಳಿದ ನೆನಪು

❀ ಪೂರ್ಣಿಮಾ ದೇಸಾಯಿ

ಕತ್ತಲೆಯಲ್ಲಿ ಬೆಳಕು ಹರಿಸಿ
ನಿಸ್ವಾರ್ಥ ಸೇವೆ ನೀಡುವ
ಮೋಂಬತ್ತಿಯಂತೆ
ಅದರ ಮೌಲ್ಯಗಳಿಗೆ ಗುರಿಯಾಗಿ
ನಿರಾಧಾರನಿಗೆ ದಾರಿ ದೀಪವಾಗಿ
ಬೆಳಕಿನೆಡೆಗೆ ನಡೆಸುವ ಭಾಗ್ಯ ಕೆಲವರಿಗೆ ಹೊರತು.

ತನ್ನದೇ ಆದ ರೀತಿಯಲ್ಲಿ ಈ ಕೆಲವರ ಸಾಲಿಗೆ ಸೇರುವ ನನ್ನ ದೊಡ್ಡಪ್ಪನನ್ನು ನೆನೆಯುವಾಗ ಎದೆ ತುಂಬಿ ಬರುತ್ತದೆ. ಸಾಮಾನ್ಯ ಮಾನವನಾದ ದೊಡ್ಡಪ್ಪನ ಜೀವನದ ಮೌಲ್ಯಗಳು, ಉದ್ದೇಶಗಳು ನಮ್ಮ ಬೆನ್ನು ತಟ್ಟಿ "ನಾನು ಹಾಕಿದ ದಾರಿಯಲ್ಲಿ ನೀನು ನಡೆಯಬಹುದೆಂದು ನೆನಪಿಸುತ್ತವೆ". ನನ್ನ ಮೇಲೆ ಪ್ರಭಾವ ಬೀರಿದ ಕೆಲವು ಪ್ರಸಂಗಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ.

ತನ್ನ ಸುತ್ತಲಿನ ಪರಿಸರದಲ್ಲಿ ಯಾವ ಜೀವಿಯೂ ನೋವನ್ನು ಅನುಭವಿಸದೇ ಸಂತೋಷದಿಂದಿರಲು ತನ್ನ ಕೈ ಮೀರಿ ಸಹಾಯ ಮಾಡುವುದು ದೊಡ್ಡಪ್ಪನ ಸ್ವಭಾವ.

ನಾನು ಒಂದು ವರ್ಷದವಳಿದ್ದಾಗ, ನನ್ನ ತಂದೆ ಅನಾರೋಗ್ಯದಿಂದ ಬಳಲುತಿದ್ದು, ಚಿಂತೆಯಲ್ಲಿ ಕಂಗೆಟ್ಟ ನನ್ನ ತಾಯಿಗೆ, ದೊಡ್ಡಪ್ಪ ಸಮಾಧಾನದಿಂದ "ಕೃಷ್ಣನ ಆರೋಗ್ಯ ಸುಧಾರಿಸುತ್ತದೆ. ಅಲ್ಲಿ ತನಕ ನೀ ಎಂ.ಬಿ.ಬಿ.ಎಸ್. ಮಾಡು. ಕೂಸುಗಳು ನಮ್ಮತ್ತರ ಬೇಳಿತಾವ ಚಿಂತಿ ಯಾಕ ಮಾಡ್ತಿ" ಎಂದು ಹೇಳಿದರು.

ಇದನ್ನು ಕೇಳಿದ ನನ್ನಜ್ಜ (ತಾಯಿಯ ತಂದೆ) "ಇಂತಹ ಅಣ್ಣನಿರಬೇಕಾದರೆ ನನಗೆಂತಹ ಚಿಂತಿ' ಎಂದು ಹಗುರುವಾದ ಮನಸ್ಸಿನಿಂದ ತಮ್ಮೂರಿಗೆ ಮರಳಿದ್ದನ್ನು ನನ್ನ ತಾಯಿ ಯಾವಾಗಲೂ ನೆನೆಯುತ್ತಾಳೆ. ನನ್ನ ತಂದೆಯ ಆರೋಗ್ಯ ಸುಧಾರಿಸುವವರೆಗೂ ನಗುನಗುತ್ತಾ ಆಸರೆ ನೀಡಿದರು. ದೊಡ್ಡಪ್ಪ. ನಂತರದ ದಿನಗಳಲ್ಲಿ ನನ್ನ ತಂದೆಯ ಆರೋಗ್ಯ ಸುಧಾರಿಸಿ, ಸ್ವತಂತ್ರವಾಗಿ ಸಂಸಾರ ನಡೆಸಿದರು. ದೊಡ್ಡಪ್ಪನ ಈ ಸಮಾಧಾನದ ಒಂದು ಮಾತಿಗೆ ನಾವು ಮೂರೂ ಮಕ್ಕಳು ಚಿರಋಣಿ. ಇದೊಂದು ಉದಾಹರಣೆಯಷ್ಟೆ. ಇಂತಹ ಅನೇಕ ನಿದರ್ಶನಗಳಿವೆ. ದೊಡ್ಡಪ್ಪನ ಸಹಾಯದಿಂದ ಜೀವನದಲ್ಲಿ ಉದ್ಧಾರವಾಗಿ, ತಮ್ಮತಮ್ಮ ಹುದ್ದೆಯಲ್ಲಿ ಹೆಸರು ಮಾಡಿರುವುದು ದೊಡ್ಡಪ್ಪನಿಗೆ ತುಂಬ ಸಮಾಧಾನದ ವಿಷಯ. ಇದೇ ಮಾತನ್ನು ತಮ್ಮ ಕೊನೆಯ ಕಾಲದಲ್ಲಿ ಬಹಳಸಾರಿ ಹೇಳಿದ್ದುಂಟು.

ದೊಡ್ಡಪ್ಪ ಎಂದೂ ಟೊಳ್ಳು ಭರವಸೆ ಕೊಡುತ್ತಿರಲಿಲ್ಲ. ಮಕ್ಕಳಲ್ಲಿಯೂ ಇದೇ ಆದರ್ಶವನ್ನು ಪಾಲಿಸಿದ ಪ್ರಸಂಗವೊಂದು ನೆನಪಿಗೆ ಬರ್ತಾ ಇದೆ.

ನಾನು ಆರು ವರ್ಷದವಳಿದ್ದಾಗ ಗುಲಬರ್ಗಾಕ್ಕೆ ಹೋಗಿದ್ದೆವು. ಆ ದಿನ ಮನೆಯಲ್ಲಿ ದೊಡ್ಡಮ್ಮನ ಬಿಸಿ ಬೇಳೆ ಬಾತ್‌ನ ಸಂಭ್ರಮ. ಅದರ ರುಚಿ ಅರಿಯದ ನಾನು "ತಿನ್ನುವುದಿಲ್ಲ" ಎಂದು ಗಲಾಟೆ ಮಾಡಿದಾಗ, "ಬಿಸಿಬೇಳೆ ಬಾತ್ ತಿಂದರೆ ಹೈದ್ರಾಬಾದಿನಿಂದ ಫ್ರಾಕ್ ತರುವುದಾಗಿ" ಭಾಷೆ ಕೊಟ್ಟರು ದೊಡ್ಡಪ್ಪ. ಫ್ರಾಕ್‌ನ ಆಸೆಗಾಗಿ ಬಿಸಿಬೇಳೆ ಭೋಜನ ಮೂರನೆಯ ಬಾರಿ ಪಾತ್ರೆ ತಳ ಕಂಡಾಗ ನಿಂತಿತು. ಅಂದು ದೊಡ್ಡಪ್ಪ ಹೈದ್ರಾಬಾದಿನಿಂದ ಬರುವ ಹೊತ್ತಿಗೆ ಮುಂಬಾಗಿಲಲ್ಲೆ ಕಾಯುತ್ತಿದ್ದೆ ಫ್ರಾಕ್‌ಗಾಗಿ. ಅಲ್ಲಿಯೇ ಪೇಪರೋದುತ್ತಿದ್ದ ದೊಡ್ಡ ದೊಡ್ಡಪ್ಪ "ಕುಸುಮ ದೊಡ್ಡಪ್ಪ ಫ್ರಾಕ್ ತರಲಿಲ್ಲಂದರ ಅಳಬಾರದೇನು? ನೋಡು ಮನ್ಯಾಗ ಎಷ್ಟು ಹುಡುಗರಿದ್ದಾರ? ನಿಂಗ ಒಬ್ಬಕಿಗೆ ಹ್ಯಾಂಗ ತಂದಾನು?" ಎಂದು ತಿಳಿ ಹೇಳಿದ್ದರೂ ನನ್ನ ದೃಷ್ಟಿ ರೋಡಿನ ಮೇಲೇ ಇತ್ತು. ಸಮಯಕ್ಕೆ ಸರಿಯಾಗಿ ಬಂದು ಮುತ್ತಿಟ್ಟು ಫ್ರಾಕ್ ನನ್ನ ಕೈಗೆ ಕೊಟ್ಟಾಗ ನನಗೂ ಆಕಾಶಕ್ಕೆ ಮೂರೇ ಗೇಣು. ಅಲ್ಲೆ ಕುಳಿತಿದ್ದ ದೊಡ್ಡ ದೊಡ್ಡಮ್ಮ "ಕುಸುಮರಾಯರಲ್ಲಿ ಮಾತಂದರ ಆಯಿತು ಹೇಳಿದ್ಹಂಗ ಮಾಡಲಿಲ್ಲ ಅಂದರ ಅವರಿಗೆಲ್ಲ ಸಮಾಧಾನ?" ಅಂದರು. ಒಂದು ಸಣ್ಣ ಫ್ರಾಕ್‌ನಿಂದ ದೊಡ್ಡಪ್ಪ ನನಗೆ ದೊಡ್ಡ ಸಂದೇಶ ನೀಡಿದ್ದರು. ಚಿಕ್ಕ ವಯಸ್ಸಿನಲ್ಲಿ ನಡೆದ ಈ ಪ್ರಸಂಗ ನನ್ನ ಮೇಲೆ ಮಾಡಿದ ಪ್ರಭಾವ ಅಷ್ಟಿಷ್ಟಲ್ಲ. ಇಂದಿಗೂ ನಾನಾಡಿದ ಮಾತಿನಂತೆ ನಡೆಯದೇ ಇದ್ದಲ್ಲಿ ಅಸ್ತಿತ್ವವನ್ನು ಕಳೆದುಕೊಂಡ ಅನುಭವ.

ದೊಡ್ಡಪ್ಪನ ವ್ಯಕ್ತಿತ್ವದ ಪ್ರಭಾವ ನಮ್ಮ ಕುಟುಂಬದ ನಾಲ್ಕು ಗೋಡೆಗಳಿಗಷ್ಟೇ ಸೀಮಿತವಾಗಿರಲಿಲ್ಲ. ಚಿಕ್ಕ ವಯಸ್ಸಿನಲ್ಲಿ ಲೋಹಿಯಾವರ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯದ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದು, ತಮ್ಮ ಅಧಿಕಾರದ ಅವಧಿಯಲ್ಲಿ ಗುಲಬರ್ಗಾದ ನೀರಿನ ಸಮಸ್ಯೆ ಪರಿಹರಿಸಿದ್ದು ಅವರ ದೇಶ ಪ್ರೇಮಕ್ಕೆ ಉದಾಹರಣೆ.

ಕೆಲವು ವರ್ಷಗಳಿಂದೀಚೆಗೆ ಮನೆಯಲ್ಲಿ ನಾವುಗಳು, ಈಗಿನ ನಮ್ಮ ದೇಶದ ಪರಿಸ್ಥಿತಿ ಮತ್ತು ನಮ್ಮ ಜನರ ಜಾಣ್ಮೆ ಹಾಗೂ ಕೌಶಲ್ಯಗಳು ಪರರಾಷ್ಟ್ರಗಳಿಗೆ ವಲಸೆ ಹೋಗುತ್ತಿರುವುದರಿಂದ ನಮ್ಮ ದೇಶಕ್ಕಾದ ನಷ್ಟವನ್ನು ಚರ್ಚಿಸುತ್ತಿದ್ದೆವು. ಅದನ್ನು ಕೇಳಿಸಿಕೊಂಡ ದೊಡ್ಡಪ್ಪ ತಮ್ಮ ವಿಚಾರಧಾರೆಯನ್ನು ಮುಂದಿಟ್ಟರು.

ಅವರ ಪ್ರಕಾರ ೧೨೦೦ BC ಯಿಂದ ನಮ್ಮ ದೇಶ ಪರಕೀಯರ ಆಕ್ರಮಣಕ್ಕೆ ತುತ್ತಾಗಿ ನಮ್ಮ ಜನರಲ್ಲಿ ಭಿನ್ನಾಭಿಪ್ರಾಯವಾಗಿ ಎರಡು ಗುಂಪುಗಳಾದವು. ಒಂದು ಗುಂಪು ನಮ್ಮ ದೇಶದ ಮೇಲೆ ಅಪಚಾರವೆಸಗಿ ಉದ್ಧಾರವಾದರು. ಇನ್ನೊಂದು ಗುಂಪು ಪರಕೀಯರ ದಬ್ಬಾಳಿಕೆಯಲ್ಲಿ ಕೆಳಮಟ್ಟದ ಜೀವನ ನಡೆಸಿದರು. ಎರಡು ಗುಂಪುಗಳ ವರ್ತನೆಯಿಂದಾಗಿ

ನಮ್ಮ ದೇಶದ ಅಭಿವೃದ್ಧಿ ಕುಂಠಿತಗೊಂಡಿದ್ದು. ಈ ಎರಡು ಗುಂಪುಗಳಿಗೂ ಸೇರದ ಜನಾಂಗ ತನ್ನ ಅಭಿವೃದ್ಧಿಯನ್ನೇ ಪ್ರಧಾನವಾಗಿಟ್ಟುಕೊಂಡು ತನ್ನ ಜಾಣ್ಮೆ ಮತ್ತು ಕೌಶಲ್ಯಗಳಿಂದ ಪರರಾಷ್ಟ್ರಗಳಲ್ಲಿ ನೆಲಸಿ ಹೆಸರು ಮಾಡಿರುವರು. ಈಗಿನ ಪರಿಸ್ಥಿತಿ ಸುಧಾರಿಸಲು ನಮ್ಮ ಯುವ ಜನಾಂಗ ತಮ್ಮ ಜಾಣತನದಿಂದ ದೇಶದಲ್ಲಿ foreign currency ಯ ಸಂಗ್ರಹ ಹೆಚ್ಚಾಗಿಸಲೂ ಇದು ದೇಶದ ಅಭಿವೃದ್ಧಿಗೆ ಅಡಿಪಾಯ "ಎನ್ನುತ್ತಾ ನನ್ನೆಡೆಗೆ ತಿರುಗಿ" ಒಂದು ವರ್ಷದಲ್ಲಿ ನಮ್ಮ ದೇಶದಿಂದ ಎಷ್ಟು software Engineer. ಅಮೆರಿಕಾಗೆ ಹೋಗುವರು "ಎಂದು ಕೇಳಿದರು". ೬೫,೦೦೦ Software Engineers ತಮ್ಮ ಪ್ರತಿ foreign Trip ಗೂ ೫೦ ಡಾಲರ್ ದೇಶದ ಅಭಿವೃದ್ಧಿಗೆ ಮೀಸಲಾಗಿಡಬಾರದೇಕೆ? ಎಂದು ಕೇಳಿದರು. ಇದಕ್ಕೆ ಉತ್ತರವಾಗಿ ಲಂಚಕೋರರ ಹಾವಳಿಯಿಂದ ಈಗಿನ ಜನಾಂಗ ಈ ರೀತಿಯ ವಿಚಾರದಲ್ಲಿ ಆಸಕ್ತಿ ತೋರಿಸುವುದಿಲ್ಲವೆಂದಾಗ, ಲಂಚಕೋರತನವನ್ನು ನಿವಾರಿಸಲು Prime Minister fund ತೆಗೆಯಬಹುದಾಗಿಯೂ, ಅದಕ್ಕೆ ತಮ್ಮಿಂದಾಗಬಹುದಾದ ಸಹಾಯ ಮಾಡುವುದಾಗಿ ಹೇಳಿದರು.

ಎಪ್ಪತ್ತರ ವಯಸ್ಸಿನಲ್ಲಿಯೂ ತನ್ನ ದೇಶ ಮತ್ತು ಅದರ ಅಭಿವೃದ್ಧಿಯದೇ ಯೋಚನೆ ದೊಡ್ಡಪ್ಪನಿಗೆ. ಈಗ ನಮ್ಮ ದೇಶದಲ್ಲಿ foreign currency ಯ ಸಮಸ್ಯೆಯಿಲ್ಲದಿದ್ದರೂ ಹೀಗೆ ಸಂಗ್ರಹಿಸಿದ ಹಣದಿಂದ ಆರೋಗ್ಯ ಮತ್ತು ಶಿಕ್ಷಣಕ್ಕಾಗಿ ಉಪಯೋಗಿಸಬಹುದಾಗಿದೆ. ಈಗಲೂ ಕಾಲ ಮಿಂಚಿಲ್ಲ ನನಗಿಂತಲೂ ಹಿರಿಯರು, ಬಲ್ಲವರೂ ಇದನ್ನು ಕಾರ್ಯಗತ ಮಾಡುವರೇ? ಆಗಲಾದರೂ ದೊಡ್ಡಪ್ಪನ ಆಸೆ ನೆರವೇರಬಹುದು.

ಈಗಲೂ ದೊಡ್ಡಪ್ಪನ ನೆನಪು ಬಂದಾಗ ಗುಲಬರ್ಗಾದ ಮನೆಯ ಅಂಗಳದಲ್ಲಿ ಹಣ್ಣಿನ ಬುಟ್ಟಿಯಿಟ್ಟುಕೊಂಡು ನಮಗೆಲ್ಲ ಹಂಚುತ್ತ ಮಂದಸ್ಮಿತರಾದ ಅವರ ಮುಖ ಮುಂದೆ ಬರುತ್ತದೆ.

ಮಾಮನ ನೆನಪೇ ಸಂಜೀವಿನಿ

✿ ಪ್ರತಿಭಾ ಕುಲಕರ್ಣಿ

ಕುಸುಮಾಕರ ಮಾಮಗೆ ನಾನು ಖಾಸಾ ಸೋದರ ಮಾವನ ಮಗಳು, ಅಂದರೆ ನಮ್ಮ ತಂದೆ ಹಾಗೂ ಕುಸುಮಾಕರ ಮಾಮನ ತಾಯಿ, ಖಾಸಾ ಅಕ್ಕ-ತಮ್ಮ. ನಮ್ಮ ತಂದೆ-ತಾಯಿ ತೀರಿಕೊಂಡಾಗ ನಮಗೆ ನೆಲೆ ಕಲ್ಪಿಸಿಕೊಟ್ಟವರು ಮಾಮ-ಮಾಮಿ, ಮಾಮನವರ ಉಪಕಾರ ನನಗೆ ಜನ್ಮ ಜನ್ಮದಲ್ಲಿ ತೀರಿಸಲಾರದ ಋಣ. ಅವರು ನಮಗೆಲ್ಲ ಮಾಡಿದ್ದು ಹೇಳಲಿಕ್ಕೇ ಸಾಧ್ಯವಿಲ್ಲ. ನನಗೆ ಬಾಯಿಯೇ ಬರುವುದಿಲ್ಲ ಅಷ್ಟು ನಮ್ಮ ಉದ್ಧಾರ ಮಾಡಿದ್ದಾರೆ.

ನಾವು ಐದು ಜನಕ್ಕೂ ಒಂದಲ್ಲ ಒಂದು ರೀತಿಯಿಂದ ಸಹಾಯ-ಸಹಕಾರ ಮಾಡಿದ್ದಾರೆ. ನನ್ನ ತಮ್ಮ ಇವತ್ತು ದೊಡ್ಡ ಹುದ್ದೆಯಲ್ಲಿ ಸುಖವಾಗಿರುವುದು ಆತನನ್ನು ಮಗನಂತೆ ಸಾಕಿ ಸಲುಹಿ ಓದಿಸಿದ್ದು, ನನ್ನ ಕೊನೆಯ ತಂಗಿನ್ನ ಮಗಳಂತೆ ಸಾಕಿ ಸಲುಹಿ ತಮ್ಮ ಜ್ಯೂನಿಯರ್ ಆಗಿದ್ದ ಕೃಷ್ಣಮೂರ್ತಿಗೆ ಕನ್ಯಾದಾನ ಮಾಡಿಕೊಟ್ಟಿದ್ದು ಎಲ್ಲ ಕುಸುಮಾಮನೇ!

ನನ್ನ ಜೀವನವಂತೂ, ಉಸಿರಾಡುತ್ತಿರುವುದು ಮನೆಯ ದೀಪ ಬೆಳಗುತ್ತಿರುವುದು ಅವರಿಂದಲೇ. ನನಗಿನ್ನೂ ನೆನಪಿದೆ. ನನ್ನ ತಾಯಿಯ ತಂದೆ, ಸಾಲಹಳ್ಳಿ ಅಜ್ಜ, ನನ್ನ ಅಣ್ಣ ನೋಡಿದ ವರನ ಜೊತೆಗೆ ನನ್ನ ಲಗ್ನ ನಿಶ್ಚಯವಾದಾಗ ಮಾಮ ತರ್ತು ಪರಿಸ್ಥಿತಿ ವಿರುದ್ಧ ಸತ್ಯಾಗ್ರಹ ಮಾಡಿ ಕಾರಾಗೃಹದಲ್ಲಿದ್ದರು. ವರನ ಮಾಹಿತಿ ತಿಳಿದು ನಾನು ಕೊಂಚ ಗಲಿಬಿಲಿಗೊಂಡಿದ್ದೆ. ನನ್ನ ಭಾವೀ ಪತಿ ಒಂದು ಕೊಲೆಯ ಆರೋಪದಿಂದ ಅಪರಾಧಿಯಾಗಿ ಹತ್ತು ವರ್ಷ ಸೆರೆಮನೆ ಕಂಡಿದ್ದರು. ಎಸ್.ಎಸ್.ಎಲ್.ಸಿ.ತನಕ ಅವರ ವಿದ್ಯಾಭ್ಯಾಸವಾಗಿದ್ದು ಸುಮಾರು ೫೦ ಎಕರೆ ಜಮೀನು ಅವರ ಪಾಲಿಗೆ ಇತ್ತು. ಜೈಲ್‌ಗೆ ಮಾಮನ ಭೆಟ್ಟಿಗೆ ಹೋದಾಗ ಮಾಮ ನನಗೆ ಹೀಗೆ ಹೇಳಿದ್ದರು. "ಕೊಲೆಯ ಕೇಸಿನಲ್ಲಿ ಶಿಕ್ಷೆಯಾಗಿ ಜೈಲ್ ಕಂಡುಬಂದ ಮನುಷ್ಯನಿಗೆ ಮರು ಜೀವನ ಕೊಡಬೇಕು. ಅವನಿಗೆ ಹೊಸ ಜೀವನ, ಹೊಸ ಬದುಕು ನಿನ್ನಿಂದ ಸಿಗಲಿ. ನೀನು ಓದಲಿಲ್ಲ ಆದರೆ ಒಕ್ಕಲುತನದಲ್ಲಿ ನಿನಗೆ ಅನುಭವವಿದೆ. ನೀನು ನಿನ್ನ ಗಂಡ ಒಕ್ಕಲುತನದಿಂದ ಹೊಸ ಜೀವನ ಶುರು ಮಾಡಿರಿ". ಅವರ ಆಶೀರ್ವಾದದಂತೇ ಒಕ್ಕಲುತನ ಸುಧಾರಿಸಿದೆ. ಅವರಿಗೆ ಹೊಸ ಜೀವನ ಕೊಡಲು ಹೆಣಗಿದೆ. ಆದರೆ 3 ಗಂಡು ಮಕ್ಕಳು ಹುಟ್ಟಿದುವು ಮಾತ್ರ ನನ್ನ ಗಂಡ ತನ್ನ ಚಟಗಳನ್ನು ಬಿಡಲಿಲ್ಲ. ಒಂದೊಂದೇ ಹೊಲ ಮಾರ ತೊಡಗಿದಾಗ ಮೂರನೇ ಗಂಡು ಹುಟ್ಟಿದಾಗ ಮಾಮಿ-ಮಾಮ, ಮಕ್ಕಳಾಗದಿರಲಿ ಎಂದು ಆಪರೇಶನ್ ಮಾಡಿಸಿ ತಮ್ಮ ಬಳಿ ತಿಂಗಳುವರೆಗೆ ಇಟ್ಟುಕೊಂಡು ನಂತರ ಕೋರ್ಟಿಗೆ ಅವರು ಆಸ್ತಿ ಮಾರದಂತೆ ತಡೆಯಾಜ್ಞೆ ಆಸ್ತಿ ವಿಭಜನೆ ದಾವಾ ಮಾಡಿ ನನ್ನ ಗಂಡನ ಕಣ್ಣು ತಪ್ಪಿಸಿ ಬೆಂಗಳೂರಲ್ಲಿಟ್ಟು ಹೊಲಿಗೆ ಕಸೂತಿ ತರಬೇತಿ ಕೊಡಿಸಿದರು. ನನ್ನ ಗಂಡ ಕೇಸಿನಲ್ಲಿ ತನ್ನ ಒಂದು ಪಾಲು ಪಡೆದು ನನಗೂ ಮಕ್ಕಳಿಗೂ ನಾಲ್ಕು ಪಾಲು ದೊರಕಿ

ರಾಜಿ ಮಾಡಿಕೊಂಡು ಹೊರಟು ಹೋದ. ನನ್ನ ಮಕ್ಕಳೊಡನೆ ಬ್ರಹ್ಮಪುರ ಬಡಾವಣೆಯಲ್ಲಿ ಬೇರೆ ಮನೆಮಾಡಿ ಇಟ್ಟು ನನ್ನ ಒಕ್ಕಲುತನ ಸುಧಾರಿಸುವವರೆಗೂ ಸಂಸಾರದ ಖರ್ಚು ಭಾರ ಹೊತ್ತವರು ಮಾಮ-ಮಾಮಿ. ನನ್ನ ಮಕ್ಕಳಿಗೆ ಉತ್ತಮ ಶಾಲೆಯಲ್ಲಿ ಓದಿಸಲು ವ್ಯವಸ್ಥೆ ಮಾಡಿದರು. ಹೊಲಿಗೆ ತರಬೇತಿ ಕೊಡಿಸಿದ್ದು ನಾನು ಬದುಕಲು ಸಾಧ್ಯವಾಗಿದೆ. ನನ್ನ ಸಂಸಾರವನ್ನು ಈಗ ನಾನೇ ನೋಡಿಕೊಳ್ಳುತ್ತಿದ್ದೇನೆ. ನನ್ನ ಪತಿ ಸಹ ತನ್ನ ಪಾಲಿನ ಆಸ್ತಿ ಮಾರಿಕೊಂಡು ಈಗ ನನ್ನ ಬಳಿಯೇ ಬಂದು ಸೇರಿದ್ದಾನೆ. ನನ್ನ ಸಂಸಾರ ಸರಿ ಹೊಂದಿಸಲು ಒಕ್ಕಲುತನ lease ಮೇಲೆ ಕೊಡಿಸಿದ್ದೂ, ಮಾಮನೇ, ಹೀಗೆ ನನ್ನ ಹೆಜ್ಜೆ ಹೆಜ್ಜೆಗೆ ಅವರ ಸಹಾಯ ಸಿಕ್ಕಿದೆ.

ಮಾಮನ ಅಂತಃಕರಣ ಬಹು ದೊಡ್ಡದು. ನನ್ನ ಕೈ ಅಡಿಗೆ ಅವರಿಗೆ ಬಹಳ ಇಷ್ಟ. ಪ್ರತಿ ದೀಪಾವಳಿಯಲ್ಲಿ ಬಡವಳ ಮನೆಗೆ ಬಂದು ನನ್ನ ಕೈ ಹೋಳಿಗೆ ಊಟ ಉಂಡು ಮಕ್ಕಳೊಡನೆ ನಕ್ಕು ನಲಿದು ಹೋಗುವುದು ವಾಡಿಕೆ. ಶ್ರಾವಣದಲ್ಲಿ ಮಾಮಿ ಮಾಡುತ್ತಿದ್ದ ಶ್ರಾವಣ ಶುಕ್ರವಾರದ ಗೌರಿ ಪೂಜೆಗೆ ನಾನೇ ಮುತ್ತೈದೆ. ಮಾಮ ನನ್ನ ಕೈ ಅಡಿಗೆ ಊಟ ಮಾಡುವುದು, ಪೂಜೆ ಸಮಯದಲ್ಲಿ "ಭಾಗ್ಯದ ಲಕ್ಷ್ಮೀ ಬಾರಮ್ಮ" ಮಾಮಿ ಜೊತೆಗೆ ಸುಶ್ರಾವ್ಯವಾಗಿ ಹಾಡುವುದು ನನಗೆ ಕೈ ತುಂಬ ದಕ್ಷಿಣೆ ಕೊಟ್ಟು ಕಳಿಸುವುದು ಮಾಮನ ಪದ್ಧತಿ.

ಮೂರನೇ ಮಗ ಜಯತೀರ್ಥ ಕೊಳಲು ವಾದನದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ದ್ವಿತೀಯ ಬಹುಮಾನ ಪಡೆದಾಗ ನನಗಿಂತ ಸಂತಸಪಟ್ಟವರು-ಮಾಮ. 5 ಸಾವಿರ ರೂ. ಆತನಿಗೆ ತಾವು ಬಹುಮಾನ ಕೊಟ್ಟಾಗ ಅವನು ಅವರ ನೆನಪಿನಲ್ಲಿ ಕೊಳಲು ಖರೀದಿಸಿ ಫೋನ್‌ನಲ್ಲಿ ತಿಳಿಸಿದಾಗ--" ಜಯತೀರ್ಥ ನೀನು ಹರಿಪ್ರಸಾದ ಚೌರಾಸಿಯಾ ಆಗಬೇಕು" ಎಂದು ಬಾಯಿ ತುಂಬ ಹೊಗಳಿದ್ದು "ಪ್ರತಿಭಾ ನೀನು ಭಾಗ್ಯಶಾಲಿ ನಿನ್ನ ಈ ಮಗ ನಿನಗೆ ಕೀರ್ತಿ ತರ್ತಾನೆ" ಎಂದು ಅತ್ಯಂತ ಸಂತೋಷದಿಂದ ಹರಿಸಿದ್ದ ಮಾಮ ಇನ್ನೆಲ್ಲಿ? ಅವರ ಅನಾರೋಗ್ಯದ ಕಾರಣ ಬೆಂಗಳೂರಲ್ಲಿ ನೆಲೆಸಿದಾಗ ನಿಜಕ್ಕೂ ನಾನು ಪರದೇಶಿ ಪರದೇಶಿ ಎನಿಸತೊಡಗಿತ್ತು. ಮಾಮಾ ಹೋದ ವರ್ಷ ನಮ್ಮನ್ನೆಲ್ಲ ದುಃಖದಲ್ಲಿ ಮುಳುಗಿಸಿ ಹೋಗಿ ಬಿಟ್ಟರು. ಅವರ ನೆನಪೇ ಈಗ ನಮಗೆ ಸಂಜೀವಿನಿ!

"ಬೆಳ್ಳಿ ಬೆಳಕು ಕಂಡಿದ್ದು ಸಂಜೀವಿನಿಯಲ್ಲಿ"

❁ ಶ್ರೀಮತಿ ಬಿ. ಸುಜಾತಾ

೧೯೭೪ ರಲ್ಲಿ ಮಳಖೇಡದಿಂದ ಗುಲ್ಬರ್ಗಾಕ್ಕೆ ಬಂದಿದ್ದೆ. ಆಗ ತಾನೇ 4ನೇ ತರಗತಿ ಪಾಸಾಗಿ ೫ನೇ ತರಗತಿಗೆ ಸೇರಬೇಕಾಗಿತ್ತು.

ನಮ್ಮ ಮಳಖೇಡದ ಮನೆಯಲ್ಲಿ ಲೈಟ್ ಇಲ್ಲ, ಟೈಮ್ ತೋರಿಸಲು ಗಡಿಯಾರವೂ ಇದ್ದಿಲ್ಲಾ, ಹೀಗಾಗಿ ಟೈಮ್ ಸಹ ನೋಡಲು ತಿಳಿಯದ ಹುಡುಗಿ ನಾನು. ರಾತ್ರಿ ಲಾಟೀನ್‌ನ್ನು ಉಪಯೋಗಿಸುತ್ತಿದ್ದೆ. ನಮ್ಮ ಅಣ್ಣಾ, ಪ್ರಕಾಶ ದೇಶಪಾಂಡೆ ಗುಲ್ಬರ್ಗಾದಲ್ಲಿ ಶಿಕ್ಷಕ ಕೆಲಸ ಮಾಡುತ್ತಿದ್ದ. ಅವನು ವಾರಕ್ಕೊಂದು ದಿನ ಮಾತ್ರ ಬಂದು ನಮ್ಮೆಲ್ಲರಿಗೆ ಬೇಕಾದ ಸಾಮಾನುಗಳನ್ನು ತೆಗೆದುಕೊಂಡು ರಾತ್ರಿ ಬಂದು ಮರುದಿನ ಬೆಳಿಗ್ಗೆ ಎದ್ದು ಪುನಃ ಹೊರಡುತ್ತಿದ್ದ.

ಹೀಗೆ ಮತ್ತೊಂದು ದಿನ ರಾತ್ರಿ ಬಂದಿಳಿದ.

"ಸುಜಾತ, ಇನ್ನು ಮೇಲೆ ನಿನ್ನನ್ನು ಕಲ್ಬುರ್ಗಿಯಲ್ಲಿ ಶಾಲೆಗೆ ಸೇರಿಸಬೇಕೆಂದು ಮಾಡಿದ್ದೇನೆ. ನಾಳೆ ಮುಂಜಾನೆ ತಯಾರಿರು" ಎಂದಾ!

ಒಳಗಿನಿಂದ ನನ್ನ ಅಕ್ಕ ಬಂದು ಸುಮ್ಮನೆ ಬಾಗಿಲಲ್ಲಿ ನಿಂತು ಬಗ್ಗಿ ಒಮ್ಮೆ ನನ್ನ ಕಡೆ ಇನ್ನೊಮ್ಮೆ ನಮ್ಮ ಪ್ರಕಾಶಣ್ಣನ ಕಡೆ ನೋಡಿ ಒಳಗೆ ಊಟಕ್ಕೆ ಬಡಿಸಲು ಹೋದ್ಲು. ನಾನು ಚಿಕ್ಕವಳಿದ್ದಾಗಿನಿಂದಲೂ ನಮ್ಮೆಲ್ಲರನ್ನು ಅವಳೇ ಪ್ರೀತಿಯಿಂದ ಸಾಕಿದ್ಲು ತಾಯಿಯ ಮಮಕಾರವನ್ನೇ ಕಾಣದ ನಾನು ಅಕ್ಕಳನ್ನು ಬಿಟ್ಟು ಬರಲು ಅಸಾಧ್ಯವೆನಿಸಿತು. ನಮ್ಮ ಅಣ್ಣಾ ಅಂದ್ರೆ ಎಲ್ಲರಿಗೂ ಹುಲಿಕಂಡಂತೆ ಹೆದರಿಕೆ. ಹಸಿವೆ ನೀರಡಿಕೆ ಬೇಕು ಬೇಡ ಅಂತ ಕೇಳಿದ್ದು ನೆನಪಿಲ್ಲ. ಪ್ರತಿಯೊಂದು ಅವನೆ ತಂದುಕೊಡುತ್ತಿದ್ದ. ಹೀಗಾಗಿ ಬೇಕು ಬೇಡಗಳಿಗೆ ಆಸ್ಪದವೇ ಇರಲಿಲ್ಲ. ಎಲ್ಲದಕ್ಕೂ ಸುಮ್ಮನೆ ಇರುವುದು. ನನಗೂ ಸಹ ಅಳು ಬಂತು ಮಳಖೇಡ ಬಿಟ್ಟರೆ ಬೇರೆ ಊರು ನೋಡದ ನಾನು ಗುಲ್ಬರ್ಗ ಅಂದ್ರ ದೊಡ್ಡ ಪಟ್ಟಣಕ್ಕೆ ಹೋಗುತ್ತೇನೆ ಎಂಬ ಸಡಗರ ಏನೋ ಒಂದು ತರಹದ ನೋವು. ಅಕ್ಕ ನನ್ನ ೨ ಜೊತೆ ಬಟ್ಟೆ ಚೆನ್ನಾಗಿ ಒಗೆದು ಜಡೆ ಹಾಕಿ ಅನ್ನ ಸಾರು ಊಟಕ್ಕೆ ಬಡಿಸಿ ಎದ್ದು ಬಚ್ಚಲು ಮನೆಯಲ್ಲಿ ನಿಂತು ಅಳತೊಡಗಿದಾಗ ನಮ್ಮ ಅಣ್ಣಾ ಊಟ ಮುಗಿಸಿ ಕೈತೊಳೆಯಲು ಒಳಗೆ ಬಂದ. ನಮ್ಮನ್ನು ನೋಡಿ ಬಯ್ಯಲು ಶುರು ಮಾಡ್ದ. ಅವನು ಕೂಗಾಡಲು ಶುರು ಮಾಡಿದ್ರೆ ಜೋರಾಗಿ ಆನೆಕಲ್ಲಿನ ಮಳೆ ಬಂದಂತೇ ಆಗುತ್ತಿತ್ತು. ಹಾಗೆಯೇ ಊರಿಗೆ ಹೊರಟೇ ಬಿಟ್ಟೆ.

ಗುಲ್ಬರ್ಗಾ "ಸಂಜೀವಿನಿ" ಅದು ನಮ್ಮ ಸೋದರತ್ತೆ ಮಗನ ಮನೆ ಕುಸುಮಾಕರ

ದೇಸಾಯಿ ವಕೀಲರಮು. ಅಲ್ಲಿಯದೇ ಒಂದು ತರಹದ ಜೀವನ. ಅಲ್ಲಿ ಸೇರಿದಾಗ ರಾತ್ರಿ ಆಗಿತ್ತು. ನಾನು ಬರುವುದನ್ನೆ ಕಾಯುತ್ತಾ ಕುಳಿತಿದ್ದರು. ನಮ್ಮ ಮಾಮಿ, ಮಾಮ, ಮನೆಯ ತುಂಬಾ ಲೈಟ್, ಫೋನ್ ಎಲ್ಲ ಕೋಣೆಯಲ್ಲಿ ಫ್ಯಾನ್, ಮಂಚಾ ಮುಂತಾದ ಸಾಮಾನುಗಳನ್ನು ನೋಡಿ ಸಂತೋಷ. ನಾನು ಅಲ್ಲಿಗೆ ಹೋಗುವ ಮೊದಲು ನನ್ನ ಎರಡನೆಯ ಅಣ್ಣಾ ದೀಪಕ್ ಅವರಲ್ಲಿ ಇದ್ದು ಆಗಲೇ ೧೨ ವರ್ಷ ಆಗಿತ್ತು. ಅವನ ಹತ್ತಿರ ಅಷ್ಟೊಂದು ಸಲುಗೆ ಇರಲಿಲ್ಲಾ. ನನಗೆ ಒಬ್ಬಳೆ ರಾತ್ರಿ ಹೊತ್ತು ಮಲಗಲು ಅಭ್ಯಾಸ ಇಲ್ಲಾ. ಇಡೀ ರಾತ್ರಿ ಅಳುತ್ತಾ ಮಲಗಿದ್ದೆ. ಮರುದಿನ ಬೆಳಗಾಯಿತು ನಮ್ಮ ಮಾಮಿ, ಸರಿತಾ ಕುಸುಮಾಕರ್ ದೇಸಾಯಿ ವಕೀಲ ವೃತ್ತಿ ಇನ್ನೂ ಪ್ರಾರಂಭಿಸಿರಲಿಲ್ಲ. ಇನ್ನೂ ಕಾಲೇಜಿಗೆ ಹೋಗುತ್ತಿದ್ದರು. "ಏ ಸುಜಾತ ಬೇಗಬಾ, ಹೆರಳು ಹಾಕಿ ಬಿಡ್ತೀನಿ ಆಮೇಲೆ ಕಾಯಿಪಲ್ಲೆ ಹೆಚ್ಚುತ್ತೇನೆ ಅಡಿಗೆಗೆ ಸುಲೋಚನಬಾಯಿ ಬರುತ್ತಾರೆ. ಇನ್ನು ದೇವರ ಕಟ್ಟೆಗೆ ರಂಗೋಲಿ ಹಾಕಬೇಕು" ಎಂದು ಜೋರಾಗಿ ಕರೆದ್ರು, ಬೇಗ ಬೇಗ ಜಡೆ ಹಾಕಿ, ಸ್ನಾನ ಮಾಡು ಅಂತ ಹೇಳಿ ಅವರು ತಾವು ಮಲಗುವ ಕೋಣೆಗೆ ಹೋದ್ರು. ನನಗೆ ಏನೊ ಒಂದು ತರಹದ ಯೋಚನೆ. ಇಷ್ಟೊಂದು ದೊಡ್ಡವರಾಗಿದ್ದಾರೆ. ಮದುವೆ ಆಗಿದೆ ಮನೆ ತುಂಬಾ ಜನ, ಎಲ್ಲ ಕೆಲಸ ಮುಗಿಸಿ ಹೇಗೆ ಕಾಲೇಜಿಗೆ ಹೋಗುತ್ತಾರೆ. ಮದುವೆ ಆದ ಮೇಲೆ ಕಾಲೇಜಿಗೆ ಹೋಗುತ್ತಾರೆ. ಹೋಗಬಹುದಾ? ಹೀಗೆ ಏನೇನೋ ಪ್ರಶ್ನೆ ಕಾಡ ತೊಡಗಿದವು. ನಮ್ಮ ಅಣ್ಣಾ ದೀಪಕ್ ಬಂದಾ ಒಂದು ಪುಸ್ತಕಾ, ಪೆನ್ಸಿಲ್, ನಾಕಾಣೆ ಕೈಯಲ್ಲಿ ಕೊಟ್ಟು ನೂತನ ವಿದ್ಯಾಲಯ ಶಾಲೆಯಲ್ಲಿ ೫ನೇ ತರಗತಿ ಕೋಣೆಗೆ ಬಿಟ್ಟು ಹೋದ. ಸಂಜೆ ಶಾಲೆ ಬಿಟ್ಟ ಮೇಲೆ ಮನೆಯಲ್ಲಿ ಕೆಲಸಮಾಡುತ್ತಿದ್ದ ಸುಭಾಷ್ ಬಂದು ಮನೆಗೆ ಕರೆದುಕೊಂಡು ಹೋದ. ಹೀಗೆ ಸ್ವಲ್ಪ ದಿನ ನನಗೆ ದಾರಿ ಗೊತ್ತಾಗುವ ತನಕ ದಿನಾಲು ಶಾಲೆಗೆ ಬಿಡುವುದು ಕರೆದುಕೊಂಡು ಹೋಗುವುದು ನಡೆಯಿತು. ನಮ್ಮ ಮಾಮ, ಮಾಮಿ ನನ್ನನ್ನು ಬಹಳ ಪ್ರೀತಿಯಿಂದ ಕಾಣತೊಡಗಿದರು. ಹೀಗೆಯೇ ಅಲ್ಲಿಯ ವಾತಾವರಣಕ್ಕೆ ಹೊಂದಿಕೊಂಡೆ. ನಮ್ಮ ಅಕ್ಕಂದಿರ ನೆನಪಿನಲ್ಲಿ ಇರುತ್ತಿದ್ದ ನನ್ನನ್ನು ಎಲ್ಲಾರನ್ನು ಮರೆಯಿಸಿ ನನ್ನನ್ನು ಒಲಿಸಿಕೊಂಡರು. ದಿನ ಕಳೆದಂತೆ ಅಲ್ಲಿಯ ವಾತಾವರಣಕ್ಕೆ ಹೊಂದಿಕೊಂಡೆ. ಕುಸುಮಾಕರ್ ದೇಸಾಯಿ ರಾಜಕೀಯ ವ್ಯಕ್ತಿ, ವಕೀಲರು, ನಮ್ಮ ಮಾಮಿ ಸಾಹಿತಿ, ಗೃಹಿಣಿ, ವಕೀಲರು. ಹತ್ತಾರು ರಾಜಕೀಯ ವ್ಯಕ್ತಿಗಳು ಸಾಹಿತಿಗಳು ಬಂದು ಹೋಗುವ ಜನ ಬಹಳ. ಹೀಗೆ ಬಿ.ಎ. ಅಲ್ಲಿಯೇ ಮುಗಿಸಿದೆ. "೧೯೭೭ ರಲ್ಲಿ ತುರ್ತು ಪರಿಸ್ಥಿತಿ" ಇಂದಿರಾಗಾಂಧಿ ಘೋಷಿಸಿದಾಗ ಅವರ ವಿರುದ್ಧವಾಗಿ ಮಾತನಾಡಿದವರನ್ನು ಅರೆಸ್ಟ್ ಮಾಡುತ್ತಿದ್ದರು. ನಾನು ಶಾಲೆಯಿಂದ ಬರುವುದರಲ್ಲಿ ನಮ್ಮ ಮಾಮಾಗೆ ಪೊಲೀಸರು ಬಂದು ಅರೆಸ್ಟ್ ಮಾಡಿದರು. ಮರುದಿನ "ಅವರನ್ನು ಕೋರ್ಟ್‌ಗೆ ಹಾಜರುಪಡಿಸುತ್ತಾರೆ" ಎಂದು ಮನೆಯಲ್ಲಿ ಎಲ್ಲರೂ ಮಾತನಾಡುತ್ತಾ ಇದ್ರು. ನಾನು ನನ್ನ ಪಾಡಿಗೆ ಶಾಲೆಗೆ ರೆಡಿ ಆಗಿ ಹೋದೆ. ಎಲ್ಲಾ ದಿನಪತ್ರಿಕೆಯಲ್ಲಿ ಕುಸುಮಾಕರ್ ದೇಸಾಯಿ ಬಂಧನ ಅಂತ ಏನೋ ಬರೆದಿದ್ದು ಸ್ವಲ್ಪ ಸ್ವಲ್ಪ

ಗೊತ್ತಾಗಿತ್ತು. ನನ್ನ ಗೆಳತಿಯರೆಲ್ಲರು "ಯಾಕೆ ಸುಜ್ಜಿ ನಿಮ್ಮ ಮಾಮನ ಜೈಲ್‌ಗೆ ಹಾಕ್ಯಾರಂತೆ ಪೇಪರ್‌ನಾಗ ಬಂದಿದೆ. ಯಾಕೆ ಸುಜ್ಜಿ" ಎಂದು ವಿಚಾರಿಸತೊಡಗಿದರು. ನಾನು ಹೇಳಿದ್ದು ಹೀಗೆ, "ನಮ್ಮ ಮಾಮ ಸಮಾಜವಾದಿ. ಅವರದು ದೇಸಾಯಿ ಮನೆತನ, ಅವರಕಕ್ಕ, ಅವರ ತಂದೆ, ಅಂದ್ರ ನಮ್ಮ ಅತ್ಯಾನ ಗಂಡ ಅವರ ಹೆಸರು ಸಂಜೀವರಾವ್ ದೇಸಾಯಿ. ಎಲ್ಲರೂ ಸ್ವಾತಂತ್ರ್ಯ ಹೋರಾಟಗಾರರು, ಅವರು ಇಂದಿರಾ ಗಾಂಧಿ ವಿರುದ್ಧ ಮಾತನಾಡಿದ್ದಕ್ಕೆ ಅರೆಸ್ಟ್ ಮಾಡಿದ್ದಾರೆ" ಎಂದು ನನ್ನ ಗೆಳತಿಯರಿಗೆ ಹೇಳಿದೆ.

೧೯೭೮ ರಲ್ಲಿ ಕುಸುಮಾಮಾ ಚಿತ್ತಾಪುರ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದರು. ಆಗ ಚುನಾವಣೆ ಪ್ರಚಾರದಲ್ಲಿ ತೊಡಗಿದ್ರು. ನೀಲಕಂಠ, ಕಾಮಣ್ಣ, ಮಾರುತಿ, ಕಣ್ಣೆ ಇನ್ನು ಎಷ್ಟೋ ಜನ ಕಾರ್ಯಕರ್ತರು ಮನೆಗೆ ಬರುತ್ತಿದ್ದರು. ನಮ್ಮ ಮಾಮಾ, ಮಾಮಿ ಆರ್ಡರ್ ಆಗಿತ್ತು. "ಯಾರೆ ಮನೆಗೆ ಬಂದ್ರೆ ಊಟ, ತಿಂಡಿ, ಚಹಾ ಎಲ್ಲಾ ಮಾಡಿಸಿ ಕಳಸ್ರಿ" ಅಂತ ಹೇಳಿದ್ರು. ನಾನು ಆಗ ೭ನೇ ತರಗತಿಯಲ್ಲಿ ಇರಬಹುದು. ಹೀಗೆ ಒಂದು ದಿನ ರಾತ್ರಿ ೧೨ ಗಂಟೆ, ಮನೆಯಲ್ಲಿ ಎಲ್ಲಾ ಅಡಿಗೆ ಮನೆ ಕೆಲಸದವರೂ ಎಲ್ಲಾಕೆಲಸ ಮುಗಿಸಿ, ಸುಜಾತಾ ಬಾಗಿಲ ಹಾಕಿರಿ, ನಾವು ಮನೆಗೆ ಹೋಗಿ ಬರುತೀವಿ ಎಂದು ಎಲ್ಲರೂ ತಮ್ಮ ತಮ್ಮ ಮನೆಗೆ ಹೊರಟು ಹೋದ್ರು. ಯಾರು ರಾತ್ರಿ ಊಟಕ್ಕೆ ಬರಲಿಲ್ಲಾ ಸುಮಾರು ೨೫ ಜನಕ್ಕೆ ಅಂತ ಮಾಡಿಸಿದ್ದ ಬಿಸಿಯಾಗಿದ್ದ ಹುಳಿ ತಂದು ಫ್ರಿಜ್‌ನಲ್ಲಿ ಇಟ್ಟು ಮಲಗಿದೆ. ಮರುದಿನ ಬೆಳಿಗ್ಗೆ ಎದ್ದು ಫ್ರಿಜ್ ತೆಗೆದು ನೋಡುವುದರಲ್ಲಿ ಎಲ್ಲಾ ಗ್ಲಾಸ್‌ಗಳು ನುಚ್ಚು ನೂರಾಗಿದ್ದವು ನನಗೆ ಹೆದರಿಕೆ ಎಲ್ಲಾ ಗ್ಲಾಸ್ ಪುಡಿ ಪುಡಿಯಾಗಿದೆ. ಮಾಮಿ ಏನಂತರೊ ಎಂದು ಹೆದರಿಕೆಯಿಂದ ಇದ್ದೆ. ಅವರು ಪ್ರಚಾರ ಮುಗಿಸಿ ಮರಳಿ ಗುಲ್ಬರ್ಗಾಕ್ಕೆ ನೇರವಾಗಿ ಮನೆಗೆ ಬರುತ್ತಿರಲಿಲ್ಲಾ. ಮೊದಲು ಜನತಾ ಪಾರ್ಟಿ ಆಫೀಸ್ ಕಾರ್ಯಕರ್ತರೊಂದಿಗೆ ಚರ್ಚೆ, ಅವರ ಊಟ, ತಿಂಡಿ, ಆರೋಗ್ಯದ ಬಗ್ಗೆ ವಿಚಾರಿಸಿಕೊಂಡು ನಂತರ ಮನೆಗೆ ಬಂದು ಜ್ಯೂಲಿ, ರಾಣಾಗೆ ಮಾತನಾಡಿಸಿ, ಆಮೇಲೆ ನಮ್ಮೊಂದಿಗೆ ಮಾತು ತಮ್ಮ ಆರೋಗ್ಯದ ಕಡೆಗೆ ಗಮನವೇ ಇಲ್ಲಾ. "ಮನೆಯಲ್ಲಿ ಎಲ್ಲರೂ ಊಟ ಮಾಡಿದ್ರಾ, ಸಾಮಾನು ಎಲ್ಲಾ ಸರಿಯಾಗಿ ಅವಾ ಏನಾದರು ತೊಂದರೆ ಆಗಿದೆಯೇ" ಅಂತ ವಿಚಾರಿಸುತ್ತಿದ್ದರು. ಆಮೇಲೆ ಕೈಕಾಲು ಮುಖ ತೊಳೆದು "ಸುಜಾತ ಮರಿ ನನಗೊಂದ ಥಾಲಿ ಕಾಫಿ ಕುದಿಸವಾ ನಿನಗೆ ಬಹಳ ಪುಣ್ಯಾ ಬರುತ್ತದೆ." ಅಂದ್ರು, ನಾನು ಹೆದರಿಕೆಯಿಂದ ಮಾಮಿ ರಾತ್ರಿ ಮಲಗಿ ಬೆಳಗಾಗುವುದರಲ್ಲಿ ಫ್ರಿಜ್ ತೆಗೆದು ನೋಡಿ ಎಲ್ಲಾ ಗ್ಲಾಸಿನ ಪ್ಲೇಟ್‌ಗಳು ನುಚ್ಚು ನೂರಾಗಿವೆ, ಅಂತ ಅಳುತ್ತಾ ಹೇಳಿದೆ. ಆಗ "ಬಾ, ಸುಜಾತ ಇಲ್ಲಿ, ಅಷ್ಟಕ್ಕೆಲ್ಲ ಅಳತಾರೇನು? ಹೋಗ್ಲಿ ಬಿಡು, ನಿನಗೇನು ಆಗಿಲ್ಲ ತಾನೆ, ಸಾಕು, ಇನ್ನೊಂದು ಹೊಸ ಫ್ರಿಜ್ ತರೋಣ. ನಿನಗೆ ಯಾವ ಬಣ್ಣಬೇಕು ಅಂತ ಹೇಳು ಕುಸುಮಾಮಾ ಬಂದ ಮೇಲೆ ಅಂಗಡಿಗೆ ಹೋಗಿ ತರೋಣ ಅದಕ್ಯಾಕೆ ಇಷ್ಟೊಂದು ಬೇಜಾರ್" ಎಂದು ಸಮಾಧಾನ ಮಾಡಿ ತಾವೆ

ಪುನಃ ಕಾಫಿ ಮಾಡಿಕೊಂಡ್ರು. ಅಂದ್ರೆ ಅವರಿಬ್ಬರಲ್ಲಿಯೂಸಹ ಮಾನವೀಯತೆ ಎಂಬುದು ಬಹಳ ಇತ್ತು. ನಮ್ಮ ಮಾಮ ಮನೆಯ ಕೆಲಸದವರಿಗೂ ಸಹ ಸಂಜೀವನಿಯ ಎಲ್ಲಾ ಸದಸ್ಯರಿಗೂ ಸಹ ಒಂದೇ ತರಹ ಅಂದ್ರ ತಮ್ಮ ಸ್ವಂತ ಮಕ್ಕಳಂತೆ ಕಾಣುತ್ತಿದ್ದರು. ನಮ್ಮ ಮಾಮ ಬಹಳ ಮಾಡಿದ್ದಾರೆ. ನನಗೊಬ್ಬಳಿಗೆ ಅಲ್ಲಾ ಇಡೀ ನಮ್ಮ ಬಾಂಧವ್ಯಕ್ಕೆ ಮತ್ತು ದೇಶಪಾಂಡೆ ಮನೆತನಕ್ಕೆ ಬಹಳಾ ಮಾಡಿದ್ದಾರೆ. ಉಪೇಂದ್ರರಾವ್, ದೇಶಪಾಂಡೆ ಮನೆತನದಲ್ಲಿ ದೀಪ ಬೆಳಗುತ್ತ ಇದೆ ಅಂದ್ರ ಅದು ಅವರ ಸಹಾಯದಿಂದ ಅಂತ ಹೇಳಬಹುದು. ನನಗೂ ನನ್ನ ಅಣ್ಣನಾದ ದೀಪಕ್ ದೇಶಪಾಂಡೆಗೂ ಓದಿಸಿದ್ದು ಇವರೇ. ಇಂದು ಅವನು ಭಾರತೀಯ ನೌಕಾಪಡೆಯಲ್ಲಿ ಎಲೆಕ್ಟ್ರಿಕಲ್ ಇಂಜಿನಿಯರ್‌ರಾಗಿ ಕೆಲಸ ಮಾಡುತ್ತಿದ್ದಾನೆ. ನಮ್ಮ ಮಾಮ ಮಾಡಿದ್ದು ಬಹಳಾ ಹೆಚ್ಚು. ಅವರಿಬ್ಬರಿಗೂ ಎಷ್ಟು ಹೊಗಳಿದರೂ, ಪೂಜಿಸಿದರು ಕೊಂಡಾಡಿದರೂ ಸಾಲದು, ಸಂಜೀವನಿಯಲ್ಲಿ ಸದಾ ನಗುವಿನಿಂದ ಕೂಡಿದ ವಾತಾವರಣ. ರಾತ್ರಿ ಹೊತ್ತು ಎಲ್ಲರೂ ಸೇರಿ ಊಟ, ಸಿನಿಮಾಕ್ಕೆ ಹೋಗುವುದು, ಎಲ್ಲ ನೆನಪು ಬರುತ್ತದೆ. ನಮ್ಮ ಕುಸುಮಾಮಾನ ಸ್ವಭಾವ ಅಂದ್ರೆ ಯಾರಾದ್ರೂ ನಮಗೆ ತೊಂದರೆ ಇದೆ, ಎಂದು ಸಹಾಯ ಮಾಡಿ ಅಂತ ಹೇಳಿ ಕೊಳ್ಳುವುದರಲ್ಲಿ ಅವರ ಪ್ರಶ್ನೆ ಪೂರ್ತಿ ಮುಗಿಸುವವರಲ್ಲಿ "ಹ! ತಮಗೆ ನನ್ನಿಂದ ಯಾವ ತರಹದ ಸಹಾಯಬೇಕು ಹೇಳಿ ನಾನು ಮಾಡುತ್ತೇನೆ" ಎಂದು ಹೇಳುತ್ತಿದ್ದರು.

ಯಾರೇ ಬರಲಿ ಬರೀ ಕೈಯಿಂದ ಕಳಿಸುತ್ತಿರಲಿಲ್ಲಾ. ನಮ್ಮ ಮಾಮಾಗೆ ಸಿಟ್ಟು ಬಹಳ, ಅವರೊಂದಿಗೆ ನೇರವಾಗಿ ಮಾತನಾಡಲು ಮನೆಯಲ್ಲಿ ಹೆದರುತ್ತಿದ್ದೆವು. ಮೊದಲು ಮಾಮಿಯೊಂದಿಗೆ ಪೀಠಿಕೆ ಹಾಕಿ ನಂತರ ಮಾಮಾನ ಅಪ್ಪಣೆ ಪಡೆಯುತ್ತಿದ್ದೆವು ಒಂದೊಂದು ಸಲ ನಮ್ಮ ಮಾಮ ನಮ್ಮ ಮಾಮಿನ ಕರೆದು "ಏ ಕುಸುಮಾಮಿ ಮ್ಯಾಡಂ" ಹುಡುಗರೆಲ್ಲಾ ಅಷ್ಟೊಂದು ಅಂಜುತ್ತಾರಲ್ಲಾ! ನಾನು ಅವರಿಗೆ ಹಾಗೆ ಕಾಣಿಸುತ್ತೇನಾ! ಅಂತ ಕೇಳುತ್ತಿದ್ದರು. ಆಗ ನಮ್ಮ ಮಾಮಿ ಹೇಳುತ್ತಿದ್ರು ಇಲ್ಲಪ್ಪಾ ನಿನ್ನ ಸ್ವಭಾವ, ಹಾಗಿಲ್ಲಾ. ದೇಹಾ, ನಿನ್ನ ಮುಖ, ಧ್ವನಿ, ನೋಡಿ ಮಕ್ಕಳು ಹೆದರುತ್ತಾರೆ, ಅಷ್ಟೆ" ಅಂತ ಅವರಿಗೆ ಸಮಾಧಾನ ಆಗುವ ಹಾಗೆ ಅವರ ಮನಸ್ಸಿಗೆ ಹಿತ ಅನಿಸುವ ಹಾಗೆ ನಮ್ಮ ಮಾಮಿ ಹೇಳಿ ನಮಗೆಲ್ಲಾ ಏನು ಬೇಕು ತಿಳಿದು ಸ್ಯಾಂಕ್ಷನ್ ಮಾಡಿಸುತ್ತಿದ್ದರು. ಅವರ ಮನೆಯಲ್ಲಿ ಯಾವುದಕ್ಕೂ ಕೊರತೆ ಇಲ್ಲ. ಹಾಲು, ಮೊಸರು ಅಂತು ದೊಡ್ಡ ದೊಡ್ಡ ೧೦ ಲೀಟರ್ ಪಂಚಪಾತ್ರೆ ಇಟ್ಟು ದಿನಾಲೂ ಹಾಲು ಕಾಯಿಸಿ, ಸಣ್ಣ ಸಣ್ಣ ಮಕ್ಕಳಿಂದ ಮನೆಗೆ, ಪಯಸ್ಸಾದ ಹಿರಿಯರಿಗೆ ಹಾಲು, ಮೊಸರು ದಿನಾಲು ಕಳುಹಿಸಿ ಕೊಡುವ ಕೆಲಸ ನಮ್ಮ ಮಾಮಿಯದು. ಬೆಳಗ್ಗೆ ಎದ್ದ ತಕ್ಷಣ "ಸುಜಾತಬಾಯಿ ನಿಂಬೆ ಹಣ್ಣಿನ ನೀರು ರೆಡಿನಾ!" ಅಂತ ಕೇಳುತ್ತಿದ್ದರು. ನಾನು ಪ್ರೀತಿ, ವಾತ್ಸಲ್ಯ ಮಮಕಾರ ಎಲ್ಲಾ ಕಂಡಿದ್ದು ಸಂಜೀವನಿಯಲ್ಲಿ ಅಂತ ಹೇಳಬಹುದು.

೧೯೮೭ ಜುಲೈ, ೧೩ ರಂದು ನನ್ನ ಮದುವೆ ಕೃಷ್ಣಮೂರ್ತಿಯೊಂದಿಗೆ ಆಯಿತು. ಅವರೇ ಕನ್ಯಾದಾನ ಮಾಡಿದ್ರು. ಅದೆಷ್ಟೋ ಸಂತೋಷ ನಮ್ಮ ಮಾಮಾ ಮಾಮಿಗೆ, ಅಂದ್ರೆ ಹೇಳಲು ಅಸಾಧ್ಯ. ನನ್ನ ಮದುವೆಗೆ ಅಡಿಗೆಯವರಿಂದ ಹಿಡಿದು ಹೂವಿನ ವರೆಗೆ ಎಲ್ಲಾ ಬೆಂಗಳೂರಿನಿಂದ ಬರುವ ವ್ಯವಸ್ಥೆ ಮಾಡಿದ್ರು ನಮ್ಮ ಮಾಮಾ. ತಂದೆ- ತಾಯಿ ಇಲ್ಲದ ನಾನು ನನಗೆ ಯಾವ ತರಹದ ನೋವು ಆಗಬಾರದು ಅಂತ ಎಲ್ಲಾ ವ್ಯವಸ್ಥೆ ಮಾಡಿ, ಹುರುಪಿನಿಂದ ತಮ್ಮ ಜೂನಿಯರ್ ಆದ, ಸರಿತಾ ದೇಸಾಯಿ ಮಾಮನ ಮಗ, ಕೃಷ್ಣಮೂರ್ತಿ, ಮತ್ತು ನಾನು ದೇಸಾಯಿ ಅವರ ಸೋದರ ಮಾವನ ಮಗಳು, ಇಬ್ಬರು ವ್ಯಕ್ತಿಗಳು ಬೇಕಾದವರೆ, ಹೀಗಾಗಿ ಬಹಳ ಉತ್ಸಾಹದಿಂದ ಕನ್ಯಾದಾನ ಮಾಡಿದ್ದಾರೆ. ನನ್ನನ್ನು ಆನಂದ ಸಾಗರದಲ್ಲಿ ಈಜಾಡಲು ಬಿಟ್ಟಿದ್ದಾರೆ. ಅವರು ಮಾಡಿದ ಪುಣ್ಯ ಅಂತ ಹೇಳಬಹುದು. ನಮ್ಮ ಮಾವ ಹನುಮಂತರಾವ್ ಜಾದನಹಟ್ಟಿ, ನಮ್ಮ ಅತ್ತೆ, ನಮ್ಮ ಮೈದುನಂದ್ರು, ನಾದ್ನಿಂದ್ರು, ಒಟ್ಟಿನಲ್ಲಿ ನಮ್ಮ ಬಾಂಧವ್ಯವೇ ತುಂಬಾ ಚೆನ್ನಾಗಿ ಇದೆ. ನಾನಂತು ಸುಖಿಸಂಸಾರ ಮಾಡಿಕೊಂಡು ನೆಮ್ಮದಿ ಇಂದ ಇದ್ದೇನೆ. ನನಗೆ ಎರಡು ಮುತ್ತಿನಂಥ ಮಕ್ಕಳು ೧ ಹೆಣ್ಣು ಇನ್ನೊಂದು ಗಂಡು. ಚಿ. ಗಳ ಹೆಸರು ಮೇಧಿನಿ, ಶ್ರೀನಿಧಿ. ಅವರಿಬ್ಬರನ್ನು ನೋಡಿದಾಗಲೆಲ್ಲಾ ನನ್ನ ಕುಸುಮಾಮಾ ಹೇಳುತ್ತಿದ್ದರು ಎಷ್ಟೊ ಮುದ್ದಾದ ಮಕ್ಕಳು ಮ್ಯಾಡಂ, ಸುಜಾತಗೆ ಈ ಹುಡುಗಿ ಹೀಗೇ ಇರುತ್ತಾಳೆ! ಅಂತ ಹೇಳುತ್ತಿದ್ರು.

106 ಬೆಂಗಳೂರಿನ ಕೋರಮಂಗಲಂ ಮನೆಯ ಗೃಹಪ್ರವೇಶಕ್ಕೆ ಹೋದಾಗ ನಾವು ಎಲ್ಲರೂ ಅಂದ್ರ ನಾನು, ಕೃಷ್ಣಮೂರ್ತಿ, ಮೇಧಿನಿ, ಶ್ರೀನಿಧಿ ಹೋಗಿದ್ವಿ. ಎಲ್ಲರೂ ಅಂದು ನಮ್ಮ ದೇಸಾಯಿ ಬಳಗ ಹಾಗೂ ನಮ್ಮ ಮಾಮಿಯ ತವರೂರಿನ ಬಳಗ ಎಲ್ಲರೂ ಸೇರಿದ್ದರು.

ಹಾಗೆಯೇ ಮಾನವೇಂದ್ರ ರೆಡ್ಡಿ ವಕೀಲ ದಂಪತಿಗಳು, ಅವರ ಮಕ್ಕಳು ಹೀಗೆಯೇ ನಗುವು ಹಾಸ್ಯ ಏನೇನೋ ಮಾತಾಡುತ್ತಾ ಕುಳಿತಿರುವಾಗ, ನಮ್ಮ ಮಾಮಿ ಒಳಗಿನಿಂದ ಬಂದು ನಮ್ಮ ಮಕ್ಕಳನ್ನು ನೋಡಿ "ಏ ಸುಜಾತ ನೀನು ಮನಮುದ್ದು, ಮಕ್ಕಳೆಲ್ಲಾ ಜನಮುದ್ದು ಮಕ್ಕಳನ್ನು ಹೆತ್ತಿದಿ ನೋಡು" ಅಂತ ಹೇಳಿ ಮೇಧಿನ, ಶ್ರೀನಿಧಿನ ಮುದ್ದಾಡಿ ಅವರಿಬ್ಬರನ್ನು ನಮ್ಮ ಮಾಮ ಮಲಗಿದ್ದ ರೂಂಗೆ ಕರಕೊಂಡು ಮುದ್ದಾಡಿ "ಕುಸುಮಾಮಾ ಈ ಇಬ್ಬರು ಮಕ್ಕಳ ನೋಡಿ, ಅವರ ಡ್ರೆಸ್, ಅವರ ಮಾತನಾಡುವ ಶೈಲಿ, ನೋಡಲು ಎಷ್ಟೊಂದು ಚೆನ್ನಾಗಿ ಇದ್ದಾರೆ" ಅಂತ ಹೇಳಿದ್ರು, ಅಷ್ಟರಲ್ಲಿ ಮೇಧಿನಿ, ಶ್ರೀನಿಧಿ ಇಬ್ಬರು "ತಾತಾ ನಾನು ಹೊಸ ಜರತಾರಿ ಲಂಗಾ ಹಾಕಿಕೊಂಡಿದ್ದೇನೆ. ತಾತಾ ನಾನು ಹೊಸ ಪ್ಯಾಂಟು, ಶರ್ಟು ಹಾಕಿಕೊಂಡೀನಿ" ಅಂತ ಇಬ್ಬರು ನಮಸ್ಕಾರ ಮಾಡಿದ್ರು. ನಮ್ ಮಾಮಾ ಅವರಿಬ್ಬರಿಗೂ ಮುದ್ದುಕೊಟ್ಟು "ಉತ್ತಮ ಪ್ರಜೆ ಆಗಿ ಬಾಳಿ" ಅಂತಹೇಳಿ ತಮ್ಮನ ಹೆಂಡ್ತಿ ಆದ ಸೌ. ಶೋಭಾ ಅಂದ್ರೆ ಅವರೂ ಸಹ ನನಗೆ ಮಾಮಿ, "ಏ ಶೋಭಾ, ಇಲ್ಲಿ ನೋಡು, ಸುಜಾತ ನಿನಗೆ

ಜಾಕ್ವೆಲಿನ್ ಕೆನಡಿ ಗೊತ್ತಾ! ಅಂತ ಕೇಳಿದ್ರು. ಅಷ್ಟರಲ್ಲಿ ನಾನು "ಗೊತ್ತು ಗೊತ್ತು" ಅನ್ನೋದರಲ್ಲಿ ಶೋಭಾ ಮಾಮಿ ಎಸ್.ಎಸ್.ಐ ನೋ" ಅಂತ ಹೇಳಿದ್ರು. "ಪ ಕೃಷ್ಣಮೂರ್ತಿರಾವ್ ಸಾಹೇಬ್ರ ಬರ್‍ರಿ ಇಲ್ಲಿ" ಅಂತ ಕರೆದು "ನಿನ್ನ ಮಗಳ ಎಷ್ಟು ಚಲುವಿ ಇದ್ದಾಳೆ. ಹುಷಾರ್ ಆಗಿ ಇರು, ನಿನ್ನ ಮಗನ ಕಿವಿ ಮಹಾತ್ಮ ಗಾಂಧಿ ಕಿವಿ ಇದ್ದ ಹಾಗೆ ಅವ. ಅವನು ಅಷ್ಟೇ ಬಹಳ ದೊಡ್ಡ ವ್ಯಕ್ತಿ ಆಗತಾನಾ!" ಅಂತ ಅಂದ್ರು. ಎಲ್ಲಾ ಅವರು ಹರಿಸಿದ್ದು. ಮಕ್ಕಳನ್ನು ಕರೆದು ಮುದ್ದಾಡಿದ್ದು ಎಲ್ಲಾ ಒಂದು ವಿಡಿಯೋ ಕ್ಯಾಸೆಟ್ ಮಾಡಿ ಇಟ್ಟಿದ್ರೆ ಚೆನ್ನಾಗಿತ್ತು ಅಂತ ಅನ್ನಿಸುತ್ತದೆ. ನಮ್ಮ ಮಕ್ಕಳ ಮೊದಲು ಅವರಿಗೆ ತಾತಾಂತ ಕರಿದಿದ್ದು. ಅದೆಷ್ಟು ಸಂತೋಷದಿಂದ ಇದ್ರು ಕುಸುಮಾಮಾ, ಅಂತಹ ಆನಂದದ ಚಿಲುಮೆ ಆಗಿದ್ದ ಕುಸುಮಾಮಾನ ಕಳೆದುಕೊಂಡಿದ್ದು ತುಂಬಲಾರದ ಹಾನಿಯಾಗಿದೆ.

ಸಂಜೀವಿನಿಯ ವೈಭವ ವರ್ಣಿಸಬೇಕಾದರೆ ಅನಂತ ಅನಂತವಾಗಿದೆ. ಆದರೆ ಆ ವರ್ಣನೆಯನ್ನು ಮಾಡಲು ಭಾಷಾ ಸಂಪತ್ತು ನನ್ನಲ್ಲಿ ಇಲ್ಲಾ, ಎಲ್ಲವನ್ನು ಕಂಡಿದ್ದು ಕುಸುಮಾಮಾನ ಮನೆಯಲ್ಲಿ ಅಂತ ಮಾತ್ರ ಹೇಳಲು ಇಚ್ಛಿಸುತ್ತೇನೆ.

ದಳ-೦೬

ಹಿತೈಷಿ ಬಂಧುಗಳು

ದೂರದ ನಕ್ಷತ್ರ

❁ ಡಾ. ಯು.ಆರ್. ಅನಂತಮೂರ್ತಿ

ದೇಸಾಯಿಯವರ ಜೊತೆ ನಾನು ಹೆಚ್ಚು ವ್ಯವಹರಿಸಿದ್ದಿಲ್ಲ. ಅವರೊಂದು ದೂರದ ನಕ್ಷತ್ರ ನನಗೆ, ಬಹಳ ಕಾಲದವರೆಗೆ ಸಮಾಜವಾದಿಯಾಗಿ ಬೆಳೆದು ಬಂದ ನನಗೆ ಗತಿಸಿದ ಗೆಳೆಯ ವೆಂಕಟರಾಮ್, ಜೆ.ಎಚ್.ಪಟೇಲ್‌ರವರ ಮಾತುಕತೆಯೊಳಗೆ ಆಗಾಗ ನುಸುಳುತ್ತಿದ್ದ ಹೆಸರು ದೇಸಾಯಿಯವರದು. ನೇರ ಮಾತಿನ, ದಿಟ್ಟ ಆಲೋಚನೆಯ, ಉದಾರ ವರ್ತನೆಯ ಈ ಸಮಾಜವಾದಿ ಏಕಾಕಿಯಾಗಿ ತಾನು ನಂಬಿದ್ದಕ್ಕಾಗಿ ಹೆಣಗಿದವರು. ಈ ಬಗ್ಗೆ ನನಗೆ ಬಹಳ ಪ್ರಿಯರಾಗಿದ್ದ ಶ್ರೀ ಖಾದ್ರಿ ಶಾಮಣ್ಣನ ರಿಂದಾಗಿಯೂ ದೇಸಾಯರ ಬಗ್ಗೆ ನಾನು ಹೆಚ್ಚು ಹೆಚ್ಚು ತಿಳಿಯುತ್ತ ಹೋದೆ.

ಮುಂದೆ ನನಗೆ ದೇಸಾಯರ ಪತ್ನಿ ಸರಿತಾರವರು ಆತ್ಮೀಯ ಸ್ನೇಹಿತರಾದರು. ಗಂಡು-ಹೆಣ್ಣಿನ ನಡುವಿನ ದಾಂಪತ್ಯದಲ್ಲಿ ಇಬ್ಬರೂ ಧೀಮಂತರಾಗಿದ್ದು, ಜನಪ್ರಿಯರಾಗಿದ್ದು, ಸಕ್ರಿಯ ರಾಜಕೀಯದಲ್ಲೂ ಒಟ್ಟಾಗಿದ್ದು, ಕೂಡಿ ಬದುಕುವುದು ಕಷ್ಟವಾದ ವಿಷಯವೇ. ಸರಿತಾ ಮತ್ತು ಕುಸುಮಾಕರರು ನಮ್ಮ ನಾಡಿನ ರಾಜಕೀಯ ಜೀವನದಲ್ಲಿ ಹೀಗೆ ಒಬ್ಬರಿಗೊಬ್ಬರು ಪೂರಕವಾಗಿ ಬದುಕಿದವರು.

ಸರಿತಾರವರ ಅಂತರಂಗದಲ್ಲೂ, ಅವರ ರಾಜಕೀಯ ಸಾಮಾಜಿಕ ಚಟುವಟಿಕೆಯಲ್ಲೂ ಕುಸುಮಾಕರರು ನಮ್ಮೊಂದಿಗೆ ಇನ್ನೂ ಅಳಿಯದೆ ಉಳಿದಿದ್ದಾರೆ.

ಕ್ರಮೇಣ, ನಾನು ಗೌರವಿಸುತ್ತಿದ್ದ ಸಮಾಜವಾದಿಗಳೆಲ್ಲ ನನ್ನ ಮನೋಲೋಕದ ನಿವಾಸಿಗಳಾಗುತ್ತಿದ್ದಾರೆ.

ಸುಂದರ ದಾಂಪತ್ಯ

❁ -ಎನ್ಕೆ.

ಚಿ. ಸರಿತಕ್ಕ ನನ್ನ ಮಗಳು ಎಂದ ಮೇಲೆ ಅವರ ಪತಿ ದಿ. ಕುಸುಮಾಕರ ದೇಸಾಯಿ ಅವರು ನನಗೆ ಅಳಿಯನಂತೆಯೆ ಇದ್ದರು. ನಾನು ಮಾವನ ಸ್ಥಾನದಲ್ಲಿದ್ದರೂ ನನ್ನನ್ನು ತಂದೆಯಂತೆಯೇ ಕಂಡವರು. ಇದು ಅವರ ದೊಡ್ಡ ಗುಣ.

ಚಿ. ಸರಿತಕ್ಕನಂತಹ, ಸಮರ್ಥ ಲೇಖಕಿ, ಸಂಶೋಧಕಿ, (ಹರಪನಹಳ್ಳಿ ಭೀಮವ್ವನ ಸಮಗ್ರ ಗೀತೆಗಳನ್ನು ಶೋಧಿಸಿದ ಶ್ರೇಯಸ್ಸು ಸರಿತಕ್ಕನದು), ಪ್ರಕಾಶಿಕೆ ('ಹೀಗಿದ್ದರು ಬೀಚಿ' ಎಂಬ ತಮ್ಮ ಅಣ್ಣನ ಪುಸ್ತಕ ಪ್ರಕಟಿಸಿದ್ದಾರೆ. (ಬೀChi ಅಂತಹ ನಗೆಗಾರ ಮತ್ತೆ ಹುಟ್ಟಿ ಬಂದಾನೆ?) ಸಮರ್ಥ ಶಾಸಕಿಯನ್ನು ಈ ನಾಡಿಗೆ ನೀಡಿದ ಕೀರ್ತಿ ಪುರುಷರು ನಮ್ಮ ಕುಸುಮಾಕರ ದೇಸಾಯಿ.

ಕೇವಲ ಸರಿತಕ್ಕನಂತಹ ಸಮರ್ಥ ವ್ಯಕ್ತಿಯನ್ನು ನಾಡಿಗೆ ನೀಡಿದ್ದಷ್ಟೆ ಶ್ರೇಯಸ್ಸು ದಿ. ಲ ಕುಸುಮಾಕರರದಾಗಿರಲಿಲ್ಲ. ಅವರೂ ಸ್ವತಃ ಲೇಖಕ, ಕಾದಂಬರಿಕಾರರಾಗಿದ್ದರು. ಹಿಂದಿಯ ಪ್ರಸಿದ್ಧ ಕಾದಂಬರಿಕಾರ ಭಗವತೀಚರಣ ವರ್ಮಾ ಅವರ ಕಾದಂಬರಿಯ ಅನುವಾದ ಕಾರ್ಯ ನೆರವೇರಿಸಿದ್ದಾರೆ. ಅದನ್ನು ಚಿ. ಸರಿತಕ್ಕನೇ ಪ್ರಿಂಟಮಾಡಿಸಬೇಕಾಗಿದೆ.

ನಮ್ಮ ಕುಸುಮಾಕರರ ಬಗ್ಗೆ ಹೆಚ್ಚೇನು ಹೇಳಲಿ? ಅವರೊಬ್ಬ The Thoroug hgentle man' ಹದಿನಾರಾಣೆ ಚೊಕ್ಕ ಚಿನ್ನದ ಮೂರ್ತಿ. ಅವರೂ ಅಷ್ಟೆ ಅವರ ಅಗ್ರಜರೂ ಹಾಗೆಯೆ ಇದ್ದರು. ಕುಸುಮಾಕರರು ಮತ್ತು ಅವರ ಅಣ್ಣ ಗುಲ್ಬರ್ಗಾದಲ್ಲಿದ್ದಾಗ ನಾನು ನಾಡ ಹಬ್ಬದಲ್ಲಿ ಮುಖ್ಯ ಅತಿಥಿಯಾಗಿ ಹೋಗಿದ್ದೆ. ದೇಸಾಯಿ ಅವರ ಮನೆಯಲ್ಲೇ ಉಳಿದು ಕೊಂಡಿದ್ದೆ. ಅಂದು ಅವರ ಮನೆಯಲ್ಲಿ ಉಂಡ ಕರಿಗಡಬಿನ ಊಟದ ಸವಿಯನ್ನು ಮರೆಯುವಂತಿಲ್ಲ. ನನಗೆ ಮೊದಲಿನಿಂದಲೂ ಕಡಬು ಹೋಳಿಗೆ ಹೂರಣ-ಕಣಕ ಎಂದರೆ ಅಲರ್ಜಿ. ಇಷ್ಟೆ ಅಲ್ಲ. ಅಂತಹ ಜಡ ಭೋಜನವನ್ನು ಪಚನ ಮಾಡಿಕೊಳ್ಳುವದೂ ಕಷ್ಟವಾಗುತ್ತಿತ್ತು. ಮೊದಲಿನಿಂದಲೂ ನಾನು ಸ್ವಲ್ಪ ಕ್ಷೀಣ ಪ್ರಕೃತಿಯವನೆ. ಆದರೂ ಈಗ ಐವತ್ತು ವರುಷಗಳ ಹಿಂದೆ ನಾಡ ಹಬ್ಬದ ಮುಖ್ಯ ಅತಿಥಿಯೆಂದು ಹೋಗಬೇಕಾಗುತ್ತಿತ್ತು. ಅನಿವಾರ್ಯವಾಗಿ ಆತಿಥೇಯರ ಮನೆಯಲ್ಲೇ ಉಳಿದುಕೊಳ್ಳಬೇಕಾಗುತ್ತಿತ್ತು. ಅನಿವಾರ್ಯವಾಗಿ ಹೂರಣ ಕಣಕದ ಭಾರೀ ಭೋಜನ ತಪ್ಪಿದ್ದಲ್ಲ. ಅದರಲ್ಲೂ ನಾನು ಕುಸುಮಾಕರರ ಅಣ್ಣ ಗ್ರೀಷ್ಮ ಕುಮಾರರವರ ಅತಿಥಿಯಾಗಿ ನಾಡಹಬ್ಬಕ್ಕೆಂದು ಹೋದಾಗಿನ ಸವಿನೆನಪನ್ನು ಮರೆಯಲಾರೆ.

ಕುಸುಮಾಕರರು ಅಣ್ಣನಿಗಿಂತ ಹೆಚ್ಚಿನ ಸಾಹಿತ್ಯ ಕಾರ್ಯದಲ್ಲಿ ತೊಡಗಿಸಿಕೊಂಡಂತೆ

ರಾಜಕೀಯ ಕ್ರಾಂತಿಕಾರಿ ಚಳುವಳಿಗಾರರೂ ಹೌದು. ವೀರ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಕುಸುಮಾಕರರ ರಾಜಕೀಯ ತತ್ವ ಪ್ರಣಾಲಿ ಭಿನ್ನವಾಗಿತ್ತು. ಇವರು ಲೋಹಿಯಾರವರ ರಾಜಕೀಯ ತತ್ವ ಪ್ರಣಾಲಿಯನ್ನು ಅನುಸರಿಸಿದವರು. ಕಾಂಗ್ರೆಸ್ ನೀತಿ ಇವರಿಗೆ ಒಪ್ಪಿಗೆ ಇರಲಿಲ್ಲ. ಜೆ.ಪಿ. ರಾಜಾಜಿ, (ಸ್ವತಃ ಪಟೇಲರು ಗಾಂಧಿಗಿಂತ ಭಿನ್ನ) ಅದೇ ರೀತಿ ಎಂ.ಎನ್. ರಾಯ್ ಅವರ ತತ್ವ ಪ್ರಣಾಲಿಯೂ ಇವರಿಗೆ ಮಾನ್ಯ. ಮುಖ್ಯವಾಗಿ ಸಾಹಿತ್ಯ ಮತ್ತು ರಾಜಕೀಯ, ವಕೀಲಿಗಳು ಕುಸುಮಾಕರರ ಉಸಿರಾಗಿದ್ದವು.

ನಾಡಹಬ್ಬಕ್ಕೆಂದು ಕುಸುಮಾಕರರ ಮನೆಯಲ್ಲಿ (ಅವರದು ದೊಡ್ಡ ಕುಟುಂಬ) ತಂಗಿದ್ದಾಗ, ಅವರ ಅಣ್ಣ ಗ್ರೀಷ್ಮಕುಮಾರ, ತಂದೆ ಸಂಜೀವರಾಯರು, ಕುಸುಮಾಕರನ ಅತ್ತಿಗೆ ಸೌ. ಇಂದುಮತಿ ಎಲ್ಲರೂ ಬಹಳ ಆತ್ಮೀಯರಾಗಿದ್ದರು.

ಆಗ ಕಲ್ಬುರ್ಗಿಯಲ್ಲಿ ಕನ್ನಡ ಉಳಿಸಿ ಬೆಳೆಸುವುದೇ ಕೆಲಸವಾಗಿತ್ತು. ಸಂಜೀವರಾಯರು ಉರ್ದುವಿನಲ್ಲಿ ವಕಾಲತ್ತು ಮಾಡುತ್ತಿದ್ದರೂ ಕನ್ನಡ ಪ್ರೇಮಿಯಾಗಿದ್ದರು. ಅದಕ್ಕಾಗಿಯೇ ಅಲ್ಲಿಯ ಹಳೆಯ ಸಂಸ್ಥೆ ಕನ್ನಡ ಸಾಹಿತ್ಯ ಸಂಘದಲ್ಲಿ ನಾಡಹಬ್ಬ ಆಚರಿಸುತ್ತ ಕನ್ನಡ ಸಾಹಿತಿಗಳನ್ನು ಕರೆಸುತ್ತಿದ್ದರು. ನಾನು ಅವರಲ್ಲಿದ್ದು ಬೀಳ್ಕೊಟ್ಟು ಹೊರಟೆ. ಅಂದು ನಾನು ಅಲ್ಲಿ ಮರೆತಿದ್ದ "ಮಾಟಗಾತಿ" ಪುಸ್ತಕವನ್ನು ಸುರಕ್ಷಿತವಾಗಿ ನನಗೆ ತಲುಪಿಸಿದವನು ಕುಸುಮಾಕರ. ಇನ್ನೂ ವಿದ್ಯಾರ್ಥಿಯಾಗಿದ್ದ.

ಮತ್ತೊಮ್ಮೆ ವಸಂತ ಕುಷ್ಟಗಿ ಜೊತೆಗೂಡಿ, ಅಂದಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ. ನಾರಾಯಣರವರ ಅಪೇಕ್ಷೆಯ ಪ್ರಕಾರ, ಶ್ರೀಮತಿ ಸರಿತಾರವರಿಂದ, ಭೀಮವ್ವನವರ ಹಾಡುಗಳನ್ನು ಧ್ವನಿಮುದ್ರಿಸಿಕೊಳ್ಳಲು ಕುಸುಮಾಕರರ ಮನೆಗೆ ಹೋಗಿದ್ದೆ. ಆಗ ನಮ್ಮೊಂದಿಗೆ ಪಿ.ಆರ್. ಭಾಗವತರು ಬಂದಿದ್ದರು. ಅವರೇ ಧ್ವನಿ ಮುದ್ರಿಸಿದ್ದರು. ಕುಸುಮಾಕರರು ಅಂದು ಸಂಭ್ರಮದಿಂದ ನಮ್ಮನ್ನು ಬರಮಾಡಿಕೊಂಡಿದ್ದರು.

ಕುಸುಮಾಕರರು ಉಳಿಸಿ ಹೋದ ಶೇಷಕಾರ್ಯಪೂರ್ತಿಯ ಹೊಣೆ ನಮ್ಮ ಸರಿತಕ್ಕನ ಮೇಲಿದೆ. ಸರಿತಕ್ಕ ಕುಸುಮಾಕರರ ಅರ್ಥಶಃ ಅರ್ಧಾಂಗಿ. ಇಬ್ಬರದೂ ಸಮಾನ ಅಭಿರುಚಿ, ಸಮಾನ ಸೃಜನಶೀಲ ಕಾರ್ಯ, ಸಮಾನ ಸಾಮಾಜಿಕ ಹೊಣೆ. ಆದರೆ ದುರ್ದೈವದಿಂದ ಚಿ. ಸರಿತಕ್ಕ ಈಗ ಸಾಮರಸ್ಯದ ದಾಂಪತ್ಯದಿಂದ ವಂಚಿತರಾಗಿದ್ದಾರೆ. ಇಷ್ಟಾದರೂ ವಿವಂಚನೆ ನಿರಾಸೆಗಳಿಗೆ ಒಳಗಾಗದ ಸರಿತಕ್ಕ ತಮ್ಮ ಸಮಾನ ಧರ್ಮೀಯರಾಗಿದ್ದ ಪತಿ ಕುಸುಮಾಕರರ ಗುರಿಯನ್ನು ಕಣ್ಮುಂದಿರಿಸಿಕೊಂಡು ಕಾರ್ಯೋನ್ಮುಖರಾಗಿರುವುದು ನಿಜವಾಗಿಯೂ ಪ್ರಶಂಸನೀಯ.

ಈ ತೊಂಬತ್ತು ವರುಷಗಳ ವೃದ್ಧ ನಾನೀಕಾಕಾ ಸರಿತಾ ಮತ್ತು ಕುಸುಮಾಕರರ ದಾಂಪತ್ಯ ಜೀವನವನ್ನೂ, ಕುಸುಮಾಕರರ ಅಣ್ಣ ಮತ್ತು ಸರಿತಕ್ಕನ ನೆಗೆಣ್ಣೆ ಅವರ ಸುಂದರ

ಬಗೆಹರಿಸುವುದನ್ನು ಮೊದಲಿನಿಂದ ಎಲ್ಲ ರೀತಿಯಿಂದ ನೆರವಾದರು. ಅವರ ಧಾರಾಳತನದ ಒಂದು ಮಾತು ಹೇಳಬೇಕು. ಚಪ್ಪಲಿಕೊಳ್ಳಲೆಂದು ಅಂಗಡಿಗೆ ಹೋಗಿ ತಮಗೆ ಬೇಕಾದ್ದನ್ನು ಖರೀದಿಸಿದರೆನ್ನುವ, ಜೊತೆಗೆ ಬೇರೆ ಬೇರೆ ಅಳತೆಗಳ ಮತ್ತೂ ೩-೪ ಜತೆಯನ್ನು ಕೊಳ್ಳುತ್ತಿದ್ದರು. ಯಾಕೆ? ಅಕಸ್ಮಾತ್ ತಮ್ಮಲ್ಲಿಯೇ ಮತ್ಯಾರಿಗಾದರೂ ಅಗತ್ಯ ಕಂಡರೆ ಇರಲಿ-ಎಂದು;

“ನೀವು ಬಳಗದವರಿಗೆ ಇತರರಿಗೆ ಎಲ್ಲ ಮಾಡಿದ್ದೀರಿ, ಆದರೆ ಈಗ ನಿಮ್ಮ ಕೈಹಿಡಿದವಳಿಗಾಗಿ ಏನನ್ನು ಮಾಡಿ ಇಟ್ಟಿದ್ದೀರಿ?” ಎಂದು ನಾನೊಮ್ಮೆ ಕೇಳಿದೆ. ನಿಜ ಹೇಳ್ತೀನಿ ಅದೊಂದು ಮಾಮೂಲಿಯಾಗಿ ಆಡಿದ ಮಾತು. ನನ್ನ ಮಾತಿಗೆ ಅವರು ಉತ್ತರ ಹೇಳಲಿಲ್ಲ. ನಾನೂ ಮರೆತಿದ್ದೆ.

ಕೆಲವು ತಿಂಗಳುಗಳು ಕಳೆದ ಮೇಲೆ ಅವರು “ಹಾವನೂರರೇ, ನೀವು ಕೇಳಿದಂದಿನಿಂದ ಆ ವಿಚಾರ ನನ್ನನ್ನು ಸಣ್ಣಗೆ ಕೊರೆಯುತ್ತಲಿದೆ. ಅವಳು ತಾನಾಗಿ ಏನನ್ನೂ ಬಯಸಿದವಳಲ್ಲ. ಏನನ್ನಾದರೂ ಮಾಡಬೇಕು ಎನಿಸ್ತದೆ. ಏನು ಮಾಡಲಿ?” ಎಂದು ಸ್ವಗತದಂತೆ ಹೇಳಿದರು. ತುಸು ತಡೆದು ಹಳೆಯ ನೆನಪೊಂದನ್ನು ಕೆದರಿ ಈ ವಿಷಯ ಹೇಳಿದರು.

“ಸರಿತಾಗೆ ಡಾಕ್ಟರ್ ಆಗುವ ಅಪೇಕ್ಷೆ ಬಲವಾಗಿತ್ತು. ಎಂ.ಬಿ.ಬಿ.ಎಸ್. ಪ್ರವೇಶಕ್ಕೆ ಬೇಕಾದಷ್ಟು ಅಂಕಗಳನ್ನು ಪಡೆದೇ ಇದ್ದಳು. ಆದರೆ ಪ್ರವೇಶ ದೊರೆತದ್ದು ಬೇರೊಂದು ಊರಿನಲ್ಲಿ. ಮದುವೆಯಾದ ಚಿಕ್ಕವಯಸ್ಸಿನಲ್ಲಿಯೇ ದೇಸಾಯರ ದೊಡ್ಡ ಬಳಗದ ಭಾರ ಹೊತ್ತಿದ್ದ ಆಕೆ ಊರು-ಮನೆ ಬಿಟ್ಟು ಬೇರೆಡೆ ಹೋಗಲು ಸಾಧ್ಯವಿದ್ದಿಲ್ಲ. ಡಾಕ್ಟರ್ ಆಗುವ ಆಸೆ ಹೀಗೆ ಮುರುಟಿದ್ದಕ್ಕೆ ಅದೆಷ್ಟು ಬೇಸರವಾಗಿರಬೇಡ. ಆಗ ದೇಸಾಯರು ಅವರಿಗೆ ಎಲ್.ಎಲ್.ಬಿ. ಮಾಡಲು ಹುರಿದುಂಬಿಸಿದರು. ಬೇಕಾದ ಅನುಕೂಲತೆಗಳನ್ನು ಮಾಡಿಕೊಟ್ಟರು.

ದೇಸಾಯರು ಈ ವಿಷಯವನ್ನು ಸ್ಮರಿಸಿಕೊಳ್ಳುತ್ತ-- “ನೋಡ್ರಿ, ಅವಳು ಬಿಳೀ ಕೋಟನ್ನು ಧರಿಸುವುದು ತಪ್ಪಿದರೂ ವಕೀಲಿಯ ಕರೀಕೋಟು ಬಂತು” ಎಂದು ನಗೆಯಾಡಿದರು.

ದೇಸಾಯರಿಗೆ ಇಂಗ್ಲೀಷ್, ಉರ್ದು ಭಾಷೆಗಳಲ್ಲದೆ ಶಿಷ್ಟ ಹಿಂದಿಯೂ ಚೆನ್ನಾಗಿ ಬರುತ್ತಿತ್ತು. ಅವರಿಗೆ ಕನ್ನಡ ಸಾಹಿತ್ಯದ ಬಗ್ಗೆಯೂ ಸಾಕಷ್ಟು ತಿಳಿದಿತ್ತು ಎಂದು ಅನೇಕ ಸಲ ಹರಟೆ ಹೊಡೆದಾಗ ತಿಳಿದುಬರುತ್ತಿತ್ತು. ಮನೋಹರ ಗ್ರಂಥಮಾಲೆಯ ಪುಸ್ತಕಗಳು ಕೈ ಸೇರಿದ ಕೂಡಲೇ ಸಾಹಿತಿ ಪತ್ನಿಗಿಂತ ಮೊದಲು ಅವರೇ ಓದಿ ಮುಗಿಸುತ್ತಿದ್ದರಂತೆ. ಭೈರಪ್ಪನವರ ‘ಪರ್ವ’ ತಾವೇ ಮೊದಲು ಓದಿ ನಂತರ ಸರಿತಾರ ಕೈಗೆ ಕೊಟ್ಟಿದ್ದರಂತೆ. ಒಮ್ಮೆ ಸರಿತಾನ್ನ ಈ ವಿಷಯ ಕೇಳಿದಾಗ ಅವರು ಹೇಳಿದ್ದರು “ಹಾವನೂರರೇ--ದೇಸಾಯಿಯವರಿಗೆ ಪುಸ್ತಕ ಓದುವ ಚಟ ಇಷ್ಟಿದೆ. ಯಾವುದೇ ಭಾಷೆಯಿರಲಿ (ಮರಾಠಿ, ಹಿಂದಿ, ಕನ್ನಡ, ಇಂಗ್ಲೀಷ್)

ಕೊಂಡು ತರುವುದು ಮೊದಲು ತಾವು ಓದಬೇಕು. ಅವರ ಈ ಸ್ವಭಾವ ತಿಳಿದೇ ನಾನು ಅವರನ್ನು ಲಗ್ನವಾಗಲು ಒಪ್ಪಿದ್ದು". ನಾನು ಕುತೂಹಲದಿಂದ ಕೇಳಿದ್ದೆ ಅಂದರೆ? ದೇಸಾಯಿಯವರು ನಗುತ್ತ ಹೇಳಿದರು, ನೋಡ್ರಿ ಹಾವನೂರರೇ ಲಗ್ನ ಆಗೋಕ್ಕಿಂತ ಮುಂಚೆ ಕನ್ನಡದಾಗ ನಾನು ಬರೆದದ್ದು ದಾಖಲೆ ಅದೆ. ಕಸ್ತೂರಿ ಒಳಗೆ" ಇದುವೆ ಜೀವ ಇದು ಜೀವನ" ಲೇಖನ ಓದಿಯೇ ನನ್ನ ಬಗ್ಗೆ ವಿವರ ತಿಳಿದೇ ಲಗ್ನ ಆಗ್ಯಾಳಂತೆ. ಅಷ್ಟೇ ಅಲ್ಲ ನಾನು ಬಿಎಸ್‌ಸಿ ಓದುತ್ತಿದ್ದಾಗ ಕಥಾ ಸ್ಪರ್ಧೆಯಲ್ಲಿ ನನ್ನ ಕಥೆ 'ಟೊಳ್ಳು ಬುರುಜು' ಕಥೆಗೆ ಬಹುಮಾನ ಬಂದು ಅದು ಮುಂದೆ ಬರೆದೆಲ್ಲ ಬಹುಮಾನಿತ ಕಥೆಗಳ ಸಂಗ್ರಹ ಪ್ರಕಟವಾಗಿದೆ. ಈಕೆ ನನ್ನ ಲಗ್ನ ಆದ ಮ್ಯಾಲೆ ಬರೀಲಿಕ್ಕೆ ಹತ್ಯಾಳೆ ಅಂದರೇನು ಅರ್ಥ ನೀವೇ ಹೇಳ್ರಿ" ಪತ್ನಿ ಸರಿತಾ ಕಡೆ ನೋಡಿ ತುಂಟತನದಿಂದ ಹೇಳಿದ್ದರು.

ಜಡ್ಡಿನ, ಅಪರೇಶನ್ನಿನ ನಿಮಿತ್ತದಿಂದ ಒಂದಿಷ್ಟು ಪುರುಸೊತ್ತು ಸಿಗುತ್ತಿತ್ತು. ಕನ್ನಡ ಪುಸ್ತಕಗಳನ್ನು ಓದಲು ಆರಂಭಿಸಿದರು. ಲೈಬ್ರರಿಯಿಂದ ತಂದು ಅಲ್ಲಿ ಕೈಗೆ ಎಟುಕಿದ ಎಂಬ ಭರತಿಯಲ್ಲಿ ಖರೀದಿ ಮಾಡಿ ತಂದವುಗಳಲ್ಲಿ ಕೆಲವು ತೀರ ಸಾದಾ ಪುಸ್ತಕಗಳು--ಎಂಬುದಾಗಿ ಸರಿತಾ ಅವರಿಗೆ ಅನಿಸುತ್ತಿತ್ತು. ದೇಸಾಯರು ಹಾಗೆಯೇ ಓದಿಯೇ ಓದುತ್ತಿದ್ದರು. ತಮ್ಮ ಬೌದ್ಧಿಕ ಹಸಿವನ್ನು ಇಂಗಿಸಿಕೊಳ್ಳಲು ದೇಹದ ಅಸ್ವಸ್ಥತೆಯನ್ನು ಮರೆಯಲು ಓದುತ್ತಿದ್ದರು. ಇದೇ ಅಸ್ವಸ್ಥತೆಯನ್ನು ನೀಗುವ ದೃಷ್ಟಿಯಿಂದ ಹಿಂದೀ ಪುಸ್ತಕವೊಂದರ (ಇಲ್ಲವೆ ಕನ್ನಡದಿಂದ ಹಿಂದಿಗೂ-ನೆನಪಿಲ್ಲ ಅವರು ಹೇಳಿದ್ದು) ಅನುವಾದ ಮಾಡಬೇಕೆಂದು ಯೋಚಿಸಿದ್ದರು.

ಹೆಚ್ಚಿನ ದಾಂಪತ್ಯಗಳು ವ್ಯಾವಹಾರಿಕವಾಗಿರುತ್ತವೆ. ನಮ್ಮ ಮಧ್ಯಮ ವರ್ಗದ ೨೦ ರಷ್ಟು ಸಂಸಾರಗಳು ಹೀಗೇ ಇರುತ್ತವೆ ಎಂದು ಶಂ.ಬಾ. ಜೋಶಿಯವರು ಒಂದು ಲೇಖನದಲ್ಲಿ ಬರೆದದ್ದು ನೆನಪಾಗುತ್ತದೆ. ಗಂಡನಿಗೆ ಹೆಂಡತಿಯ ಸಹಯೋಗಬೇಕು. ಹೆಂಡತಿಗೆ ಜೀವನಾಧಾರಕ್ಕಾಗಿ ಗಂಡಬೇಕು. ಮಕ್ಕಳಿದ್ದರೆ ಇಬ್ಬರಿಗೂ ಪರಸ್ಪರಬೇಕು. ಇವರಿಬ್ಬರದು ಮಾತ್ರ ಅನುರೂಪದ ದಾಂಪತ್ಯ. ಇಷ್ಟೊಂದು ಆತ್ಮೀಯತೆ ಇರುವ (ಅದೂ ಔರಸ ಸಂತಾನವಿಲ್ಲದಾಗ) ದಾಂಪತ್ಯವನ್ನು ನಾನು ಬಹಳ ಕಡಿಮೆ ಕಂಡಿದ್ದೇನೆ. ನಾನು ಎಷ್ಟೋ ಬಾರಿ ಫೋನಿಸಿದಾಗ ಅವರಿಬ್ಬರ ಹೆಸರುಗಳನ್ನು ಜೋಡಿಸಿ ನಾನು "ಸರಿತಾಕರ ದೇಸಾಯ್ರು ಇದ್ದಾರೇನು?" ಎಂದು ಕೇಳುತ್ತಿದ್ದೆ. ಸರಿತಾ ಅವರು ದೇಸಾಯರ ಪ್ರಕೃತಿಯ ಬಗ್ಗೆ ದೈಹಿಕ-ಮಾನಸಿಕವಾಗಿ ಅದೆಷ್ಟು ತೊಳಲಾಡುತ್ತಿದ್ದರೆಂಬುದನ್ನು ನಾನು ಚೆನ್ನಾಗಿ ಬಲ್ಲೆ. ಇಂತಹ ಅವರ 'ಏಕಜೀವಿ' ಎಂಬ ಪರಿಸ್ಥಿತಿ ಇರುವಾಗ ದೇಸಾಯರಿಗೆ ನಾನು "ಹೆಂಡತಿಗಾಗಿ ಏನು ಮಾಡಿದ್ದೀರಿ?" ಎಂದು ಹೇಳಿದ್ದು ಅವರ ಮನಸ್ಸನ್ನು ಸಾಕಷ್ಟು ನೋಯಿಸಿದ್ದಿತು.

ಅವಿಶ್ರಾಂತ ಹೋರಾಟಗಾರ

❁ ರಾಘವೇಂದ್ರ ಭೀ. ಮಾನ್ವೀಕರ್

ಶ್ರೀ ಕುಸುಮಾಕರ ದೇಸಾಯಿ ಅವರು ಹೈದ್ರಾಬಾದ ಕರ್ನಾಟಕದ ಜನರಿಗೆ ಅಪರಿಚಿತರಲ್ಲ. ಅವರನ್ನು ಪರಿಚಯಿಸುವ ಅವಶ್ಯಕತೆ ಇಲ್ಲ. ಅವರು ತಮ್ಮ ವಿದ್ಯಾರ್ಥಿ ದಿನಗಳಿಂದಲೆ ಅಪ್ಪಟ ಸ್ವಾತಂತ್ರ್ಯ ಹೋರಾಟಗಾರರು ಮತ್ತು ರಾಜಿ ಮುಲಾಜಿಗೆ ಒಳಗಾದ ಸಮಾಜ ಸೇವಕರಾಗಿದ್ದರು. ಅವರು ಸ್ವಾತಂತ್ರ ಚಳುವಳಿಗಾರರಲ್ಲಿ ಸಮಾಜವಾದಿ (Socialist) ಗುಂಪಿನಲ್ಲಿ ಇದ್ದರು. ನನ್ನ ಮತ್ತು ಶ್ರೀ ಕುಸುಮಾಕರ ಇವರ ಪರಿಚಯ ನನ್ನ ಆಪ್ತ ಮಿತ್ರರು ಮತ್ತು ಸಹಪಾಠಿಗಳು (ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿB.Scನಲ್ಲಿ) ಆದ ಶ್ರೀ ಕಾಶಿನಾಥ ನಾವಂದರ ಮುಖಾಂತರ ೧೯೫೩ರಲ್ಲಿ ಆಯಿತು. ಶ್ರೀ ನಾವಂದರ ಕೂಡಾ ಸ್ವಾತಂತ್ರ ಚಳವಳಿಗಾರರ ಸಮಾಜವಾದಿ ಗುಂಪಿನಲ್ಲಿ ಔರಂಗಾಬಾದ (ಈಗ ಮಹಾರಾಷ್ಟ್ರದಲ್ಲಿ ಇದೆ)ನವರು ಆಗಿದ್ದರು. ನಾವೆಲ್ಲ ಆಗ್ಗೆ ಹೈದ್ರಾಬಾದ ನಿಜಾಂ ಸಂಸ್ಥಾನದಲ್ಲಿ ಇದ್ದೆವು. ನಾವೆಲ್ಲ ೧೯೫೩ರಲ್ಲಿ ನ್ಯಾಯಶಾಸ್ತ್ರ (Law) ದ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದೆವು. ನಮ್ಮ ಸಮಾಜವಾದಿ ಗುಂಪಿನಲ್ಲಿ ಶ್ರೀಯುತರಾದ ಬಿ.ಎಂ. ಲಡ್ಡಾ, ಕಾಶಿನಾಥ ನಾವಂದರ್, ಮುರಲೀಧರ ಕಾನಡೆ, ದಿಗಂಬರರಾವ್ ಕಲ್ಮಣಕರ ಮತ್ತು ಸ್ವಾಮಿರಾವ್ ಇದ್ದರು. ಶ್ರೀ ಕುಸುಮಾಕರ ದೇಸಾಯಿ ಮತ್ತು ಕಲ್ಮಣಕರ ಅವರು ನಮಗಿಂತ ಜೇಷ್ಠರು (Senior)ಆಗಿದ್ದರು. ನಾವೆಲ್ಲರು ದಿವಂಗತ ಶ್ರೀರಾಮಮನೋಹರ ಲೋಹಿಯಾ ಅವರಿಂದ ಪ್ರಭಾವಿತರಾಗಿ ಅವರ ಹಿಂಬಾಲಕರೂ (Fallowers) ಆಗಿದ್ದೆವು. ಶ್ರೀ ಲೋಹಿಯಾ ಅವರು ಹೈದ್ರಾಬಾದಿಗೆ ಭೇಟಿಕೊಡುತ್ತಿದ್ದರು. ನಮ್ಮಲ್ಲಿ ಹೆಚ್ಚಿನವರು ಹೈದ್ರಾಬಾದಿನಲ್ಲಿ ಕೋಠಿ ರಸ್ತೆಯಲ್ಲಿ ಇದ್ದ ಇಂಡಿಯಾ ಕಾಫಿಹೌಸ್ (India coffee house)ನಲ್ಲಿ ಸಂಜೆ ವೇಳೆ ಸೇರುತ್ತಿದ್ದೆವು. ಮತ್ತು ಕಾಫಿ ಸೇವಿಸುತ್ತ ಸಮಾಜ ಸೇವೆಯ ಬಗ್ಗೆ ಹರಟುತ್ತಿದ್ದೆವು. ಸಮಾಜ ಶಾಸ್ತ್ರ (Socialism) ಬಗ್ಗೆ ವಿಚಾರ ಮಾಡುತ್ತ, ಹರಟುತ್ತ ಬಹಳ ವೇಳೆ ಕಳೆಯುತ್ತಿದ್ದೆವು. ಶ್ರೀ ರಾಮಮನೋಹರ ಲೋಹಿಯಾ ಮತ್ತು ಅವರ ಹಿರಿಯ ಸಂಗಡಿಗರು ನಮ್ಮ ಟೇಬಲ್ಲಿನಿಂದ, ೩ ಟೇಬಲ್ಲ ಅಂತರದಲ್ಲಿ ಕುಳಿತಿರುತ್ತಿದ್ದರು. ಅವರಲ್ಲಿ ಹೈದ್ರಾಬಾದಿನ ಶ್ರೀಮಂತರಾದ ಶ್ರೀ ಪನ್ನಾಲಾಲ ಪಿಟ್ಟಿ ಇವರ ಪುತ್ರ ಶ್ರೀ ಬದರಿ ವಿಶಾಲ ಪಿಟ್ಟಿಯವರು ಮತ್ತು ಶ್ರೀ ಅಶೋಕ ಮೆಹ್ತಾ ಅವರು ಆಗಾಗ್ಗೆ ಸೇರುತ್ತಿದ್ದರು ಎಂದು ನನ್ನ ನೆನಪು. ಸಾಧಾರಣವಾಗಿ ಶ್ರೀ ಲೋಹಿಯಾ ಇವರು ಹೈದ್ರಾಬಾದಿನಲ್ಲಿ ಇದ್ದಾಗ್ಗೆ, ಪ್ರತಿ ದಿವಸ ಸಾಯಂಕಾಲ ಇಂಡಿಯಾ ಕಾಫಿಹೌಸ್ (India coffee house)ನಲ್ಲಿ ನಾವು ಸೇರುತ್ತಿದ್ದೆವು. ಅನಂತರವೂ ನಾವು ಆಗಾಗ್ಗೆ ಅಲ್ಲಿ ಸೇರುವದು ಪರಿಪಾಠವಾಗಿತ್ತು. ಆ ಕಾಲದಲ್ಲಿ ಇಂಡಿಯಾ ಕಾಫಿಹೌಸ್ ಹೊಸದಾಗಿ ಪ್ರಾರಂಭವಾಗಿತ್ತು ಮತ್ತು ಒಂದು ರೂಪಾಯಿಗೆ ಒಂದು ಪೂರ್ಣ ತುಂಬಿದ

ಪಾಟ್, (Pot) ಮೆಲ್ಲಲೂ ಉಪ್ಪಿನ ಬಿಸ್ಕತ್ತು (Salt Biscit) ದೊರಕುತ್ತಿತ್ತು. ನಾನು ಉಸ್ಮಾನಿಯಾ ವಿಶ್ವವಿದ್ಯಾಲಯದ ಸಮೀಪ ನಲ್ಲಕುಂಟಾದ ನಮ್ಮ ಸ್ವಂತ ಮನೆಯಲ್ಲಿ ವಾಸವಾಗಿದ್ದೆ. ನನ್ನ ಮಿತ್ರ ಶ್ರೀ ನಾಮಂದರ್ ಇವರು ಸುಲ್ತಾನ ಬಜಾರಿನ ಘಾಸಮಲ್ ಬಿಲ್ಡಿಂಗ್‌ನಲ್ಲಿ ಮತ್ತು ಶ್ರೀಕಾನಡೆ ದಂಪತಿಗಳು ಕೋಠಿ ರಸ್ತೆಯಲ್ಲಿಯ ಒಂದು ಮನೆಯಲ್ಲಿ ವಾಸವಾಗಿದ್ದರು, ಅವರು ಆಗಲೇ ವಕೀಲೀ ವೃತ್ತಿ ಪ್ರಾರಂಭಿಸಿ, ಶ್ರೀಜೈನ ಎಂಬ ಪ್ರಸಿದ್ಧ ವಕೀಲರು ಮತ್ತು ಲಾ ಕಾಲೇಜಿನ ಪ್ರಾಧ್ಯಾಪಕರು ಆಗಿದ್ದವರ ಬಳಿ ಜೂನಿಯರ್ (Junior) ಆಗಿ ಕೆಲಸಮಾಡುತ್ತಿದ್ದರು. ಶ್ರೀ ಲಡ್ಡಾ ಮತ್ತು ಶ್ರೀ ನಾಮಂದರ್ ಇವರು ಆಗ್ಗೆ ಕಾಂಗ್ರೆಸ್ಸಿನ ಹಿರಿಯ ಮುಖಂಡರು ಮತ್ತು ಪಾರ್ಲಿಮೆಂಟ್‌ನ ಸದಸ್ಯರಾದ ಶ್ರೀಯುತ ಹರಿಶ್ಚಂದ್ರ ಹೇಡಾ ಇವರಲ್ಲಿ ಸ್ನೇಹವಿದ್ದು, ಅವರ ಬಳಿ ವಿಶೇಷವಾಗಿ ಅವರ ಪತ್ನಿ ಶ್ರೀಮತಿ ಗ್ಯಾನಕುಮಾರಿ ಹೇಡಾ ಇವರ ಕಡೆ ನಾವು ಮೂವರು ಆಗಾಗ್ಗೆ ಹೋಗುತ್ತಿದ್ದೆವು. ಶ್ರೀಮತಿ ಗ್ಯಾನಕುಮಾರಿ ಇವರ ಪ್ರಭಾವ ಆಗಿನ ಮಂತ್ರಿಗಳಾದ ಶ್ರೀ ಚನ್ನಾರಡ್ಡಿಯವರ ಮೇಲೆ ಇತ್ತೆಂದು ಭಾವನೆ. ಆದರೆ ಶ್ರೀ ಕುಸುಮಾಕರ ದೇಸಾಯಿ, ಶ್ರೀ ಲಡ್ಡಾ ಮತ್ತು ಶ್ರೀನಾಮಂದರ ಇವರು ಎಂದೂ ಕಾಂಗ್ರೆಸ್ ಪಕ್ಷ ಸೇರಲಿಲ್ಲಾ. ಸಮಾಜವಾದಿಗಳು ಆಗಿಯೇ ಮುಂದುವರೆದರು. ಶ್ರೀನಾಮಂದರವರು ಔರಂಗಾಬಾದಿನ ಖ್ಯಾತ ನ್ಯಾಯವಾದಿಗಳು ಮತ್ತು ಸಮಾಜ ಕಾರ್ಯಕರ್ತರು. ಶ್ರೀಯುತ ಜಾರ್ಜ್ ಫರ್ನಾಂಡೀಸ್, ಮಧುದಂಡವತೆ ಮತ್ತು ಬಾಪುಕಲ್ಲದಾತೆ ಇವರ ನಿಕಟವರ್ತಿಗಳು ಆಗಿದ್ದರು. ನಮ್ಮ ಎಲ್ಲ ಸ್ನೇಹಿತರು ಲಾ ಅಭ್ಯಾಸ ಮುಗಿಸಿ, ನ್ಯಾಯವಾದಿಗಳು ಆದರು. ಶ್ರೀ ಕಾನಡೆಯವರು ಮಹಾರಾಷ್ಟ್ರದಲ್ಲಿ ಹೈಕೋರ್ಟ್ ನ್ಯಾಯಮೂರ್ತಿಗಳು ಆಗಿದ್ದರು. ಅವರು ಔರಂಗಾಬಾದ ನ್ಯಾಯಪೀಠದ ನ್ಯಾಯಮೂರ್ತಿ (Judge)ಗಳಾಗಿ ಕೆಲಸಮಾಡಿ ದಿವಂಗತರಾದರು. ನಾನು ನಮ್ಮ ಹಿರಿಯರ ಆಗ್ರಹಕ್ಕೆ ಮಣಿದು ಸರಕಾರಿ ಸೇವೆಯಲ್ಲಿ ಸೇರಿದ ಕಾರಣ ಲಾ ಅಭ್ಯಾಸ ಮುಗಿಸಲು ಆಗಲಿಲ್ಲಾ (ನಮ್ಮ ಹಿರಿಯರೆಲ್ಲರೂ, ನಮ್ಮ ಮುತ್ತಾತನವರಿಂದ ಸರಕಾರಿ ಸೇವೆಯಲ್ಲಿ ತಹಶೀಲ್ದಾರ ಮತ್ತು ಜಿಲ್ಲಾಧಿಕಾರಿಗಳಾಗಿ ಕೆಲಸ ಮಾಡಿದ್ದಾರೆ). ಶ್ರೀ ಕುಸುಮಾಕರ ದೇಸಾಯಿಯವರು ಲಾ (Law) ವಿದ್ಯಾಭ್ಯಾಸ ಮುಗಿಸಿ ೧೯೫೪ರಲ್ಲಿ ಕಲ್ಬುರ್ಗಿಯಲ್ಲಿ ವಕೀಲಿ ವೃತ್ತಿ ಪ್ರಾರಂಭಿಸಿದರು.

ಶ್ರೀ ಕುಸುಮಾಕರ ದೇಸಾಯಿ ಇವರು, ತಾವು ಮಾಡಿದ ದೇಶ ಸೇವೆ, ಸ್ವಾತಂತ್ರ್ಯ ಚಳವಳಿ, ಜೇಲುವಾಸ ಇತ್ಯಾದಿ ತ್ಯಾಗಗಳಿಗಾಗಿ ಎಂದೂ ವಿಶೇಷ ಸ್ಥಾನ-ಮಾನ ಬಯಸಲಿಲ್ಲಾ. ಅವರು ಅಪ್ಪಟ ಸಮಾಜವಾದಿಯಾಗಿ ಮತ್ತು ಸುಪ್ರಸಿದ್ಧ ನ್ಯಾಯವಾದಿಗಳಾಗಿ ಇರುವದರಲ್ಲಿ ಸಂತೃಪ್ತರಾಗಿದ್ದರು. ಅವರು ನ್ಯಾಯಶಾಸ್ತ್ರದಲ್ಲಿ ಉನ್ನತ ಅಭ್ಯಾಸಮಾಡಿ L.L.M. ಡಿಗ್ರಿ ಪಡೆದರು. ಮತ್ತು ರಾಜ್ಯ ವ್ಯವಸ್ಥೆ ಶಾಸ್ತ್ರ (Constitutional law), ಮುಸ್ಲಿಂ ನ್ಯಾಯಶಾಸ್ತ್ರ, ತುಲನಾತ್ಮಕ ನ್ಯಾಯತತ್ವ ಶಾಸ್ತ್ರದಲ್ಲಿ ಪಾಂಡಿತ್ಯಗಳಿಸಿದರು. ೧೯೬೦ ರಿಂದ ಲಾ ಕಾಲೇಜಿನಲ್ಲಿ

ನ್ಯಾಯಶಾಸ್ತ್ರ ಬೋಧಕರಾಗಿ ೨೫ ವರ್ಷಗಳ ಕಾಲ ಕೆಲಸ ಮಾಡಿದರು. ಅವರ ಹೋರಾಟ, ಜೀವನಪರ್ಯಂತ ನಡೆದೇ ಇತ್ತು. ಭಾರತ ಸ್ವಾತಂತ್ರ್ಯ ಸಂಗ್ರಾಮ, ಹೈದ್ರಾಬಾದ ರಾಜ್ಯ ವಿಮೋಚನಾ ಸಂಗ್ರಾಮ ಸಮಾಜವಾದ ಚಳುವಳಿ, ೧೯೭೫-೭೭ರ ತುರ್ತು ಪರಿಸ್ಥಿತಿ ಈ ಎಲ್ಲ ಚಳವಳಿಗಳಲ್ಲಿ ಮುಂಚೂಣಿಗರಾಗಿ ೭,೮ ಸಲ ೫,೬ ವರ್ಷಗಳಿಗೂ ಹೆಚ್ಚು ಕಾಲ ಜೇಲುವಾಸ ಅನುಭವಿಸಿದರು.

೧೯೫೭ರ ಡಿಸೆಂಬರನಲ್ಲಿ ಹೈದ್ರಾಬಾದಿನಲ್ಲಿ ಕಂದಾಯ ಇಲಾಖೆಯಲ್ಲಿ ಸೇವೆಗೆ ಸೇರಿದ ನಂತರ ನನ್ನ ಪರಿಚಯ ಅವರ ಚಿಕ್ಕಪ್ಪನ ಮಕ್ಕಳಾದ ಶ್ರೀ ಅನಿರುದ್ಧ ದೇಸಾಯಿ (ಅವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು.) ಇವರೊಂದಿಗೆ ಆಯಿತು. ಸರಕಾರದ ಸೇವೆಯಲ್ಲಿ ನಾವಿಬ್ಬರು ಯಶಸ್ವಿ ಅಧಿಕಾರಿಗಳಾಗಿ I.A.S. ಅಖಿಲ ಭಾರತ ಸೇವೆಗೆ ಬಡ್ತಿ ಪಡೆದೆವು.

ಶ್ರೀ ಕುಸುಮಾಕರ ದೇಸಾಯಿ ಇವರು, ಶ್ರೀ ಭಾವೂರಾವ್ ದೇವ್ಳಗಾಂವಕರ್, (ಹಿರಿಯರು, ಪ್ರೊಫೆಸರ್ ಮತ್ತು ಅತ್ಯಂತ ಸರಳ ಮತ್ತು ಮಾನ್ಯ ವ್ಯಕ್ತಿ) ಇವರ ಪ್ರಬೋಧನೆಯ ಮೇರೆಗೆ ಕಲ್ಬುರ್ಗಿ ಪಟ್ಟಣದ ಮುನಿಸಿಪಾಲ್ಟಿಗೆ ಸ್ಪರ್ಧಿಸಿ ೧೯೬೦-೬೪ರ ವರೆಗೆ ಪಾಲಿಕೆಯ ಸದಸ್ಯರಾಗಿ ಉಪಯುಕ್ತ ಕಾರ್ಯ ಮಾಡಿದರು. ನಾನು ೧೯೬೨ರಿಂದ ೧೯೬೫ ರ ವರೆಗೆ ಕಲ್ಬುರ್ಗಿ ತಾಲೂಕಿನ ತಹಶೀಲ್ದಾರನಾಗಿದ್ದೆ. ನಾವು ಆಗಾಗ್ಗೆ ಸ್ಟೇಷನ್ ರಸ್ತೆಯಲ್ಲಿ ಇರುವ ಅವರ ಮನೆಯಲ್ಲಿ ಸೇರುತ್ತಿದ್ದೆವು. ಅವರು ಒಂದು ಕೇಸ (Case) ನಲ್ಲಾದರೂ ಶಿಫಾರಸ್ಸು (Recomendation) ಮಾಡಲಿಲ್ಲಾ. ಅವರು ಬಹಳ ಶಿಸ್ತು ಮತ್ತು ಪ್ರಾಮಾಣಿಕರಾಗಿ ಸಿದ್ಧಾಂತಕ್ಕೆ ಅಂಟಿಕೊಂಡಿದ್ದರು. ಶ್ರೀ ಕುಸುಮಾಕರ ಇವರು ಹೈದ್ರಾಬಾದ ಕರ್ನಾಟಕದ ಅತಿ ಹಿರಿಯ ರಾಜಕಾರಣಿಗಳು ಮತ್ತು ಸಮಾಜ ಸೇವಕರು ಆಗಿದ್ದರು. ಅವರು ಇತರ ಮಿತ್ರರಂತೆ ಮನಸ್ಸು ಬದಲಾಯಿಸಿದ್ದರೆ ರಾಜ್ಯದ ಅತಿ ಶ್ರೀಮಂತ ರಾಜಕಾರಣಿಗಳಲ್ಲಿ ಒಬ್ಬರಾಗಿರುತ್ತಿದ್ದರು. ಆದರೆ ಶ್ರೀ ಕುಸುಮಾಕರ ಹಾಗೆ ಆಸೆ ಪಡಲಿಲ್ಲ. ಒಂದು ಸಲ ೧೯೬೬ ರಲ್ಲಿ ರಾಜ್ಯದ ಮೇಲ್ಮನೆ ಚುನಾವಣೆಗೆ ನಿಂತರು. ಸಫಲರಾಗಲಿಲ್ಲಾ. ಅದು ಆ ಭಾಗದ ಜನರ ದೌರ್ಭಾಗ್ಯ.

ಅವರು ಚುನಾಯಿತರಾಗಿ ಶಾಸಕರಾಗಿದ್ದರೆ, ಪ್ರಾಮಾಣಿಕ ರಾಜಕಾರಣಿ, ಮಂತ್ರಿ, ಸಮಾಜ ಸೇವಕರಾಗಿ ಕೆಲಸ ಮಾಡುತ್ತಿದ್ದರು. ಹೈದ್ರಾಬಾದ ಕರ್ನಾಟಕದ ದೌರ್ಭಾಗ್ಯ ಎಂದು ಪುನಃ ಪುನಃ ಹೇಳಬೇಕಾಗುತ್ತದೆ. ಬಹಳ ವರ್ಷಗಳನಂತರ ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ್ಗೆ ಇವರನ್ನು ನಗರ ನೀರು ಸರಬರಾಜು ಮತ್ತು ಒಳಚರಂಡಿ ನಿಗಮದ ಅಧ್ಯಕ್ಷರನ್ನಾಗಿ ನೇಮಿಸಿದರು. ತಮ್ಮ ೧೩ ವರ್ಷದ ಅಧಿಕಾರ ಅವಧಿಯಲ್ಲಿ ಬಹಳ ದಕ್ಷತೆಯಿಂದ ಕೆಲಸ ಮಾಡಿದರು. ಅವರು ಕಲ್ಬುರ್ಗಿ ನಗರಕ್ಕೆ ನೀರಿನ ಅಭಾವವನ್ನು ನೀಗಿಸುವಲ್ಲಿ ಭೀಮಾನದಿ ಯೋಜನೆಯನ್ನು ಕೈಗೆತ್ತಿಕೊಂಡು ನಗರಕ್ಕೆ ನೀರು ಪೂರೈಸುವಲ್ಲಿ ಯಶಸ್ವಿ ಆದರು, ಆ ಕಾರಣ ಅವರಿಗೆ ಕಲ್ಬುರ್ಗಿಯ ಭಗೀರಥನೆಂದು ಜನ ನೆನೆಸುತ್ತಾರೆ.

(ಪುರಾಣಪುರುಷ ಭಗೀರಥ ದೇವಗಂಗೆಯನ್ನು ದೇವ ಲೋಕದಿಂದ ಭೂಲೋಕಕ್ಕೆ ತಂದ ಸಾಹಸಿ.)

ಅವರು ೧೯೬೧, ಡಿಸೆಂಬರ್‌ನಲ್ಲಿ ಅನುರೂಪಳಾದ, ಮತ್ತು ದಕ್ಷಳಾದ ಶ್ರೀಮತಿ ಸರಿತಾ ಇವರನ್ನು ಮದುವೆಯಾದರು. ಶ್ರೀಮತಿ ಸರಿತಾ ಇವರು ನನಗೆ ಮುಂಚಿನಿಂದಲೇ ಸೋದರಿ ಸರಸಾ ಎಂದು ಪರಿಚಯಸ್ಥರಾಗಿದ್ದರು. ನಾನು ೧೯೬೦-೬೧ರಲ್ಲಿ ಅಫಜಲ್‌ಪೂರ ತಹಶೀಲ್ದಾರ ಇದ್ದಾಗ, ಶ್ರೀ ಕುಸುಮಾಕರರಿಗೆ ಇವರನ್ನು ಮದುವೆ ಆಗಲೂ ಶಿಫಾರಸ್ಸು ಮಾಡುವವರಲ್ಲಿ ನಾನೂ ಒಬ್ಬನಾಗಿದ್ದ ಪುಣ್ಯ ನನ್ನದು. ಶ್ರೀಮಾನ್ ಜೆ.ಎಚ್. ಪಟೇಲರು ಶ್ರೀ ಕುಸುಮಾಕರ ಇವರ ಗಾಢ ಸ್ನೇಹಿತರು ಆಗಿದ್ದರು. ಅವರು ಕಲ್ಬುರ್ಗಿಗೆ ಭೇಟಿ ಕೊಟ್ಟಾಗಲೆಲ್ಲಾ ಶ್ರೀ ದೇಸಾಯಿ ದಂಪತಿಗಳ ಮನೆಯಲ್ಲಿ ಸಾಯಂಕಾಲ ಕಾಲ ಕಳೆಯುತ್ತಿದ್ದರು. ಮುಖ್ಯಮಂತ್ರಿಗಳಾಗಿದ್ದರೂ ಶಿಷ್ಟಾಚಾರ (Protocol) ಬದಿಗೆ ಒತ್ತಿ, ಶ್ರೀ ದೇಸಾಯಿಯವರ ಸಂಗಡ ತಪ್ಪದೆ ಸ್ವಲ್ಪ ಕಾಲ ಕಳೆಯುತ್ತಿದ್ದರು. ೧೯೯೫ ರಲ್ಲಿ ಶ್ರೀ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಶ್ರೀಮತಿ ಸರಿತಾ ದೇಸಾಯಿ ಇವರನ್ನು ಖ್ಯಾತ ಕನ್ನಡ ಬರಹಗಾರ್ತಿ ಎಂದು ರಾಜ್ಯದ ಮೇಲ್ಮನೆಗೆ ಶಾಸಕರಾಗಿ ನೇಮಿಸಿದರು. ಶ್ರೀಮತಿ ಸರಿತಾ ದೇಸಾಯಿ ಇವರು ತಮ್ಮ (೬) ವರ್ಷದ ಪೂರ್ಣ ಅವಧಿಯನ್ನು ಬಹಳ, ದಕ್ಷತೆಯಿಂದ ಶಾಸಕಿಯರಾಗಿ ಕೆಲಸ ಮಾಡಿದರು.

ಅನಂತರದ ದಿವಸಗಳಲ್ಲಿ ಶ್ರೀ ಕುಸುಮಾಕರ ಇವರು ಅಸ್ತಮಾ (ದಮ್ಮು) ಮತ್ತು ಹೃದಯದ ಕಾಯಿಲೆಯಿಂದ ಬಹಳ ಬಳಲಿದರು. ಅವರ ಪತ್ನಿ ಬಹಳ ಕಾಳಜಿಯಿಂದ ಇವರನ್ನು ನೋಡಿಕೊಳ್ಳುತ್ತಿದ್ದರು. ಇವರು ಆದರ್ಶ ದಂಪತಿಗಳಾಗಿದ್ದರು. ಶ್ರೀ ದೇಸಾಯಿ ಇವರಿಗೆ ೨ನೇ ಸಲ ಹೃದಯ ಚಿಕಿತ್ಸೆ (By-pass Surgery) ಆಗುವದಕ್ಕೆ ಕಾರಣ. ಅವರ ಪತ್ನಿ ಶ್ರೀಮತಿ ಸರಿತಾ ಇವರಿಗೆ ಕ್ಯಾನ್ಸರ್ ಕಾಯಿಲೆ ಎಂದು ವೈದ್ಯರು ಚಿಕಿತ್ಸೆಮಾಡಲು ಪ್ರಾರಂಭಿಸಿದಾಗ್ಗೆ, ಮನಸ್ಸಿಗೆ ಆಘಾತವಾಗಿ ಪತ್ನಿ ಉಳಿಯುತ್ತಾರೋ ಇಲ್ಲೋ ಎಂದು ಚಿಂತೆಯಿಂದ ಹೃದಯಕ್ಕೆ ಆಘಾತವಾಗಿರಬೇಕು. ಅವರ ದಾಂಪತ್ಯ ಅತ್ಯಂತ ಆದರ್ಶನೀಯವಾದುದು. ಇದಕ್ಕೆ ಇದೇ ಸಾಕ್ಷಿ. ಮತ್ತು ಶ್ರೀಯುತರ ಪ್ರೇಮ ಆದರದಿಂದ ಶ್ರೀಮತಿ ಸರಿತಾ ದೇಸಾಯಿ ಇವರು ಪೂರ್ಣ ಚೇತರಿಸಿಕೊಂಡು ಅವರಿಗೆ ಕ್ಯಾನ್ಸರ್ ಇಲ್ಲವೆಂದೇ ಆದ ಹಾಗೆ ಆಯಿತು.

ಶ್ರೀ ಕುಸುಮಾಕರ ದೇಸಾಯಿ ಇವರಿಗೆ ಖಾದಿ ಅಂದರೆ ಪಂಚಪ್ರಾಣ. ಅವರು ವಿದ್ಯಾರ್ಥಿ ದಿಸೆಯಿಂದಲಾಗಿ ಅಪ್ಪಟ ಖಾದಿ ಧಾರಿಗಳು. ಅವರ ಮತ್ತು ನಮ್ಮ ಮಿತ್ರ ಶ್ರೀ ನಾವಂದರ ಪ್ರೇರಣೆಯಿಂದ ನಾನು ವಿದ್ಯಾರ್ಥಿ ಇದ್ದಾಗ ಖಾದಿ ಧರಿಸುತ್ತಿದ್ದೆ. ಕಾಲಾನಂತರ ಖಾದಿಧಾರಿಗಳು ಖಾದಿಪ್ರೇಮದಿಂದ ಧರಿಸದೆ, ರಾಜಕೀಯ ಧುರೀಣರ ಸಂಕೇತವಾಗುತ್ತ ಬಂತು. ಮತ್ತು

ಕೇವಲ ಶ್ರೀಮಂತ ರಾಜಕಾರಣಗಳು ಬಹಳ ನಯವಾದ ಹಾದಿ ಧರಿಸುತ್ತ ಬಂದರು. ಆದರೆ ಶ್ರೀ ದೇಸಾಯಿಯವರದು ಆ ಮನೋಭಾವ ಇರಲಿಲ್ಲ. ಅವರು ಕಲ್ಬುರ್ಗಿ ಖಾದಿ ಗ್ರಾಮೋದ್ಯೋಗ ಸಂಘದ ಧರ್ಮದರ್ಶಿಗಳೂ (Trustee) ಆಗಿದ್ದರು. ಕಾಂಗ್ರೆಸ್ಸಿನ ಪ್ರಭಾವಿ ನಾಯಕರುಗಳು ಇವರ ಮಿತ್ರರಾಗಿದ್ದರು. ದಿ. ಶ್ರೀ ಜಂಡರಕಿ ಜಗನ್ನಾಥರಾಯರು, ಅಖಿಲ ಭಾರತ ಅವಿಭಾಜಿತ ಕಾಂಗ್ರೆಸ್ಸಿನ ಮಹಾಕಾರ್ಯದರ್ಶಿಗಳು (Genaral Secretary) ಆಗಿದ್ದರು. ಅವರ ಸ್ನೇಹವಿದ್ದರೂ, ತತ್ವ, ಮತ ಭೇದದಿಂದ ಸ್ವಲ್ಪ ಜಗಳವೇ ಆಗುತ್ತಿತ್ತು. ಇತರರಂತೆ ತತ್ವ ಬಿಟ್ಟು ಅಧಿಕಾರಕ್ಕಾಗಿ ಆಸೆ ಪಡಲಿಲ್ಲ, ಕಾಂಗ್ರೆಸ್ಸಿಗೆ ಸೇರಲೇ ಇಲ್ಲ.

ದೇಸಾಯಿ ದಂಪತಿಗಳು, ೧೯೯೯ ರಲ್ಲಿ ಬೆಂಗಳೂರಿಗೆ ಬಂದು ನೆಲಸಿದರು. ದೇಸಾಯಿ ಇವರ ದೇಹಾಲಸ್ಯ, ಆಸ್ಪತ್ರೆಗೆ ಪುನಃ ಪುನಃ ತೆರಳುವಿಕೆ ಮುಂತಾದ ಕಾರಣಗಳಿಂದಾಗಿ ಅವರು ಬೆಂಗಳೂರಿನಲ್ಲಿ ನೆಲಸುವಂತಾಯಿತು. ಶ್ರೀಮತಿ ಸರಿತಾ ದೇಸಾಯಿಯವರು ತಮ್ಮ ಪತಿಯ ಸೇವೆಯನ್ನು ಚಾಚೂತಪ್ಪದೆ, ಮಗುವಿನಂತೆ ನೋಡಿಕೊಳ್ಳುತ್ತಿದ್ದರು. ತಮ್ಮ ರಾಜಕೀಯ, ಸಾಹಿತ್ಯಿಕ ಹೀಗೆ ಅವಿರತ ಕೆಲಸಗಳಲ್ಲಿ, ತಮ್ಮ ಪತಿಯ ಸೇವೆಯನ್ನೇ ಮುಖ್ಯ ಕರ್ತವ್ಯವಾಗಿ ಇಟ್ಟುಕೊಂಡಿದ್ದರು. ನನ್ನ ಆಪ್ತ ಮಿತ್ರ ಶ್ರೀ ಕುಸುಮಾಕರರೊಂದಿಗೆ ಆಗಾಗ್ಗ ದೂರವಾಣಿಯಲ್ಲೇ ಮಾತು ಆಗುತ್ತಿತ್ತು. ನಾವು ಉರ್ದು ಭಾಷೆಯಲ್ಲಿ ಸಂಭಾಷಿಸುತ್ತಿದ್ದೆವು. ಅವರಿಗೆ ಉರ್ದು ಕವಿತೆ (ಶಾಯರಿ) ಬಹಳ ಇಷ್ಟವಾಗಿತ್ತು. ೧೯೯೮ ರಿಂದ ೨೦೦೩ ರ ವರೆಗೆ ನನ್ನ ಮಕ್ಕಳ ಆಗ್ರಹದಿಂದ ೪-೫ ಸಾರೆ ಅಮೆರಿಕೆ ಮತ್ತು ಇಂಗ್ಲೆಂಡ್‌ಗಳಿಗೆ ಹೋಗಬೇಕಾದ ಕಾರಣ ನನ್ನ ಮಿತ್ರನ ಭೇಟಿ ಲಭಿಸಲಿಲ್ಲ. ನಾನು ಡಿಸೆಂಬರ್ ೨೦೦೨ ರ ಕೊನೆಯವಾರದಲ್ಲಿ ಇಂಗ್ಲೆಂಡ್‌ನಿಂದ ಮರಳಿ ಬಂದ ನಂತರ ಭೇಟಿ ಮಾಡಬೇಕೆಂದು ಮಾಡಿದ ಪ್ರಯತ್ನ ಲಭಿಸಲಿಲ್ಲ. ನನ್ನ ಡಾಕ್ಟರ್ ಮಗನಿಂದ ಅವರ ಮರಣದ ವಾರ್ತೆ ಗೊತ್ತಾಗಿ ಬಹಳ ದುಃಖವಾಯಿತು. ಅವರ ಭೇಟಿ ಆಗಲೇ ಇಲ್ಲ. ಎನ್ನುವದು ಪಶ್ಚಾತಾಪ ಮತ್ತು ಖೇದದ ವಿಷಯವಾಗಿ ನನ್ನಲ್ಲಿ ಉಳಿದಿದೆ.

ಶುದ್ಧ ಅಂತಃಕರಣಿ

❀ ವಾ.ಪಾಂ. ದೇವುಳಗಾಂವಕರ.

ನನ್ನ ಮಿತ್ರ ಕುಸುಮಾಕರ ದೇಸಾಯಿ ನಿಧನ ೩-೧‘-೨೦೦೩ ರಂದು ಆಯಿತು. ಅದಕ್ಕೂ ಮೊದಲು ನಂತರ ನನ್ನ ಇನ್ನೊಬ್ಬ ಸಮೀಪದ ಮಿತ್ರ ಮುರಳೀಧರರಾವ ನಿಧನವಾಯಿತು. (ನಿವೃತ್ತ ಹೈಕೋರ್ಟ ನ್ಯಾಯಾಧೀಶ) ಕುಸುಮಾಕರ ಪತ್ನಿ ಸರಿತಾ ತನ್ನ ಪತಿಯನ್ನು ಕುರಿತು ನನ್ನ ನೆನಪುಗಳನ್ನು ಬರೆದು ಕಳುಹಿಸಲು ಹೇಳಿದರು. ನಾನು ಸಾಹಿತಿ ಅಲ್ಲವಾದುದರಿಂದ ಈ ಕೆಲಸ ಸ್ವಲ್ಪ ಕಠಿಣವೇ ಸರಿ. ಅವರ ನಿಧನಕ್ಕಿಂತ ಮೊದಲು ಸರ್ವಸಾಧಾರಣವಾಗಿ ನವೆಂಬರದಲ್ಲಿ ನಾನು, ಮುರಲೀಧರರಾವ ಮತ್ತು ಅವರ ಬಂಧು ಸುಬ್ಬರಾವ, ಕುಸುಮಾಕರ ಭೇಟಿಗಾಗಿ ಕೋರಮಂಗಲ ಬಡಾವಣೆಯಲ್ಲಿರುವ ಅವರ ಮನೆಗೆ ಹೋಗಿದ್ದೆವು. ಎಲ್ಲ ಹಳೆಯ ನೆನಪುಗಳ ಪುನಃಸ್ಮರಣೆ ಅವರೊಡನೆ ಚೇಷ್ಟೆ ವಗೈರೆ ಆದವು. ಅದೇ ಅವರ ನನ್ನ ಮಿತ್ರತ್ವದ ಕೊನೆಯ ಭೆಟ್ಟಿ.

ನಾನು ಮತ್ತು ಕುಸಮಾಕರ ಎಂಟನೆಯ ವರ್ಗದಲ್ಲಿ ಒಂದೇ ಬೆಂಚಿನಲ್ಲಿ ಕೂಡುತ್ತಿದ್ದೆವು.ಮುಂದೆ ಅವರು ಪಾಸು ನಾನು ನಪಾಸು. ಆದರೆ, ಮಿತ್ರತ್ವದಲ್ಲಿ ಕೊನೆಯವರೆಗೆ ಅಂತರ ಸಂಭವಿಸಲಿಲ್ಲ. ವಿದ್ಯಾರ್ಥಿ ದೆಸೆಯಲ್ಲಿ ಅವರ ಆಟ ಮತ್ತು ಓದಿನ ಅಭಿರುಚಿ ಸ್ಮರಣಾರ್ಹವಾದುದು. ಹೈಸ್ಕೂಲ್‌ನಲ್ಲಿರುವ ತನಕ ಅವರು ಓದಿದ ಪುಸ್ತಕಗಳ ಸಂಖ್ಯೆಯ ಅಂದಾಜು ಹಚ್ಚಲು ಬರುವುದಿಲ್ಲ. ರಾತ್ರಿ ಹಿಡಿದ ಪುಸ್ತಕವನ್ನು ಓದಿ ಮುಗಿಸುವತನಕ ಮಲಗುತ್ತಲೇ ಇರಲಿಲ್ಲ. ನಾನು ದಿನಾಲು ಹೇಳುತ್ತಿದ್ದೆ "ನೀನು ಸೂರ್ಯೋದಯವನ್ನು ಎಂದು ನೋಡಿದ್ದೀ? ಲಗ್ನದ ದಿವಸ ಒತ್ತಾಯದ ಕಾರಣವಾಗಿ ಏಳುವದಾಯಿತು. ಆ ದಿವಸ ಕದಾಚಿತ್ ನಿನಗೆ ಸೂರ್ಯದರ್ಶನ ಆಗಿದ್ದೀತು" ಇದು ಅವರ ಓದಿನ ರೀತಿ. ಸ್ಮರಣಶಕ್ತಿಯಲ್ಲಿ ದಾಂಡಿಗ. ನಮ್ಮ ಗುರುಗಳು ವಿ. ಅಯ್ಯರ ಮಾಸ್ತರ ಕಲಿಸುವ ಭೂಗೋಲ ಕಂಠಪಾಠ. ಯಾವುದೇ ವಿಷಯದ ಅಭ್ಯಾಸ ಮಾಡುವಾಗ ಅದರಲ್ಲಿ ಆಳವಾಗಿ ಭಾಗವಹಿಸುವದು ಅವರ ಹವ್ಯಾಸವಾಗಿತ್ತು.

ಅವರಿಗೆ ರಾಜಕಾರಣದಲ್ಲಿ ವಿಶೇಷ ಆಸಕ್ತಿ. ವಿದ್ಯಾರ್ಥಿಗಳ ಸಂಘಟನೆಯಲ್ಲಿ ಹೆಚ್ಚಿನ ಅಭಿರುಚಿಯ ಭಾಗ ತೆಗೆದುಕೊಳ್ಳುತ್ತಲಿದ್ದರು. ಈ ಕಾರಣದಿಂದ ಅವರಿಗೆ ಅನೇಕರ ಸಂಪರ್ಕ ಸಾಧಿಸಿತು. ಹೈದರಾಬಾದ ಮುಕ್ತಿ ಸಂಘರ್ಷದಲ್ಲಿ ಅವರು ಭಾಗವಹಿಸಿದರು. ವಿಜ್ಞಾನದ ಪದವಿ ಪಡೆದು ವಕೀಲನಾಗುವುದನ್ನು ಅವರು ನಿರ್ಧರಿಸಿದರು. ತಂದೆ ಕೈಲಾಸ ವಾಸಿ ಸಂಜೀವರಾವರೊಂದಿಗೆ ವಕಾಲತನ್ನು ಮುಂದುವರೆಸುವುದಾಗಿತ್ತು. ಅವರ ಅಪೇಕ್ಷೆ ಹೈದರಾಬಾದ್ ಸಂಸ್ಥಾನದ ಮುಕ್ತಿ ನಂತರ ಅವರಿಗೆ ಒಳ್ಳೆಯ ಅವಕಾಶ ಒಂದು ಒದಗಿಬಂತು.

ಹೈದ್ರಾಬಾದ್‌ನ ಪ್ರಸಿದ್ಧ ವ್ಯಕ್ತಿ ಶ್ರೀ ಶ್ರೀಧರರಾವ್ ನಾಯಕ ಅವರು ಲೋಕಸಭೆ

ಸಹಾಯಕರಾದರು. ಕುಸುಮಾಕರ ಅವರ ಕಾರ್ಯಕರ್ತರಿಗಾಗಿ ಕೆಲಸ ಮಾಡಿದರು. ಬೇಕಾದಷ್ಟು ಕೆಲಸದೊಂದಿಗೆ ಹಣ, ಹೆಸರು, ದೊಡ್ಡ ವ್ಯಕ್ತಿಗಳ ಭೆಟ್ಟಿ, ಭಾಷಣ, ಮನ್ನಣೆ ಅವರಿಗೆ ದೊರಕಿದವು.

ಅಭ್ಯಾಸವೃತ್ತಿ, ಕಷ್ಟಸಹಿಷ್ಣುತೆಯ ನಿಷ್ಠೆ, ಶುದ್ಧ ಅಂತಃಕರಣ ಇಂಥ ಎಲ್ಲ ಗುಣಗಳನ್ನು ಪರಿಪೂರ್ಣರಾದ ವ್ಯಕ್ತಿ ರಾಜಕಾರಣದಲ್ಲಿ ಏಕೆ ಮುಂದೆ ಬರಲು ಸಾಧ್ಯವಾಗಲಿಲ್ಲ? ಅವರ ಸಮೀಪದವರು ಮತ್ತು ಅವರ ಪರಿಚಯದ ಜನರಿಗೆ ಇದೊಂದು ಆಶ್ಚರ್ಯ. ಅವರ ಹಠಮಾರಿ ಸ್ವಭಾವ ಅವರಿಗೆ ಮುಳುವಾಯಿತು. ಬಹಳ ಜನರು ಅವರನ್ನು ಆದರಿಸಿದರೂ ಅವರನ್ನು ದೂರವೇ ಇಡುತ್ತ ನಡೆದರು. ಅದರಿಂದ ಅವರಿಗೆ ವೈಯಕ್ತಿಕ ಹಾನಿ ಆಯಿತು. ಆದರೆ ಅವರ ಹತ್ತಿರ ಬಹು ಅಪೇಕ್ಷೆ ಇಟ್ಟ ಜನ ಅವರಿಂದ ದೂರವಾದರು. ಇದೇ, ಅವರ ಆಯುಷ್ಯದಲ್ಲಿನ ನನ್ನ ವ್ಯಥಿತ ಶೋಕಾಂಜಲಿ. ಅಮೇರಿಕದ ಲೇಖಕಿ "ಆಯಾನ ರಾಂಡ"ಳ 'ಫೌಂಟೇನ್ ಹೆಡ್' ಕುಸುಮಾಕರರ ಮೆಚ್ಚಿನ ಕಾದಂಬರಿ. ಅದು ಅವರ ಭಗವದ್ಗೀತೆ. ತಾವೇ ಖರೀದಿಸಿ ನನಗೆ ಅದನ್ನು ಓದ ಹಚ್ಚಿದರು. ಕಾದಂಬರಿಯಲ್ಲಿನ ಇಗೋ ಆ ನಾಯಕನ ಹಾಗೂ ಕುಸುಮಾಕರರ ಆದರ್ಶವಾಗಿತ್ತು. ನಾನು ಕೊನೆಗೆ ಅವರಿಗೆ ಹೇಳಿದೆ. "ಈ ಪುಸ್ತಕವೇ ನಿಮ್ಮ ಭವಿಷ್ಯವನ್ನು ಹಾಳು ಮಾಡಿತು" ಕನ್ನಡ ಮಾತೃಭಾಷೆಯಾದರೂ ಮರಾಠಿಯ ಓದು ಹೆಚ್ಚಿನದು. ಉರ್ದು ಸಹ ಅವರನ್ನು ಆಕರ್ಷಿಸಿತ್ತು. ಮಾತನಾಡುವಷ್ಟು ತೆಲುಗು ಭಾಷೆಯನ್ನು ಅರಿತಿದ್ದರು. ಪು.ಲ. ದೇಶಪಾಂಡೆಯವರ ಶಬ್ದಗಳಲ್ಲಿ ಹೇಳುವುದಾದರೆ ಕುಸುಮಾಕರ ಒಬ್ಬ 'ವಿಲಕ್ಷಣ' ವ್ಯಕ್ತಿಯಾಗಿದ್ದರು.

ಸಾರ್ವಜನಿಕ ಜೀವನದ ಅಪರೂಪದ ಏಕಲವ್ಯ

❀ ಎ.ಎನ್. ಸುಬ್ಬರಾವ್

ಐದು ದಶಕಗಳ ಸಾರ್ವಜನಿಕ ಮತ್ತು ವೃತ್ತಿಜೀವನದಲ್ಲಿ ನಾನು ಕಂಡ ಬಹಳ ಅಪರೂಪದ ವ್ಯಕ್ತಿ ಕುಸುಮಾಕರ ದೇಸಾಯಿ ಅವರು. ಹಾಗೆ ನೋಡಿದರೆ ನಾನು ಅವರಿಗೆ ಎಂದೂ ದೈಹಿಕವಾಗಿ ಬಹಳ ಹತ್ತಿರವಾಗಿದ್ದವನೇನೂ ಅಲ್ಲ. ಆದರೆ ಮಾನಸಿಕವಾಗಿ, ಭಾವನಾತ್ಮಕವಾಗಿ ನಾವಿಬ್ಬರೂ ತುಂಬಾ ನಿಕಟರಾಗಿದ್ದವರು. ಇಂತಹ ಒಂದು ನಂಟನ್ನು ವರ್ಣಿಸುವುದು, ಅದಕ್ಕೆ ತರ್ಕದ ಲೇಪ ಹಚ್ಚುವುದು ಬಹಳ ಕಷ್ಟ. ಪ್ರಾಯಶಃ ಇಂದಿನ ಸಾರ್ವಜನಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸಮಯಸಾಧಕರ, ಆಷಾಢಭೂತಿಗಳು, ಗೆದ್ದೆತ್ತಿನ ಬಾಲ ಹಿಡಿಯುವವರ ಸಂಖ್ಯೆಯೇ ಅಧಿಕವಾಗಿರುವಾಗ ಎಲ್ಲೋ ಒಂದು ಕಡೆ ಕುಸುಮಾಕರ ದೇಸಾಯಿಯವರಂತಹ ಪ್ರಾಮಾಣಿಕರು, ನಿಸ್ವಾರ್ಥಿಗಳು, ಆದರ್ಶವಾದಿಗಳು ನಮ್ಮ ಮೇಲೆ ಬೀರುವ ಪ್ರಭಾವವೇ ವಿಭಿನ್ನ ರೀತಿಯದು. ಒಬ್ಬ ಪತ್ರಕರ್ತನ ಅನುಭವದಲ್ಲಂತೂ ಈ ಮಾತು ತೀರಾ ಸತ್ಯ. ದೇಸಾಯಿಯವರಂಥವರು ಯಾವಾಗಲೂ ಅಧಿಕಾರಕ್ಕೆ ನೇತುಹಾಕಿಕೊಳ್ಳದವರಾದ್ದರಿಂದ, ದಿನನಿತ್ಯದ ರಾಜಕೀಯವನ್ನು ರೂಪಿಸುವ ಗುಂಪುಗಾರಿಕೆ, ಜಾತಿ, ವಶೀಲಿ ಇತ್ಯಾದಿ ಪ್ರಕ್ರಿಯೆಗಳಿಂದ ಗಾವುದ ದೂರವಿರುವವರಾದ್ದರಿಂದ ಅಂತಹವರೊಂದಿಗೆ ನಮ್ಮ ಒಡನಾಟಕ್ಕೆ ತೀವ್ರ ಮಿತಿಗಳಿರುವುದು ಅನಿವಾರ್ಯ. ಏಕೆಂದರೆ ಅವರು ಶಕ್ತಿ ರಾಜಕೀಯದ ಸೂತ್ರಗಳಿಗೆ ಹೊರತಾದವರು. ಅದರ ಪರಧಿಯಿಂದ ಪ್ರಜ್ಞಾಪೂರ್ವಕವಾಗಿ ದೂರವೇ ನಿಂತವರು. ಆದರೆ ನಮ್ಮ ಬೇಳೆ ಬೇಯುವುದು ವೃತ್ತಿಪರ ರಾಜಕಾರಣಿಗಳ ಮತ್ತು ಅವರ ಸಂಕೀರ್ಣ ಪರಿಸರಗಳಿಂದ ಮಾತ್ರ. ಈ ಮಾತು ಹೇಳಲು ಎಷ್ಟು ಕಹಿಯೇ ಆದರೂ ಒಂದು ಜ್ವಲಂತ ಸತ್ಯ.

ಈ ಹಿನ್ನೆಲೆಯಲ್ಲಿ ಕುಸುಮಾಕರ ದೇಸಾಯಿಯವರ ಮತ್ತು ನನ್ನ ನಡುವೆಯ ಅವಿನಾಭಾವ ಸಂಬಂಧ ಸಾಕಷ್ಟು ವಿಚಿತ್ರವೇ ಅನ್ನಿಸುತ್ತದೆ. ನನಗೆ ಅವರ ಪರಿಚಯವಾದದ್ದು ಅವರ ಧರ್ಮಪತ್ನಿ ಸರಿತಾ ಕುಸುಮಾಕರ ದೇಸಾಯಿಯವರ ಮೂಲಕ. ನಾನು ಸಕ್ರಿಯ ಪತ್ರಿಕೋದ್ಯಮದಲ್ಲಿ ಸಂಪೂರ್ಣವಾಗಿ ಮುಳುಗಿ ನನ್ನ ವ್ಯಕ್ತಿತ್ವವನ್ನೇ ಪರಿವರ್ತಿಸಿಕೊಳ್ಳುವ ಮುಂಚೆ ನನ್ನ ಪೂರ್ವಾಶ್ರಮದಲ್ಲಿ ಸಾಹಿತ್ಯ ರಂಗದಲ್ಲಿ ಒಂದಿಷ್ಟು ಮಣ್ಣು ಹೊತ್ತಿದ್ದುಂಟು. ನನ್ನ ಜೀವನದ ಪ್ರಾರಂಭಿಕ ದಿನಗಳಲ್ಲಿ ನಾನು ಅ.ನ. ಕೃಷ್ಣರಾಯರು, ಬೀಚಿ, ಎಂ.ರಾಮಮೂರ್ತಿ ಅವರಂತಹ ಹಿರಿಯ ಸಾಹಿತಿಗಳಿಂದ ಪ್ರಭಾವಿತನಾಗಿದ್ದೆ. ಆಗ ಬೀಚಿಯವರೊಂದಿಗೆ ನಾನು ಕಳೆಯುತ್ತಿದ್ದ ಅನೇಕ ಮಧುರ ಕ್ಷಣಗಳು ಇಂದಿಗೂ ನನಗೆ ಚೆನ್ನಾಗಿ ನೆನಪಿದೆ. ಈ ಸಂಪರ್ಕದಿಂದಾಗಿ ನಾನು ಬೀಚಿಯವರ ನಿಕಟವರ್ತಿಗಳಲ್ಲಿ ಒಬ್ಬನಾಗಿದ್ದೆ ಎಂಬ ಹೆಮ್ಮೆ ಈಗಲೂ ನನಗಿದೆ. ಹೀಗಾಗಿ ನನ್ನ ಆತ್ಮೀಯ ಸ್ನೇಹಿತರೂ, ಸಾಹಿತ್ಯ ಸಂಸ್ಕೃತಿಗಳ ಪೋಷಕರೂ

ಆದ ಜಿ.ಎಸ್. ವಿಶ್ವನಾಥನ್ ಅವರು ಮತ್ತು ಕರ್ನಾಟಕ ಕಂಡ ಅತ್ಯಂತ ಪರಿಶುದ್ಧ ರಾಜಕಾರಣಿಗಳಲ್ಲಿ ಒಬ್ಬರಾದ ಕಡಿದಾಳ್ ಮಂಜಪ್ಪನವರು ಬೀಚಿಯವರ ನೆನಪಿನಲ್ಲಿ 'ಬೀಚಿ ಬಳಗ' ಎಂಬ ಅನೌಪಚಾರಿಕ ಗುಂಪೊಂದನ್ನು ಕಟ್ಟಿ ಪ್ರತಿ ಡಿಸೆಂಬರ್‌ನಲ್ಲಿ ಅವರ ಸ್ಮರಣಾರ್ಥವಾಗಿ ಏನಾದರೂ ಒಂದು ಚಟುವಟಿಕೆಯನ್ನು ಹಮ್ಮಿಕೊಳ್ಳಬೇಕೆಂದು ಪ್ರಸ್ತಾಪಿಸಿದಾಗ ನಾನು ಸಂತೋಷದಿಂದ ಆ ಗುಂಪಿನ ಸದಸ್ಯನಾಗಲು ಒಪ್ಪಿಕೊಂಡೆ. ಆ ಬೀಚಿ ಬಳಗದ ಪ್ರಮುಖ ರೂವಾರಿಗಳಲ್ಲಿ ಒಬ್ಬರು ಸರಿತಾ ಅವರು. ಆಕೆ ಬೀಚಿಯವರ ಸೋದರಿ ಎಂದು ನನಗೆ ತಿಳಿದಿದ್ದು ಆಗಲೆ.

ಸರಿತಾ ಅವರು ಸ್ನೇಹಜೀವಿ, ವಿಶ್ವಾಸಮಯಿ, ಅವರು ಒಮ್ಮೆ ತಮ್ಮ ಪತಿ ಕುಸುಮಾಕರ ದೇಸಾಯಿ ಅವರನ್ನು ನನಗೆ ಪರಿಚಯ ಮಾಡಿಕೊಟ್ಟರು. ಅದು ನಾನು ಪ್ರಮುಖ ಆಂಗ್ಲ ದಿನಪತ್ರಿಕೆ "ಇಂಡಿಯನ್ ಎಕ್ಸ್‌ಪ್ರೆಸ್"ನಲ್ಲಿ ಸುದ್ದಿವಿಭಾಗದ ಮುಖ್ಯಸ್ಥನಾಗಿದ್ದ ಕಾಲ. ೧೯೭೫ರಲ್ಲಿ ಇಂದಿರಾ ಗಾಂಧಿಯವರು ದೇಶದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಿದಾಗ ನಮ್ಮ ಪತ್ರಿಕೆ ಅವರ ವಿರುದ್ಧ ಭೀಕರ ಸಮರವನ್ನೇ ಸಾರಿತು. ಈ ಸಮರದಲ್ಲಿ "ಇಂಡಿಯನ್ ಎಕ್ಸ್‌ಪ್ರೆಸ್" ಒಡೆಯ ರಾಮನಾಥ ಗೋಯಂಕಾ ಅವರ ಪರವಾಗಿ ಉತ್ಸಾಹದಿಂದ ನಿರ್ಭಿಡೆಯಿಂದ ಪಾಲುಗೊಂಡಿದ್ದು ನನ್ನ ಸುಕೃತ ಎಂದೇ ಹೇಳಬೇಕು. ೧೯೭೮ರಲ್ಲಿ ಇಂದಿರಾ ಗಾಂಧಿಯವರು ನಮ್ಮ ರಾಜ್ಯದ ಚಿಕ್ಕಮಗಳೂರು ಕ್ಷೇತ್ರದಿಂದ ಲೋಕಸಭೆಗೆ ಉಪಚುನಾವಣೆಯಲ್ಲಿ ಸ್ಪರ್ಧಿಸಿದಾಗ ಆ ವೇಳೆಗಾಗಲೇ ತುರ್ತು ಪರಿಸ್ಥಿತಿಯಲ್ಲಿ ಇಂದಿರಾ ಗಾಂಧಿಯವರ ಅವಕೃಪೆಗೆ ಪಾತ್ರರಾಗಿ ಅಪಾರ ಆರ್ಥಿಕ ಹಾನಿ ಮತ್ತು ಮಾನಸಿಕ ಕ್ಲೇಶಗಳನ್ನು ಅನುಭವಿಸಿದ್ದ ಗೋಯಂಕಾ ಅವರು ಈ ಚರಿತ್ರಾರ್ಹ ಉಪಚುನಾವಣೆಯಲ್ಲಿ ಆಕೆಯ ವಿರುದ್ಧ ಟೊಂಕ ಕಟ್ಟಿ ನಿಂತು 'ಇಂಡಿಯನ್ ಎಕ್ಸ್‌ಪ್ರೆಸ್' ಮತ್ತು "ಕನ್ನಡ ಪ್ರಭ" ಪತ್ರಿಕೆಗಳ ಮೂಲಕ ಪತ್ರಿಕಾ ಸಮರವನ್ನು ಸಾರಿ ನನ್ನನ್ನು ತಮ್ಮ ಪಡೆಯ ಮುಂಚೂಣಿಯಲ್ಲಿ ನಿಲ್ಲಿಸಿದಾಗ ನನಗಾದ ಅನುಭವ ಅನನ್ಯವಾದದ್ದು. ಒಂದು ತಿಂಗಳಿಗೂ ಮೀರಿ ನಾನು ಮತ್ತು ನನ್ನ ಸೈನ್ಯ ಎಬ್ಬಿಸಿದ ಧೂಳು ಕರ್ನಾಟಕದ ಪತ್ರಿಕಾ ರಂಗದಲ್ಲಿ ಒಂದು ಮೈಲಿಗಲ್ಲೆನಿಸಿತು. ಕುಸುಮಾಕರ ದೇಸಾಯಿ ಮತ್ತು ಅವರಂತಹ ಎಷ್ಟೋ ಆತ್ಮಾಭಿಮಾನಿಗಳು, ಆದರ್ಶವಾದಿಗಳು ಮತ್ತು ಪ್ರಜಾತಂತ್ರ ವ್ಯವಸ್ಥೆಯ ಆರಾಧಕರು, ಒಬ್ಬ ನಿಷ್ಠ ಪತ್ರಕರ್ತನನ್ನಾಗಿ ನನ್ನನ್ನು ಗುರುತಿಸಿದ್ದೇ ಆ ಪರ್ವಕಾಲದಲ್ಲಿ.

ಸರಿತಾ ಅವರು ಕುಸುಮಾಕರ ದೇಸಾಯಿಯವರನ್ನು ನನಗೆ ಪರಿಚಯ ಮಾಡಿಸಿದಾಗ ಅವರು ನನಗೆ ಅಷ್ಟು ವಿಶ್ವಾಸಪೂರ್ವಕವಾಗಿ, ಸಕಾರಾತ್ಮಕವಾಗಿ ಸ್ಪಂದಿಸಿದ್ದಕ್ಕೆ ಈ ಹಿನ್ನೆಲೆಯೇ ಪ್ರಮುಖ ಕಾರಣವಾಗಿದ್ದಿರಬಹುದು. ಆದರೆ ಅವರು ಆಗ ಕಲಬುರ್ಗಿಯಲ್ಲಿ ವಾಸವಾಗಿದ್ದು ನನ್ನ ಕಾರ್ಯಕ್ಷೇತ್ರ ಪ್ರಧಾನವಾಗಿ ಬೆಂಗಳೂರೇ ಆಗಿದ್ದರಿಂದ ಕೂಡ ನಮ್ಮಿಬ್ಬರ ನಡುವೆ

ವೈಯಕ್ತಿಕವಾಗಿ ಗಾಢವಾದ ನಂಟು ಬೆಳೆಯಲು ಸಾಧ್ಯವಾಗಲಿಲ್ಲ ಎಂದು ಕಾಣುತ್ತದೆ.

ಆದರೂ ಕುಸುಮಾಕರ ದೇಸಾಯಿಯವರು ಬಡಪೆಟ್ಟಿಗಾಗಿ ಯಾರನ್ನೂ ತಲೆಗೆ ಹಚ್ಚಿಕೊಳ್ಳುತ್ತಿರಲಿಲ್ಲ ಎನ್ನುವುದೂ ನಿಜ. ಮೌಲ್ಯಗಳಿಗಾಗಿಯೇ ಬದುಕಿದ ಅವರು ತಾವು ಬೆಳೆಸಿದ ಗೆಳೆತನದಲ್ಲಿಯೂ ಕೆಲವು ಮೌಲ್ಯಗಳನ್ನು ಅಪೇಕ್ಷಿಸಿದ್ದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಇಂತಹ ಮೌಲ್ಯಗಳನ್ನು ಅವರು ನನ್ನೊಂದಿಗಿನ ಸಂಬಂಧದಲ್ಲಿಯೂ ಗುರುತಿಸಿದ್ದೇ ನನ್ನ ಭಾಗ್ಯ. ನಮ್ಮಿಬ್ಬರ ಪಾರದರ್ಶಕತೆ ನಮ್ಮ ಗೆಳೆತನಕ್ಕೆ ಭದ್ರವಾದ ಕೊಂಡಿಯನ್ನು ಬೆಸೆಯಿತು ಎಂದು ನನಗೀಗ ತೋರುತ್ತದೆ. ಪತ್ರಿಕೆಗಳಲ್ಲಿ ನನ್ನ ಲೇಖನಗಳನ್ನು, ಅಂಕಣಗಳನ್ನು ಸೂಕ್ಷ್ಮವಾಗಿ ಗಮನಿಸುತ್ತ ಬಂದ ಅವರು, ಪ್ರತಿ ಸಾರಿಯೂ ನನ್ನ ಅಭಿಪ್ರಾಯಗಳಿಗೆ, ಅನಿಸಿಕೆಗಳಿಗೆ, ವಿಶ್ಲೇಷಣೆಗಳಿಗೆ ತಲೆದೂಗದಿದ್ದರೂ ನನ್ನ ಪ್ರಮಾಣಿಕತೆಯ ಬಗ್ಗೆ ಎಂದಿಗೂ ಚಕಾರವೆತ್ತಿದವರಲ್ಲ. ಅಷ್ಟೇ ಯಾಕೆ, ರಾಮಕೃಷ್ಣ ಹೆಗಡೆಯವರು ಅವರ ಆತ್ಮೀಯರು. ರಾಜಕಾರಣದಲ್ಲಿ ಹೆಗಡೆಯವರು ದೇಸಾಯಿಯವರ ಆರಾಧ್ಯ ದೈವವೆಂದರೂ ಉತ್ಪ್ರೇಕ್ಷೆಯಲ್ಲ. ೧೯೮೩ರಲ್ಲಿ ಹೆಗಡೆಯವರು ಕರ್ನಾಟಕದ ಮುಖ್ಯಮಂತ್ರಿಯಾಗಿ ಅವತರಿಸಿದಾಗ ಇಡೀ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿಯೂ ರಾಜಕೀಯ ಮತ್ತು ಸಾರ್ವಜನಿಕ ವಲಯಗಳಲ್ಲಿ ವಿದ್ಯುತ್ ಸಂಚಾರವಾಗಿದ್ದು ಎಲ್ಲರಿಗೂ ತಿಳಿದಿದ್ದೆ. ಹೆಗಡೆಯವರು ಪ್ರತಿಪಾದಿಸಿದ ಮೌಲ್ಯಾಧಾರಿತ ರಾಜಕಾರಣದ ಪರಿಕಲ್ಪನೆ ದೇಶದ ಉದ್ದಗಲ ತನ್ನ ಪ್ರಭಾವವನ್ನು ಬೀರಿದ್ದು ಕೂಡ ಹುಸಿಯೇನಲ್ಲ. ಅಂದಿನ ದಿನಗಳಲ್ಲಿ ಪತ್ರಿಕಾ ಮಾಧ್ಯಮ ಕೂಡ ಹೆಗಡೆಯವರ ಕರಿಶ್ಮಾಗೆ ಮಾರು ಹೋಗಿದ್ದೂ ಹೌದು. ಅಂದಿನ ಆ ಪರಿಸರದಲ್ಲಿ ಹೆಗಡೆಯವರ ರಾಜಕೀಯ ಮತ್ತು ಆಡಳಿತಾತ್ಮಕ ನಿರ್ಧಾರಗಳನ್ನು, ಹೇಳಿಕೆಗಳನ್ನು, ಕಾರ್ಯವೈಖರಿಯನ್ನು ಈ ಕರಿಶ್ಮಾದ ಆಯಸ್ಕಾಂತದಿಂದ ದೂರ ನಿಂತೇ ವಸ್ತುನಿಷ್ಠವಾಗಿ, ನಿರ್ದಾಕ್ಷಿಣ್ಯವಾಗಿ ವಿಶ್ಲೇಷಿಸಿದ ಕೆಲವೇ ಪತ್ರಕರ್ತರಲ್ಲಿ ನಾನೂ ಒಬ್ಬನಾಗಿದ್ದೆ ಎಂದು ಸಹಜವಾದ ಹೆಮ್ಮೆಯಿಂದಲೇ ಇಂದೂ ಹೇಳಿಕೊಳ್ಳುತ್ತೇನೆ. ಅಂದಿನ ದಿನಗಳಲ್ಲಿ ಹೆಗಡೆಯವರ ಅತ್ಯಂತ ನಿಕಟವರ್ತಿಗಳಾಗಿದ್ದ ಕುಸುಮಾಕರ ದೇಸಾಯಿಯವರು ಇನ್ನಿತರ ಕೆಲವು ರಾಜಕೀಯ ವ್ಯಕ್ತಿಗಳಂತೆ ನನ್ನ ವಿರುದ್ಧ ಹೆಗಡೆಯವರ ಕಿವಿ ಕಚ್ಚದೆ ನನ್ನ ವಸ್ತುನಿಷ್ಠೆಯನ್ನು ಮೆಚ್ಚಿಕೊಂಡಿದ್ದು ನನ್ನ ವೃತ್ತಿ ಜೀವನದಲ್ಲಿ ನಾನು ಎಂದೂ ಮರೆಯಲಾಗದ ಅನುಭವ. ದೇಸಾಯಿಯವರ ಮತ್ತು ನನ್ನ ನಡುವೆಯ ಗೆಳೆತನ ಇನ್ನಷ್ಟು ಗಟ್ಟಿಯಾಗಿ ಬೆಳೆಯುವುದಕ್ಕೆ ಇದೂ ಒಂದು ಕಾರಣವಾಯಿತು ಎನ್ನುವುದು ನನಗೆ ಇನ್ನೂ ಒಂದು ಹೆಮ್ಮೆ. ನಾವು ಅಪರೂಪಕ್ಕೆ ಭೇಟಿಯಾದ ಸಂದರ್ಭಗಳಲ್ಲಿ ಈ ಪರಸ್ಪರ ನಂಬಿಕೆ ಮತ್ತು ವಿಶ್ವಾಸ ಎಷ್ಟರಮಟ್ಟಿಗೆ ಬೆಳೆಯಿತೆಂದರೆ ದೂರದರ್ಶನದ ಬೆಂಗಳೂರು ಕೇಂದ್ರ ತನ್ನ 'ಚಂದನ'ವಾಹಿನಿಯ 'ಪ್ರಸ್ತುತ' ಕಾರ್ಯಕ್ರಮದಲ್ಲಿ ದೇಸಾಯಿಯವರೊಂದಿಗೆ ನೇರವಾದ ಸಂದರ್ಶನವನ್ನು ಪ್ರಸಾರ ಮಾಡಲು

ತೀರ್ಮಾನಿಸಿದಾಗ ಈ ಸಂದರ್ಶನವನ್ನು ನಾನೇ ನಡೆಸಿಕೊಡಬೇಕೆಂದು ದೇಸಾಯಿಯವರು ಪಟ್ಟು ಹಿಡಿದರಂತೆ. ಸಂದರ್ಶನ ಕಾರ್ಯಕ್ರಮ ಸುಸೂತ್ರವಾಗಿ ಸ್ವಾರಸ್ಯಕರವಾಗಿ ನಡೆದ ನಂತರ ಅವರಿಗಾದ ಆನಂದ, ತೃಪ್ತಿ ಅಷ್ಟಿಷ್ಟಲ್ಲ. "ನೀವೇ ಈ ಸಂದರ್ಶನವನ್ನು ನಡೆಸಿಕೊಡಬೇಕೆಂಬ ನನ್ನ ಹಟಕ್ಕೆ ನೀವು ನ್ಯಾಯ ಸಲ್ಲಿಸಿದಿರಿ" ಎಂದು ಮುಕ್ತವಾಗಿ ಪ್ರಶಂಸಿಸಿದ ದೇಸಾಯಿಯವರು ಬಹಳ ಸಮಯದವರೆಗೆ ಈ ಕಾರ್ಯಕ್ರಮದ ಬಗ್ಗೆಯೇ ಬಂಧುಮಿತ್ರರಲ್ಲಿ ಉತ್ಸಾಹದಿಂದ ಪ್ರಸ್ತಾಪಿಸಿದ್ದರು.

ಅದಕ್ಕೂ ಮುಂಚೆ ದೇಸಾಯಿಯವರೊಂದಿಗೆ ನನಗಾದ ಒಂದು ಅನುಭವ ನನ್ನ ಮಟ್ಟಿಗೆ ಬಹಳ ಸ್ವಾರಸ್ಯಕರವಾಗಿತ್ತು. ನಾಲ್ಕು ವರ್ಷಗಳ ಹಿಂದೆಯೋ ಏನೋ ಸರಿತಾ ಕುಸುಮಾಕರ ದೇಸಾಯಿಯವರ ಕಿರುಕಾದಂಬರಿ "ಕಾಶಿಯಲ್ಲಿ ಕಂಡದ್ದೇನು?" ವನ್ನು ದೂರದರ್ಶನದಲ್ಲಿ ಧಾರಾವಾಹಿಯಾಗಿ ಚಿತ್ರಿಸಬೇಕೆಂಬ ಆಶಯದಿಂದ ನಾನು ಮತ್ತು ನಿರ್ದೇಶಕ ಕಟ್ಟೆ ರಾಮಚಂದ್ರ ಆಕೆಯೊಂದಿಗೆ ಸಮಾಲೋಚನೆಗಾಗಿ ಕಲಬುರ್ಗಿಗೆ ಪ್ರಯಾಣ ಮಾಡಿದೆವು. ಕಲಬುರ್ಗಿ ರೈಲು ನಿಲ್ದಾಣದಲ್ಲಿ ನಾವು ಇಳಿದಾಗ ನನಗೊಂದು ಆಘಾತ ಕಾದಿತ್ತು. ನಡುರಾತ್ರಿಯಲ್ಲಿ ಯಾರೋ ನನ್ನ ಸೂಟ್‌ಕೇಸನ್ನು ಅಪಹರಿಸಿದ್ದರು. ನನ್ನ ಬಟ್ಟೆಗಳೆಲ್ಲ ಸೂಟ್‌ಕೇಸಿನಲ್ಲಿಯೇ ಇದ್ದುದರಿಂದ ನಾನು ಉಟ್ಟ ಬಟ್ಟೆಯಲ್ಲಿಯೇ ಎರಡು ದಿನ ಕಲಬುರ್ಗಿಯಲ್ಲಿ ಕಾಲ ಕಳೆಯುವ ವಿಚಿತ್ರ ಸ್ಥಿತಿ ಒದಗಿ ಬಂತು. ಆಗ ನಾವು ಉಳಿದುಕೊಳ್ಳಲು ವ್ಯವಸ್ಥೆಯಾಗಿದ್ದು ಕುಸುಮಾಕರ ದೇಸಾಯಿಯವರ ಮನೆಯಲ್ಲಿಯೆ. ಆಗ ಸರಿತಾ ಅವರು ವಿಧಾನ ಪರಿಷತ್ತಿನ ಸದಸ್ಯೆಯಾಗಿದ್ದುದರಿಂದ ಪೋಲೀಸರು ತುಂಬಾ ವಿಧೇಯರಾಗಿಯೇ ನಮ್ಮ ದೂರನ್ನು ದಾಖಲಿಸಿಕೊಂಡರೂ ನನ್ನ ಸೂಟ್‌ಕೇಸ್ ಪತ್ತೆಯೇ ಆಗಲಿಲ್ಲವೆನ್ನುವುದು ಬೇರೆಯ ಮಾತು. ಆದರೆ ಕುಸುಮಾಕರ ದೇಸಾಯಿಯವರು ಈ ಸಂದಿಗ್ಧದಲ್ಲಿ ನೀಡಿದ ಅಮೋಘ ಸಹಕಾರವನ್ನು ಮಾತ್ರ ನಾನೆಂದೂ ಮರೆಯಲಾರೆ. ಅವರ ಬಟ್ಟೆಗಳನ್ನೇ ನಾನು ಎರಡು ದಿನಗಳು ತೊಡುವುದೇ ನನ್ನ ಸಮಸ್ಯೆಗೆ ಕಾಸು ಖರ್ಚಿಲ್ಲದ ಪರಿಹಾರ ಎಂದ ಅವರು ಅವರ ತೊಡಿಗೆಗಳನ್ನು ನನಗಿತ್ತರು. ಸ್ವಾರಸ್ಯವೆಂದರೆ ನಾನು ಅದೇ ಪ್ರಥಮ ಬಾರಿಗೆ ಖಾದಿ ತೊಟ್ಟಿದ್ದು. ದೇಸಾಯಿಯವರು ಅಪ್ಪಟ ಖಾದಿಧಾರಿಗಳು. ಬಾಲ್ಯದಲ್ಲಿಯೇ ಅವರ "ಕಾಕಾ"ರಿಂದ ಪ್ರೇರಿತರಾಗಿ ಖಾದಿ ಉಡಲು ಪ್ರಾರಂಭಿಸಿದ ಅವರು ತಮ್ಮ ಜೀವನದ ಕೊನೆಯುಸಿರಿರುವರೆಗೂ ಗಿರಣಿಯಲ್ಲೇ ತಯಾರಾದ ವಸ್ತ್ರಗಳನ್ನು ಉಡಲಿಲ್ಲ. ನಿಜ ಹೇಳುವುದಾದರೆ ಎರಡು ದಿನಗಳು ನಾನು ಖಾದಿ ತೊಟ್ಟಾಗ ನನ್ನ ವ್ಯಕ್ತಿತ್ವವೇ ಸಂಪೂರ್ಣ ಬದಲಾದ ಅನುಭವವಾಯಿತು.

ಆದರೆ ದೇಸಾಯಿಯವರಿಗೆ ಇಂತಹ ಕ್ಷಣಿಕ ಅನುಭವಗಳಿಂದ ಯಾವ ಹೊಸ ಜೀವನದರ್ಶನವೂ ಆಗುವ ಶಕ್ಯವಿರಲಿಲ್ಲ. ನಾವು ನಂಬಿದ್ದನ್ನೇ ಮಾಡಿ ತೋರಿಸುವ ಅದಮ್ಯ

ಫಲ ಅವರದ್ದು. ದೇಸಾಯಿಯವರು ಶ್ರೀಮಂತ ಕುಟುಂಬದಲ್ಲಿ ಹುಟ್ಟಿದವರೂ ದೇಶದ ಸಲುವಾಗಿ ತಮ್ಮ ಸರ್ವಸ್ವವನ್ನೂ ಧಾರೆಯೆರೆದ ಸಾರ್ಥಕ ಹಿರಿಯರ ಸರ್ವೋತ್ಕೃಷ್ಟ ಆದರ್ಶಗಳ ನೆರಳಿನಲ್ಲಿಯೇ ಬೆಳೆದು ಬಂದ ಅವರು, ಹತ್ತಾರು ವರ್ಷಗಳ ಕಾಲ ಯಶಸ್ವಿಯಾಗಿ ವಕೀಲಿ ವೃತ್ತಿಯನ್ನು ನಡೆಸಿಕೊಂಡು ಬಂದರೂ ಅವರಾಗಲಿ, ಅಷ್ಟೇ ಯಶಸ್ವಿಯಾದ ವಕೀಲರೆನಿಸಿದ ಅವರ ಪತ್ನಿಯವರಾಗಲಿ ಎಂದೂ ಸಂಪತ್ತನ್ನು ಕಂಡವರಲ್ಲ. ಜೀವನದಲ್ಲಿ ಉನ್ನತ ಮೌಲ್ಯಗಳಿಗಾಗಿ ಪ್ರಾಪಂಚಿಕ ವೈಭವಗಳನ್ನು ಬದಿಗೊತ್ತಿದವರು ಅವರಿಬ್ಬರು. ಇಂತಹ ಆದರ್ಶಮಯ ಪರಂಪರೆಯನ್ನು ಬೆಳೆಸಿಕೊಂಡು ಬರುವಂತೆ ಭಗವಂತ ಅವರಿಗೆ ಸಂತಾನಭಾಗ್ಯವನ್ನೇ ನೀಡಲಿಲ್ಲ. ಆದರ್ಶ ದಾಂಪತ್ಯವೆನ್ನುವುದೊಂದಿದ್ದರೆ ಅದಕ್ಕೆ ಜ್ವಲಂತ ಉದಾಹರಣೆ ಕುಸುಮಾಕರ ದೇಸಾಯಿ ಮತ್ತು ಸರಿತಾರದ್ದು. ವಾಸ್ತವವಾಗಿ ಸರಿತಾ ಅವರನ್ನು ಸಾರ್ವಜನಿಕ ಜೀವನದಲ್ಲಿ ಮುಂದೆ ತಳ್ಳಿ ಆಕೆಯ ಯಶಸ್ಸಿನಲ್ಲಿ ಸಾರ್ಥಕ್ಯವನ್ನು ಕಂಡುಕೊಂಡ ಅಪರೂಪದ ಜೀವಿ ಅವರು - ಎಲೆ ಮರೆಯ ಕಾಯಿ, ಸರಿತಾ ಅವರನ್ನು ಕರೆಯುತ್ತಿದ್ದುದೇ 'ಬಾಸ್' ಎಂದು, ಆದರೆ ಕೇವಲ ತೋರಿಕೆಗಲ್ಲ. "ನಾನು ಕುಸುಮಾಕರ ಸರಿತಾ ದೇಸಾಯಿ" ಎಂದು ಯಾವಾಗಲೂ ಎದೆಯುಬ್ಬಿಸಿ ಹೇಳುತ್ತಿದ್ದರು. ಇದೇ ಅಪೂರ್ವ ಬಾಂಧವ್ಯವನ್ನೇ ಕಾಪಾಡಿಕೊಂಡು, ವೈಭವೀಕರಿಸಿಕೊಂಡು ಕೊನೆಯುಸಿರೆಳೆದರು.

ಕುಸುಮಾಕರ ದೇಸಾಯಿ ಅವರು ಅದ್ವಿತೀಯ ಕಾನೂನು ತಜ್ಞರು. ೧೯೬೦ರಲ್ಲಿಯೇ ಅವರು ಎಲ್.ಎಲ್.ಎಂ. ಪದವಿ ಪಡೆದಿದ್ದು ತುಲನಾತ್ಮಕ ಸಂವಿಧಾನ ಶಾಸ್ತ್ರ ಮತ್ತು ನ್ಯಾಯಶಾಸ್ತ್ರಗಳಲ್ಲಿ ಕಾನೂನಿನ ಬಗ್ಗೆ, ಸಂವಿಧಾನದ ಚೌಕಟ್ಟಿನ ಬಗ್ಗೆ ಅವರು ಆಡುತ್ತಿದ್ದ ಒಂದೊಂದು ಮಾತು ಕೂಡ ಒಂದು ಮೀಮಾಂಸೆಯಂತಿತ್ತು. ತರ್ಕಶಾಸ್ತ್ರ ಅವರ ಅಪರೂಪದ ವ್ಯಕ್ತಿತ್ವವನ್ನು ಪರಿಪೂರ್ಣವಾಗಿ ರೂಪಿಸಿತ್ತು. ಅದರಿಂದಾಗಿಯೇ ಅವರು ಜನತಾ ಪಕ್ಷ ಕರ್ನಾಟಕ ರಾಜಕೀಯ ಕ್ಷಿತಿಜದಲ್ಲಿ ವಿಜೃಂಭಿಸಿದಾಗ ಪಕ್ಷದ ಅಂದಿನ ದಿಗ್ಗಜಗಳಿಗೆಲ್ಲ ಮಾರ್ಗದರ್ಶಕರಾಗಿದ್ದರು.

ಆದರೆ ಸಾರ್ವಜನಿಕ ಜೀವನದಲ್ಲಿ ದೇಸಾಯಿಯವರು ಮಾಡಿದ ಸಾಧನೆಗಳಿಗೆ, ಆತ್ಮಸಮರ್ಪಣೆಗೆ ಅವರಿಗೆ ಲಭ್ಯವಾದ ಸಾರ್ವಜನಿಕ ಹುದ್ದೆಗಳು ನಗಣ್ಯ. ಈ ರಾಜ್ಯದ ಸಚಿವರಾಗಿ ಆ ಸ್ಥಾನಕ್ಕೆ ಅಪೂರ್ವವಾದ ಕೆಲವು ಆಯಾಮಗಳನ್ನು ಕೊಡಬಲ್ಲ ಪ್ರಚಂಡ ಶಕ್ತಿಯಿದ್ದ ಅವರಿಗೆ ತಮ್ಮ ಸುದೀರ್ಘ ಜೀವನದಲ್ಲಿ ಸಿಕ್ಕಿದ ಒಂದೇ ಸ್ಥಾನವೆಂದರೆ ಕರ್ನಾಟಕ ಜಲ ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷ ಸ್ಥಾನ ಮಾತ್ರ. ಆದರೆ ಮೂರು ವರ್ಷಗಳ ಕಾಲ ಈ ಜವಾಬ್ದಾರಿಯನ್ನು ನಿರ್ವಹಿಸಿದ ದೇಸಾಯಿಯವರಿಗೆ ಈ ಸ್ಥಾನ ನಗಣ್ಯವೆನಿಸಲಿಲ್ಲ. ಬದಲಾಗಿ ಅವರು ಇದೇ ಒಂದು ಸವಾಲೆಂಬಂತೆ ದುಡಿದು ನಾಡಿನ ಅನೇಕ ನಗರಗಳ ಕುಡಿಯುವ ನೀರಿನ ಕೊರತೆಯನ್ನು ನಿವಾರಿಸಿ ಭಗೀರಥ ಪ್ರಯತ್ನ ನಡೆಸಿ ಬಹಳ ವರ್ಷಗಳಿಂದ

ನೆನೆಗುದಿಗೆ ಬಿದ್ದ ಕಲಬುರ್ಗಿ ನಗರಕ್ಕೆ ಭೀಮಾ ನದಿಯ ನೀರನ್ನು ತರುವ ಬೃಹತ್ ಯೋಜನೆಯನ್ನು ಅನುಷ್ಠಾನಕ್ಕೆ ತಂದು ಲಕ್ಷಾಂತರ ಪ್ರಜೆಗಳ ಕೃತಜ್ಞತೆಗೆ ಪಾತ್ರರಾದರು.

ಆರೋಗ್ಯಭಾಗ್ಯದಿಂದಲೂ ವಂಚಿತರಾದವರು ಕುಸುಮಾಕರ ದೇಸಾಯಿಯವರು. ಸುಮಾರು ೧೭-೧೮ ಶಸ್ತ್ರಚಿಕಿತ್ಸೆಗಳಿಗೆ ಪಾತ್ರರಾಗಿದ್ದ ಅವರಿಗೆ ಒಂದಲ್ಲ ಎರಡು ಸಾರಿ ಹೃದಯದ ಬೈಪಾಸ್ ಸರ್ಜರಿಯೂ ಆಗಿತ್ತು. ಜೀವನಮದ್ದಕ್ಕೂ ಅವರನ್ನು ಪೀಡಿಸಿದ ಅನಾರೋಗ್ಯ ಒಂದು ಕಡೆಯಾದರೆ ತಮ್ಮ ಕುಟುಂಬದಲ್ಲಿನ ಕೆಲವು ಸಮಸ್ಯೆಗಳಿಂದ ಕೂಡ ಜರ್ಜರಿತರಾದ ಅವರು ತಮ್ಮ ಸೊಗಸಾದ ಹಾಸ್ಯಪ್ರಜ್ಞೆಯನ್ನಾಗಲಿ, ಜೀವನಾಸಕ್ತಿಯನ್ನಾಗಲಿ ಕಿಂಚಿತ್ತು ಕಳೆದುಕೊಳ್ಳದೆ ತಾವೂ ನಕ್ಕು ಇತರರನ್ನು ನಗಿಸಿ ಅದೇ ನಿರಾಳತೆಯಿಂದಲೇ ತಮ್ಮ ಜೀವನದಿಂದಲೂ ಮುಕ್ತಿ ಹೊಂದಿದರು.

ದೇಸಾಯಿಯವರ ಜೀವನದ ಇನ್ನೂ ಒಂದು ಹೆಚ್ಚಳ ಉಲ್ಲೇಖನಾರ್ಹ. ಕಟ್ಟಾ ಸ್ವಾತಂತ್ರ್ಯಯೋಧರ ಕುಟುಂಬದಲ್ಲಿ ಹುಟ್ಟಿ ಬೆಳೆದ ಅವರು ತಮ್ಮ ಆರಾಧ್ಯ ಮೂರ್ತಿ ಗಾಂಧೀಜಿಯವರನ್ನು ಒಂದು ಬಾರಿಯೂ ನೋಡಲಿಲ್ಲ. ಹಾಗೆಯೇ ಜಯಪ್ರಕಾಶ ನಾರಾಯಣರಿಂದ ಪ್ರಭಾವಿತರಾಗಿ ತುರ್ತು ಪರಿಸ್ಥಿತಿಯಲ್ಲಿ ಇಂದಿರಾ ಗಾಂಧಿಯವರ ವಿರುದ್ಧ ಸೆಣಸಿದ ಅವರು ಒಮ್ಮೆಯೂ ಜೆ.ಪಿ.ಯವರ ದರ್ಶನವನ್ನೂ ಪಡೆಯಲಿಲ್ಲ. ನಿಸ್ವಾರ್ಥ ಜೀವನವೆಂದರೆ ಇದು. ರಾಜಕೀಯ ರಂಗದಲ್ಲಂತೂ ಇಂತಹ ವಕಲಪ್ರರು ವಿರಳ. ದೇಸಾಯಿಯವರ ಪರಿಶುದ್ಧ ಸಾರ್ವಜನಿಕ ಜೀವನಕ್ಕೆ ಇನ್ನಷ್ಟು ಮೆರಗು ನೀಡುವುದೇ ಇಂತಹ ನಂಬಲಾಗದ ಸತ್ಯಗಳು.

ಸತ್ತು ಬದುಕಿದವರು

❀ ವೆಂಕಟೇಶ ಗುರುನಾಯಕ

೧೯೭೫ ತುರ್ತು ಪರಿಸ್ಥಿತಿಯ ಕರಾಳ ದಿನಗಳು. ಇಡೀ ದೇಶವೇ ಭಯದ ವಾತಾವರಣದಲ್ಲಿ ಮುಳುಗಿದ ದಿನಗಳು. ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಗೆ ಗ್ರಹಣ ಹಿಡಿದಂತಿತ್ತು.

ತುರ್ತು ಪರಿಸ್ಥಿತಿಯನ್ನು ವಿರೋಧಿಸಲು ಸಕಲ ತ್ಯಾಗಕ್ಕೂ ಸಿದ್ಧರಾಗಿ ಹೋರಾಟಕ್ಕಿಳಿದ ಸಂಸ್ಥೆಗಳಲ್ಲಿ ಆರ್.ಎಸ್.ಎಸ್. ಮುಂಚೂಣಿಯಲ್ಲಿತ್ತು. ಸಂಘದ ಪ್ರಚಾರಕನಾದ ನಾನು ಭೂಗತನಾಗಿದ್ದು ಹೋರಾಟವನ್ನು ಸಂಘಟಿಸುವುದರಲ್ಲಿದ್ದೆ. ಕಲಬುರ್ಗಿ ಜಿಲ್ಲೆ, ನಗರ ನನ್ನ ಕಾರ್ಯಕ್ಷೇತ್ರವಾಗಿತ್ತು. ಪೊಲೀಸ, ಜೈಲು ಎಂದರೆ ಭಯ ಬೀಳುತ್ತಿದ್ದ ಕಾಲದಲ್ಲಿ ಇದ್ದಕ್ಕಿದ್ದಂತೆ ಒಂದು ದಿನ ನಗರದ ಪ್ರಸಿದ್ಧ ವಕೀಲರೂ, ಸಮಾಜವಾದಿ ನೇತಾರರೂ ಆದ ಧೀಮಂತ ವ್ಯಕ್ತಿ ಶ್ರೀ ಕುಸುಮಾಕರ ದೇಸಾಯಿ·ಓರ್ವರೇ ಸತ್ಯಾಗ್ರಹ ಮಾಡಿ ಜೈಲು ಸೇರಿದ ಸುದ್ದಿ ತಿಳಿಯುತ್ತಲೇ ಭೂಗತರಾಗಿದ್ದ ನಮಗೆಲ್ಲ ರೋಮಾಂಚನವಾಯಿತು. ನಾನೂ ಜೈಲಿಗೆ ಹೋದಾಗ ನನ್ನ ಜೊತೆಗೆ ಈ ಆದರ್ಶ ವ್ಯಕ್ತಿ ಇರುವನಲ್ಲ ಎಂಬ ಧೈರ್ಯವೂ ಬಂದಿತು.

ಒಂದು ದಿನ ಆ ಸಮಯವೂ ಬಂದಿತು. ೧೯೭೫ ನವೆಂಬರ ೧೪ ರಂದು ನಾನು ಸತ್ಯಾಗ್ರಹ ಮಾಡಿ ಜೈಲಿಗೆ ಹೋದಾಗ ಮುಗುಳು ನಗೆಯಿಂದ ನನ್ನನ್ನು ಸ್ವಾಗತಿಸಿದ ಮೊದಲ ವ್ಯಕ್ತಿಯೇ ಅವರು. ಇದಕ್ಕೂ ಮೊದಲು ಮುಖತಃ ಅಷ್ಟೊಂದು ಪರಿಚಯವಿರದಿದ್ದರೂ ತತ್ವಸಿದ್ಧಾಂತದಲ್ಲಿ ಸಾಕಷ್ಟು ಬೇರೆಯಾಗಿದ್ದರೂ ನಾನು ಅವರೊಡನೆ ಕಳೆದ ನನ್ನ ಮೂರು ತಿಂಗಳುಗಳು ನಿಜಕ್ಕೂ ಅವಿಸ್ಮರಣೀಯ. ಯಾರಿಗೂ ಬಾಗದ ಧೈರ್ಯದ ಮೇರು, ಸಿದ್ಧಾಂತದೊಡನೆ ರಾಜಿ ಮಾಡಿ ಕೊಳ್ಳಲು ಒಪ್ಪದ ಮನೋಭಾವ, ಇವುಗಳಿಂದ ನಾನು ಅವರನ್ನು ಮೆಚ್ಚಿದ್ದಷ್ಟೇ ಅಲ್ಲ ಅತೀ ಆತ್ಮೀಯನಾದೆ. ಜೈಲಿನಲ್ಲೇ ಆ ವಾತಾವರಣದಲ್ಲಿ ಎಂದೂ ಖಿನ್ನತೆಯ ಮನೋಭಾವ ತೋರಿದವರಲ್ಲ. ಯಾರಿಂದಲೇ ಅನ್ಯಾಯವಾದರೂ ತಕ್ಷಣವೇ ಖಂಡಿಸುತ್ತಿದ್ದರು. ತುರ್ತು ಪರಿಸ್ಥಿತಿಯಲ್ಲಿ ಪ್ರಕಟವಾಗುವ ಗುಪ್ತ ಸಾಹಿತ್ಯವನ್ನು ನಾವು ಯಾವುದೋ ರೂಪದಲ್ಲಿ ಜೈಲಿಗೆತರಿಸುತ್ತಿದ್ದೆವು. ಅದನ್ನು ಆಸ್ಥೆಯಿಂದ ಮೊದಲು ಓದುವವರು ಅವರೇ.

ನನ್ನ ಮೂರು ತಿಂಗಳ ಅವಧಿ ಮುಗಿದು ನಾನು ಜೈಲಿನಿಂದ ಹೊರಬಂದರೂ ಅವರ ಶಿಕ್ಷೆಯ ಅವಧಿ ಇನ್ನೂ ಉಳಿದಿತ್ತು. ಬಾಗಿಲವರೆಗೆ ಕಳಿಸಲು ಬಂದ ಅನೇಕ ಸತ್ಯಾಗ್ರಹಿಗಳಲ್ಲಿ ಅವರು ನನಗೆ ನೀಡಿದ ಮಾತು ಅಲ್ಲ! ಅಲ್ಲ! ಉಪದೇಶ ನಿಜಕ್ಕೂ ಎಂಥವರಿಗೂ ಧೈರ್ಯ ಬರಿಸುವಂತಹದು.

ಸರ್ವಾಧಿಕಾರತ್ವ ಮಣ್ಣು ಪಾಲಾಗಿ, ತುರ್ತು ಪರಿಸ್ಥಿತಿ ಕೊನೆಗೊಂಡು ಸ್ವಚ್ಛಂದ ಗಾಳಿಯಲ್ಲಿ ಉಸಿರಾಡುತ್ತಿರುವಾಗ ನಾನು ಅವರ ಮನೆಗೆ ಹೋದೆ. ಅದೇ ಆತ್ಮೀಯತೆ ಅದೇ ಗಂಭೀರ ಧ್ವನಿ. ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯವರಿಗೆ ನನ್ನ ಪರಿಚಯ ಮಾಡಿಸುತ್ತಾ "ಇವರು ಗುರುನಾಯಕರು ನಮ್ಮವರು" ಏನೋ ನನ್ನ ಬಗ್ಗೆ ವಾತ್ಸಲ್ಯ ಪ್ರೀತಿ ತೋರಿಸಿ ಸ್ವತಃ ಸಾಹಿತಿಯಾದ ಶ್ರೀಮತಿ ಸರಿತಾ ಅವರಿಂದ ಒಂದು ಕಥೆಯನ್ನೂ ಬರೆಸಿಬಿಟ್ಟರು. ಹತ್ತು ಹದಿನೈದು ವರ್ಷಗಳ ದೀರ್ಘ ಸಂಪರ್ಕದಲ್ಲಿ ಹಲವಾರು ಸಲ ಅವರ ಮನೆಗೆ ಹೋದಾಗ, ಚಹಾದಿಂದ ಪ್ರಾರಂಭವಾಗಿ ೨-೩ ಗಂಟೆಗಳ ಕಾಲ ದೀರ್ಘ ಚರ್ಚೆ, ವಿಮರ್ಶೆ, ಅಭಿಪ್ರಾಯ, ಹರಟೆ ಸಮಯ ಹೋಗಿದ್ದೇ ಗೊತ್ತಾಗುತ್ತಿರಲಿಲ್ಲ. ನಾಸ್ತಿಕರಂತೆ ತೋರುತ್ತಿದ್ದರೂ ಇತ್ತೀಚಿನ ದಿನಗಳಲ್ಲಿ ಅವರಷ್ಟು ಆಸ್ತಿಕರೇ ಇಲ್ಲವೆನಿಸುತ್ತಿತ್ತು.

ಎಷ್ಟು ಬರೆದರೂ ಕಡಿಮೆಯೇ. ಇತ್ತೀಚೆಗೆ ಅನಾರೋಗ್ಯದ ನಿಮಿತ್ತ ಅವರು ಬೆಂಗಳೂರಿಗೆ ಹೋಗಿದ್ದೇ ಗೊತ್ತಾಗಿರಲಿಲ್ಲ. ಇದ್ದಕ್ಕಿದ್ದಂತೆ ಆಕಾಶವಾಣಿ, ದೂರದರ್ಶನ ಅವರ ಸಾವಿನ ದಾರುಣ ವಾರ್ತೆಯನ್ನು ತಿಳಿಸಿದಾಗ ಅಕ್ಷರಶಃ ಕುಸಿದು ಬೀಳುವಂತಾಯಿತು. ಭಗವಂತ ಸದ್ಗತಿಯನ್ನೀಯಲೆಂದು ಬೇಡಿಕೊಂಡು ಓರ್ವ ತತ್ವನಿಷ್ಠ, ಗಂಭೀರ, ಪ್ರಾಮಾಣಿಕ, ರಾಜಕಾರಣಿಯನ್ನು ಅಲ್ಲಲ್ಲ! ಓರ್ವ ಸಮಾಜ ನೇತಾರರನ್ನು ಕಳೆದುಕೊಂಡು ನಾನು ಬಡವಾಗಿದ್ದೇನೆ.

ಸಾತ್ವಿಕ ಚೇತನ

❀ ಪ್ರೊ. ಬಿ. ರಾಮಾಚಾರ್ಯ

ಅದ್ವೇಷ್ಟ ಸರ್ವಭೂತಾನಾಂ ಮೈತ್ರ: ಕರುಣವವಚ ನಿರ್ಮಮ: ನಿರಹಂಕಾರ: ಸಮಾದಾ:ಖ ಸಾಖಿಕ್ಷಮೀ:: ಈ ಗೀತಾ ಶ್ಲೋಕದಲ್ಲಿ ವ್ಯಕ್ತವಾದ ಸಾತ್ವಿಕ ಚೇತನ ಹಾಗೂ ಸಾಧಕನ ಗುಣಗಳನ್ನು ಅಳವಡಿಸಿಕೊಂಡ ನನ್ನ ಸಹೃದಯ ಸನ್ಮಿತ್ರ ದಿ. ಶ್ರೀ ಕುಸುಮಾಕರ ದೇಸಾಯಿ ಅವರನ್ನು ನಾನು ಸಮೀಪದಿಂದ ಕಂಡಿದ್ದೇನೆ ಹಾಗೂ ಅವರ ಬಹುಮುಖಿ ವ್ಯಕ್ತಿತ್ವವನ್ನು ತಮ್ಮ ಜೀವನದ ಉದ್ದಕ್ಕೂ ವಿವಿಧ ಕ್ಷೇತ್ರಗಳಲ್ಲಿ ಅವರು ಸೇವೆ ಸಲ್ಲಿಸುವಾಗ ಇಟ್ಟುಕೊಂಡ ಆದರ್ಶಗಳನ್ನು ಮೆಚ್ಚಿಕೊಂಡಿದ್ದೇನೆ. ಶಿಸ್ತು, ಸಮಯಪ್ರಜ್ಞೆ, ಚಿಂತನಶೀಲತೆ, ಸಾಮಾಜಿಕ ಕಳಕಳಿ ಹಾಗೂ ಸಮರ್ಪಣ ಭಾವ ಅವರಲ್ಲಿ ನಾನು ಕಂಡ ಶ್ರೇಷ್ಠ ಗುಣಗಳು.

ಗುಲ್ಬರ್ಗದ ನನ್ನ ಮೂರು ವರ್ಷಗಳ ವಾಸ್ತವ್ಯದಲ್ಲಿ ಶ್ರೀ ಕುಸುಮಾಕರ ದೇಸಾಯಿ ಅವರೊಡನೆ ಬಹುನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದೆನು. ೧೯೭೯ ರಲ್ಲಿ ನಾನು ರಾಯಚೂರಿನ ಲಕ್ಷ್ಮೀವೆಂಕಟೇಶ ದೇಸಾಯಿ ಕಾಲೇಜಿನಲ್ಲಿ ೧೦ ವರುಷ ಸೇವೆ ಸಲ್ಲಿಸಿದ ನಂತರ ಕಲ್ಬುರ್ಗಿಯ ನೂತನ ವಿದ್ಯಾಸಂಸ್ಥೆಯ ಪದಾಧಿಕಾರಿಗಳ ಇಚ್ಛೆಯಂತೆ ಹೊಸದಾಗಿ ಸ್ಥಾಪಿತವಾದ ನೂತನ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯನಾಗಿ ಮೂರು ವರ್ಷಗಳವರೆಗೆ ಕೆಲಸ ಮಾಡಿದೆ. ಆ ಸಂದರ್ಭದಲ್ಲಿ ನೂತನ ವಿದ್ಯಾಲಯ ಸಂಸ್ಥೆಗೆ ಕೆಲವು ಆಡಳಿತಾತ್ಮಕ ಸಮಸ್ಯೆಗಳು ಬಂದವು. ಆ ಸಂಸ್ಥೆಯ ಅಧ್ಯಕ್ಷರಾಗಿದ್ದ ದಿ. ಶ್ರೀ ಜಗನ್ನಾಥರಾವ್ ಅವರ ಇಚ್ಛೆ ಹಾಗೂ ಆದೇಶದಂತೆ ಶ್ರೀ ಕುಸುಮಾಕರ ದೇಸಾಯಿ ಅವರು ತಮ್ಮ ಕರ್ತವ್ಯಶಕ್ತಿ ಹಾಗೂ ರಾಜಕೀಯ ವರ್ಚಸ್ಸಿನಿಂದ ಆ ಸಮಸ್ಯೆಗಳನ್ನು ಸಮರ್ಪಕವಾಗಿ ಬಗೆಹರಿಸಿದರು. ನನ್ನ ಹಾಗೂ ಅವರ ನಿಕಟ ಸಂಪರ್ಕಕ್ಕೆ ಬಹುಮುಖ್ಯ ಕಾರಣವೆಂದರೆ ನನ್ನ ಧರ್ಮಪತ್ನಿ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿ ಹರಪನಹಳ್ಳಿಯವರು ಹಾಗೂ ಬಾಲ್ಯಸ್ನೇಹಿತರು. ನಾನು ವಿಜಾಪುರದಲ್ಲಿ ವಿಜಯ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕನಾಗಿದ್ದಾಗ ದೇಸಾಯಿ ದಂಪತಿಗಳು ನಮ್ಮ ಆತಿಥ್ಯವನ್ನು ಸ್ವೀಕರಿಸಿ ಸಂತೋಷಪಟ್ಟರು.

ಶ್ರೀ ಕುಸುಮಾಕರ ದೇಸಾಯಿ ಅವರು ನನಗಷ್ಟೇ ಅಲ್ಲದೆ ಅನೇಕರಿಗೆ ತುಂಬು ಹೃದಯದ ಮಿತ್ರರಾಗಿದ್ದರು. ಶ್ರೀಯುತರು ಸ್ವಾತಂತ್ರ್ಯ ಹೋರಾಟಗಾರರೂ, ರಾಜಕೀಯ ನೇತಾರರೂ, ಖ್ಯಾತನ್ಯಾಯವಾದಿಗಳೂ, ರಸಿಕರೂ, ಸಹೃದಯರೂ ಆಗಿದ್ದು ವೈವಿಧ್ಯಮಯ ಜೀವನ ನಡೆಸಿ ಗುಲ್ಬರ್ಗಾದ ಭಗೀರಥನೆಂದೇ ಖ್ಯಾತಿ ಪಡೆದಿದ್ದರು. ವಿವಿಧ ರಂಗಗಳಲ್ಲಿ ಅವರು ಅನೇಕ ಮಿತ್ರರೊಡನೆ ಸುಮಧುರ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಅವರು ಯಾರನ್ನೂ ದ್ವೇಷಿಸುತ್ತಿರಲಿಲ್ಲ. 'ಮಾವಿದ್ವಿಷಾವಹೈ' 'ದ್ವೇಷವೆಂದಿಗೂ ಬೇಡ ನಾವೆಲ್ಲರೂ ಸಹಬಾಳ್ವೆ ನಡೆಸೋಣ' ಎಂಬುದು ಅವರ ಜೀವನದ ಉಸಿರಾಗಿತ್ತು. ದೀನ ದಲಿತರನ್ನು ಅತ್ಯಂತ

ಪ್ರೀತಿಯಿಂದ ಕಾಣುವ ಹಾಗೂ ಸಾಧ್ಯವಿದ್ದಷ್ಟು ಸಹಾಯ ಮಾಡುವ ದೃಷ್ಟಿ, ಪ್ರವೃತ್ತಿ, ಹಾಗೂ ಕಾರ್ಯಾಚರಣೆ ಅವರದಾಗಿತ್ತು. ಅವರ ಹೃದಯ ಶ್ರೀಮಂತಿಕೆಯ ಹಲವಾರು ನಿದರ್ಶನಗಳನ್ನು ನಾನು ಕಂಡಿದ್ದೇನೆ.

ಅವರು ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಂತೆ ಆಧ್ಯಾತ್ಮಿಕ ಮೌಲ್ಯಗಳನ್ನೂ ಸಹ ಅರ್ಥಮಾಡಿಕೊಂಡಿದ್ದರು. ರಾಯಚೂರಿನಲ್ಲಿ ೧೯೯೪ ರಲ್ಲಿ ಶ್ರೀ ಶ್ರೀ ಪೇಜಾವರ ಶ್ರೀಪಾದರ ಮಾರ್ಗದರ್ಶನದಲ್ಲಿ ಜರುಗಿದ ತತ್ತ್ವಜ್ಞಾನ ಸಮ್ಮೇಳನಕ್ಕೆ, ಬಂದಿದ್ದರು. ಆ ಸಂದರ್ಭದಲ್ಲಿ ನಾವಿಬ್ಬರೂ ತತ್ತ್ವವಾದದ ವಿವಿಧ ಅಂಶಗಳ ಬಗ್ಗೆ ಮಾತನಾಡಿದೆವು. ಆ ಸಂದರ್ಭದಲ್ಲಿ ಭಗವದ್ಗೀತೆ ಹಾಗೂ ಭಾಗವತಗಳ ಬಗ್ಗೆ ಮಾತನಾಡುವಾಗ ಒಂದು ಶ್ಲೋಕವನ್ನು ನಿತ್ಯಪಾರಾಯಣ ಮಾಡಲು ಸೂಚಿಸಿದೆ. ಅದು ಹೀಗೆ.

‘ಯಾಚೇಹಂಕರುಣಾ ಸಿಂಧೂಹಾವಬಿಹಮಿದಂ ಅದೈನ್ಯ ದೇಹದಾರ್ಢ್ಯಂಚ ತ್ವತ್ಪದಾಂಬುಜ ಸದುತ್ಪತೀ’, ಪರಮಾತ್ಮನ ಕಾರುಣ್ಯ ಹಾಗೂ ಶ್ರೀ ರಾಘವೇಂದ್ರರಂತಹ ಗುರುಗಳ ಅನುಗ್ರಹವನ್ನು ಮನಃಪೂರ್ವಕ ನಾವು ಪ್ರಾರ್ಥಿಸಬೇಕಾದದ್ದು ಮೂರು- ಆ ದೇಹದಾರ್ಢ್ಯ ಹಾಗೂ ನಿತ್ಯ ಸುಖರೂಪನಾದ ಸ್ವರೂಪಾನಂದ ಆವಿರ್ಭಾವವನ್ನು ನೀಡುವ ಪರಮಾತ್ಮನ ಪಾದರತಿ.

“ಮರಣವು ಒಂದು ನಿಸರ್ಗದ ನಿಯಮ. ಸೂರ್ಯನು ಅಸ್ತಂಗತವಾಗುವಷ್ಟೇ ನಿಶ್ಚಿತ ಹಾಗೂ ಕ್ಲುಪ್ತವೂ ಕೂಡ. ಸಮಯಕ್ಕೆ ಸರಿಯಾಗಿ ಆಗಲೇಬೇಕು ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ” ಒಬ್ಬ ಅನುಭವಿ ಈ ಮಾತುಗಳನ್ನು ಹೇಳಿದ್ದಾನೆ. ಶ್ರೀ ಕುಸುಮಾಕರ ದೇಸಾಯಿ ಅವರದು ಬಹುಮುಖಿ ವ್ಯಕ್ತಿತ್ವ. ಕಲಬುರ್ಗಿಯ ಹಾಗೂ ಹೈದರಾಬಾದ್ ಕರ್ನಾಟಕದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯವನ್ನು ಮಾಡಿದ ಧೀಮಂತ ವ್ಯಕ್ತಿಯಾಗಿದ್ದರು. ಅವರು ತಮ್ಮ ಸಮಗ್ರ ಕ್ರಿಯಾಶೀಲ ಜೀವನದಲ್ಲಿ ಯಶಸ್ಸನ್ನುಗಳಿಸಲು ಎಲ್ಲರ ಸಹಕಾರ ತ್ಯಾಗ ವಿಶ್ವಾಸಗಳೇ ಕಾರಣವೆಂದು ನನ್ನ ಹತ್ತಿರ ಹೇಳುತ್ತಿದ್ದರು.

ಶ್ರೀಮತಿ, ಕುಸುಮಾಕರ ಅವರ ಸಾಹಿತ್ಯ ಕೃಷಿಗೆ ಸ್ಫೂರ್ತಿಯನ್ನು ಹಾಗೂ ಪ್ರೋತ್ಸಾಹವನ್ನು ನೀಡಿದವರು ಶ್ರೀ ಕುಸುಮಾಕರ ಅವರು. ಶುಭ ಸಮ್ಮೇಳನಗಳಿಗೆ ಇಬ್ಬರೂ ಕೂಡಿಯೇ ಹೋಗುತ್ತಿದ್ದರು. ಅವರದು ಸಾರ್ಥಕ ಸಹಬಾಳ್ವೆ. ಶ್ರೀ ಕುಸುಮಾಕರರು ಒಂದು ಶುಭನಕ್ಷತ್ರ. ಮನಸ್ಸಿನ ಪರಿಪಕ್ವತೆ, ಹೃದಯದ ಉದಾರತೆ ಹಾಗೂ ಚಿಂತನೆಯ ತಾತ್ತ್ವಿಕತೆ ಈ ಗುಣಗಳನ್ನು ಅವರ ಮಾಗಿದ ವ್ಯಕ್ತಿತ್ವದಲ್ಲಿ ನಾನು ಕಂಡುಕೊಂಡಿದ್ದೆನು.

ನಮ್ಮ ಇಂದಿನ ಯುವ ಪೀಳಿಗೆಗೆ ಅವರ ಹೋರಾಟದ ಸಾರ್ಥಕ ಜೀವನವು ಮತ್ತು ಅವರ ಆದರ್ಶಗಳು ಸಾಧನ ಸಿದ್ಧಿಗಳು ದಾರಿದೀಪವಾಗಲಿ ಹಾಗೂ ಸ್ಫೂರ್ತಿದಾಯಕವಾಗಲಿ.

ನಿಷ್ಠಾವಂತ ರಾಜಕಾರಣಿ

❀ ಶ್ರೀ ಕೇಶವರಾವ್ ಮಹಾಗಾಂವಕರ

"ಜೋ ಥೀ ಪ್ಯಾರ್ ಸೆ ಮಿಲಾ ಹಮ್ ಉಸೀ ಕೇ ಹೋಲಿಯೆ" ಎಂಬ ಹಿಂದಿ ಚಿತ್ರಗೀತೆ ನನ್ನ ಮನದಲ್ಲಿ ತಂತಾನೆ ಗುಂಯ್ ಗುಡತೊಡಗಿತು. ಕುಸುಮಾಕರ ದೇಸಾಯಿಯವರೇ ಆ ಹಾಡನ್ನು ಗುನುಗುನಿಸುತ್ತಿದ್ದಾರೇನೋ ಎಂದು ಭಾಸವಾಗತೊಡಗಿತು. ಅವರ ಮನೋವೃತ್ತಿಯೂ ಆ ಹಾಡಿನರ್ಥದಂತೆಯೇ ಇತ್ತು. ಅವರು ಗುಲಬರ್ಗಾದಲ್ಲಿ ನೆಲೆಸಿದಾಗ ಪ್ರತಿದಿನ ಬೆಳಿಗ್ಗೆ ತಮ್ಮ ಪ್ರೀತಿಯ ನಾಯಿ ಮರಿಯೊಂದಿಗೆ "ಸಂಜೀವನಿ" ಯಿಂದ ಹೊರಟು (ಮಹಬೂಬ್ ಗುಲ್ಶನ್) ವನದಲ್ಲಿ ತಿರುಗಾಡುತ್ತಿದ್ದರು. ಅಲ್ಲಿ ವಿಭಿನ್ನ ವರ್ಗದ ಜನರೆಲ್ಲರೂ ಬರುತ್ತಿದ್ದರು. ಸ್ವಲ್ಪ ದೂರ ಕ್ರಮಿಸಿದ ನಂತರ ಯಾರೇ ಎದುರು ಬರಲಿ, ಅವರನ್ನು ನಿಲ್ಲಿಸಿ, ಹಾಸ್ಯ ಮಾಡಿ, ಚಟಾಕಿ ಹಾರಿಸಿ, ನಗುನಗುತ್ತಾ ಮಾತನಾಡಿಸಿದ ನಂತರವೇ ಮುನ್ನಡೆಯುತ್ತಿದ್ದರು. ಆದಷ್ಟು ಜಾಗೆ ನಡೆದ ನಂತರ, ನಿವೃತ್ತ ವ್ಯಕ್ತಿಗಳು ಕೂಡುವ ಸ್ಥಳಕ್ಕೆ ಬಂದು ಅಲ್ಲಿ ಅವರೆಲ್ಲರೊಡನೆ ಬೆರೆತು, ತಮಾಷೆ ಮಾಡಿ, ರಂಜನೀಯವಾಗಿ ವಿಷಯಗಳನ್ನು ತಿಳಿಸುವುದು ಅವರ ಪ್ರತಿದಿನದ ರೂಢಿಯಾಗಿತ್ತು. ಆ ಮಾತುಕತೆಗಳಲ್ಲಿ ತಮ್ಮ ವಿಭಿನ್ನ ಕ್ಷೇತ್ರದ ಕೆಲಸ-ಕಾರ್ಯಗಳ ಅನುಭವವನ್ನು ಬಣ್ಣಿಸುತ್ತಿದ್ದರು.

ಗಂಭೀರವಾಗಿ, ಮುಖಸಿಂಡರಿಸಿಕೊಂಡು ಸುಮ್ಮನೆ ಕೂಡುವ ಸ್ವಭಾವದವರೇ ಅಲ್ಲ. ಯಾವತ್ತೂ ಗಲಿಬಿಲಿ ಮಾತನಾಡಿ, ಎಲ್ಲರನ್ನೂ ನಗಿಸಿ, ನಕ್ಕು ಸಂತಸಪಡುವ ಸ್ವಭಾವದವರಾಗಿದ್ದ ಕುಸುಮಾಕರ ಕೆಲವೇ ದಿನಗಳ ಹಿಂದೆ ಚಿರಮೌನಿಯಾದುದು ದುರ್ದೈವ.

ಈಗ ಅವರು ದೈಹಿಕವಾಗಿ ನಮ್ಮನ್ನಗಲಿರಬಹುದು. ಆದರೆ ಅವರೊಂದಿಗೆ ಕಳೆದ ಕ್ಷಣಗಳ ಮಧುರ ನೆನಪು ಇಂದಿಗೂ ನನ್ನ ಮನದಲ್ಲಿ ಹಚ್ಚಹಸಿರಾಗಿದೆ.

ನನ್ನ ಮತ್ತು ಅವರ ಪರಿಚಯವಾದುದು ಹೈದರಾಬಾದ್ ಸಂಸ್ಥಾನದಲ್ಲಿ, ರಜಾಕಾರರ ಹಾವಳಿ ಎದ್ದ ಸಂದರ್ಭದಲ್ಲಿ. ಆಗ ಅವರು ೧೯-೨೦ ವರ್ಷದವರಿರಬಹುದು. ಎಂತಹುದೇ ಕಠಿಣ ಪರಿಸ್ಥಿತಿಯನ್ನೂ ದಿಟ್ಟವಾಗಿ ಎದುರಿಸಬಲ್ಲ ಬಿಸಿರಕ್ತದ ಅವಶ್ಯಕತೆ ಆಗ ಅತ್ಯಗತ್ಯವಾಗಿತ್ತು.

ದೇಸಾಯಿಯವರಲ್ಲಿ ರಾಷ್ಟ್ರೀಯ ಭಾವನೆ ತುಂಬಿ ತುಳುಕುತ್ತಿತ್ತು. ಅವರು ಅಂದಿನ ಆ ವಿಷಮ ಪರಿಸ್ಥಿತಿಯಲ್ಲಿ ಅತ್ಯಂತ ಧೈರ್ಯದಿಂದ ಚಳವಳಿಯಲ್ಲಿ ಧುಮುಕಿದರು. ಭೂಗತರಾಗಿ ಸಾಹಸದಿಂದ ಹೋರಾಟ ನಡೆಸಿದ್ದಲ್ಲದೆ ಮಹಾರಾಷ್ಟ್ರದ ಗಡಿಭಾಗದ "ಕೇಸರ ಜವಳಗಾ" ಎಂಬ ಕುಗ್ರಾಮದಲ್ಲಿರುತ್ತಾ ಗೆರಿಲ್ಲಾ ದಾಳಿಗಳನ್ನು ಅನುಸರಿಸಿ ಆ ಸೀಮೆಯಲ್ಲಿದ್ದ ರಜಾಕಾರರೆಲ್ಲರನ್ನೂ ನಿರ್ಮೂಲಗೊಳಿಸಿದರು.

ಅವರಿಗೆ ಕೇವಲ ೧೭ ವರ್ಷವಿರುವಾಗಲೇ ರಾಷ್ಟ್ರೀಯ ಹೋರಾಟಕ್ಕಿಳಿದಿದ್ದರೆಂಬುದನ್ನು

ಕೇಳಿದ್ದೆ. ಅದರಲ್ಲೇನೂ ಆಶ್ಚರ್ಯವೂ ಇರಲಿಲ್ಲ. ಏಕೆಂದರೆ ಅವರು ಜನ್ಮ ತಳೆದಿದ್ದೇ ರಾಷ್ಟ್ರಕ್ಕಾಗಿ ಪ್ರಾಣ ಬಲಿಕೊಡುವಂಥವರ ಮನೆತನದಲ್ಲಿ. ಮನೆತನದ ಪರಂಪರೆಯನ್ನುಳಿಸಿಕೊಂಡು ಹೋಗುವುದು ಎಲ್ಲರಿಂದ ಸಾಧ್ಯವಿಲ್ಲ. ಅದು ಬಹು ವಿರಳ. ಅಂತಹ ವಿರಳರಲ್ಲಿ ಕುಸುಮಾಕರರು ಅಗ್ರಗಣ್ಯರು.

ಅವರ ಚಿಕ್ಕಪ್ಪ ಶ್ರೀರಾಘವೇಂದ್ರರಾವ, ಬ್ರಿಟಿಶರ ಆಡಳಿತಾವಧಿಯ ಅಸಹಕಾರ ಚಳವಳಿ ಸಂದರ್ಭದಲ್ಲಿ ಕುಕನೂರಿನ (ಈಗ ಕೊಪ್ಪಳ ಜಿಲ್ಲೆ) ಹೊರವಲಯದಲ್ಲಿ "ವಿದ್ಯಾನಂದ ಗುರುಕುಲ" ಎಂಬ ರಾಷ್ಟ್ರೀಯ ಶಾಲೆಯನ್ನು ಸ್ಥಾಪಿಸಿದರು. ಅವರಿಂದ ಪ್ರಭಾವಿತರಾದ ಕುಸುಮಾಕರ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಅಲ್ಲೇ ಪೂರೈಸಿದರು.

ಹಲವಾರು ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಅವರು ಅನೇಕ ವೇಳೆ ಸೆರೆಮನೆ ವಾಸ ಕೂಡ ಅನುಭವಿಸಿದರು. ಆದರೆ ಅವರೆಂದೂ ಹತಾಶರಾಗಲಿಲ್ಲ. ನಿರಾಶೆ, ಹತಾಶೆಗಳೆಂಬ ಶಬ್ದಗಳೇ ಅವರಲ್ಲಿರಲಿಲ್ಲ.

ಆಂಗ್ಲಭಾಷೆಯ ಮೇಲೆ ಅವರಿಗಿರುವ ಪ್ರಭುತ್ವ ಕಂಡ ಬ್ಯಾರಿಸ್ಟರ್ ಶ್ರೀಧರ ವಾಮನ ನಾಯಿಕ (೧೯೫೦ರಲ್ಲಿ ಹೈದರಾಬಾದ್ ಸಂಸ್ಥಾನವೂ ಭಾರತದಲ್ಲಿ ಸೇರ್ಪಡೆಯಾದ ನಂತರ ಸ್ವೀಕರಿಸಲಾದ ಸಂವಿಧಾನಾತ್ಮಕ ಮೊಟ್ಟಮೊದಲ ಲೋಕಸಭೆಯ ಸಂಸದ) ತಮ್ಮ ಆಪ್ತ ಕಾರ್ಯದರ್ಶಿಯನ್ನಾಗಿ ನೇಮಿಸಿಕೊಂಡರು. ಒಂದು ವರ್ಷ ಪರ್ಯಂತ ನಾಯಿಕ ಅವರ ಒಡನಾಟದಿಂದಾಗಿ ಲೋಕಸಭೆಯ ಗತಿವಿಧಿಗಳನ್ನು ನಿಕಟವಾಗಿ ಅರಿಯುವ ಸದವಕಾಶ ಕುಸುಮಾಕರರಿಗೆ ಲಭಿಸಿತು. ಅಲ್ಲಿಂದ ವಾಪಸ್ಸಾದ ಮೇಲೆ ಬ್ರಹ್ಮಪುರದಲ್ಲಿ ನಡೆಸಲಾಗುತ್ತಿದ್ದ ಗಣೇಶೋತ್ಸವ ಸಂದರ್ಭದಲ್ಲಿ 'ಅಣಕು ಪಾರ್ಲಿಮೆಂಟ್' ಎಂಬ ವಿನೂತನ ಕಾರ್ಯಕ್ರಮ ನಡೆಸಿಕೊಟ್ಟದ್ದು ನನಗಿನ್ನೂ ನೆನಪಿದೆ.

ರಾಜಕೀಯಕ್ಕೂ ನನಗೂ ಯಾವುದೇ ಸಂಬಂಧವಿಲ್ಲ- ಆದ್ದರಿಂದ ಅವರು ನನ್ನೊಡನೆ ರಾಜಕೀಯದ ಬಗ್ಗೆ ಯಾವುದೇ ಮಾತನಾಡುತ್ತಿದ್ದಿಲ್ಲ. ಅವರು ರಾಜಕೀಯದ ಸಿದ್ಧಾಂತಗಳನ್ನು, ವಾದ, ಪ್ರತಿವಾದಗಳನ್ನು ಚೆನ್ನಾಗಿ ಅರಿತಿದ್ದರು. ಆದರೆ ಎಂದೂ ಚುನಾವಣೆಗಿಳಿದಿರಲಿಲ್ಲ. ಒಂದೇ ಒಂದು ಬಾರಿ ಅವರು ಗುಲಬರ್ಗಾ ನಗರಸಭೆಯ ಸದಸ್ಯರಾಗಿದ್ದರು. ಹಾಗೆ ನೋಡಿದರೆ ೧೯೪೮ ರಲ್ಲಿಯೇ ಅವರು ಸಮಾಜವಾದಿ ಪಕ್ಷ ಸೇರಿದ್ದರು. ಪಕ್ಷದ ಯಾವುದೇ ಕೆಲಸವನ್ನು ಬಹು ಆಸಕ್ತಿಯಿಂದ ನಿರ್ವಹಿಸುತ್ತಿದ್ದರು. ಎಂದೆಂದೂ ಕುರ್ಚಿಗಾಗಿ ಅವರು ಹಂಬಲಿಸಲಿಲ್ಲ. ಅದು ಅವರ ವಿಶೇಷ ಗುಣ. ಕುರ್ಚಿಗಾಗಿ ಕೆಲವರಂತೂ ಪಕ್ಷಾಂತರ ರಾಗುವುದನ್ನೂ ನಾವು ನೋಡಿದ್ದೇವೆ, ನೋಡುತ್ತಿದ್ದೇವೆ. ಆದರೆ ಕುಸುಮಾಕರ ತಮ್ಮ ಪಕ್ಷಕ್ಕಾಗಿ ಎಷ್ಟೊಂದು ನಿಷ್ಠಾವಂತರಾಗಿದ್ದರೆಂದರೆ ಹೇಳತೀರದು, ಪಕ್ಷಕ್ಕಾಗಿ ಅವರ ಏಳ್ಗೆಗಾಗಿ ಪ್ರಾಮಾಣಿಕವಾಗಿ ದುಡಿದರು.

ರಾಷ್ಟ್ರದ ಸೇವೆ ಮಾಡಲು ಅವಕಾಶ ಸಿಗುತ್ತದೆಂದು ಅವರು ರಾಜಕೀಯ ಆರಿಸಿಕೊಂಡಿದ್ದರು. ರಾಷ್ಟ್ರದ ಸಮಸ್ಯೆಗಳನ್ನು ತಿಳಿದುಕೊಳ್ಳಲು, ಸ್ವಲ್ಪ ಮಟ್ಟಿಗಾದರೂ ಸಮಸ್ಯೆ ಪರಿಹಾರಕ್ಕಾಗಿ ದುಡಿಯಲು ಸಹಕಾರವಾಗಲೆಂದು ರಾಜಕೀಯದಲ್ಲಿದ್ದರು.

ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಕೆಲಸಗಳಲ್ಲಿದ್ದಷ್ಟೇ ಆಸಕ್ತಿ ಸಾಹಿತ್ಯ ಕ್ಷೇತ್ರದಲ್ಲೂ ಇತ್ತು. ಒಮ್ಮೆ ಅವರು 'ಟೊಳ್ಳು-ಬುರುಜು' ಎಂಬ ಕಥೆಯನ್ನು ಬರೆದಿದ್ದರಲ್ಲದೆ ಅದಕ್ಕೆ ತಕ್ಕ ಪುರಸ್ಕಾರವನ್ನೂ ಗಳಿಸಿದ್ದರು. ಆಂಗ್ಲ ಭಾಷೆಯ 'ಸಾಪ್ತಾಹಿಕ' 'ದೈನಿಕ' ಪತ್ರಿಕೆಗಳಾದ Freedom ಹಾಗೂ 'New life', 'Hyderabad City' ಯಲ್ಲಿ ಅಂಕಣಕಾರರು ಹಾಗೂ ಲೇಖಕರಾಗಿದ್ದರು. ಅದರಂತೆ ಕನ್ನಡದ ಪ್ರಸಿದ್ಧ ಮಾಸಿಕ 'ಕಸ್ತೂರಿ' ವಾರಪತ್ರಿಕೆ 'ಕರ್ಮವೀರ' ಮತ್ತು 'ಗೋಕುಲ'ಗಳಲ್ಲಿ ಅವರ ಅನೇಕ ಲೇಖನಗಳು ಪ್ರಕಟವಾಗಿವೆ.

ಆಂಗ್ಲ ಹಾಗೂ ಕನ್ನಡ ಸಾಹಿತ್ಯದ ಜೊತೆ ಜೊತೆಗೆ ಅವರು ಹಿಂದಿ ಸಾಹಿತ್ಯವನ್ನೂ ಓದುತ್ತಿದ್ದರು. ಹಿಂದಿಯ ಸುಪ್ರಸಿದ್ಧ ಉಪನ್ಯಾಸಕ ಶ್ರೀ ಭಗವತಿ ಚರಣ ವರ್ಮಾ ಅವರು ರಚಿಸಿದ ಆತ್ಮಕಥೆ 'ಧುಪ್ಪಲ್' ಕುಸುಮಾಕರರಿಗೆ ಅತ್ಯಂತ ಪ್ರಿಯವಾಗಿತ್ತು. ಸಂಘರ್ಷಪೂರ್ಣ ಜೀವನದ ಚಿತ್ರಣ ಅದರಲ್ಲಿ ತುಂಬ ಹೃದ್ಯವಾಗಿದೆ ಎನ್ನುತ್ತಿದ್ದ ಕುಸುಮಾಕರ ಅದನ್ನು ಕನ್ನಡದಲ್ಲಿ ಅನುವಾದಿಸಬೇಕೆಂಬ ಅಭಿಲಾಷೆ ಹೊಂದಿದ್ದರು.

'ಧುಪ್ಪಲ್' ಎಂಬುದರ ಅರ್ಥವೇನೆಂದು ತಿಳಿಯಲು ಅವರು ತುಂಬ ಉತ್ಸುಕರಾಗಿದ್ದರು. ಅದಕ್ಕಾಗಿ ನನ್ನನ್ನು ಕೇಳಿದರಾದರೂ ಹಿಂದಿ ಶಬ್ದಕೋಶದಲ್ಲಿ ಅದರರ್ಥ ದೊರೆಯಲೇ ಇಲ್ಲ. 'ಧುಪ್ಪಲ್' ಎಂದರೆ ಧೂಪ-ಬಿಸಿಲು, ಫಲ್-ಫಲ ಎಂಬ ಅರ್ಥ ಬರುತ್ತದೆ. ಧುಪ್ಪಲ್ ಎಂಬ ಆ ಪ್ರಸಿದ್ಧ ಉಪನ್ಯಾಸದ ಆರಂಭವೂ ಹಾಗೆಯೇಯಿದೆ. ಪ್ರತಿಕ್ಷಣ ಪರಿಸ್ಥಿತಿ ಬದಲಾಯಿಸುತ್ತಿರುತ್ತದೆ. ಪ್ರಖರ ಬಿಸಿಲಿನಲ್ಲಿ ನಡೆಯುತ್ತಿದ್ದ ಒಬ್ಬ ವ್ಯಕ್ತಿ ಇನ್ನೇನು ಬಿದ್ದೇ ಬಿಡುತ್ತಾನೆಂದುಕೊಳ್ಳುವಷ್ಟರಲ್ಲಿ ಕಪ್ಪಾದ ಮೋಡಗಳು ಹರಡಿ ಆ ವ್ಯಕ್ತಿಯ ಮೇಲೆ ನೆರಳನ್ನು ಹರಿಸಿ, ಆಸರೆ ನೀಡಿದಂತೆ ಭಾಸವಾಗುತ್ತದೆ. ಜೀವನದಲ್ಲಿ ವಿಧಿಯ ಆಟ ಒಮ್ಮೆ ಕ್ರೂರವಾದರೆ ಇನ್ನೊಮ್ಮೆ ಸುಖ ನೀಡುತ್ತದೆ. ಈ ಆಟ ನಿರಂತರ ನಡೆದೇಯಿರುತ್ತದೆ ಎಂಬುದೇ ಆ ಉಪನ್ಯಾಸದ ಕಥಾ ವಸ್ತು. ಕುಸುಮಾಕರ ಅವರಿಗೂ ತಮ್ಮ ಜೀವನದಲ್ಲಿ ಇಂತಹುದೇ ಅನುಭವವಾಗಿತ್ತು. 'ಧುಪ್ಪಲ್'ದಲ್ಲಿ, ಉಪನ್ಯಾಸಕರಾದ ತಮ್ಮದೇ ಜೀವನದ ಕುರಿತು ಬರೆದಿದ್ದಾರೇನೋ ಎನಿಸುತ್ತದೆ ಎಂದು ಅದನ್ನು ಓದಿದ ನಂತರ ಹೇಳಿದ್ದರು. 'ಧುಪ್ಪಲ್' ಅನುವಾದ ಮಾಡಬೇಕೆಂದುಕೊಂಡಿದ್ದ ಅವರು ಅದರ ಹಾಂಡುಲಿಪಿ ತಯಾರಿಸಿದ್ದರೆಂದು ಕೇಳಿದ್ದೆ. ಅವರ ಧರ್ಮಪತ್ನಿಯೂ ಒಬ್ಬ ಪ್ರಸಿದ್ಧ ಲೇಖಕಿಯಾಗಿದ್ದಾರಾದ್ದರಿಂದ ಆ ಹಾಂಡುಲಿಪಿಯನ್ನು ಅವಶ್ಯ ಪ್ರಕಟಿಸುವರೆಂಬ ವಿಶ್ವಾಸವಿದೆ. ಹಾಗಾದಲ್ಲಿ ಕುಸುಮಾಕರ ಅವರ ಕನಸು ನನಸಾಗುತ್ತದೆ.

ಸಾಹಿತ್ಯದಲ್ಲಿ ಅವರಿಗೆ ಎಷ್ಟು ಆಸಕ್ತಿಯಿತ್ತೋ ಅಷ್ಟೇ ಆಸಕ್ತಿ ಜ್ಯೋತಿಷಾಸ್ತ್ರ ಹಾಗೂ ಭವಿಷ್ಯ ತಿಳಿಯುವುದರಲ್ಲೂ ಇತ್ತು. ಹೆಸರುವಾಸಿಗಳಾದ ಕೆಲ ಜ್ಯೋತಿಷಾಸ್ತ್ರಜ್ಞರಿಂದ ತಮ್ಮ ಜನ್ಮಕುಂಡಲಿಯ ಬಗ್ಗೆ ತಿಳಿದುಕೊಳ್ಳುವ ಅವಕಾಶವೂ ಅವರಿಗೆ ದೊರಕಿತ್ತು. "ನನ್ನ ಕುಂಡಲಿಯಲ್ಲಿ ಏನಿದೆಯೋ ನನಗೆಲ್ಲ ಗೊತ್ತು" ಎನ್ನುತ್ತಿದ್ದರು. ಆದರೆ ಅವರು ಆ ಬಗ್ಗೆ ನನ್ನಲ್ಲಿ ಏನನ್ನೂ ಹೇಳಲಾಗಲಿಲ್ಲ. "ತಮ್ಮ ಜೀವನ ಸಮಸ್ಯೆಗಳ ಆಗರ ಹಾಗೂ ಅವುಗಳ ಪರಿಹಾರದಲ್ಲೇ ಆಯುಷ್ಯ ಕಳೆಯುತ್ತದೆ" ಎಂದು ಮಾತ್ರ ಸದಾ ಹೇಳುತ್ತಿದ್ದರು. ಅದಾವ ಕಟುಹೃದಯದ ಜ್ಯೋತಿಷಿ ಅವರಿಗೆ ಅದನ್ನು ಹೇಳಿದ್ದನೋ ನಾಕಾಣೆ. ನಮ್ಮಿಬ್ಬರ ರಾಶಿ ಒಂದೇ ಆಗಿದ್ದವು. ಶನಿ ಮತ್ತು ಗುರು ಗ್ರಹಗಳ ಸ್ಥಾನ ಬದಲಾವಣೆ ಹೊಂದಿದಾಗಲೆಲ್ಲ ನನ್ನನ್ನು "ಏನಪಾ ನಿಮ್ಮ ರಾಶಿಯ ಸಾಡೇಸಾತಿ ಮುಗೀತಾ? ನಿಮಗೇನೂ ಚಿಂತಿ ಇದ್ಹಂಗ ಕಾಣುದಿಲ್ಲಲಾ?" ಎಂದು ಕೇಳುತ್ತಿದ್ದರು. ಅದಕ್ಕೆ ನಾನು, "ರಾಶಿ ಒಂದಾದರೇನಾಯಿತು. ಉಳಿದ ಗ್ರಹಗಳು ಬೇರೆ ಬೇರೆ ಸ್ಥಾನದಲ್ಲಿರುವುದರಿಂದಾಗಿ ಜನ್ಮಲಗ್ನ ಕೂಡ ಬೇರೆಯಾಗಿರುತ್ತದೆ. ಏಕೆಂದರೆ ಒಂದೇ ರಾಶಿಯವರೆಲ್ಲರೂ ಒಂದೇ ರೀತಿಯ ಜೀವನ ನಿರ್ವಹಿಸುತ್ತಿರುವುದಿಲ್ಲ. ಅಲ್ಲವೆ?" ಎಂದು ಹೇಳುತ್ತಿದ್ದೆ. ಇದನ್ನು ಕೇಳಿ ನಕ್ಕು ಬಿಡುತ್ತಿದ್ದರು. "ನೀವು ಹಾಗೇ ಹೇಳುತ್ತೀರಿ ಎಂದು ನಂಗೊತ್ತಿತ್ತು" ಎನ್ನುತ್ತಿದ್ದರು. "ಇರಲಿ ಕುಂಡಲಿ, ಗ್ರಹಗಳು ಬೇರೆ ಏನೇ ಹೇಳಲಿ, ಕೇವಲ ಅವುಗಳ ಮೇಲೆ ನಾನು ಅವಲಂಬಿತನಲ್ಲ, ನನ್ನ ಭವಿಷ್ಯವೇನೆಂಬುದು ನನಗೆ ಗೊತ್ತು. ಆದರೂ ನನಗೆ ಚಿಂತೆಯಿಲ್ಲ. ಕೇವಲ ಕರ್ಮದ ಮೇಲೆ ನನಗೆ ನಂಬಿಕೆ, ನಿಷ್ಠೆಯಿದೆ. ನನ್ನ ಸಮಸ್ಯೆಗಳೆಲ್ಲವನ್ನು ಜಯಿಸುವಲ್ಲಿ ನಾನು ಸಫಲನಾಗುತ್ತೇನೆಂಬ ವಿಶ್ವಾಸ ನನಗಿದೆ' ಎನ್ನುತ್ತಿದ್ದರು. ಅವರ ಈ ಆತ್ಮವಿಶ್ವಾಸಯುಕ್ತ ಮಾತುಗಳನ್ನು ಕೇಳಿ ನಾನು ದಂಗಾಗುತ್ತಿದ್ದೆ.

ಸಿದ್ಧಾಂತವಾದಿಯಾಗಿದ್ದ ಅವರು ತಮ್ಮ ಸಿದ್ಧಾಂತಗಳೊಂದಿಗೆ ಸದಾ ಅಂಟಿಕೊಂಡಿದ್ದರು. ಎಷ್ಟೇ ದೊಡ್ಡ ವ್ಯಕ್ತಿಯ ಸಲಹೆಯಿರಲಿ, ತಮಗೆ ಸರಿಯೆನಿಸಲಿಲ್ಲವೆಂದರೆ ಎಂದೂ ಒಪ್ಪಿಕೊಳ್ಳುತ್ತಿದ್ದಿಲ್ಲ. ಕೆಲಸ ಹಿಡಿಸದಿದ್ದರೆ ರಾಜೀನಾಮೆ ನೀಡಿ ಮುಕ್ತರಾಗಿ ಬಿಡುತ್ತಿದ್ದರು ಅವರಲ್ಲಿ ಅಷ್ಟೊಂದು ಅಭಿಮಾನವಿತ್ತು. ಅಭಿಮಾನವೆಂದರೆ ಅಹಂಕಾರವಲ್ಲ, ಅಂತಃಸತ್ವ ಹಾಗೂ ಅದರ ಪರಿಚಯವೇ ಅಭಿಮಾನ.

ಅವರ ಜೀವನ ಪ್ರವಾಹದಲ್ಲಿ 'ಸರಿತಾ' ಬಂದು ಸೇರಿದಾಗ ಮಧುರ ಸಂಗಮವಾಯಿತೆನ್ನಬಹುದು. ಸುಶೀಲ, ವಿದ್ಯಾವಂತ ಪತ್ನಿಯನ್ನು ಪಡೆದು ಅವರು ಅತ್ಯಂತ ಸಂತಸಪಟ್ಟರು. ಸರಿತಾ ಅವರು ಎಲ್.ಎಲ್.ಬಿ. ಪದವಿ ಪಾಸಾದ ಮೇಲೆ ದೇಸಾಯಿಯವರಿಗೆ ತಮ್ಮ ವಕೀಲಿ ವೃತ್ತಿಯಲ್ಲೂ ಪತ್ನಿಯ ಸಹಕಾರ ದೊರೆಯತೊಡಗಿತು. ಅವರಿಬ್ಬರಲ್ಲೂ ಬಹುಸಾಮರಸ್ಯವಿತ್ತು.

ಆ ಜೋಡಿ ಆದರ್ಶ ದಂಪತಿಯ ಜೋಡಿ. ತಮ್ಮ ಮನೆಗೆ ಯಾರೇ ಬರಲಿ ಅವರ ಆತಿಥ್ಯವಲ್ಲಿ ಇಬ್ಬರದೂ ಮೇಲುಗೈ. ಆಧುನಿಕ ಪದ್ಧತಿಯ ಜೀವನ ನಡೆಸುತ್ತಿದ್ದರೂ, ಹಳೆ ವಿಚಾರದ, ಮಡಿವಂತರ್ಯಾರಾದರೂ ಮನೆಗೆ ಬಂದರೆ ಅವರೊಡನೆ ಅವರಂತೆಯೇ ನಡೆದುಕೊಳ್ಳುತ್ತಿದ್ದರು. ಅದೇ ರೀತಿಯ ಅಡುಗೆ-ಆತಿಥ್ಯ ನಡೆಯುತ್ತಿತ್ತು. ಬಂಧು-ಬಳಗದ ಕಾಳಜಿಯಿರಲಿ, ಪರಿಚಯಸ್ಥರ ಉಪಚಾರವಿರಲಿ, ಆಳು-ಕಾಳುಗಳಿರಲಿ ಎಲ್ಲರೊಡನೆ ಅಭಿಮಾನದಿಂದ, ಸಮಭಾವದಿಂದ ನಡೆದುಕೊಳ್ಳುತ್ತಿದ್ದರು. ನಿಷ್ಕಾಮ ಸೇವೆ ಎದ್ದು ಕಾಣುತ್ತಿತ್ತು.

ವಕೀಲ ದಂಪತಿಯಾಗಿದ್ದ ಅವರು ಎಂದೂ ಅಪರಾಧಿ ಪಕ್ಷದವರನ್ನು ಉಳಿಸುವಂತಹ ಕಾನೂನಿನಾಟ ಆಡಲಿಲ್ಲ. ನಿರಪರಾಧಿ ಪಕ್ಷದವರಿಗೆ ನ್ಯಾಯ ದೊರಕಿಸಿಕೊಡುವುದೇ ಅವರ ಉದ್ದೇಶವಾಗಿತ್ತು. ಹಣದ ಆಸೆಗಾಗಿ ತಪ್ಪು ಹಾದಿ ಹಿಡಿದವರಲ್ಲ ಅವರು. ತಪ್ಪಿತಸ್ಥರೆಂದು ಗೊತ್ತಾದರೆ ಅಂಥವರನ್ನು ಹತ್ತಿರ ಬರಲು ಬಿಡುತ್ತಿರಲೇ ಇಲ್ಲ. ಸದುದ್ದೇಶದ ಕೆಲಸದಿಂದಲೇ ಸತ್ಫಲವೆಂಬುದು ಅವರ ವಾದವಾಗಿತ್ತು.

ಕುಸುಮಾಕರವರಲ್ಲಿಯ ರಾಜಕೀಯ ಬುದ್ಧಿಮತ್ತೆಯನ್ನು ಗಮನಿಸಿದರೆ ಯಾವುದೇ ಪಕ್ಷದವರು ಅತ್ಯುನ್ನತಸ್ಥಾನ ಕೊಟ್ಟು ಗೌರವಿಸಬೇಕು ಹಾಗಿತ್ತು ಅವರಲ್ಲಿಯ ರಾಜಕೀಯ ಜ್ಞಾನ. ಆದರೆ ದುರ್ದೈವ ಹಾಗೂ ಆಶ್ಚರ್ಯವೆಂದರೆ ಯಾರೂ ಆ ಬಗ್ಗೆ ಗಮನಿಸಲಿಲ್ಲ. ಅದಕ್ಕಾಗಿ ಅವರು ಎಂದೂ ಯಾರನ್ನೂ ದೂಷಿಸಲೂ ಇಲ್ಲ, ಚಿಂತಿಸಲೂ ಇಲ್ಲ. ಹಾ! ಅವರ ಜೀವನ ಸಂಧ್ಯಾ ಸಮಯದಲ್ಲಿ ಸುವರ್ಣಾವಕಾಶ ಅವರಿಗೆ ಪ್ರಾಪ್ತವಾಗಿತ್ತು. ರಾಜ್ಯ ನಾಗರಿಕ, ನೀರು ಪೂರೈಕೆ ಹಾಗೂ ಒಳಚರಂಡಿಬೋರ್ಡ್‌ನ ಚೇರ್ಮನ್‌ರಾಗಿ ಅವರು ಕಾರ್ಯನಿರ್ವಹಿಸಿದರು. ೧೯೮೫-೮೮ರ ವರೆಗೆ ಆ ಜವಾಬ್ದಾರಿಯನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಿದರು. ನೀರಡಿಸಿದ್ದ ಕಲಬುರ್ಗಿಗೆ ನೀರುಣಿಸಲು ಅವರು ಭೀಮಾನದಿಯನ್ನು ಹರಿಸಿ ಭಗೀರಥರಾದರು. ಸಾಹಸೀಯ, ಸದಾ ಸ್ಮರಣೀಯ ಹಾಗೂ ಗೌರವನೀಯ ಆ ಕಾರ್ಯ ಅವರಿಂದಲೇ ಆದದ್ದು ಸಂತಸದ ಸಂಗತಿ.

ರಾಜಕೀಯ ವಿಷಯಗಳಲ್ಲಿಯ ಅವರ ಚಾಕಚಕ್ಯತೆಯನ್ನು, ಆ ವಲಯದಲ್ಲಿಯ ನಿಕಟವರ್ತಿಗಳು ಹೆಚ್ಚಿನ ಬೆಳಕು ಬೀರಬಲ್ಲರು. ಅವರನ್ನು ನಾನು ಸದಾ ಒಬ್ಬ ಉತ್ತಮ ಮಿತ್ರ, ಗೃಹಸ್ಥನ ರೂಪದಲ್ಲೇ ನೋಡಿದ್ದೇನೆ.

ಅಸ್ವಸ್ಥರಾದರೆಂದು ಅವರು ಬೆಂಗಳೂರಿಗೆ ಹೋದರು. ಅಲ್ಲಿ ಹೋಗಿ ಅವರನ್ನು ಭೇಟಿಯಾಗಿ ಬರಬೇಕೆಂಬ ಉತ್ಕಟೇಚ್ಛೆ ನನ್ನಲ್ಲಿತ್ತು. ಆದರೆ ಕಾರಣವಿಲ್ಲದೆ ಬೆಂಗಳೂರಿಗೆ ಹೋಗುವದು ನನಗೆ ಸಾಧ್ಯವಿರಲಿಲ್ಲ. ಅವರೊಡನೇ ದೂರವಾಣಿ ಮೂಲಕವಾದರೂ ಮಾತನಾಡಿದರಾಯಿತೆಂದು ನಾನು ಮತ್ತು ಪ್ರಾ. ಸುರೇಶ ಹೆರೂರ ಬಹಳ ಪ್ರಯತ್ನಿಸಿದೆವು.

ಆದರೆ ಫೋನ್‌ನಲ್ಲಿ ಮಾತನಾಡುವುದೂ ಅವರಿಂದಾಗುತ್ತಿಲ್ಲವೆಂಬ ಸುದ್ದಿಯನ್ನು ಅವರ ಪತ್ನಿ ಶ್ರೀಮತಿ ಸವಿತಾರವರು ನನಗೆ ತಿಳಿಸಿದರು. ಮುಂದೆ ಕೆಲವೇ ದಿನಗಳಲ್ಲಿ ಅವರು ನಿಧನರಾದರೆಂಬ ಸುದ್ದಿ ಬರಸಿಡಿಲಿನಂತೆ ಬಡಿಯಿತು. ಬಹಳೇ ದುಃಖವಾಯಿತು. ಬಹು ಆತ್ಮೀಯ ಮಿತ್ರನ ಅಗಲಿಕೆ ಬಹಳೇ ತ್ರಾಸದಾಯಕ.

ಎಲ್ಲರೂ ಎಂದಾದರೊಂದು ದಿನ ಸಾಯಲೇಬೇಕು. ಮಾನವರ್‍ಯಾರೂ ಅಮರರಲ್ಲ. ಆದರೆ ಯಾವುದೇ ವ್ಯಕ್ತಿಯ ನಿಧನದ ನಂತರ, ಆ ವ್ಯಕ್ತಿಯ ಜೀವನ ಸಾರ್ಥಕವೋ, ಅಲ್ಲವೋ? ಯಾವ ರೀತಿಯ ಜೀವನವನ್ನು ಸಾರ್ಥಕ ಜೀವನವೆನ್ನಬಹುದು? ಎಂಬ ಮೊದಲಾದ ಪ್ರಶ್ನೆಗಳು ಬರುತ್ತವೆ. ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿಯೂ ಕೆಲ ಋಣಗಳಿರುತ್ತವೆ. ಅವುಗಳಲ್ಲಿ ಸಮಾಜದ ಋಣ ಅತೀ ಮಹತ್ವದ್ದು. ದೇಸಾಯಿಯವರು ಈ ಸಮಾಜ ಋಣದಿಂದ ಮುಕ್ತರಾದರೆ? ಅವರು ಸಮಾಜದಿಂದ ಏನು ಗಳಿಸಿದರು? ಸಮಾಜಕ್ಕೆ ಏನು ನೀಡಿದರು ಎಂದು ಮೊದಲಾಗಿ ಕೇಳಬಹುದು. ಅವರು ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಸಲ್ಲಿಸಿದ ಸೇವೆ ಸಾಕಷ್ಟು ಹಾಗೂ ಪ್ರಶಂಸನೀಯವೆಂದು ನನಗನ್ನಿಸುತ್ತದೆ. ಆದ್ದರಿಂದಲೇ ಅವರದು ಸಾರ್ಥಕ ಜೀವನವೆಂದೇ ಭಾವಿಸುತ್ತೇನೆ.

ಕುಸುಮಾಕರ ಎಂದರೆ ವಸಂತಋತು. ವಸಂತದಲ್ಲಿ ಎಲ್ಲೆಲ್ಲೂ ಚಿಗುರೆಲೆಯ, ಮೊಗ್ಗರಳುವ ಸಂಭ್ರಮ, ಹೂಗಳ ಸುಗಂಧವಂತೂ ವಾಯು ಮಂಡಲವನ್ನಾವರಿಸಿರುತ್ತದೆ. ಕುಸುಮಾಕರರೂ ಹಾಗೆಯೇ ಜೀವಿಸಿದರು. ತಮ್ಮೊಡನೆ ಸಂಪರ್ಕ ಪಡೆದವರೆಲ್ಲರಿಗೂ ಪ್ರೀತಿಯನ್ನೇ ಹಂಚಿದರು. ಸ್ನೇಹ ಸುಗಂಧ ಬೀರಿದರು ಎಂಬುದನ್ನೂ ಎಂದೂ ಮರೆಯಲಾಗದು.

ಅವರು ದೊಡ್ಡವರು

❀ ಪಿ.ವಿ.ಶಾಸ್ತ್ರಿ, ಕಿಬ್ಬಳ್ಳಿ

ಕುಸುಮಾಕರ ದೇಸಾಯಿಯವರು ಉದಾರ ವಿಚಾರವಾದಿಗಳು. ಅವರ ಮನಸ್ಸು ಆಕಾಶದಷ್ಟು ನಿರ್ಮಲ ಮತ್ತು ಅಷ್ಟೇ ವಿಶಾಲ. ಅವರ ಮಾನಸಿಕ ಆವರಣ ಎಷ್ಟು ವಿಶಾಲವಾಗಿತ್ತೆಂದರೆ ಅಲ್ಲಿ ನೀವು ಬಾಬರಿ ಮಸೀದಿಯನ್ನು ಕಟ್ಟಿಕೊಳ್ಳಬಹುದು, ಮರ್ಯಾದಾ ಪುರುಷೋತ್ತಮ ರಾಮನ ಮಂದಿರವನ್ನು ಕಟ್ಟಿಕೊಳ್ಳಬಹುದು. ಅವರ ಮನಸ್ಸು ಬನಾರಸದ ವಿಶ್ವನಾಥ ಸನ್ನಿಧಿಗೆ ಕರೆದೊಯ್ಯುವ ಸಂದಿ-ಗೊಂದಿಯಲ್ಲಿ ಹಾಯ್ದುಹೋದ ರಾಷ್ಟ್ರೀಯ ಹೆದ್ದಾರಿ.

ದೇಸಾಯಿಯವರದು ವೈಭವದ ವ್ಯಕ್ತಿತ್ವ. ಅವರೊಡನೆ ಬದುಕುವುದು, ಸಂಭಾಳಿಸುವುದು, ವ್ಯವಹರಿಸುವುದರಲ್ಲಿ ಜೀವಂತಿಕೆ ಇರುತ್ತಿತ್ತು. ಹಲವು ಹತ್ತು ದಿಕ್ಕುಗಳಿಂದ ಅವರು ಜ್ಞಾನವನ್ನು ಸಂಗ್ರಹಿಸಿದವರು. ಆರು ಭಾಷೆಗಳಲ್ಲಿ ಪರಿಣಿತರು. ಕನ್ನಡ, ಉರ್ದು, ಹಿಂದಿ, ತೆಲಗು, ಮರಾಠಿ, ಇಂಗ್ಲೀಷ- ಈ ಎಲ್ಲ ಭಾಷೆಗಳಲ್ಲಿ ಬರೆಯಬಲ್ಲವರು. ಪುಸ್ತಕಗಳು ಅವರನ್ನು ಸದಾ ಮುದಗೊಳಿಸಿ ಅವರ ಮನಸ್ಸನ್ನು ಚೇತೋಹಾರಿಯಾಗಿ ಇಡಬಲ್ಲ ಸಂಗಾತಿಗಳಾಗಿದ್ದವು.

ಭಾರತದಲ್ಲಿ ವೈಚಾರಿಕರ ಬದುಕು ಸಾಮಾನ್ಯರ ತಿಳುವಳಿಕೆಗೆ ಹೊರತಾಗಿದ್ದು, ಸದಾ ಚಿಂತಿಸುವವನು ಎಷ್ಟೋ ಸಲ ತನಗೂ ಮಾನ್ಯ ಮಾಡಲಾಗದ ಮಾರ್ಗದಲ್ಲಿ ನಡೆಯಬೇಕಾಗಿದ್ದು ಅನಿವಾರ್ಯವಾಗುತ್ತದೆ. ಆ ದೃಷ್ಟಿಯಲ್ಲಿ ದೇಸಾಯಿಯವರ ವೈಚಾರಿಕ ಬದುಕು ಶ್ರೀ ಗೋಪಾಲಗೌಡ, ಲೋಹಿಯಾ, ಜಯಪ್ರಕಾಶರ ಅಡ್ಡತಿಡ್ಡ ದಿಸೆಯಲ್ಲಿಯೇ ಸಾಗಿತ್ತು. ಅವರೊಬ್ಬರೇ ಅಲ್ಲ ಅವರ ಕುಟುಂಬವೇ ೧೯೨೦ ರಿಂದ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿತ್ತು. ಅವರಿಗೆ ಸ್ವಾತಂತ್ರ್ಯ ಪೂರ್ವ, ಸ್ವಾತಂತ್ರ್ಯೋತ್ತರ ಭಾರತ, ಎರಡೂ ಹೋರಾಟದಲ್ಲಿಯೇ ಅವರನ್ನು ತೊಡಗಿಸಿದವು. ೧೯೪೭ ಅಗಸ್ಟ್ ೧೦ ರಿಂದ ಎರಡು ತಿಂಗಳು ಸೆರೆಮನೆಯ ವಾಸವನ್ನೇ ಅನುಭವಿಸಿದರು. ಅವರಿಗೆ ಸೆರೆಮನೆ-ನೆರೆಮನೆಯಾಗಿತ್ತು. ಕೆಲವೊಮ್ಮೆ ಅವರು ಅಹಿಂಸಾವಾದಿಗಳು, ಇನ್ನು ಕೆಲವೊಮ್ಮೆ ಕೆಂಡ ಉಗಳುವ ಕ್ರಾಂತಿಕಾರರು, ಒಮ್ಮೊಮ್ಮೆ ಸರ್ವೋದಯವನ್ನು ಅಪ್ಪಿಕೊಂಡವರು, ಮತ್ತೊಮ್ಮೆ ಭೂಗತ ಚಟುವಟಿಕೆಗಳಿಂದ ನುಗಿಸಿಕೊಂಡವರು. ನವಂಬರ ೧೯೪೭ರಿಂದ ೧೭ ಸಪ್ಟೆಂಬರ್ ೧೯೪೮ರ ವರೆಗೆ ಅವರ ಬದುಕಿಗೆ ಮೇಲಿನ ಮಾತು ಸಾಕ್ಷಿಯಾಗಿತ್ತು. ಅವರು ಸಮಾಜವಾದಿಗಳು. ಉಳ್ಳವರಿಗೂ, ಉಳಿಯದಿದ್ದವರಿಗೂ ಜೀವನ ಸಮವಾಗಿರಬೇಕೆಂಬ ಆಕಾಂಕ್ಷೆಯವರು. ಹೊಟ್ಟೆಯನ್ನು ಬೆನ್ನಿಗಂಟಿಸಿಕೊಂಡು ದುಡಿಯುವ ಕೋಟಿಗಟ್ಟಲೆ ಬಡವರ ಕುಟುಂಬಗಳ ಸ್ಥಿತಿಯು ಅವರ ಸಂವೇದನಾಶೀಲ ವ್ಯಕ್ತಿತ್ವವನ್ನು ತಲ್ಲಣಗೊಳಿಸಿತು. ಕಲ್ಯಾಣ ರಾಷ್ಟ್ರವೊಂದರ ಸುಂದರ ಕನಸನ್ನು ಕಟ್ಟಿಕೊಟ್ಟು ಸಂವಿಧಾನ ಭಾರತದಲ್ಲಿ ಶಹನಾಯಿಯನ್ನು ಮೊಳಗಿಸಲಿಲ್ಲ. ಹಲಗೆಯನ್ನು

ಬಡಿಸಿತ್ತು. ಅವರು ಕರ್ನಾಟಕದ ರಾಜಕೀಯದಲ್ಲಷ್ಟೇ ಅಲ್ಲ ಭಾರತದ ಸಮಾಜವಾದಿ ವೈಚಾರಿಕ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲುಗೊಂಡು ಏಳೆಂಟು ಸಾರಿ ಜೈಲನ್ನು ಭರಿಸಿದ್ದರು. ಶತಮಾನಗಳ ಸ್ವಾತಂತ್ರ್ಯದ ಹೋರಾಟ-ಭಾರತೀಯರನ್ನು ನಿಜವಾಗಿಯೂ ಆರ್ಥಿಕ ಪಾರತಂತ್ರ್ಯದಿಂದ ಪಾರು ಮಾಡಿಲ್ಲವೆಂದು ಅವರ ನಂಬಿಕೆಯಾಗಿತ್ತು.

ಕುಸುಮಾಕರ ದೇಸಾಯಿಯವರಿಗೆ ವೈಯಕ್ತಿಕ ಆಗು ಹೋಗುಗಳನ್ನು ಗಮನಿಸುವುದು ಸಾಧ್ಯವಾಗುತ್ತಿರಲಿಲ್ಲ. ದೇಸಾಯಿಯವರಂತೆ ಅವರ ಶ್ರೀಮತಿ ಸವಿತಾರವರ ಬದುಕು ಕೂಡಾ ತೀರಾ ಸಾಮಾಜೀಕರಿಸಲ್ಪಟ್ಟಿದೆ. ದೇಸಾಯಿಯವರು ೧೯೫೫ರಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು. ಗುಲಬರ್ಗಾ ಜಿಲ್ಲೆಯ ಬಾರ್ ಅಸೋಸಿಯೇಶನ್ ಅಧ್ಯಕ್ಷರಾಗಿದ್ದರು. ಕೆಲವು ವರ್ಷ ಕಾಯಿದೆಯನ್ನು ಕಲಿಸುವ ಪ್ರಾಧ್ಯಾಪಕರೂ ಆಗಿದ್ದರು. ಗುಲಬರ್ಗಾ ವಿಶ್ವವಿದ್ಯಾಲಯ, ಕೆನರಾ, ಕರ್ನಾಟಕ, ಮಹಾರಾಷ್ಟ್ರ ಬ್ಯಾಂಕುಗಳ ಕಾಯಿದೆಯ ಸಲಹೆಗಾರರೂ ಆಗಿದ್ದರು. ಅವರು ಉಸ್ಮಾನಿಯಾ ವಿಶ್ವವಿದ್ಯಾಲಯದ ಕಾಯದೆಯ ಪದವೀಧರರಾಗಿದ್ದಷ್ಟೇ ಅಲ್ಲದೇ ಕಾಯದೆಯಲ್ಲಿ ಸ್ನಾತಕೋತ್ತರ ಪದವೀಧರರೂ ಕೂಡ.

ಸಲಿಗೆಗೆ ಪೂರ್ವದಲ್ಲಿ ಅವರು ಗಂಭೀರ ವ್ಯಕ್ತಿಗಳು. ತಮಗೆ ಗೊತ್ತಿದ್ದನ್ನೆಲ್ಲ ಹೇಳಿ ಬಿಡುವ ಚಾಪಲ್ಯವೂ ಇರಲಿಲ್ಲ. ತಮ್ಮ ಘನವ್ಯಕ್ತಿತ್ವವನ್ನು ಛಾಪಿಸುವ ಅವಶ್ಯಕತೆಯೇ ಅವರಿಗಿರಲಿಲ್ಲ. ಒಮ್ಮೆ ಸಲಿಗೆಯ ವರ್ತುಲದಲ್ಲಿ ನಾವು ಬಂದೆವೆಂದರೆ ಅವರು ಸಾಮಾನ್ಯರಿಗೂ ಸಾಮಾನ್ಯರು. ನಮ್ಮ ತಿಳುವಳಿಕೆಗೆ ಸಮನಾಗಿ ವ್ಯವಹರಿಸಬಲ್ಲವರಾಗಿದ್ದರು. ನಮ್ಮ ಸಹೃದಯಕ್ಕೆ ತಕ್ಕಷ್ಟು ಸ್ಪಂದಿಸುವವರಾಗಿದ್ದರು. ವ್ಯಕ್ತಿಗಳನ್ನು ಮೂರು ಬಗೆಯಲ್ಲಿ ವಿಂಗಡಿಸಬಹುದೇನೋ 'ಮೈ ಹೂಂ ನ' ಎಂದು ನಮ್ಮ ಸುತ್ತಲಿನ ಜನರಲ್ಲಿ, ವಾತಾವರಣದಲ್ಲಿ ಭರವಸೆಯನ್ನು, ವಿಶ್ವಾಸವನ್ನು ತುಂಬಿ ಜೀವನೋತ್ಸಾಹವನ್ನು ಬದುಕಿಗೆ ಬೆರೆಸುವವ ಕೆಲವರು. 'ನಾನಿದ್ದರೂ ಅಷ್ಟೇ ಇಲ್ಲದಿದ್ದರೂ ಅಷ್ಟೇ' ಎಂದುಕೊಂಡು ತಮ್ಮ ಪರಿಸರದಲ್ಲಿ ಒಂದು ತಿಳಿ ತೆರೆಯು ಕೂಡಾ ಏಳದಂತೆ ಎಚ್ಚರವಹಿಸುವ ನಿಸ್ಸತ್ವ ನಿರ್ಜೀವರು ಮತ್ತೆ ಕೆಲವರು. 'ನಾನೂ ನಗುವುದಿಲ್ಲ; ನೀನೂ ನಗಬೇಡ' ಎಂಬ ವಿಷಾನಿಲವನ್ನು ತಮ್ಮ ಸುತ್ತಲಿನ ವಾತಾವರಣದಲ್ಲಿ ಪಂಪಿಸುವ Joy Killers ಇನ್ನಷ್ಟು ಜನರು. ಆದರೆ ಶ್ರೀ ಕುಸುಮಾಕರ ದೇಸಾಯಿಯವರು ಮೊದಲಿನ ವರ್ಗಕ್ಕೆ ಸೇರಿದವರಷ್ಟೇ ಅಲ್ಲ, ಅದರಲ್ಲಿ ಅಗ್ರ ಪಂಕ್ತಿಯವರು.

ಇಲ್ಲಿನ ಬದುಕು ತುದಿಯನ್ನು ಮುಟ್ಟುತ್ತಿದ್ದಾಗಲೂ ಆಚೆಯ ಜಗತ್ತಿನ ಬಗ್ಗೆ ತಲೆ ಕೆಡಿಸಿಕೊಳ್ಳದೇ, ಅವಾಸ್ತವ ವೇದಾಂತವನ್ನು ಹೆಣೆದು ಬಾಳಿದವರಲ್ಲ.

ಹುಟ್ಟು ಆಕಸ್ಮಿಕವೆಂದೇ ಇಟ್ಟುಕೊಳ್ಳಿ, ಆದರೆ ಬದುಕು ಆಕಸ್ಮಿಕವಾಗಬಾರದು. ಶ್ರೀ ಕುಸುಮಾಕರ ದೇಸಾಯಿಯವರು ಬದುಕನ್ನು ಅರ್ಥವಂತಿಕೆಯಲ್ಲಿ ತುಂಬಿ ಜನ-ಮನದಲ್ಲಿ ಸದಾ ಗುನುಗುವ ತಮ್ಮ ಬದುಕಿನ ಭೈರವಿಯನ್ನು ಹಾಡಿ ಹೋದರು.

ಶ್ರೀಮಂತ ಹೃದಯವಂತ

❁ ಡಾ. ದೇವೇಂದ್ರಕುಮಾರ್ ಹಕಾರಿ

ಶ್ರೀ ಕುಸುಮಾಕರ ದೇಸಾಯಿ ನಮ್ಮೂರಿನ (ಚಿಕ್ಕೇನಕೊಪ್ಪ) ಸಮೀಪದ ಚಿಕ್ಕವೆಣಕಲ್ ದೇಸಾಯರು ಮತ್ತು ಆಗರ್ಭ ಶ್ರೀಮಂತರು ಕೂಡ. ಅವರ ಈ ಶ್ರೀಮಂತಿಕೆಗಿಂತ ಹೃದಯಶ್ರೀಮಂತಿಕೆ ಬಹಳ ದೊಡ್ಡದು. ಅವರನ್ನು ನಾನು ಮೊದಲ ಸಲ ಭೇಟಿಯಾದಾಗ ಗುಲ್ಬರ್ಗಾದ ಉಸ್ಮಾನಿಯಾ ಹೈಸ್ಕೂಲಿನಲ್ಲಿ ೯ನೇ ವರ್ಗದ ವಿದ್ಯಾರ್ಥಿ. ಆಗಲೇ ಅವರು ಕಾಲೇಜು ಕಟ್ಟೆ ಹತ್ತಿದ್ದರು. ೧೯೪೮ ರ ಹೈದರಾಬಾದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರತ್ಯಕ್ಷ ಭಾಗವಹಿಸಿ, ನಿಜಾಮರ ವಿರುದ್ಧ ಹೋರಾಟ ಮಾಡಿದವರು. ಆಗ ನನಗೆ ಇಂಥವರೇ ಇವರು ಎಂಬ ಕಲ್ಪನೆ ಇರಲಿಲ್ಲ. ಆದರೂ ಅವರ ಭಾಷಣ ಆಗಾಗ ಕೇಳುವ ಸಂದರ್ಭ ಬರುತ್ತಿತ್ತು. ಮುಂದೆ ಇವರು ಉಸ್ಮಾನಿಯಾ ವಿಶ್ವವಿದ್ಯಾಲಯ ಸೇರಿದಾಗ, ಅವರು ಬಿ.ಎ. ಪಾಸಾಗಿ ಮುಂದೆ ವಕೀಲಿ ಸನದು ಪಡೆದರು. ಅವರು ಶ್ರೀ ಮುರಡಿ ಭೀಮಜ್ಜನವರ ಸಂಗಾತಿಗಳಾಗಿ ಮುರಡಿಯಲ್ಲಿಯೇ ವಾಸಿಸುತ್ತಿದ್ದರು. ಶ್ರೀ ಜ್ಞಾನಮೂರ್ತಿ ಅವರ ಶಿಬಿರದಲ್ಲಿ ಆಗಾಗ ಜರುಗುತ್ತಿದ್ದ ಕಾರ್ಯಚಟುವಟಿಕೆಗಳಲ್ಲಿ ಅವರು ಪ್ರತ್ಯಕ್ಷವಾಗಿ ಭಾಗವಹಿಸುತ್ತಿದ್ದರು. ಜೆ. ಕೆ. ಪ್ರಾಣೇಶಾಚಾರ್, ಜನಾರ್ಧನರಾವ ದೇಸಾಯಿ, ಗುಡಗುಂಟಿ ರಾಮಾಚಾರ್ಯ ಜೋಶಿ, ಅವರ ಮಗ ಜಿ. ರಾಮಾಚಾರ್, ಅವರ ಮಗ ಕೃಷ್ಣ ಜೋಶಿ, ಅವರ ಸಹಪಾಠಿಗಳಾಗಿ ಕೆಲಸ ಮಾಡುತ್ತಿದ್ದರು. ಶ್ರೀ ಮುರುಡಿ ಭೀಮಜ್ಜನವರ ಬಗ್ಗೆ ಅವರಿಗೆ ತುಂಬಾ ಭಕ್ತಿ ಮತ್ತು ಪ್ರೀತಿ. ಹಾಗಾಗಿ ಮುರುಡಿ ಭೀಮಜ್ಜನವರು ಸಾಕ್ಷಾತ್ 'ಗಾಂಧಿ' ಎಂದೇ ಅವರು ಭಾವಿಸುತ್ತಿದ್ದರು.

ಮುಂದೆ ೧೯೫೭ರ ಸುಮಾರು ಹೈದರಾಬಾದ ಕರ್ನಾಟಕದ ಹೈದರಾಬಾದಿನ ವಾರ್ತಾ ಇಲಾಖೆ ಏರ್ಪಡಿಸಿದ ಕಥಾ ಸ್ಪರ್ಧೆಯಲ್ಲಿ ನಾನು ಭಾಗವಹಿಸಿ ಪ್ರಥಮ ಬಹುಮಾನ ಪಡೆದಾಗಲೇ ಶ್ರೀ ಕುಸುಮಾಕರ ದೇಸಾಯಿಯವರ ನೇರ ಪರಿಚಯವಾಯಿತು. ಅವರ ಒಂದು ಕಥೆ "ಟೊಳ್ಳು ಬುರುಜು" ಕಥೆಗೂ ದ್ವಿತೀಯ ಬಹುಮಾನ ಬಂದಿತ್ತು. ಮುಂದೆ ಅವುಗಳ ಸಂಕಲನ ಪ್ರಕಟವಾಯಿತು. ಅವರು ತುಂಬಾ ಗ್ರಾಮೀಣ ಬದುಕಿನ ಕಾಳಜಿಯನ್ನಿಟ್ಟುಕೊಂಡಿದ್ದರು. ಗಂಧದ ಕೊರಡಿನಂತೆ ತಮ್ಮನ್ನು ತಾವು ತೇಯ್ದುಕೊಂಡು, ತಮ್ಮ ಆಶ್ರಯ ಬೇಡಿಬಂದ ಕಕ್ಷಿದಾರರನ್ನು ತಮ್ಮವರೇ ಎನ್ನುವ ಭಾವದಿಂದ ನೋಡುತ್ತಿದ್ದರು. ಅವರಿಂದ ಖಂಡಿತ ಫೀಸನ್ನು ನಿರೀಕ್ಷೆ ಮಾಡುತ್ತಿರಲಿಲ್ಲ. ಹೀಗಾಗಿ ಅವರು ಎಷ್ಟೋ ಸಲ "ದೇವೇಂದ್ರಕುಮಾರ ಹಕಾರಿ ಅಂದ್ರ ಏನು ತಿಳಕೊಂಡೀರಿ? ಕಥಾ ಸ್ಪರ್ಧೆಯಲ್ಲಿ ಆತ ಪ್ರಥಮ, ನಾನು ಆಮೇಲೆ" ಎಂದು ಅಂದದ್ದುಂಟು. ಇದನ್ನು ಅವರ ಶ್ರೀಮತಿಯವರೇ ಹೇಳಿದ್ದರು. ಶ್ರೀ ಕುಸುಮಾಕರ ದೇಸಾಯಿ ಅವರು ರಾಜಕೀಯ ವ್ಯಕ್ತಿಗಳಾಗದೆ, ಸಾಹಿತ್ಯಕ್ಕೇನಾದರೂ ಬಂದಿದ್ದರೆ ಖಂಡಿತವಾಗಿಯೂ ಅವರೊಬ್ಬ ಶ್ರೇಷ್ಠ ಸಾಹಿತಿ ಆಗುತ್ತಿದ್ದರು.

ಅವರ ಮನಸ್ಸು ಜನಕ್ಕಾಗಿ ಮಿಡಿಯುತ್ತಿತ್ತು. ಸಾಹಿತ್ಯಕ್ಕಾಗಿ ಸ್ಪಂದಿಸುತ್ತಿತ್ತು. ಹೀಗಾಗಿ ಶ್ರೀ ಕುಸುಮಾಕರ ದೇಸಾಯಿಯವರು ಮದುವೆಯಾದದ್ದು ಶ್ರೇಷ್ಠ ಹಾಸ್ಯಸಾಹಿತಿ ಬೀಚಿ ಅವರ ಸೋದರಿಯಾದ ಸರಿತಾ ಅವರನ್ನು, ಆಮೇಲೆ ಸರಿತಾ ಕೂಡ ಅನೇಕ ಕೃತಿಗಳನ್ನು ರಚಿಸಿದರು. 'ಹೀಗಿದ್ದರು ಬೀಚಿ', 'ಹರಪನಹಳ್ಳಿಯ ಭೀಮವ್ವ' (ಸಂಪಾದಿತ ಕೃತಿ) ಮುಂತಾದವು ಅವರ ಕೃತಿಗಳು. ಭಾರತದ ತುಂಬ ವ್ಯಾಪಕವಾಗಿ ತಿರುಗಾಡಿದ್ದ ಶ್ರೀಮತಿ ಸರಿತಾ ಅವರು ತಮ್ಮ ಅನುಭವಗಳನ್ನು 'ಕಾಶಿಯಲ್ಲಿ ಕಂಡದ್ದೇನು', 'ಸರಕಾರದ ಸಹಾಯ' ಮುಂತಾದ ಕಥೆಗಳಲ್ಲಿ ನಿರೂಪಿಸಿದ್ದಾರೆ. ದೇಸಾಯಿ ತಮ್ಮ ಅನುಭವಗಳೆಲ್ಲವನ್ನೂ ಶ್ರೀಮತಿ ಸರಿತಾ ಅವರಿಗೆ ಧಾರೆಯೆರೆದುಬಿಟ್ಟರು. ಶ್ರೀಮತಿ ಸರಿತಾ ಅವರು, ತಮ್ಮ ಪತಿಯ ಆಸೆಯನ್ನು ಎಷ್ಟರಮಟ್ಟಿಗೆ ಈಡೇರಿಸುತ್ತಾರೋ ಕಾದು ನೋಡಬೇಕು. ಅನೇಕ ಮೌಲಿಕ ಕೃತಿಗಳು ಅವರಿಂದ ಹೊರಬರಲಿ ಎನ್ನುವುದು ನಮ್ಮಂಥವರ ಆಸೆ.

ಶ್ರೀಕುಸುಮಾಕರ ದೇಸಾಯಿ ಅವರು ಹೇಳಿದ ಒಂದು ಪದ್ಯ ನೆನಪಾಗುತ್ತದೆ. ಈ ಮೊದಲು ಇದನ್ನು ಒಂದು ವಿಶಿಷ್ಟ ಸಂವಹನ ಎಂದು ಸಂಯುಕ್ತ ಕರ್ನಾಟಕದಲ್ಲಿ ಪ್ರಕಟಿಸಲಾಗಿತ್ತು.ಹೈದರಾಬಾದ ಸಮೀಪದ ಬೀದರದಲ್ಲಿ ಇದನ್ನು ಎಲ್ಲರೂ ಹಾಡುತ್ತಾರೆ ಕುಸುಮಾಕರ ಹೇಳಿದ್ದರು.

ಜಿನ್ ಸಕತಿ ನಹೀಂ ಸರ್ಕಾರ ವಂದೇಮಾತರಂ
ಹಮ್ ಗರೀಬೋಂ ಕಾ ಗಲೆ ಕಾ ಹಾರ್ ವಂದೇಮಾತರಂ
ಹಾಥ ಮೇಂ ಬೇಡಿ ಗಲೆ ಮೇಂ ಭೂಂಕದೊ ಶೂಲೀ ಛಡಾ
ಪರ ನ ಛೋಡೇಂಗೆ ಕಭಿ ಹಮ್ ಮಂತ್ರ ವಂದೇಮಾತರಂ ಹೈ
ತಂತ್ರ ವಂದೇಮಾತರಂ
ಹಮ್ ಗರೀಬೋಂ ಕಾ ಗಲೆ ಕಾ ಹಾರ್ ವಂದೇಮಾತರಂ

ಭುಲಾಯಿ ಹಾಡುಗಳ ಧಾಟಿಯಲ್ಲಿರುವ ಈ ಗೀತೆಯನ್ನು ಶ್ರೀ ವಿರೂಪಾಕ್ಷಸ್ವಾಮಿ ಮಠಪತಿ ಎನ್ನುವವರು ಹಾಡುತ್ತಿದ್ದರಂತೆ. ಇದನ್ನು ಹಾಡುವುದಕ್ಕೆ ಹೊತ್ತು ಗೊತ್ತು ಇರಲಿಲ್ಲ. 'ಕಾಟೊ ಮಾರೊ ಲೂಟೊ ಬಾಟೊ' ಇದೇ ರಜಾಕಾರರ ನಿತ್ಯ ಮಂತ್ರವಾಗಿತ್ತು. ಅಂಥವರಲ್ಲಿ ಈ ಕೂಲಿ ಕಾರ್ಮಿಕರು. ವಿಶೇಷತಃ ನೇಕಾರರು, ಎಲ್ಲೆಂದರಲ್ಲಿ, ಯಾವಾಗ ಬೇಕೋ ಆಗ ಈ ಮೇಲಿನ ಪದ್ಯ ಹಾಡುತ್ತಿದ್ದರಂತೆ. ವಂದೇಮಾತರಂ ಅವರಿಗೆ ಪ್ರಾಣವಾಗಿತ್ತು. ಹಾಡಾಗಿತ್ತು. ಇದನ್ನು ನೇಯುವ ಲಯಕ್ಕೆ ಹೊಂದಿಸಿ ಹಾಡುತ್ತಿದ್ದರಂತೆ. ಎಲ್ಲೆಲ್ಲಿ ಹಾಡು ಬಂತೋ ಅಲ್ಲಲ್ಲಿ ಬಾಟ ವಟು. ಇಂಥ ಒಂದು ಭೀಕರ ಪರಿಸ್ಥಿತಿಯಲ್ಲಿ ಈ ವಂದೇಮಾತರಂ ಚಳವಳಿ ಭಾರೀ ಭೀಕರ ಸ್ವರೂಪವನ್ನು ತಳೆದು ಮುಂದುವರೆಯಿತು. 'ದೇಶಭಕ್ತಿ' ಎನ್ನುವವರನ್ನು ಮನೆಯಿಂದ ಬೀದಿಗೆಳೆತಂದು ಕಂಬಕ್ಕೆ ಕಟ್ಟುವುದು. ಅವರ ಮುಂದೆಯೇ ಅವರ ಮನೆಯ ಹೆಣ್ಣು ಮಕ್ಕಳನ್ನು

ಹೊಡೆದು ಅತ್ಯಾಚಾರ ಮಾಡುವುದು ಇದೆಲ್ಲ ನಡೆಯಿತಂತೆ. ಈ ಕುಸುಮಾಕರ ದೇಸಾಯಿ ಇವನ್ನೆಲ್ಲ ಕಂಡು ಹೇಳಿದ್ದರು. ಈ ದೃಷ್ಟಿಯಿಂದ ಅವರು ಅಪ್ಪಟ ರಾಷ್ಟ್ರೀಯವಾದಿಯಾಗಿದ್ದರು. "ಏನಪಾ ಮಹಾರಾಯ, ಅವತ್ತಿನ ದಿನ ನೆನಿಸಿಕೊಂಡ್ರ ನಮಗ ಮೈಮೇಲಿನ ಕೂದಲ ನೆಟ್ಟಗಾಗತಾವು ಇಂಥದರಲ್ಲಿ ಸಾಹಿತ್ಯವೆಲ್ಲಿ, ಇನ್ನೊಂದೆಲ್ಲಿ?" ಹೀಗಾಗಿ ಅವರು ಸಾಹಿತ್ಯಕ್ಕಿಂತ ವಾಸ್ತವ ಜೀವನವನ್ನೇ ಹೆಚ್ಚು ಆರಾಧಿಸಿದರು. ಮಾತಿಗೊಮ್ಮೆ ನಗೆಯನ್ನು ಚಿಮ್ಮಿಸುವ ಆ ಸ್ನೇಹಿತ ಇಂದಿಲ್ಲ.

ಹೀಗೆ ಕುಸುಮಾಕರ ದೇಸಾಯಿ ಅವರು ಮರೆಯುವಂತಹ ವ್ಯಕ್ತಿಯಲ್ಲ. ಚಿರಂತನ ನೆನಪು ಅವರದು. ಆ ದೃಷ್ಟಿಯಿಂದ ಅವರನ್ನು ಮರೆಯುವುದೇ ಸಾಧ್ಯವಿಲ್ಲ. ಅಂದಿನ ಕಾಲದಲ್ಲಿ ರಾಜಪುರೋಹಿತ, ನರಸಿಂಗರಾವ ಮಾಸ್ತಿ, 'ಇರಾ' (ಇಟಗಿ ರಾಘವೇಂದ್ರ) ಅವರೆಲ್ಲರ ಜೊತೆಗೆ ಕೂಡಿಕೊಂಡಿದ್ದು, ಇನ್ನೂ ಹತ್ತಾರು ಕಾಲ ಬಾಳಬಹುದಾಗಿತ್ತು. ಅವರೇ ಇಂದು ಅನಿರೀಕ್ಷಿತವಾಗಿ ನಮ್ಮನ್ನಗಲಿ ಹೋದರು. ಅಂಥ ಸ್ನೇಹಿತರನ್ನು ಇನ್ನೆಲ್ಲಿ ತರೋಣ? ಮನುಷ್ಯತ್ವಕ್ಕೆ ಬೆಲೆ ಕೊಟ್ಟ ಅಂಥ ವ್ಯಕ್ತಿಗಳು ಅಪರೂಪ!

ಧೀಮಂತ ಚೇತನ

❁ ಗೋಪಾಲರಾವ್ ಹೆಜೇಬ್

ಶ್ರೀ ಕುಸುಮಾಕರ ದೇಸಾಯಿ ಧೀಮಂತ ವ್ಯಕ್ತಿ. ಗುಲಬರ್ಗಾದ ಸಾರ್ವಜನಿಕ ಬದುಕಿನಲ್ಲಿ ಅವರ ವಿಚಾರ ಪೂರ್ಣ ಕೊಡುಗೆ ಇದೆ: ಅವರು ಜನಪ್ರಿಯ, ಪ್ರಜ್ಞಾವಂತ ನಾಗರಿಕರಾಗಿದ್ದರು. ರಾಜಕೀಯ ಹುದ್ದೆಗಳನ್ನಲಂಕರಿಸಿದ ವ್ಯಕ್ತಿಗಳು; ಸ್ಥಾನ ಬಲದಿಂದ ಪ್ರಚಾರ ಗಿಟ್ಟಿಸಿಕೊಳ್ಳುತ್ತಾರೆ. ದೇಸಾಯಿ ಸ್ವಯಂ ಯೋಗ್ಯತೆ, ಪ್ರತಿಭೆಯಿಂದ ಮಿಂಚಿದವರು. ಅವರು ರಾಜಕೀಯ ಚಿಂತಕರು, ಸಾಮಾಜಿಕ ಕಳಕಳಿಯುಳ್ಳ ಸಹೃದಯಿಗಳು, ವೈಚಾರಿಕ ಬದ್ಧತೆಯುಳ್ಳ ಬುದ್ಧಿಜೀವಿಗಳು ಮತ್ತು ಸತತ ಅಭ್ಯಾಸಿಗಳು ಆಗಿದ್ದರು. ಹರಿತವಾದ ತರ್ಕ ತಮ್ಮ ರಾಜಕೀಯ ವಿಚಾರಗಳನ್ನು ಸೊಗಸಾಗಿ ವಿವರಿಸುವ ವಿಧಾನ, ಕೇಳುಗರ ಮೇಲೆ ಸಮ್ಮೋಹನಾಸ್ತ್ರ ಪ್ರಯೋಗಿಸಿದಂತೆ ಭಾಸವಾಗುತ್ತಿತ್ತು. ಅವರ ಆಳವಾದ ಪಾಂಡಿತ್ಯ ಮತ್ತು ವಿಚಾರ ಸರಣಿಯಿಂದ ಪ್ರಭಾವಿತರಾಗದ ಜನರೇ ಇಲ್ಲ. ನಾನು ಹಲವಾರು ಬಾರಿ ಅವರ ವಿಚಾರ ಗೋಷ್ಠಿಯಲ್ಲಿ ಭಾಗವಹಿಸಿದ್ದೇನೆ. ಅವರ ಅಧಿಕಾರವಾಣಿ, ಇಂಗ್ಲೀಷ್ ಭಾಷೆಯ ಮೇಲಿದ್ದ ಅವರ ಪ್ರಭುತ್ವ ಮತ್ತು ಅವರ ಪ್ರಾಮಾಣಿಕ ಅನಿಸಿಕೆಗಳು ನನ್ನ ಮೇಲೆ ಪ್ರಭಾವ ಬೀರಿವೆ. ದೇಸಾಯಿ ಮನೆತನದ ವೈಶಿಷ್ಟ್ಯವೇನೆಂದರೆ ಎಲ್ಲಾ ಜನರು ಒಂದಿಲ್ಲೊಂದು ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ. ಅನಿರುದ್ಧ ದೇಸಾಯಿ ಸ್ವಾತಂತ್ರ್ಯಯೋಧರಾಗಿದ್ದರು. ಆಮೇಲೆ ಅವರು ಜಿಲ್ಲಾಧಿಕಾರಿಯಾಗಿ ಹೆಸರು ಮಾಡಿದ್ದಾರೆ. ರಾಘವೇಂದ್ರ ದೇಸಾಯಿ ಮತ್ತು ಭೀಮಸೇನರಾವ್ ದೇಸಾಯಿ, ಹೈದ್ರಾಬಾದ್ ಮುಕ್ತಿ ಸಂಘರ್ಷದಲ್ಲಿ ಪಾಲ್ಗೊಂಡು ಜೈಲು ಶಿಕ್ಷೆ ಅನುಭವಿಸಿದ್ದಾರೆ. ಕುಸುಮಾಕರ ದೇಸಾಯಿ ತಮ್ಮೆಲ್ಲ ಬಂಧುಗಳು ಸತ್ಯಾಗ್ರಹ ಮಾಡಿ ಜೈಲಿಗೆ ಬಂದಾಗ ಬಹಳ ಸಂತೋಷಪಟ್ಟರಂತೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ, ಸಂಶೋಧಕರೆಂದು ಹೆಸರು ಮಾಡಿದ, ಶ್ರೀ ಪಾಂಡುರಂಗರಾವ್ ದೇಸಾಯಿ, ಕುಸುಮಾಕರರ ಬಂಧುಗಳೇ ಆಗಿದ್ದರು. ಕುಸುಮಾಕರರ ತಂದೆ ಸಂಜೀವ್‌ರಾವ್ ದೇಸಾಯಿ, ಗುಲಬರ್ಗಾದ ಪ್ರಸಿದ್ಧ ವಕೀಲರಾಗಿದ್ದರು. ದೇಸಾಯಿಯವರದು ಅವಿಭಕ್ತ ಕುಟುಂಬ. ತಮ್ಮಂದಿರು, ತಂಗಿಯರು, ಚಿಕ್ಕಪ್ಪನ ಮಕ್ಕಳು ಮತ್ತು ಇತರ ಸಂಬಂಧಿಗಳು ಒಂದೇ ಮನೆಯಲ್ಲಿ ವಾಸಮಾಡಿ ಕುಟುಂಬದ ಸೊಗಸನ್ನು ಹೆಚ್ಚಿಸಿದ್ದರು. ದೊಡ್ಡ ಮನೆ, ದೊಡ್ಡ ಮನಸ್ಸು.

ನಾನು ೧೯೪೯ರಲ್ಲಿ ಕುಸುಮಾಕರರ ಸಹೋದರರಾದ ಸುದರ್ಶನ ದೇಸಾಯಿ ಮತ್ತು ಅರವಿಂದರೊಡನೆ ಗುಲಬರ್ಗಾದ ಸರ್ಕಾರಿ ಕಾಲೇಜಿನಲ್ಲಿ ಅಭ್ಯಾಸ ಮಾಡಿದ್ದೇನೆ. ಆಗಾಗ್ಗೆ ನಾನು ದೇಸಾಯಿಯವರ ಮನೆಗೆ ಹೋಗಿ ಆ ಅವಿಭಕ್ತ ಕುಟುಂಬದ ಭವ್ಯತೆಯನ್ನು ಕಣ್ಣಾರೆ ಕಂಡಿದ್ದೇನೆ. ಒಮ್ಮೆ ಸುದರ್ಶನ್, ಕುಸುಮಾಕರರಿಗೆ ನನ್ನ ಪರಿಚಯ ಮಾಡಿಕೊಟ್ಟು "ಈತ ನನ್ನ ಸ್ನೇಹಿತ ಗೋಪಾಲರಾವ್ ಹೇಜೇಬ್" ಎಂದು ಹೇಳಿದ. ಅವರು ನನ್ನತ್ತ ನೋಡಿ

'ಪೇಜೀಜ್' ಕುಟುಂಬದ ಹೆಸರು ಕೇಳಿದ್ದೇನೆ ಎಂದು ಹೇಳಿದಾಗ ನನಗೆ ಸಂತೋಷವಾಯಿತು. ದೇಸಾಯಿಯವರ ಮನೆತುಂಬ ಪುಸ್ತಕಗಳು. ಮನೆ ಒಂದು ಗ್ರಂಥಾಲಯವಾಗಿತ್ತು. ಕುಸುಮಾಕರ ದೇಸಾಯಿ ಮನೆಯ ಯಜಮಾನರಾಗಿದ್ದರಿಂದ ಎಲ್ಲರೂ ಅವರನ್ನು ಭಯಭಕ್ತಿಯಿಂದ ಕಾಣುತ್ತಿದ್ದರು. ಶಿಸ್ತು, ಸಂಯಮ, ಮಾರ್ಗದರ್ಶನ, ಸಾಮೂಹಿಕ ಜೀವನ, ವಿದ್ಯಾವಂತರ ಸಭೆ, ಮತ್ತು ಸ್ವಾತಂತ್ರ್ಯ ಹೋರಾಟಗಾರರ ಕೂಟ, ಇವೆಲ್ಲವುಗಳನ್ನು ನಾನು ದೇಸಾಯಿ ಇವರ ಮನೆಯಲ್ಲಿ ಕಂಡು ಆಶ್ಚರ್ಯಪಟ್ಟಿದ್ದೇನೆ. ವೈಜಯಂತಿ ದೇಸಾಯಿ ಮತ್ತು ನಾನು ಬಿ.ಎ. ತರಗತಿಯಲ್ಲಿ ಸಹಪಾಠಿಗಳಾಗಿದ್ದೆವು. ಶ್ರೀಮತಿ ಕಮಲಾ ದೇಸಾಯಿ ಇವರ ಮದುವೆಯ ಸಮಾರಂಭದಲ್ಲಿ ನಾನು ಪಾಲ್ಗೊಂಡಿದ್ದ ನೆನಪು ಇದೆ.

ಒಮ್ಮೆ ಸುದರ್ಶನರು ನನಗೆ ಲೋಹಿಯಾ ಅವರ ಪುಸ್ತಕವೊಂದನ್ನು ಕೊಟ್ಟರು. ಕುಸುಮಾಕರ ದೇಸಾಯಿಯವರು ಇಂತಹ ಕಠಿಣ ಇಂಗ್ಲೀಷಿನ ನೂರಾರು ಪುಸ್ತಕಗಳನ್ನು ಹೇಗೆ ಓದಿದ್ದಾರೆ ಎಂದು ಆಶ್ಚರ್ಯವಾಯಿತು. ಶ್ರೀ ದೇಸಾಯಿಯವರು ಲೋಹಿಯಾ ಹಾಗೂ ಜಯಪ್ರಕಾಶ ನಾರಾಯಣರ ವಿಚಾರಗಳನ್ನು ಅರಗಿಸಿಕೊಂಡು ಸಮಾಜದ ಉದ್ಧಾರಕ್ಕೆ ಅವರ ವಿಚಾರಗಳೇ ತಳಹದಿ ಯಾಗಬೇಕೆಂದು ಪ್ರಾಮಾಣಿಕವಾಗಿ ನಂಬಿದವರು. ದೇಸಾಯಿಯವರು ಫ್ಯಾಶನೇಬಲ್ ಸಮಾಜವಾದಿಗಳಾಗಿರಲಿಲ್ಲ. ಲೋಹಿಯಾ ಮತ್ತು ಜಯಪ್ರಕಾಶ ನಾರಾಯಣರ ವಿಚಾರಗಳನ್ನು ಅವರು ಭಾವಪರವಶರಾಗಿ ವಿವರಿಸಿದ ಸನ್ನಿವೇಶಗಳನ್ನು ನಾನು ಸ್ಮರಿಸಿಕೊಳ್ಳಬಲ್ಲೆ. ಹೈದ್ರಾಬಾದ್ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶ್ರೀ ಕುಸುಮಾಕರ ದೇಸಾಯಿ ಸಕ್ರಿಯ ಪಾತ್ರ ನಿರ್ವಹಿಸಿ, ಸ್ವಾತಂತ್ರ್ಯ ಯೋಧರಲ್ಲಿ ಅಗ್ರಗಣ್ಯರೆಂದೆನಿಸಿಕೊಂಡರು. ಅವರು ಕಾಲೇಜು ದಿನಗಳಿಂದಲೇ ಖಾದಿ ಧರಿಸಿದವರು. ಗರಿಗರಿ ಇಸ್ತ್ರಿಯ ಬಿಳಿ ಶರ್ಟು, ಪಾಯಿಜಾಮುಗಳು ಅವರ ವ್ಯಕ್ತಿತ್ವದ ಆಕರ್ಷಣೆಯನ್ನು ಹೆಚ್ಚಿಸಿದ್ದವು.

ಕುಸುಮಾಕರ ದೇಸಾಯಿಯವರದು ಎದ್ದು ಕಾಣುವ ವ್ಯಕ್ತಿತ್ವ. ನಡೆ ನುಡಿಗಳಲ್ಲಿ ಸಾಮ್ಯತೆಯಿರುವ ಸ್ಪಷ್ಟಮಾತಿನ, ನಿಷ್ಠುರ ವ್ಯಕ್ತಿಯೆಂದು ಅವರನ್ನು ಸಮೀಪದಿಂದ ಕಂಡವರು ಹೇಳಿದ್ದಾರೆ. ಸ್ವಂತ ಯೋಗ್ಯತೆ, ಪ್ರತಿಭೆಗಳಿಂದ ಸಂಪನ್ನರಾದ ದೇಸಾಯಿ, ಯಾರಿಗೂ ಅಂಜದೆ ಅಳುಕದೆ ತಮ್ಮ ವಿಚಾರಗಳನ್ನು ಪ್ರಕಟಿಸುತ್ತಿದ್ದರು. ನಾನು ಅವರ ಜತೆಗೆ ಮಾತನಾಡುತ್ತಿದ್ದಾಗ ಪ್ರತಿಭಾವಂತ ಹಿರಿಯ ಚಿಂತಕರ ಸಹವಾಸದಲ್ಲಿದ್ದೇನೆ ಎಂದು ಭಾಸವಾಗುತ್ತಿತ್ತು. ಕಮ್ಯುನಿಸಂ, ಸಮಾಜವಾದ ಮತ್ತು ಇತರ ರಾಜಕೀಯ ಸಿದ್ಧಾಂತಗಳನ್ನು ಕುರಿತು ಅವರೊಂದಿಗೆ ಚರ್ಚಿಸುವಾಗ, ರಾಜ್ಯ ವ್ಯವಸ್ಥೆಯ ನ್ಯೂನ್ಯತೆಗಳು ಹಾಗೂ ಸಾಮಾಜಿಕ ಕೆಡಕುಗಳು ನನಗೆ ಗೋಚರಿಸುತ್ತಿದ್ದವು. ತಪ್ಪುದಾರಿ ಹಿಡಿದ ರಾಜಕೀಯ ಮುಖಂಡರ ಚಿಂತನ ಶೈಲಿಯನ್ನು ಅವರು ಹಾಸ್ಯ ಭರಿತವಾಗಿ ವಿವರಿಸಿದಾಗ ನಾನು ಅವರ ತರ್ಕ, ವಿಮರ್ಶೆಗಳನ್ನು ಮೆಚ್ಚಿಕೊಂಡಿದ್ದೇನೆ. ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ದೇಸಾಯಿಯವರು ಜೈಲಿಗೆ

ಹೋದರು. ಜೈಲಿನಲ್ಲಿ ಅವರು ಆರ್.ಎಸ್.ಎಸ್. ಮತ್ತು ಜಮಾತೆ-ಇಸ್ಲಾಮಿ ಕಾರ್ಯಕರ್ತರೊಂದಿಗೆ ಸಂವಾದದಲ್ಲಿ ತೊಡಗುತ್ತಿದ್ದರು. ಸಮಾಜವಾದಿಗಳು, ಆರ್.ಎಸ್.ಎಸ್.ನ ಕಟ್ಟಾ ವಿರೋಧಿಗಳು. ವೈಚಾರಿಕವಾಗಿ ವಿರೋಧಿಗಳಾಗಿದ್ದ ಜನರೊಂದಿಗೂ ಅವರು ಸ್ನೇಹದಿಂದ ವರ್ತಿಸುತ್ತಿದ್ದರು ಎಂದು ನನ್ನ ಸ್ನೇಹಿತರು ಮತ್ತು ಆರ್.ಎಸ್.ಎಸ್. ಹಿರಿಯ ಕಾರ್ಯಕರ್ತರು ಆದ ಶ್ರೀ ವೆಂಕಟೇಶ ಗುರುನಾಯಕ ನನಗೆ ತಿಳಿಸಿದರು. ಕುಸುಮಾಕರರಿಗೆ ಧರ್ಮದಲ್ಲಿ ಶ್ರದ್ಧೆಯಿರಲಿಲ್ಲ. ಆದರೆ ಅವರು ನಾಸ್ತಿಕರಂತೆ ಧಾರ್ಮಿಕ ನಂಬಿಕೆಗಳನ್ನು ಗೇಲಿ ಮಾಡುತ್ತಿರಲಿಲ್ಲ.

ಕುಸುಮಾಕರ ದೇಸಾಯಿ, ನಿಜಾಮನ ನಿರಂಕುಶ ಪ್ರಭುತ್ವದ ವಿರುದ್ಧ ಹೋರಾಡಿದ್ದಾರೆ. ಅವರು ಇಂದಿರಾಗಾಂಧಿ ನೀತಿಗಳನ್ನು ವಿರೋಧಿಸಿದ್ದಾರೆ. ಅಶಿಷ್ಟ ರಾಜ್ಯ ವ್ಯವಸ್ಥೆಯೊಂದಿಗೆ, ಅಸಂಗತ ವಿಚಾರ ಸರಣಿಯೊಂದಿಗೆ ರಾಜಿ ಮಾಡಿಕೊಳ್ಳಲಾರದ ವ್ಯಕ್ತಿಗಳು, ಸಾಮಾನ್ಯ ಬದುಕನ್ನು ಇಚ್ಛಿಸುವುದಿಲ್ಲವೆಂಬುದಕ್ಕೆ ದೇಸಾಯಿಯವರ ಜೀವನವೇ ಸಾಕ್ಷಿ. ಪ್ರಾಮಾಣಿಕ ವಿಚಾರಗಳನ್ನು ನಿರ್ಭಯತೆಯಿಂದ ಪ್ರಕಟಿಸುವ ಶೈಲಿಯನ್ನು ಅವರು ರೂಢಿಸಿಕೊಂಡಿದ್ದರು.

ನಾನು 'ಹೈದ್ರಾಬಾದ್ ಮುಕ್ತಿ ಸಂಘರ್ಷ'ದ ಪುಸ್ತಕವನ್ನು ಬರೆಯುವ ಕಾಲಕ್ಕೆ ಸ್ವಾತಂತ್ರ್ಯಯೋಧರ ಜೀವನ ವೃತ್ತಾಂತಗಳನ್ನು ಸಂಗ್ರಹಿಸಲು ಅವರ ಹತ್ತಿರ ಹೋಗಿದ್ದೆ. ಆ ದಿನ ಶ್ರೀಮತಿ ಸರಿತಾ ದೇಸಾಯಿಯವರು ಅವರೊಂದಿಗಿದ್ದರು. ಕುಸುಮಾಕರರೊಂದಿಗೆ ಮಾತು ಪ್ರಾರಂಭಿಸಿ, ನೆಹರು, ಸರ್ದಾರ್ ಪಟೇಲ್ ಹಾಗೂ ಕೆ.ಎಂ. ಮುನ್ಶಿಯವರು ನಿರ್ವಹಿಸಿದ ಪಾತ್ರ ಮತ್ತು ಕಾಸಿಂ ರಜ್ವಿಯ ನೀಚ ಕೃತ್ಯಗಳ ಬಗ್ಗೆ ತಿಳಿದುಕೊಂಡೆ. ಶ್ರೀ ದೇಸಾಯಿಯವರ ಸ್ಮರಣ ಶಕ್ತಿ ಅದ್ಭುತವಾಗಿತ್ತು. ಅವರು ಅರ್ಧ ಶತಮಾನ ಪೂರ್ವದ ಘಟನೆಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದರು. ಮೃತ್ಯು ಭಯವಿಲ್ಲದೆ ಅವರು ರಜಾಕಾರರೊಂದಿಗೆ ಹೋರಾಡಿದ್ದಾರೆ. ಆಮೇಲೆ ಪೊಲೀಸ್ ಕಾರ್ಯಾಚರಣೆಯ ಕಾಲಕ್ಕೆ ಅವರು ಭಾರತದ ಸೈನ್ಯಕ್ಕೆ ಮಾರ್ಗದರ್ಶನ ಮಾಡುತ್ತ 'ಕೇಸರ ಜವಳ'ಗಾದಿಂದ 'ಖಜೂರಿ' ಗ್ರಾಮದವರೆಗೆ ಹೋದರು. ಅವರ ಸಾಹಸ ಹಾಗೂ ನಿರ್ಭಯತೆ ಅಸಾಧಾರಣವಾಗಿದ್ದು ಅವರು, ವಿವರಿಸಿದ ಗಂಡಾಂತರದ ಪ್ರಸಂಗಗಳನ್ನು ಕೇಳಿ ನಾನು ರೋಮಾಂಚನಗೊಂಡೆ. ನಾನು ಸ್ವಾತಂತ್ರ್ಯಯೋಧರ ಸಂದರ್ಶನಕ್ಕಾಗಿ ಅಲ್ಲಲ್ಲಿ ಹೋಗಿ ಅವರ ಅನುಭವಗಳನ್ನು ಮತ್ತು ಅವರ ಅನಿಸಿಕೆಗಳನ್ನು ದಾಖಲಿಸಿಕೊಂಡೆ. ಬೌದ್ಧಿಕವಾಗಿ ದುರ್ಬಲರಾದ ಸ್ಮರಣ ಶಕ್ತಿಯನ್ನು ಕಳೆದುಕೊಂಡ ಸ್ವಾತಂತ್ರ್ಯಯೋಧರ ಅಸ್ಪಷ್ಟ ವಿವರಣೆಯಿಂದ ನಾನು ತೃಪ್ತಿಪಟ್ಟುಕೊಳ್ಳಬೇಕಾಯಿತು. ಯಾವ ಹೋರಾಟವಿಲ್ಲದೆ ಅಕಸ್ಮಾತ್ ಜೈಲಿಗೆ ಹೋದ ಜನರನ್ನು ಸ್ವಾತಂತ್ರ್ಯಯೋಧರೆಂದು ಪರಿಗಣಿಸುವುದು ತಪ್ಪು ಎಂದು ನನ್ನ ಭಾವನೆ. ಸಮಾಜಕ್ಕೆ ತಮ್ಮದೆಲ್ಲವನ್ನು ಅರ್ಪಿಸಿ, ನಿಸ್ವಾರ್ಥ ಸೇವೆಗೈದ ಸ್ವಾತಂತ್ರ್ಯಯೋಧರು ಮೂಲೆಗುಂಪಾಗಿದ್ದಾರೆ.

ಆದರೆ ನಕಲಿ ಸ್ವಾತಂತ್ರ್ಯಯೋಧರು ಸರ್ಕಾರ ಆಯೋಜಿಸಿದ ಸಮಾರಂಭಗಳಲ್ಲಿ ವಿಜೃಂಭಿಸುತ್ತ ಅನಾಯಾಸವಾಗಿ ಲಭಿಸಿದ ಕೀರ್ತಿ, ಪ್ರಶಂಸೆಗಳನ್ನು ಅಪಹರಿಸಿದ್ದಾರೆ. ಆದರೆ ಮಾಡುವುದೇನು? ವಜ್ರಕ್ಕಿಂತಲೂ ಗಾಜಿನ ತುಂಡುಗಳಿಗೆ ಹೆಚ್ಚಿನ ಬೆಲೆ ನಿರ್ಧರಿಸುವ ಸಮಾಜವಿದ್ದಾಗ ನಿಜವಾದ ಹೋರಾಟಗಾರರು ಹಾಗೂ ತ್ಯಾಗಿಗಳು ಮೂಲೆಗುಂಪಾಗಿದ್ದಾರೆ. ಕುಸುಮಾಕರರು ರಾಜಕೀಯ ಸ್ಥಾನಮಾನಗಳಿಂದ ವಂಚಿತರಾದರೂ ಅವರೆಂದಿಗೂ ಗೊಣಗಾಟ ಮಾಡುತ್ತ ಅತೃಪ್ತಿಯನ್ನು ಖಿನ್ನತೆಯನ್ನು ವ್ಯಕ್ತಪಡಿಸಿದ ಬಗ್ಗೆ ನಾನು ಕೇಳಿಲ್ಲ.

ಶ್ರೀ ದೇಸಾಯಿಯವರು ತಪ್ಪದೆ ಗುಲಬರ್ಗಾದ ಪಬ್ಲಿಕ್ ಗಾರ್ಡನ್ನಿಗೆ ವಾಕಿಂಗ್ ಬರುತ್ತಿದ್ದರು. ವಿಧಾನಸಭೆಯ ಅಧಿವೇಶನಗಳಲ್ಲಿದ್ದಾಗ ಅವರ ಪತ್ನಿ ಸರಿತಾ ದೇಸಾಯಿ ಅವರ ಜತೆಗಿರುತ್ತಿದ್ದರು. ಚಿಕ್ಕ ಪಾಮರಿನ್ ನಾಯಿಗಳೊಂದಿಗೆ ಬರುತ್ತಿದ್ದ ಈ ಹಿರಿಯ ದಂಪತಿಗಳನ್ನು ಕಂಡಾಗ ಬಹಳ ಸಂತೋಷವಾಗುತ್ತಿತ್ತು. ನಾನು ದೇಸಾಯಿಯವರಿಗೆ ನಮಸ್ಕಾರ ಮಾಡುವ ಪೂರ್ವದಲ್ಲಿಯೇ ಅವರೇ 'ಹಲ್ಲೊ' ಎಂದು ನನ್ನತ್ತ ನೋಡುತ್ತಿದ್ದರು. ಗಾರ್ಡನ್ನಿಗೆ ಬಂದ ಹಿರಿಯ ಕಿರಿಯರೆಲ್ಲರೂ ಗೌರವದಿಂದ ಅವರಿಗೆ ನಮಸ್ಕಾರ ಮಾಡುತ್ತಿದ್ದರು. ನಗುಮುಖ, ಉತ್ಸಾಹದ ಬುಗ್ಗೆ, ಪ್ರೀತಿ ಸೌಹಾರ್ದತೆ ತುಂಬಿದ ಮಾತುಗಳು, ಸವಿರಾದ ಹಾಸ್ಯ ಮತ್ತು ಎಲ್ಲರ ಮೇಲೆ ಪ್ರಭಾವ ಬೀರುವ ವಾಕ್ಚರಣೆ ಅವರ ಸಹಜ ಸ್ವಭಾವದ ಒಳಾಂಶಗಳಾಗಿದ್ದವು. ನಗರದಲ್ಲಿ ಅವರಿಗೆ ಯಾರೂ ಅಪರಿಚಿತರಿರಲಿಲ್ಲವೆಂದು ಹೇಳಿದರೆ, ಅತಿಶಯೋಕ್ತಿಯಾಗಲಾರದು. ಶ್ರೀ ಕುಸುಮಾಕರ ದೇಸಾಯಿ ಅಖಿಲ ಭಾರತ ಮಟ್ಟದ ಅನೇಕ ರಾಜಕೀಯ ಮುಖಂಡರೊಂದಿಗೆ ನಿಕಟ ಸಂಪರ್ಕದಲ್ಲಿದ್ದರು ಎಂದು ನಾನು ಕೇಳಿದ್ದೇನೆ. ರಾಮಕೃಷ್ಣ ಹೆಗಡೆ, ಜೆ.ಎಚ್. ಪಟೇಲ್ ಇವರು ದೇಸಾಯಿಯವರ ಸ್ನೇಹಿತರಾಗಿದ್ದರು. ಇನ್ನೂ ಅನೇಕ ಮುಖಂಡರು, ಬುದ್ಧಿ ಜೀವಿಗಳು, ಸಮಾಜ ಸುಧಾರಕರು, ಕಲಾವಿದರು, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಮತ್ತು ಹಿರಿಯ ಕಿರಿಯ ವಕೀಲರು ದೇಸಾಯಿಯವರನ್ನು ಕಾಣಲು ಬರುತ್ತಿದ್ದರು. ಈ ಎಲ್ಲ ಜನರ ಬೌದ್ಧಿಕ ಹಸಿವನ್ನು ತಣಿಸಬಲ್ಲ ಹಿರಿಮೆಯನ್ನು ಕುಸುಮಾಕರರು ಸಂಪಾದಿಸಿಕೊಂಡಿದ್ದರು. ನಾನು ಅವರ ವಿಚಾರಗಳನ್ನು, ರಾಜಕೀಯ ಸಿದ್ಧಾಂತಗಳನ್ನು ಒಪ್ಪಿಕೊಂಡಿರಲಿಲ್ಲ. ಸಮಾಜವಾದದಿಂದಲೇ ರಾಜಕೀಯ ಸಾಮಾಜಿಕ ಕೆಡಕುಗಳು ನಿವಾರಣೆಯಾಗುತ್ತವೆ ಎಂದು ನಂಬಿದವನು ಅಲ್ಲ. ಆದರೆ ಪ್ರಕಾಂಡ ಪಂಡಿತರು, ಜಗತ್ತಿನ ವಿದ್ಯಮಾನಗಳನ್ನು ಅರಿತವರು ಮತ್ತು ತಮ್ಮ ಸಿದ್ಧಾಂತಗಳಲ್ಲಿ ಅಚಲ ನಿಷ್ಠೆಯುಳ್ಳವರು ಆದ ದೇಸಾಯಿಯವರನ್ನು ಗೌರವಾದರಗಳಿಂದ ಮೆಚ್ಚಿಕೊಂಡಿದ್ದೇನೆ. ನಿಸ್ವಾರ್ಥಿಗಳು ರಾಜಕೀಯ ಸ್ಥಿತ್ಯಂತರಗಳಿಗನುಗುಣವಾಗಿ ತಮ್ಮ ಅಭಿಪ್ರಾಯಗಳನ್ನು ಬದಲಿಸಿಕೊಳ್ಳದವರು ಇತಿಹಾಸ ನಿರ್ಮಿಸುತ್ತಾರೆ. ಕುಸುಮಾಕರ ದೇಸಾಯಿ ಕಾಂಗ್ರೆಸ್‌ಪಕ್ಷ ಸೇರಿಕೊಂಡರು. ರಾಜಕೀಯ ಸ್ಥಾನ ಮಾನಗಳನ್ನು ಪಡೆಯಬಹುದಾಗಿತ್ತು. ಆದರೆ ಅವರು ಪ್ರವಾಹದ ವಿರುದ್ಧ

ಈಜಾಡುವ ಹಿರಿಯ ಕೈಗೊಂಡು ಜನಪ್ರಿಯ ಮುಖಂಡರಾದರು.

ದೇಸಾಯಿಯವರು ಸಾರ್ವಜನಿಕ ಸಭೆ ಹಾಗೂ ಮದುವೆ ಸಮಾರಂಭಗಳಲ್ಲಿ ಸ್ನೇಹಿತರಿಂದ ಸುತ್ತುವರಿಯಲ್ಪಟ್ಟಾಗಲು ಅವರು ನನ್ನೊಂದಿಗೆ ಕೊಂಚಕಾಲ ಮಾತನಾಡುತ್ತಿದ್ದರು. ದೇಸಾಯಿಯವರು ಭಾರಿ ಶ್ರೀಮಂತರಾಗಿರದೇ ಹೋದರೂ, ಅವರು ಅತಿಥಿಗಳನ್ನು, ಸಂದರ್ಶಕರನ್ನು, ಔದಾರ್ಯದಿಂದ ಉಪಚರಿಸುವಷ್ಟು ಸ್ಥಿತಿವಂತರಾಗಿದ್ದರು. ದೇಸಾಯಿಯವರಿಗೆ ಅತಿಥಿಗಳನ್ನು ಸ್ವಾಗತಿಸಿ ಉಪಚರಿಸುವುದು ಹೊಸ ವಿಷಯವೇನೂ ಆಗಿರಲಿಲ್ಲ. ಯಾವಾಗಲೂ ಅವರ ಮನೆ ಜನರಿಂದ ತುಂಬಿರುತ್ತಿತ್ತು.

ಶ್ರೀ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ದೇಸಾಯಿಯವರನ್ನು ನೀರು ಸರಬರಾಜು, ಒಳಚರಂಡಿ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಿದರು. ಸಾರ್ವಜನಿಕ ಜೀವನದಲ್ಲಿ ಪಾರದರ್ಶಕತೆ ಅನಿವಾರ್ಯವೆಂದು ನಂಬಿದ್ದ ದೇಸಾಯಿಯವರು ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿ ಜನರ ಪ್ರಶಂಸೆಗೆ ಪಾತ್ರರಾದರು. ಅಧಿಕಾರದ ಅವಧಿ ಮುಕ್ತಾಯದ ಕಾಲಕ್ಕೆ ನಾನಿನ್ನೂ ಬ್ಯಾಂಕಿನ ಸಾಲ ತೀರಿಸಬೇಕಾಗಿದೆ ಎಂದು ವೆಂಕಟೇಶ ಗುರುನಾಯಕರಿಗೆ ಹೇಳುವುದನ್ನು ನಾನೂ ಕೇಳಿದೆ. ಭ್ರಷ್ಟಾಚಾರದ ಆಪಾದನೆಗಳಿಲ್ಲದ ಇಂತಹ ಮುಖಂಡರು ಮಾತ್ರ ರಾಷ್ಟ್ರದ ರಾಜಕೀಯ ಜೀವನದ ಶುದ್ಧೀಕರಣಕ್ಕೆ ಪ್ರಯತ್ನಿಸಬಲ್ಲರು ಎಂದು ನಾನು ತೀರ್ಮಾನಕ್ಕೆ ಬಂದೆ.

ವ್ಯಕ್ತಿ ಚಿತ್ರಣವನ್ನು ಕೊಡುವುದು ಅಷ್ಟೇನು ಸುಲಭ ಕಾರ್ಯವಲ್ಲ. ಒಂದು ಆದರ್ಶಕ್ಕೆ ಬದ್ಧರಾದ, ಸಂಘರ್ಷದ ಬದುಕನ್ನು ಪ್ರೀತಿಸಿದ ಹಿರಿಯ ಚೇತನಗಳ ಬದುಕನ್ನು ತರುಣ ಪೀಳಿಗೆಯವರಿಗೆ ವಿವರಿಸಬೇಕು. ಜನರ ಆರ್ಥಿಕ ಮಟ್ಟಕ್ಕಿಂತ ನೈತಿಕ ಮಟ್ಟ ಚೆನ್ನಾಗಿರಬೇಕು. ಕುಸುಮಾಕರ ದೇಸಾಯಿ ಈ ತತ್ವವನ್ನು ಅಕ್ಷರಶಃ ಪಾಲಿಸಿದರು.

ದೇಶದ ರಾಜಕೀಯ ಕ್ಷೇತ್ರದಲ್ಲಿ ದೇಸಾಯಿ ದೊಡ್ಡ ಹೆಸರು ಮಾಡಬಹುದಾಗಿತ್ತು. ಜಾತಿ ರಾಜಕಾರಣದಲ್ಲಿ ಅವರು ಹಿಂದೆ ತಳ್ಳಲ್ಪಟ್ಟಿದ್ದರೂ ಜನಮನದಲ್ಲಿ ಅವರು ಸ್ಥಾಯಿಕವಾಗಿದ್ದರು. ಗುಲಬರ್ಗಾದ ಸಾಂಸ್ಕೃತಿಕ ಬದುಕಿನಲ್ಲಿ, ಸಂವೇದನಾಶೀಲ ಚಟುವಟಿಕೆಗಳ ಮುಖಾಂತರ ದೇಸಾಯಿಯವರು ರಾಜ್ಯದ ಗಮನ ಸೆಳೆದಿದ್ದಾರೆ. ಅದಮ್ಯ ಹೋರಾಟದ ಚೇತನವಾಗಿದ್ದ ಅವರು, ಸಮಾಜದ ನೋವನ್ನು ಅರ್ಥಮಾಡಿಕೊಂಡು ಕಾಳಜಿಯನ್ನು ವ್ಯಕ್ತಪಡಿಸುತ್ತಿದ್ದರು.

ನಾನು ರಾಜ್ಯಶಾಸ್ತ್ರದ ವಿದ್ಯಾರ್ಥಿಯಾಗಿದ್ದು ಸರ್ವಾಧಿಕಾರ, ಪ್ರಜಾಪ್ರಭುತ್ವ, ವಿಕೇಂದ್ರೀಕರಣ, ವೈಯಕ್ತಿಕ ಸ್ವಾತಂತ್ರ್ಯ ಮತ್ತು ನಾಗರಿಕನ ಹಕ್ಕು ಬಾಧ್ಯತೆಗಳನ್ನು ಕಂಡಿದ್ದು ಆಳವಾಗಿ ಯೋಚಿಸಿದ್ದೇನೆ. ಯಾವ ರಾಜ್ಯ ವ್ಯವಸ್ಥೆ ಹಾಗೂ ಸಾಮಾಜಿಕ ವ್ಯವಸ್ಥೆಗಳಿಂದ ಜನಸಾಮಾನ್ಯರ ಜೀವನ ಎತ್ತರಿಸಬೇಕು ಎಂಬುದನ್ನು ರಾಜಕೀಯ ಚಿಂತಕರು ನಿರಂತರವಾಗಿ ಯೋಚಿಸುತ್ತಲೇ ಇದ್ದಾರೆ. ಶ್ರೇಷ್ಠ ಸೃಜನಶೀಲ ಮನಸ್ಸುಳ್ಳ ದೇಸಾಯಿಯಂಥವರು ಸಮಾಜದ

ಸೋಲಿಗೆ ಸ್ಪಂದಿಸಿದ್ದಾರೆ. ಪ್ರಚಾರ ಪ್ರಿಯತೆ ಮತ್ತು ಅಧಿಕಾರದ ಗೀಳು, ವ್ಯಕ್ತಿಯ ಅಧಃಪತನವನ್ನು ತ್ವರಿತಗೊಳಿಸುತ್ತವೆ. ದೇಸಾಯಿಯವರು ಭ್ರಷ್ಟಗೊಳಿಸುವ ಜೀವನ ವಿಧಾನವನ್ನು ಎಂದಿಗೂ ಆಯ್ಕೆ ಮಾಡಿಕೊಳ್ಳಲಿಲ್ಲ. ಸಮಾಜವು ಸರ್ವತೋಮುಖವಾದ ಪ್ರಗತಿಯನ್ನು ಸಾಧಿಸಬೇಕೆಂಬ ಉತ್ಕಟ ಇಚ್ಛೆಯಿಂದ ಶ್ರೀ ದೇಸಾಯಿ ಲೋಹಿಯಾ ಚಿಂತನೆಯ ಬೆಳಕಿನಲ್ಲಿ ರಾಜಕೀಯ, ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಸದಾ ಕ್ರಿಯಾಶೀಲರಾಗಿದ್ದರು.

ಶ್ರೀಮತಿ ಸರಿತಾ ದೇಸಾಯಿ ಪತಿಯೊಂದಿಗೆ ಸಮಾನ ಮನಸ್ಕರಾಗಿ, ಅವರಿಗೆ ನೈತಿಕ ಬೆಂಬಲ ನೀಡಿದ್ದಾರೆ. ಒಬ್ಬರು ರಾಜಕೀಯ ಚಿಂತಕರು. ಇನ್ನೊಬ್ಬರು ಸಾಹಿತಿಗಳು. ಈ ಅಪರೂಪದ ದಂಪತಿಗಳನ್ನು ಕಂಡಾಗ ಹೆಮ್ಮೆಯೆನಿಸುತ್ತಿತ್ತು. ಪತ್ನಿಯೊಂದಿಗೆ ಹಾಸ್ಯ ಸಂವಾದದಲ್ಲಿ ತೊಡಗುವುದು ದೇಸಾಯಿಯವರ ವಿಶೇಷ ಗುಣವಾಗಿತ್ತು.

ಕುಸುಮಾಕರ ದೇಸಾಯಿಯವರಿಗೆ ರುಚಿಕರವಾದ ಊಟ ಸೇರುತ್ತಿತ್ತು. ಹರಟೆಯ ಒಂದು ಸಂದರ್ಭದಲ್ಲಿ ಅವರು ತಮಗೆ ಇಷ್ಟವಾದ ಊಟದ ಬಗ್ಗೆ ಹೇಳಿದರು. ಬಿಸಿರೊಟ್ಟಿ ಮುದ್ದಿಪಲ್ಯ, ಬದನೆಕಾಯಿ ತುಂಬುಗಾಯಿ, ಮಸಾಲೆ ತುಂಬಿದ ಕರಿದ ಬಣಮೆಣಸಿನ ಕಾಯಿ ಅವರಿಗೆ ಇಷ್ಟವಾಗಿದ್ದವು. ಅವರು ಹೃದಯ ಶಸ್ತ್ರ ಚಿಕಿತ್ಸೆಗೆ ಒಳಪಟ್ಟಿದ್ದರೂ, ಅವರೆಂದಿಗೂ ಹೃದ್ರೋಗಿಯಂತೆ ಖಿನ್ನ ಮನಸ್ಕರಾಗಿರಲಿಲ್ಲ. ಮನುಷ್ಯ ಎಷ್ಟು ದಿನ ಬದುಕಿದ ಎನ್ನುವದಕ್ಕಿಂತ ಆತ ಹೇಗೆ ಬದುಕಿದ ಎಂಬುದನ್ನು ನಾವು ಪರಿಗಣಿಸಬೇಕು. ಸಂಘರ್ಷದ ಬದುಕು, ಸರಳ ಜೀವನ, ಉನ್ನತ ಯೋಚನೆ ಇವುಗಳ ಆಧಾರದ ಮೇಲೆ ಕುಸುಮಾಕರ ದೇಸಾಯಿ ನಿಶ್ಚಯವಾಗಿಯೂ ದೊಡ್ಡ ವ್ಯಕ್ತಿ. ನಗರದ ಮಧ್ಯ ಭಾಗದಲ್ಲಿರುವ ಅವರ ಮನೆ ಮುಂದೆ ಹಾದು ಹೋಗುವಾಗ ಅವರಿನ್ನೂ ಮನೆಯಲ್ಲಿದ್ದಾರೆ ಎಂದು ಭಾಸವಾಗುತ್ತದೆ. ಹಿರಿಯ ಚೇತನ ವಾಸವಾಗಿದ್ದ ಆ ಮನೆ, ಎಲ್ಲರೂ ಸ್ಮರಿಸಿಕೊಳ್ಳುವ ನಿವಾಸವಾಗಿದೆ. ಶ್ರೀ ದೇಸಾಯಿ ಈಗ ನಮ್ಮ ಮಧ್ಯದಲ್ಲಿಲ್ಲ. ಆದರೆ ಅವರ ನೆನಪು ಇನ್ನೂ ಹಸಿರಾಗಿದೆ.

ನಿಷ್ಠಾವಂತ ಕಾರ್ಯಕರ್ತ

❀ ಹೀರಾಚಂದ ವಾಘಮೊರೆ

ಭಾರತದಲ್ಲಾಗ ಸಮಾಜವಾದಿ ಚಳವಳಿಯ ಎರಡು ಮುಖ್ಯ ವಿಚಾರಧಾರೆಗಳು ಚಾಲನೆಯಲ್ಲಿದ್ದವು. ಒಂದನೇಯದು ಕೃತಿರೂಪದಲ್ಲಿ ಸಮಾಜವಾದಿ ವಿಚಾರಗಳನ್ನು ಜನತೆಯಲ್ಲಿ ಪ್ರಚಾರಮಾಡುವ ಕಾರ್ಯಕ್ರಮ. ಅದನ್ನು ವಿಧೇಯಕ ಕಾರ್ಯಕ್ರಮವೆನ್ನುತ್ತಿದ್ದರು. ಎರಡನೇಯದು ಚರ್ಚೆಯ ಮೂಲಕ, ವಿದ್ಯಾವಂತರಲ್ಲಿ ಸಮಾಜವಾದಿ ವಿಚಾರಗಳನ್ನು ಹರಡುವುದು. ಸಮಾಜದ ಬಹುಜನರು ನಿರಕ್ಷರರಾಗಿದ್ದ ಅಥವಾ ಅಲ್ಪಸ್ವಲ್ಪ ಕಲಿತವರಿದ್ದರೆ ಅವರನ್ನು ವಿಧೇಯಕ ಕಾರ್ಯಕ್ರಮದಿಂದ ಸಮಾಜವಾದಿ ಧಾರೆಯಲ್ಲಿ ತರಲು ಕೆಲ ನಾಯಕರು ಬಹಳೇ ಒತ್ತು ಕೊಡುತ್ತಿದ್ದರು.

ವಿಧೇಯಕ ಕಾರ್ಯದೊಂದಿಗೆ ಹೋರಾಟದ ಮಾರ್ಗವನ್ನು ಅನುಸರಿಸಲಾಗುತ್ತಿತ್ತು. ಅನ್ಯಾಯದ ವಿರುದ್ಧ ಸೇಡು ತೀರಿಸಿಕೊಳ್ಳಲು ಯುವಕರನ್ನು ಪ್ರೇರೇಪಿಸಲಾಗುತ್ತಿತ್ತು. ಡಾ. ರಾಮಮನೋಹರ ಲೋಹಿಯಾ ಅದನ್ನು ಬಹುವಾಗಿ ಪ್ರೋತ್ಸಾಹಿಸುತ್ತಿದ್ದರು.

ಬೌದ್ಧಿಕ ಚರ್ಚೆಯ ಮೂಲಕ ವಿದ್ಯಾವಂತರನ್ನು, ಅಧ್ಯಯನ ಶಿಬಿರಗಳಲ್ಲಿ ತೊಡಗಿಸಿ, ಸಮಾಜವಾದಿ ಕಾರ್ಯಕರ್ತರನ್ನಾಗಿ ಪ್ರಶಿಕ್ಷಿತಗೊಳಿಸಲಾಗುತ್ತಿತ್ತು. ಅವರಲ್ಲಿ ನಾ.ಗ.ಗೊರೆ, ಮಧು ಲಿಮಯೇ, ಸಾನೇಗುರೂಜಿ ಮೊದಲಾದ ನಾಯಕರು ಶಿಬಿರಗಳಿಗಾಗಿ ಹೆಚ್ಚಿನ ಮಹತ್ವ ನೀಡುತ್ತಿದ್ದರು.

ಕೆಲವು ಅನಿವಾರ್ಯ ಕಾರಣಗಳಿಂದಾಗಿ ಶ್ರೀ ಕುಸುಮಾಕರ ದೇಸಾಯಿಯವರು ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದ್ದರು. ಅವರಿಗೆ ವಿದ್ಯಾವಂತರೊಡನೆ ಚರ್ಚಿಸಿ, ಸಮಾಜವಾದಿ ವಿಚಾರಗಳನ್ನು ಪ್ರಸರಿಸುವುದು ಬಹು ಪ್ರಿಯವಾದ ಕೆಲಸವಾಗಿತ್ತು. ಅವರು ಜ್ಞಾನಮಾರ್ಗದ ಬುದ್ಧಿಜೀವಿಯಾಗಿದ್ದರು. ಚಿಂತನೆ, ಚರ್ಚೆ ಮತ್ತು ಪ್ರಚಾರದೊಂದಿಗೆ ಸಮಾಜವಾದಿ ವಿಚಾರಧಾರೆಯನ್ನು ಪ್ರಸರಿಸುವುದರಲ್ಲಿ ಹೆಚ್ಚಿನ ವಿಶ್ವಾಸವಿತ್ತು. ವಿದ್ಯಾವಂತ ಸಮಾಜದಲ್ಲಿ ಅವಶ್ಯಕ ಜಾಗೃತಿ ತರಲು ಈ ಕಾರ್ಯ ಹೆಚ್ಚು ಅಗತ್ಯವಾಗಿತ್ತು. ಭಾರತದಲ್ಲಿ ಬಹುಸಂಖ್ಯೆಯ ಜನರು ಒಂದು ವೇಳೆ ವಿದ್ಯಾವಂತರಾಗಿದ್ದಲ್ಲಿ ಅವರ ಸಾಮೂಹಿಕ ಸ್ವಾರ್ಥವೂ ದೇಶದ ಹಿತಕ್ಕಾಗಿ ಲಾಭದಾಯಕವೇ ಆಗಿರುತ್ತಿತ್ತು. ಆದರೆ ವಿದ್ಯಾವಂತರ ಸಂಖ್ಯೆ ಕಡಿಮೆಯಾಗಿದ್ದ ಕಾರಣ, ಜನರ ಸಾಮೂಹಿಕ ಸ್ವಾರ್ಥ ಬಹುಜನ ಸಮಾಜವಾದಿಗಳಿಗಾಗಿ ಘಾತಕ ಹಾಗೂ ದೇಶದ ಪ್ರಗತಿಗಾಗಿ ಅಡೆತಡೆಯುಂಟು ಮಾಡಿತ್ತು.

ಆದ್ದರಿಂದಲೇ ವಿದ್ಯಾವಂತ ಯುವಕರನ್ನು ಸಮಾಜವಾದಿ ವಿಚಾರಗಳಿಂದ ಪರಿಚಿತಗೊಳಿಸುವುದು ಅವಶ್ಯಕವೆಂದೇ ಈಗಲೂ ಹೇಳಲಾಗುತ್ತದೆ. ವಿದ್ಯಾವಂತ,

ಮಧ್ಯಮವರ್ಗದ ಸಮಾಜದವರು ಎಲ್ಲಿಯವರೆಗೆ ಈ ದೃಷ್ಟಿಕೋನದಿಂದ ವಿಚಾರ ಮಾಡುವುದಿಲ್ಲವೋ ಅಲ್ಲಿಯವರೆಗೆ ಭಾರತದಂತಹ ಹಿಂದುಳಿದ ದೇಶ ಅಭಿವೃದ್ಧಿ ಹೊಂದಲಾರದು. ಅದಕ್ಕಾಗಿ ಶ್ರೀ ಕುಸುಮಾಕರ ದೇಸಾಯಿ 'ಚರ್ಚೆ'ಯಂತಹ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದರು. ಆಡಂಬರದ ಕಾರ್ಯಕ್ರಮಗಳಿಂದ ಯಾವತ್ತೂ ದೂರವಿರುತ್ತಿದ್ದರು.

ಸಮಾಜವಾದಿ ವಿಚಾರಗಳಲ್ಲಿ ಕೇವಲ ಆಸಕ್ತಿಹೊಂದಿದ್ದರಷ್ಟೇ ಅಲ್ಲದೆ ಅವುಗಳನ್ನು ಕಾರ್ಯಗತಗೊಳಿಸುವುದರಲ್ಲಿಯೂ ಉತ್ಸುಕರಾಗಿದ್ದರು. ಅದೇ ವಿಚಾರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಆದ್ದರಿಂದಲೇ ಪ್ರತಿಯೊಂದು ಕೆಲಸವನ್ನೂ ಸಿದ್ಧಾಂತದ ಆಧಾರದ ಮೇಲೆ ಮಾಡುವುದಕ್ಕಾಗಿ ಪ್ರಯತ್ನಿಸುತ್ತಿದ್ದರು. ಪಕ್ಷಕ್ಕಾಗಿ ಅವಿರತ ಶ್ರಮಿಸುತ್ತಿದ್ದರು. ನಿಷ್ಠಾವಂತ ಕಾರ್ಯಕರ್ತರಾಗಿದ್ದರು.

ಶ್ರೀ ಕುಸುಮಾಕರ ದೇಸಾಯಿಯವರ ಸ್ಮರಣಾರ್ಥ ಪ್ರತಿವರ್ಷ ಸಮಾಜವಾದಿ ವ್ಯಾಖ್ಯಾನ ಮಾಲೆ ಕಾರ್ಯಕ್ರಮವನ್ನು ಕಲಬುರ್ಗಿಯಲ್ಲಿ ಹಮ್ಮಿಕೊಳ್ಳಬೇಕು. ಅದರಿಂದ ಭಾವೀ ನಾಗರಿಕರಿಗೆ ಶ್ರೀ ಕುಸುಮಾಕರರ ಜೀವನ ಹಾಗೂ ಅವರ ವಿಚಾರಗಳ ಪ್ರೇರಣೆ ದೊರಕುತ್ತದೆ. ಶ್ರೋತೃಗಳ ಮುಂದೆ ವಿವಿಧ ಮಜಲುಗಳ ಕುರಿತು ಚಿಂತನೆ, ಚರ್ಚೆ ನಡೆಸುವುದರಿಂದ ಬೌದ್ಧಿಕ ಮಟ್ಟದ ಅಭಿವೃದ್ಧಿಯಾಗುತ್ತದೆ. ಮತ್ತು ಪ್ರತಿಯೊಬ್ಬರೂ ಸಮಾನತೆಯ ಆಧಾರದ ಮೇಲೆ ಜೀವಿಸಬೇಕೆಂಬುವುದರ ವಿಚಾರ, ಶಕ್ತಿ ಯುವಕರಲ್ಲಿ ಒಡಮೂಡುತ್ತದೆ. ಇಂತಹ ವ್ಯಾಖ್ಯಾನ ಮಾಲೆಗಳನ್ನು ಹಮ್ಮಿಕೊಳ್ಳುವುದರಿಂದ ಕಲಬುರ್ಗಿಯ ಜಿಜ್ಞಾಸುಗಳಿಗೆ ನಿರಂತರ ಮಾರ್ಗದರ್ಶನ ದೊರೆಯುತ್ತದೆ. ಅದರಿಂದ ಶ್ರೀ ಕುಸುಮಾಕರ ದೇಸಾಯಿಯವರು ಕಂಡ ಕನಸುಗಳು ಸಾಕಾರಗೊಳ್ಳಲು ಅನುಕೂಲವಾಗುತ್ತದೆ. ಅದೇ ಅವರ ಕುರಿತು ಸಮಾಜ ಕಟ್ಟುವ ಕ್ರಿಯಾಶೀಲ ಮತ್ತು ಪ್ರೇರಣೆದಾಯಕ ಸ್ಮಾರಕವಾಗುತ್ತದೆ. ಅಂತಹ ಕಾರ್ಯಕ್ರಮಗಳಿಂದಲೇ ಶ್ರೀ ಕುಸುಮಾಕರ ದೇಸಾಯಿಯವರಿಗೆ ನಿಜವಾದ ಶ್ರದ್ಧಾಂಜಲಿ ಅರ್ಪಿಸಿದಂತಾಗುತ್ತದೆ.

ಅಳಿಯದ ಅಚ್ಚೊತ್ತಿದ ವ್ಯಕ್ತಿತ್ವ

❁ ಡಾ. ರಮಾಕಾಂತ ನಾ. ಶೆಟ್ಟಿ

ಕುಸುಮಾಕರ ದೇಸಾಯಿಯವರನ್ನು ನಾನು ಮೊದಲ ಕಂಡಿದ್ದು ೧೯೫೪ ರ ಸಪ್ಟೆಂಬರ್‌ನಲ್ಲಿ. ಆ ವೇಳೆಗಾಗಲೇ ನನ್ನ ತಂದೆಯವರು ದೇಸಾಯಿಯವರ ಮನೆಯ ಸಮೀಪದಲ್ಲಿ ಮನೆ ಕಟ್ಟಿಸುತ್ತಾ ಇದ್ದರು. ಹಾಗೂ ದೇಸಾಯಿಯವರ ತಮ್ಮಂದಿರೆಲ್ಲರೂ ನನ್ನ ಗೆಳೆಯರಾಗಿದ್ದರು. ಹೀಗಾಗಿ ಅವರ ಮನೆಗೆ ತಪ್ಪದೆ ಹೋಗಿ ಬರುವದಾಗಿತ್ತು. ಸಾಯಂಕಾಲ ನಾವು ತಿರುಗಾಡಲು ಹೋಗುವಾಗ ಶ್ರೀ ಕುಸುಮಾಕರ ಕೂಡಾ ಹೋಗುತ್ತಿದ್ದರು. ಅವರ ಗಾಂಭೀರ್ಯದ ನಡಿಗೆ, ಮುಗುಳುನಗೆಯಿಂದ ಆಕರ್ಷಿತರಾದ ನಾವು ಆದರಪೂರ್ವಕವಾಗಿ ಅಭಿವಾದಿಸುತ್ತಿದ್ದೆವು.

ನಂತರ ೧೯೫೭ ರಲ್ಲಿ ನಾನು ವೈದ್ಯಕೀಯ ವ್ಯಾಸಂಗಕ್ಕಾಗಿ ಹೈದ್ರಾಬಾದಿಗೆ ಸೇರಿದೆ. ಹಾಗೂ ದೇಸಾಯಿಯವರು ತಮ್ಮ ವ್ಯಾಸಂಗದ ಕಾಲದಲ್ಲಿ ವಾಸಿಸುತ್ತಿದ್ದ ೬೦ ಇಸ್ಲಾಮಿಯಾ ಬಾಜಾರ್ ಎಂದೇ ಹೆಸರಾಗಿರುವ ವಾಸ ಖೋಲಿಯಲ್ಲಿ ನಾನು ಸೇರಿದೆ. ಆಗ ದೇಸಾಯಿಯವರು ಅನೇಕ ಕೆಲಸಗಳಿಗಾಗಿ ಆಗಾಗ್ಗೆ ಹೈದ್ರಾಬಾದಿಗೆ ಬರುತ್ತಿದ್ದರು. ಮತ್ತೆ ಬಂದಾಗ ಸರಳವಾಗಿ ನಮ್ಮ ಜೊತೆಯಲ್ಲಿ ಇರುತ್ತಿದ್ದರು. ಅವರ ಸರಳ ಜೀವನ, ಖಾದಿ ಉಡುಪುಗಳ ಒಲವು ಮತ್ತು ಆದರ್ಶವಾದಿ ವಿಚಾರಗಳಿಂದ ನಾನು ಬಹಳ ಪ್ರಭಾವಿತನಾದೆ. ಇದರಿಂದಾಗಿ ನಮ್ಮ ಆತ್ಮೀಯತೆ ಇನ್ನೂ ಹೆಚ್ಚು ಬೆಳೆಯಿತು. ಅಂದಿನಿಂದ ಇಲ್ಲಿಯವರೆಗೂ ನಾನು ಇವರ ಇನ್ನೊಬ್ಬ ತಮ್ಮನೆಂದೆ ಪರಿಗಣಿಸಲ್ಪಟ್ಟೆ.

ನಾನು ವೈದ್ಯಕೀಯ ವಿದ್ಯಾಭ್ಯಾಸವನ್ನು ಮುಗಿಸಿ ಹೈದ್ರಾಬಾದ್‌ನಲ್ಲಿ ಕೆಲಸಕ್ಕೆ ಸೇರಿದ ನಂತರ ನಮ್ಮ ಸಂಪರ್ಕ ಇನ್ನೂ ಹೆಚ್ಚಾಗುತ್ತಾ ಹೋಯಿತು. ನಾನು ಕಲ್ಬುರ್ಗಿಯ ಮ.ರಾ. ವೈದ್ಯಕೀಯ ಮಹಾವಿದ್ಯಾಲಯವನ್ನು ೧೯೬೫ ರಲ್ಲಿ ಸೇರಿದ ನಂತರ ನಮ್ಮ ಒಡನಾಟ ಇನ್ನೂ ಹೆಚ್ಚುತ್ತ ಸಂಜೆಯ ಹಲವಾರು ಗಂಟೆಗಳನ್ನು ನಾನು ಕುಸುಮಣ್ಣನ ಮನೆಯಲ್ಲಿ ಕಳೆಯುತ್ತಿದ್ದೆ. ಆಗ ದಿನಂಪ್ರತಿ ನಡೆಯುವ ರಾಜಕಾರಣ, ಕಲ್ಬುರ್ಗಿಯ ಆಗುಹೋಗುಗಳು, ಪಾರಿವಾರಿಕ ಸಮಸ್ಯೆಗಳು ಹಾಗೂ ಇನ್ನಿತರ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಿದ್ದೆವು. ಅವರ ವಸ್ತು ವೀಕ್ಷಣೆ ಹಾಗೂ ವಿವರಣೆಯಿಂದ ನಾನು ಬಹಳ ಪ್ರಭಾವಿತನಾದೆ ಹಾಗೂ ಅದನ್ನೆ ಅನುಕರಣೆ ಮಾಡಲು ಈಗಲೂ ಪ್ರಯತ್ನಿಸುತ್ತಿದ್ದೇನೆ.

ಕುಸುಮಣ್ಣನಲ್ಲಿ ಕಂಡ ಹಲವಾರು ಅನುಕರಣೀಯ ವಿಚಾರಗಳನ್ನು ನಾನು ಇಲ್ಲಿ ಮಂಡಿಸಲಿಚ್ಛಿಸುತ್ತೇನೆ. ಮೊಟ್ಟ ಮೊದಲನೆಯದಾಗಿ ಸರಳ ಜೀವನ. ಪ್ರಜಾ ಸೋಸಲಿಸ್ಟ್ ಪಾರ್ಟಿಯ ಸದಸ್ಯರಾದರೂ ಅವರು ಗಾಂಧೀಜಿಯ ತತ್ವಗಳಾದ ಖಾದಿ, ಸರಳ ಜೀವನ, ಸ್ವಪ್ರೋತ್ತೇಜಿಗಳನ್ನು ಅನುಸರಿಸಿಕೊಂಡಿದ್ದರು. ತಮಗೆ ಸರಿ ಎಂದು ಕಂಡದ್ದನ್ನು ಅದಿ

ತೋರಿಸುತ್ತಿದ್ದರು. ಯಾರ ಒತ್ತಡಕ್ಕೂ ಮಣಿಯದೆ ತಮ್ಮ ವಿಚಾರಗಳನ್ನು ಮಂಡಿಸುತ್ತಿದ್ದರು.

ಎರಡನೆಯದಾಗಿ, ಅವರ ವಿಚಾರ ವಿಶ್ಲೇಷಣೆ. ಪ್ರತಿಯೊಂದು ವಾದವನ್ನು ಅವರು ತಮ್ಮದೇ ಆದ ಶೈಲಿಯಲ್ಲಿ ವಿವರಿಸುತ್ತಿದ್ದರೆ, ಅವರು ಯಾವಾಗಲೂ ವಸ್ತುಸ್ಥಿತಿಯನ್ನು ವಿವರಿಸುತ್ತಾ ಮುಂದೆ ಆಗಬಹುದಾದ ಬೇರೆ ಬೇರೆ ಪರಿಣಾಮಗಳನ್ನು ಮಂಡಿಸುತ್ತಿದ್ದರು. ಇದು ನನ್ನ ಮೇಲೆ ಬಹಳ ಪರಿಣಾಮ ಬೀರಿದೆ. ಹಾಗೂ ಇದನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ.

ವೃತ್ತಿಯಿಂದ ವಕೀಲನಾಗಿದ್ದರಿಂದ ಅವರು ಯಾವಾಗಲೂ ಎದುರಾಳಿ ಏನು ಮಾಡಬಹುದು ಎಂದು ಮೊದಲೇ ವಿಚಾರ ಮಾಡಿ ತಕ್ಕ ಕ್ರಮಗಳನ್ನು ಕೈಕೊಳ್ಳುತ್ತಿದ್ದರು. ಇದರ ಅನುಭವ ನಾನು ನನ್ನ ಜೀವನದಲ್ಲಿ ಅನೇಕ ಸಲ ಪಡೆದಿದ್ದೇನೆ.

ಅವರು ತಮ್ಮ ಜೀವನದಲ್ಲಿ ರಾಜಕೀಯವನ್ನು ಪ್ರವೇಶಿಸಲು ಪ್ರಯತ್ನಪಟ್ಟರು. ಆದರೆ ಅವರ ಸ್ಪಷ್ಟೋಕ್ತಿ, ಉದಾರ ಭಾವನೆ, ಅಸೂಯೆ ಹಾಗೂ ಜಾತೀಯ ರಾಜಕಾರಣಗಳು ಅವರ ರಾಜಕೀಯ ಏಳಿಗೆಗೆ ಮುಳುವಾದವು. ಅನೇಕ ಸಲ ಚುನಾವಣೆಗಳನ್ನು ಎದುರಿಸಿದರು, ಯಶಸ್ಸು ಅವರ ಪಾಲಿಗೆ ಒಲಿಯಲಿಲ್ಲ. ಹಾಗಿದ್ದರೂ ತಮ್ಮ ಪಕ್ಷ ನಿಷ್ಠ, ಪ್ರಾಮಾಣಿಕತೆ ಹಾಗೂ ಆಚಾರ ವಿಚಾರಗಳನ್ನು ಅವರು ಎಂದಿಗೂ ಬಲಿ ಕೊಡಲಿಲ್ಲ ಹಾಗೂ ಪಕ್ಷಾಂತರ ಮಾಡಲಿಲ್ಲ. ಅವರ ವಿರೋಧಿಗಳು ಕೂಡಾ ಅವರ ವಿಚಾರ ವಿನಿಮಯನ್ನು ಆಧಾರಕೊಟ್ಟು ಕೇಳುತ್ತಿದ್ದರು. ಅವರ ಜೀವನದ ಆದರ್ಶವೆಂದರೆ ಗಾಂಧೀಜಿ, ಜಯಪ್ರಕಾಶ ನಾರಾಯಣ. ೧೯೭೬-೭೭ ರಲ್ಲಿ ತುರ್ತು ಪರಿಸ್ಥಿತಿಯಲ್ಲಿ ಜೈಲುವಾಸ ಅನುಭವಿಸಿದರು. ಇದು ಅವರ ದೃಢ ನಿರ್ಧಾರ ಹಾಗೂ ಅವಿಚಲಿತ ರಾಜಕಾರಣವನ್ನು ಎತ್ತಿ ತೋರಿಸುತ್ತದೆ. ತುರ್ತು ಪರಿಸ್ಥಿತಿಯಲ್ಲಿ ಜೈಲಿಗೆ ಹೋಗಿ ಬಂದು ಅನೇಕ ಆರ್ಥಿಕ ಸಮಸ್ಯೆಗಳನ್ನು ಎದುರಿಸಿದರೂ ತಮ್ಮ ನಿರ್ಧಾರ ಅಟಲ ವಿಶ್ವಾಸವನ್ನು ಬದಲಿಸಲಿಲ್ಲ. ರಾಮಕೃಷ್ಣ ಹೆಗಡೆ, ದಿ. ಜೆ. ಹೆಚ್. ಪಟೇಲ್ ಮುಂತಾದ ಮುಂದಾಳುಗಳ ಜೊತೆಗೆ ಅವಿರತ ಸಂಪರ್ಕಗಳನ್ನು ಹೊಂದಿದ್ದು ಯಾವಾಗಲೂ ಪಕ್ಷದ ಹಿತಾಸಕ್ತಿಗಳ ಬಗ್ಗೆ ಚರ್ಚೆ ನಡೆಸುತ್ತಿದ್ದರು.

ರಾಮಕೃಷ್ಣ ಹೆಗಡೆಯವರು ಅವರನ್ನು ಜಲಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಿದ ನಂತರ ಅವರ ಮುಖ್ಯವಾದ ಕಾರ್ಯವೆಂದರೆ ಕಲ್ಬುರ್ಗಿಗೆ ಭೀಮಾ ನದಿಯಿಂದ ಕುಡಿಯುವ ನೀರಿನ ಪೂರೈಕೆ. ಇದು ಇಂದು ಕಲ್ಬುರ್ಗಿಯ ನೀರಿನ ಪೂರೈಕೆಯನ್ನು ಕೆಲಮಟ್ಟಿಗಾದರೂ ಹೋಗಲಾಡಿಸಿದೆ.

ಕೊನೆಯ ದಿನಗಳನ್ನು ಅವರಿಗೆ ನೆಮ್ಮದಿ ಹಾಗೂ ಸಂತೃಪ್ತಿ ತಂದುದು ಅವರ ಶ್ರೀಮತಿಯವರಿಗೆ ವಿಧಾನ ಪರಿಷತ್ತಿನ ಸದಸ್ಯತ್ವ ದೊರಕಿದುದು. ತಮಗೆ ದೊರಕದ ಮನ್ನಣೆ ತಮ್ಮ ಪತ್ನಿಗಾದರೂ ಸಿಕ್ಕಿದ್ದು ಅವರಿಗೆ ಸಂತಸ ತಂದುಕೊಟ್ಟಿತು.

ಎರಡು ಬಾರಿ ಹೃದಯಾಘಾತ ಹಾಗು ಬೈಪಾಸ್ ಶಸ್ತ್ರ ಚಿಕಿತ್ಸೆಯನ್ನು ಪಡೆದರೂ ಕೂಡಾ ಅವರ ಸರಳತೆ, ಹಸನ್ಮುಖಿ ಶೈಲಿ ಹಾಗೂ ವಿಚಾರಗಳಲ್ಲೇನೂ ಬದಲಾವಣೆಗಳು ಬರಲಿಲ್ಲ. ಅವರ ಜೀವನ ಮಟ್ಟವೆಂದರೆ "ಜೀವನದಲ್ಲಿ ಶ್ರೇಷ್ಠತೆ, ಬಯಕೆ, ಆಕಾಂಕ್ಷೆಗಳು ಪ್ರತಿಯೊಬ್ಬನ ಬಯಕೆಯಾಗಿರುತ್ತದೆ. ಅದಕ್ಕೆ ನಾನು ಹೊರತಲ್ಲ. ಆದರೆ ನಾನು ಆಚಾರ, ನಿಯಮ, ಹಾಗೂ ನಿಷ್ಠೆಗಳನ್ನು ರಾಷ್ಟ್ರೀಯ ಭಾವನೆ ಹಾಗೂ ಸತ್ಯ ಮಾತುಗಳನ್ನು ಬಲಿಕೊಡಲಾರೆ ಹಾಗೂ ಇವುಗಳನ್ನು ಹೊಂದಿ ತಲೆ ಎತ್ತಿ ನಡೆಯಲು ಇಚ್ಛಿಸುತ್ತೇನೆ."

ನಮ್ಮ ಇಂದಿನ ಜೀವನದಲ್ಲಿ ಎಷ್ಟು ಜನರು ಈ ಭಾವನೆಗಳಿಗೆ ಅಂಟಿಕೊಂಡಿರುತ್ತಾರೆ? ಈ ಉದಾತ್ತ ಭಾವನೆಗಳನ್ನು ಅಳವಡಿಸಿಕೊಂಡು ಇನ್ನೊಬ್ಬರು ಅದೇ ರೀತಿ ನಡೆಯಲು ದಾರಿ ತೋರಿಸಿಕೊಟ್ಟ ಕುಸುಮಣ್ಣ ನನಗೆ ಮರೆಯಲಾರದ ವ್ಯಕ್ತಿ.

ಅದೇ ಅವರ ಅಳಿಯದ ಅಚ್ಚೊತ್ತಿದ ವ್ಯಕ್ತಿತ್ವ.

ಬದುಕು ಕಲಿಸಿದವರು

❀ ಸುರೇಶ ಮಂದರವಾಡ

ದಿ. ಸಂಜೀವರಾವ ದೇಸಾಯಿಯವರ ಹೆಸರು ಗುಲಬರ್ಗಾದಲ್ಲಿ ಹೊಸದೇನಲ್ಲ, ಹಾಗೆ ಅವರ ಮಗ ದಿ. ಕುಸುಮಾಕರ ದೇಸಾಯಿಯವರದು.

ನಮ್ಮ ತಂದೆ ದಿ. ಗೋವಿಂದರಾವ ಕುಲಕರ್ಣಿ ಮಂದರವಾಡೆ ಕುಟುಂಬದವರ ಹಾಗೂ ದೇಸಾಯಿ ಕುಟುಂಬದವರ, ಸ್ನೇಹ, ಬಾಂಧವ್ಯ ಒಂದು ವಿಶೇಷವಾಗಿ ಉಳಿದಿದೆ. ಇದು ಪ್ರೀತಿ, ವಿಶ್ವಾಸದ ಸಂಬಂಧ ಹೊರತು, ರಕ್ತ ಸಂಬಂಧ ಅಥವಾ ಬಳಗವಲ್ಲ. ನಮ್ಮ ತಂದೆಯವರು ದಿ. ಸಂಜೀವರಾವ ಅವರ ಆಶ್ರಯ, ಸಲಹೆಗಳಿಂದ, ತಮ್ಮ ಜೀವನದ ರೂಪ, ರೇಖೆಗಳನ್ನು ಬದಲಾಯಿಸಿ ೬೦ ವರ್ಷಗಳ ಹಿಂದೆಯೇ ಬ್ಯಾಂಕ್‌ನ ಮ್ಯಾನೇಜರ್ ಆಗಿ ಸಮಾಜದಲ್ಲಿ ಒಂದು ವಿಶೇಷ ಸ್ಥಾನ ಪಡೆದಿದ್ದರು.

ಈ ಬಾಂಧವ್ಯವು ದಿ. ಸಂಜೀವರಾಯರ ಮಕ್ಕಳಿಂದ ಮುಂದುವರೆದಿದೆ. ವಿಶೇಷವಾಗಿ ದಿ. ಕುಸುಮಾಕರ ಮತ್ತು ಅವರ ಪತ್ನಿ ಶ್ರೀಮತಿ ಸರಿತಾ ಕುಸುಮಾಕರ (ಭಾಬಿ) ನಮ್ಮ ತಂದೆಗೆ ಅಣ್ಣನವರ ಸ್ಥಾನ ಕೊಟ್ಟು "ಗೋವಣ್ಣ" ಎಂದೇ ಕರೆಯುತ್ತಿದ್ದರು. ದೇಸಾಯಿಯವರ ಮನೆಯಲ್ಲಿ ಯಾವುದೆ ಮದುವೆ ಅಥವಾ ಬೇರೆ ಏನಾದರೂ ಕಾರ್ಯಕ್ರಮವಿದ್ದಲ್ಲಿ ಗೋವಣ್ಣ ಅವರ ಜೊತೆ ಚರ್ಚೆ, ಸಲಹೆ ಇಲ್ಲದೆ ಆಗುತ್ತಿದ್ದಿಲ್ಲ. ಹೀಗಾಗಿ ಅವರು ದೇಸಾಯಿ ಕುಟುಂಬದಿಂದ ಗೌರವ ಮತ್ತು ವಿಶ್ವಾಸಕ್ಕೆ ಪಾತ್ರರಾಗಿದ್ದರು.

ನಾನು ಚಿಕ್ಕವನಿದ್ದಾಗಿನಿಂದಲೂ ದಿ. ಕುಸುಮಾಕರ ಅವರಿಗೆ ಕುಸುಮಾಕಾಕ (ಚಿಕ್ಕಪ್ಪ) ಎಂದೇ ಕರೆದಿದ್ದು, ಅವರು ನಮಗೆ ತಮಾಷೆ ಆಗಿ ಭೇಟಿ ಆದಾಗಲೆಲ್ಲಾ "ಏನು ಕುಲಕರ್ಣಿ, ಏನು ಮಾಡಲಿಕತ್ತಿದ್ದೀರಿ ಮತ್ತು ಯಾವ ಕ್ಲಾಸ ಓದಲಿಕತ್ತಿದ್ದೀರಿ" ಎಂದು ಕೇಳುವರು.

ದೇಸಾಯಿ ಬಂಧುಗಳು ಹೈದ್ರಾಬಾದನಲ್ಲಿ ಇಸಾಮಿಯಾ ಬಾಜಾರನಲ್ಲಿ ಒಂದು ಬಾಡಿಗೆ ಮನೆಯಲ್ಲಿ ಇರುತ್ತಿದ್ದರು. ಅವರೆಲ್ಲರ ವಿದ್ಯಾಭ್ಯಾಸ ಆದ ಮೇಲೆ ಅಲ್ಲಿಂದ ಬೇರೆ ಊರುಗಳಿಗೆ ಹೋಗುವ ಸಂದರ್ಭದಲ್ಲಿ, ಅದೇ ಮನೆಯಲ್ಲಿ ನನಗೆ ಇರುವದಕ್ಕೆ ಅವಕಾಶ ಮಾಡಿಕೊಟ್ಟರು. ಆವಾಗ ನಾನು ಕಾಲೇಜನಲ್ಲಿ ಓದುತ್ತಿದ್ದೆನು. ೧೯೫೭-೫೮ ಅಥವಾ ೧೯೫೮-೫೯ ವರ್ಷ ದಿ. ಕುಸುಮಾಕರ ದೇಸಾಯಿಯವರು LLM ಪರೀಕ್ಷೆಗೆಂದು ಬಂದರು. ಮನೆ ಚಿಕ್ಕದಾಗಿದ್ದರಿಂದ ನಾನು ನನ್ನ ಸ್ನೇಹಿತರ ಮನೆಗೆ ಅಭ್ಯಾಸ ಮಾಡುವುದಕ್ಕೆ ರಾತ್ರಿ ಹೋಗುತ್ತಿದ್ದೆ. ಆದರೆ ನನಗೆ ನಿಕಟವಾಗಿ ಇರುವ ಸ್ವಲ್ಪ ದಿವಸಗಳಲ್ಲಿಲ್ಲದಿದ್ದೂ್ರ, ನನಗೆ ಒಂದು ತರಹದ ಆದರ್ಶ, ಧೈರ್ಯ ತುಂಬಿ ನನ್ನ ಬಾಳಿನಲ್ಲಿ ಹೊಸ ಚೇತನ ತಂದು ಕೊಟ್ಟರು. ನಾನು ಪದವಿ ಮುಗಿಸಿಕೊಂಡು

ಬೆಂಗಳೂರಿನಲ್ಲಿ ಸಹಕಾರಿ ಸ್ವಾಮ್ಯದ ಕಂಪನಿ ಸೇರಿದಾಗ ಅವರು ತುಂಬ ಸಂತೋಷಪಟ್ಟರು. ಮತ್ತು ನನಗೆ ಕಂಪನಿವತಿಯಿಂದ ---- ಕಳಿಸಿಕೊಟ್ಟಿದ್ದರು. ಹಿಂದಿರುಗಿ ಬಂದ ಮೇಲೆ ಅವರಿಗೆ ನಾನು ಭೇಟಿ ಆದಾಗ ನನ್ನ ಕೆಲಸ, ಅಲ್ಲಿ ಕಲಿತದ್ದು ಮತ್ತು ಅದರ ಉಪಯೋಗದ ಬಗ್ಗೆ ವಿಚಾರಿಸಿ ಸಂತೋಷ ಪಡುವರು.

ನಾನು ವಿ. ಕುಸುಮಾಕರ ದೇಸಾಯಿ ಅವರ ಜೊತೆ ಜಾಸ್ತಿ ಸಮಯ ಕಳೆಯದೇ ಹೋದರೂ, ಅವರು ತೋರಿಸಿದ ಅಕ್ಕರೆ ಮತ್ತು ಅಭಿಮಾನ ಯಾವಾಗಲೂ ಮರೆಯುವದಕ್ಕೆ ಆಗುವದಿಲ್ಲ.

ಅಪ್ರತಿಮ

❀ ಸುರೇಶ ಹೆಬ್ಳಿಕರ್

ಕುಸುಮಾಕರ ದೇಸಾಯಿ ಒಬ್ಬ ಸಾತ್ವಿಕ, ಸಂಪನ್ನ ಹಾಗೂ ಸರಳ ಸ್ವಭಾವದ ಮನುಷ್ಯ. ಎತ್ತರ ನಿಲುವಿನ ಕುಸುಮಾಕರ ದೇಸಾಯಿ ಮಾತನಾಡಲು ಶುರು ಮಾಡಿದರೆ ಅವರ ಜೊತೆ ಎಷ್ಟು ಹೊತ್ತು ಕಾಲ ವ್ಯಯವಾಯಿತೆಂದು ತಿಳಿಯುತ್ತಿರಲಿಲ್ಲ. ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಸಾಹಿತ್ಯದ ವಿಷಯಗಳ ಬಗ್ಗೆ ದೀರ್ಘವಾಗಿ ಚರ್ಚಿಸುವ ಸಾಮರ್ಥ್ಯ ಕುಸುಮಾಕರರಲ್ಲಿ ಇತ್ತು. ಇಂಗ್ಲೀಷ್ ಹಾಗೂ ಕನ್ನಡ ಸಾಹಿತ್ಯದ ಬಗ್ಗೆ ಆಳವಾಗಿ ತಿಳಿದುಕೊಂಡ ವ್ಯಕ್ತಿಯಾಗಿದ್ದರು. ನಾನು ಯಾವಾಗಲೂ ಅವರ ಜೊತೆ ಈ ಅನೇಕ ವಿಷಯಗಳ ಬಗ್ಗೆ ಚರ್ಚಿಸಲು ಇಷ್ಟಪಡುತ್ತಿದ್ದೆ.

ನಾನು ಮೊದಲು ಕುಸುಮಾಕರ್ ಮತ್ತು ಸರಿತಾರನ್ನು ಭೇಟಿಯಾದುದ್ದು ಸ್ನೇಹಿತ ರಮೇಶ್ ಬಂದಗದ್ದೆ ಮೂಲಕ. ರಮೇಶ ಬಂದಗದ್ದೆ ಮನೆಯಲ್ಲಿ ಎಲ್ಲ ತರದ ಜನ ಭೇಟಿಯಾಗುತ್ತಿದ್ದರು. ಸಾಹಿತಿಗಳು, ಸಮಾಜ ಸೇವಕರು ಮತ್ತು ರಾಜಕಾರಣಿಗಳ ಸಂಗಮ ರಮೇಶನ ಮನೆಯಾಗಿತ್ತು. ಇಲ್ಲಿ ಯಾವ ರಾಜಕಾರಣಿಯೂ ಅಬ್ಬರದಿಂದ ವರ್ತಿಸಿದ್ದನ್ನು ನಾನು ಕಂಡಿಲ್ಲ. ಅಬ್ಬರ ಮಾಡುತ್ತಿದ್ದ ಒಬ್ಬನೆ ವ್ಯಕ್ತಿಯೆಂದರೆ ರಮೇಶ ಬಂದಗದ್ದೆ. ಆದರೆ ಅವನ ಅಬ್ಬರ ರಾಜಕೀಯ ಮತ್ತಿನದ್ದಾಗಿರಲಿಲ್ಲ. ಅವನ ಸ್ವಭಾವವೆ ಹಾಗಿತ್ತು. ಅನಿಸಿದ್ದನ್ನು, ಕಂಡಿದ್ದನ್ನು ಸ್ಪಷ್ಟವಾಗಿ ಮಾತನಾಡುವ ಮನುಷ್ಯ ಅವನಾಗಿದ್ದ. ದೇಸಾಯಿ ಅವನನ್ನು ಅದೇ ಕಾರಣಕ್ಕಾಗಿ ಇಷ್ಟಪಡುತ್ತಿದ್ದರು.

ಕುಸುಮಾಕರ ದೇಸಾಯಿ ಕೂಡ ಅದೇ ಸ್ವಭಾವವುಳ್ಳವರಾಗಿದ್ದರು. ಆದರೆ ಅವರು ಎಂದೂ ಅಬ್ಬರದಿಂದ ಮಾತನಾಡಿರಲಿಲ್ಲ. ನೋಡಲು ಗಂಭೀರ ಸ್ವಭಾವದವರಂತೆ ಕಂಡರೂ ಮನಸ್ಸು ಹೂವಿನಂತಹುದು. ಅವರ ಜೀವನದಲ್ಲಿ ಎಷ್ಟೋ ಜನ ಅವರಿಂದ ಪ್ರಯೋಜನ ಪಡೆದುಕೊಂಡಿದ್ದಾರೆ. ಆದರೆ ಕುಸುಮಾಕರ ಮಾತ್ರ ಎಂದೂ ಬೇರೆಯವರಿಂದ ಸಹಾಯಪಡೆದವರೂ ಅಲ್ಲ, ಕೇಳಿದವರೂ ಅಲ್ಲ. ರಾಜಕೀಯದಲ್ಲಿದ್ದೂ ಇಲ್ಲದಂತಿದ್ದರು. ರಾಜಕಾರಣದಲ್ಲಿ ಎಷ್ಟೋ ಗಣ್ಯರು ಅವರ ಸ್ನೇಹಿತರಾಗಿದ್ದರೂ ದೇಸಾಯಿ ಮಾತ್ರ ತುಂಬ ಸರಳ ಸಾತ್ವಿಕ ಜೀವನವನ್ನು ನಡೆಸಿದರು. ಅವರಿಗೆ ಅನೇಕ ಅಡಚಣೆಗಳು ಕಾಡುತ್ತಿದ್ದರೂ ಎಂದೂ ಸಹಾಯಕ್ಕೋಸ್ಕರ ಬಾಯಿ ಬಿಡಲಿಲ್ಲ.

ನಮ್ಮ ಮನೆಗೆ ಆಗಾಗ ಇಬ್ಬರೂ ದಂಪತಿಗಳು ಭೇಟಿ ನೀಡುತ್ತಿದ್ದರು. ನನ್ನ ಹೆಂಡತಿ ಮಾಲತಿಯನ್ನು ಕಂಡರೆ ಇಬ್ಬರೂ ತುಂಬಾ ಇಷ್ಟಪಡುತ್ತಿದ್ದರು. ನಮ್ಮ ಸಂಬಂಧ ತುಂಬಾ ಆತ್ಮೀಯವಾಗಿದ್ದರಿಂದ ಕುಸುಮಾಕರ ತಮ್ಮ ಎಲ್ಲ ವೈಯಕ್ತಿಕ ಹಾಗೂ ಸಾರ್ವತ್ರಿಕ ಸಮಸ್ಯೆಗಳನ್ನು ನೇರವಾಗಿ ಚರ್ಚಿಸುತ್ತಿದ್ದರು.

ಕುಸುಮಾಕರ ದೇಸಾಯಿಯವರ ಆಳವಾದ ಜ್ಞಾನ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ, ರಾಜಕೀಯ ಹಿನ್ನೆಲೆ ಹಾಗೂ ಅವರ ಅಪ್ರತಿಮ ನಿಷ್ಠಾವಂತಿಕೆ ಇವೆಲ್ಲಗಳನ್ನು ಗಮನಿಸಿದಾಗ ಅವರೇಕೆ ದೇಶದ ರಾಜಕೀಯದಲ್ಲಿ ಒಬ್ಬ ಹಿರಿಯ ಮುಖಂಡರಾಗಿರಲಿಲ್ಲ ಎಂದು ಭಾವನೆ ಬರುವುದು ಸಹಜ. ಕರ್ನಾಟಕದಲ್ಲಿಯ ಎಷ್ಟೋ ಸಮಾಜವಾದಿಗಳು ದೇಶದ ಹಾಗೂ ರಾಜ್ಯದ ರಾಜಕೀಯ ಮುಖಂಡತ್ವವನ್ನು ವಹಿಸಿದ್ದಾಗಲು ಕುಸುಮಾಕರರಿಗೆ ನೆರವಾಗಲಿಲ್ಲ. ಅವರ ಆತಿಥ್ಯವನ್ನು ಪಡೆದರೆ ವಿನಃ ಕಷ್ಟಕಾಲದಲ್ಲಿ ಅವರಿಗೆ ಸಹಾಯ ಮಾಡಲಿಲ್ಲ. ರಾಮಕೃಷ್ಣ ಹೆಗಡೆ ಒಬ್ಬರೆ ಅವರ ಬಗ್ಗೆ ಆಗ ಈಗ ವಿಚಾರಿಸುತ್ತಿದ್ದರೆಂದು ನನಗೆ ತಿಳಿದು ಬಂದಿತ್ತು. ದೇಸಾಯಿಯವರಿಗೆ ಮುಂಬಯಿಯಲ್ಲಿ ಬೈಪಾಸ್ ಸರ್ಜರಿ ಆದಾಗ ನಾನು ಮುಂಬಯಿ ಆಸ್ಪತ್ರೆಗೆ ಫೋನ್ ಮಾಡಿದ್ದೆ. ಅವರ ಸಂಬಂಧಿ ಡಾಕ್ಟರರೆ ನನ್ನ ಜತೆ ಮಾತನಾಡಿದ್ದರು. ಏನು ಚಿಂತೆಯಿಲ್ಲ ಎಂದು ಹೇಳಿದ್ದರು.

ಬೈಪಾಸ್ ಸರ್ಜರಿ ಆದ ಮೇಲೆ ಒಂದು ದಿನ ನಮ್ಮ ಮನೆಗೆ ಊಟಕ್ಕೆ ಬಂದಾಗ ಹೀಗೆ ಮಾತುಕತೆ ನಡೆಯಿತು. ದೇಸಾಯಿಯವರ ಆರೋಗ್ಯ ಸರಿಯಿಲ್ಲದಿದ್ದಾಗ ಹೆಗಡೆ ಯಾವ ರೀತಿ ಸಹಾಯ ಮಾಡಿದರೆಂದು ತಿಳಿದು ಬಂದಿದ್ದು ಆಗಲೆ.

ಕುಸುಮಾಕರ ದೇಸಾಯಿ ಈಗಿಲ್ಲ, ಅವರ ನೆನಪು ಮಾತ್ರ ಇದೆ. ಅವರ ರೀವಿ, ಗತ್ತು, ಸೃಜನಶೀಲತೆ ಸದಾ ಜೀವಂತವಾಗಿ ನನ್ನ ಮನಸ್ಸಿನಲ್ಲಿ ಉಳಿದಿದೆ. ಸರಿತಾ ಈಗ ಒಬ್ಬಂಟಿಗರು. ಆರೋಗ್ಯ ಕೂಡ ಅಷ್ಟು ಸರಿ ಇಲ್ಲ. ಆದರೂ ಕುಸುಮಾಕರರ ನೆನಪಿನ ನೆರಳಿನಲ್ಲಿ ಮತ್ತು ಅವರು ತೋರಿದ ಹಾದಿಯಲ್ಲಿ ಮಾನಸಿಕ ಧೈರ್ಯದಿಂದ ತನ್ನ ಕೈಲಾದಷ್ಟು ಸೇವೆಯನ್ನು ಸಮಾಜಕ್ಕೆ ಮುಡಿಪಾಗಿಟ್ಟು ಬಾಳುತ್ತಿದ್ದಾರೆ. ಅವರಿಗೆ ಕೊನೆಯವರೆಗೂ ದೇವರು ಶಕ್ತಿ ಕೊಡಲೆಂದು ನಾನು ಹಾರೈಸುವೆ.

ಅಚ್ಚಳಿಯದ ನೆನಪುಗಳು

❁ ಗೋಪಾಲ ಆಶ್ರಿತ

ನಮ್ಮ ದೇಶದ ಸ್ವಾತಂತ್ರ್ಯಾಂದೋಲನದ ಅವಧಿಯಲ್ಲಿ ಪಾಲ್ಗೊಂಡಿದ್ದ ತರುಣ ಪೀಳಿಗೆಯವರಿಗೆ 'To be young war heaven itself'' ಎಂಬ ವರ್ಡ್ಸ್‌ವರ್ಥ್‌ನ ಸಾಲುಗಳು ಪ್ರೇರಣೆ ನೀಡಿರಬೇಕು. ಮಹಾತ್ಮಾಗಾಂಧಿ, ನೆಹರು ಮತ್ತು ಸರ್ದಾರ ಪಟೇಲರು ತರುಣರ ಪಾಲಿನ ಆರಾಧ್ಯ ದೇವತೆಗಳಾಗಿದ್ದ ಕಾಲವದು. ರಾಷ್ಟ್ರವಾದಿ ಹಿನ್ನೆಲೆಯುಳ್ಳ ಮನೆತನದಲ್ಲಿ (೧೯೨೮ ರಲ್ಲಿ) ಹುಟ್ಟಿದ ಕುಸುಮಾಕರ ದೇಸಾಯಿಯವರು ಆ ಆಂದೋಲನದ ಪ್ರಭಾವಕ್ಕೊಳಗಾದದ್ದು ಸಹಜ. ಅವರ ಮನೆಯನ್ನು "ಗುಲ್ಬರ್ಗಾದ ಆನಂದ ಭವನ"ವೆಂದೇ ಗುರುತಿಸಲಾಗುತ್ತಿತ್ತೆಂದು ನನ್ನ ಬಂಧುಗಳೊಬ್ಬರು ಹೇಳಿದ್ದು ನೆನಪಿದೆ. ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಖಾದಿ ಧರಿಸಲು ಪ್ರಾರಂಭಿಸಿದ ಕುಸಮಾಕರ ದೇಸಾಯಿ, ವಕೀಲಿ ವೃತ್ತಿ ಪ್ರಾರಂಭಿಸಿದ ಮೇಲೂ ಟೆರಿಲೀನ್, ಟೆರಿಪೂಲ್, ಪೊಲಿಸ್ಟರಗಳ ಮೃದು ಆಕರ್ಷಣೆಗೆ ಮಾರು ಹೋಗದೇ, ಕೊನೆಯವರೆಗೂ ಅಪ್ಪಟ ಖಾದಿಧಾರಿಯಾಗಿದ್ದುದೇ ಅವರ ವೈಶಿಷ್ಟ್ಯ.

ಅವರೊಬ್ಬ ಯಶಸ್ವೀ ನ್ಯಾಯವಾದಿಯಾಗಿ ಪ್ರಸಿದ್ಧರಾದದ್ದಲ್ಲದೆ, ಯಶಸ್ವೀ ಕಾನೂನು ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದುಂಟು. "ಬಿಡುವಿಲ್ಲದಷ್ಟು ಕೋರ್ಟ್ ಕೆಲಸ ಇದ್ದಾಗ, ಈ part time job ಯಾಕ ಬೇಕು ನಿನಗ?.... ಬಿಟ್ಟು ಬಿಡು" ಎಂದು ಅವರ ಗೆಳೆಯರೊಬ್ಬರು ಸೂಚಿಸಿದಾಗ.... "ನಾನು ದುಡ್ಡು ಸಂಪಾದಿಸಲಿಕ್ಕೆ ಉಪನ್ಯಾಸಕನಾಗಿ ಕೆಲಸ ಮಾಡುವವನಲ್ಲ. ಈ ನೆಪದಲ್ಲಿ ಹೆಚ್ಚೆಚ್ಚು ಅಧ್ಯಯನ ಮಾಡಲಿಕ್ಕೆ ಸಾಧ್ಯ ಆಗ್ತದ. ನನ್ನ L.L.M. ಅಧ್ಯಯನ ಮತ್ತು ವಕೀಲಿ ಅನುಭವದ ಲಾಭ ಹೊಸಪೀಳಿಗೆಯವರಿಗೆ ದೊರೆಯಲೆಂಬುದೇ ನನ್ನ ಉದ್ದೇಶ. ನನ್ನ ಮೇಲೆ ಪ್ರಭಾವ ಬೀರಿದ ಮುಖಂಡರಲ್ಲಿ ಬಹಳಷ್ಟು ಜನರು ವಕೀಲರಾಗಿದ್ದರು. ಅವರ ಉದಾಹರಣೆಗಳನ್ನು ನೀಡಿ ನನ್ನ teaching effecting and interesting ಮಾಡೋದಲ್ಲದೆ ಹೊಸ ಪೀಳಿಗೆಯವರನ್ನು ನನ್ನ ವೃತ್ತಿಗೆ ಆಕರ್ಷಿಸೋದೇ ನನ್ನ ಪ್ರಯತ್ನ. ಎಂದು ಹೇಳಿದ್ದು ನನಗೆ ನೆನಪಿದೆ.

ಅವರು ಪುರಸಭೆಯ ಸದಸ್ಯರಾಗಿ ಚುನಾಯಿತರಾದಾಗ ಕೂಡಾ, ಕೆಲವರು, ಕುಸುಮಾಕರರು ತಮ್ಮ ಮುಖ್ಯ ವೃತ್ತಿಯಿಂದ ದೂರವಾಗುವುದನ್ನು ಟೀಕಿಸಿದಾಗ.... ಏನೋ ಕೈಲಾದಷ್ಟು ಸಮಾಜಸೇವೆ ಮಾಡಬೇಕೆನ್ನುವುದು ನನ್ನ ಅಪೇಕ್ಷೆ..... ಎಂದು ಉತ್ತರಿಸಿದ್ದರು.

''There is a woman behind every successful man'' ಎಂಬ ಹೇಳಿಕೆ ಕುಸುಮಾಕರ ದೇಸಾಯಿಯವರ ವಿಷಯದಲ್ಲಿ ಶೇ. ೧೦೦ ಸತ್ಯ. ಖ್ಯಾತ ಬರಹಗಾರ್ತಿ

ಹಾಗೂ ನ್ಯಾಯವಾದಿ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯವರು, ಕುಸುಮಾಕರ ದೇಸಾಯಿಯವರ ಸಹಧರ್ಮಿಣಿಯಾದುದರಿಂದ, ಅವರ ಎಲ್ಲ ಚಟುವಟಿಕೆಗಳಿಗೆ ಸಹಕಾರ-ಬೆಂಬಲ ನೀಡುತ್ತ ಬಂದರು. ಅವರ ಮಧುರ ದಾಂಪತ್ಯ"ವನ್ನು ದುಷ್ಯ್ರ ಮನೋರಮೆಯವರಿಗೆ ಕೆಲವರು ಹೋಲಿಸಿದರೆ ಮತ್ತೆ ಕೆಲವರು 'ಏಕ ದೂಜೆ ಕೆ ಲಿಯೆ' (Made for each other) ಎಂದು ಹೇಳಿದ್ದುಂಟು. ''They respect each other's identity... There in no question of domination. They are two free individuals- like this intimate friend....'' ಎಂದು ಅವರ ನಿಕಟವರ್ತಿ ಹೇಳಿದ್ದುಂಟು.

ಹೃದಯದ ಶಸ್ತ್ರ ಚಿಕಿತ್ಸೆಯಾಗಿ ವಿಶ್ರಾಂತಿ ಪಡೆಯುತ್ತಿದ್ದಾಗ ಅವರನ್ನು ಕಾಣಲು ಹೋಗಿದ್ದೆ. ಆಗ ಕೂಡಾ ಅವರು ಪುಸ್ತಕ, ನಿಯತಕಾಲಿಕಗಳ ಮಧ್ಯೆ ಯಾವುದೋ ಒಂದು ಪುಸ್ತಕ ಓದುತ್ತ ಕುಳಿತಿದ್ದರು. ಅವರ ವಾಚನಾಭಿರುಚಿಯ ಬಗ್ಗೆ ಕೇಳಿದಾಗ ''Reading habit is my tonic.... '' ಎಂದು ಹೇಳಿದ್ದರು. ಡಾಕ್ಟರ ಬಂದು "ಹೇಗಿದ್ದೀರಿ ದೇಸಾಯಿಯವರೆ?...." ಎಂದು ಕೇಳಿದಾಗ ''I am quite fit with a new heart..... even ready for another marriage.... if only my wife permits ಎಂದು ಹೇಳುತ್ತಿದ್ದಂತೆ ಆ ಡಾಕ್ಟರ ಜೋರಾಗಿ ನಗುತ್ತಿದ್ದರು. ಆ ಸ್ಥಿತಿಯಲ್ಲಿ ಅವರ ಹಾಸ್ಯ ಪ್ರವೃತ್ತಿ ಕಂಡು ನಾನು ಬೆರಗಾಗಿದ್ದೆ.

ನಾನು ಮತ್ತೆ ಅವರನ್ನು ಕಂಡದ್ದು ೧-೧-೦೩ ರಂದು ಅಂದು ಅವರು ಬಹಳ ಉತ್ಸಾಹದಿಂದ ಬೇರೆ ಬೇರೆ ವಿಷಯಗಳ ಬಗ್ಗೆ ಮಾತಾಡಿದರು. "ಈ ಹೊಸ ಪೀಳಿಗೆಯವರಿಗೆ Sense of commitment ಇಲ್ಲ. ದುಡ್ಡೊಂದು ಬೇಕು.... ಇದು ಎಲ್ಲಾ ಕ್ಷೇತ್ರಕ್ಕೂ ಅನ್ವಯಿಸ್ತದ.... Even human relating family life are no exception..... joint family friendship, honesty, duty ಗಳಂತಹ ವಿಷಯಗಳ ಬಗ್ಗೆ ತಿಳಿಸಿ ಹೇಳಲಿಕ್ಕೆ ಹೋದರ, ನಮ್ಮನ್ನ outdated ಅಂತ ಕರೀತಾರ ಈಗಿನ ಯುವಕರು.... "ಕಾಲಾಯ ತಸ್ಮೈಯನಮಃ" ಎಂದು ಹೇಳುತ್ತಿದ್ದಂತೆ ಅವರ ಗೆಳೆಯರೊಬ್ಬರು "ಏನ್ರೀ ನಿಮ್ಮ judiciary ಸಹಿತ Corrupt ಆಗೇದಲ್ಲ....... ಏನಂತೀರಿ?" ಎಂದು ಪ್ರಶ್ನಿಸಿದಾಗ "ಹೌದು. ಇಲ್ಲಿಯವರೆಗೆ ಬೇರೆ ಕ್ಷೇತ್ರಗಳಲ್ಲಿ ಮಾತ್ರ Corruption ಇತ್ತು.... Lower courts ನಲ್ಲಿ Corrupt officers ಇದ್ದದ್ದು ಕೇಳಿದ್ವಿ.... ಈಗ High court Judge ಸಹಿತ ಇದರ ಬಗಲಿಗೆ ಬಿದ್ದು ನೋಡಿದ್ರ, ಜನರಿಗೆ judicceingದ sancitity ಬಗ್ಗ ವಿಶ್ವಾಸ ಕಡಿಮೆ ಆಗೋದರಲ್ಲಿ ಸಂದೇಹವಿಲ್ಲ. ಹೀಗಾಗೋದಕ್ಕ ಕಾರಣಗಳುಂಟು. ದುಡ್ಡು

ಕೊಟ್ಟು ಒಂದು post ಪಡಕೊಂಡವರು ದುಡ್ಡು ಮಾಡಿಕೊಳ್ಳೋದು ಸಹಜ. ದುರ್ದೈವದ ಸಂಗತಿಯೆಂದರ ಇಂಥವರ ಸಂಖ್ಯೆ ಹೆಚ್ಚುತ್ತಲೇ ಇರೋದು. ನಿಸ್ವಾರ್ಥ ಸೇವಕರು, ಪ್ರಾಮಾಣಿಕ officer, ಸ್ವಾಭಿಮಾನಿಗಳ ಸಂಖ್ಯೆ ಕಡಿಮೆಯಾಗುತ್ತಿರುವುದು ದುಃಖದ ಸಂಗತಿ" ಎಂದು ಹೇಳಿದರು. ಪ್ರಾಮಾಣಿಕತೆ, ಸ್ವಾಭಿಮಾನ ಮತ್ತು ವೃತ್ತಿನಿಷ್ಠೆಯ ಕೊರತೆಯೇ ಅವರ ಖಿನ್ನತೆಗೆ ಕಾರಣವಾಗಿದ್ದವು.

ನಾನು ಎದ್ದು ಹೊರಡುತ್ತಿದ್ದಂತೆ "ಆಗಾಗ ಬರ್ತಿರು... ಚಹಾ ಕುಡಕೋತ ಹರಟಿ ಹೊಡೆಯೋಣಂತ...." ಎಂದು ಹೇಳಿದ್ದರು.

ಆದರೆ ಅದೇ ನಮ್ಮ ಕೊನೆಯ ಭೇಟಿಯಾಗುತ್ತದೆಂದು ನನಗನಿಸಿರಲಿಲ್ಲ.

ನಿಷ್ಠುರ ಸಮಾಜವಾದಿ

✿ ಧ್ರುವರಾಜ್ ಮುತಾಲಿಕ ದೇಸಾಯಿ

ಕಲಬುರ್ಗಿಯ ಪ್ರಸ್ತಾಪ ಬಂದಾಗಲೆಲ್ಲ ನನಗೆ ನೆನಪಾಗುವ ಹೆಸರು ಕುಸುಮಾಕರ ದೇಸಾಯಿ. ಬಹುಮುಖ ಪ್ರತಿಭೆಯ ವ್ಯಕ್ತಿ. ಹವ್ಯಾಸಗಳೂ ಹಲವು. ವೃತ್ತಿಯಿಂದ ನ್ಯಾಯವಾದಿ. ಪ್ರವೃತ್ತಿಯಿಂದ ಸಾಮಾಜಿಕ ಪ್ರಜ್ಞೆಯುಳ್ಳ ಹೋರಾಟಗಾರ.

ದೇಶದಲ್ಲಿ ೧೯೭೫ ರಲ್ಲಿ ತುರ್ತುಸ್ಥಿತಿ ಜಾರಿಗೊಂಡಿತು. ಕಲಬುರ್ಗಿಯಲ್ಲಿ ಯಾರೂ ಅದರ ವಿರುದ್ಧ ಉಸಿರೆತ್ತಿರಲಿಲ್ಲ. ಆಗ ಕಳವಳಗೊಂಡ ಕುಸುಮಾಕರ ಬಾವುಟ ಹಿಡಿದು ಸುಪರ ಮಾರ್ಕೆಟ್‌ದಲ್ಲಿ ಇಂದಿರಾಗಾಂಧಿ ಹಾಗೂ ತುರ್ತುಸ್ಥಿತಿಯನ್ನು ಖಂಡಿಸಿ ಘೋಷಣೆ ಕೂಗುತ್ತ ಓಡಾಡಿದರು. ಬಹುಕಾಲ ಅವರನ್ನು ಬಂಧಿಸಲಿಲ್ಲ. ಕುಸುಮಾಕರರ ಓಡಾಟ ಸತತವಾಗಿ ಸಾಗಿತ್ತು. ಅವರಿಗೆ ಹುಚ್ಚು ಹಿಡಿದಿದೆ ಎಂದು ಕೆಲವರು ಟೀಕಿಸಿದರು.

"ಹೌದು ನನಗೆ ಹುಚ್ಚು ಹಿಡಿದಿದೆ. ದೇಶದ ಹುಚ್ಚು ಹಿಡಿದಿದೆ. ಜನತೆಯ ಸ್ವಾತಂತ್ರ್ಯದ ಹುಚ್ಚು ಹಿಡಿದಿದೆ" ಎಂದು ಹೇಳಿದವರು ಕುಸುಮಾಕರ, ಅದಕ್ಕೆ ಸೆರೆಮನೆ ವಾಸವೂ ಆಯಿತು. ನಾನು ಸಂಯುಕ್ತ ಕರ್ನಾಟಕದ ಪ್ರತಿನಿಧಿಯಾಗಿ ೧೯೭೭ ರಲ್ಲಿ ಕಲಬುರ್ಗಿಯಲ್ಲಿ ಕಾಲಿರಿಸಿದೆ. ಶ್ರೀಮತಿ ಸರಿತಾ ಕುಸುಮಾಕರ ಅವರ ಸೋದರರಾದ ದಿ. ಹರಪನಹಳ್ಳಿ ಹಣಮಂತರಾಯರಿಂದ ನನಗೆ ಕುಸುಮಾಕರ ದಂಪತಿಗಳ ಪರಿಚಯವಾಯಿತು. ಅನೇಕ ಸಲ ನಾನು-ಹಣಮಂತರಾಯರು ಅವರ ಮನೆಯಲ್ಲಿ ಊಟ ಮಾಡಿದ್ದುಂಟು. ಕುಸುಮಾಕರ ಮನೆಯಲ್ಲಿ ಭೆಟ್ಟಿಯಾದಾಗಲೆಲ್ಲ ಊಟದಷ್ಟೆ ಸೊಗಸಾದ ವೈಚಾರಿಕ ರಸಗವಳದ ಸವಿಯೂ ಸಿಕ್ಕುತ್ತಿತ್ತು. ಆತ್ಮೋದ್ಧಾರಕ್ಕಾಗಿ ಅವರು ನಂಬಿಕೊಂಡಿದ್ದ ಅಧ್ಯಾತ್ಮದ ದಾರಿಯನ್ನು ಪಾಲಿಸುತ್ತಿದ್ದರು. ಆದರೆ ಅದರಲ್ಲಿ ಅಂಧಶ್ರದ್ಧೆಯಾಗಲಿ, ಡಾಂಭಿಕತನವಾಗಲಿ ಕಿಂಚಿತ್ತೂ ಇರುತ್ತಿರಲಿಲ್ಲ. ಇದಕ್ಕೆ ಮುಖ್ಯ ಕಾರಣ ಅವರು ಒಬ್ಬ ನಿಜವಾದ ವಾಸ್ತವತಾ ವಾದಿಯಾಗಿದ್ದುದು. ತಾವು ಸತ್ಯವೆಂದು ನಂಬಿದ್ದನ್ನು, ಅಂಗೀಕರಿಸಿದ್ದನ್ನು ಮನಃಪೂರ್ವಕವಾಗಿ ಪಾಲಿಸುತ್ತಿದ್ದರು. ಕುಸುಮಾಕರ ಮೂಲತಃ ಒಬ್ಬ ನಿಷ್ಠುರ ಸಮಾಜವಾದಿ. ಅವರು ತೊಡಗಿಕೊಂಡಿದ್ದ ಪಕ್ಷ ಯಾವುದೇ ಇದ್ದರೂ ಸಮಾಜವಾದದಿಂದ ವಿಚಲಿತರಾಗಲಿಲ್ಲ. ಅಧಿಕಾರ, ಸ್ಥಾನಮಾನಗಳನ್ನು ಬದಲಾಯಿಸುತ್ತಿದ್ದ ಕಾಂಗ್ರೆಸ್ ಪಕ್ಷವನ್ನು ಆಗ ಅನೇಕರು ಸೇರಿಕೊಂಡರೂ ಕುಸುಮಾಕರ ಅಂಥ ಆಮಿಷ ಪ್ರಲೋಭನೆಗಳಿಗೆ ಒಳಗಾಗಲಿಲ್ಲ. ಅವರು ಪಕ್ಷವನ್ನು ಬದಲಿಸಿದ್ದರೆ ಆ ಹಿರಿಯ ಅಧಿಕಾರ ಗೌರವಗಳನ್ನು ಪಡೆಯಬಹುದಿತ್ತು. ಅಂಥ ಹೊಂದಾಣಿಕೆಗೆ ಅವರು ಮುಂದಾಗಲಿಲ್ಲ. ನಂಬಿಕೊಂಡಿದ್ದ ತತ್ವಗಳನ್ನು ಕೊನೆಯವರೆಗೂ ಬಿಟ್ಟು ಕೊಡಲಿಲ್ಲ. ಅದೇ ಕುಸುಮಾಕರ ಬದುಕಿ ತೋರಿದ ಹಾದಿ.

ಸಮಾಜವಾದಿಗಳಿಗೆ ಕುಸುಮಾಕರರ ಮನೆ ಒಂದು ಆಶ್ರಯ ಸ್ಥಾನ ಒಬ್ಬರಾದರೂ

ಅವರಲ್ಲಿ ಅತಿಥಿಯಾಗಿರುತ್ತಿದ್ದರು.

ರಾಜಕೀಯವೊಂದೇ ಅಲ್ಲದೇ ಸಾಹಿತ್ಯ, ಸಂಗೀತ, ನಾಟಕ, ಚಿತ್ರಕಲೆ ಮುಂತಾದ ಹಲವಾರು ಕಲೆಗಳಲ್ಲಿ ಅವರಿಗೆ ಆಸಕ್ತಿ. ಕನ್ನಡ, ಉರ್ದು, ಇಂಗ್ಲಿಷ, ಮರಾಠಿ ತೆಲಗು ಮುಂತಾದ ಭಾಷೆಗಳಲ್ಲಿ ಒಳ್ಳೇ ಗತಿ ಇದ್ದುದರಿಂದ ಅವರು ಪ್ರತಿಯೊಂದು ಭಾಷೆಯ ಸಾಹಿತ್ಯದ ಉತ್ತಮಾಂಶಗಳನ್ನು ಗುರುತಿಸಿಕೊಂಡಿದ್ದರು. ಅನೇಕ ಯುವ ಪ್ರತಿಭೆಗಳಿಗೆ ಪ್ರೋತ್ಸಾಹ ಪುರಸ್ಕಾರ ನೀಡಿದ್ದುಂಟು. ಪ್ರತಿಭೆ ಅರಳಬೇಕೆಂಬುದೇ ಅವರ ಕಳಕಳಿ. ಅಂತೆಯೇ ಹರಪನಹಳ್ಳಿಯಿಂದ ಹರಿದು ಬಂದ ಶ್ರೀಮತಿ ಸರಿತಾ ಕುಸುಮಾಕರ ಅವರ ಪ್ರತಿಭೆ ಕಲಬುರ್ಗಿಯಲ್ಲಿ ಕುಸುಮಿಸಿತು. ಹೈದರಾಬಾದ್ ಕರ್ನಾಟಕಕ್ಕೆ ಅದರಲ್ಲೂ ವಿಶೇಷವಾಗಿ ಕಲಬುರ್ಗಿ ನಗರಕ್ಕೆ ಒಂದು ವಿಶಿಷ್ಟ ರೂಪು ಕೊಟ್ಟ ಅಪರೂಪದ ವ್ಯಕ್ತಿ.

ಮೇರು ವ್ಯಕ್ತಿತ್ವದ ಸರಳಜೀವಿ

❁ ಕೆ. ಬಿ. ಸೊಂಡೂರ

೧೯೫೭ನೇ ಅಗಸ್ಟ್ ೬ ನೇ ತಾರೀಖು ನಾನು ಶ್ರೀ ಕುಸುಮಾಕರ ದೇಸಾಯಿಯವರನ್ನು ಮೊದಲನೆ ಸಲ ನೋಡಿದ್ದು, ಅವರು ನನಗೆ ಸಮೀಪದ ಸಂಬಂಧಿ. ಆದರೆ ಅತ್ಯಂತ ಪತ್ತಿರದ, ಪ್ರೀತಿಯ ಅಂತಃಕರಣದ ಅಣ್ಣನಾಗಿದ್ದರು.

ಅಂದಿನಿಂದ ಕೊನೆಯವರೆಗೂ ಅವರ ಒಡನಾಟ ಕಾಯಂ ಆಗಿ ಉಳಿಸಿಕೊಂಡಿದ್ದರು. ನಾನು ಮೊದಲು ಭೇಟಿಯಾದಾಗ ಅವರು ವಕೀಲಿ ವೃತ್ತಿ ಪ್ರಾರಂಭಿಸಿ ಹಲವು ವರ್ಷಗಳಾಗಿದ್ದವು. ಅತ್ಯಂತ ಜಾಣಾಕ್ಷ ವಕೀಲ ಎಂಬ ಹೆಸರನ್ನು ಆಗಿನ ಗುಲ್ಬರ್ಗಾದಲ್ಲಿಯ ವಕೀಲರುಗಳು ಅವರಿಗೆ ಅನ್ವರ್ಥಕವಾಗಿ ಹೆಸರಿಸಿದ್ದರು. ಬಡವರು ಮತ್ತು ವಿಧವಾ ಸ್ತ್ರೀಯರಿಗೆ ಪುಕ್ಕಟೆಯಾಗಿ ವಕಾಲತ್ತು ವಹಿಸುತ್ತಿದ್ದರು.

೧೯೬೨-೬೩ ರ ಸುಮಾರು ಅವರು ಪದವಿಧರ ಕ್ಷೇತ್ರದಿಂದ ರಾಜ್ಯದ ಮೇಲ್ಮನೆಗೆ (MLC) ಸ್ಪರ್ಧಿಸಿದ್ದರು. ವಿಚಿತ್ರವೆಂದರೆ ಕೇವಲ ೧೯ ಮತಗಳಿಂದ ಅವರು ಸೋಲಬೇಕಾಯಿತು. "ವಿಚಿತ್ರ ಏಕೆಂದರೆ ಅವರ ಮನೆಯಲ್ಲಿ ಅಂದರೆ ಅವರ ತಂದೆ ಶ್ರೀ ಸಂಜೀವರಾವ ದೇಸಾಯಿಯವರ ಆಶ್ರಯದಲ್ಲಿ ಇದ್ದ ಬಂಧು-ಬಳಗದ ಮತ್ತು ಇತರ ಬಡವಿದ್ಯಾರ್ಥಿಗಳಲ್ಲಿ ಪದವೀಧರರಾದವರ ಸಂಖ್ಯೆ ೧೦೦ ಕ್ಕೂ ಮೀರಿತ್ತು. ಆ ಕಾಲದಲ್ಲಿ ವಾರಾನ್ನದಿಂದ ಶಿಕ್ಷಣ ಪಡೆದವರೆಲ್ಲ (ಗುಲ್ಬರ್ಗಾ) ದೇಸಾಯಿಯವರ ಮನೆಯಲ್ಲಿ ಚಿತ್ರಾವತಿ ತಿರುವಿದವರೇ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಅವರು ವೃತ್ತಿಯಿಂದ ವಕೀಲರಾದರೂ ಪ್ರವೃತ್ತಿಯಿಂದ ಅವರ ಸಾಂಗತ್ಯದಲ್ಲಿ ಹಾಗೂ ಒಡನಾಟದಲ್ಲಿ ಬಂದವರೆಲ್ಲರಿಗೂ ಅಣ್ಣನೇ ಆಗಿದ್ದರೆಂದರೆ ತಪ್ಪಾಗಲಿಕ್ಕಿಲ್ಲ.

Very Simple living & very high thinking ಹೊಂದಿದ ಮೇರು ವ್ಯಕ್ತಿತ್ವದವರಾಗಿದ್ದರು.

ವಕೀಲಿ ವೃತ್ತಿ ರಾಜಕಾರಣದ ಮಧ್ಯೆ ಸಾಹಿತ್ಯ ಪ್ರೇಮಿಗಳು ಆಗಿದ್ದರು. ಅವರ ಅನೇಕ ಕನ್ನಡ ಲೇಖನಗಳು ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ನಾನು ಚಿಂಚೋಳಿಯಲ್ಲಿ ಪೋಸ್ಟ ಮಾಸ್ತರನಾಗಿದ್ದಾಗ ೧೯೬೭-೬೮ ಸುಮಾರು ಅಲ್ಲಿಯ Intelectual Socity ಎನಿಸಿಕೊಂಡ ಪ್ರೌಢಶಾಲಾ, ಶಿಕ್ಷಕ ವೃಂದದಿಂದ ಮೂಡಿಬಂದ ಉದ್ಗಾರವಿದು.

"ಹೈದ್ರಾಬಾದಿನಲ್ಲಿ ಅವರು ಶ್ರೀ ಕುಸುಮಾಕರ ದೇಸಾಯಿಯವರು ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗ ಓಪನ್ ಸೆಶನ್ ಅಡ್ರೆಸ್‌ಮಾಡಿ ಮಾತನಾಡುತ್ತಿದ್ದರಂತೆ. ಆಗ ಅವರ

ಇಂಗ್ಲೀಷ ಭಾಷೆಯ ಮೇಲಿದ್ದ ಪ್ರಭುತ್ವವನ್ನು ಸವಿಯಲು ವಿಶ್ವವಿದ್ಯಾಲಯದ ಪ್ರೊಫೆಸರ್‌ಗಳು ಬರುತ್ತಿದ್ದರಂತೆ.

ಹೈದ್ರಾಬಾದ್- ಕರ್ನಾಟಕ ವಿಮೋಚನಾ ಸಂಗ್ರಾಮದಲ್ಲಿ ಒಂದು ಸಲ (೧೯೪೭ ೪೮) ನಂತರ ಎರಡನೇ ಸಲ ೧೯೭೫-೭೬'ರ ತುರ್ತು ಪರಿಸ್ಥಿತಿಯಲ್ಲಿ (Emergency) ಹೀಗೆ ಎರಡು ಸಲ ಜೈಲು ಶಿಕ್ಷೆ ಅನುಭವಿಸಿದ್ದರು.

ಪ್ರೀತಿಯ ಅಣ್ಣ ಸ್ವಾತಂತ್ರ್ಯ ಹೋರಾಟಗಾರ, ಹೆಸರಾಂತ ವಕೀಲ (ವಕೀಲಳ ಪತಿ), ವಕೀಲರ ಮಗ, ಸಾಹಿತ್ಯ ಪ್ರೇಮಿ, ಮೇರು ವ್ಯಕ್ತಿತ್ವದ ಸರಳ ಜೀವಿ ಲೋಹಿಯಾ ತತ್ವ ಆದರ್ಶದ ರಾಜಕಾರಣಿ ಹಾಗೂ ಖಾದಿ ಪ್ರೇಮಿ ಹೀಗೆ ಅನೇಕ ಮುಖಗಳ ಪ್ರಸಿದ್ಧಿ ಹೊಂದಿದ್ದ ಶ್ರೀ ಸಾಮಾನ್ಯರಾದ ಶ್ರೀ ಕುಸುಮಾಕರ ದೇಸಾಯಿಯವರನ್ನು ೨೦೦೩ ನೇ ಡಿಸೆಂಬರಿನಲ್ಲಿ ಕಳೆದುಕೊಂಡು ಅನೇಕರು ಕಂಗಾಲಾಗಿದ್ದೇವೆ. ಅನಾಥರಾಗಿದ್ದೇವೆ.

೧೯೬೧ರ ಡಿಸೆಂಬರ್‌ನಲ್ಲಿ ಶ್ರೀಮತಿ ಸರಿತಾ ದೇಸಾಯಿಯವರು ಅವರ ಬಾಳಸಂಗಾತಿಯಾಗಿ ಕೈಹಿಡಿದು ಆದರ್ಶ, ಅನುರೂಪ, ಅನ್ಯೋನ್ಯ ದಂಪತಿಗಳಾಗಿ ೪೦ ವಸಂತಗಳ ಸಾರ್ಥಕ ಬಾಳು ಬಾಳಿದರು. K.S. D.B. & W.S. Chairmen ಆಗಿ ಗುಲಬರ್ಗಾದ ಭಗೀರಥರಾದವರು.

ಅವರ ಆತ್ಮಕ್ಕೆ "ಸದ್ಗತಿಂ ಪ್ರಧಾತುಂ ಅನುಗ್ರಹಂ ಗುರು"

ಎಂದು ಭಗವಂತನಲ್ಲಿ ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಪ್ರಸನ್ನ ವ್ಯಕ್ತಿತ್ವ

✿ ವಸಂತ ಕುಲಕರ್ಣಿ

'**ಕು**ಸುಮಾಕರ ದೇಸಾಯಿ' ಅವರದು ಸರಳ ಹಾಗೂ ಮರುಳುಗೊಳಿಸುವ ವ್ಯಕ್ತಿತ್ವ.

ಕುಸುಮಾಕರ ದೇಸಾಯಿಯವರ ಪ್ರಥಮ ಪುಣ್ಯತಿಥಿ ನಿಮಿತ್ತ, ಅವರ ಸಹಧರ್ಮಿಣಿ ಶ್ರೀಮತಿ ಸರಿತಾ ಅವರು ಒಂದು ಸ್ಮರಣಿಕೆ ಪ್ರಕಾಶಿಸುತ್ತಿರುವರು. ಅವರು ನನ್ನನ್ನು ಸಂಪರ್ಕಿಸಿ "ವಸಂತರಾವ್‌ಜಿ, ದೇಸಾಯಿಯವರು ನಿಮ್ಮ ಆತ್ಮೀಯರಾಗಿದ್ದರು. ಅವರನ್ನು ನೆನಪಿಸುವ ಒಂದು ಲೇಖನ ಬರೆದು ಕೊಡುವಿರಾ?" ಎಂದು ವಿನಂತಿಸಿದರು. ಅವರಿಗೆ ಇಲ್ಲಾ ಎಂದು ಹೇಳಿದರೆ ಕೃತಘ್ನನಾಗುತ್ತಿದ್ದೆ. ಆದ್ದರಿಂದ ಅವರು ಕೇಳಿದಾಕ್ಷಣ ಮನಸಾರೆ ಒಪ್ಪಿದೆ. ಬರೆಯಲು ಕುಳಿತೆ.

ನನ್ನ ಇನ್ನೊಬ್ಬ ಮಿತ್ರ ದಿ. ವಿದ್ಯಾಚಂದ್ರ ಕೊಠಾರಿ ಎಂಬುವರಿದ್ದರು. ನನ್ನನ್ನು ನೋಡಿದಾಕ್ಷಣ ತಪ್ಪದೇ "ಬರ್‍ರಿ ಬರ್‍ರಿ ವಸಂತರಾವ್, ನೋಡಿರಿಲ್ಲಿ ಋತುರಾಜ ವಸಂತರಾಜ ಬಂದ" ಎಂದು ಹೇಳುತ್ತಿದ್ದರು. ನನ್ನ ಹೆಸರು ವಸಂತನೆಂದು ಇತ್ತು. ಆದರೆ ನನ್ನ ಅನುಭವಕ್ಕೆ ಬಂದಂತೆ, ಕುಸುಮಾಕರ ಎಂಬ ಆ ವಿಶಿಷ್ಟ ವ್ಯಕ್ತಿಯೇ ನಿಜವಾದ ವಸಂತರಾಜನೆಂದು ಹೇಳಬಹುದು.

ಕುಸುಮಾಕರ, ಉತ್ಸಾಹ ಹಾಗೂ ಚೈತನ್ಯವೇ ಮೂರ್ತಿವಂತ ವ್ಯಕ್ತಿಯಾಗಿದ್ದರು. ಎಂತಹ ಕಠಿಣ ಪ್ರಸಂಗ ಬಂದರೂ, ಸಂಕಟ ಅನುಭವಿಸುತ್ತಿದ್ದರೂ ಅವರ ಮುಖದ ಮೇಲೆ ಚಿಂತೆಯ ಒಂದುಗೆರೆಯೂ ಕಾಣುತ್ತಿರಲಿಲ್ಲ. ಸದಾ ಪ್ರಸನ್ನತೆ ಹಾಗೂ ಮುಗುಳ್ನಗೆ ಅವರ ಮೊಗದಲ್ಲಿರುತ್ತಿತ್ತು. ನನಗನ್ನಿಸುತ್ತಿತ್ತು, ಆ ಬಾಲಕ ಅದೇ ಸ್ವಭಾವದ ತಾಯಿಯ ಉದರದಿಂದ ಜನಿಸಿರಬಹುದು ಎಂದು. ಆ ಪ್ರಸನ್ನ ವ್ಯಕ್ತಿತ್ವ ಮಾತ್ರ ಗಮನದಲ್ಲಿದೆಯಾದ್ದರಿಂದ ಅವರ ಕುರಿತು ಕೆಲ ಪ್ರಸಂಗಗಳನ್ನು ನಮೂದು ಮಾಡಬೇಕೆಂಬ ಇಚ್ಛೆಯನ್ನು ತಡೆಯದೆ, ಬರೆಯುತ್ತಿದ್ದೇನೆ.

ಆಗ ತಾನೆ ಅವರ ಹೃದಯ ಶಸ್ತ್ರಚಿಕಿತ್ಸೆಯಾಗಿತ್ತು. ಅವರ ಬಂಧು ವರ್ಗದವರು ಕುಶಲ ಸಮಾಚಾರ ವಿಚಾರಿಸಲು ಬರುತ್ತಿದ್ದರು. ನಾನು ಕೂಡ ಅದೇ ಉದ್ದೇಶದಿಂದ ಅಲ್ಲಿಗೆ ಹೋಗಿದ್ದೆ. ನಾನಂದೆ- "ಕುಸುಮಾಕರಜಿ ಏನಂತೀರಿ? ಆರೋಗ್ಯ ಚೆನ್ನಾಗಿದೆಯೇ? " ಆಗ ಗಂಭೀರ ವದನರಾದ ಅವರು "ವಸಂತರಾವ ಈ ಪ್ರಶ್ನೆಯನ್ನು ಒಮ್ಮೆ ಕೇಳಿರುವಿರಿ. ಇನ್ನೊಮ್ಮೆ ಕೇಳದಿರಿ". ಆಮೇಲೆ ಕಿವಿಯ ಹತ್ತಿರ ಬಂದು, ಪಿಸುಮಾತಿನಲ್ಲಿ "ವಸಂತರಾವ, ನಿಮಗೆ ಗೊತ್ತಿಲ್ಲವೆ? ಕರ್ನಾಟಕ ಸರಕಾರವು, ಕುಸುಮಾಕರ ದೇಸಾಯಿಯವರ ಆರೋಗ್ಯ ಕುರಿತು ಯಾರಾದರೂ ವಿಚಾರಿಸಿದರೆ ಅವರ ಮೇಲೆ ಪೀನಲ್ ಕೋಡ್ ಕ್ರಮಕೈಗೊಂಡು,

ಜೈಲಿನಲ್ಲಿಡುವರು ಎಂಬುದು", ಎಂದರು. ಅಲ್ಲದೆ ಮತ್ತೆ ಮುಖದ ಮೇಲೆ ಅದೇ ಮುಗುಳ್ನಗೆ. ಆರೋಗ್ಯದ ವಿಷಯವಾಗಿ ರಂಗೇರಿದ ಹರಟೆ ನಡೆಯುತ್ತಿದ್ದಾಗ "ವಸಂತರಾವ. ನನ್ನ ಆಪರೇಶನ್ ಆಗುವುದಕ್ಕಿಂತ ಮೊದಲು, ಆಪರೇಶನ್ ಥಿಯೇಟರ್‌ನಲ್ಲಿ ಬರೀ ಡಾಕ್ಟರ್, ನರ್ಸ್‌ಗಳು ಇರಲು ಸಾಧ್ಯವೆಂದು ಗೊತ್ತಿತ್ತು. ಆದರೆ ನಾನು ಹೆಂಡತಿಯೂ ನನ್ನ ಬಳಿಯಿರಬೇಕು ಎಂದು ಹಟಮಾಡಿದ್ದೆ. ಅದಕ್ಕಾಗಿ ಪರವಾನಗಿ ಕೂಡ ತೆಗೆದುಕೊಂಡೆ. ಯಾಕ್ ಹೇಳ್ಲಾ? ನನ್ನ ಹೃದಯ ನನ್ನ ಹತ್ತಿರವೇ ಇದೆ ಅದನ್ನು ಬೇರೆಯಾವ ಹುಡಗೀಗೂ ಕೊಟ್ಟಿಲ್ಲ ಎಂಬುದನ್ನು ಆಕೆಗೆ ತೋರಿಸಲು" ಎಂದರಲ್ಲದೆ, ಗಹಗಹಿಸಿ ನಕ್ಕು ಬಿಟ್ಟರು.

ಮತ್ತೊಮ್ಮೆ ನಾನು ರೂಢಿಯಂತೆ "ಹೇಗಿದ್ದೀರಿ ಆರಾಮವೇ?" ಎಂದು ಕೇಳಿದ್ದೆ. ಆಗ ಅವರು "ಅತಿ ಚೆನ್ನಾಗಿದ್ದೇನೆ. ನಡೀರಿ ಕುಸ್ತಿ ಆಡಲು ಬರುವಿರಾ?" ಎಂದು ಕೇಳಿ ತೊಡೆ ತಟ್ಟಿದ್ದರು. ನನಗೂ ಕೂಡ ಹೃದಯ ಶಸ್ತ್ರ ಚಿಕಿತ್ಸೆ ಆಗಿತ್ತು. ನನ್ನ ಸ್ವಭಾವ ಸದಾ ಚಿಂತಿಸುತ್ತಿರುವುದು. "ಅಲ್ಲಿ ನೋವು, ಇಲ್ಲಿ ಬೇನೆ" ಎಂದು ಗೋಳಾಡುತ್ತಿದ್ದೆ. ನಾನಂದೆ "ಬೇಡಪ್ಪ ಆ ಕುಸ್ತಿಗೆ ಲಂಗೋಟಿ ಹಾಕಿಕೊಂಡು ತಯಾರಾಗುವ ಮೊದಲೇ ಈ ಪೈಲ್ವಾನ ಸೋತನೆಂದು" ಹೇಳಿಬಿಟ್ಟೆ.

ನನ್ನ ಹಿರಿಯ ಮಗನ ಮದುವೆಯಿತ್ತು. ಅಕ್ಷತೆ ಬಿದ್ದವು. ಬಂಧುಗಳು ಆಹೇರಿ ಕೊಡುತ್ತಾ ಮುಂದೆ ಮುಂದೆ ಸಾಗುತ್ತಿದ್ದರು. ಕುಸುಮಾಕರ ಬಂದು, ಮಗನ ಕೈಯಲ್ಲಿ ಆಹೇರಿ ಕೊಟ್ಟರು. ಸುಮ್ಮನೆ ಹೋಗಿದ್ದರೆ ಅವರು ಕುಸುಮಾಕರ ಎನಿಸಿಕೊಳ್ಳಲು ಹೇಗೆಸಾಧ್ಯ? "ಮತ್ತೆ ಆಹೇರಿ ಕೊಡಲು ಯಾವಾಗ ಕರೆಯುವಿರಿ" ಎಂದು ಕೇಳಿದರು. ಈ ಪ್ರಶ್ನೆಯ ಕಡೆ ಲಕ್ಷ್ಯಕೊಡದ ನನ್ನ ಮಗ ಏನೂ ತಿಳಿಯದೆ ಅವರ ಮುಖ ನೋಡುತ್ತಾನಿಂತ. ಅದಕ್ಕೆ "ಮಗನೆ, ನಿನಗೆ ಮಗಹುಟ್ಟಿದಾಗ ನನ್ನನ್ನು ಮರೆಯದೇ ಕರೆಯಬೇಕು. ಹೆಸರಿಡಲು ಬರುವೆ. ಆಗ ಪುನಃ ಆಹೇರಿ ಕೊಡುವೆ" ಎಂದು ಹೇಳಿದರು.

ಹೀಗಿದ್ದರು ಕುಸುಮಾಕರ ದೇಸಾಯಿ. ಅವರಲ್ಲಿಯ ರಸಾಯನವೇ ವಿಚಿತ್ರವಾಗಿತ್ತು. ವೃತ್ತಿಯಿಂದ ನ್ಯಾಯವಾದಿಯಾಗಿದ್ದರೂ, ಪ್ರವೃತ್ತಿಯಿಂದ ದೇಶ ಭಕ್ತರಾಗಿದ್ದರು. ಕರ್ನಾಟಕ ರಾಜ್ಯದ ಆಗಿನ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ, ದೇಸಾಯಿಯವರೊಂದಿಗೆ ಸಮಾಜ ಕಾರ್ಯಕರ್ತರಾಗಿದ್ದವರು, ಅವರ ಶಸ್ತ್ರ ಚಿಕಿತ್ಸೆಗಾಗಿ ಒಂದು ಲಕ್ಷ ರೂ.ಗಳ ಧನಸಹಾಯ ಮಾಡಿದ್ದರೆಂದು ಕೇಳಿ ತಿಳಿದಿದ್ದೆ.

ಸಮಾಜವಾದಿಗಳ ದೇವರೇ ಎನಿಸಿಕೊಂಡಿದ್ದ ಎಸ್.ಎಂ. ಜೋಶಿ ನಿಧನರಾಗಿದ್ದರು. ಅವರ ಅಂತಿಮ ದರ್ಶನಕ್ಕಾಗಿ ಗುಲಬರ್ಗಾದಿಂದ ಹೊರಟರು. ಸಮಯ ಸ್ವಲ್ಪವೇ ಇತ್ತು. ತಲುಪುತ್ತೇನೋ ಇಲ್ಲವೋ ಎಂದು ಅವರಿಗೆ ತಳಮಳ. ಎಸ್.ಎಂ. ಅವರ ದೇಹಕ್ಕೆ ಅಗ್ನಿಕೊಡುವ ಕೆಲವೇ ಕ್ಷಣಗಳ ಮೊದಲು ಕುಸುಮಾಕರ ದೇಸಾಯಿ ಸ್ಮಶಾನ ತಲುಪಿದರು.

ಜೋರಾಗಿ ಕೂಗುತ್ತಾ, "ರೀ ಸ್ವಲ್ಪ ತಡೀರಿ. ಈ ನನ್ನ ಹೂಹಾರವನ್ನು ಅವರ ಕೊರಳಿಗೆ ಅರ್ಪಿಸಲು ಅವಕಾಶಕೊಡಿ. ಆ ಮೇಲೆ ...." ಅವರಿಗೆ ಮುಂದೆ ಮಾತನಾಡಲು ಆಗಲಿಲ್ಲ. ಅವರ ಬಗ್ಗೆ ನಮಗೆಲ್ಲ ಅತ್ಯಂತ ಅಭಿಮಾನ. ಏಕೆಂದರೆ He was the last man to garland S.M. Joshi ಸಾಮಾನ್ಯರಲ್ಲಿ ಅಸಾಮಾನ್ಯ ವ್ಯಕ್ತಿಯಾಗಿದ್ದ ಕುಸುಮಾಕರ ಅವರನ್ನು ಎಂದೂ ಮರೆಯಲು ಸಾಧ್ಯವಿಲ್ಲ.

ಕುಸುಮಾಕರ ಅವರಿಗೆ ಎರಡನೆಯ ಬಾರಿ ಹೃದಯ ಶಸ್ತ್ರ ಚಿಕಿತ್ಸೆ ಮಾಡಿಸಬೇಕಾಯಿತು. ಆಗ ಅವರ ಕೆಲ ಹಿತಶತ್ರುಗಳು "ಇಂತಹ ಜಿಪುಣ ವ್ಯಕ್ತಿಗೆ ಎಲ್ಲಿಂದ ಎರಡನೇ ಬಾರಿ ಹೃದಯಾಘಾತ ಬರಬೇಕು" ಎಂದು ವ್ಯಂಗ್ಯವಾಡಿದರು. ಆದರೆ ನಿಜವಾದ ಕತೆಯೇ ಬೇರೆಯಾಗಿತ್ತು. ಅವರ ಪತ್ನಿ ಸರಿತಾಬಾಯಿಗೆ ಕ್ಯಾನ್ಸರ್ ಇದೆ ಎಂಬ ಸುದ್ದಿಕೇಳಿ, ಕುಸುಮಾಕರ ಅವರಿಗೆ ಹೃದಯಾಘಾತವೇ ಆಯಿತು. ಅದೇ ಅವರನ್ನು ಬಲಿ ತೆಗೆದುಕೊಂಡಿತು.

ಮೊದಲ ಶಸ್ತ್ರ ಚಿಕಿತ್ಸೆ ಆದ ನಂತರ ನಾನೆಂದೂ ಒಂದು ಹನಿಯೂ ಮದ್ಯಪಾನ ಮಾಡಿಲ್ಲವೆಂದು ಆಣೆ ಮಾಡಿದ್ದರು. "ಸಿಂಧು (ಸರಿತಾ) ನಾನು ಮದ್ಯಸೇವನೆ ಬಿಟ್ಟಿದ್ದೇನೆ. ನಿಜವಾಗಿಯೂ ಬಿಟ್ಟಿದ್ದೇನೆ" ಎಂದು ಶಪಥ ಮಾಡಿದ್ದರು. ಅದನ್ನು ಕೊನೆಯವರೆಗೆ ಉಳಿಸಿಕೊಂಡು ಬಂದರು.

ಮಿತ್ರ ಕುಸುಮಾಕರನೇ, ನಿನಗೆ ನಿನ್ನ ಪವಿತ್ರ ಸ್ಮೃತಿಗಳೊಂದಿಗೆ ನನ್ನ ವಿನಮ್ರ ನಮನಗಳು.

ಮರೆಯಲಾಗದ ವ್ಯಕ್ತಿ

✿ ಎಸ್.ಕೆ. ಕಾತೋಟಿ

ನಾನು ನನ್ನ ವೃತ್ತಿಯಲ್ಲಿ ಅನೇಕ ಕಡೆ ಪ್ರವಾಸ ಮಾಡಿದ್ದೇನೆ. ಆತಿಥ್ಯ ಸ್ವೀಕರಿಸಿದ್ದೇನೆ. ಆದರೆ ಕಲಬುರ್ಗಿಯಲ್ಲಿ ಶ್ರೀ ಕುಸುಮಾಕರ ದೇಸಾಯಿ ದಂಪತಿಗಳ ಆತಿಥ್ಯ ವಿಶೇಷವಾಗಿತ್ತು. ಅವರ ಮನೆಗೆ ಭೇಟಿ ನೀಡಿದಾಗಿನ ಘಟನೆಯನ್ನು ನನ್ನ ಜೀವನದಲ್ಲಿ ಎಂದೂ ಮರೆಯುವಂತಿಲ್ಲ.

ದಿ. ಹಣಮಂತರಾವ ಹರಪನಹಳ್ಳಿ ಅವರು ಆಗ ಸಂಯುಕ್ತ ಕರ್ನಾಟಕದಲ್ಲಿ ವಿಭಾಗೀಯ ಪ್ರಸಾರಾಂಗ ಸಂಘಟಕರಾಗಿದ್ದರು. ನಾನು ಹುಬ್ಬಳ್ಳಿಯಲ್ಲಿದ್ದಾಗ, "ಕಲಬುರ್ಗಿಗೆ ಹೋಗೋಣ ನಡಿ" ಎಂದು ತಮ್ಮೊಂದಿಗೆ ಕರೆದುಕೊಂಡು ಹೋದರು. ಕಾರಿನಲ್ಲಿ ಪ್ರಯಾಣ. ರಸ್ತೆಗಳ ಸ್ಥಿತಿಯಂತೂ ಹೇಳತೀರದು.

ನಾವು ಕಲಬುರ್ಗಿ ತಲುಪಿದಾಗ ಸಂಜೆಯಾಗಿತ್ತು. ಕುಸುಮಾಕರ ದೇಸಾಯಿ ಅವರ ಪತ್ನಿ ಶ್ರೀಮತಿ ಸರಿತಾ ಅವರು, ಹಣಮಂತರಾವ ಹರಪನಹಳ್ಳಿ ಅವರ ಸೋದರ ಸೊಸೆ, ಆದ್ದರಿಂದ ಅವರ ಮನೆಯಲ್ಲೇ ಉಳಿದುಕೊಳ್ಳಬೇಕಾಗಿತ್ತು. ನಾವು ಅವರ ಮನೆ ತಲುಪಿ ಪರಿಚಯವಾದ ನಂತರ, ನನ್ನನ್ನು ಮೇಲಿಂದ ಕೆಳಗೆ ಕುಸುಮಾಕರ ದೇಸಾಯಿ ಅವರು ನೋಡಿದಾಗ ವಿಚಿತ್ರವೆನಿಸಿತು.

ಹೀಗೇಕೆ ನೋಡುತ್ತಿದ್ದಾರೆಂದು ನಾನು ವಿಚಾರ ಮಾಡುತ್ತಿರುವಾಗಲೇ "ಹುಬ್ಬಳ್ಳಿಯಿಂದ ಇಷ್ಟು ದೂರದವರೆಗೂ ಕಾರಿನಲ್ಲಿ ಬಂದಿದ್ದೀರಿ. ನಮ್ಮ ರಸ್ತೆಯಲ್ಲಿ ಬಂದಿದ್ದರಿಂದ ನಿಮ್ಮ ಅವಯವಗಳು ಎಲ್ಲವೂ ಸರಿಯಾಗಿವೆಯೇ ಎಂದು ನೋಡಿದೆ" ಎಂದು ಚಟಾಕಿ ಹಾರಿಸಿ, ನಮ್ಮ ಆಯಾಸವನ್ನೆಲ್ಲ ಮರೆಯುವಂತೆ ಮಾಡಿದರು.

ಮನುಷ್ಯ ನೋಡಲು ಗಂಭೀರವಾಗಿ ಕಂಡು ಬಂದರೂ, ಅವರಿಂದ ಮೇಲಿಂದ ಮೇಲೆ ಬರುತ್ತಿದ್ದ ಹಾಸ್ಯದ ಮಾತುಗಳು, ಚಹಾ ಪಾನೀಯ ಮುಂತಾದವುಗಳ ಬಗ್ಗೆ ಮೇಲಿಂದ ಮೇಲೆ ವಿಚಾರಿಸಿ, ಬಲವಂತವಾಗಿ "ನೀವು ನಿಮ್ಮ ಊರಲ್ಲಿ ಹೇಗೆ ಇದ್ದರೂ ನಾವು ಕೇಳುವದಿಲ್ಲ. ಆದರೆ ಈಗ ನಮ್ಮ ಅತಿಥಿಗಳು. ನಾವು ಹೇಳಿದಂತೆ ಕೇಳಬೇಕು" ಎಂದು ಹೇಳಿದರು. ನಂತರ "ಬೇಸರಪಟ್ಟುಕೊಳ್ಳಬೇಡಿ" ಎಂದು ಹೇಳಿ ಸಮಾಧಾನ ಪಡಿಸಿದರು.

ರಾತ್ರಿ ಊಟದ ಸಮಯದಲ್ಲೂ ಹಾಗೇ. ದೇಸಾಯರ ಮಾತಿನ ಚಟಾಕಿಯೊಂದಿಗೆ ಅವರ ಪತ್ನಿ ಶ್ರೀಮತಿ ಸರಿತಾಬಾಯಿ ಅವರ ಆತಿಥ್ಯದಿಂದ ನಾವು ಈ ಮನೆಗೆ ಹೊಸಬರು ಎಂದು ಅನಿಸಲೇ ಇಲ್ಲ. ಊಟ ಮುಗಿಯುವರೆಗೆ ನಮಗೆ ತಿಳಿಯದಂತೆಯೇ, ನಾವು ಆ ಮನೆಯವರಾಗಿ ಬಿಟ್ಟಿದ್ದೆವು. ನಮ್ಮಂತೆಯೇ ನಮ್ಮ ಕಾರಿನ ಚಾಲಕನೊಂದಿಗೆ ಅಷ್ಟೇ

ಆತ್ಮೀಯರಾಗಿ ನೋಡಿಕೊಂಡರು.

ರಾತ್ರಿ ನಮ್ಮ ಚಾಲಕ ಬಾಬು, ಹೊರಗೆ ಕಾರಿನಲ್ಲಿ ಮಲಗಿದ್ದ. ದೇಸಾಯರು ಒಳಗೆ ಬಂದಾಗ, ನಮ್ಮ ಚಾಲಕ ಕಾಣಿಸಲಿಲ್ಲ. "ನಿಮ್ಮ ಸಾರಥಿ ಬಾಬು ಎಲ್ಲಿ" ಎಂದು ಕೇಳಿದರು. "ಹೊರಗೆ ಕಾರಿನಲ್ಲಿ ಮಲಗಿದ್ದಾನೆ" ಎಂದು ಹೇಳಿದಾಗ, ಕೂಡಲೇ ಹೊರಗೆ ಹೋಗಿ ಚಾಲಕನನ್ನು ಒಳಗೆ ಮಲಗುವಂತೆ ಹೇಳಿದರು.

"ಸರ್, ನಾನು ಕಾರನ್ನು ನೋಡಿಕೊಳ್ಳಬೇಕಾಗುತ್ತದೆ. ಅದಕ್ಕೆ ಇಲ್ಲೇ ಮಲಗುತ್ತೇನೆ" ಎಂದು ಹೇಳಿದಾಗ, "ಇಲ್ಲಿ ನಿನ್ನ ಕಾರು ಕಳುವು ಮಾಡುವವರು ಯಾರೂ ಬರುವದಿಲ್ಲ. ಆದರೆ ನೀನು ಇಲ್ಲಿ ಹೊರಗೆ ಮಲಗಿದರೆ, ಸೊಳ್ಳೆಗಳು ಕಾರಿನ ಸಮೇತ ನಿನ್ನನ್ನೇ ಹೊತ್ತುಕೊಂಡು ಹೋಗುತ್ತವೆ. ನಿನ್ನ ಕಾರಿನ ಜವಾಬ್ದಾರಿ ನನ್ನದು. ನೀನು ಒಳಗೆ ಬಂದು ಮಲಗಬೇಕು. ನಿನ್ನ ಯೋಗಕ್ಷೇಮ ನಮ್ಮ ಜವಾಬ್ದಾರಿ" ಎಂದು ಒಳಗೆ ಕರೆದುಕೊಂಡೇ ಬಂದರು.

ಮನೆಗೆ ಬಂದ ಅತಿಥಿಗಳ ಬೇಕು ಬೇಡಗಳ ಬಗ್ಗೆ ಕಾಳಜಿ ವಹಿಸಿದ್ದಲ್ಲದೇ, ಅವರ ಯೋಗಕ್ಷೇಮದ ಬಗ್ಗೆಯೂ ಅಪಾರ ಕಾಳಜಿ ವಹಿಸುವ ಮೂಲಕ ದೇಸಾಯಿ ದಂಪತಿಗಳು ಕೇವಲ ಎರಡು ದಿನಗಳಲ್ಲೇ ನಮಗೆ ಸುಮಾರು ವರ್ಷಗಳಷ್ಟು ಹಿಂದಿನ ಪರಿಚಯದವರಂತಾಗಿ ಬಿಟ್ಟಿದ್ದರು.

ಅವರ ಮನೆಯಲ್ಲಿ ಅನೇಕ ವಿದ್ಯಾರ್ಥಿಗಳಿದ್ದರು. ಅವರೆಲ್ಲ ಇವರ ಮನೆಯಲ್ಲೇ ಇದ್ದು ಅಭ್ಯಾಸ ಮಾಡುತ್ತಿದ್ದರೆಂದು ತಿಳಿಯಿತು. ಅವರೆಲ್ಲರೂ ಈ ಮನೆಯ ಸದಸ್ಯರಾಗಿದ್ದರು. ದೇಸಾಯಿ ದಂಪತಿಗಳೊಂದಿಗೆ ಅವರು ಆತ್ಮೀಯವಾಗಿ ಬೆರೆತಿರುವದು ಕಂಡುಬಂದಿತು.

ಅವರ ಮನೆಯಲ್ಲಿರುವಾಗಿನ ಎರಡು ದಿನಗಳಲ್ಲಿ, ಹೈದರಾಬಾದ್ ಕರ್ನಾಟಕದ ನಿಜಾಮ ಶೈಲಿಯಲ್ಲಿ ಹಿಂದಿಯಲ್ಲೇ ನಿರರ್ಗಳರಾಗಿ ತಮಾಷೆಯಿಂದ ಮಾತನಾಡುತ್ತ ದೇಸಾಯಿ ಅವರು, ನಮಗೆ ತುಂಬ ಆತ್ಮೀಯರಾದರು. ಅವರ ನೆನಪಿನ ಶಕ್ತಿ ಅಗಾಧವಾಗಿತ್ತು. ಸಂಯುಕ್ತ ಕರ್ನಾಟಕ ಪತ್ರಿಕೆ, ಅದರ ಇತಿಹಾಸ, ಲೇಖನಗಳು, ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ ಪತ್ರಿಕೆ ವಹಿಸಿದ ಪಾತ್ರ ಮತ್ತು ಅನೇಕ ರೋಮಾಂಚಕಾರಿ ಘಟನೆಗಳನ್ನು ರಸವತ್ತಾಗಿ ಹೇಳಿದರು. ಹೈದರಾಬಾದ್ ವಿಮೋಚನೆಯ ಹೋರಾಟದ ಇತಿಹಾಸದ ಅರಿವು ನಮಗಾಯಿತು.

ನಂತರ ನಾನು ಕಲಬುರ್ಗಿಗೆ ಬಂದಾಗಲೊಮ್ಮೆ ಅವರಿಗೆ ಭೇಟಿಯಾಗದೇ ಹೋಗುತ್ತಿರಲಿಲ್ಲ. ಅಷ್ಟೊಂದು ಆತ್ಮೀಯರಾದರು. ಅವರು ಕಸ್ತೂರಿ ಮಾಸಪತ್ರಿಕೆಯಲ್ಲಿ ಕಟ್ಟಡ ಕುರಿತಂತೆ ಚೀನಾ ಗೋಡೆ ಕುರಿತ ಲೇಖನ ಒಂದನ್ನು ಓದಿದ್ದರು. ತಮ್ಮ ಮನೆ ಕಂಪೌಂಡ್ ಗೋಡೆ ನಿರ್ಮಿಸುವಾಗ, ಅವರಿಗೆ ಮನೆಯಲ್ಲಿ 'ಕಸ್ತೂರಿ' ಸಿಕ್ಕಲಿಲ್ಲ. ನನಗೊಂದು ಪತ್ರ ಬರೆದು, ಇಂಥ ತಿಂಗಳ 'ಕಸ್ತೂರಿ'ಯಲ್ಲಿ ಚೀನಾ ಗೋಡೆಗೆ ಸಂಬಂಧಿಸಿದ ಲೇಖನ

ಪ್ರಕಟವಾಗಿದೆ. ಅದರ ಪ್ರತಿಯೊಂದನ್ನು ಕಳಿಸಬೇಕೆಂದು ಕೋರಿದರು.

ಆ ಕಸ್ತೂರಿ ತುಂಬಾ ಹಳೆಯದಾಗಿದ್ದರೂ ನಾನು ಇಲ್ಲ ಎಂದು ಹೇಳಲಾಗಲಿಲ್ಲ. ಯಾಕೆಂದರೆ ಅಂಥ ವಿಶೇಷ ಲೇಖನ ಯಾವುದು ಎಂಬ ಕುತೂಹಲವೂ ನನ್ನಲ್ಲುಂಟಾಗಿತ್ತು. ಒಂದೆರಡು ದಿನಗಳಲ್ಲೇ ಅದನ್ನು ಹುಡುಕಿದೆ. ನಂತರ ಆ ಲೇಖನವನ್ನು ಓದಿ, ದೇಸಾಯಿ ಅವರ ಆಸಕ್ತಿಯನ್ನು ಕಂಡು ಬೆರಗಾದೆ. ಆ ಪತ್ರಿಕೆಯನ್ನು ಅವರಿಗೆ ಕಳಿಸಿದಾಗ ಅವರು ತುಂಬ ಸಂತೋಷಪಟ್ಟು, "ಬಹುಶಃ ಈ ಲೇಖನ ನೀವೂ ಓದಿ ಕಳಿಸಿದ್ದೀರಿ ಎಂದು ನನಗೆ ಅನಿಸುತ್ತದೆ" ಎಂದು ಬರೆದಿದ್ದರು. ನನಗೆ ಅಚ್ಚರಿಯಾಯಿತು. ಅಷ್ಟೇ ಅಲ್ಲ , ದೇಸಾಯಿ ಅವರ ಅಭಿರುಚಿ ಎಂಥ ಉನ್ನತ ಮಟ್ಟದ್ದಾಗಿತ್ತು ಎಂದು ತಿಳಿಯಿತು. ಎದುರಿನ ವ್ಯಕ್ತಿಯ ಅಭಿರುಚಿ ಕೂಡ ಎಂಥದು ಎಂದೂ ಗುರುತಿಸುವ ಸಾಮರ್ಥ್ಯ ಅವರಿಗಿತ್ತು ಎಂಬ ಅರಿವು ನನಗಾಯಿತು. ಈ ಘಟನೆಗಳನ್ನು ನಾನು ಎಂದೂ ಮರೆಯುವಂತಿಲ್ಲ.

ನಂತರ ಬಹಳ ವರ್ಷಗಳವರೆಗೆ ನಾನು ಅವರಿಗೆ ಭೇಟಿಯಾಗಿರಲಿಲ್ಲ. ಅವರು ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷರಾಗಿ ನೇಮಕಗೊಂಡ ಸುದ್ದಿಯನ್ನು ಪತ್ರಿಕೆಯಲ್ಲಿ ಓದಿ, ಅವರ ಫೋನ್ ನಂಬರ ಪಡೆದು ರಿಂಗ್ ಮಾಡಿದಾಗ, "ಹಲೋ ಕಾತೋಟೆಯವರೆ ಹೇಗಿದ್ದೀರಿ? ನಿಮ್ಮ ಅಭಿನಂದನೆಗೆ ಧನ್ಯವಾದಗಳು" ಎಂದಾಗ, ಅಷ್ಟು ವರ್ಷಗಳ ನಂತರವೂ ನನ್ನ ಧ್ವನಿಯನ್ನು ಗುರುತಿಸಿದ್ದು ಅಚ್ಚರಿಯನ್ನುಂಟು ಮಾಡಿತ್ತು.

ಕಳೆದ ವರ್ಷ ಕುಸುಮಾಕರ ದೇಸಾಯಿ ಅವರು ಹೋಗಿ ಬಿಟ್ಟರು ಎಂದು ಬೆಂಗಳೂರಿನಿಂದ ಬಂದ ಸುದ್ದಿ ಕೇಳಿ, ಒಂದು ರೀತಿಯಲ್ಲಿ ನನಗೆ ನಂಬಲು ಸಾಧ್ಯವೇ ಆಗಲಿಲ್ಲ. ಯಾಕೆಂದರೆ, ಅವರು ನನ್ನ ಮನಸ್ಸಿನಲ್ಲಿ ಅಷ್ಟೊಂದು ಆಳವಾಗಿ ಕುಳಿತುಬಿಟ್ಟಿದ್ದರು. ಅವರು ನನ್ನೊಂದಿಗೆ ಸಂಭಾಷಿಸಿದವುಗಳೆಲ್ಲವೂ ನೆನಪಾಗತೊಡಗಿದವು. ಇವರು ಇನ್ನೂ ನಮ್ಮೊಂದಿಗಿದ್ದಾರೆಂದೇ ಭಾಸವಾಗುತ್ತದೆ. ಅಷ್ಟೊಂದು ಆತ್ಮೀಯ ವ್ಯಕ್ತಿ ನಮ್ಮನ್ನಗಲಿ ಒಂದು ವರ್ಷವಾಗುತ್ತಿದೆ. ಅವರ ನೆನಪೇ ಅವರಿಗೆ ಸಲ್ಲಿಸುವ ಶ್ರದ್ಧಾಂಜಲಿ ಎಂದು ನನ್ನ ಭಾವನೆ.

ತುಂಬು ಹೃದಯದ ಗೆಳೆಯ

✿ ಪಿ.ಎಸ್. ಸತ್ಯಮೂರ್ತಿ

ಶ್ರೀಮತಿ ಸರಿತಾ ಕು. ದೇಸಾಯಿಯವರಿಗೆ ಒಮ್ಮೆ ಗುಲ್ಬರ್ಗದಲ್ಲಿ ವೇದಿಕೆ ಹತ್ತುವಾಗ ಲಿಗಮೆಂಟ್ ರಪ್ಚರ್ ಆಗಿ ಬಳಲುತ್ತಿದ್ದರು ಆರು ತಿಂಗಳು ಪ್ಲಾಸ್ಟರ್ ಹಾಕಲಾಗಿತ್ತು. ನಂತರ

ಡಾ. ಪ್ರಮಿಳರವರು L.H. ನಲ್ಲಿ ವೈದ್ಯಾಧಿಕಾರಿಗಳಾಗಿದ್ದಾಗ (Medical Officer) ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯರಿಗೆ, ನಮ್ಮ ಕಂಪನಿಯ (ಮಂಡಿ) ನೋವಿನ ಎಣ್ಣೆ ಉಪಯೋಗಿಸಲು ಹೇಳಿದರು. ಆ ತೈಲದಿಂದ ಅವರ ಮಂಡಿ ನೋವು ಗುಣಮುಖವಾಗಿ ಶ್ರೀ ಕುಸುಮಾಕರ ದೇಸಾಯಿಯವರ ಪರಿಚಯವಾಯಿತು.

ಈ ರೀತಿಯಾಗಿ ಆರಂಭವಾದ ಅವರ ಪರಿಚಯ, ಅವರ ಬಹುಮುಖ ಪ್ರತಿಭೆಯಲ್ಲಿ ಏನೋ ಆಕರ್ಷಣೆ ಕಂಡ ನನ್ನನ್ನು, ಮತ್ತಷ್ಟು ಅವರ ಆತ್ಮೀಯ ಗೆಳೆಯನಾಗುವಂತೆ ಮಾಡಿತು. ಕ್ರಮೇಣ ಅವರು ಎಷ್ಟು ಹತ್ತಿರದವರಾದರು ಎಂದರೆ, ವಾರದಲ್ಲಿ ೧-೨ ಘಂಟೆಗಳಾದರೂ ಅವರೊಡನೆ ಮಾತನಾಡಿದರೆ ಮಾತ್ರ ಮನಸ್ಸಿಗೆ ಸಮಾಧಾನವಾಗುತ್ತಿತ್ತು.

ರಾಜಕೀಯ, ನ್ಯಾಯಾಂಗ, ರಾಜ್ಯಾಂಗ, ಔಷಧಿ ಜ್ಯೋತಿಷ್ಯ ಯಾವ ವಿಷಯವನ್ನಾದರೂ ನಿರರ್ಗಳವಾಗಿ ಮಾತನಾಡುತ್ತಿದ್ದರು. ನನ್ನ ಜೊತೆಯಲ್ಲಿ ಜ್ಯೋತಿಷ್ಯ ಮತ್ತು ಔಷಧಗಳ ವಿಚಾರವನ್ನು ಬಹಳ ವಿವರವಾಗಿ ಕೇಳುತ್ತಿದ್ದರು. ಅವರ ತಂದೆ ಆಯುರ್ವೇದ ಶಾಸ್ತ್ರದಂತೆ ಔಷಧಿ ಕೊಡುತ್ತಿದ್ದರಂತೆ. ಆದ್ದರಿಂದ ಆಸಕ್ತಿ. ನನ್ನ ಅನುಭವದಲ್ಲಿ ಹೇಳುವುದಾದರೆ ಶ್ರೀ ದೇಸಾಯರ ಜೊತೆ ಮಾತನಾಡುವುದೇ ಒಂದು ಆನಂದ. ಉತ್ಸಾಹದಿಂದ ಬಿಚ್ಚು ಹೃದಯದಿಂದ ಅವರೊಡನೆ ಮಾತನಾಡುತ್ತಿದ್ದರೆ ಘಂಟೆಗಳು ಹೋಗುವುದು ಗೊತ್ತಾಗುತ್ತಲೇ ಇರಲಿಲ್ಲ.

ಶ್ರೀ ದೇಸಾಯರ ಮಾತಿನಲ್ಲಿ ಯಾವಾಗಲೂ ದೇಶಪ್ರೇಮ ತುಂಬಿ ತುಳುಕಾಡುತ್ತಿತ್ತು. ಸ್ವಾತಂತ್ರ್ಯ ಹೋರಾಟಗಾರರಾಗಿ, ಹೆಸರಾಂತ ವಕೀಲರಾಗಿ ಅವರು, ಅವರ ಗತನೆನಪುಗಳನ್ನು ಹೆಮ್ಮೆಯಿಂದ ಹೇಳುತ್ತಿದ್ದರೆ, ಎಂಥವರಿಗಾದರೂ ಒಂದು ಹೊಸ ಚೈತನ್ಯ ಮೂಡುತ್ತದೆ.

ಇಂತಹ ಸರಳ, ತುಂಬು ಹೃದಯದ ಆತ್ಮೀಯ ಗೆಳೆಯರು ಮತ್ತೆ ನನಗೆ ಸಿಗುವುದಿಲ್ಲ.

ಬಹುಮುಖ ಪ್ರತಿಭೆ

❁ ಗವೀಶ ಹಿರೇಮಠ

ದಿ. ಕುಸುಮಾಕರ ದೇಸಾಯಿ ಅವರನ್ನು ಕುರಿತು ಬರೆಯಬೇಕೆಂದಾಕ್ಷಣ ಮನಸ್ಸು, ಹೃದಯ, ಕಣ್ಣು ತುಂಬಿ ಬರುತ್ತಿವೆ. ಮರೆಯಲಾರದ ವ್ಯಕ್ತಿತ್ವ, ಅಳಿಸಲಾರದ ಚಿತ್ರ. ಅವರು ಮರೆಯಾದರೂ ಅವರ ನೆನಪುಗಳು ಸದಾ ಹಸಿರು. ನೆನಪು ನಮ್ಮದಾಗಿರುವಷ್ಟು ಬೇರಾವುದೂ ನಮ್ಮದಲ್ಲ. ನಮ್ಮ ಮನಸ್ಸಿನ ಮೇಲೆ, ಹೃದಯದ ಮೇಲೆ ಆಳವಾಗಿ ಬಿಂಬಿತವಾದ ಯಾವ ವಿಷಯವನ್ನೂ ನಾವು ಮರೆಯಲು ಸಾಧ್ಯವಿಲ್ಲ. ಕಣ್ಣುಮುಚ್ಚಿ ಕುಳಿತು ನೆನಪಿನ ಲೋಕದಲ್ಲಿ ಸಾಗಿದರೆ ಅವರ ಮಧುರ ಮಾತುಗಳು, ಅವರು ಕೇಳುತ್ತಿದ್ದ ರಸ ಪ್ರಸಂಗಗಳು ಈಗಲೂ ಕೇಳಿದಂತೆ.

ಕುಸುಮಾಕರ ದೇಸಾಯಿ ಅವರ ವ್ಯಕ್ತಿತ್ವದ ಬಗ್ಗೆ ಒಂದೆರಡು ಮಾತು ಹೇಳಲೇಬೇಕು. ಗುಲಬರ್ಗಾದ ಗಣ್ಯ ನ್ಯಾಯವಾದಿಗಳ ಸಾಲಿನಲ್ಲಿ ಗುರುತಿಸಿಕೊಂಡಿದ್ದರು. ತಮ್ಮ ಕ್ಷೇತ್ರದಲ್ಲಿ ಬಹಳಷ್ಟು ಸಾಧಿಸಿ ತಮ್ಮದೇ ಆದ ವ್ಯಕ್ತಿತ್ವ ನಿರ್ಮಿಸಿಕೊಂಡಿದ್ದರು. ತಾವು ಬೆಳೆಯುವುದರ ಜೊತೆ ಅನೇಕ ನ್ಯಾಯವಾದಿಗಳನ್ನು ಬೆಳೆಸಿದ್ದರು. ಅವರೆಲ್ಲ ಈಗ ಹೆಸರುವಾಸಿ ನ್ಯಾಯವಾದಿಗಳು, ಸುತ್ತಲಿನ ಜನರ ಬಗ್ಗೆ ನಾಡಿನ ಬಗ್ಗೆ ದೇಶದ ಬಗ್ಗೆ, ವೈಜ್ಞಾನಿಕವಾಗಿ, ವೈಚಾರಿಕವಾಗಿ ಚಿಂತಿಸಿದವರು. ತಮಗೆ ಸರಿಎನಿಸಿದ್ದನ್ನು ಯಾರ ಮುಲಾಜಿಗೂ, ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ನಿಷ್ಠುರವಾಗಿ ಹೇಳುತ್ತಿದ್ದರು. ಅಷ್ಟೇ ಸರಳ ನಿಷ್ಕಲ್ಮಷ ಮನಸ್ಸು.

ದೇಸಾಯಿ ಅವರದು ಬಹುಮುಖ ಪ್ರತಿಭೆ, ಬಹುಮುಖ ಸೇವೆ. ಗುಲಬರ್ಗಾದ ಎಚ್.ಕೆ.ಈ. ಸಂಸ್ಥೆಯ ಕಾನೂನು ಮಹಾವಿದ್ಯಾಲಯದ ಪ್ರಾಧ್ಯಾಪಕರಾಗಿ, ನ್ಯಾಯವಾದಿಯಾಗಿ, ಸಮಾಜ ಸೇವಕರಾಗಿ, ರಾಜಕಾರಣಿಯಾಗಿ, ನೀರು ಸರಬರಾಜು ಒಳಚರಂಡಿ ನಿಗಮದ ಅಧ್ಯಕ್ಷರಾಗಿ ಮೌಲಿಕವಾದ ಕೊಡುಗೆ ಕೊಟ್ಟವರು. ನಿಗಮದ ಅಧ್ಯಕ್ಷರಿದ್ದಾಗ ನೇಮಕಗೊಂಡ ನೌಕರರು ಈಗಲೂ ಅವರನ್ನು ಸ್ಮರಿಸುತ್ತಾರೆ.

ದೇಸಾಯಿಯವರು ರಾಷ್ಟ್ರಪ್ರೇಮಿ ಕುಟುಂಬದಿಂದ ಬಂದವರಾಗಿದ್ದರಿಂದ ರಾಷ್ಟ್ರಾಭಿಮಾನ, ಸಂಘರ್ಷದ ಬದುಕು ಸಹಜವಾಗಿ ಮೂಡಿಬಂದಿದೆ. ಹೈದ್ರಾಬಾದ ವಿಮೋಚನಾ ಚಳುವಳಿಯಲ್ಲಿ ದಿಗಂಬರರಾವ ಕಲ್ಮಂಕರ, ಇನಾಂದಾರ ಜೊತೆ ರಜಾಕಾರರ ದಬ್ಬಾಳಿಕೆಯಲ್ಲಿ ಸಶಸ್ತ್ರ ಸಮೇತ ಸಂಘರ್ಷಕ್ಕಿಳಿದು ಸಾಹಸ ಪ್ರದರ್ಶಿಸಿದವರು. ಗಾಂಧೀಜಿಯವರ ವ್ಯಕ್ತಿತ್ವಕ್ಕೆ ಮಾರುಹೋಗಿದ್ದ ದೇಸಾಯಿಯವರು ಕೊನೆಯ ಉಸಿರಿನವರೆಗೂ ಖಾದಿಬಟ್ಟೆ ಬಿಟ್ಟು ಬೇರೇನೂ ಧರಿಸಲಿಲ್ಲ. ೧೯೪೭ರ ಅಕ್ಟೋಬರ ತಿಂಗಳಲ್ಲಿ ಗುಲಬರ್ಗಾ ಜಿಲ್ಲೆಯ ಸೇಂದಿ ಗಿಡಗಳನ್ನು ನಾಶ ಮಾಡುವ ಕಾರ್ಯದಲ್ಲಿ ತೊಡಗಿಸಿಕೊಂಡು ಸೇಂದಿ ಗಿಡಗಳನ್ನು ನಿರ್ನಾಮ ಮಾಡಿದರು. ಜಯಪ್ರಕಾಶ ನಾರಾಯಣರ ಸಮಾಜವಾದ ಸಿದ್ಧಾಂತದಲ್ಲಿ ನಂಬಿಕೆ ಇಟ್ಟು

ಚಳುವಳಿ ಮಾಡಿ ತುರ್ತು ಪರಿಸ್ಥಿತಿಯಲ್ಲಿ ಸೆರೆಮನೆವಾಸ ಕಂಡು ಬಂದರು. ಅವರ ದೇಶಾಭಿಮಾನ, ಸ್ವಾತಂತ್ರ್ಯ ಹೋರಾಟ, ಸಮಾಜವಾದದ ಬದುಕು ಅರ್ಥಪೂರ್ಣ.

ದೇಸಾಯಿಯವರು ಬಹುಭಾಷೆ ಬಲ್ಲವರು. ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು ಮರಾಠಿ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುತ್ತ ಆ ಭಾಷೆಗಳ ಗ್ರಂಥಗಳನ್ನು ಅವಲೋಕಿಸಿದವರು. ಆದರೂ ಹೆಚ್ಚಾಗಿ ಇಂಗ್ಲೀಷ್ ಸಾಹಿತ್ಯಕ್ಕೆ ವಾಲಿದ್ದರು. ಆ ಭಾಷೆಯಿಂದ ಜಗತ್ತಿನ ಸಾಹಿತ್ಯ ಅರಿತಿದ್ದರು. ಕನ್ನಡದ ಬಗ್ಗೆಯೂ ಅಷ್ಟೇ ಅಭಿಮಾನ ಗೌರವ. ಶ್ರೀಮತಿ ಸರಿತಾ ಕುಸುಮಾಕರ ಅವರ ಸಾಹಿತ್ಯದ ಬೆಳವಣಿಗೆಯಲ್ಲಿ ಅಪ್ರತ್ಯಕ್ಷವಾಗಿ ಕಾರಣರು. ನಾನು ಆಗಾಗ ಸಹೋದರಿ ಸರಿತಾ ಕುಸುಮಾಕರ ಅವರನ್ನು ಕಾಣಹೋದಾಗ ದೇಸಾಯಿಯವರ ಜೊತೆಗೂ ಸಾಹಿತ್ಯದ ಬಗ್ಗೆ, ಸಾಹಿತಿಗಳ ಬಗ್ಗೆ ಚರ್ಚಿಸುತ್ತಿದ್ದೆ. ನಮ್ಮ ಚರ್ಚೆ, ನಮ್ಮ ಮಾತುಗಳು, ಕ್ರಮೇಣ ಆತ್ಮೀಯರನ್ನಾಗಿ ಮಾಡಿದವು. ಮೊದಮೊದಲು ಗಂಭೀರವಾಗಿ ಕಂಡ ದೇಸಾಯಿಯವರು ಕ್ರಮೇಣ ಹಾಸ್ಯ ಪ್ರವೃತ್ತಿಯವರೆನಿಸಿದರು. ಅವರು ಅನೇಕ ಹಾಸ್ಯ ಪ್ರಸಂಗಗಳನ್ನು ಹೇಳಿ ರಂಜಿಸಿದ್ದನ್ನು ನಾನೆಂದೂ ಮರೆಯಲಾರೆ. ತಮ್ಮ ವಿದ್ಯಾರ್ಥಿ ಜೀವನದ, ತಾರುಣ್ಯದ ಪ್ರಸಂಗವೊಂದನ್ನು ಹೇಳಿದ್ದು ನನಗಿನ್ನೂ ನೆನಪಿದೆ.

“ಗವೀಶ, ನಾನು ವಿದ್ಯಾರ್ಥಿಯಾಗಿದ್ದಾಗ ಗೆಳೆಯರೊಂದಿಗೆ ಆಗಾಗ ರೇಲ್ವೆಸ್ಟೇಷನ್‌ಗೆ ಹೋಗುತ್ತಿದ್ದೆ. ರೇಲ್ವೆ ಕಂಪಾರ್ಟಮೆಂಟಿನಲ್ಲಿ ಕುಳಿತ ಹುಡುಗಿಯರನ್ನು ನೋಡುತ್ತ ತಿರುಗಾಡುವುದು, ಸುಂದರ ಹುಡುಗಿ ಕಂಡಾಗ ನೋಡುತ್ತ ನಿಂತು ಬಿಡುವುದು, ರೈಲು ಬಿಟ್ಟಾಗ ಕೈ ಬೀಸುತ್ತಾ ಬರುವುದು ನಮ್ಮ ಕೆಲಸ. ಒಮ್ಮೆ ಉತ್ತರ ಭಾರತದ ಮಹಿಳೆ ಸುಂದರ, ಅತಿ ಸುಂದರ ಮಹಿಳೆ. ನೀವು ಸಾಹಿತಿಗಳು ವರ್ಣಿಸುವ ಎಲ್ಲಾ ಲಕ್ಷಣಗಳು ಅವಳಲ್ಲಿ. ನಾನು ಪ್ಲಾಟಫಾರ್ಮ ಮೇಲೆ ಕಿಡಕಿಯಿಂದ ನೋಡುತ್ತ ನಿಂತೆ. ಅವಳು ಪೇಪರ ಓದುತ್ತಿದ್ದಳು. ನಾನು ಅವಳನ್ನೇ ನೋಡುತ್ತಾ ನನ್ನ ನಾ ಮರೆತು ಹೋದೆ. ಹಿಂದಿನಿಂದ ನನ್ನ ಭುಜ ತಟ್ಟಿ ಒಬ್ಬ ವ್ಯಕ್ತಿ ಮಾತನಾಡಿಸಿ ಹಿಂದಿಯಲ್ಲಿ ಹೇಳಿದ. “ನಾನು ಅವಳ ಗಂಡ, ಎಷ್ಟೊ ಸಲ ಅವಳು ತಲೆ ಎತ್ತಿ ನನ್ನನ್ನೇ ನೋಡೋದಿಲ್ಲ. ನಿನ್ನನ್ನೇನು ನೋಡುತ್ತಾಳೆ ಹೋಗು” ಎಂದಾಗ ನನಗೊಂದು ರೀತಿ ಮುಜುಗರವೆನಿಸಿತು” ಹೀಗೆ ಎಷ್ಟೋ ಪ್ರಸಂಗದ ದಿನಗಳನ್ನು ನೆನಪಿಸಿಕೊಂಡು ಹೇಳಿ ನಕ್ಕಿದ್ದು ನಗಿಸಿದ್ದು ಮರೆಯಲಾದೀತೆ?

ಕುಸುಮಾಕರ ದೇಸಾಯಿಯವರದು ಸುಂದರ ಜೋಡಿ. ದೇಸಾಯಿಯವರಷ್ಟೇ ಎತ್ತರ, ಸುಂದರ ರೂಪ ಸರಿತಾ ಅವರದು. ಇಬ್ಬರೂ ಸಂಜೆ ಗುಲಬರ್ಗಾ ನಗರಸಭೆ ಉದ್ಯಾನದ ದಾರಿ ಹಿಡಿದು ವಾಯುವಿಹಾರಕ್ಕೆ ಹೊರಟಾಗ ನಿಂತು ನೋಡುವಂಥ ಜೋಡಿ ಎನಿಸುತ್ತಿತ್ತು. ಅರವತ್ತರಂಚಿನಲ್ಲಿಯೂ ಇಪ್ಪತ್ತರ ಉತ್ಸಾಹದಲ್ಲಿಯೇ ಮಾತನಾಡುತ್ತಿದ್ದರು. ಈ ದಂಪತಿಗಳ ಬದುಕಿನಲ್ಲಿ ವಿಶಿಷ್ಟತೆ ಎಂದರೆ ಒಬ್ಬರ ಮೇಲೊಬ್ಬರು ಅಧಿಕಾರ ಚಲಾಯಿಸಲಿಲ್ಲ.

ಸ್ನೇಹಿತರಂತಿದ್ದರು. ಪರಸ್ಪರ ಹೊಂದಾಣಿಕೆಯ ಬದುಕು ಅವರದು. ಸಮಸ್ಯೆಗಳಲ್ಲಿ ಕೋರ್ಟು, ಕಛೇರಿಗಳ ಜಟಿಲತೆಗಳಲ್ಲಿಯೂ ಸಂಯಮತೆ ಕಳೆದುಕೊಳ್ಳದೆ ಆದರ್ಶವನ್ನು, ಶ್ರದ್ಧೆಯನ್ನು, ಪ್ರಾಮಾಣಿಕತೆಯನ್ನು ಕೈಬಿಡದೆ ಅವುಗಳಿಗೆ ಅಂಟಿಕೊಂಡೇ ಬಂದರು.

ಇಂದು ಕುಸುಮಾಕರ ಅವರನ್ನು ಕಳೆದುಕೊಂಡು ಏಕಾಂಗಿಯಾಗಿ ಮೌನಿಯಾಗಿರುವ ಸಹೋದರಿ ಸರಿತಾ ಅವರನ್ನು ಕಂಡಾಗ ನೋವೆನಿಸುತ್ತದೆ. ದೇಸಾಯಿಯವರು ಇನ್ನು ಕೆಲವು ವರ್ಷ ಬದುಕಬೇಕಿತ್ತು. ನಾವಂದುಕೊಂಡಂತೆ ಜೀವನವೆಲ್ಲಿ? ಕುಸುಮಾಕರ ದೇಸಾಯಿಯವರು ಇಂದು ನಮ್ಮೆದುರು ಇರಲಿಕ್ಕಿಲ್ಲ. ಅವರ ವ್ಯಕ್ತಿತ್ವ ಅವರ ಕಾರ್ಯ ಅವರ ನೆನಪುಗಳು ಸದಾ ಜೀವಂತ.

ಮಾಗಿದ ಮನಸಿನ ಮಾಮಾ

❁ ಆರ್.ವಸುಂಧರಾ ಶ್ರೀಧರ

ಕುಸುಮಾಕರ ದೇಸಾಯಿಯವರನ್ನು ನೆನೆದರೆ ಗುಲ್ಬರ್ಗಾದ ನೆನಪಿನ ಪುಟಗಳು ತೆರೆದುಕೊಳ್ಳುತ್ತವೆ.

ಆಗಿನ್ನೂ S.S.L.C. ಮುಗಿಸಿದ್ದೆ. ತಂದೆಯವರಿಗೆ (ರಾಘವೇಂದ್ರ ಇಟಗಿ) ಗುಲ್ಬರ್ಗಾಕ್ಕೆ ವರ್ಗವಾಗಿತ್ತು. ನನಗೋ ಮುಜುಗರ, ಧಾರವಾಡ ಬಿಟ್ಟು, ಸ್ನೇಹಿತೆಯರನ್ನೆಲ್ಲಾ ಬಿಟ್ಟು ಹೋಗಬೇಕಲ್ಲ ಎಂದು.

ಆದ್ರೆ ಗುಲ್ಬರ್ಗಾ ಮುಟ್ಟಿದ ತಕ್ಷಣ ಮನಸ್ಸಿಗೆ ಹಿತವೆನಿಸಿತ್ತು. ಕಾಲೇಜಿನ್ನು ಪ್ರಾರಂಭವಾಗಿರಲಿಲ್ಲ. ಒಂದು ಸಂಜೆ ತಂದೆಯವರ ಜೊತೆಗೆ ನಾನು ಬರೆದ ಕಥೆಯೊಂದರ ಪ್ರತಿಯನ್ನು ಕೈಯಲಿಟ್ಟುಕೊಂಡು ಹೊರಟೆ. ಬಹುಶಃ ಮರಾಠ ಮಂದಿರದ ಕೊಠಡಿ ಇರಬೇಕು. ಅಲ್ಲಿ ಹತ್ತಿಪ್ಪತ್ತು ಜನ ಹಿರಿಯರು ಕುಳಿತಿದ್ದರು. ಹೆಂಗಸರ ಸಂಖ್ಯೆ ಕಮ್ಮಿಯೇ ಇತ್ತು. ಅಳುಕುತ್ತಲೇ ಇದ್ದೆ, ಅದೊಂದು ಕಥೆಗಾರರ-ಕವಿಗಳ ಗೋಷ್ಠಿ.

ಅಲ್ಲಿಯೇ ನನಗೆ ದೇಸಾಯಿ ದಂಪತಿಗಳ ಪರಿಚಯವಾದದ್ದು. ನಾನು ಓದಿದ ಕಥೆಗೆ ಬೆನ್ನು ತಟ್ಟಿ ಹುರುಪು ನೀಡಿದವರು ಸರಿತಾಮಾಮಿ.

ಗಡಸು ಧ್ವನಿಯ, ಸತ್ಯ ನಿಷ್ಠುರತೆಯ ಮಾತುಗಳನ್ನಾಡುತ್ತಿದ್ದ ಕುಸುಮಾಕರ ಮಾಮಾ ಎಂದರೆ ಮೊದ ಮೊದಲು ಹೆದರಿಕೆ ಅನಿಸುತ್ತಿತ್ತು.

ಆನಂತರದ ದಿನಗಳಲ್ಲಿ ಮಾತುಗಳಲ್ಲಿ ಅಡಗಿದ್ದ ಆತ್ಮೀಯತೆ, ಮಮತೆಯನ್ನು ಗುರುತಿಸಿ ನಿರಾತಂಕವಾಗಿ ಹರಟುತ್ತಿದ್ದೆ.

ಆ ದಿನಗಳಲ್ಲಿ ಕಥೆ, ಕವನ ಏನನ್ನೂ ಬರೆದರೂ ತಂದೆಯ ನಂತರ ಮೊದಲು ಓದಲು ಕೊಟ್ಟು-ವಿಮರ್ಶೆಗಾಗಿ ಕಾಣುತ್ತಿದ್ದದ್ದು, ಸರಿತಾ ಮಾಮಿಯ ಹತ್ತಿರ. ಅವರ ಒಟ್ಟು ಕುಟುಂಬದ ಸಂತೋಷದ ಸಮಯಗಳನ್ನು ನಾನು ಹಂಚಿ ಕೊಂಡಿದ್ದೇನೆ. ಅವರ ಮನೆಯ ರುಚಿಕರ ಊಟವನ್ನೂ ಸವಿದಿದ್ದೇನೆ.

ಈ ದಂಪತಿಗಳು ನಮ್ಮ ಮನೆಗೆ ಬಂದು ಬಿಸಿ ಬಿಸಿ ಬೋಂಡಾ, ಚಹಾದ ನಡುವೆ ರಾಜಕೀಯ, ಸಾಹಿತ್ಯಕ ವಿಷಯಗಳ ಚರ್ಚೆಗಳನ್ನು ಕೇಳಿ ಕೇಳಿ ಬೆಳೆದಿದ್ದೇನೆ.

ಅನುಪಮಾ ಮಾಮಿಯವರಿಗೆ ಇವರಿಬ್ಬರ ಬಗ್ಗೆ ಹೇಳ್ತಿದ್ದರೆ ನಂಗೇನೋ ಖುಷಿ.

ಇದಿಷ್ಟು ಕುಸುಮಾಕರ ಮಾಮ ಅವರ ವ್ಯಕ್ತಿತ್ವದ ಪರಿಚಯವಾದ ಬಗೆಯ ಪೀಠಿಕೆ ಅಷ್ಟೆ.

ಬೆಂಗಳೂರಿನಲ್ಲಿ ಕುಸುಮಾಕರ ಮಾಮ Urban Water Supply board ನ ಅಧ್ಯಕ್ಷರಾಗಿದ್ದಾಗ ನಮ್ಮ ಕುಟುಂಬಕ್ಕೆ ಅವರಿಂದ ಆದ ಸಹಾಯವನ್ನು ಹೇಗೆ ಮರೆಯಲು

ಸಾಧ್ಯ?

ತಂದೆಯವರಿಗೆ, ಸಾಹಿತಿಗಳಿಗೆ ದೊರಕುತ್ತಿದ್ದ ಗೌರವಧನವು ದೊರಕುವಂತೆ ಮಾಡಿದ್ದು, ಈ ಹೃದಯವಂತ ಮಾಮಾ ಅವರೇ.

ಸದಾ ಕರ್ನಾಟಕ ರಾಜ್ಯದ ಹೊರಗೇ ಕೆಲಸ ಮಾಡುತ್ತಿದ್ದ ತಂದೆಯವರು ಯಾರಲ್ಲಿಯೂ ಯಾವುದನ್ನೂ ಕೇಳಿ ಪಡೆದವರಲ್ಲಾ. ಶ್ರೀನಗರ ಆಕಾಶವಾಣಿಯ ಡೈರೆಕ್ಟರಾಗಿ ನಿವೃತ್ತಿ ಹೊಂದಿ ಬೆಂಗಳೂರಿಗೆ ಅವರು ಬಂದಾಗ, (ಬೆಂಗಳೂರಿನಲ್ಲಿ) ಅಲ್ಲೇ ಇದ್ದರೂ ತಂದೆಯ ಸ್ವಭಾವದ ಪರಿಚಯವಿದ್ದ ಮಾಮಾ, ತಾವಾಗೇ ಈ ಗೌರವ ಅವರಿಗೆ ದೊರಕುವಂತೆ ಮಾಡಿದ್ದು ಅವರ ಹಿರಿಯ ವ್ಯಕ್ತಿತ್ವಕ್ಕೆ ನಿದರ್ಶನ.

ಸುಮಾರು ದಿನಗಳು ಸರಿದು ಹೋದವು ಮತ್ತೆ ಈ ದಂಪತಿಗಳು ಕಲಬುರ್ಗಿಗೆ ವಾಪಸ್ಸಾದರು. ನನಗೆ Programme Executive ಆಗಿ ಬಡ್ತಿ ಸಿಕ್ಕಿ, ಗುಲ್ಬರ್ಗಾಕ್ಕೇ (ಆಕಾಶವಾಣಿಗೆ) Posting ಆದಾಗ, ಬೇರೆಯವರಂತೆ ನಾನು ಕಂಗೆಟ್ಟು ಕುಳಿತುಕೊಳ್ಳಲಿಲ್ಲ. ಗುಲ್ಬರ್ಗಾ ನನಗೆ ತವರು. ಅಲ್ಲಿ ದೇಸಾಯಿ ದಂಪತಿಗಳು, ವಸಂತ ಕುಷ್ಟಗಿಯವರು ಹೀಗೆ ಊರ ತುಂಬಾ ಬೇಕಾದ ಹಿರಿಯರಿದ್ದರು ಮಾರ್ಗದರ್ಶನಕ್ಕೆ.

ಸೀದಾ ಸೂಟಕೇಸು ಹೊತ್ತು ನಡೆದದ್ದು ಈ ಮಾಮಾ, ಮಾಮಿ ಮನೆಗೆ-- "ಏನವ್ವಾ ದುರ್ಗಿ... ವೆಲ್‌ಕಮ್" ಅಂದ್ರು ಮಾಮ. ನನ್ನನ್ನು ಹಾಗೇ ಅವರು ಕರೆಯುತ್ತಿದ್ದರು. ಬಹಳ ಮೊದ ಮೊದಲು ಇವರ‍್ಯಾಕೆ ಹೀಗಂತಾರೆ. ಅಂತ ಮನಸ್ಸಿನೊಳಗೇ ಯೋಚಿಸಿ ತುಸು ಕೋಪ ಬಂದಿದ್ದುಂಟು. ಆದ್ರೆ ನಂತರ ತಿಳಿದಿದ್ದು-- ಹೆಣ್ಣಿಗೆ ದುರ್ಗಿಯ ಶಕ್ತಿ ಬೇಕೇಬೇಕೂಂತ. ಇದು ನನ್ನ ಕಲ್ಪನೆ. ಅವರ‍್ಯಾಕೆ ಹಾಗೆ ಕರೀತಿದ್ರೋ ಈಗ್ಲೂ ಗೊತ್ತಿಲ್ಲ. ಆದ್ರೆ ಅಮೇಲಾಮೇಲೆ ಅವರು ಹಾಗೆ ಕರೆದಾಗಲೆಲ್ಲಾ ನನ್ನಲ್ಲಿ ಶಕ್ತಿ ತುಂಬುತ್ತಿತ್ತೋ ಏನೋ. ಹಾಗೆಂದೇ ಜೀವನದಲ್ಲಿ ಆಗಿ ಹೋದ ಕಹಿ ಘಟನೆಗಳನ್ನೆಲ್ಲಾ ನುಂಗಿ, ನಗುತ್ತಾ ಜೀವನವನ್ನು ಎದುರಿಸಿದ್ದೇನೆ.

ಅವರ ಅಂದಿನ 'ವೆಲ್ ಕಮ್' ನನ್ನನ್ನು ಗುಲ್ಬರ್ಗಾದಲ್ಲಿ ಎರಡು ವರ್ಷ ಇರಗೊಟ್ಟಿತು. ಎಷ್ಟೋ ಸಲ ವೈಯಕ್ತಿಕ ಹಾಗೂ ಕಚೇರಿಯ ಸಮಸ್ಯೆಗಳಿಗೂ ಅವರಿಂದ ಪರಿಹಾರ ದೊರಕಿದ್ದಿದೆ.

ಗುಲ್ಬರ್ಗಾದಲ್ಲಿ Join ಆದ ೨-೩ ದಿನಗಳ ನಂತರ ನಾನು ಬೆಂಗಳೂರಿಗೆ ವಾಪಸ್ಸಾಗಬೇಕಿತ್ತು. ರಜೆಯ ಅರ್ಜಿಯನ್ನು ಮೇಲಿನಧಿಕಾರಿಗಳಿಗೆ ಗುಜರಾಯಿಸಿದ್ದೆ. ಅವರು ರಜೆ ನೀಡಲು ನಿರಾಕರಿಸುತ್ತಾರೇನೋ ಎಂದೆನಿಸಿ. ಕಂಗಾಲಾಗಿ ಬಿಟ್ಟಿದ್ದೆ. ದೇಸಾಯಿಯವರ ಮನೆಗೆ ಬಂದೆ. ಸಂಜೆಗೆ ರಿಜರ್ವೇಶನ್ನಾಗಿತ್ತು. ಪುಟ್ಟ ಮಕ್ಕಳು ಕಾಯುತ್ತಿರುತ್ತಾರೆ ಎಂಬ ಕಲ್ಪನೆಯೇ ನಂಗೆ. ಹೋಗಲಾಗದಿದ್ದರೆ ಎಂದೆನಿಸಿ ದುಃಖ ಉಕ್ಕಿತ್ತು. ಮಾಮಿ ಮನೆಯಲ್ಲಿ ಇರಲಿಲ್ಲಾ. ಮಾಮಾ ಖುರ್ಚಿಯಲ್ಲಿ ಕುಳಿತು ಚಹಾ ತೆಗೆದುಕೊಳ್ತಿದ್ದರು.

‘ಏನು ಮರ್ಗವ್ವಾ ಸಪ್ಪಗಿದ್ದಿ’ ಅಂದ್ರು.... ಬಿಕ್ಕಳಿಕೆಯ ಮಧ್ಯೆ ಸಿಕ್ಕ ಪುಟಿಗಿಯಂತೆ ಎಲ್ಲವನ್ನೂ ವಿವರಿಸಿದೆ. ಬಡ್ತಿ ಸಿಕ್ಕ ಮೇಲೆ ಪರೀಕ್ಷೆಗೆ ಸಿದ್ಧರಾಗುತ್ತಿದ್ದ ಮಕ್ಕಳನ್ನು ಬಿಟ್ಟು ಬಂದಿದ್ದೆ. Phone ಎತ್ತಿದವರೇ ದೇಸಾಯಿವರು ಯಾರೊಡನೆಯೋ ಮಾತನಾಡಿದರು.... ನಗ್ತಾ ಛೇಡಿಸುತ್ತಾ. ‘ಹುಚ್ಚು ಪೋರಿ ಅಳ್ತಾರೇನು... ನೀನು ಇವತ್ತು ಹೊರಡು ನಾನೆಲ್ಲಾ ಹೇಳ್ತೀನಿ.” ಅಂದರು.

ಇದು ಬಹಳ ಸಾಮಾನ್ಯ ಘಟನೆ ಅನಿಸಬಹುದು. ಆದ್ರೆ ಅಂದಿನ ನನ್ನ ಪರಿಸ್ಥಿತಿಯಲ್ಲಿ ಅವರು ನೀಡಿದ ಸಾಂತ್ವನ ಆಶ್ವಾಸನೆ, ಸಹಾಯ ಇವೆಲ್ಲವೂ ಇಂದಿಗೂ ನನ್ನ ಮನದಾಳದಲ್ಲಿದೆ.

ದಿನಗಳು ಸರಿದು ಹೋದವು. ಗುಲ್ಬರ್ಗಾದಲ್ಲಿ ಆ ದಂಪತಿಗಳ ಒಡನಾಟ, ವೈಯಕ್ತಿಕವಾಗಿ ಒಂದು ರೀತಿ ಹುರುಪನ್ನು ಕೊಟ್ಟಿತು. ಬೆಂಗಳೂರಿಗೆ ಮಾಮಾ, ಮಾಮಿ ಬಂದು Setle ಆದ್ರು ಎಂದು ಸಂತೋಷಪಡುವುದರಲ್ಲೇ ವಿಧಿ-ಮಾಮ ಅವರನ್ನು ಸೆಳೆದೊಯ್ದಿತು. ಕುಸುಮಾಕರ ದೇಸಾಯಿಯವರ ಬಗ್ಗೆ ನನ್ನ ವೈಯಕ್ತಿಕ ಅನುಭವವನ್ನು ಈ ರೀತಿ ದಾಖಲಿಸುವ ಮೂಲಕ ಅವರಿಗೆ ನನ್ನ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಿದ್ದೇನೆ.

ಕೆಚ್ಚೆದೆಯ ಧೀಮಂತ ಚೇತನ

❁ ವೈ.ಕೆ. ಸಂಧ್ಯಾ ಶರ್ಮಾ

ನನ್ನ ಹಾಗೂ ಕುಸುಮಾಕರ ದಂಪತಿಗಳ ಆತ್ಮೀಯ ಪರಿಚಯ-ಸ್ನೇಹ ಕಾಲು ಶತಮಾನಕ್ಕೂ ಹಿಂದಿನದು. ಅದು ೧೯೭೮ ನೇ ಇಸವಿ. ನಾನಾಗ 'ಪ್ರಜಾಪ್ರಭುತ್ವ' ವಾರಪತ್ರಿಕೆಯ ಉಪಸಂಪಾದಕಿಯಾಗಿ ಕೆಲಸ ಮಾಡುತ್ತಿದ್ದೆ. ಸೆರೆಮನೆಯಲ್ಲಿದ್ದ ಮಹಿಳಾ ಖೈದಿಗಳ ಬಗ್ಗೆ ಸಂದರ್ಶನ-ಲೇಖನ-ಹೆಚ್ಚಿನ ಅಧ್ಯಯನಕ್ಕಾಗಿ ನಾನು ನನ್ನ ಪತಿ ನಾಟಕಕಾರ ಎಸ್.ವಿ. ಕೃಷ್ಣಶರ್ಮ ಅವರ ಜೊತೆ ಕರ್ನಾಟಕದಾದ್ಯಂತ ಇದ್ದ ಮುಖ್ಯ ಕಾರಾಗೃಹಗಳ ಭೇಟಿಗೆ ಪ್ರವಾಸ ಹೊರಟಿದ್ದೆ. ಇದಕ್ಕೆ ಅನುವು ಮಾಡಿಕೊಟ್ಟು ನೆರವಾದವರು ಅಂದಿನ ಕಾರಾಗೃಹಗಳ ಐ.ಜಿ.ಪಿ. ಶ್ರೀ ಸಿ.ಎಸ್. ಮಲ್ಲಯ್ಯನವರು. ದಾರಿಯುದ್ದಕ್ಕೂ ಮಲ್ಲಯ್ಯನವರು ತಮ್ಮ ಸೇವಾ ಬದುಕಿನ, ಕಾರಾಗೃಹವಾಸಿಗಳೊಡನಾಟದ ಅನೇಕ ಕುತೂಹಲಕರ ಘಟನೆಗಳನ್ನು ಸ್ವಾರಸ್ಯವಾಗಿ ಬಣ್ಣಿಸುತ್ತಿದ್ದರು. ವಿಪುಲ ಅನುಭವ ಸಂಪತ್ತು, ಅನೇಕ ಗಣ್ಯರ ಪರಿಚಯವಾಯಿತು. ಬೆಂಗಳೂರಿನ ಜೈಲಿನಲ್ಲಿ ೧೯೭೫- ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಲಾಲ್‌ಕೃಷ್ಣ ಅದ್ವಾನಿ, ಮಧು ದಂಡವತೆ, ಎಲ್.ಎನ್. ಮಿಶ್ರ, ರಾಮಕೃಷ್ಣ ಹೆಗಡೆ, ಅಟಲ್ ಬಿಹಾರಿ ವಾಜಪೇಯಿ, ಕುಸುಮಾಕರ ದೇಸಾಯಿ ಮುಂತಾದ ಅನೇಕ ದೇಶಪ್ರೇಮಿ ಗಣ್ಯ ವ್ಯಕ್ತಿಗಳಿದ್ದರು. ನಾವು ಗುಲ್ಬರ್ಗಾಕ್ಕೆ ಬಂದಾಗ ಅವರ ಮೂಲಕ ನನಗೆ ಹಾಗೆ ಪರಿಚಯವಾದವರು ಶ್ರೀ ಕುಸುಮಾಕರ ದಂಪತಿಗಳು; ನಿಜಕ್ಕೂ ಅಪೂರ್ವ ಜೋಡಿ. ಎತ್ತರ-ಗಾತ್ರ-ವರಸಾಮ್ಯ, ಗುಣ-ಸ್ವಭಾವ, ಅಭಿರುಚಿ-ಹವ್ಯಾಸಗಳವರೆಗೂ ಹೇಳಿ ಮಾಡಿಸಿದಂತಿದ್ದರು.

'ಗುಲ್ಬರ್ಗಕ್ಕೆ ಬಂದ್ಮೇಲೆ ಯಾರೂ ಈ ದಂಪತಿಗಳನ್ನು ಭೇಟಿಯಾಗದೇ ಹೋಗಲ್ಲ. ಬನ್ನಿ ನಿಮಗೆ ಬಲು ಅಪರೂಪದ ದಂಪತಿಗಳನ್ನು ಪರಿಚಯ ಮಾಡಿಸ್ತೀನಿ" ಎಂದು ಮಲ್ಲಯ್ಯನವರು ಗುಲ್ಬರ್ಗದ ಉದ್ಯಾನವನದ ಹಿಂಭಾಗದಲ್ಲಿದ್ದ ಒಂದು ದೊಡ್ಡ ಬಂಗಲೆಗೆ ಕರೆದೊಯ್ದರು.

"ಗಂಡ-ಹೆಂಡ್ತಿ ಇಬ್ರೂ ತುಂಬಾ ಇಂಟರೆಸ್ಟಿಂಗ್ ಪರ್ಸನಾಲಿಟೀಸ. ಇಬ್ರೂ ಅಡ್ವೋಕೇಟ್ಸ್, ಲೇಖಕರು, ಸಮಾಜ ಸೇವಕರು, ಮುಖ್ಯವಾಗಿ ಸ್ನೇಹಜೀವಿಗಳು"

-ಎಂದಿದ್ದ ಅವರ ಮಾತು, ಆ ನಗುಮೊಗದ ದಂಪತಿಗಳನ್ನು ನೋಡಿದ ಪ್ರಥಮ ದೃಷ್ಟಿಯಲ್ಲೇ ಅಕ್ಷರಶಃ ನಿಜವೆನಿಸಿತು.

ತೆರೆದ ಬಾಗಿಲಿನಿಂದ ನಮ್ಮನ್ನು ಮೊದಲು ಸ್ವಾಗತಿಸಿದ್ದು, ಮುದ್ದಾದ ಪೊಮೇರಿಯನ್ ನಾಯಿಗಳು. ಹಿಂದೆಯೇ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯವರು, ಕಾಣಿಸಿಕೊಂಡು ಹಾರ್ದಿಕ ನಗೆಯೊಂದಿಗೆ ನಮ್ಮನ್ನು ಒಳಬರಮಾಡಿಕೊಂಡಾಗ, ಎದೆಯೊಳಗೆ ಬದು

ಹೃದಯವಂತ

✿ ಭೀಮರಾವ್ ಸುಭೇದಾರ್

ಶ್ರೀ ಕುಸುಮಾಕರ ದೇಸಾಯಿಯವರ ಸಂಬಂಧಿಕರಲ್ಲೊಬ್ಬರಾದ ಶ್ರೀ ರಘುನಾಥರಾವ್ ಅವರ ಪರಿಚಯದಿಂದ, ಪ್ರಸಿದ್ಧ ಸಾಹಿತಿ ಸರಿತಾ ಕುಸುಮಾಕರ ದೇಸಾಯಿಯವರು ವಿಧಾನ ಪರಿಷತ್ ಸದಸ್ಯರಾಗಿದ್ದ ಪ್ರಯುಕ್ತ, ಅವರ ಆಪ್ತ ಸಹಾಯಕರಾಗಿ ಸೇವೆ ಸಲ್ಲಿಸುವ ಸುಯೋಗವೊಂದು ನನಗೆ ಒದಗಿ ಬಂದಿತ್ತು. ಕುಸುಮಾಕರ ದೇಸಾಯಿಯವರು ಒಬ್ಬ ಹಿರಿಯ ಸ್ವಾತಂತ್ರ್ಯಯೋಧರು. ಸಾಹಿತಿಗಳು ಪ್ರಸಿದ್ಧ ವಕೀಲರು ಹಾಗೂ ಗುಲ್ಬರ್ಗಾ ಜನತೆಯ ನೀರಿನ ದಾಹವನ್ನು ನೀಗಿಸಿ "ಗುಲ್ಬರ್ಗಾ ಭಗೀರಥ" ಎಂದು ಜನಮನದಲ್ಲಿ ನೆಲೆಸಿದ್ದರು. ಇಂಥ ಸಾಹಿತಿ ದಂಪತಿಗಳೊಂದಿಗೆ ಸೇವೆ ಸಲ್ಲಿಸುವ ಸದವಕಾಶವನ್ನು ನಾನು ಕೂಡಲೇ ಒಪ್ಪಿಕೊಂಡೆನು.

ಮೊದಲನೇ ದಿನ ಶ್ರೀ ದೇಸಾಯಿಯವರ ಮನೆ "ಸಂಜೀವಿನಿ" ಕರೆ ಗಂಟೆ ಬಾರಿಸಿದ ತಕ್ಷಣ ಮಿಂಚಿನಂತೆ ಬಂದು ಎರಗಿದ ಎರಡು ಪೊಮೊರಿನ ನಾಯಿಗಳು. ಅದರಲ್ಲಿ ಒಂದು ಜೂಲಿ ಮಾತ್ತೊಂದು ರಾಣಾ ಎಂದು ನಂತರ ಗೊತ್ತಾಯಿತು. ಬೆನ್ನ ಹಿಂದೆಯೇ ನಸು ನಗುತ್ತಲೆ ಹೊರ ಬಂದ ದೇಸಾಯಿಯವರು "ಬರ್ರಿ, ಬರ್ರಿ ಇದು ಬ್ರಾಹ್ಮಣರ ನಾಯಿ ಬರೀ ಬೊಗಳುತ್ತೆ ಕಚ್ಚೋದಿಲ್ಲ" ಎಂದು ಹೇಳುತ್ತ ನಮ್ಮನ್ನೆಲ್ಲಾ ಕರೆದುಕೊಂಡು ಒಳನಡೆದರು.

ಒಳ ಬಂದು ಎಲ್ಲರೂ ಆಸೀನರಾದರು. ನಾನು ಮಾತ್ರ ಹಾಗೇ ನಿಂತಿರುವುದನ್ನು ಕಂಡ ದೇಸಾಯಿಯವರು "ಕೂಡ್ರಿ ಸಾಹೇಬ್ರ, ನೀವು ನಿಂತ್ರ ನನ್ನ ಕಾಲು.... ನೋಯ್ಯಾವ ಮೊದಲು ಕೂಡಿರಿ" ಎಂದರು. ನಂತರದ ದಿನಗಳಲ್ಲಿ ನನ್ನ ಗಮನಕ್ಕೆ ಬಂದಂತೆ ಮನೆಗೆ ಬಂದವರನ್ನು ಕೂಡಿಸಿ ಯೋಗಕ್ಷೇಮ ವಿಚಾರಿಸಿ ಆತಿಥ್ಯ ನೀಡಿ ಕಳಿಸುತ್ತಿದ್ದರು.

ಮಧ್ಯಾಹ್ನ ಊಟದ ಸಮಯ ನನಗೂ ಊಟಕ್ಕೆ ಕರೆದರು. "ಇಲ್ಲ ಸಾರ್, ನಾನು ಊಟ ಮಾಡಿ ಬಂದಿರುವೆ" ಎಂದು ಹೇಳಿದರೂ ಕೇಳಲಿಲ್ಲ. "ಅದೇನೇ ಇರಲಿ ಇವತ್ತು ನೀವು ನಮ್ಮ ಜೊತೆ ಊಟ ಮಾಡಲೇಬೇಕು" ಎಂದು ಹೇಳಿ ಅತಿಥಿಗಳೊಂದಿಗೆ ಕುಳಿತಿದ್ದ ಅವರು ತಮ್ಮ ಪಕ್ಕದಲ್ಲೆ ಕೊಡಿಸಿಕೊಂಡರು. ಮಾತನಾಡುತ್ತ ಒಂದು ಮಾತು ಹೇಳಿದರು. ನಾನು ಯಾರನ್ನೂ ಕೀಳಾಗಿ ಕಾಣುವುದಿಲ್ಲ. ಅವರನ್ನು ನನ್ನ ಎತ್ತರಕ್ಕೆ ನೋಡುತ್ತೇನೆ ಹೊರತು ಅವರ ಎತ್ತರಕ್ಕೆ ಇಳಿಯಲಾರೆ. ತಮ್ಮಲ್ಲಿ ಬರುವ ಎಲ್ಲರನ್ನೂ ಆತ್ಮೀಯವಾಗಿ ಕಾಣುತ್ತಿದ್ದರು. ಹಾಗೂ ಅವರ ಸಂತಸದಲ್ಲಿ ತಾವು ಭಾಗಿಯಾಗಿ ಸಂತಸಪಡುತ್ತಿದ್ದರು. ಮುಂದೆ ಶ್ರೀ ಕುಸುಮಾಕರ ದೇಸಾಯಿಯವರನ್ನು "ಮಾಮಾ" ಎಂತಲೂ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯವರನ್ನು "ಮಾಮಿ" ಎಂದು ಕರೆಯುವ ಆತ್ಮೀಯತೆ ನನ್ನಲ್ಲಿ ಉಂಟಾಯಿತು.

ಕಲ್ಬುರ್ಗಿಗೆ ಬರುತ್ತಿದ್ದ ರಾಜಕಾರಣಿಗಳು ಸಾಹಿತಿಗಳು, ಕಲಾವಿದರು. ಬಹುತೇಕ ಎಲ್ಲರೂ ದೇಸಾಯಿಯವರ ಮನೆಗೆ ಬಂದು, ದೇಸಾಯಿ ದಂಪತಿಗಳನ್ನು ಕಂಡು ಮಾತನಾಡಿಸಿಕೊಂಡು ಹೋಗುತ್ತಿದ್ದರು. "ಸಂಜೀವಿನಿ" ಅವರಿಗೆ ತವರು ಮನೆಯಂತಾಗಿತ್ತು ಎಂದರೆ ಅತಿಶಯೋಕ್ತಿ ಆಗಲಿಕ್ಕಿಲ್ಲ. ದೇಸಾಯಿ ದಂಪತಿಗಳ ಸಂಭಾಷಣೆ ಕೇಳಿ ಮುದ್ದಣ ಮನೋರಮೆಯರ ಸರಸ ಸಲ್ಲಾಪದ ನೆನಪು ಅವರಿಗೆ ಬಾರದೇ ಇರಲಿಕ್ಕಿಲ್ಲ.

ಒಮ್ಮೆ ಬಹಳ ವರ್ಷಗಳ ನಂತರ ಭೆಟ್ಟಿಯಾದ, ದೇಸಾಯಿಯವರ ಬಾಲ್ಯದ ಸಹಪಾಠಿಯೊಬ್ಬರು ಮನೆಗೆ ಬಂದಿದ್ದರು. ಊಟೋಪಚಾರದ ನಂತರ ಮಾತನಾಡುತ್ತ "ತಮಗೆ ಎಷ್ಟು ಮಕ್ಕಳು? ಏನು ಮಾಡುತ್ತಿರುವರು?" ಎಂದು ದೇಸಾಯಿಯವರನ್ನು ಕೇಳಿದರು. "ತಡೀರಿ ನಮ್ಮ ಮಕ್ಕಳನ್ನು ಕರೀತೀನಿ" ಎಂದು 'ಜೂಲಿ', 'ರಾಣಾ' ಎಂದು ಕೂಗಿದರು. ಮಕ್ಕಳು ಬರಲಿಲ್ಲ ಬದಲಾಗಿ ಎರಡು ಪೊಮೊರಿನ ನಾಯಿಗಳು ಬಂದು ದೇಸಾಯಿಯವರ ತೊಡೆಯನ್ನೇರಿ ಕುಳಿತವು. "ನೋಡ್ರಿ ಇವರು ನಮ್ಮ ಮಕ್ಕಳು, ಜೂಲಿ, ರಾಣಾ" ಎಂದರು. ಅವರ ಮಾತಗಳನ್ನು ಕೇಳಿದ ಅತಿಥಿಗಳು ಏನೂ ಮಾತನಾಡಲು ತೋಚದೆ ತಬ್ಬಿಬ್ಬಾದರು ಹಾಗೂ ಯಾಕಾದರೂ ಇವರಿಗೆ ಮಕ್ಕಳ ವಿಷಯ ವಿಚಾರಿಸಿದೆ ಎಂಬಂತಾಗಿತ್ತು ಅವರ ಮುಖ.

ಒಂದು ಕಾಲದಲ್ಲಿ 'ಸಂಜೀವಿನಿ' ಮನೆ ತುಂಬ ಶಾಲಾ, ಕಾಲೇಜುಗಳಿಗೆ ಹೋಗುವ ಹಲವಾರು ಮಕ್ಕಳು ಇರುತ್ತಿದ್ದರು ಎಂದು ಕೇಳಿ ತಿಳಿದಿದ್ದೆ. ಆಶ್ರಯ ಪಡೆದವರೆಲ್ಲರೂ ಒಂದೇ ಜನಾಂಗಕ್ಕೆ ಸೇರಿದವರಾಗಿರಲಿಲ್ಲ. ಅವರೆಲ್ಲ ದೇಸಾಯಿ ದಂಪತಿಗಳನ್ನು ನಂಬಿ ಬಂದವರಾಗಿದ್ದರು, ಅವರಲ್ಲಿ ಈಗ ಅನೇಕರು ವಕೀಲರು, ನ್ಯಾಯಾಧೀಶರು ಆಗಿದ್ದು, ಅನೇಕರು ಸರ್ಕಾರಿ ಉನ್ನತ ಹುದ್ದೆಗಳನ್ನು ಅಲಂಕರಿಸಿರುವರು.

ದೇಸಾಯಿಯವರ ಮಗಳಂತೆ ಬೆಳೆದ ಸುಜಾತಾಳ ವಿದ್ಯಾಭ್ಯಾಸದ ನಂತರ ಅವರ ಗರಡಿಯಲ್ಲೆ ವಕೀಲಿ ವೃತ್ತಿಯಲ್ಲಿ ಬೆಳೆದ ಶ್ರೀ ಕೃಷ್ಣ ಮೂರ್ತಿಯವರಿಗೆ ತಂದೆ ತಾಯಿ ಸ್ಥಾನದಲ್ಲಿ ನಿಂತು ಕನ್ಯಾದಾನ ಮಾಡಿ ತಂದೆ ತಾಯಿಯ ಕರ್ತವ್ಯವನ್ನೂ ನಿಭಾಯಿಸಿದ್ದಾರೆ.

ಅಷ್ಟೇ ಏಕೆ ಅವರ ಮನೆಯಲ್ಲಿಯೇ ಬೆಳೆದ ಶ್ರೀಸುಭಾಷ, ಮುಸ್ಲೀಮ ಯುವತಿಯನ್ನು ಪ್ರೀತಿಸಿದಾಗ ಅವಳೊಂದಿಗೆ ಅಂತರ ಜಾತಿ ವಿವಾಹವನ್ನು ಮುಂದೆ ನಿಂತು ಮಾಡಿದರು. ಹಾಗೂ ಅವರಿಗೆ ಹುಟ್ಟಿದ ಮಗುವಿಗೆ "ಮಾನವ" ಎಂದು ನಾಮಕರಣ ಮಾಡಿದರು.

ದೇಸಾಯಿಯವರ ಹೊಲವನ್ನು ನೋಡುತ್ತಿದ್ದ, ಕಣ್ಣು ಕಳೆದುಕೊಂಡಿದ್ದ ಕಾಶಪ್ಪ ಹಾಗೂ ರಾಮಚಂದ್ರ ಇವರಿಗೆ ಮಾಸಾಶನ ನೀಡುತ್ತಿದ್ದರು. ಪ್ರತಿ ತಿಂಗಳು ಅವರ ಆರೋಗ್ಯ ಕಾಪಾಡಿಕೊಂಡು ಹೋಗಲು ಔಷಧೋಪಚಾರಕ್ಕಾಗಿ ಖರ್ಚಿಗೆ ಹಣ ಕೊಡುತ್ತಿದ್ದರು.

ಒಬ್ಬಿಬ್ಬ ಮಕ್ಕಳ ಪಾಲನೆ ಪೋಷಣೆಯನ್ನೇ ಸರಿಯಾಗಿ ಮಾಡಲಾಗದ ಈ ದಿನಗಳಲ್ಲಿ

ನೂರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ, ಯೋಗ್ಯ ಪ್ರಜೆಗಳನ್ನಾಗಿ ಮಾಡಿ ಮದುವೆ, ಮುಂಜಿವೆ, ಕನ್ಯಾದಾನ ಮಾಡಿ ಸಮಾಜಕ್ಕೆ ದುಡಿದ ಅವರ ನೆನಪು ಅವಿಸ್ಮರಣೀಯ.

ಶ್ರೀ ದೇಸಾಯಿಯವರ ನೆನಪಿನ ಶಕ್ತಿ ಬಹಳ ಅಘಾದವಾದುದ್ದಾಗಿತ್ತು. ಸರಿಯಾಗಿ ಸಂಗ್ರಹಿಸಿ ಇಡಬೇಕಾದ ಕಾಗದ ಪತ್ರಗಳನ್ನು, ರಸೀದಿಗಳನ್ನೂ ಯಾವುದೇ ಒಂದು ಟೇಬಲ್ ಡ್ರಾ ಸಲ್ಲಾಗಲಿ ಅಥವಾ ಅಲಮಾರಾದಲ್ಲೊ ಹಾಕಿ ಬಿಡುತ್ತಿದ್ದರು. ಅದರ ಅವಶ್ಯಕತೆ ಬಿದ್ದಾಗ ಕೂಡಲೇ ಹುಡುಕಿ ತೆಗೆಯುತ್ತಿದ್ದರು. ಯಾರೂ ಅವುಗಳನ್ನು ತಿದ್ದಿ ಇಡಬಾರದು. ತಾವು ಇಟ್ಟಿದ್ದು ಅವರಿಗೆ ನೆನಪಿರುತ್ತಿತ್ತು.

ಪ್ರಸಿದ್ಧ ವಕೀಲರಾಗಿದ್ದ ದೇಸಾಯಿಯವರು ವಕೀಲ ವೃತ್ತಿ ಬಿಟ್ಟು ಎಷ್ಟೋ ದಿನಗಳ ನಂತರವೂ ಎಷ್ಟೋ ಜನರು, ವಕೀಲರು, ಅವರಿಂದ ಪರಿಹಾರ, ಮಾರ್ಗದರ್ಶನ ಕಂಡುಕೊಂಡು ಹೋಗುತ್ತಿದ್ದರು. ಹೀಗೆ ಕಾನೂನಿನ ವಿಷಯ ಚರ್ಚಿಸುವಾಗ "ಇಂತಿಂಥ ಪುಸ್ತಕದಲ್ಲಿ ಇಂಥ ಪುಟ ಇಂತಹ ಪ್ಯಾರಾದಲ್ಲಿ ಇದೆ" ಎಂದು ದೃಢವಾಗಿ ಹೇಳುತ್ತಿದ್ದರು. ಅದು ಅದೇ ತರಹ ಸಿಗುತ್ತಿತ್ತು.

ಒಂದು ಘಟನೆ ನೆನಪಿಗೆ ಬರುತ್ತದೆ. "ಸಂಜೀವಿನಿ" ಮನೆಯ ಕಂಪೌಂಡಿಗೆ ಗ್ರಿಲ್ ಕೊಡಿಸುವ ಕೆಲಸ ಕೈಕೊಂಡಿದ್ದರು. ಹಲವಾರು ನಮೂನೆಯ ಗ್ರಿಲ್ ಮಾಡಿ ತೋರಿಸಿದರು. ಅವರಿಗೆ ಹಿಡಿಸಲಿಲ್ಲ. ಬದಲಾಗಿ ಅದರ ಮನದಲ್ಲಿ ಸುಮಾರು ವರ್ಷಗಳ ಹಿಂದೆ 'ಕಸ್ತೂರಿ'ಯಲ್ಲಿ ಯಾರೋ ಬರೆದು ಪ್ರಕಟವಾದ ಚೈನಾ ದೇಶದ ಸಂಕೇತಗಳ ಬಗ್ಗೆ ಬರೆದ ಲೇಖನಗಳತ್ತ ಅವರ ಗಮನ ಸೆಳೆದಿತ್ತು.

ಒಮ್ಮೆ ನಾನು ಕೆಲಸದ ನಿಮಿತ್ತ ಬೆಂಗಳೂರಿಗೆ ಹೋದಾಗ ನನಗೆ "ಸಂಯುಕ್ತ ಕರ್ನಾಟಕ" ಕಾರ್ಯಾಲಯಕ್ಕೆ ಹೋಗಿ, ಶ್ರೀ ಕಾತೋಟೆಯವರನ್ನು ಕಂಡು ಸಂಕೇತಗಳ ಬಗ್ಗೆ ಪ್ರಕಟವಾದ ಲೇಖನದ ಛಾಯಾ ಪ್ರತಿ ತರಲು ತಿಳಿಸಿದರು. ಹೊರಡುವ ಮುನ್ನ ಆ ಲೇಖನ ಇಂಥ ತಿಂಗಳ ಪ್ರತಿಯಲ್ಲಿ ಲಭ್ಯ ವಿರುವ ಬಗ್ಗೆ ನನಗೆ ಹೇಳಿ ಕಳಿಸಿದರು.

ಅದರಂತೆ ನಾನು 'ಸಂಯುಕ್ತ ಕರ್ನಾಟಕ ಕಾರ್ಯಾಲಯ'ದಲ್ಲಿ ಸಂಬಂಧಿಸಿದವರನ್ನು ಕಂಡು ವಿವರ ತಿಳಿಸಿದೆ. ಗ್ರಂಥಾಲಯಕ್ಕೆ ಸಿಬ್ಬಂದಿಯವರನ್ನು ನನ್ನ ಜೊತೆ ಕಳಿಸಿದರು. ಏನೇ ಆಗಲಿ ಒಂದೆರಡು ತಿಂಗಳ ಹಿಂದು-ಮುಂದಿನ ಪ್ರತಿಗಳನ್ನು ತೆಗೆದರು. ನೋಡಲಾಗಿ ಅವರು ಹೇಳಿದ ಕಸ್ತೂರಿಯ ಪ್ರತಿಯಲ್ಲೇ ಲಭ್ಯವಿದ್ದುದ್ದನ್ನು ಕಂಡು ದೇಸಾಯಿಯವರ ನೆನಪಿನ ಶಕ್ತಿ ತಿಳಿದು ಎಲ್ಲರೂ ಬೆರಗಾದರು.

ಮಹಾತ್ಮಾ ಗಾಂಧಿಯವರ ಪ್ರೇರಣೆಯಿಂದಾಗಿ ಅವರು ಚಿಕ್ಕಂದಿನಿಂದ ಕೊನೆಯ ಉಸಿರಿರುವವರೆಗೂ ಅವರು 'ಖಾದಿ' ಧರಿಸುತ್ತಿದ್ದರು. ಅದರಂತೆ ಅವರು ತತ್ವ, ಸಿದ್ಧಾಂತಗಳಿಗೆ ಕಟ್ಟುಬಿದ್ದವರಾಗಿದ್ದರು. ಅಂತೆಯೇ ಅವರು ರಾಜಕೀಯ ಜೀವನದ

ಕೊನೆಯವರೆಗೂ ಜನತಾದಳದಲ್ಲೆ ಇದ್ದರು. ಸೋಷಲಿಸ್ಟ್ ಪಾರ್ಟಿ ಜನತಾದಳದಲ್ಲಿ ಸೇರ್ಪಡೆಯಾದದ್ದರಿಂದ ಎಂಥದ್ದೇ ಪ್ರಸಂಗ ಬಂದರೂ ಎಂದೂ ಎದೆಗುಂದುತ್ತಿರಲಿಲ್ಲ. ಬದಲಾಗಿ ಬೇರೆಯವರಿಗೂ ಧೈರ್ಯವನ್ನು ನೀಡುತ್ತಿದ್ದರು. ಅವರು ಬೈಪಾಸ್ ಹಾರ್ಟ್ ಸರ್ಜರಿಗೆ ಹೋಗುವ ಸಮಯದಲ್ಲಿ ಅವರ ಜೊತೆಗೆ ಇದ್ದ ಸಂಬಂಧಿಕರು ಅಲ್ಲದೆ ಗುಲಬರ್ಗಾದ 'ಗುಲ್ಲಾ ಚಾವಡಿ' ಜನತೆಗೆ, "ಏನೂ ಹೆದರಬೇಡಿ ನಾನು ಬೈಪಾಸ್ ಆಪರೇಶನ ನಂತರ ಬರುವೆ ಹೊಸ ಹೃದಯದಿಂದ. ನಾನು ಲಗ್ನವಾಗುತ್ತೇನೆ. ಒಂದು ಒಳ್ಳೆಯ ಕನ್ಯಾಮಣಿಯನ್ನು ನೋಡಿ" ಎಂದು ನಗಿಸುತ್ತಾ ನಗುತ್ತಲೆ ಧೈರ್ಯದಿಂದಲೇ ಹೋಗಿ ಬಂದರು. ಅವರ ಕೊನೆಯ ದಿನಗಳಲ್ಲಿ ಕೂಡಾ ಯಾವುದೇ ತೊಂದರೆ ಆದರೂ ತೋರಿಸಿಗೊಡುತ್ತಿರಲಿಲ್ಲ. "ಹೃದಯವಂತರಿಗೆ ಹೃದಯದ ತೊಂದರೆ ಬರುತ್ತದೆ. ವಿನಾ ಹೃದಯ ಹೀನರಿಗಲ್ಲ" ಎಂತಲು ಹೇಳುತ್ತಿದ್ದರು. ನಗು ನಗುತ್ತಲೇ ನಮ್ಮನ್ನೆಲ್ಲ ಅಳಲಿಕ್ಕೆ ಹಚ್ಚಿ ಬಿಟ್ಟರು. ಆದರೆ ಅಳುವುದು ಅವರಿಗೆ ಸೇರುತ್ತಿರಲಿಲ್ಲ. ಆದ್ದರಿಂದ ನಾವು ಅಳು ನುಂಗಿ ನಗುತ್ತ ಇರಬೇಕಲ್ಲವೆ?

ಮಾನವತಾವಾದಿ

❁ ಎಸ್. ನಂಜುಂಡಸ್ವಾಮಿ

೧೯೭೬ನೇ ಇಸವಿಯ ಸೆಪ್ಟೆಂಬರ್ ತಿಂಗಳ ೨ನೇ ತಾರೀಖು ನಾನು ವಾರ್ತಾ ಇಲಾಖೆಯ ಕಚೇರಿಯಲ್ಲಿ ಕೆಲಸಕ್ಕೆ ಸೇರಿಕೊಳ್ಳಲು ಕಲಬುರ್ಗಿಗೆ ಹೋದೆ. ಮಂಡ್ಯ ಜಿಲ್ಲೆಯ ಕೃಷ್ಣರಾಜ ಪೇಟೆ ತಾಲೂಕಿನ ಒಂದು ಹಳ್ಳಿಯಿಂದ ಬಂದವನಾದ ನನಗೆ ೬೦೦-೭೦೦ ಕಿಲೋಮೀಟರ್ ದೂರದ ಕಲಬುರ್ಗಿಯಲ್ಲಿ ಹೇಗೋ ಏನೋ ಎಂಬ ಆತಂಕ ಇತ್ತು. ಆದರೂ ಅಲ್ಲಿಯ ಜನರ ಸ್ನೇಹ, ಸೌಜನ್ಯ, ಸಹಾಯ ಮಾಡುವ ಪ್ರವೃತ್ತಿಯಿಂದ ನನಗೆ ಬಹಳ ಅನುಕೂಲವಾಗಿ ನನ್ನ ಆತಂಕ ದೂರವಾಯಿತು.

ಪಬ್ಲಿಕ್ ಗಾರ್ಡನ್ ಪಕ್ಕದಲ್ಲಿದ್ದ ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗದಲ್ಲಿ, ಪಬ್ಲಿಕ್ ಗಾರ್ಡನ್‌ಗೆ ಹೋಗುವ ರಸ್ತೆಯಲ್ಲಿ "ಸಂಜೀವಿನಿ" ಎಂಬ ಒಂದು ಮನೆ ಇರುವುದು. ಆ ಮನೆಯ ಮುಂದೆ, ಕುಸುಮಾಕರ್ ದೇಸಾಯಿ, ಸರಿತಾ ಕುಸುಮಾಕರ ದೇಸಾಯಿ ವಕೀಲರು ಎಂದು ಬೋರ್ಡ್ ಇರುವುದನ್ನೂ ನಾನು ನೋಡಿದ್ದೆ. ಇದೇ ಸರಿತಾ ಕುಸುಮಾಕರ ದೇಸಾಯಿಯವರ ಮನೆ ಎಂದು ನಾನು ತಿಳಿದುಕೊಂಡೆ.

ನಾನು ಕಚೇರಿಗೆ ಹೋಗುವ ಸಮಯಕ್ಕೆ ಅಂದರೆ ಬೆಳಗ್ಗೆ ೯-೩೦ ಅಥವಾ ೧೦-೦೦ ಘಂಟೆಗೆ ಅವರ ಮನೆಯ ಮುಂದೆ ಹತ್ತಾರು ಜನರು ನಿಂತಿರುತ್ತಿದ್ದರು. ಒಂದೊಂದು ದಿನ ಶ್ರೀಮತಿ ಸರಿತಾ ದೇಸಾಯಿಯವರೇ ಮನೆ ಮುಂದಿನ ವರಾಂಡಕ್ಕೆ ಬಂದು ಅವರ ಜೊತೆಗೆ ಮಾತನಾಡುತ್ತಿದ್ದುದನ್ನು ಸಹ ನೋಡುತ್ತಿದ್ದೆ. ಒಂದೊಂದು ದಿನ ಶ್ರೀಮತಿ ದೇಸಾಯಿಯವರು ಕರಿಕೋಟ್ ಧರಿಸಿ, ಕೈಯ್ಯಲ್ಲಿ ಫೈಲು ಪುಸ್ತಕಗಳನ್ನು, ಹಿಡಿದುಕೊಂಡು ತಮ್ಮ ಮನೆಯ ಮುಂದಿನಿಂದ, ಕೆ.ಇ.ಬಿ. ಆಫೀಸ್ ಹಿಂಭಾಗದ ರಸ್ತೆಯಲ್ಲಿ ಹತ್ತಾರು ಜನಗಳ ಜೊತೆ ನಡೆದುಕೊಂಡು ಕೋರ್ಟ್ ಕಡೆಗೆ ಹೋಗುತ್ತಿದ್ದುದನ್ನೂ ನೋಡುತ್ತಿದ್ದೆ. ಇವರು ಬಹಳ ಪ್ರಸಿದ್ಧ ವಕೀಲರಿರಬೇಕೆಂದುಕೊಳ್ಳುತ್ತಿದ್ದೆ. ಸಂಜೆ ವೇಳೆ ಕೋರ್ಟ್ ಕಡೆಯಿಂದ ಬ್ರಹ್ಮಪುರ, ಶರಣ ಬಸವೇಶ್ವರನ ಗುಡಿ ಕಡೆ ಹೋಗುವಾಗ, ಶ್ರೀಮತಿ ದೇಸಾಯಿಯವರು ಕೋರ್ಟ್ ಆವರಣದಿಂದ ಹೊರಬರುತ್ತಿದ್ದುದನ್ನು, ಅಥವಾ ಅಲ್ಲೇ ನಿಂತು ಲಾಯರುಗಳ ಜೊತೆ ಚರ್ಚೆ ಮಾಡುತ್ತಿದ್ದುದನ್ನು ಗಮನಿಸುತ್ತಿದ್ದೆ. ಆದರೆ ಇಷ್ಟೆಲ್ಲಾ ಆದರೂ ನಾನು ಶ್ರೀ ಕುಸುಮಾಕರ ದೇಸಾಯಿಯವರನ್ನು ನೋಡಿರಲಿಲ್ಲ.

ಆಗ ತುರ್ತು ಪರಿಸ್ಥಿತಿ ಇತ್ತು. ಒಂದು ಬಾರಿ ವಾರ್ತಾ ಇಲಾಖೆಯ ವತಿಯಿಂದ ನಂದಿಕೂರದಲ್ಲಿದ್ದ ಕಲಬುರ್ಗಿ ಸೆಂಟ್ರಲ್ ಜೈಲಿನಲ್ಲಿ, ಖೈದಿಗಳಿಗಾಗಿ ಚಲನಚಿತ್ರ ಪ್ರದರ್ಶನ ಏರ್ಪಾಡಾಗಿತ್ತು. ನಾನೂ ಇಲಾಖೆಯ ಫಿಲ್ಮ್ ಯೂನಿಟ್ ಜೊತೆ ಅಲ್ಲಿಗೆ ಹೋಗಿದ್ದೆ. ಅಲ್ಲಿ ತುರ್ತು ಪರಿಸ್ಥಿತಿಯಲ್ಲಿ ಬಂಧಿತರಾದ ಅನೇಕ ರಾಜಕೀಯ ಬಂಧಿಗಳಿದ್ದರು. ನಮ್ಮ ಊರಿನ ಕಡೆಯ ಒಂದಿಬ್ಬರು ಅಲ್ಲಿ ಭೇಟಿಯಾದರು. ಮಾತನಾಡಿಸಿದೆ. ಅಲ್ಲಿ ಕುಸುಮಾಕರ ದೇಸಾಯಿಯವರೂ ಇದ್ದರೆಂದು ನನಗೆ ತಿಳಿಯಿತು. ೧೯೭೭ರ ಜನವರಿ ತಿಂಗಳಲ್ಲಿ ತುರ್ತು

ಪರಿಸ್ಥಿತಿ ರದ್ದಾಯಿತು. ರಾಜಕೀಯ ಬಂಧಿಗಳ ಬಿಡುಗಡೆ ಆಯಿತು. ಬಹುಶಃ ಜನೆವರಿ ೭೭ರ ಒಂದು ದಿನ ಕಲಬುರ್ಗಿಯ ಸೂಪರ್ ಮಾರ್ಕೆಟ್‌ನಲ್ಲಿ ವಿರೋಧಪಕ್ಷಗಳ ಭಾರೀ ಬಹಿರಂಗ ಸಭೆ ಏರ್ಪಾಡಾಗಿತ್ತು. ಇದರಲ್ಲಿ ಅನೇಕ ಹಿರಿಯ ರಾಜಕೀಯ ಮುಖಂಡರು ಭಾಗವಹಿಸಿದ್ದರು. (ಯಾರು ಯಾರು ಎಂಬುದು ಮರೆತು ಹೋಗಿದೆ) ಈ ಬಹಿರಂಗ ಸಭೆಯಲ್ಲಿ ಶ್ರೀ ಕುಸುಮಾಕರ ದೇಸಾಯಿಯವರು ಪ್ರಾಸ್ತಾವಿಕ ಭಾಷಣ ಮಾಡಿದರು. ಅಂದಿನ ರಾಜಕೀಯ ಪರಿಸ್ಥಿತಿಯನ್ನು ಬಹಳ ಪ್ರಬುದ್ಧ ರೀತಿಯಲ್ಲಿ ಜನಗಳ ಮುಂದೆ ಮಂಡಿಸಿದರು. ಅವರ ಅಸ್ಖಲಿತವಾದ ಕಂಚಿನ ಕಂಠದ ಭಾಷಣ ಕೇಳಿ ನನಗೆ ಅವರ ಬಗ್ಗೆ ಒಂದು ರೀತಿಯ ಗೌರವ ಹಾಗೂ ಅಭಿಮಾನ ಮೂಡಿತು. ಇಲ್ಲೇ ನಾನು ಮೊದಲಬಾರಿಗೆ ಶ್ರೀ ಕುಸುಮಾಕರ ದೇಸಾಯಿಯವರ ಭಾಷಣ ಕೇಳಿದ್ದು. ೧೯೭೭ ರಲ್ಲೇ ಒಂದು ಸಲ ಖಾದ್ರಿ ಶಾಮಣ್ಣನವರು ಕಲಬುರ್ಗಿಗೆ ಬಂದಿದ್ದರು. ಕಲಬುರ್ಗಿಯಲ್ಲಿ ಆಗ ಸಂಯುಕ್ತ ಕರ್ನಾಟಕ ಪತ್ರಿಕೆಯ ವರದಿಗಾರರಾಗಿದ್ದ ಶ್ರೀ ಎಚ್. ಆರ್. ಶ್ರೀಶ ಅವರ ಜೊತೆಗೆ ನಾನು ಖಾದ್ರಿ ಶಾಮಣ್ಣನವರನ್ನು ಭೇಟಿಯಾಗಲು ಹೋಗಿದ್ದೆ. ಅಲ್ಲ ಅವರ ಜೊತೆ ಈ ಕುಸುಮಾಕರ ದೇಸಾಯಿಯವರೂ ಲೋಕಾಭಿರಾಮವಾಗಿ ಮಾತನಾಡುತ್ತಾ ಕುಳಿತಿದ್ದರು. ಖಾದ್ರಿ ಶಾಮಣ್ಣನವರು ಕುಸುಮಾಕರ ದೇಸಾಯಿಯವರ ಮನೆಗೂ ಹೋಗಿದ್ದರು.

ಆ ನಂತರ ಲೋಕಸಭಾ ಚುನಾವಣೆ ನಡೆಯಿತು. ಮಧುದಂಡವತೆ ಮುಂತಾದ ನಾಯಕರು ಚುನಾವಣಾ ಪ್ರಚಾರಕ್ಕೆ ಬಂದಂತೆ ನೆನಪು. ಅವರೆಲ್ಲ ಶ್ರೀ ಕುಸುಮಾಕರ ದೇಸಾಯಿಯವರ ಮನೆಗೆ ಹೋಗಿದ್ದರು.

ಆ ನಂತರ ಕುಸುಮಾಕರ ದೇಸಾಯಿಯವರು ತಮ್ಮ ಪತ್ನಿಯ ಜೊತೆ ಕಲಬುರ್ಗಿಯಲ್ಲಿ ಕೋರ್ಟಿಗೆ ಹೋಗುತ್ತಿದ್ದುದನ್ನು ನಾನು ನೋಡುತ್ತಿದ್ದೆ. ಯಾವುದೇ ರಾಜಕೀಯ ಜಂಜಾಟಗಳಿದ್ದರೂ ಅವರು ತಮ್ಮ ಕರ್ತವ್ಯವನ್ನು ಮರೆಯಲಿಲ್ಲ. ಬಿಡಲಿಲ್ಲ ಎಂಬುದು ಗಮನಾರ್ಹ.

೧೯೮೦ ರಲ್ಲಿ ನನಗೆ ಕಲುಬುರ್ಗಿಯಿಂದ ಬೆಂಗಳೂರಿಗೆ ವರ್ಗವಾಯಿತು. ಆ ಮೇಲೆ ನಾನು ಕರ್ನಾಟಕ ವಿಧಾನಮಂಡಲದಲ್ಲಿ ವರದಿಗಾರನಾಗಿ ಕೆಲಸಕ್ಕೆ ಸೇರಿದೆ. ೧೯೯೩ ರಿಂದ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯವರಾಗಿದ್ದ ಶ್ರೀ ಡಿ. ಬಿ. ಕಲ್ಮಣಕರ ಅವರ ಆಪ್ತಶಾಖೆಯಲ್ಲಿ, ಅವರ ಗೃಹ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದೆ.

ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯವರು ೧೯೯೬ ರಲ್ಲಿ ಶಾಸಕಿಯಾಗಿ ಅಂದರೆ ವಿಧಾನ ಪರಿಷತ್ ಸದಸ್ಯೆಯರಾಗಿ ನಾಮಕರಣಗೊಂಡರು.

ಕುಸುಮಾಕರ ದೇಸಾಯಿ ದಂಪತಿಗಳು ಅಪರೂಪವಾಗಿ ಎಲ್ಲೋ ಒಮ್ಮೊಮ್ಮೆ ಶ್ರೀ ಡಿ. ಬಿ. ಕಲ್ಮಣಕರ ಅವರ ನಿವಾಸಕ್ಕೆ ಬರುತ್ತಿದ್ದರು. ಅಲ್ಲಿ ನಾನು ಅವರನ್ನು ಹತ್ತಿರದಿಂದ ನೋಡಿ ಮಾತನಾಡಿಸುತ್ತಿದ್ದೆ. ಶ್ರೀಮತಿ ದೇಸಾಯಿಯವರು ಶಾಸಕಿಯಾಗಿದ್ದರೂ, ದಂಪತಿಗಳಿಬ್ಬರೂ ಕಲಬುರ್ಗಿಯಲ್ಲೆ ವಾಸಿಸುತ್ತಿದ್ದರು. ವಿಧಾನ ಮಂಡಲದ ಅಧಿವೇಶನ ನಡೆಯುತ್ತಿದ್ದಾಗ, ವಿಧಾನ ಮಂಡಲದ ಸಮಿತಿ ಸಭೆಗಳಿದ್ದಾಗ ಮಾತ್ರ ಶ್ರೀಮತಿ ದೇಸಾಯಿಯವರು ಬೆಂಗಳೂರಿಗೆ

ಬರುತ್ತಿದ್ದರು. ಶಾಸಕರ ಭವನದ ತಮ್ಮ ಕೊಠಡಿಯಲ್ಲಿ ಇಳಿದುಕೊಳ್ಳುತ್ತಿದ್ದರು. ಅವರ ಜೊತೆ ಒಂದೊಂದು ಸಲ ಶ್ರೀ ದೇಸಾಯಿಯವರೂ ಬರುತ್ತಿದ್ದರು.

೧೯೯೬ ರಲ್ಲಿ ಶ್ರೀ ದೇಸಾಯಿಯವರಿಗೆ ಹೈದರಾಬಾದ್‌ನಲ್ಲಿ ಎರಡನೇ ಬಾರಿ ಹೃದಯದ ಬೈಪಾಸ್ ಶಸ್ತ್ರ ಚಿಕಿತ್ಸೆ ಆಯಿತೆಂದೂ, ನನಗೆ ತಿಳಿದುಬಂದಿತು. ಯಾವಾಗಲೂ ಹೆಚ್ಚಿನ ಚಿಕಿತ್ಸೆ. ನಿಗಾ ಅವಶ್ಯಕತೆ ಇದ್ದುದರಿಂದ ೧೯೯೮ ರಿಂದ ದೇಸಾಯಿಯವರು ಬೆಂಗಳೂರಿನಲ್ಲೇ ಇರುತ್ತಿದ್ದರು. ೧೯೯೯ ರಿಂದ ನಾನು ಹೆಚ್ಚಾಗಿ ಅವರ ರೂಮಿಗೆ ಹೋಗುವುದು, ಅವರೊಡನೆ ಮಾತನಾಡುವುದನ್ನು ಪ್ರಾರಂಭಿಸಿದೆ. ಆದರೆ ದೇಸಾಯಿಯವರು ಎರಡು ಬಾರಿ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾದವರಂತೆ ಕಾಣುತ್ತಿರಲಿಲ್ಲ. ಯಾವಾಗಲೂ ಉತ್ಸಾಹದಿಂದ ಆರೋಗ್ಯವಂತ ವ್ಯಕ್ತಿ ಹೇಗಿರುತ್ತಾನೋ ಹಾಗೇ ಇರುತ್ತಿದ್ದರು. ರೂಮಿಗೆ ಬರುತ್ತಿದ್ದ ಅತಿಥಿಗಳು ನೆಂಟರಿಷ್ಟರೊಡನೆ ಸರಸ ಸಂಭಾಷಣೆಗಳಲ್ಲಿ ತೊಡಗಿರುತ್ತಿದ್ದರು. ಆಗಾಗ್ಗೆ ಕಲಬುರ್ಗಿಗೆ ಹೋಗಿ ಬರುತ್ತಿದ್ದರು. ಪುಸ್ತಕಗಳು ಪತ್ರಿಕೆಗಳ ಓದಂತೂ ಯಾವಾಗಲೂ ಇದ್ದದ್ದೇ.

ನಾನು ಅವರ ರೂಮಿಗೆ ಹೋದಾಗಲೆಲ್ಲಾ ದೇಸಾಯಿಯವರು ವೃತ್ತ ಪತ್ರಿಕೆಗಳನ್ನೋ ಅಥವಾ ಪುಸ್ತಕಗಳನ್ನೋ ಓದುತ್ತಾ ಕುಳಿತಿರುತ್ತಿದ್ದರು. ನಾನು ಹೋದಾಗ ಅದನ್ನು ಬದಿಗಿರಿಸಿ ಮಾತನಾಡಲು ಪ್ರಾರಂಭಿಸುವರು. ನನ್ನ ಹಿನ್ನೆಲೆಯೆಲ್ಲವನ್ನೂ ತಿಳಿದುಕೊಂಡರು. ಐದು ವರ್ಷ ನಾನು ಕಲಬುರ್ಗಿಯಲ್ಲಿ ಇದ್ದದ್ದು, ಶ್ರೀ ದೇಸಾಯಿ ಅವರನ್ನು, ಅವರ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದುದು, ಎಲ್ಲವನ್ನೂ ತಿಳಿಸಿದ್ದೆ. ದೇಸಾಯಿಯವರಿಗೆ ನನ್ನ ಮೇಲೆ ವಿಶೇಷ ಮಮತೆ ಉಂಟಾಯಿತೆಂದು ತೋರುತ್ತದೆ. ದಿನ ಕಳೆದಂತೆ ಅವರು ನನ್ನ ಬಳಿ ಮನಬಿಚ್ಚಿ ಮಾತನಾಡತೊಡಗಿದರು. ನಾನೂ ಕೂಡಾ ಆಸಕ್ತಿಯಿಂದ ಮಾತುಕತೆಯಲ್ಲಿ ಭಾಗವಹಿಸುತ್ತಿದ್ದೆ. ನನಗೂ ಅವರಿಗೂ ವಯಸ್ಸಿನ ಅಂತರ ಬಹಳ ಇತ್ತು. ವಿದ್ಯೆ, ಅಂತಸ್ತುಗಳಲ್ಲೂ ಅಗಾಧ ಅಂತರ ಇತ್ತು. ನಾನೋ ಒಬ್ಬ ಸಾಧಾರಣ ಸರ್ಕಾರಿ ನೌಕರ. ಅವರೋ ಒಬ್ಬ ಹಿರಿಯ ಸಮಾಜವಾದಿ, ಸ್ವಾತಂತ್ರ್ಯ ಹೋರಾಟಗಾರ, ಪ್ರಖ್ಯಾತ ನ್ಯಾಯವಾದಿ, ರಾಜಕಾರಣಿ ಕೂಡಾ ಆಗಿದ್ದರು. ಆದರೂ ನನ್ನೊಡನೆ ಬಹಳ ಪ್ರೀತಿಯಿಂದ, ಸಲುಗೆಯಿಂದ ಮಾತನಾಡುತ್ತಿದ್ದರು.

ನಾನು ಹೋದ ತಕ್ಷಣ ಅವರ ಓದನ್ನು ನಿಲ್ಲಿಸಿ, "ಬರ್ರೀ ಸಾಹೇಬ್ರೆ, ಕೂಡ್ರಿ, ಏನು ಸುದ್ದಿ, ಚಹಾ ತೊಗೊತೀರೋ, ಕಾಫಿ ತೋಗೊತೀರೋ, ಊಟ ಮಾಡುತ್ತಿರೋ" ಎನ್ನುವರು. ನನಗೋ ಬಹಳ ಸಂಕೋಚ. ಬರಬರುತ್ತಾ ಇದು ಅವರು ತಮಗೆ ಆತ್ಮೀಯರೆಂದು ಕಂಡು ಬಂದವರನ್ನು ಹಾಗೂ ತಮ್ಮ ಅತಿಥಿಗಳನ್ನು ಸಂಬೋಧಿಸುವ ಶೈಲಿ ಎಂದು ನನಗೆ ತಿಳಿದು ಬಂದಿತು. ನಾನೂ ಕೂಡಾ ಸಾವಕಾಶವಾಗಿ ಅವರೊಡನೆ ಮಾತುಕತೆ ಆಡಲು ಪ್ರಾರಂಭಿಸಿದೆ. ವಿಧಾನ ಮಂಡಲದ ಅಧಿವೇಶನ ನಡೆಯುತ್ತಿದ್ದರೆ ಅದರ ವಿವರಗಳನ್ನು ಕೇಳಿ ತಿಳಿದುಕೊಳ್ಳುವರು.

ಪ್ರಸಕ್ತ ರಾಜಕೀಯ ಪರಿಸ್ಥಿತಿಯ ಬಗ್ಗೆ ವಿಶ್ಲೇಷಣೆ ನಡೆಸುತ್ತಿದ್ದರು. ಅದನ್ನು ನಿಕಟಪೂರ್ವ ಕಾಲದ ರಾಜಕೀಯ ಪರಿಸ್ಥಿತಿ ಬಗ್ಗೆ ತುಲನೆ ಮಾಡುತ್ತಿದ್ದರು. ಈ ಮಾತುಕತೆಯಲ್ಲಿ ನನಗೆ

ಅವರ ರಾಜಕೀಯ ಪರಿಜ್ಞಾನದ ಆಳಅಗಲಗಳ ಅರಿವಾಗುತ್ತಿತ್ತು. ಈ ಬಗ್ಗೆ ಅವರು ನಿಯಮಿತವಾಗಿ ಪತ್ರಿಕೆಗಳಿಗೆ ಲೇಖನಗಳನ್ನು ಬರೆದಿದ್ದರೆ ಆ ಲೇಖನಗಳು ಖಂಡಿತವಾಗಿ ಉತ್ತಮ ರಾಜಕೀಯ ಲೇಖನಗಳಾಗುತ್ತಿದ್ದವು.

ತಾವು ಓದಿರತಕ್ಕ ಅನೇಕ ಇಂಗ್ಲೀಷ್ ಹಾಗೂ ಹಿಂದಿ ಕೃತಿಗಳ ಸ್ವಾರಸ್ಯಗಳನ್ನು ವಿವರಿಸುತ್ತಿದ್ದರು. ಆಗ ನನಗೆ ಅವರ ಸಾಹಿತ್ಯ ಜ್ಞಾನದ ಅರಿವಾಗುತ್ತಿತ್ತು.

ತಮ್ಮ ವೃತ್ತಿ ಜೀವನ, ರಾಜಕೀಯ ಜೀವನದ ಸ್ವಾರಸ್ಯಕರ ಘಟನೆಗಳನ್ನು, ಏಳು ಬೀಳುಗಳನ್ನೂ ಹೇಳುವರು. ಆದರೆ ಎಂದೂ ಅವರು ತಮಗೆ ಉಂಟಾದ ಅನ್ಯಾಯ, ನೋವುಗಳ ಬಗ್ಗೆ ಹೇಳುತ್ತಿರಲಿಲ್ಲ. ಎಂದೂ ಯಾರನ್ನೂ ದೂಷಿಸುತ್ತಿರಲಿಲ್ಲ. ಇದು ಅವರ ವಿಶೇಷ ಗುಣ.

ದೇಸಾಯಿಯವರು ಅಪ್ಪಟ ಸಮಾಜವಾದಿಗಳಾಗಿದ್ದರು. ಶಾಸಕರ ಭವನದ ತಮ್ಮ ರೂಮಿನಲ್ಲಿ ಹಾಗೂ ಮುಂದೆ ಕೋರಮಂಗಲದ ತಮ್ಮ ಮನೆಯಲ್ಲಿ, ಗಾಂಧೀಜಿ, ವಿನೋಬಾ ಭಾವೆ, ಜಯಪ್ರಕಾಶ ನಾರಾಯಣರ ಮತ್ತು ರಾಮಮನೋಹರ ಲೋಹಿಯಾ ಅವರ ಫೋಟೊಗಳನ್ನು ಹಾಕಿಕೊಂಡಿದ್ದರು. ಈ ಫೋಟೋಗಳು ಈಗಲೂ ಹಾಗೇ ಇದ್ದು ದೇಸಾಯಿಯವರ ನೆನಪನ್ನು ತರುತ್ತವೆ. ಅವರು ಸಮಾಜವಾದಿ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿದ್ದರು. ಒಮ್ಮೆ ಮಾತುಕತೆಯಲ್ಲಿ ನಾನು, “ಸರ್, ರಾಜ್ಯದಲ್ಲಿ ಪಿ.ಎಸ್.ಪಿ. ಪಕ್ಷ ಕಾಂಗ್ರೆಸ್‌ನಲ್ಲಿ ವಿಲೀನವಾದಾಗ, ತಾವೂ ಕಾಂಗ್ರೆಸ್ ಸೇರಿದ್ದರೆ ಎಂ.ಎಲ್.ಎ., ಎಂ.ಎಲ್.ಸಿ. ಅಥವಾ ಎಂ. ಪಿ. ಆಗಬಹುದಾಗಿತ್ತಲ್ಲ” ಎಂದೆ. ಆಗ ಅವರು “ಖಂಡಿತಾ ಅದು ಈ ಜನ್ಮದಲ್ಲಿ ಸಾಧ್ಯವಾಗದ್ದು” ಎಂದು ಹೇಳಿದರು. “ಶಾಸಕ ಅಥವಾ ಪಾರ್ಲಿಮೆಂಟ್ ಸದಸ್ಯನಾಗುವುದರಲ್ಲಿ ನನಗೆ ಖಾಯಷ್ ಇಲ್ಲ” ಎನ್ನುವರು. “ನನ್ನ ನೆಲೆಯಲ್ಲಿ ನಾನು ಎಷ್ಟು ಸಾಧ್ಯವೋ ಅಷ್ಟು ಜನಸೇವೆ ಮಾಡಿದ್ದೇನೆ. ನನ್ನ ವಕೀಲಿ ವೃತ್ತಿಯನ್ನು, ನನ್ನ ಪಾಲಿಗೆ ಬಂದ ಜವಾಬ್ದಾರಿಗಳನ್ನು ಪ್ರಾಮಾಣಿಕವಾಗಿ ನೆರವೇರಿಸಿದ್ದೇನೆ. ಅದು ನನಗೆ ತೃಪ್ತಿ ನೀಡಿದೆ. ಜೊತೆಗೆ ಈ ಓದುವ ಹವ್ಯಾಸ ನನಗೆ ತುಂಬಾ ಸಂತೋಷ ನೀಡುವ ವಿಷಯವಾಗಿದೆ” ಎನ್ನುವರು.

ದೇಸಾಯಿಯವರಿಗೆ ಇಂಗ್ಲೀಷ್ ಸಾಹಿತ್ಯದಲ್ಲಿ ಹೆಚ್ಚು ಪರಿಶ್ರಮ ಇತ್ತು. ಅದೇ ರೀತಿ ಹಿಂದೀ ಸಾಹಿತ್ಯದಲ್ಲೂ ಅವರು ಹೆಚ್ಚು ಪರಿಶ್ರಮಗಳಿಸಿದ್ದರೆಂದು ತೋರುತ್ತದೆ. ಕಾರಣ ಅವರು ಪ್ರಖ್ಯಾತ ಹಿಂದೀ ಕಾದಂಬರಿಕಾರ, ಬುದ್ಧಿಜೀವಿ, ರಾಜಕಾರಣಿ ಭಗವತೀ ಚರಣ್ ವರ್ಮಾರವರ “ಧುಪ್ಪಲ್” ಹೆಸರಿನ ಕಾದಂಬರಿಯನ್ನು ಬಹಳವಾಗಿ ಮೆಚ್ಚಿಕೊಂಡಿದ್ದರು. ಆ ಕಾದಂಬರಿಯ ಕಥಾವಸ್ತುವನ್ನು ಪೂರ್ಣವಾಗಿ ಹೇಳಿದರು. “ಅದರ ನವೀನ ವಸ್ತು, ತಂತ್ರದ ಬಗ್ಗೆ ವಿಸ್ತಾರವಾಗಿ ಚರ್ಚಿಸಿದರು. ಈ ಕಾದಂಬರಿ ತಕ್ಕಮಟ್ಟಿಗೆ ನನ್ನ ಜೀವನದ ದೃಷ್ಟಿಕೋನಗಳಿಗೆ ಅನ್ವಯವಾಗುತ್ತದೆ. ಸಮಕಾಲೀನ ರಾಜಕೀಯ ವಸ್ತುವನ್ನುಳ್ಳ ಈ ಕಾದಂಬರಿಯನ್ನು ನಾನು ಕನ್ನಡಕ್ಕೆ ಅನುವಾದಿಸಬೇಕೆಂದಿದ್ದೇನೆ, ಹೇಗೆ” ಎಂದು ಕೇಳಿದರು. ನಾನೂ ಕೂಡಾ “ಈ ಕಾದಂಬರಿಯ ವಸ್ತು ವಿನೂತನವಾಗಿದೆ. ಸಮಕಾಲೀನ ಉತ್ತರ ಭಾರತದ ರಾಜಕೀಯವನ್ನು ವಿಡಂಬನಾತ್ಮಕವಾಗಿ ಬಿಂಬಿಸುತ್ತದೆ. ಇಂತಹ ಕಾದಂಬರಿ

ಕನ್ನಡದಲ್ಲಿ ಇಲ್ಲವೆಂದು ನನ್ನ ತಿಳುವಳಿಕೆ. ಆದ ಕಾರಣ ನೀವು ಇದನ್ನು ಕನ್ನಡಕ್ಕೆ ಅನುವಾದಿಸಬಹುದು" ಎಂದು ಹೇಳಿದೆ. ಆಗ ದೇಸಾಯಿಯವರು "ನನಗೆ ಕನ್ನಡ ಭಾಷೆ, ಸಾಹಿತ್ಯದ ವಿಚಾರದಲ್ಲಿ ಅಷ್ಟು ಪರಿಶ್ರಮ ಇಲ್ಲ. ಆದ ಕಾರಣ ನನ್ನ ಅನುವಾದವನ್ನು ಓದಿ ಪರಿಷ್ಕರಿಸಿಕೊಡಬೇಕು" ಎಂದರು. ನಾನು "ಆಗಲಿ, ನನಗೆ ತಿಳಿದಮಟ್ಟಿಗೆ ಈ ಕೆಲಸ ಮಾಡಿಕೊಡುತ್ತೇನೆ" ಎಂದು ಒಪ್ಪಿಕೊಂಡೆ.

ಅವರು ಈ ಕಾದಂಬರಿಯನ್ನು ಅನುವಾದ ಮಾಡಿ ಮುಗಿಸಲಿ ಎಂಬುದೇ ನನ್ನ ಆಸೆಯಾಗಿತ್ತು. ಅದಕ್ಕಾಗಿ ಏನೇನೋ ಹೇಳಿ ಅವರಲ್ಲಿ ಹುಮ್ಮಸ್ಸು ಮೂಡಿಸುತ್ತಿದ್ದೆ. ಅವರೂ ಕೂಡಾ "ನೀನು ಬಹಳ ಉತ್ತೇಜನ ಕೊಡುತ್ತಿದ್ದೀಯಾ, ನಾನು ಬೇಗ ಅನುವಾದ ಮಾಡಿ ಮುಗಿಸುತ್ತೇನೆ" ಎಂದು ಹೇಳಿದರು.

ಅದೇ ರೀತಿ ಅವರು ಈ ಕಾದಂಬರಿಯ ಅನುವಾದ ಕಾರ್ಯವನ್ನು ನಾಲ್ಕೈದು ತಿಂಗಳಲ್ಲಿ ಮುಗಿಸಿದರು. ಅದನ್ನು ಓದಿ ವಾಕ್ಯರಚನೆಗಳನ್ನು ಸರಿಪಡಿಸುವಂತೆ ನನಗೆ ಕೊಟ್ಟರು. ಆದರೆ ನಾನು ಅದನ್ನು ಮಾಡಲು ೭-೮ ತಿಂಗಳುಗಳ ಕಾಲ ತೆಗೆದುಕೊಂಡೆ.

ಆ ಹಸ್ತಪ್ರತಿ ನನ್ನ ಬಳಿ ಹಾಗೆಯೇ ಉಳಿಯಿತು. ಖಂಡಿತಾ ನಾನು ತಪ್ಪು ಮಾಡಿದೆ ಎಂದು ಈಗ ಅನ್ನಿಸುತ್ತಿದೆ. ಈ ವಿಚಾರದಲ್ಲಿ ಪ್ರಕಟಿಸಲು ನಾನು ಆಗಲೇ ದೇಸಾಯಿಯವರ ಮೇಲೆ ಒತ್ತಡ ಹಾಕಬೇಕಾಗಿತ್ತು ಎಂದು ಅನ್ನಿಸುತ್ತಿದೆ. ಈ ರೀತಿ ಮಾಡಿದ್ದರೆ ಈ ಅನುವಾದ ಕೃತಿ ಆಗಲೇ ಪ್ರಕಟವಾಗುತ್ತಿತ್ತೋ ಏನೋ? ಆದರೆ ನಾನು ಈ ಬಗ್ಗೆ ಕೇಳೋಣ ಎಂದು ಹೋದಾಗಲೆಲ್ಲಾ ಅವರು ಅನ್ಯಮನಸ್ಕರಾಗಿರುತ್ತಿದ್ದರು. ಬೇರೆ ವಿಚಾರಗಳ ಬಗ್ಗೆ ಚರ್ಚೆ ಮಾಡುತ್ತಿದ್ದರು. ಒಮ್ಮೊಮ್ಮೆ ಅನಾರೋಗ್ಯದಿಂದ ಇರುತ್ತಿದ್ದರು. ಇಂತಹ ಸ್ಥಿತಿಯಲ್ಲಿ ನಾನು ಈ ಬಗ್ಗೆ ಕೇಳುವುದು ಒತ್ತಡ ಹಾಕುವುದು ಸರಿಯಲ್ಲ ಎಂದುಕೊಂಡು ವಾಪಸ್ ಬರುತ್ತಿದ್ದೆ. ಒಟ್ಟಿನಲ್ಲಿ ದೇಸಾಯಿಯವರು ಇದ್ದಾಗ ಅದು ಹೊರಬರಲಿಲ್ಲ. ಈಗ ಅದಕ್ಕೆ ಕಾಲ ಕೂಡಿ ಬಂದಿರುವ ಹಾಗೆ ಕಾಣುತ್ತಿದೆ. ಅದು ಸಧ್ಯದಲ್ಲಿಯೇ ಹೊರ ಬರಬಹುದೆಂಬ ಆಶಾಭಾವನೆ ಮೂಡುತ್ತಿದೆ. ದೇಸಾಯಿಯವರ ಭೌತಿಕ ದೇಹ ಈ ದಿನ ಇಲ್ಲದಿದ್ದರೂ, ಅವರು ಅನುವಾದಿಸಿರುವ ಈ ಕಾದಂಬರಿಯಿಂದ ಅವರ ಕೀರ್ತಿ ನಿಲ್ಲುತ್ತದೆ ಎಂದು ನಾನು ಭಾವಿಸುತ್ತೇನೆ.

ದೇಸಾಯಿಯವರಿಗೆ ಆಧ್ಯಾತ್ಮದ ಬಗ್ಗೆ ಒಲವಿತ್ತು. ಮಾಧ್ವ, ಸ್ಮಾರ್ತ, ವೈಷ್ಣವ, ಶೈವ, ವೀರಶೈವ ಈ ರೀತಿಯ ತತ್ವನಿಷ್ಠ ಅಥವಾ ತರ್ಕವಿತರ್ಕಗಳ ಬಗ್ಗೆ ಅವರಿಗೆ ಆಸಕ್ತಿ ಇರಲಿಲ್ಲ. ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವಂತಹ ಶುದ್ಧ ಆಧ್ಯಾತ್ಮ ಪರಿಕಲ್ಪನೆಯ ಬಗ್ಗೆ ಅವರಿಗೆ ಒಲವಿತ್ತು. ಆಸಕ್ತಿ ಇತ್ತು ಎಂದು ನನ್ನ ಭಾವನೆ. ದೇಸಾಯಿಯವರಿಗೆ ಭಗವದ್ಗೀತೆಯನ್ನು ಅಭ್ಯಾಸ ಮಾಡಬೇಕೆಂಬ ಆಸಕ್ತಿ ಉಂಟಾಯಿತು.

"ಭಗವದ್ಗೀತೆಯನ್ನು ನಮ್ಮ ದೈನಂದಿನ ಜೀವನಕ್ಕೆ ಹೊಂದಿಸಿಕೊಳ್ಳುವಂತಹ ರೀತಿಯಲ್ಲಿ ವಿಚಾರ ಮಂಡನೆ ಮಾಡಿರತಕ್ಕ, ಆಧ್ಯಾತ್ಮದಲ್ಲಿ ಅಂಬೆಗಾಲಿಡುತ್ತಿರುವ ನಮ್ಮಂತಹ ಲೌಕಿಕ ಗೃಹಸ್ಥರಿಗೆ ಅರ್ಥವಾಗುವ ರೀತಿಯಲ್ಲಿ ಜೀವನ ತತ್ವಗಳನ್ನು ನಿರೂಪಿಸಿರತಕ್ಕ ಕೃತಿ ನನಗೆ

ಬೇಕು" ಎಂದರು. ನಾನು; "ಸರ್, ನನಗೆ ತಿಳಿದ ಮಟ್ಟಿಗೆ ಡಿ.ವಿ. ಗುಂಡಪ್ಪನವರ "ಭಗವದ್ಗೀತಾ ತಾತ್ಪರ್ಯ"ಎಂಬ ಕೃತಿ ನಿಮ್ಮ ಆಶಯಕ್ಕೆ ಅನುಗುಣವಾಗಿರಬಹುದೆಂದು ತೋರುತ್ತದೆ. ಅದಕ್ಕೆ ಡಿ.ವಿ.ಜಿ.ಯವರು "ಜೀವನ ಧರ್ಮ ಯೋಗ" ಎಂಬ ಹೆಸರನ್ನೂ ಕೂಡಾ ಇಟ್ಟಿದ್ದಾರೆ", ಎಂದು ತಂದು-ಕೊಟ್ಟೆ. ಮೂರು-ನಾಲ್ಕು ತಿಂಗಳುಗಳ ಕಾಲ ಸತತವಾಗಿ ಅವನ್ನು ಅಭ್ಯಾಸ ಮಾಡಿದರು ಎಂದು ಕಾಣುತ್ತದೆ. ಆ ನಂತರ ಒಂದು ದಿನ ನನಗೆ "ಈ ಗ್ರಂಥ ನನಗೆ ೧೫-೨೦ ವರ್ಷಗಳ ಹಿಂದೆಯೇ ಸಿಕ್ಕಿದ್ದರೆ ನನ್ನ ಜೀವನದ ಶೈಲಿಯೇ ಬದಲಾಗಿ ಹೋಗುತ್ತಿತ್ತು" ಎಂದರು. ಡಿ.ವಿ.ಜಿ. ಅವರ ಈ ಮಹಾನ್ ಕೃತಿಯ ಬಗ್ಗೆ ಈ ರೀತಿಯ ಒಂದು ಅಪೂರ್ವವಾದ ಮೆಚ್ಚುಗೆಯ ನುಡಿಯನ್ನು ದೇಸಾಯಿಯವರಿಂದ ಕೇಳಿ ನನಗೆ ಅಚ್ಚರಿ ಉಂಟಾಯಿತು. ಅಷ್ಟೊಂದು ತನ್ಮಯತೆಯಿಂದ ಅವರು ಅದನ್ನು ಅಭ್ಯಾಸ ಮಾಡಿದ್ದರು. ಹೊಸದಾಗಿ ಏನನ್ನಾದರೂ ಓದುತ್ತಿರಬೇಕು, ತಿಳಿದುಕೊಳ್ಳಬೇಕು ಎಂಬ ಅವರ ಜ್ಞಾನದಾಹ ಯಾವಾಗಲೂ ಅವರಲ್ಲಿ ಇರುತ್ತಿತ್ತು. ಅವರ ಅಧ್ಯಯನಶೀಲತೆ, ವಿಶಾಲವಾದ ದೃಷ್ಟಿ, ಪ್ರಾಂಜಲ ಮನಸ್ಸನ್ನು ನೋಡಿ ನನಗೆ ಹೆಮ್ಮೆ ಎನಿಸುತ್ತಿತ್ತು. ಈ ಗ್ರಂಥದ ಮುಖ್ಯ ಅಂಶಗಳ ಬಗ್ಗೆ ಅವರು ಆಗಾಗ್ಗೆ ನನ್ನ ಜೊತೆ ಚರ್ಚಿಸುತ್ತಿದ್ದರು.

ಒಂದು ಸಲ ದೇಸಾಯಿಯವರು "ನನ್ನ ಗ್ರಹಗತಿ ಸರಿ ಇಲ್ಲವೆಂದು ಕಾಣುತ್ತದೆ, ಏನೋ ಅನಾರೋಗ್ಯ ಕಾಡುತ್ತಿದೆ, ನಾನು ಹೆಚ್ಚು ದಿವಸ ಬದುಕುವದಿಲ್ಲವೆಂದು ತೋರುತ್ತಿದೆ" ಎಂದರು. ಆಗ ನಾನು "ನಿಮಗೇನೂ ಆಗಿಲ್ಲ, ಬಹಳ ಚೆನ್ನಾಗಿದ್ದೀರಿ, ನಿಮ್ಮ ಆರೋಗ್ಯ ಸುಧಾರಿಸಿರುವುದು ನಿಮ್ಮ ಮುಖಭಾವದಿಂದಲೇ ಗೊತ್ತಾಗುತ್ತದೆ" ಎಂದು ಹೇಳಿದೆ.

ಡಿ.ವಿ.ಜಿ.ಯವರ "ಮಂಕುತಿಮ್ಮನ ಕಗ್ಗ" ಮತ್ತು ಜಗನ್ನಾಥ ದಾಸರ "ಹರಿಕಥಾಮೃತಸಾರ", ಅನಂತಕುಲಕರ್ಣಿ ಎಂಬುವವರು ರಾಗವಾಗಿ ಹಾಡಿರುವ "ಹರಿಭಕ್ತಸಾರ" ಕ್ಯಾಸೆಟ್ ಗಳನ್ನು ಕೂಡಾ ತಂದುಕೊಟ್ಟು ಅದನ್ನು ಆಗಾಗ್ಗೆ ಹಾಕಿಕೊಂಡು ಕೇಳುತ್ತಿದ್ದುದನ್ನು ನಾನು ನೋಡಿದ್ದೆ.

ದೇಸಾಯಿಯವರಿಗೆ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದಂಗಳವರಲ್ಲಿ ಅನನ್ಯ ಭಕ್ತಿ ಗೌರವ. ನಾನು ನೋಡಿದಂತೆ ಒಂದು ಬಾರಿ ದೇಸಾಯಿ ದಂಪತಿಗಳು ಪರ್ಯಾಯ ಕಾಲದಲ್ಲಿ ಬೆಂಗಳೂರಿನಿಂದ ಟ್ಯಾಕ್ಸಿ ಮಾಡಿಕೊಂಡು ಉಡುಪಿಗೆ ಹೋಗಿ ಶ್ರೀಪಾದಂಗಳವರನ್ನು ಕಂಡು ಅವರ ಆಶೀರ್ವಾದ ಪಡೆದುಕೊಂಡು ಬಂದರು. ನನ್ನನ್ನೂ ಕೂಡಾ ಜೊತೆಗೆ ಕರೆದರು. ನಾನು ಹೋಗಲು ಆಗಲಿಲ್ಲ. ಅವರ ಜೊತೆಗಿನ ಒಂದು ದೂರ ಪ್ರಯಾಣದ ಅವಕಾಶ ಕಳೆದುಕೊಂಡೆನಲ್ಲ ಎಂದು ನನಗೆ ಈಗಲೂ ವ್ಯಥೆಯಾಗುತ್ತಿದೆ.

ಒಂದು ಸಲ ನಾನು ವಿಜಾಪುರಕ್ಕೆ ಹೋಗಿ ಅಲ್ಲಿಂದ ಪಂಢರಾಪುರಕ್ಕೆ ಹೋಗಿದ್ದೆ. ವಿಠಲನ ದೇವಾಲಯದಲ್ಲಿದ್ದಾಗ ನನಗೆ ಅಲ್ಲಿ ಅನಿರೀಕ್ಷಿತವಾಗಿ ದೇಸಾಯಿ ದಂಪತಿಗಳು ಭೇಟಿಯಾದರು. ನನಗೆ ಬಹಳ ಆಶ್ಚರ್ಯವಾಯಿತು ಹಾಗೂ ಸಂತೋಷವೂ ಆಯಿತು. ದೇಸಾಯಿಯವರು

"ಕನ್ನಡದ ವಿಠಲನನ್ನು ಭೇಟಿಯಾಗಿ ಹೋಗೋಣ ಎಂದು ಬಂದಿದ್ದೆ" ಎಂದರು. ಪಂಢರಾಪುರದ ಪಾಂಡುರಂಗ ವಿಠಲನಲ್ಲಿ ದೇಸಾಯಿ ದಂಪತಿಗಳಿಗೆ ಅನನ್ಯ ಭಕ್ತಿ. ಮಹಾರಾಷ್ಟ್ರ ಸಂತ ಪರಂಪರೆಯ ಸರಳ ಭಕ್ತಿ ಅವರಲ್ಲಿ ಮೈಗೂಡಿತ್ತು.

ಮೇಲ್ಕಂಡ ಘಟನೆಗಳು ದೇಸಾಯಿಯವರಿಗೆ ಇದ್ದ ಆಧ್ಯಾತ್ಮದ ಒಲವಿನ ಕೆಲವು ಉದಾಹರಣೆಗಳು.

ದೇಸಾಯಿ ಅವರಿಗೆ ಖಾದಿ ಎಂದರೆ ಪ್ರಾಣ. "ನಾನು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಅಧ್ಯಕ್ಷನಾಗಿದ್ದಾಗ ಕೈಯಿಂದ ಮಾಡಿದ ಪೇಪರ್‌ನ್ನೇ ಪತ್ರ ವ್ಯವಹಾರಗಳಿಗೆ ಬಳಸುತ್ತಿದ್ದೆ" ಎಂದು ಹೇಳಿದ್ದರು.

ಒಂದು ಸಲ ನಾನು ದೇಸಾಯಿಯವರಿಗೆ ವಿಸಿಟಿಂಗ್ ಕಾರ್ಡ್ ಮಾಡಿಸಿಕೊಂಡು ಬಂದು ಕೊಟ್ಟೆ. ಅವರಲ್ಲಿ ಕುಸುಮಾಕರ ದೇಸಾಯಿ, ಎಲ್.ಎಲ್.ಎಂ., ಸ್ವಾತಂತ್ರ್ಯ ಹೋರಾಟಗಾರರು ಮತ್ತು ವಕೀಲರು ಎಂದು ಮುದ್ರಿಸಿತ್ತು. ತಮ್ಮ ಹೆಸರಿನ ಮುಂದೆ ಇದ್ದ ಎಲ್.ಎಲ್.ಎಂ. ಎಂಬ ಡಿಗ್ರಿಯನ್ನು ತೋರಿಸುತ್ತಾ, "ಈ ಅಕ್ಷರಗಳು ಏನು" ಎಂದರು. ನಾನು "ತಮ್ಮ ಡಿಗ್ರಿಯನ್ನು ಹಾಕಿದೆ" ಎಂದೆ. "ಅದು ಬೇಕಾಗಿರಲಿಲ್ಲ" ಎಂದರು. ಕೊನೆಗೆ ಆ ಕಾರ್ಡನ್ನು ಅವರು ಯಾರಿಗೂ ಕೊಡಲೇ ಇಲ್ಲವೆಂದು ಕಾಣುತ್ತದೆ. ಆದರೆ ಸ್ವಾತಂತ್ರ್ಯ ಹೋರಾಟಗಾರರು, ನ್ಯಾಯವಾದಿಗಳು ಎಂದು ಹಾಕಿದ್ದು ಅವರಿಗೆ ಖುಷಿ ತಂದಿತ್ತು. ಆ ಎರಡರ ಬಗ್ಗೆ ಅವರಿಗೆ ಬಹಳ ಅಭಿಮಾನ ಇತ್ತು. ದಾಸರ ಪದಗಳು, ಸುಗಮ ಸಂಗೀತವನ್ನು ಕೇಳುವ ಹವ್ಯಾಸ ಅವರಿಗಿತ್ತು. ನಾನು ಸೋನಿ ವಾಕ್‌ಮನ್ ತಂದುಕೊಟ್ಟೆ.

ನಾನು "ತಮ್ಮ ವಕೀಲಿ ವೃತ್ತಿಯ ದಿನಗಳ ಬಗ್ಗೆ ಹೇಳಿ" ಎಂದು ಕೇಳುತ್ತಿದ್ದೆ, ಮಾತಿಗೆ ಎಳೆಯುತ್ತಿದ್ದೆ. ಆಗ ತಮ್ಮ ವಕೀಲಿ ವೃತ್ತಿಯ ದಿನಗಳ ಅತ್ಯಂತ ಸ್ವಾರಸ್ಯಕರವಾದ, ಕುತೂಹಲಕರವಾದ ಪ್ರಕರಣಗಳನ್ನು ವಿವರಿಸುತ್ತಿದ್ದರು. ಬಹಳ ಜಟಿಲವಾದ ಕೇಸ್‌ಗಳಲ್ಲಿ ಯಾವ ರೀತಿ ಬುದ್ಧಿವಂತಿಕೆಯಿಂದ ವಾದ ಮಾಡಿದೆ, ಯಾವ ರೀತಿ ಕೇಸ್‌ಗಳನ್ನು ಗೆದ್ದೆ, ಯಾವ ರೀತಿ ನ್ಯಾಯ ದೊರಕಿಸಿಕೊಟ್ಟೆ ಎಂಬುದನ್ನು ಹೇಳುವರು. ಅದನ್ನೆಲ್ಲಾ ಬರೆದಿಟ್ಟಿದ್ದರೆ ಅಥವಾ ರೆಕಾರ್ಡ್ ಮಾಡಿ ಇಟ್ಟಿದ್ದರೆ, ಖಂಡಿತಾ ಅದು ವಕೀಲರಿಗೆ ಉತ್ತಮ ಮಾರ್ಗದರ್ಶನ ಗ್ರಂಥವಾಗುತ್ತಿತ್ತು.

ಅನೇಕ ಬಡ ಕಕ್ಷಿದಾರರಿಗೆ ಯಾವುದೇ ಫೀಸ್ ತೆಗೆದುಕೊಳ್ಳದೆ, ಅಥವಾ ಅವರು ಕೊಟ್ಟಷ್ಟು ತೆಗೆದುಕೊಂಡು ವಕಾಲತ್ ನಡೆಸಿದ್ದನ್ನು ಜ್ಞಾಪಿಸಿಕೊಳ್ಳುವರು. ಈ ವಕೀಲಿ ವೃತ್ತಿ ನನಗೆ ಸಾಕಷ್ಟು ಹಣ, ಹೆಸರು ಹಾಗೂ ಆತ್ಮ ಸಂತೋಷವನ್ನು ತಂದುಕೊಟ್ಟಿದೆ. ಇದು ನನ್ನ ಮೆಚ್ಚಿನ ವೃತ್ತಿ. ಇದರಲ್ಲಿ ವೃತ್ತಿ ಪ್ರಾವೀಣ್ಯತೆ ಹಾಗೂ ಪಾವಿತ್ರ್ಯತೆಯನ್ನು ಉಳಿಸಿಕೊಂಡು ಹೋಗಬೇಕಾದುದು ಅತೀ ಮುಖ್ಯ ಎನ್ನುವರು.

ನಾನು ೧೯೯೮ ರಲ್ಲಿ ಹೈದರಾಬಾದ ವಿಮೋಚನೆಯ ಹೋರಾಟದ ಸುವರ್ಣ ಮಹೋತ್ಸವದ ಅಂಗವಾಗಿ 'ಕೇಸರ್ ಜವಳಗಾ' ಶಿಬಿರಾಧಿಪತಿಗಳಾಗಿದ್ದ ವಿಧಾನ ಪರಿಷತ್ ಸಭಾಪತಿ ಶ್ರೀ ಡಿ.ಬಿ. ಕಲ್ಮಣಕರ್, ಗುರುವರ್ಯರಾದ ಪ್ರೊಫೆಸರ್ ದೇವುಳಗಾಂವಕರ್, ಶರಣಗೌಡ ಇನಾಮ್‌ದಾರ ಮತ್ತು ಶ್ರೀ ಭೀಮಣ್ಣ ಖಂಡ್ರೆ ಇವರನ್ನು ದೂರದರ್ಶನ ಕಾರ್ಯಕ್ರಮಕ್ಕಾಗಿ ಸಂದರ್ಶನ ಮಾಡಿದ್ದೆ. ಆಗ ಶ್ರೀ ಡಿ.ಬಿ. ಕಲ್ಮಣಕರ್ ಅವರು ಶ್ರೀ ದೇಸಾಯಿಯವರು ಹೈದಾರಾಬಾದ್‌ನ ತಮ್ಮ ವಿದ್ಯಾರ್ಥಿ ಜೀವನವನ್ನು ಜ್ಞಾಪಿಸಿಕೊಂಡು ವಿವರವಾಗಿ ಹೇಳುತ್ತಿದ್ದರು. ಸ್ವಾಮಿ ರಾಮಾನಂದ ತೀರ್ಥ, ಶ್ರೀ ಜಿ.ಎಸ್. ಮೇಲ್ಕೋಟೆ, ಶ್ರೀ ಜನಾರ್ದನರಾವ್ ದೇಸಾಯಿ ಇವರ ನೇತೃತ್ವದಲ್ಲಿ ವಿದ್ಯಾರ್ಥಿಗಳು ಹೈದರಾಬಾದ್ ವಿಮೋಚನಾ ಹೋರಾಟಕ್ಕೆ ಧುಮುಕಿದ್ದನ್ನು, ಈ ರೀತಿ ಪ್ರಾರಂಭವಾದ ವಿದ್ಯಾರ್ಥಿ ಚಳವಳಿಯ ಮೊದಲನೇ ತಂಡದಲ್ಲಿಯೇ ತಾವು ಹಾಗೂ ಶ್ರೀ ಡಿ.ಬಿ. ಕಲ್ಮಣಕರ್ ಅವರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಬಂಧಿತರಾಗಿ, ಚಂಚಲಗೂಡು ಸೆಂಟ್ರಲ್ ಜೈಲ್‌ನಲ್ಲಿ ಎರಡು ತಿಂಗಳು ಸೆರೆವಾಸ ಅನುಭವಿಸಿದ್ದನ್ನು ಹೇಳಿದರು.

ದೇಸಾಯಿಯವರು ಪ್ರಖ್ಯಾತ ಲಾಯರ್. ಅವರು ಆಗಾಗ್ಗೆ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡುತ್ತಿದ್ದರು. "೬೦ ವರ್ಷ ತುಂಬಿದ ಹಿರಿಯ ನಾಗರಿಕರಿಗೆ ಸಂಬಂಧಿಸಿದ ಪ್ರಕರಣಗಳನ್ನು ಆದ್ಯತೆಯ ಮೇಲೆ ಬೇಗ ಮುಗಿಸಿ ನ್ಯಾಯದಾನ ಮಾಡಬೇಕೆಂಬ ಕಾನೂನು ಇದೆ. ಆದರೆ ಈ ಕೆಲಸ ಸಮರ್ಪಕವಾಗಿ ಆಗುತ್ತಿಲ್ಲ. ಈ ಬಗ್ಗೆ ಪತ್ರಕರ್ತರಾಗಲೀ ಸಾಮಾಜಿಕ ಕಾರ್ಯಕರ್ತರಾಗಲೀ, ಸಂಸ್ಥೆಗಳಾಗಲೀ ವಿವರಗಳನ್ನು ಸಂಗ್ರಹಿಸಿ ಲೇಖನಗಳನ್ನು ಪ್ರಕಟಿಸಬೇಕೆಂದು" ಹೇಳುತ್ತಿದ್ದರು. "ನಿಯಮಗಳ ಪ್ರಕಾರ ನಾನು ಈ ಕೆಲಸ ಮಾಡುವ ಹಾಗಿಲ್ಲ. ಅದಕ್ಕೆ ನನಗೆ ಶಕ್ತಿಯೂ ಇಲ್ಲ. ಸಂಬಂಧಪಟ್ಟವರು ಈ ಬಗ್ಗೆ ಗಮನಹರಿಸಬೇಕು" ಎಂದು ಹೇಳುತ್ತಿದ್ದರು.

"ಲಾಯರ್ ಅಥವಾ ಡಾಕ್ಟರ್ ಬಳಿ ಹೋಗಬೇಕಾದರೆ ಫಸ್ಟ್ ಕ್ಲಾಸ್ ಇದ್ದವರ ಬಳಿ, ಅಂದರೆ ಬಹಳ ಬುದ್ಧಿವಂತರಾದವರ ಬಳಿ ಹೋಗಬೇಕು. ಇಲ್ಲದಿದ್ದರೆ ಜೀವಿನವಿಡೀ ಕೊರಗಬೇಕಾಗುತ್ತದೆ" ಎನ್ನುವರು. ಅಂದರೆ ಸಾಮಾಜಿಕ ಸ್ವಾಸ್ಥದ ದೃಷ್ಟಿಯಿಂದ ವೈದ್ಯರು, ಲಾಯರುಗಳಲ್ಲಿ ವೃತ್ತಿ ಪ್ರಾವೀಣ್ಯತೆ, ಪ್ರಾಮಾಣಿಕತೆ, ಮಾನವೀಯತೆ ಇರಬೇಕೆಂದು ಹೇಳುತ್ತಿದ್ದರು. ಇಂಥವರೇ ಫಸ್ಟ್‌ಕ್ಲಾಸ್ ಎಂದು ಅರ್ಥೈಸುತ್ತಿದ್ದರು.

ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯರು ೧೧-೫-೨೦೦೧ ರಂದು ವಿಧಾನ ಪರಿಷತ್ ಸದಸ್ಯತ್ವದಿಂದ ನಿವೃತ್ತರಾದರು. ದೇಸಾಯಿಯವರು ತಕ್ಷಣ ಶಾಸಕರ ಭವನದ ರೂಮನ್ನು ಖಾಲಿ ಮಾಡಿಕೊಂಡು ಹೋಗಬೇಕೆಂದು ಒತ್ತಾಯಿಸುತ್ತಿದ್ದರು. ಕೇವಲ ೧೫-೨೦ ದಿನಗಳಲ್ಲಿ ಅವರು ರೂಮನ್ನು ಖಾಲಿ ಮಾಡಿಕೊಂಡು ಕೋರಮಂಗಲಕ್ಕೆ ಹೋದರು. ತಾವು

ನಿವೃತ್ತರಾಗುವುದಕ್ಕೆ ಕೆಲವು ದಿನಗಳ ಮುನ್ನ ಶ್ರೀಮತಿ ದೇಸಾಯಿಯವರು, ಸಚಿವರು, ಶಾಸಕರು, ಅಧಿಕಾರವರ್ಗದವರು, ಮಿತ್ರರಿಗೆ ಒಂದು ಲಘು ಉಪಹಾರ ಕೂಟವನ್ನು ತಮ್ಮ ಸ್ವಂತ ಖರ್ಚಿನಿಂದ ಏರ್ಪಡಿಸಿದ್ದರು. ಇದಕ್ಕೆ ದೇಸಾಯಿಯವರ ಒತ್ತಾಸೆಯೇ ಕಾರಣವಾಗಿತ್ತು. ಅವತ್ತು ಅಲ್ಲಿ ನೆರೆದಿದ್ದವರನ್ನು ನೋಡಿದರೆ ದೇಸಾಯಿಯವರ ಮಿತ್ರ ವಲಯದ ವ್ಯಾಪ್ತಿಯ ಅರಿವಾಗುತ್ತಿತ್ತು. ದೇಸಾಯಿ ದಂಪತಿಗಳೇ ಖುದ್ದಾಗಿ ನಿಂತು ಎಲ್ಲರನ್ನೂ ಸ್ವಾಗತಿಸುತ್ತಿದ್ದರು.

ದೇಸಾಯಿಯವರು ಕೊನೆಗಾಲದಲ್ಲಿ ತಮ್ಮ ತಂದೆಯವರ ಉಯಿಲಿಗೆ ಸಂಬಂಧಿಸಿದಂತೆ ಯಾವುದೋ ಕೋರ್ಟ್ ವ್ಯವಹಾರದಲ್ಲಿ ಸಿಲುಕಿಕೊಂಡಿದ್ದರು. ಈ ವಿಚಾರದಲ್ಲಿ ಅವರು ಹೇಳುತ್ತಿದ್ದುದನ್ನು ಕೇಳಿದರೆ ಆಸ್ತಿ ಹೊಡೆಯಬೇಕೆಂಬ ಉದ್ದೇಶ ಅವರಿಗೆ ಎಳ್ಳಷ್ಟೂ ಇರಲಿಲ್ಲ. ತಂದೆಯವರ ಉಯಿಲು ಕಾನೂನಿನ ಪ್ರಕಾರ (ಕಾಯ್ದೆಸೀರ್) ಊರ್ಜಿತವಾಗಬೇಕೆಂಬುದೇ ಅವರ ಆಶಯವಾಗಿತ್ತು. ಪ್ರಖ್ಯಾತ ವಕೀಲರಾದ ಅವರೇ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬೇರೊಬ್ಬ ವಕೀಲರನ್ನು ಇಟ್ಟುಕೊಂಡಿದ್ದರು. ಅನೇಕ ಕಾನೂನಿನ ಪುಸ್ತಕಗಳನ್ನು ತಂದು, ಅವುಗಳನ್ನೆಲ್ಲಾ ಓದಿ, ಮುಖ್ಯಾಂಶಗಳನ್ನು ಗುರುತುಹಾಕಿಕೊಳ್ಳುತ್ತಿದ್ದರು.

ಈ ಬಗ್ಗೆ ವಾದಮಂಡನೆಗೆ ಅನುಕೂಲವಾಗುವ ರೀತಿಯಲ್ಲಿ ಕಾನೂನು ಅಂಶಗಳನ್ನು, ವಾದ ವಿವಾದಗಳ ಮುಖ್ಯಾಂಶಗಳನ್ನು ಅವರು ಹೇಳಿದಂತೆ ಶೀಘ್ರಲಿಪಿಯಲ್ಲಿ ಬರೆದುಕೊಂಡು ಬೆರಳಚ್ಚು ಮಾಡಿಕೊಡಲು ಒಬ್ಬರು ಇಂಗ್ಲಿಷ್ ಶೀಘ್ರಲಿಪಿಗಾರರ ಅಗತ್ಯ ಇದೆ. ಕರೆದುಕೊಂಡು ಬರುತ್ತಿಯಾ ಎಂದರು. ನಾನು ನನಗೆ ಗುರುತಿದ್ದ ಒಬ್ಬರು ಶೀಘ್ರಲಿಪಿಗಾರರನ್ನು ಕರೆದುಕೊಂಡು ಬಂದೆ. ಆಗ ದೇಸಾಯಿಯವರು ಅಡೆತಡೆಯಿಲ್ಲದೆ ಇಂಗ್ಲೀಷ್‌ನಲ್ಲಿ ಡಿಕ್ಟೇಶನ್ ನೀಡಿದರು. ಅವರ ಇಂಗ್ಲಿಷ್ ಪರಿಜ್ಞಾನ ಉನ್ನತ ಮಟ್ಟದ್ದಾಗಿತ್ತು. ಈ ಕೆಲಸಕ್ಕಾಗಿ ಅವರು ಆ ಶೀಘ್ರಲಿಪಿಗಾರರಿಗೆ ಸಾಕಷ್ಟು ಸಂಭಾವನೆಯನ್ನು ನೀಡಿದರು. ಉದ್ರಿ ಕೆಲಸ ಮಾಡಿಸಿಕೊಳ್ಳುವುದು ಅವರ ಜಾಯಮಾನದಲ್ಲೇ ಇರಲಿಲ್ಲ.

ದೇಸಾಯಿ ದಂಪತಿಗಳು ತಮಗೆ ಒಬ್ಬರು ಅಡಿಗೆ ಮಾಡುವವರನ್ನು ಗೊತ್ತು ಮಾಡಿಕೊಡಬೇಕೆಂದರು. ನಾನು ಒಬ್ಬರು ಮಹಿಳಾ ಅಡಿಗೆಯವರನ್ನು ಗೊತ್ತು ಪಡಿಸಿಕೊಟ್ಟೆ. ಆಕೆಗೆ ದೇಸಾಯಿ ದಂಪತಿಗಳು, ಮಾಸಿಕವೇತನ, ಮಾಸಿಕ ಬಸ್‌ಪಾಸ್, ಊಟ, ತಿಂಡಿ, ಹಬ್ಬ ಹರಿದಿನ ಬಂದರೆ ಬಟ್ಟೆ ಬರೆ ಎಲ್ಲವನ್ನೂ ನೀಡುತ್ತಿದ್ದರು.

ದೇಸಾಯಿಯವರು, "ನಮ್ಮ ಮನೆಯಲ್ಲಿ ಕೆಲಸ ಮಾಡುವವರು, ನಮ್ಮ ಕೆಲಸದವರಲ್ಲ. ನಮ್ಮ ಸರಿಸಮಾನರು. ಅವರವರ ವಿದ್ಯೆ ಬುದ್ಧಿಶಕ್ತಿಗೆ ಅನುಸಾರವಾಗಿ ಪ್ರಾಮಾಣಿಕವಾಗಿ ದುಡಿದು ಬದುಕಬೇಕು. ಕೆಲಸ ಕೊಟ್ಟಿರುವವರೂ ಅವರನ್ನು ಚೆನ್ನಾಗಿ ನಡೆಸಿಕೊಳ್ಳಬೇಕು. ದುಡಿಮೆಗೆ ತಕ್ಕ ಪ್ರತಿಫಲ ನೀಡಬೇಕು. ಇದೇ ಸಮಾಜವಾದ" ಎನ್ನುತ್ತಿದ್ದರು.

ಹೀಗೆ ದೇಸಾಯಿಯವರು ಜೀವನದಲ್ಲಿ ಮಾದರಿಯಾಗಿ ನಡೆದುಕೊಳ್ಳುತ್ತಿದ್ದರು. ನನಗೂ

ಅವರಿಗೂ ಕಡೆಯ ಎರಡು ವರ್ಷಗಳಲ್ಲಿ ಒಡನಾಟ ಇತ್ತು. ಅವರು ನನ್ನನ್ನು ಕಿರಿಯನೆಂದು ಭಾವಿಸದೆ ಲೋಕಾಭಿರಾಮವಾಗಿ ನಡೆದುಕೊಳ್ಳುತ್ತಿದ್ದರು. ಮಾತನಾಡುತ್ತಿದ್ದರು.

ಈ ಎರಡು ವರ್ಷಗಳಲ್ಲಿ ಅವರ ಒಂದೊಂದು ಗುಣ ವಿಶೇಷಗಳು ಅನೇಕ ಸಂದರ್ಭಗಳಲ್ಲಿ ಹೊರಹೊಮ್ಮಿ ಬರುತ್ತಿದ್ದವು. ಅವರ ಅನುಭವ, ಜ್ಞಾನ ಇದರಿಂದ ನನಗೂ ಅನುಕೂಲವಾಯಿತು. ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ ಎಂಬುದು ನನಗೂ ಅನುಭವಕ್ಕೆ ಬಂದಂತಾಯಿತು.

ತಾವು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷರಾಗಿದ್ದ ದಿನಗಳ ಬಗ್ಗೆ ವಿಚಾರಗಳನ್ನು ಹೇಳುತ್ತಿದ್ದರು. ಅವರ ಚಿಕ್ಕಪ್ಪ ಕನ್ನಡದ ಸುಪ್ರಸಿದ್ಧ ಇತಿಹಾಸತಜ್ಞ ವಿದ್ವಾಂಸ ಶ್ರೀ ಪಿ.ಬಿ. ದೇಸಾಯಿಯವರ ಬಗ್ಗೆ ನಾನೇ ಆಸಕ್ತಿಯಿಂದ ಕೇಳಿ ಅನೇಕ ವಿಚಾರಗಳನ್ನು ತಿಳಿದುಕೊಂಡೆ. ಪಿ.ಬಿ. ದೇಸಾಯಿಯವರು ತಮ್ಮ ಮನೆಯ ಅಟ್ಟದ ಮೇಲೆ (ಮಹಡಿ) ನೂರಾರು ಪುಸ್ತಕಗಳನ್ನು, ಹತ್ತಾರು ಬಗೆಯ, ಬಣ್ಣದ ಪೆನ್ನುಗಳನ್ನು ಹರಡಿಕೊಂಡು, ಗಂಟೆಗಟ್ಟಲೆ, ದಿನಗಟ್ಟಲೆ ಅಧ್ಯಯನದಲ್ಲಿ ತೊಡಗಿರುತ್ತಿದ್ದರಂತೆ. ಆದರೆ ದೇಸಾಯಿ ದಂಪತಿಗಳು ಹೋದಾಗ ಕೆಳಗಿಳಿದು ಬಂದು ಮಾತನಾಡಿಸಿ ಹೋಗಿಬಿಡುತ್ತಿದ್ದರಂತೆ.

ಈ ರೀತಿಯಾಗಿ ನೂರಾರು ಸಂದರ್ಭ ಸನ್ನಿವೇಶಗಳು ಒದಗಿಬಂದಾಗ ಅನೇಕ ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದರು. ಅದೆಲ್ಲವನ್ನೂ ಧ್ವನಿಮುದ್ರಿಸಿಕೊಂಡಿದ್ದರೆ, ಸರಿಯಾಗಿ ಟಿಪ್ಪಣಿ ಮಾಡಿಕೊಂಡಿದ್ದರೆ, ಅದು ಒಂದು ಪ್ರಮುಖ ದಾಖಲೆಯಾಗುತ್ತಿತ್ತು. ಆದರೆ ಆ ಕೆಲಸ ಆಗಲಿಲ್ಲ. ನನಗೆ ಜ್ಞಾಪಕಕ್ಕೆ ಬಂದಷ್ಟನ್ನು ಇಲ್ಲಿ ದಾಖಲಿಸಿದ್ದೇನೆ. ಕೇವಲ ಅವರನ್ನು ಹೊಗಳಬೇಕೆಂದು ನಾನು ಯಾವುದನ್ನೂ ಉತ್ಪ್ರೇಕ್ಷೆ ಮಾಡಿಲ್ಲ. ನಡೆದಿರುವುದನ್ನು ನಡೆದಿರುವ ಹಾಗೆ ಸರಳವಾಗಿ ದಾಖಲಿಸಲು ಯತ್ನಿಸಿದ್ದೇನೆಂದು ಮಾತ್ರ ಹೇಳಬಲ್ಲೆ.

ಮೌನದ ಮಾತು

✿ ಶ್ರೀಮತಿ ಸುಧಾ ದೇಶಪಾಂಡೆ

ಅದು ಗೋಕಾಕ ಚಳವಳಿಯ ಸಂದರ್ಭ. ಆ ಸತ್ಯಾಗ್ರಹದಲ್ಲಿ ನಾನು ಮತ್ತು ಶ್ರೀಮತಿ ಸರಿತಾರವರು ಪಾಲ್ಗೊಂಡಿದ್ದೆವು. ಸಂಜೆ ಸರದಿ ಮುಗಿಸಿಕೊಂಡು ಮನೆಗೆ ಹೋಗುವಾಗ ಸರಿತಾರವರು "ಬರ್ರೀ ನಿಮಗೆ ದೇಸಾಯಿಯವರ ಭೆಟ್ಟಿ ಮಾಡಿಸುತ್ತೇನೆ" ಎಂದರು. ಕುಸುಮಾಕರ ದೇಸಾಯಿಯವರ ಮೊದಲ ಭೆಟ್ಟಿಯಲ್ಲಿಯೆ ಬಿಚ್ಚು-ಮನಸ್ಸಿನ ಮಾತುಕತೆ, ಆತ್ಮೀಯತೆ, ಬಹುಭಾಷಾ ಪಾಂಡಿತ್ಯ ಯಾರೂ ಮೆಚ್ಚುವಂತಹ ಹೃದಯವಂತಿಕೆ.

ಮುಂದೆ ಸ್ವಲ್ಪ ಹೊತ್ತಿನಲ್ಲಿಯೇ ಯಾರೂ ಬೆಚ್ಚಿ ಬೀಳುವಂತಹ ನಾಯಿಮರಿ 'ಶೀಬಾ,' ಎದುರಿಗೆ ಬಂದಿತ್ತು. ಅದನ್ನು ನೋಡಿ ನಾನು ಬೆಚ್ಚಿಬಿದ್ದೆ. "ಓ ಸುಧಾತಾಯಿ ಅದು ದೇಸಾಯಿಯವರ ನಾಯಿ, ಗಾಭರಿ ಆಗಬ್ಯಾಡ್ರಿ." ಅಂದು "ಏ ಶೀಬಾ, ಅವರೂ ನಮ್ಮವರೇ, ಬೊಗಳಬೇಡ. ಎಲ್ಲಿ ಅವರನ್ನು ಕಂಡು, ಒದರಿದ ತಪ್ಪಿಗೆ ಮೂಲ್ಯಾಗನಿಲ್ಲು," ತಕ್ಷಣ ಶೀಬಾ ಅವರ ಆಜ್ಞೆ ಪಾಲಿಸಿತು ಹೋಗಿ ಎರಡು ಕಾಲಿನ ಮೇಲೆ ಮೂಲೆಯಲ್ಲಿ ನಿಂತಿತು. ಮಾತುಕತೆಯಲ್ಲಿ ಹತ್ತು ನಿಮಿಷ ನಾವು ಅದನ್ನು ಮರತೇ ಬಿಟ್ಟಿದ್ದೆವು. ಆಮೇಲೆ ನೋಡಿ ಅಯ್ಯೋ ಅನಿಸಿ ಶೀಬಾ ಮರೆತುಬಿಟ್ಟಿದ್ದೇವೆ. ಬಾ ಎಂದು ಮುದ್ದಾಡಿದಾಗ ಅವರು ಕೊಟ್ಟ ಶಿಸ್ತು ನೋಡಿ ಅಚ್ಚರಿ ಅನಿಸಿತು. ಪೇಪರು, ಹಾಲು ತರುವದು, ಪೋಸ್ಟ ತರುವದು ಇವೆಲ್ಲ ಶೀಬಾನ ಕೆಲಸ. ಇವು ದೇಸಾಯರು ಪ್ರಾಣಿ ಪ್ರೇಮದ ಮೇಲಿಟ್ಟ ಬುದ್ಧಿವಂತಿಕೆಗೆ ಸಾಕ್ಷಿ ಆಗಿದ್ದವು.

ಎಲ್ಲ ಜಾತಿ, ಜನಾಂಗದವರೆಲ್ಲ ಮಾನವರು ಅವರದು ಒಂದೇ ಜಾತಿ ಎಂದು ದೃಢವಾಗಿ ನಂಬಿ ಅದನ್ನು ಸ್ವತಃ ಆಚರಣೆಯಲ್ಲಿ ತಂದವರು. ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಸುಭಾಷ ಎಂಬ ಯುವಕನಿಗೆ ಆತ ಪ್ರೀತಿಸಿದ ಮುಸ್ಲಿಮ್ ಹುಡುಗಿಯ ಜೊತೆಗೆ ವಿವಾಹ ಮಾಡಿಸಿ, ಹುಟ್ಟಿದ ಮಗುವಿಗೆ 'ಮಾನವ' ಎಂಬ ಹೆಸರಿಟ್ಟು ಸಂತಸಪಟ್ಟವರು. "ಪ್ರೀತಿ, ಪ್ರೇಮ, ತ್ಯಾಗದ ಮುಂದೆ ಜಾತಿ ಎಂದಿಗೂ ಗೌಣ" ಎನ್ನುತ್ತಿದ್ದರು.

ಕುಸುಮಾಕರರದು ಸದಾ ತುಂಬಿತುಳುಕುತ್ತಿದ್ದ ಮನೆ. ಅದನ್ನು ಯಾರು ಮನೆ ಅಂದಾರು? ಅದು ಅಮೃತಬಳ್ಳಿ, ಅದಕ್ಕೇ ಅದು 'ಸಂಜೀವಿನಿ.' ನೆಮ್ಮದಿಯ ನೆರಳು. ಎಂಥ ದುಃಖ ನಿರಾಶೆಗಳಿಗೂ ಅದು ಸಾಂತ್ವನ ಪಡಿಸುವ ದೇಗುಲ. ಎಂಥ ಸಾಮಾನ್ಯರೂ ಅವರ ಮನೆಗೆ ಹೋಗಿ ಬಂದರೆ ಸಾಕು. "ದೇಸಾಯರ ಜೋಡಿ ಮಾತಾಡಿಬಂದೆ ನೋಡ್ರಿ. ಮನಸ್ಸು ಹಗುರಾತು", ಅಂತಿದ್ರು. ಇಂಥವರಿಗೆ ಸರಿತಾರಂಥವರೆ ಸರಿಜೋಡಿ ಆಗಬಲ್ಲವರು.

ಇವರದು ಅನ್ಯೋನ್ಯ ದಾಂಪತ್ಯ.

ಯಾರಿಗಾದರೂ ಮುದ್ದಣ ಮನೋರಮೆಯರ ಕಲ್ಪನೆ ಎದುರಿಗೆ ಬಂದಂತೆ. ಪುರಾಣದ ಹಲವು ಪ್ರಸಂಗಗಳು ವಿನೂತನ ಒಡಪುಗಳು, ಅದನ್ನು ಹೇಳಿ, ಕೇಳಿ, ಸಂತೋಷಪಡುತ್ತಿದ್ದ ಪ್ರಸಂಗಗಳು ಹಲವಾರು. ತಮ್ಮ ತಂದೆ ಬರೆದ ಉಯಿಲಿನ ಬಗ್ಗೆ ಸಾಕಷ್ಟು ಸಲ ಹೇಳಿ, “ಮನೆಗೆ ನಡಗಂಬ ಆಗಬಾರದು, ಮನೆಗೆ ಹಿರೇಮಗ ಆಗಬಾರದು” ಅಂತ ಹೇಳಿ ತಮ್ಮ ಮನೆತನದ ಬಗ್ಗೆ ಹೇಳತಿದ್ರು.

ದೇಸಾಯಿಯವರು ಲೋಹಿಯಾವಾದಿಗಳು, ರಾಜಕೀಯ ನೇತಾರರು ರಸಿಕರೂ ಆಗಿದ್ದರು. ಗುಲ್ಬರ್ಗಾ ಜಿಲ್ಲೆಗೆ ಭೀಮೆಯನ್ನು ಕರೆತಂದು “ಆಧುನಿಕ ಭಗೀರಥ” ಎನಿಸಿಕೊಂಡವರು. ಕ್ರಿಕೆಟ್ ಕಾಮೆಂಟ್ರಿ ಬಗ್ಗೆ ಕೂಡಾ ಅಷ್ಟೇ ಪ್ರೀತಿ. ತೋಟಪಟ್ಟಿಯಲ್ಲಿ ಆಳುಗಳಿಗೆ ಇದೇ ರೀತಿ ಮಾಡಿರಿ ಅಂತಾ ಸಲಹೆ ಕೊಡತಿದ್ರು. ಮನೆಯ ಅಲಂಕಾರಕ್ಕಂತೂ, ತಮ್ಮ ಮನಸ್ಸಿಗೆ ಬರುವವರೆಗೆ ಕೆಡವಿ ಮತ್ತೆ ಮತ್ತೆ ಕಟ್ಟಿದ್ದುಂಟು.

ಬಹುಭಾಷೆಯಲ್ಲಿ ಪಾಂಡಿತ್ಯ ಹೊಂದಿದ್ದ ಅವರಲ್ಲಿ ಒಂದು ದೊಡ್ಡ ಗ್ರಂಥಾಲಯವೇ ಇತ್ತು. ನನಗೆ ಸ್ವಲ್ಪ ಓದುವ ಹುಚ್ಚು. “ಸುಧಾತಾಯಿ, ನಿಮಗ ಯಾವ ಪುಸ್ತಕ ಬೇಕೋ ಅದನ್ನು ಒಯ್ಯಿರಿ, ಸಾಧ್ಯ ಆದರ ತಂದಕೊಡಿರಿ.” ಅಂತ ಹೇಳತಿದ್ರು. ಅವರು ಇನ್ನೊಂದು ಅಭ್ಯಾಸ ಅಂದರ ದೇವರನಾಮ ಹೇಳೋದು, ಭಾಗ್ಯದ ಲಕ್ಷ್ಮಿಬಾರಮ್ಮಾ ಹಾಡುತ್ತಿದ್ದರೆ, ಯಾರೂ ನಿಂತು ಕೇಳುವಂತಾಗುತ್ತಿತ್ತು.

ತಮ್ಮ ಕಾಲೇಜ್ ದಿನಗಳಲ್ಲಿ ಒಂದಿ ಗಜಲ್ ಹಾಡುತ್ತಿದ್ದರಂತೆ “ಮೇರಿ ಬೀನಾ ರೋ ರಹೀ ಹೈ” ಬಹಳ ಚೆನ್ನಾಗಿ ಹಾಡುತ್ತಿದ್ದರು.

ನನಗೆ ಕಾಮಾಲೆಯಾದಾಗ ಸ್ವತಃ ಮನೆಯವರೆಗೂ ಬಂದು ಯೋಗಕ್ಷೇಮ ವಿಚಾರಿಸಿದರು. ಒಮ್ಮೆಯಂತೂ ಗುಲ್ಬರ್ಗಾ- ಬೆಂಗಳೂರು ರೈಲಿಗೆ, ನಾಳೆ ಹೋಗಬೇಕಾಗಿದ್ದ ನಾನು ತಪ್ಪಾಗಿ (ಸರಿತಾ ಅವರು ಟಿ.ವಿ. ಪ್ರೋಗ್ರಾಂಗೆ ಕರೆಸಿದ್ದರು.)

ಇಂದೇ ಹೊರಟು ಬಿಟ್ಟಿದ್ದೆ. ಫೋನಿನ ಮೂಲಕ ಈ ಸುದ್ದಿ ತಿಳಿಸಿದ ಸರಿತಾ ಅವರು ದೇಸಾಯರನ್ನೇ ರಾತ್ರಿ ಹನ್ನೊಂದುಗಂಟೆಗೆ ಕುರ್ಲಾ ಸ್ಟೇಶನ್ನಿಗೆ ಕರೆಯಲು ಕಳಿಸಿದ್ದರು. ಅವರ ಭವ್ಯ ವ್ಯಕ್ತಿತ್ವದ ಜೊತೆಗೆ, ಅವರ ಅಂತಃಕರಣ ತಾನೇ ತಾನಾಗಿ ಹರಿದುಬಂದು ನಾನು ಸ್ಟೇಶನ್‌ನಲ್ಲಿ ಇಳಿಯುತ್ತಿದ್ದ ಹಾಗೇ ಬೋಗಿಯೆದುರೆ ಪ್ರತ್ಯಕ್ಷವಾಗಿ ನಿಂತಿದ್ರು. “ಬಹಳ ತಡಾ ಆಯ್ತು. ಪ್ರಯಾಣ ಸುಖವಾಗಿತ್ತಾ.” ಎಂದು ಕೇಳಿದಾಗ ನಾನು ಒಂದು ಕ್ಷಣ ಮೂಕ ವಿಸ್ಮಿತಳಾಗಿದ್ದೆ.

ನೂರಾರು ಸಾಹಿತಿಗಳ ಪರಿಚಯ. ನನಗೆ ಅವರ ಮನೆಯಲ್ಲಿ ಆಯಿತು. ಪಾ.ಪು. ಅವರು

ಬಂದಾಗಂತೂ, "ಇವರದೂ ಇಜಾಪುರಾನೇ" ಎಂದು ತಮಾಷೆ ಮಾಡತಿದ್ರು. ನನಗೂ ಸಾಹಿತ್ಯದಲ್ಲಿ ಆಸಕ್ತಿ ಇದ್ದು ರೇಡಿಯೋ ನಾಟಕಗಳಲ್ಲಿ ಪಾತ್ರ ನಿರ್ವಹಿಸುತ್ತಿದ್ದೆ. ಆದ್ದರಿಂದ 'ಸಂಜೀವಿನಿ'ಯಲ್ಲಿ ಬರುವ ಸಾಹಿತಿಗಳ ಜೊತೆಗೆ ನನಗೂ ಬುಲಾವ್ ಇರುತ್ತಿತ್ತು. ಅದರಂತೆ ರಾಜಕಾರಣಿಗಳು ಬಂದಾಗಲೂ ನಾನು ಅವರಲ್ಲಿರುತ್ತಿದ್ದೆ.

ಈಗ ಎಲ್ಲವೂ ಶೂನ್ಯ. ಅವರ ಒಂದೊಂದು ಮಾತು ಮನದಾಳದಲ್ಲಿ ನೆಲೆಯಾಗಿ ನಿಂತುಬಿಟ್ಟಿದೆ. ಅವರಿಲ್ಲದ ಸಂಜೀವಿನಿ ಪಾಳುದೇಗುಲ, ಅವರ ಮುಂದೆ ಹಾಯ್ದು ಬರುವಾಗ ಹೇಳಿಕೊಳ್ಳಲಾಗದ, ನೋವು, ಸಂಕಟ. ಅಂಥ ವ್ಯಕ್ತಿ ಇನ್ನೆಲ್ಲಿ ಸಿಕ್ಕಾರು! ಏನೆಂದು ಬರೆಯಲೀ? ಹೃದಯ ರೋಧಿಸುತ್ತಿದೆ. ಮಾತು ಮೌನ. ಲೆಕ್ಕಣಿಕೆ ಸ್ತಬ್ಧ.

ಕರೆಯುವವರೆಗೆ ಹೋಗದ ದೇಸಾಯರು

❁ ಜಿ.ಎಂ. ಶಿರಹಟ್ಟಿ

ದೇಸಾಯರು ಅಂದರೆ ಕಿವಿಯವರೆಗೆ ತಲೆ ತುಂಬ ರುಮಾಲು, ಮೂಗು ಮೇಲ್ ತುಟಿಗಳ ನಡುವೆ ಚಪ್ಪರದ ಇಲ್ಲವೇ ಹುರಿಯ ಮೀಸೆ, ಮುಖದ ತುಂಬೆಲ್ಲ ಗಾಂಭೀರ್ಯ, ಲೈಸೆನ್ಸ್ ಇದ್ದರೆ ಹೆಗಲಿಗೆ ಒಂದು ಬಂದೂಕು, ಜರದ ಚಪ್ಪಲಿ, ಬಿಳಿಮಲ್ಲಿನ ಅಂಗಿ ಧೋತರ, ಯಾವಾಗಲೂ ಕುರ್ಚಿಯ ಮೇಲೆ ಆಸನ, ನೆಲದ ಮೇಲೆ ಮುಂದೆ ಕುಳಿತ ೪-೫ ಜನ, ಆಚೀಚೆ ಒಂದಿಬ್ಬರು ಕೈಕಟ್ಟಿಕೊಂಡು ನಿಂತವರು ಇವರನ್ನೆಲ್ಲ ಮೌನವಾಗಿ ಸುತ್ತಿರುವ ಎತ್ತರದ ಗೋಡೆಗಳವಾಡೆ. ಆದರೆ ನಾನು ನೆನಪಿನ ಆಳದಲ್ಲಿ ಇಟ್ಟುಕೊಂಡಿರುವ ದೇಸಾಯಿಯೇ ಬೇರೆ. ಎತ್ತರವಾದ ದೇಹ, ಮುಖದ ತುಂಬೆಲ್ಲ ಜ್ಞಾನದ ಗಾಂಭೀರ್ಯ, ಮಾತಿನಲ್ಲಿ ಸ್ನೇಹ, ಹಾಸ್ಯ, ಯಾವಾಗಲೂ ಓದುವುದರಲ್ಲಿಯೇ ತಲ್ಲೀನ, ಆಕರ್ಷಕ ನಿಲುವಿನೊಂದಿಗೆ ಮೋಡಿಯಂತಿದ್ದ ಧ್ವನಿ, ಅನುಕಂಪದ ದೃಷ್ಟಿ. ಇವು ದೇಸಾಯಿ ಎಂಬ ಹೆಸರಿದ್ದರೂ ಕುಸುಮಾಕರ ಎಂದೇ ಚಿರಪರಿಚಿತರಾದ ದೇಸಾಯಿ, ಪ್ರತಿಯೊಬ್ಬರನ್ನು ಸಾಹೇಬರೇ ಎಂದೇ ಕರೆದ ಈ ದೇಸಾಯಿ ಸಾಹೇಬನಿಗೆ ಧರ್ಮದಲ್ಲಿ ಆಳವಾದ ನಂಬಿಗೆ ಇದ್ದರೂ ಜಾತೀಯತೆಯಿಂದ ಬಹು ದೂರ. ಅವರ ಪತ್ನಿ (ನಾವು ಅಕ್ಕ ಎಂದೇ ಕರೆಯುತ್ತೇವೆ) ಸರಿತಾ ಒಬ್ಬರಿಗೊಬ್ಬರು ಹೇಳಿ ಮಾಡಿಸಿದಂತಹ ದಂಪತಿಗಳು. ಸರಿತಾ ಕುಸುಮಾಕರ ದೇಸಾಯಿಗಿಂತ ಸರಿತಾ ಕೆ. ದೇಸಾಯಿ ಆಗಿದ್ದರು ಕುಸುಮಾಕರ. "ಹಮ್ ಕಿಸಿಕೆ ಹೋಕೆ ನಹೋ, ಸರಿತಾ ಕೆ ದೇಸಾಯಿ ಹೈ" ಎನ್ನುತ್ತಿದ್ದ ಕುಸುಮಾಕರ, ಸರಿತಾ ಅವರ ಆದರ್ಶ ಪತಿಯಾಗಿ, ಮಾರ್ಗದರ್ಶಿಯಾಗಿ ಕೊನೆಯವರೆಗೂ ಈ ಆದರ್ಶ ಜೀವನದಲ್ಲಿ ಬದುಕಿದರು.

ಇಂತಹ ಒಬ್ಬ ಮೇಧಾವಿಯನ್ನು ನಾನು ಭೇಟಿಯಾದದ್ದು ಕಲಬುರ್ಗಿ ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿದ್ದಾಗ. ಅದೇ ಆಗ ತುರ್ತು ಪರಿಸ್ಥಿತಿ ಕೊನೆಯಾಗಿತ್ತು. ದೇಸಾಯರು ಜೈಲಿಗೆ ಹೋಗಿ ಬಂದವರು. ಸಂವಿಧಾನ ಕುರಿತಾದ ಒಂದು ಕಾರ್ಯಕ್ರಮದ ಧ್ವನಿಮುದ್ರಣ ಮಾಡಲು ಅವರನ್ನು ಭೆಟ್ಟಿಯಾದಾಗ ಅವರು ನಿರರ್ಗಳವಾಗಿ ಒಂದು ತಾಸು ಚರ್ಚೆ ಮಾಡಿದಾಗ ದೇಸಾಯರ ಪಾಂಡಿತ್ಯ ನನ್ನನ್ನು ಆಕರ್ಷಿಸಿತು. ಜೊತೆಗೆ ರೆಡಿಯೋಕ್ಕೆ ತಕ್ಕದಾದ ಅವರ ಧ್ವನಿ. ದೇಸಾಯರು ಏನಾದರೂ ನಟರಾಗಿದ್ದರೆ ಅವರೊಬ್ಬ ಅಮಿತಾಬರಾಗುತ್ತಿದ್ದರು. ಅಷ್ಟೊಂದು ಭಾವನಾಪರ ಗಂಭೀರ ಧ್ವನಿ ಅವರದು. ನನ್ನ ವೃತ್ತಿಯಲ್ಲಿ ಅವರ ಧ್ವನಿ ಮುದ್ರಣ ಮಾಡುವುದೆಂದರೆ ನನಗೆ ಎಲ್ಲಿಲ್ಲದ ಸಂತೋಷವಾಗುತ್ತಿತ್ತು.

ದೇಸಾಯರನ್ನು ದಿನಾಲೂ ಸಂಜೆ ಭೆಟ್ಟಿಯಾಗುವ ನನ್ನ ಚಟ ನನ್ನನ್ನು ಏನೆಲ್ಲವನ್ನು ಓದಲು ಹಚ್ಚಿತು. ಅವರಷ್ಟು ಓದಿದವರು ವಿರಳ. ಯಾವುದೇ ವಿಷಯವಿದ್ದರೂ ದೇಸಾಯರು

ಪ್ರಭಾವಶಾಲಿಯಾಗಿ ಮಾತನಾಡಬಲ್ಲವರಾಗಿದ್ದರು. ಕಾನೂನು ತಜ್ಞರಾಗಿದ್ದಂತೆ ರಾಜಕೀಯ, ಸಾಮಾಜಿಕ, ಸಾಹಿತ್ಯ, ಸಾಂಸ್ಕೃತಿಕ ವಿಷಯಗಳಲ್ಲಿ ಅವರಿಗೆ ಆಳವಾದ ಅಧ್ಯಯನವಿತ್ತು. ೨-೩ ದಿನ ಸತತವಾಗಿ ಅವರೊಡನೆ ವಿವಿಧ ವಿಷಯಗಳ ಬಗ್ಗೆ ಮಾತಾಡುತ್ತಿದ್ದೆ. ಅದರ ಒಂದು ಚಿತ್ರವನ್ನು ಇದ್ದುದಂತೆ ಓದುಗರೆದುರು ಇಡುತ್ತಿದ್ದೇನೆ.

ನಾನು: ಕ್ಯಾ ದೇಸಾಯಿ ಸಾಬ್, ಏನ್ ನಡಸೀರಿ

ದೇಸಾಯಿ: ಬರ್ರಿ ಗುರುಚಾರ್ಯ ಮಾಧವಚಾರ್ಯ ಅವರೆ, ಏನು ನಡಸೋದು ಕೋರ್ಟಿನಿಂದ ಮನಿ, ಮನಿಯಿಂದ ಕೋರ್ಟು..... ನೀವು.....

ನಾನು: ನಾನೂ ಕೆಲಸಾ ಮುಗಿಸಿ ಹೊಂಟೇನಿ ಮನೀಗೆ

ದೇಸಾಯಿ: ಹೆಡ್ ಮಾಸ್ತರ.... ಹೆಡ್ ಮಾಸ್ತರ ಮ್ಯಾಡಂ

ನಾನು: ನಿಮ್ಮ ಮನೆಯೊಳಗ ಯಾರು ಮಾಸ್ತರರಿ....

ದೇಸಾಯಿ: ಈಗ ಬರತಾರ ನೋಡ್ರಿ.... ಇಕಾ ನೋಡರಿ ಮ್ಯಾಡಂ ಆಚಾರ್ಯ ಬಂದಾರ ಅವಲಕ್ಕಿ ಮೆಣಸಿನಕಾಯಿ ಚಾ....

ನಾನು: ನೀವು ಸರಿತಕ್ಕಾ ಅವರನ್ನ ಹೆಡ್ ಮಾಸ್ತರ ಅಂತ ಕರದರೇನು....?

ದೇಸಾಯಿ: ಹೌದು ಅವರು ನಮ್ಮ ಹೆಡ್ ಮಾಸ್ತರ....

ಸರಿತಕ್ಕ: ಕೂಡ್ರಿ. ನಾನು ಅವಲಕ್ಕಿ ಹಚ್ಚಿಕೊಂಡ ಬರ್ತೀನಿ.....

ನಾನು: ದೇಸಾಯಿ ಸಾಬ್ ನಾನು Total Revolution ಬಗ್ಗೆ ಕಾರ್ಯಕ್ರಮ ಮಾಡಬೇಕಾಗೇದ ಅದಕ್ಕ ಒಂದೆರಡು ವಿಷಯಗಳು ಬೇಕಾಗಿದ್ದವು

ದೇಸಾಯಿ: (ನಗುತ್ತ) ಮೊದಲ ಟೋಟಲ್ ಫರಾಳಾ ಆಗಲಿ, ಆಮೇಲೆ ಸಾವಕಾಶ Revolution ಗೆ ಹೋಗೋಣ. ನಾನು ಈಗ ಇನ್ನಾ ಜೇಲಿನಿಂದ ಹೊರಗ ಬಂದೀನಿ. ಎಮರಜೆನ್ಸಿ ರುಚಿ ಎಲ್ಲಾರಿಗೂ ತಾಕಿದಾಂಗ ನನಗೂ ತಾಗತು. ಬಹಳ ತಾಗತು. ಆದರೂ ಹೆದರಲಿಲ್ಲ ಹೋಗಿ ಬಂದೆ.

ನಾನು: ಆದರೂ ಫ್ರೆಶ್ ಕಾಣಸ್ತೀರಿ ಬಿಡ್ರಿ

ದೇಸಾಯಿ: ಅದೆಲ್ಲಾ ನಮ್ಮ ಹೆಡ್ ಮಾಸ್ತರದು ಕರಾಮತ್ತು. ನಾ ಇಲ್ಲದಾಗ ನನ್ನ ಮರೀಲಿಕ್ಕೆ, ನನ್ನ ವ್ಯವಹಾರ ಎಲ್ಲಾ ತೂಗಿಸಿಕೊಂಡು ಹೋದರು. ಇನ್ನಷ್ಟು ದಿನಾ ಅಲ್ಲೇ ಇದ್ದರೆ ಛಲೋ ಅನಸ್ತಿತ್ತು.

ಸರಿತಕ್ಕ: (ಅವಲಕ್ಕಿ ತಟ್ಟೆಯೊಂದಿಗೆ ಬಂದು)

ಅಲ್ಲೆ ಇರಬೇಕಾಗಿತ್ತು ಯಾರ ಇಷ್ಟ ಜಲ್ದಿ ಬರ್ರಿ ಅಂದರು.

ದೇಸಾಯಿ: ನೀವು ಕರದರಿ ನಾನು ಬಂದೆ, ಅವರೇನು ಬಿಡಾಕ ತಯಾರ ಇರಲಿಲ್ಲ.

ದೇಖೊ ಮೇಡಂ, ಹಮ್ ಬುಲಾಯೇ ಬಗೆರ್ ಕಿಸಿಕೆ ಘರ ನಹಿಂ ಜಾತೆ, ಮೌತಕೆ ಘರಭಿ"

(ಕರೆಯುವವರೆಗೆ ನಾನು ಯಾರ ಮನೆಗೂ ಹೋಗೋದಿಲ್ಲ, ಮೃತ್ಯುವಿನ ಮನೆಗೂ ಸಹ)

ಸ್ವಲ್ಪ ಹೊತ್ತು ನಾನು ಸರಿತಕ್ಕಾ ಮೌನವಾಗಿ ಬಿಟ್ಟೆವು. ಎಂತಹ ವೈಚಾರಿಕತೆಯನ್ನು ಎಷ್ಟು ಸರಳವಾಗಿ ಹೇಳಿಬಿಟ್ಟ ದೇಸಾಯರು ಮತ್ತೆ ಒಮ್ಮೆಲೆ ನಕ್ಕು "ಅವಲಕ್ಕಿ ತಗೊಳ್ರಿ ಸಾಹೇಬರ" ಎಂದರು.

ನಾನು: (ನಾನು ಗಡಬಡಿಸುತ್ತ) ಹಾ. ಆಗಲಿ ಆಗಲಿ.....

ಈ ಸನ್ನಿವೇಶ ನನ್ನ ಮನದ ಆಳದಲ್ಲಿ ಬಹಳ ದಿನದವರೆಗೆ ಇತ್ತು. ಅವರು ನಿಧನರಾಗುವ ಒಂದೆರಡು ದಿನ ಮುಂಚೆ ನಾನು ಅವರ ಬೆಂಗಳೂರ ಮನೆಯಲ್ಲಿ ಊಟ ಮಾಡುತ್ತ ಹರಟೆ ಹೊಡೆದೆ. ಆಗಲೂ ದೇಸಾಯಿ ಅವರು ಆ ಹಿಂದಿನ ಮಾತನ್ನು ಉಚ್ಚರಿಸಿ ನನ್ನನ್ನು ಮೂಕನನ್ನಾಗಿ ಮಾಡಿದ್ದರು. ಅವರು ನಿಧನರಾದ ಸುದ್ದಿಯನ್ನು ಸರಿತಕ್ಕಾ ಮುಂಜಾನೆ ಫೋನಿನಲ್ಲಿ ತಿಳಿಸಿದಾಗ ದೇಸಾಯರ ಮಾತುಗಳು ಪ್ರತಿಧ್ವನಿಸತೊಡಗಿದವು.... ಹೌದು ದೇಸಾಯರ, ನೀವು ಯಾರ ಭಿಡೆ ಇಲ್ಲದೆ ಸ್ವಂತದ ಬುದ್ಧಿ, ಸ್ವಂತದ ಪರಿಶ್ರಮದಿಂದ ಬಾಳಿದಿರಿ, ಕರೆಯಲಾರದವರ ಮನೆಗೆ ಹೋಗಲೇ ಇಲ್ಲ. ಈಗ ಮೃತ್ಯು ನಿಮ್ಮನ್ನು ಕರೀತು. ನೀವು ಯಾವ ಬಿಗುಮಾನವಿಲ್ಲದೆ ಹೋದರಿ, ಈಗೇಸು ಬರ್ತೀರಿ....? ಎಂದೇ ಮನಸ್ಸು ಹುಚ್ಚುಚ್ಚಾರವಾಗಿ ನುಡಿಯತೊಡಗಿತು.

ದೇಸಾಯರು ಹಾಗೆಯೇ ಬಾಳಿದರು. ಅವರ ಸಾಮಿಪ್ಯವನ್ನು ಪಡೆದ ನಾನು ಏನೆಲ್ಲ ನೆನಪಿಸಲಿ ಎಂದು ಚಡಪಡಿಸುವುದಿಲ್ಲ. ಏಕೆಂದರೆ ಅವರು ಯಾವಾಗಲೂ ನೆನಪಿಗೆ ಬರುತ್ತಲೆ ಇರುತ್ತಾರೆ. ನೆನಪಿನಲ್ಲಿಯೇ ಇರುವವರನ್ನು ನೆನಪಿಸುವುದು ಏನು?

ದೇಸಾಯರು ಜೀವನದಲ್ಲಿ ಯಾವ ಕೊರತೆಯನ್ನು ಹೇಳಿಕೊಳ್ಳಲಿಲ್ಲ. ಜಲ ಮಂಡಳಿಯ ಅಧ್ಯಕ್ಷರಾಗಿದ್ದಾಗ ನಾನು ಒಂದೆರಡು ದಿನ ಬೆಂಗಳೂರಿನ ಅವರ ಮನೆಯಲ್ಲಿ ಅತಿಥಿಯಾಗಿದ್ದೆ. ಆಗ ಫುಟ್‌ಬಾಲ್ ಜಾಗತಿಕ ಸ್ಪರ್ಧೆ ನಡೆದಿತ್ತು. ರಾತ್ರಿ ಇಡೀ ಫುಟ್‌ಬಾಲ್ ಪಂದ್ಯಾಟವನ್ನು ನೋಡಿ ಮತ್ತೆ ಬೆಳಿಗ್ಗೆ ಹಸನ್ಮುಖಿರಾಗಿ ಆಫೀಸಿಗೆ ತೆರಳುತ್ತಿದ್ದರು.

ಅವರು ತಮ್ಮ ಕೆಲಸದಲ್ಲಿ ತೋರಿಸುತ್ತಿದ್ದ ಶ್ರದ್ಧೆ, ಆಸಕ್ತಿಗಳು ಅವರನ್ನು ಒಬ್ಬ ಖ್ಯಾತ ನ್ಯಾಯವಾದಿಯನ್ನಾಗಿ, ಅವರು ರಾಷ್ಟ್ರ, ಸಮಾಜದ ಬಗ್ಗೆ ಇದ್ದ ಕಳಕಳಿ ಅವರನ್ನು ಒಬ್ಬ ಸ್ವಾತಂತ್ರ್ಯ ಹೋರಾಟಗಾರನನ್ನಾಗಿ, ಅವರ ಸರಳ ನಿರಾಡಂಬರ ಜೀವನ ಅವರನ್ನು ಒಬ್ಬ ಆತ್ಮೀಯ ಸ್ನೇಹಿತನನ್ನಾಗಿ ಮಾಡಿದ್ದವು. ಅವರ ಜೀವನ ಮುಕುಟಕ್ಕೆ ಮಣಿಯಾಗಿ ಸರಿತಕ್ಕಾ ಕೊನೆಯವರೆಗೂ ಅವರ ಬಾಳಸಂಗಾತಿಯಾಗಿ ಅವರನ್ನು ನೋಡಿಕೊಂಡರು. ದೇಸಾಯರು ನಿಜ ಅರ್ಥದಲ್ಲಿ ಸರಿತಾ ಕೆ ದೇಸಾಯಿ (ಸರಿತಾ ಅವರ ದೇಸಾಯಿ) ಆಗಿದ್ದರು. ಸರಿತಕ್ಕಾ

ಇಲ್ಲದೆ ಅವರ ವೃತ್ತಿ ಅವರ ದೈನಂದಿನ ಚಟುವಟಿಕೆ ಎಲ್ಲವೂ ಅಪೂರ್ಣವಾಗಿದ್ದವು. ಶ್ರೀಮಂತ ಮನೆತನದಿಂದ ಬಂದಿದ್ದರೂ ದಂಪತಿಗಳು ಯಾವ ಸಡಗರ, ಬಿಂಕು ವೈಭವಗಳನ್ನು ಪ್ರದರ್ಶಿಸದೇ ಆದರ್ಶ ದಂಪತಿಗಳಾಗಿದ್ದರು. ಈಗಲೂ ಸರಿತಕ್ಕಾ ಅವರನ್ನು ನಾನು ನೋಡಿದಾಗಲೊಮ್ಮೆ ದೇಸಾಯರು ಕಣ್ಮುಂದೆ ಬರುತ್ತಾರೆ.

ಮಕ್ಕಳಿಲ್ಲದೆ ಅವರು ಎಂದೂ ಕೊರಗಿದವರಲ್ಲ. ಮನೆಯಲ್ಲಿ ಅನೇಕರನ್ನು ಇಟ್ಟುಕೊಂಡು ಅವರನ್ನು ಸಾಕಿ ಸಲುಹಿ ಅವರೆಲ್ಲರನ್ನೂ ಹಾದಿಗೆ ಹಚ್ಚಿ ಅಜರಾಮರರಾಗಿದ್ದಾರೆ. ಸಾಮಾಜಿಕ ವೃತ್ತಿ ಜೀವನದಲ್ಲಿಯೂ ಅಷ್ಟೇ. ಅನೇಕರ ಕಾನೂನಿನ ಸಮಸ್ಯೆಗಳನ್ನು ಬಗೆಹರಿಸಿ ಸಮಾಧಾನತಂದ ಅನೇಕ ಘಟನೆಗಳು ನನಗೆ ನೆನಪಿವೆ. ಕೆನರಾ ಬ್ಯಾಂಕಿಗೆ ನಾನು ಕೊಡಬೇಕಾಗಿದ್ದ ಸಾಲದ ನೋಟೀಸ್ ಬಂದಾಗ ಅವರೇ ನನಗೆ ತಿಳಿಯದಂತೆ ಹಣವನ್ನು ಬ್ಯಾಂಕಿಗೆ ತುಂಬಿದ ಘಟನೆಯನ್ನು ನಾನು ಮರೆಯುವಂತಿಲ್ಲ. (ಆಗ ಅವರು ಕೆನರಾ ಬ್ಯಾಂಕಿನ ನ್ಯಾಯವಾದಿಗಳಾಗಿದ್ದರು) ಅವರ ಮನೆಯಲ್ಲಿ ಊಟ ಮಾಡಿದ್ದು, ಹರಟೆ ಹೊಡೆದದ್ದು, ಗಂಭೀರ ವಿಷಯಗಳ ಚರ್ಚೆ ಮಾಡಿದ್ದು, ಬಾನುಲಿ ಕಾರ್ಯಕ್ರಮಗಳನ್ನು ನಿಯೋಜಿಸಿದ್ದು, ಊರಲ್ಲಿ ಸಭೆಯ ಕಾರ್ಯಕ್ರಮಗಳ ಸಿದ್ಧತೆ ಕುರಿತು ಚರ್ಚಿಸಿದ್ದು ಎಲ್ಲವೂ ಎಲ್ಲದರಲ್ಲಿ ದೇಸಾಯರು ನಮಗೆಲ್ಲ ಮಾರ್ಗದರ್ಶಿಯಾಗಿರುತ್ತಿದ್ದರು.

ಎರಡೆರಡು ಬೈಪಾಸ್ ಸರ್ಜರಿಗೆ ಎದೆಯೊಡ್ಡಿದರೂ ಎದೆಗುಂದಿರಲಿಲ್ಲ. ಭೆಟ್ಟಿಯಾದವರೊಡನೆ ನಿರರ್ಗಳವಾಗಿ ಯಾವ ಅಹಂ ಇಲ್ಲದೆ ಆತ್ಮೀಯರಂತೆ ಮಾತನಾಡುತ್ತಿದ್ದರು. "ಹ್ಯಾಂಗದ ಆರೋಗ್ಯ ದೇಸಾಯರ" ಎಂದು ಕೇಳಿದಾಗಲೊಮ್ಮೆ ಈ "ಈ ಸಾರೆ ಒಲಂಪಿಕ್ ಕುಸ್ತಿಗೆ ಹೋಗೋದ....." ಎಂದು ನಗೆಯಾಡುತ್ತಿದ್ದರು. ಕಲಬುರ್ಗಿಗೆ ಭೀಮಾ ನದಿ ನೀರನ್ನು ತರುವ ಯೋಜನೆ ಅವರದೇ. ಅಂದಿನ ಮುಖ್ಯಮಂತ್ರಿ ಹಾಗೂ ಆಪ್ತ ಸ್ನೇಹಿತರು ಹೆಗಡೆ ಅವರು ಈ ಯೋಜನೆಯ ಉದ್ಘಾಟನೆಯನ್ನು ನೆರವೇರಿಸಿಕೊಟ್ಟರು. ಆ ಸಮಾರಂಭವನ್ನು ಅವರು ಅಷ್ಟೇ ಅಚ್ಚುಕಟ್ಟುತನದಿಂದ ವ್ಯವಸ್ಥೆ ಮಾಡಿದ್ದರು. ಜಲಮಂಡಳಿಯ ಅಧ್ಯಕ್ಷಗಿರಿಯನ್ನು ಅವರೇನು ಕೇಳಿರಲಿಲ್ಲ. ಅದು ತಾನೇ ಅವರವರೆಗೆ ಬಂದಿದ್ದು. ಸರಿತಾ ಅವರ ಎಂ.ಎಲ್.ಸಿ. ಸಹಿತ ಅವರನ್ನು ಹುಡುಕಿಕೊಂಡು ಬಂದದ್ದು. ಯಾವ ರೀತಿಯ ಪ್ರಭಾವವನ್ನು ಬೀರದೇ ಬಂದುದನ್ನು ಸ್ವೀಕರಿಸಿ ಅದನ್ನು ಯಶಸ್ವಿಗೊಳಿಸಿದ್ದರು.

ಬದುಕಿದ್ದಾಗ ಆಗಾಗ ಮಾತ್ರ ದೇಸಾಯರು ಈಗ ಕಣ್ಮರೆಯಾಗಿರುವಾಗ ಪದೇ ಪದೇ ನೆನಪಾಗುತ್ತಾರೆ. ಇದುವೆ ಒಬ್ಬ ವ್ಯಕ್ತಿ ಬಿಟ್ಟು ಹೋಗುವ ಆಸ್ತಿ. ಕಣ್ಣು ಮುಚ್ಚಿದರೂ ಕಾಣುವ ಕೆಲವೇ ಕೆಲವರಲ್ಲಿ ದೇಸಾಯರೂ ಒಬ್ಬರು. ಅವರ ಸರಳವಾದ ಪಾಂಡಿತ್ಯಪೂರ್ಣ ವಾತ್ಸಲ್ಯದ ಸಂಬಂಧಗಳನ್ನು ನಾವೆಲ್ಲ ಅನುಭವಿಸಿದ್ದೇವೆ. ಅವರ ಸ್ನೇಹಿತರಾದ ನಮಗೆಲ್ಲ ಅವರ ನೆನಪು ಸದಾ ಹಸಿರು. ದೇಸಾಯರೇ ನೀವಿಲ್ಲದಾ ಈ ಸ್ನೇಹ ಪರಿಸರ ಎಷ್ಟೊಂದು ಬರಡಾಗಿದೆ.

ಎಂದು ಹೇಳುವ ಅನೇಕರು ಇದ್ದಾರೆ. ಅವರನ್ನು ನಾವು ಮರೆತಿಲ್ಲವೆಂಬುದೇ ನಮಗಿರುವ ಸಮಾಧಾನ. ಯಾರ ದೇಸಾಯರು....? ಎಂದು ಕೇಳಿದಾಗ ನಮಗರಿವಿಲ್ಲದೇ "ಮನಸ್ಸು ನುಡಿಯುವದು ಸರಿತಾ ಕೆ ದೇಸಾಯಿ" ಕೊನೆಯವರೆಗೆ ಅವರು ಕರೆಯದವರ ಮನೆಗೆ ಕರೆಯುವವರೆಗೆ ಹೋಗಲೇ ಇಲ್ಲ.

But now that thou art lying, my dear old carian guest
A hartful of grey ashes long long ago at rest
Still are thy pleasant voices thy nightingales awake
For death who taken all away yet these he cannot take.

ಕಲಬುರ್ಗಿಯ ದಾಹ ತಣಿಸಿದ 'ಅಭಿನವ ಭಗೀರಥ'

❁ ಶ್ರೀಕಾಂತಾಚಾರ್ಯ ಮಣೂರ

ಸ್ವರ್ಗ ಲೋಕದ ಗಂಗೆಯನ್ನು ಭೂಮಿಗೆ ಹರಿಸಲು ಭಗೀರಥ ಘೋರ ತಪಸ್ಸನ್ನು ಮಾಡಿದ. ಈ ಗಂಗೆ, ಭೂಮಂಡಲದ ಜನತೆಯ ಪಾಪವನ್ನು ತೊಳೆದು, ಅವರ ದಾಹವನ್ನು ತಣಿಸಿದ್ದಲ್ಲದೇ ಈ ಭೂಮಿಯನ್ನು ಪುಣ್ಯಭೂಮಿಯನ್ನಾಗಿ ಮಾಡಿದಳು.

ಇದು ಪುರಾಣ ಕಥೆಯಾಯಿತು. ಇಂದಿನ ಆಧುನಿಕ ಕಾಲದಲ್ಲೂ ಇಂಥ ಸಾಹಸಗಾಥೆ ನಡೆದಿರುವದು ಬಹಳಷ್ಟು ಜನತೆಗೆ ತಿಳಿದಿಲ್ಲ. ಕಲಬುರ್ಗಿ ನಗರಕ್ಕೆ ಭೀಮಾ ನದಿ ನೀರನ್ನು ಹರಿಸಲು ಭಗೀರಥನಂತೆಯೇ ಸಾಹಸದ ಶ್ರೇಯಸ್ಸು ದಿವಂಗತ ಕುಸುಮಾಕರ ದೇಸಾಯಿ ಅವರಿಗೆ ಸಲ್ಲುತ್ತದೆ.

೧೯೭೨-೭೩ರ ಭೀಕರ ಬರಗಾಲದ ನಂತರ ಕಲಬುರ್ಗಿ ನಗರ ಮೇಲಿಂದ ಮೇಲೆ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿತ್ತು. ಆಗ ಬೆಣ್ಣೆತೊರೆ ಯೋಜನೆಯ ಮೂಲಕ ಕಲಬುರ್ಗಿ ನಗರದ ದಾಹ ತಣಿಸುವ ಪ್ರಯತ್ನ ನಡೆಯಿತು. ಬೆಣ್ಣೆತೊರೆಯಲ್ಲಿ ಯಾವಾಗಲೂ ನೀರು ಇರುವದಿಲ್ಲ. ಭೀಮಾ ನೀರು ಮಾತ್ರ ಕಲಬುರ್ಗಿ ನಗರದ ದಾಹ ತಣಿಸುವ ಸಾಮರ್ಥ್ಯ ಹೊಂದಿದೆ ಎಂದು ಕುಸುಮಾಕರ ದೇಸಾಯಿ ಅವರು ೧೯೮೦ರಲ್ಲೇ ಭವಿಷ್ಯ ನುಡಿದಿದ್ದರು.

ಆಗ ಅವರ ಮಾತನ್ನು ಯಾರೂ ಕೇಳಲಿಲ್ಲ. ಸುಮಾರು ೧೨ ಕೋಟಿ ರೂ. ವೆಚ್ಚ ಮಾಡಿದರೂ ಬೆಣ್ಣೆತೊರೆ ನದಿಯಿಂದ ಬೆಳೆಯುತ್ತಿರುವ ಈ ಬೃಹತ್ ನಗರದ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ದೊರೆಯಲಿಲ್ಲ. ಊರೆಲ್ಲ ಹೊಸದಾಗಿ ಕೊಳವೆ ಬಾವಿಗಳ ರಂಧ್ರಗಳನ್ನು ಕೊರೆಯಬೇಕಾಯಿತು. ಇದರಿಂದಾಗಿದ್ದೆಂದರೆ, ಅಂತರ್ಜಲ ಮಟ್ಟ ಮತ್ತಷ್ಟು ಕೆಳಗೆ ಹೋಯಿತು.

ಇಂಥ ಗಂಭೀರ ಸಮಸ್ಯೆಯ ಸಂದರ್ಭದಲ್ಲೇ ಕುಸುಮಾಕರ ದೇಸಾಯಿ ಅವರನ್ನು ಕರ್ನಾಟಕ ಜಲ ಮಂಡಳಿಯ ಅಧ್ಯಕ್ಷರನ್ನಾಗಿ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ನೇಮಕ ಮಾಡಿದರು. ಈ ಒಂದು ಅಧಿಕಾರವನ್ನು ಸಾರ್ಥಕಗೊಳಿಸಲು ಕುಸುಮಾಕರ ದೇಸಾಯಿ ಅವರು ಭಗೀರಥ ಸಾಹಸವನ್ನೇ ಮಾಡಬೇಕಾಯಿತು.

ಸಮಾಜವಾದ ಹೋರಾಟದೊಂದಿಗೆ ರಾಜಕೀಯಕ್ಕೆ ಬಂದಿದ್ದ ಕುಸುಮಾಕರ ದೇಸಾಯಿ ಅವರು, ಅಧಿಕಾರಕ್ಕೆ ಬಂದ ಕೂಡಲೇ ಮೊದಲು ಮಾಡಿದ ಕೆಲಸವೆಂದರೆ, ನಗರದಿಂದ ೨೫ ಕಿ.ಮೀ. ದೂರದಲ್ಲಿರುವ ಭೀಮಾ ನದಿಯ ನೀರನ್ನು ನಗರಕ್ಕೆ ಸರಬರಾಜು ಮಾಡುವ ೧೩ ಕೋಟಿ ರೂ.ಗಳ ಯೋಜನೆಯನ್ನು ಸಿದ್ಧಪಡಿಸಿ, ಸರ್ಕಾರದ ಮಂಜೂರಾತಿಗೆ ಕಳಿಸಿದರು.

ಹಿಂದೆ ಈ ಕೆಲಸವನ್ನು ಯಾರೂ ಮಾಡಲಿಲ್ಲ. ಈ ಬಗ್ಗೆ ಯೋಚನೆಯನ್ನೂ

ಮಾಡದವರು, ಈ ಯೋಜನೆ ಜಾರಿಗೆ ಬಂದರೆ, ಕುಸುಮಾಕರ ದೇಸಾಯಿ, ರಾಜಕೀಯವಾಗಿ ಬೆಳೆಯುತ್ತಾರೆಂಬ ಏಕಮಾತ್ರ ಕಾರಣದಿಂದ ಅವರದೇ ಪಕ್ಷದ ಕೆಲವು ಮುಖಂಡರೆನಿಸಿಕೊಂಡವರು, ಭೀಮಾ ಯೋಜನೆಗೆ ಮಂಜೂರಾತಿಯನ್ನು ತಡೆಯಲು ಶತಪ್ರಯತ್ನ ಮಾಡಿದರು.

ಆದರೆ ಅಂದು ಕಲಬುರ್ಗಿ ನಗರ ಕುಡಿಯುವ ನೀರಿನ ಗಂಭೀರ ಸಮಸ್ಯೆ ಎದುರಿಸುತ್ತಿತ್ತು. ಜನತೆ ಬೀದಿಗಿಳಿದು ಹೋರಾಟ ನಡೆಸುತ್ತಿದ್ದರು. ಇಂಥ ಪರಿಸ್ಥಿತಿಯಲ್ಲಿ ಭೀಮಾ ಯೋಜನೆಯಿಂದ ಮಾತ್ರ ಶಾಶ್ವತ ಪರಿಹಾರ ಎಂಬುದು ಎಲ್ಲರಿಗೂ ಗೊತ್ತಿದ್ದರೂ, ಆಂತರಿಕ ರಾಜಕೀಯ ಒತ್ತಡಗಳಿಂದಾಗಿ ಸರ್ಕಾರ ಮಂಜೂರಾತಿಗೆ ಹಿಂದೇಟು ಹಾಕತೊಡಗಿತು.

ಇಡೀ ಕಲಬುರ್ಗಿ ನಗರ, ಪಕ್ಷ ಭೇದ ಮರೆತು ಸರ್ಕಾರದ ವಿರುದ್ಧ ತಿರುಗಿ ಬಿದ್ದಾಗ, ಕಂಗಾಲಾದ ಸರ್ಕಾರ ಕುಸುಮಾಕರ ದೇಸಾಯಿ ಅವರ ಭೀಮಾ ಯೋಜನೆಗೆ ಮಂಜೂರಾತಿಯನ್ನು ನೀಡಿತು. ಮಂಜೂರಾತಿ ದೊರಕಿದ್ದೇ ತಡ, ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರನ್ನು ಕರೆಸಿದ ಕುಸುಮಾಕರ ದೇಸಾಯಿ ಅವರು, ಅಡಿಗಲ್ಲು ಹಾಕಿಸಿ ಕಾಮಗಾರಿಗಳನ್ನೂ ಪ್ರಾರಂಭಿಸಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು, "ಕುಸುಮಾಕರ ದೇಸಾಯಿ ಅವರಂಥ ನಿಸ್ಪೃಹ ವ್ಯಕ್ತಿ ಈ ಯೋಜನೆಯನ್ನು ತುಂಬ ದೂರಾಲೋಚನೆಯಿಂದ ಆರಂಭಿಸಿದ್ದಾರೆ. ಕಲಬುರ್ಗಿಗೆ ಇನ್ನು ೫೦ ವರ್ಷಗಳ ವರೆಗೂ ನೀರಿನ ಸಮಸ್ಯೆ ಬರುವದಿಲ್ಲ. ನೀರಿನ ಸಮಸ್ಯೆಯಿಂದಾಗಿಯೇ ಈ ನಗರದ ಬೆಳವಣಿಗೆ, ಕೈಗಾರಿಕೆಗಳು ಕುಂಠಿತವಾಗಿದ್ದವು. ಇದೀಗ ಸಮೃದ್ಧ ನೀರಿನಿಂದ ಸರ್ವಾಂಗೀಣ ಅಭಿವೃದ್ಧಿಗೆ ನಾಂದಿಯಾಗಲಿದೆ. ಇದಕ್ಕೆಲ್ಲ ಈ 'ಅಭಿನವ ಭಗೀರಥ' ಕಾರಣ"ರೆಂದು ಕುಸುಮಾಕರ ದೇಸಾಯಿ ಅವರನ್ನು ತೋರಿಸಿ, "ನಾನು ಅವರ ಈ ಸಾಹಸಕ್ಕೆ ಅಭಿನಂದಿಸುತ್ತೇನೆ"ಂದು ಹೇಳಿದರು.

೧೯೮೭ರಲ್ಲಿ ಆರಂಭವಾದ ಭೀಮಾ ಯೋಜನೆ, ೧೯೯೩ರಲ್ಲಿ ಪೂರ್ಣಗೊಂಡಿತು. ಭೀಮಾ ನೀರನ್ನು ಕಲಬುರ್ಗಿ ನಗರಕ್ಕೆ ತಲುಪಿಸುವ ಕನಸು, ಕುಸುಮಾಕರ ದೇಸಾಯಿ ಅವರ ಕಣ್ಣೆದುರಲ್ಲೇ ನನಸಾಯಿತು. ಇದರಿಂದಾಗಿ ಕಳೆದ ಹತ್ತು ವರ್ಷಗಳಿಂದಲೂ ಈ ಮಹಾನಗರ ನೀರಿನ ಸಮಸ್ಯೆಯಿಂದ ಶಾಶ್ವತವಾಗಿ ಮುಕ್ತವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ರಾಜ್ಯದಲ್ಲಿ ಮಳೆಯ ತೀವ್ರ ಅಭಾವದಿಂದ ಬೆಂಗಳೂರು ಮಹಾನಗರವೂ ಸೇರಿದಂತೆ ರಾಜ್ಯದ ಅನೇಕ ನಗರ-ಪಟ್ಟಣಗಳು ಕುಡಿಯುವ ನೀರಿನ ತೀವ್ರ ಸಮಸ್ಯೆಯನ್ನು ಎದುರಿಸುತ್ತಿವೆ. ವಾರಕ್ಕೊಮ್ಮೆ ಅಥವಾ ಹತ್ತು ದಿನಗಳಿಗೊಮ್ಮೆ ನೀರು ಪೂರೈಸಲಾಗುತ್ತಿದೆ. ಆದರೆ, ಕಲಬುರ್ಗಿ ನಗರ ಮಾತ್ರ ಬೇಸಿಗೆಯಲ್ಲೂ ನಿತ್ಯ ನೀರು

ಪಡೆಯುವ ಭಾಗ್ಯ ಹೊಂದಿದೆ. ಈ ಸಂದರ್ಭದಲ್ಲಿ ಪ್ರತಿಯೊಂದು ಹಂತದಲ್ಲೂ ಕುಸುಮಾಕರ ದೇಸಾಯಿ ಅವರ ನೆನಪಾಗದೇ ಇರದು.

ಸ್ವಾತಂತ್ರ್ಯ ಹೋರಾಟಗಾರರ ಮನೆತನವೆಂದೇ ಹೆಸರಾಗಿರುವ ದಿ.ಸಂಜೀವರಾವ ದೇಸಾಯಿ ಅವರ ಮೂರನೇ ಪುತ್ರರಾದ ಕುಸುಮಾಕರ ದೇಸಾಯಿ ಈ ಭಾಗದ ಪ್ರಸಿದ್ಧ ವಕೀಲರು. ಕಾನೂನು ಪುಸ್ತಕಗಳನ್ನು ತೆರೆಯದೇ, ನಿರರ್ಗಳವಾಗಿ ಈ ಬಗ್ಗೆ ಹೇಳುತ್ತಿದ್ದ ಅವರ ಪ್ರತಿಭೆಗೆ ಅನೇಕ ಬಾರಿ ನ್ಯಾಯಾಧೀಶರೂ ಕೂಡ ದೇಸಾಯಿ ಅವರು ಹೇಳಿದರೆ ಮುಗಿಯಿತು. ಅದನ್ನು ಮತ್ತೊಮ್ಮೆ ಪರಿಶೀಲಿಸುತ್ತಿರಲಿಲ್ಲ. ಆದರೆ ಅವರೆಂದೂ ನ್ಯಾಯಾಲಯವನ್ನು ತಪ್ಪು ದಾರಿಗೆಳೆದವರಲ್ಲ. ಅಂಥ ಜಾಯಮಾನದವರೂ ಅಲ್ಲ. ಆದ್ದರಿಂದಲೇ ಅವರಿಗೆ ಅಪಾರ ಗೌರವ.

7106 ದೇಸಾಯಿ ಅವರು ಮಾರು ಹೋಗಿದ್ದು, ರಾಮಮನೋಹರ ಲೋಹಿಯಾ ಅವರಿಗೆ. ಇದರಿಂದಾಗಿ ಅನೇಕ ಹಿರಿಯ ಸಮಾಜವಾದಿಗಳೊಂದಿಗೆ ದೇಸಾಯಿ ಅವರೂ ಸಮಾಜವಾದಿಯಾದರು. ಸ್ವಾತಂತ್ರ್ಯ ಯೋಧ, ಸಮಾಜವಾದಿ, ಪತ್ರಕರ್ತ, ನ್ಯಾಯವಾದಿ ಹಾಗೂ ರಾಜಕಾರಣಿಯಾಗಿಯೂ ಅವರು ಬಹುಮುಖ ವ್ಯಕ್ತಿತ್ವ ಹೊಂದಿದವರು.

ಸಮಾಜವಾದಿ ಧುರೀಣರಾದ ಲೋಹಿಯಾ, ಮಧು ದಂಡವತೆ, ಮಧು ಲಿಮಯೆ, ಶಾಂತವೇರಿ ಗೋಪಾಲಗೌಡರು, ಜಾರ್ಜ ಫರ್ನಾಂಡಿಸ್, ಖಾದ್ರಿ ಶಾಮಣ್ಣ, ಮೃಣಾಲ್ ಗೋರೆ, ಜೆ.ಎಚ್.ಪಟೇಲ್, ಎಸ್.ಎಂ.ಕೃಷ್ಣ ಮುಂತಾದವರೊಂದಿಗೆ ಕುಸುಮಾಕರ ದೇಸಾಯಿ ಅವರು ನಿಕಟ ಸ್ನೇಹ ಹೊಂದಿದ್ದರು. ಅನೇಕರು ಕಾಂಗ್ರೆಸ್ ಸೇರಿದರೂ, ದೇಸಾಯಿ ಅವರು ಸೇರದೇ ಸಮಾಜವಾದಿಯಾಗಿಯೇ ಉಳಿದರು.

ಕಲಬುರ್ಗಿಗೆ ಯಾರೇ ಸಮಾಜವಾದಿ ಧುರೀಣರು ಬಂದರೂ ಅವರ ವಾಸ್ತವ್ಯ ಮತ್ತು ಆತಿಥ್ಯ ಕುಸುಮಾಕರ ದೇಸಾಯಿ ಅವರಲ್ಲಿ ಆಗುತ್ತಿತ್ತು. ಸಾಹಿತಿಗಳು ಬಂದರೂ ಕುಸುಮಾಕರ ದಂಪತಿಗಳ ಆತಿಥ್ಯವಿರುತ್ತಿತ್ತು. ನಾನು ಅವರ ಕುಟುಂಬಕ್ಕೆ ತೀರ ಪರಿಚಿತನಾಗಿರುವುದರಿಂದ ಇಂಥ ಅನೇಕ ಪ್ರಸಂಗದಲ್ಲಿ ಅವರು ನನಗೂ ಕರೆಯುತ್ತಿದ್ದರು. ಅವರ ಮನೆಗೆ ಬರುವವರ ಪ್ರತಿಯೊಬ್ಬರ ಆಸಕ್ತಿಯನ್ನು ಸೂಕ್ಷ್ಮವಾಗಿ ಗಮನಿಸಿ ಆತಿಥ್ಯ ನೀಡುವದು ಅವರ ವೈಶಿಷ್ಟವಾಗಿತ್ತು.

ನಾನು ಕುಸುಮಾಕರ ದಂಪತಿಗಳಿಗೆ ತುಂಬ ಬೇಕಾದವನಾಗಿರುವುದರಿಂದ, ಆಗಾಗ ರಾಜಕೀಯ, ಸಾಹಿತ್ಯ ಮತ್ತು ಪತ್ರಿಕೋದ್ಯಮ ಮುಂತಾದ ವಿಷಯ ಕುರಿತು ಚರ್ಚಿಸುತ್ತಿದ್ದರು. ಮನೆಯಲ್ಲಿ ಏನಾದರೂ ವಿಶೇಷ ತಿಂಡಿ ಮಾಡಿದ್ದರೆ, ನನಗೆ ಆಮಂತ್ರಣವಿರುತ್ತಿತ್ತು. "ಇಂಥ ತಿಂಡಿ ತಯಾರಾಗಿ ನಿನಗಾಗಿ ಕಾದಿದೆ" ಎಂದೇ ನನಗೆ ಕರೆಯುತ್ತಿದ್ದರು. ನಾನೂ ಕೂಡ ಅವರ

ಮನೆಗೆ ಹೋಗಬೇಕಾದರೆ, ಫೋನ್ ಮಾಡಿ "ನನಗೆ ಏನು ತಿಂಡಿ ಮಾಡಿದ್ದೀರಿ" ಎಂದು ಕೇಳಿಯೇ ಹೋಗುತ್ತಿದ್ದೆ. ಅಷ್ಟೊಂದು ಆತ್ಮೀಯತೆ ಅವರೊಂದಿಗೆ ಬೆಳೆದಿತ್ತು. ಅನೇಕ ಸಲ "ನನಗೆ ಹಸಿವಾಗಿದೆ" ಎಂದು ಹೇಳಿ ಊಟ ಮಾಡಿ ಬರುತ್ತಿದ್ದೆ.

ಅವರ ಮನೆಯ ಈ ನಿಕಟ ಸಂಬಂಧದಿಂದ ನಾನೂ ಕೂಡ ಅವರ ಮನೆಯ ಸದಸ್ಯನಂತಾಗಿದ್ದೆ. ಅವರ ಮನೆಗೆ ಬಂದು ಹೋಗುವವರು, ಅವರ ಮನೆಯಲ್ಲಿದ್ದು ಅಭ್ಯಾಸ ಮಾಡುವವರೆಲ್ಲರೂ ನನಗೆ ಚಿರಪರಿಚಿತರಾಗಿದ್ದರು. ಅವರ ಮನೆಯಲ್ಲಿ ಎಲ್ಲ ಎಲ್ಲ ಜಾತಿ ವರ್ಗದವರೂ ಇರುತ್ತಿದ್ದರು. ಅವರ ನಡೆ- ನುಡಿಗಳಲ್ಲಿ ವ್ಯತ್ಯಾಸವಿರುತ್ತಿರಲಿಲ್ಲ. ಮನೆಯಲ್ಲಿ ಎಲ್ಲರದೂ ಒಟ್ಟಿಗೇ ಒಂದೇ ಟೇಬಲ್ ಮೇಲೆಯೇ ಊಟ- ತಿಂಡಿ ನಡೆಯುತ್ತಿತ್ತು. ಸಂಜೆಯ ಊಟಕ್ಕೆ ಎಲ್ಲರೂ ದೇಸಾಯಿ ಅವರೊಂದಿಗೇ ಕುಳಿತುಕೊಳ್ಳಬೇಕು. ಯಾರಾದರೂ ಒಬ್ಬರು ಇಲ್ಲದಿದ್ದರೆ ಅವರು ಚಡಪಡಿಸುತ್ತಿದ್ದರು. ಅವರ ಮನೆಯೇ ಸಮಾಜವಾದಕ್ಕೊಂದು ಜೀವಂತ ನಿದರ್ಶನವಾಗಿತ್ತು.

ಶ್ರೀಮತಿ ಇಂದಿರಾ ಗಾಂಧಿಯವರು ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದಾಗ, ಅದನ್ನು ಪ್ರತಿಭಟಿಸಿ ಕಲಬುರ್ಗಿಯಲ್ಲಿ ಬಂಧನಕ್ಕೊಳಗಾದವರಲ್ಲಿ ದೇಸಾಯಿ ಅವರೇ ಮೊದಲಿಗರು. ಅವರು ಜೈಲಿಗೆ ಹೋದಾಗ, ಶ್ರೀಮತಿ ದೇಸಾಯಿ ಅವರೇ, ಕುಸುಮಾಕರ ಅವರ ಎಲ್ಲ ಕೇಸುಗಳನ್ನೂ ನೋಡಿಕೊಳ್ಳುತ್ತಿದ್ದರು. "ನಾನು ಜೈಲಿಗೆ ಹೋಗಿದ್ದರಿಂದಲೇ ನಮ್ಮ ಬಾಸ್ (ಶ್ರೀಮತಿ ದೇಸಾಯಿ)ಗೆ ವಕಾಲತ್ತಿನಲ್ಲಿ ಆತ್ಮವಿಶ್ವಾಸ ಹುಟ್ಟಿತು. ಈಗ ಅವರು ನನ್ನಿಂದ ಯಾವ ಸಹಾಯವನ್ನೂ ಪಡೆಯದೇ ವಕಾಲತ್ತು ಮಾಡುತ್ತಾರೆ" ಎಂದು ಹೇಳುತ್ತಿದ್ದರು.

೧೯೭೭ರಲ್ಲಿ ತುರ್ತು ಪರಿಸ್ಥಿತಿ ಕೊನೆಗೊಂಡು ಚುನಾವಣೆ ಘೋಷಣೆಯಾಗಿ, ಜಯಪ್ರಕಾಶ ನಾರಾಯಣ ಅವರ ನೇತೃತ್ವದಲ್ಲಿ ರೂಪಗೊಂಡ ಜನತಾ ಪಕ್ಷದ ಸಂಸ್ಥಾಪಕ ಸದಸ್ಯರಲ್ಲೊಬ್ಬರೂ ಆಗಿದ್ದರು. ಮುಂದೆ ೧೯೭೮ರಲ್ಲಿ ಕರ್ನಾಟಕ ವಿಧಾನಸಭೆಗೆ ಚುನಾವಣೆಗಳು ನಡೆದಾಗ ದೇಸಾಯಿ ಅವರು ಚಿತ್ತಾಪುರ ಮತಕ್ಷೇತ್ರದಿಂದ ಸ್ಪರ್ಧಿಸಿದರು.

ಅವರೆಂದೂ ಅಧಿಕಾರದ ಬೆಂಬತ್ತಿ ಹೋಗಲಿಲ್ಲ. ಯಾರ ಹಿಂಬಾಲಕರೆಂದೂ ಬ್ರಾಂಡ್ ಆಗದ ಸ್ವಾಭಿಮಾನಿಗಳು. ಅಧಿಕಾರವೇ ಅವರನ್ನು ಹುಡುಕಿಕೊಂಡು ಬಂದು ೧೯೮೭ರಲ್ಲಿ ಕರ್ನಾಟಕ ಜಲಮಂಡಳಿ ರಾಜ್ಯ ಅಧ್ಯಕ್ಷರಾಗಿ ನೇಮಕಗೊಂಡ ನಂತರ ಕಲಬುರ್ಗಿ ನಗರ ಕುಡಿಯುವ ನೀರಿಗೆ ಶಾಶ್ವತ ಪರಿಹಾರ ಕಲ್ಪಿಸಿಕೊಟ್ಟು, "ಇಂದು ನನ್ನ ಜನ್ಮ ಸಾರ್ಥಕವಾಯಿತು" ಎಂದರು.

ಅವರಿಗೆ ಹೃದಯ ಶಸ್ತ್ರ ಚಿಕಿತ್ಸೆಯಾದ ನಂತರ, ನಾನು ಅವರಿಗೆ ಭೇಟಿಯಾಗಿ ಮಾತನಾಡಿಸಲು ಹೋದಾಗ, ನನ್ನ ಮುಖದಲ್ಲಿನ ಆತಂಕವನ್ನು ಕಂಡ ದೇಸಾಯಿ ಅವರು,

ಎಂದಿನಂತೆಯೇ ಗೆಲುವಾಗಿ ಮಾತನಾಡುತ್ತ, "ರಾಜಕಾರಣಿಗಳಿಗೆ ಹೃದಯ ಇಲ್ಲವೆಂದು ಹೇಳುತ್ತಿದ್ದೆಯಲ್ಲ. ನನಗೆ ಹೃದಯ ಇದೆ ಎಂದು ಈಗಲಾದರೂ ಖಾತ್ರಿಯಾಯಿತಲ್ಲ" ಎಂದು ಹಾಸ್ಯದಿಂದಲೇ ಹೇಳುತ್ತ, ನನ್ನ ಆತಂಕವನ್ನು ನಿವಾರಿಸಲು ಪ್ರಯತ್ನಿಸಿದಂಥ ದೊಡ್ಡ ಮನಸ್ಸು ಅವರದು.

ಅವರಿಗೆ ಕಲಬುರ್ಗಿಯ ಮೇಲೆ ಅಪಾರ ವ್ಯಾಮೋಹ. ಆದರೆ ಮೇಲಿಂದ ಮೇಲೆ ವೈದ್ಯಕೀಯ ಚಿಕಿತ್ಸೆಗಾಗಿ ಬೆಂಗಳೂರಿನಲ್ಲಿರಬೇಕಾಗಿದೆ ಎಂದು ಹೇಳುತ್ತಿದ್ದರು. ರಾಜಕೀಯದಲ್ಲಿ, ವಕೀಲಿ ವೃತ್ತಿಯಲ್ಲಿ ಅನೇಕರು ಅನೇಕ ರೀತಿಯಲ್ಲಿ ಗಳಿಸಿದವರಿದ್ದಾರೆ. ಆದರೆ, ಕುಸುಮಾಕರ ದೇಸಾಯಿ ಅವರು ಗಳಿಸಿದ್ದು ಒಳ್ಳೆಯ ಮನಸ್ಸಿನ ಮಾನವೀಯತೆ ಹೊಂದಿರುವ ವ್ಯಕ್ತಿ ಎಂಬ ಹೆಸರನ್ನು. ಆ ಹೆಸರನ್ನು ಕಲಬುರ್ಗಿ ನಗರದ ನಲ್ಲಿ ನೀರು ಕುಡಿದಾಗೊಮ್ಮೆ ನೆನಪಾಗದೇ ಇರದು.

ನೇರ ನುಡಿ ನಡೆಯುಳ್ಳ ಮೇರು ವ್ಯಕ್ತಿ

✿ ಡಾ. ವಿ. ಚಂದ್ರಶೇಖರ

ನಾನು ಬೆಂಗಳೂರಿನಿಂದ ಗುಲ್ಬರ್ಗಾಕ್ಕೆ ವರ್ಗವಾದಾಗ ಶ್ರೀ ಕುಸುಮಾಕರ ದೇಸಾಯಿಯವರ ಮನೆಯಲ್ಲಿ ಬಾಡಿಗೆಗೆ ಇರುವ ಸದವಕಾಶ ಒದಗಿ ಬಂದಿತ್ತು. ಈ ಸಂದರ್ಭದಲ್ಲಿ ಶ್ರೀಯುತರು ಮತ್ತು ಶ್ರೀಮತಿ ಸರಿತಾ ಕುಸುಮಾಕರರವರು ನನ್ನನ್ನು, ನನ್ನ ಧರ್ಮಪತ್ನಿ ಹಾಗೂ ಮಕ್ಕಳನ್ನು ಆದರೋಪಚಾರದಿಂದ ಸತ್ಕರಿಸಿದ್ದನ್ನು ಮರೆಯಲಾಗದು. ಪತಿ-ಪತ್ನಿಯರು ಅತ್ಯಂತ ಉದಾರ ಮತ್ತು ಸಮದರ್ಶಿ ಗುಣವುಳ್ಳ ವ್ಯಕ್ತಿಗಳಾಗಿದ್ದು ನಾವುಗಳು ಅವರ ಮನೆಯಲ್ಲಿ ಮತ್ತು ಗುಲ್ಬರ್ಗಾದಲ್ಲಿರುವವರೆಗೂ ನಮ್ಮನ್ನು ಅವರ ಕುಟುಂಬ ಸದಸ್ಯರಂತೆ ನೋಡಿಕೊಂಡಿದ್ದುದು ಇಂದಿಗೂ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ.

ಶ್ರೀಯುತರು ಸರಳತೆ, ಸಜ್ಜನಿಕೆ, ದೃಢ, ಧೀಮಂತ ವ್ಯಕ್ತಿತ್ವ ಮತ್ತು ಬಿಚ್ಚು ನುಡಿಗಳಿಂದ ಜನರನ್ನು ಆಕರ್ಷಿಸಿದ ಶ್ರೀಮಂತ ವ್ಯಕ್ತಿತ್ವದ ಮಹಾನ್ ಚೇತನ ಎಂದರೆ ತಪ್ಪಾಗಲಾರದು. ಅವರ ಬಗ್ಗೆ ಏನೂ ಹೇಳಿದರೂ ಕಡಿಮೆಯೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ನಾಡಿನ ಗಣ್ಯ ವ್ಯಕ್ತಿಗಳೊಡನೆ ತಾಯ್ನಾಡಿಗೆ ತಮ್ಮ ಪ್ರಾಮಾಣಿಕ ಸೇವೆಯನ್ನು ಸಲ್ಲಿಸುವುದರ ಮೂಲಕ ದೇಶಕ್ಕೆ ತಮ್ಮ ಅಮೂಲ್ಯವಾದ ಕಾಣಿಕೆಯನ್ನು ಸಲ್ಲಿಸಿದ್ದಾರೆ.

ಹೆಸರಾಂತ ನ್ಯಾಯವಾದಿಯಾಗಿ ಬಡವರು, ದೀನ ದಲಿತರೊಡನೆ ಬೆರೆತು, ಅವರ ಕಷ್ಟ-ಸುಖಗಳಲ್ಲಿ ಸಮರ್ಪಕವಾದ ನ್ಯಾಯ ಒದಗಿಸಿಕೊಟ್ಟು, ಅವರಿಗೆ ಸಹಾಯಕರಾಗಿ ತಮ್ಮ ಸರಳ ಸಜ್ಜನಿಕೆಯ ಉದಾತ್ತ ಗುಣವನ್ನು ತೋರಿದ್ದಾರೆ. ಶ್ರೀಯುತರು ಎಂದಿಗೂ ತಮ್ಮ ಕಷ್ಟಗಳನ್ನು ಬೇರೆಯವರೊಡನೆ ಹೇಳಿಕೊಂಡವರಲ್ಲ. ಸದಾ ನಗು ನಗುತ್ತಾ, ನಗಿಸುತ್ತಾ, ಹಾಸ್ಯ ಮನೋಭಾವವುಳ್ಳ ಹೃದಯ ಶ್ರೀಮಂತಿಕೆಯುಳ್ಳವರಾಗಿದ್ದರು. ಬೇರೆಯವರಿಂದ ಸಹಾಯವನ್ನು ನಿರೀಕ್ಷಿಸಿದವರಲ್ಲ. ದುಡಿದು ತಿನ್ನಬೇಕು ಎಂಬ ತತ್ವವನ್ನು ಪಾಲಿಸಿದವರು. ಬಡವ ಬಲ್ಲಿದರ ಕಷ್ಟಗಳಿಗೆ ಸಹಾಯ ನೀಡಿದ ಮಹಾನ್ ವ್ಯಕ್ತಿ ಶ್ರೀ ಕುಸುಮಾಕರ ದೇಸಾಯಿಯವರು.

ಶ್ರೀಯುತರು ಬೆಂಗಳೂರಿಗೆ ಬಂದಾಗ ನಾನು ಆಗಾಗ ಅವರನ್ನು ಭೇಟಿ ಮಾಡುತ್ತಿದ್ದೆ. ತಮ್ಮ ಹಾಸ್ಯ ಚಟಾಕಿಗಳಿಂದ ಮತ್ತು ವಿದ್ವತ್ತಿನಿಂದ ನನ್ನನ್ನು ರಂಜಿಸುತ್ತಿದ್ದರು. ಇಂದಿಗೂ ಅವರ ಸ್ಥೈರ್ಯ, ಧೈರ್ಯ, ಶಿಸ್ತುಗಳು ನಮಗೆ ಸ್ಫೂರ್ತಿಯಾಗಿವೆ.

ಈ ರಾಜ್ಯದ ಮರೆಯಲಾಗದ ವಿಭಿನ್ನ ಅಭಿರುಚಿಯುಳ್ಳ, ಬಹುಮುಖ ಪ್ರತಿಭೆಯುಳ್ಳ, ಮಹಾನ್ ವ್ಯಕ್ತಿಯನ್ನು ಕಳೆದುಕೊಂಡು ಒಂದು ವರ್ಷವಾಗುತ್ತಾ ಬಂದಿರುತ್ತದೆ. ಶ್ರೀಯುತರ ವ್ಯಕಿತ್ವ ಅವರ ಅಮೂಲ್ಯ ಗುಣಗಳು ಈಗಿನ ನಮ್ಮ ಯುವ ಪೀಳಿಗೆಗೆ ಆದರ್ಶಪ್ರಾಯ ಮತ್ತು ಅನುಕರಣೀಯವಾಗಿವೆ.

ಹೃದಯವಂತ

ಬಿ.ಎ. ಸನದಿ

ನಾನು ಬೆಂಗಳೂರಿನಲ್ಲಿ ರಾಜ್ಯ ವಾರ್ತಾ ಇಲಾಖೆಯಲ್ಲಿ ಪಂಚಾಯತಿ ರಾಜ್ಯ ಪತ್ರಿಕೆಯ ಸಹಾಯಕ ಸಂಪಾದಕನಾಗಿ ಕೆಲಸ ಮಾಡುತ್ತಿರುವಾಗಲೇ ಭಾರತ ಸರಕಾರದ ವಾರ್ತಾ ಮತ್ತು ಪ್ರಸಾರ ಇಲಾಖೆಯವರು ಗ್ರಾಮಾಂತರ ಪ್ರಚಾರಾಧಿಕಾರಿಯ ಸ್ಥಾನಕ್ಕೆ ನನ್ನನ್ನು ಆಯ್ಕೆ ಮಾಡಿ ಹೈದ್ರಾಬಾದ್ ಕರ್ನಾಟಕದ ಕಲಬುರ್ಗಿ ವಿಭಾಗಕ್ಕೆ ನಿಯುಕ್ತಿಗೊಳಿಸಿದರು. ನಾನು ಕಲಬುರ್ಗಿಯಲ್ಲಿ ತೆರವಾಗಿದ್ದ ಸ್ಥಾನಕ್ಕೆ ಹೋಗಿ ಹಾಜರಾಗಬೇಕೆಂದು ಆದೇಶ ಬಂದ ದಿನ ನನ್ನಲ್ಲಿ ಒಂದು ತರಹ ಮಿಶ್ರ ಪ್ರತಿಕ್ರಿಯೆಯೇ ಉಂಟಾಯಿತು. ಒಂದು ಕಡೆ ನಾನು ಅವರೆಗೆ ಕಂಡರಿಯದ ಕನ್ನಡ ಕವಿರಾಜಮಾರ್ಗಕಾರ ನೃಪತುಂಗನ ನಾಡಿಗೆ ಹೋಗುವ ಅವಕಾಶ ಬಂತೆಂಬ ಹಿಗ್ಗು, ಮತ್ತೊಂದೆಡೆ ನನ್ನ ಮಡದಿ ಮತ್ತು ಒಂದೂವರೆ ವರ್ಷದ ಮಗಳಿಗೆ ಅಲ್ಲಿಯ ವಾತಾವರಣ ಹಾಗೂ ಹವಾಮಾನಗಳು ಒಗ್ಗಬಹುದೇ ಎಂಬ ಅನುಮಾನ. ಬೆಂಗಳೂರಿನ ನನ್ನ ನಿಕಟ ಸಹೋದ್ಯೋಗಿಗಳಿಗೆ ಮಾತ್ರ ಆ ಆದೇಶದಿಂದ ನನಗಿಂತ ಹೆಚ್ಚಿನ ಆಘಾತವಾದಂತಿತ್ತು. “ಗುಲಬರ್ಗಾಕ್ಕೆ ನೀವು ಹೋಗ್ಲೇಬೇಡಿ ಸಾರ್, ಅಲ್ಲಿಯವರು ತುಂಬಾ ಒರಟು ಜನಾ ಸಾರ್” ಎಂದು ದಿನವಿಡೀ ನಾನು ದ್ವಂದ್ವದಲ್ಲೇ ತೊಳಲಾಡುವಂತೆ ಮಾಡಿದರು. ಆ ದಿನ ಕಚೇರಿಯ ಸಮಯ ಮುಗಿಯುತ್ತ ಬಂದು ಮನೆಗೆ ಹೊರಡುವ ಆಲೋಚನೆ ಮಾಡುತ್ತಿರುವಾಗ ನಮ್ಮ ನಿರ್ದೇಶಕರೂ ನನ್ನ ಹಿತೈಷಿಗಳೂ ಆಗಿದ್ದ ಸಿದ್ಧಯ್ಯ ಪುರಾಣಿಕರಿಂದ ಕರೆ ಬಂತು. ಅವರ ಪ್ರತಿಕ್ರಿಯೆ ಹೇಗೋ ಏನೋ ಎಂದು ಅಳುಕುತ್ತಲೇ ಅವರ ಕೋಣೆಗೆ ಹೋದರೆ ಅವರೇ ಎದ್ದು ಮುಂದೆ ಬಂದು ‘ಅಭಿನಂದನೆಗಳು’ ನಮ್ಮ ನಾಡಿಗೆ ನೀವು ಹೊರಟಿದ್ದೀರಿ. ನಿಮ್ಮ ಆದೇಶ ನೋಡಿ ನನಗಂತೂ ಬಹಳೇ ಆನಂದವಾಯ್ತು” ಎಂದು ಮಾತಿಗಾರಂಭಿಸಿದರು. ಮಾತಿನ ಮಧ್ಯೆ ನನ್ನ ಸಹೋದ್ಯೋಗಿಗಳ ಪ್ರತಿಕ್ರಿಯೆಯ ಬಗ್ಗೆ ತಿಳಿಸಿದಾಗ “ನೀವೀಗ ಯಾರ ಮಾತಿಗೂ ಕಿವಿಗೊಡದೆ ಆದಷ್ಟು ಬೇಗ ಹೋಗಿ ಹಾಜರಾಗಿರಿ. ನಾಳೆ ನಿಮ್ಮ ಮನೆಯವರನ್ನೂ ಕರೆದುಕೊಂಡು ನಮ್ಮಲ್ಲೇ ಊಟಕ್ಕೆ ಬರ್ರಿ. ಕಲಬುರ್ಗಿಯ ಕೆಲವು ಮಿತ್ರರಿಗೆ ಪತ್ರಗಳನ್ನು ಕೊಡುತ್ತೇನೆ. ಅವರು ನಿಶ್ಚಿತವಾಗಿ ನಿಮಗೆ ಎಲ್ಲ ಅನುಕೂಲತೆ ಮಾಡಿಕೊಡುತ್ತಾರೆ” ಎಂದು ಹುರಿದುಂಬಿಸಿದರು. ಮನೆಗೆ ಹೋಗಿ ಆ ದಿನವಿಡೀ ಕಚೇರಿಯಲ್ಲಿ ನಡೆದುದನ್ನು ಮಡದಿಗೆ ವರದಿ ಒಪ್ಪಿಸುತ್ತಿರುವಂತೆಯೇ “ಒಳ್ಳೆಯದಾಯ್ತು ನಡೀರಿ, ನಾಳೆಯಿಂದಲೇ ಸಾಮಾನು ಪ್ಯಾಕಿಂಗ್ ಶುರುಮಾಡಿಬಿಡ್ತೀನಿ” ಎಂದು ಉತ್ಸಾಹ ಪ್ರಕಟಿಸಿ ನನ್ನನ್ನು ಕಚೇರಿಯ ದ್ವಂದ್ವಗಳಿಂದ ಮುಕ್ತಗೊಳಿಸಿದಳು.

ಈ ಹಿನ್ನೆಲೆಯಿಂದ ನಾವು ಗಂಟು-ಗದಡಿ ಕಟ್ಟಿಕೊಂಡು ೧೯೬೪ ರ ಜೂನ್ ತಿಂಗಳ ೭ ರಂದು ಕಲಬುರ್ಗಿಯ ಹೊಸಲು ತುಳಿದವು. ಶ್ರೀ ಸಿದ್ಧಯ್ಯನವರು ಎಷ್ಟೆಲ್ಲ ಧೈರ್ಯ ತುಂಬಿ

ಸಹಾಯ ಸಹಕಾರಗಳಿಗಾಗಿ ಐದಾರು ಮಿತ್ರರಿಗೆ ಪರಿಚಯ ಪತ್ರಗಳನ್ನು ಬರೆದುಕೊಟ್ಟಿದ್ದು, ಹೊಸ ಊರಲ್ಲಿ ಹೊಸ ಜನರ ನಡುವೆ ನಮ್ಮ ಬದುಕು ಹೇಗೆ ಸಾಗುವುದೋ ಎಂಬ ಅಳುಕು ಒಳಗೊಳಗೇ ಕೊರೆಯುತ್ತಲೇ ಇತ್ತು. ಆದರೂ ಪುರಾಣಿಕರ ಪರಿಚಯದವರ ಮನೆಗಳಿಗೆ ಹೋಗಿ ಅವರ ಪತ್ರಗಳನ್ನು ತಲುಪಿಸಿ ಸ್ವ-ಪರಿಚಯ ಮಾಡಿಕೊಳ್ಳುವುದೆಂದರೆ ನನಗೇಕೋ ಮುಜುಗರವೆನಿಸಿತು. ಮೊದಲನೆಯ ದಿನವೇ ನಿಲ್ದಾಣದಲ್ಲಿ ನಮ್ಮ ಸ್ವಾಗತಕ್ಕೆ ಬಂದು ನಂತರ ಕೆಲದಿನ ಪ್ರತಿದಿನ ಸಾಯಂಕಾಲ ಭೆಟ್ಟಿಯಾಗಿ ಹೋಗುತ್ತಿದ್ದ ಕನ್ನಡ ಕವಿ ಮ.ಗು. ಬಿರಾದಾರ ಹಾಗೇ ಉರ್ದು ಕವಿ ಹಮೀದ್ ಅಲ್ಮಾಸ್ ಅವರ ಆತ್ಮೀಯ ಮಾತುಕತೆ ಸ್ಥಾನಿಕ ಜೀವನ ಪರಿಚಯ, ಕೌಟುಂಬಿಕ ಅನುಕೂಲತೆಗಳಿಂದಾಗಿ ನಮ್ಮ ಸಂಸಾರದ ರಥ ನಿಧಾನವಾಗಿ ಚಲಿಸಲಾರಂಭಿಸಿತು. ಮೊದಲು ಮರಾಠಿ ಭಾಷಿಕ ಅಧಿಕಾರಿಯ ವರ್ಗವಾಗಿ ಆ ಸ್ಥಾನಕ್ಕೆ ಕನ್ನಡ ಅಧಿಕಾರಿ ಬಂದಿದ್ದರೆಂಬುದೇ ಆ ನಗರದ ಕನ್ನಡ ವಲಯಗಳಲ್ಲಿ ಒಂದು ಸುದ್ದಿಯಾಗಿತ್ತು. ಅಷ್ಟಲ್ಲದೇ, ಕನ್ನಡ ಕವಿಯೆಂಬ ಚಾರೂಚೂರೂ ಖ್ಯಾತಿ ಬೇರೆ ಇತ್ತಲ್ಲ. ಹೀಗಾಗಿ ಕನ್ನಡ ಸಾಹಿತ್ಯದಲ್ಲಿ ಆಸಕ್ತಿಯುಳ್ಳ ಕೆಲವರು ತಾವಾಗಿಯೇ ನಮ್ಮ ಮನೆಯವರೆಗೆ ಬಂದು ಪರಿಚಯ ಮಾಡಿಕೊಂಡರು. ಈ ಮಾತನ್ನು ನನ್ನ ದೊಡ್ಡಸ್ತಿಕೆ ತೋರಿಸಿಕೊಳ್ಳಲು ನಾನಿಲ್ಲಿ ಹೇಳುತ್ತಿಲ್ಲ. ಹೀಗೆ ಸಹಜ ರೀತಿಯಲ್ಲೇ ನನಗೆ ಬರುಬರುತ್ತ ನನ್ನ ಇಡೀ ಪರಿವಾರಕ್ಕೆ ಪರಿಚಿತವಾಗಿ ಮುಂದೆ ಪರಸ್ಪರ ಸುಖ-ದುಃಖಗಳಲ್ಲಿ ಸಹಭಾಗಿಯಾಗುವಷ್ಟು ಆತ್ಮೀಯತೆ ಬೆಳೆಸಿಕೊಂಡ ದಂಪತಿಗಳ ದೊಡ್ಡಸ್ತಿಕೆಯ ಬಗ್ಗೆ ಹೇಳುವುದಿದೆಯೆಂದು ನನ್ನ ಖ್ಯಾತಿಯ ಮಾತೆತ್ತಬೇಕಾಯಿತು.

೧೯೬೪-೬೮ರ ಅವಧಿಯಲ್ಲಿ ನಾವು ಕಲಬುರ್ಗಿಯಲ್ಲಿದ್ದಷ್ಟು ಕಾಲ ಕಲಬುರ್ಗಿಗೂ ನಮ್ಮ ಸ್ವಂತ ಊರಿಗೂ ಅಂತರವೇ ಇಲ್ಲವೆನಿಸುವಂಥ ಆತ್ಮೀಯತೆಯ ಧಾರೆಯೆರದ ಆ ದಂಪತಿಗಳೆಂದರೆ ಕುಸುಮಾಕರ ಮತ್ತು ಸರಿತಾ ದೇಸಾಯಿ. ತಮ್ಮ ಮೊದಲ ಮುಲಾಖಾತ್‌ದಲ್ಲಿ ಕುಸುಮಾಕರರು ಸುಲಿದ ಬಾಳೆಯ ಹಣ್ಣಿನಂದದಿ ಅತ್ಯಂತ ಅನಾಯಾಸವಾಗಿ ನಮ್ಮೊಡನೆ ತಮ್ಮ ನಿಜಾಮಶಾಹೀ ಉರ್ದು ಭಾಷೆಯಲ್ಲಿ ಮಾತಾಡಲು ಶುರು ಮಾಡಿದರು. ಅವರ ಮಾತಿನ ಅರ್ಧಕ್ಕರ್ಧ ಭಾಗ ನನ್ನ ತಲೆಯ ಮೇಲಿಂದಲೇ ಹೋಗುತ್ತಿದ್ದುದನ್ನು ಗಮನಿಸಿದ ಅವರ ಮಡದಿ ಸರಿತಾ "ರೀ ಮಾರಾಯ್ರೇ ನನದಿಯವ್ರು ಒಬ್ಬ ಕನ್ನಡ ಕವಿ ಅಂಬೋದು ಮರ್ತ ಹೋಯ್ತೇನು? ಛಂದಾಂಗ ಕನ್ನಡದೊಳಗ ಮಾತಾಡಬಾರ್ದ?" ಅಂತ ಕಡೆ ಹಾಡಿದಾಗ ಅವರ ಉರ್ದು ಎಕ್ಸ್‌ಪ್ರೆಸ್ ಗಕ್ಕನೇ ನಿಂತಿತು. ಆದರೂ "ಸಾರೀ ಹಂ, ಮುಝುಸೇ ಭೂಲ್ ಹೋಗಯೇ" ಅಂತ ಕ್ಷಮಾಯಾಚನೆಯನ್ನು ನಾಟಕೀಯವಾಗಿ ಉರ್ದು ಭಾಷೆಯಲ್ಲೇ ಮಾಡಿ, ತಮ್ಮ ಮಾತನ್ನು ಕನ್ನಡದಲ್ಲಿ ಮುಂದುವರಿಸಿದರು. ನಮ್ಮಿಂದ ಕೊಂಚ ದೂರದಲ್ಲಿ ಕೂತಿದ್ದ ನನ್ನಾಕೆ ಸರಿತಾ ಕೈಯಲ್ಲಿ ಕೈಯಿಟ್ಟು ಹಳೆಯ ಗೆಳತಿಯೊಬ್ಬಳ ಜತೆ ಮಾತಾಡುವಷ್ಟು ಸಲುಗೆಯಿಂದ ಸಲ್ಲಾಪ ನಡೆಸಿದ್ದಳು.

ನನ್ನ ಒಂದೂವರೆ ವರ್ಷದ ಮಗಳು ಅಷ್ಟರಲ್ಲೇ ತಾಯಿಯ ತೊಡೆಯಿಂದ ಸರಿತಾರ ತೊಡೆಗೆ ಸ್ಥಳಾಂತರಗೊಂಡಿದ್ದಳು. ಇತ್ತ ಕುಸುಮಾಕರರು ತಮ್ಮ ಸರಸ ಶೈಲಿಯಲ್ಲಿ ಹಾಸ್ಯ ಚಟಾಕಿಗಳನ್ನು ಹಾರಿಸುತ್ತಲೇ ತಮ್ಮ ಜೀವನದ ನಾಲ್ಕಾರು ಘಟನೆಗಳನ್ನು ನನಗೆ ವಿವರಿಸಿದರು. ಕಲಬುರ್ಗಿಯಲ್ಲಿ ಯಾವಾಗಲೂ ಯಾವ ಅಡಚಣೆ ಬಂದರೂ ತಾವಿರುವುದನ್ನು ಮರೆಯಕೂಡದೆಂದು ನನಗೆ ಎಚ್ಚರಿಕೆ ನೀಡಿದರು. ನನ್ನವಳು ಟೀ ತಯಾರಿಸಲೆಂದು ಒಳಗೆ ಹೋದಾಗ ಸರಿತಾ ನಮ್ಮ ಹತ್ತಿರ ಬಂದು ನಮ್ಮ ಮಾತಿಗೆ ಕಲಬುರ್ಗಿಯಲ್ಲಿ ನಡೆದಿದ್ದ ಕನ್ನಡ ಸಾಹಿತ್ಯಕೃಷಿಯ ದಿಕ್ಕು ತೋರಿಸಿದರು. ಸರಿತಾ ಅವರು ಆಗಲೇ ಉತ್ಸಾಹದಿಂದ ಕತೆಗಳನ್ನು ಬರೆಯಲಾರಂಭಿಸಿದ್ದರು. ಕತೆಯ ಒಂದೊಂದು ವಸ್ತುವನ್ನೂ ಅವರು ಕಥಾರೂಪದಲ್ಲಿಳಿಸುವ ಮುನ್ನ ಆನಂತರ ಕುಸುಮಾಕರರೊಡನೆ ಚರ್ಚಿಸುವ ರೂಢಿಯಿಟ್ಟುಕೊಂಡ ಬಗ್ಗೆ ಹೇಳುತ್ತಾ "ನನ್ನ ಬರವಣಿಗೆಗೆಲ್ಲಾ ಇವರೇ ಮೊದಲ ವಾಚಕ, ಇವರೇ ಮಾದರಿ ವಿಮರ್ಶಕ" ಎಂದು ಮೃದುವಾಗಿ ಅವರ ಬೆನ್ನು ತಟ್ಟಿದರು. ಕುಸುಮಾಕರರು ಸರ್‍ರನೆ ಹಿಂದೆ ಸರಿದಂತೆ ಮಾಡಿ "ಅರೇ ಭಾಯೀ ಏ ಸನದೀಕಾ ಮಕಾನ್ ಹೈ" ಎಂದು ಮತ್ತೆ ಉರ್ದುವಿನಲ್ಲೇ ಹಗುರಾಗಿ ಪ್ರತಿಕ್ರಿಯಿಸಿದರು. ಅಷ್ಟರಲ್ಲಿ ಒಳಗಿನಿಂದ ತಿಂಡಿಯ ತಟ್ಟೆ ಬಂತು, "ಚಹದ ಟ್ರೇ ಬಂತು. ಚಹಾದ ಜೋಡೀ ಚೂಡಾ ಇದ್ದಾಂಗ ನಮ್ಮದು ಕನ್ನಡದ ಜೋಡೀ ಉರ್ದು ಉಳ್ಕೊಂಡೇ ಬಿಟ್ಟಿದ ನೋಡ್ರಿ" ಎಂದು ಕುಸುಮಾಕರರು ನಮ್ಮನ್ನೆಲ್ಲಾ ನಗಿಸುತ್ತಲೇ ಚಹ ಹೀರಿದರು. 'ನಕ್ಕು ನಗಿಸುವಾ ನಗೆ ಲೇಸು' ಎಂದು ಹೇಳಿದ ಸರ್ವಜ್ಞನ ಮಾತು ಕುಸುಮಾಕರರ ಮಾತಿನುದ್ದಕ್ಕೂ ಲೇಸಾಗಿ ಹೆಣೆದುಕೊಂಡಂತಿತ್ತು. ಅವರಿಬ್ಬರೂ ಮರಳಿ ಹೋಗಲೆಂದೆದ್ದು ನಿಂತಾಗ ನಾನೆಂದೆ, "ಪಾಪ, ಮನೆಯಲ್ಲಿ ಮಕ್ಕಳು ದಾರಿ ಕಾಯ್ತಿರಬೇಕೇನೋ" "ಛೇ ಛೇ, ದೇವ್ರು, ಇನ್ನೂ ಆ ಚಿಂತೆಯನ್ನ ನಮಗೆ ಹಚ್ಚಿಲ್ಲ ಬಿಡ್ರಿ" . ಕುಸುಮಾಕರರೇ ನಗುನಗುತ್ತಲೇ ಆ ಮಾತು ಹೇಳಿದ್ದರು.

ಆ ಮಾತಿನ ಹಿಂದಿನ ನೋವು ಸರಿತಾ ಅವರ ಮೊಗದಲ್ಲಿ ಮೂಡಿ ಮಾಯವಾದುದನ್ನು ಗಮನಿಸಿ, ನಮ್ಮ ಪ್ರಥಮ ಪರಿಚಯದಲ್ಲಿ ತಾನಾಗಿ ಆ ಮಾತೆತ್ತಿ ತಪ್ಪು ಮಾಡಿದಂತಾಗಿತ್ತೆಂದು ನನಗೇ ಒಳಗೊಳಗೆ ಪಶ್ಚಾತ್ತಾಪವಾಯಿತು. ಆದರೂ ಆ ನಮ್ಮ ಪಹಲೀ ಮುಲಾಖಾತ್‌ನಲ್ಲೇ ಕುಸುಮಾಕರ ಮತ್ತು ಸರಿತಾ ಇಬ್ಬರೂ ಮೇಡ್ ಫಾರ್ ಈಚ್ ಅದರ್ ಜೋಡಿ ಎಂದೆನಿಸಿ ನನಗೆ ತುಂಬ ಖುಷಿಯಾಯಿತು. ಇದು ನಮ್ಮ ಮೈತ್ರಿಯ ನಾಂದಿಮಾತ್ರ.

ಮುಂದೆ ನಮ್ಮ ನಡುವಿನ ಪ್ರತ್ಯೇಕತೆಯೇ ಕರಗುತ್ತ ಹೋಯಿತು. ಅದಕ್ಕೆ ವಸುದೈವ ಕುಟುಂಬಕಂ' ಎಂಬುದು ಒಂದು ಕಾರಣವಾದರೆ ನಮ್ಮ ಪುಟ್ಟ ಮಗಳ ವಿಷಯದಲ್ಲಿ ಅವರಲ್ಲಿ ಅಂಕುರಿಸಿ ಬೆಳೆಯುತ್ತ ಹೋದ ಮಹತ್ವವೂ ಮುಖ್ಯ ಕಾರಣವಾಗಿತ್ತು. ಕಲಬುರ್ಗಿಯ ಸ್ಟೇಶನ್ ರೋಡಿಗೆ ಬಂದಾಗಲೆಲ್ಲ ಅವರು ನಮ್ಮ ಮನೆಗೆ ಬರುವುದು, ನಾವು ಊರಲ್ಲಿ ಹೋದಾಗಲೆಲ್ಲ

ಅವರ ಮನೆಗೆ ಹೋಗುವುದು, ಏನಿಲ್ಲವೆಂದರೂ ತಾಜಾ ತಾಜಾ ಮಜ್ಜಿಗೆಯ (ಮಗಳಿಗೆ ಹಾಲು) ಆತಿಥ್ಯ ಪಡೆದು ಬರುವುದು ಸಾಮಾನ್ಯವಾಯಿತು. ಈ ಮಧ್ಯೆ ಸರಿತಾ ಅವರು ಬರೆದ ಹೊಸ ಕತೆಯ ಮಸಿ ಆರದಿರುವಾಗಲೇ ಓದಿ ಚರ್ಚಿಸುವುದೂ ನಮ್ಮ ಮೈತ್ರಿಯ ಕಾರ್ಯಸೂಚಿಯಾಯಿತು. ನಡುನಡುವೆ ಕುಸುಮಾಕರರು ಹೈದ್ರಾಬಾದ್ ಕರ್ನಾಟಕದ ವಿಮೋಚನಾ ಆಂದೋಲನ ಹಾಗೂ ತದನಂತರದ ಜೀವನ ಪರಿವರ್ತನೆಯ ವಿಷಯವಾಗಿ ಆವೇಶಭರಿತರಾಗಿ ಕೆಲವೊಮ್ಮೆ ಭಾವುಕರಾಗಿ ಮಾತಾಡುತ್ತ ಕುಳಿತಾಗ ನಾನಂತೂ ಕುತೂಹಲದಿಂದ ಕಣ್ಣು ಕಿವಿ ಒಂದು ಮಾಡಿ ಕೇಳುತ್ತಾ ಕೂತಿರುತ್ತಿದ್ದೆ. ನಮ್ಮ ಮಧುರ ಮೈತ್ರಿಗೆ ಮತ್ತಷ್ಟು ಜೇನುತುಪ್ಪ ಬೆರೆಸಿದವರು ಆಗಷ್ಟೆ ಕಲಬುರ್ಗಿಯ ಮುನ್ಸಿಪಲ್ ಕಮಿಷನರಾಗಿ ಬಂದ ಕತೆಗಾರ ಜಯತೀರ್ಥ ರಾಜಪುರೋಹಿತರು. ಈ ಮೈತ್ರಿಕೋನದ ಬಗ್ಗೆ ಏನು ಎಷ್ಟು ಬರೆಯಬೇಕೋ ತಿಳಿಯದು. ಅಂದಿನ ನಮ್ಮ ಬೈಠಕ್‌ಗಳ ಸೊಗಸೇ ಸೊಗಸು.

ನಾವು ಕಲಬುರ್ಗಿಯಲ್ಲಿ ಕಳೆದದ್ದು ಐದು ವರ್ಷಗಳ ಕಾಲ. ಅಲ್ಲಿಂದ ಹೊಸ ಹುದ್ದೆಯೊಂದಕ್ಕೆ ಆಯ್ಕೆಯಾಗಿ ಗುಜರಾತಕ್ಕೆ ಹೊರಡುವ ಸಂದರ್ಭ ಬಂದಾಗ ನಾವು ಅನುಭವಿಸಿದ ಸಂಕಟಮಿಶ್ರಿತ ಸಂಭ್ರಮದ ಕುರಿತು ಹೇಳುವುದು ಬಲು ಕಷ್ಟ. ಕಲಬುರ್ಗಿಯ ತುಂಬೆಲ್ಲ ಹರಡಿದ ಪ್ರೀತಿ-ಬಂಧನದಿಂದ ಬಿಡಿಸಿಕೊಂಡು ಹೊರಡುವ ಸಂಕಟ ಒಳಗೊಳಗೇ ಕುದಿಯುತ್ತಿದ್ದರೆ, ಅಯಾಚಿತವಾಗಿ ಮಹಾತ್ಮಾಗಾಂಧೀಜಿಯವರ ನಾಡಿನಲ್ಲಿ ಕೆಲಸ ಮಾಡುವ ಅವಕಾಶಬಂದ ಬಗ್ಗೆ ಸಂಭ್ರಮವೂ ಅನಿಸುತ್ತಿತ್ತು. ಆಗ ವೈಯಕ್ತಿಕ ಹಾಗೂ ಸಾಂಸ್ಥಿಕ ಸ್ತರದಲ್ಲಿ ಹಲವೊಂದು ಬೀಳ್ಕೊಡುವ ಸಮಾರಂಭಗಳು ನಡೆದವು. ಆದರೆ ಕುಸುಮಾಕರ ದೇಸಾಯಿ ಮತ್ತು ಸರಿತಾ ಅವರು ತಮ್ಮ ಮನೆಯ ಆವರಣದಲ್ಲಿ ಕಲಬುರ್ಗಿಯ ಕನ್ನಡ, ಹಿಂದಿ, ಮರಾಠಿ, ಉರ್ದು ಲೇಖಕರನ್ನು ಅಧ್ಯಾಪಕ ಮಿತ್ರರನ್ನೂ ಕೆಲವು ಸಾಮಾಜಿಕ ಕಾರ್ಯಕರ್ತರನ್ನೂ ಒಂದೆಡೆ ಸೇರಿಸಿ ಕೊಟ್ಟ ಔತಣಕೂಟ ಮಾತ್ರ ನಮ್ಮ ಜೀವನದಲ್ಲೇ ಅವಿಸ್ಮರಣೀಯ.

ನಾನು ಮೂರು ವರ್ಷ ಅಹಮದಾಬಾದ್‌ದಲ್ಲಿ ಕಳೆದು ೧೯೭೨ ರಲ್ಲಿ ಮುಂಬಯಿ ಆಕಾಶವಾಣಿಗೆ ವರ್ಗವಾಗಿ ಬಂದ ಬಳಿಕ ಮತ್ತೆ ಕಲಬುರ್ಗಿಯ ಮೈತ್ರಿಯ ಗಾಳಿ ಬೀಸತೊಡಗಿತು. ಕುಸುಮಾಕರ ದೇಸಾಯಿ ಮತ್ತು ಸರಿತಾ ಅವರು ಆಗಾಗ ಮುಂಬಯಿಗೆ ಬರುತ್ತಲೇ ಇದ್ದರು. ಅವರ ಬಂಧು ಡಾ. ಎ. ಪಿ. ದೇಸಾಯಿ ಮುಂಬಯಿಯ ಪ್ರಸಿದ್ಧ ಕೆ.ಈ.ಎಂ. ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು. ಕುಸುಮಾಕರ ದೇಸಾಯಿ ದಂಪತಿಗಳು ಮುಂಬಯಿಗೆ ಬಂದಾಗಲೆಲ್ಲ ಅಲ್ಲಿಯ ನಮ್ಮ ಅವಸರದ ಬದುಕಿನಲ್ಲೂ ಬಿಡುವು ಮಾಡಿಕೊಂಡು ಅವರಲ್ಲಿಗೆ ಹೋಗಿ ಒಂದೆರಡು ತಾಸು ಕಳೆದು ಬರುವುದು ಸರಿತಾ ಕುಸುಮಾಕರ ದೇಸಾಯಿಯವರ ಕತೆಗಳನ್ನು ಪ್ರಕಟಿಸುತ್ತಿದ್ದ 'ತಾಯಿ ನುಡಿ' ಪತ್ರಿಕೆಯ

ಸಂಪಾದಕ ಶ್ರೀ ಡಿ. ಕೆ. ಮೆಂಡನ್ ಅವರನ್ನು ಜತೆಗೆ ಕರೆದೊಯ್ಯುವುದು, ಸಂಜೆಯ ವೇಳೆ ಮುಂಬಯಿಯ ಲೋಕಲ್ ರೈಲು ಅಥವಾ ಬಸ್‌ಗಳಲ್ಲಿ ಸಂಚರಿಸುವ ತ್ರಾಸು ಬೇಡವೆಂದು ಮನೆಗೆ ಕರೆದೊಯ್ಯದೇ ಹತ್ತಿರದ ಉಡುಪಿ ಹೋಟೆಲ್‌ನಲ್ಲೇ ಆತಿಥ್ಯ ನೀಡಿ ಮನೆಗೆ ಮರಳುವುದೂ ನಡೆಯಿತು. ಆ ಮಧ್ಯೆ ಸರಿತಾ ಅವರು ಹೈದ್ರಾಬಾದ್ ಕರ್ನಾಟಕ ಲೇಖಿಕಿಯರ ಸಂಘದ ಪರವಾಗಿ ನಮಗೆಲ್ಲ ಆತ್ಮೀಯರಾಗಿದ್ದ ಕಾದಂಬರಿಗಾರ್ತಿ ಡಾ. ಅನುಪಮಾ ನಿರಂಜನ ಅವರ ಸಮಗ್ರ ಸಾಹಿತ್ಯವನ್ನು ಕುರಿತು ವಿಚಾರಗೋಷ್ಠಿಗಳನ್ನು ಅವರ ಸನ್ಮಾನ ಸಮಾರಂಭವನ್ನು ಕಲಬುರ್ಗಿಯಲ್ಲಿ ಹಮ್ಮಿಕೊಂಡಾಗ, ನಾನು ಬಂದು ಭಾಗವಹಿಸಬೇಕೆಂದು ಒತ್ತಾಯಿಸಿದ್ದರು. ಆ ಎರಡು ದಿನಗಳ ಕಾರ್ಯಕ್ರಮದ ವ್ಯವಸ್ಥೆ ಮತ್ತು ಆತಿಥ್ಯ ಎಂದೆಂದೂ ಮರೆಯಲಾಗದ್ದು. ಸರಿತಾ ಅವರು ಮುಂದಾಗಿ ಹೂಡಿದ ಈ ಕಾರ್ಯಕ್ರಮದ ಒಂದೊಂದು ಗಳಿಗೆಯಲ್ಲೂ ಬೆಂಬಲ ನೀಡಿದವರು ಕುಸುಮಾಕರ ದೇಸಾಯಿ. ಇಂಗ್ಲೀಷಿನಲ್ಲಿ "ಈಸ್ ಎ ವುಮೆನ್ ಬಿಹೈಂಡ್ ಎವೆರೀ ಸಕ್ಸಸ್‌ಫುಲ್ ಮ್ಯಾನ್" ಅಂತ ಹೇಳುತ್ತಾರೆ. ಆ ಕಾರ್ಯಕ್ರಮದ ಸಂದರ್ಭದಲ್ಲಿ ನಾನು ದೇಸಾಯಿ ದಂಪತಿಗಳ ಅನ್ಯೋನ್ಯ ಪ್ರೋತ್ಸಾಹದ ಬಗ್ಗೆ ಮೆಚ್ಚಿಕೆ ವ್ಯಕ್ತಪಡಿಸುತ್ತ ಈ ಜೋಡಿಯ ವಿಷಯದಲ್ಲಿ "ಹೂ ಈಸ್ ಬಿಹೈಂಡ್ ವುಮೆನ್" ಎಂದು ಕೇಳಬೇಕೆನಿಸುತ್ತದೆ ಎಂದು ಹೇಳಿದ್ದು ನೆನಪಿದೆ. ಮುಂದೆ ಕರ್ನಾಟಕದಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರ ನೇತೃತ್ವದ ಜನತಾಪಕ್ಷ ಅಧಿಕಾರಕ್ಕೆ ಬಂದಾಗ, ದೇಸಾಯಿ ದಂಪತಿಗಳ ಬದುಕಿಗೊಂದು ಹೊಸ ತಿರುವು ಬಂತು. ಅವರಿಬ್ಬರೂ ಕಲಬುರ್ಗಿಯ ಕೋರ್ಟಿನಾವರಣದಿಂದ ಬೆಂಗಳೂರಿನ ವಿಧಾನಸೌಧದಾವರಣದಲ್ಲಿ ಪಾದಾರ್ಪಣ ಮಾಡಬೇಕಾಯಿತು. ದೇಸಾಯಿ ದಂಪತಿಗಳು ಕಲಬುರ್ಗಿ ನಾಡಿನಲ್ಲಿ ಆಗ ಜನತಾಪಕ್ಷದ ವಿಜಯ ಸಂಪಾದನೆಗಾಗಿ ಸದ್ದಿಲ್ಲದೆ ದುಡಿದು ಶ್ರೀ ಹೆಗಡೆಯವರ ಹೃದಯಕ್ಕೆ ಹತ್ತಿರವಾಗಿದ್ದರು. ದೇಸಾಯಿ ಅವರು ಪಟ್ಟಪರಿಶ್ರಮಕ್ಕಾಗಿ ಕೃತಜ್ಞತೆಯ ರೂಪದಲ್ಲಿ ರಾಜ್ಯದ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷಪದ ಅವರನ್ನು ಅರಸಿಕೊಂಡು ಬಂತು. ಆಗ ಸದಾಶಿವನಗರದಲ್ಲಿದ್ದ ಅವರ ಮನೆಗೆ ಹೋದ ಒಂದು ದಿನ ನನಗೆ ಕಂಡದ್ದು ಕಲಬುರ್ಗಿಯ ಆತ್ಮೀಯ ದೇಸಾಯಿಯವರೇ. ರಾಜಕಾರಣ ಗಾಳಿಯಲ್ಲಿ ಅವರ ತಲೆ ಸಮತೋಲನವನ್ನು ಕಳೆದುಕೊಂಡಿರಲೇ ಇಲ್ಲ. ರಾಜಕೀಯಕ್ಕಿಳಿದು ಅವರ ಇಡೀ ರಾಜ್ಯದ ತುಂಬ ಹೊಸ ಹೊಸ ಮಿತ್ರರನ್ನು ಸಂಪಾದಿಸಿದರಲ್ಲದೆ, ಧನವನ್ನಲ್ಲ, ದೌಲತ್ತನ್ನಲ್ಲ.

ಅಜಾನುಬಾಹು ಮೈಕಟ್ಟುಳ್ಳ ಕುಸುಮಾಕರರು ತುಂಬ ಹೃದಯವಂತರೆಂದು ಅವರ ಮೈತ್ರಿಯುದ್ದಕ್ಕೂ ಕಂಡುಕೊಂಡಿದ್ದ ನನಗೆ ಅವರ ಹೃದಯದೊಳಗಿನ ಬಳಲಿಕೆಯ ಸುಳಿವೇ ಸಿಕ್ಕಿರಲಿಲ್ಲ. ೧೯೮೭ ರ ಒಂದು ದಿನ ಅಕಸ್ಮಾತ್ತಾಗಿ ಸರಿತಾ ಅವರ ಫೋನ್ ಬಂದಾಗ "ಎಲ್ಲಿಂದ ಮಾತಾಡ್ತ ಇದ್ದೀರಿ? ದೇಸಾಯಿಯರು ಹೇಗಿದ್ದಾರೆ?" ಎಂದು ನಾನು ಕೇಳಿದೆ.

"ನಾವು ನಿಮ್ಮ ಮುಂಬೈಗೇ ಬಂದಿದ್ದೇವೆ ಕೊಲಾಬಾದಲ್ಲಿರುವ ಗೋದಾವರಿ ಗೆಸ್ಟ್‌ಹೌಸ್‌ದಲ್ಲಿ ಉಳಿದುಕೊಂಡಿದ್ದೇವೆ. ಮುಂದಿನವಾರ ದೇಸಾಯಿಯವರ ಓಪನ್ ಹಾರ್ಟ್ ಸರ್ಜರಿ 'ಇಲ್ಲಿಯ ನಾನಾವಟಿ ಆಸ್ಪತ್ರೆಯಲ್ಲಿ' ಎಂದು ಸರಿತಾ ಉತ್ತರಿಸಿದಾಗ ನನಗೆ ನಂಬುವುದಕ್ಕೇ ಆಗಲಿಲ್ಲ. ಸರಿತಾ ಅವರು ನಾನು ಎದುರಿಗೇ ಕುಳಿತಿರಬಹುದೆಂಬಷ್ಟು ಸಲಿಗೆಯಿಂದ ತಾವು ಕಲಬುರ್ಗಿಯಿಂದ ಬೆಂಗಳೂರಿಗೆ ಹೋದ ನಂತರದ ವಿದ್ಯಾಮಾನಗಳನ್ನೆಲ್ಲಾ ವಿವರಿಸಿದರು ದೇಸಾಯಿಯವರ ಅವಿರತ ದುಡಿಮೆಯಿಂದ ಮಾನಸಿಕ ಒತ್ತಡ ಬೆಳೆಯುತ್ತ ಹೋದ ಘಟನೆಯನ್ನು ವಿವರಿಸುತ್ತ ಮುಂಬಯಿಯ ಕೆಲ ಮಿತ್ರರಿಗೆ ತಮ್ಮ ನೆನಪು ನಮನಗಳನ್ನು ತಿಳಿಸಿ. ನಿಮಗೆ ಅನುಕೂಲವಾದಾಗ ಗೋದಾವರಿಗೆ ಬಂದು ಹೋಗಿರಿ" ಎಂದೂ ತಿಳಿಸಿದರು. ಮರುದಿನವೇ ನಾನು 'ಗೋದಾವರಿ' ಹುಡುಕಿಕೊಂಡು ಹೋಗಿ ದೇಸಾಯಿಯವರೊಡನೆ ಬಹಳ ಹೊತ್ತು ಮಾತಾಡಿ ಎದ್ದು ಬರುವಾಗ ಅವರು ಬಂದ ಉದ್ದೇಶ ಸಫಲಗೊಳ್ಳಲೆಂದು ಹಾರೈಸುತ್ತ, "ಕುಸುಮಾಕರಜೀ ಹಮ್ ಆಪಕೇ ಸಾಥ್ ಹೈ" ಎಂದು ಕೈಕುಲುಕಿದಾಗ ಅವರು ತುಂಬು ಹೃದಯದಿಂದ ಬಿಗಿದಪ್ಪಿದ ಆ ಗಳಿಗೆ ಅವಿಸ್ಮರಣೀಯ.

ಅವರು ಮುಂಬಯಿಯ 'ನಾನಾವಟಿ ಆಸ್ಪತ್ರೆ'ಯಲ್ಲಿ ಪ್ರವೇಶ ಪಡೆದು ಹೃದಯ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಹೊರಟ ನಂತರದ ಅವರ ರಸಿಕ ಹೃದಯದ ನಗೆ ಮಾತುಗಳನ್ನು ಕೇಳಿ ಅವರ ಹೃದಯಕ್ಕೇನಾದರೂ ಆಗಿತ್ತೋ ಇಲ್ಲವೋ ಎಂದೆನಿಸುವಂತಿತ್ತು. ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ಮುಗಿದೊಡನೆ ಸರಿತಾ ಅವರ ಸೂಚನೆಯಂತೆ ನಾನೇ ಅಂಚೆ ಕಚೇರಿಗೆ ಹೋಗಿ ಶ್ರೀ ರಾಮಕೃಷ್ಣ ಹೆಗಡೆ, ಜೆ. ಎಚ್. ಪಟೇಲ್ ಮುಂತಾದ ರಾಜಕೀಯ ಪ್ರಮುಖರಿಗೆ ತಂತಿಗಳನ್ನು ಕಳಿಸಿದ್ದೆ. ತತ್ಪರಿಣಾಮವಾಗಿ ಬೆಂಗಳೂರಿನಿಂದ ಸರಿತಾ ಅವರಿಗೆ ಫೋನಿನ ಮೇಲೆ ಫೋನು, ತಂತಿ ಮೇಲೆ ತಂತಿ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಕುಸುಮಾಕರ ದೇಸಾಯಿಯರ ಹೃದಯದ್ಯೆಸಿರಿಯೇ ಅವರ ಲೋಕಪ್ರೀತಿಯ ಕೇಂದ್ರ ಬಿಂದುವಾಗಿತ್ತು.

ಮಾರ್ಗದರ್ಶಿ

ಡಾ. ಸ್ವಾಮಿರಾವ ಕುಲಕರ್ಣಿ

ಹಿರಿಯರಾದ ದಿ. ಕುಸುಮಾಕರ ದೇಸಾಯಿಯವರೊಂದಿಗೆ ೨೫ ವರುಷಗಳ ಸುದೀರ್ಘ ಸಂಬಂಧ. ಇದು ನನ್ನ ಸುದೈವ, ಅವರ ಪರಿಚಯಕ್ಕೆ ಕಾರಣರಾದವರೂ ಅವರ ಧರ್ಮಪತ್ನಿ ಶ್ರೀಮತಿ ಸರಿತಾ ದೇಸಾಯಿಯವರೇ. ೧೯೭೭ ರಲ್ಲಿ ಕಲಬುರಗಿಯ ಭಾರತೀಯ ಕುಟುಬ ಯೋಜನಾ ಸಂಸ್ಥೆಯಲ್ಲಿ ಜನಸಂಖ್ಯಾ ಶಿಕ್ಷಣಾಧಿಕಾರಿಯಾಗಿ ಸೇವೆ ಸಲ್ಲಿಸುವ ಅವಕಾಶದ ಸಂದರ್ಶನದ ಸಂದರ್ಭದಲ್ಲಿ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿಯವರ ಪರಿಚಯವಾಯಿತು. ಕುಟುಂಬ ಯೋಜನಾ ಸಂಘದ ಕಾರ್ಯಕಾರಿ ಮಂಡಳಿಯ ಪದಾಧಿಕಾರಿಯಾಗಿ ಕಾರ್ಯನಿರ್ವಹಿಸುವ ಈ ಅವಕಾಶದಿಂದ ಈ ಅಪರೂಪದ ದಂಪತಿಗಳಿಗೆ ಹತ್ತಿರವಾಗುವ ಸೌಭಾಗ್ಯ ನನಗೆ ದೊರಕಿತು. ೧೯೭೯ ರಲ್ಲಿ ನೂತನ ವಿದ್ಯಾಲಯ ಪದವಿಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕನಾಗಿ ಸೇವೆಯ ಸದವಕಾಶವನ್ನು ಸಂಸ್ಥೆಯ ಆಡಳಿತ ಮಂಡಳಿ ನನಗೆ ನೀಡಿತು. ಆಗ ದಿ. ಕುಸುಮಾಕರ ದೇಸಾಯಿಯವರು ನೂತನ ವಿದ್ಯಾಲಯ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾಗಿದ್ದರು. ಇದರಿಂದಾಗಿ ಅವರ ಸಂಪರ್ಕ ಹೆಚ್ಚಾಯಿತು.

ಆದರ್ಶ ದಂಪತಿಗಳು ಹೇಗಿರಬೇಕು ಎಂಬುದಕ್ಕೆ ಶ್ರೀ ಕುಸುಮಾಕರ ದೇಸಾಯಿ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿ ದಂಪತಿಗಳು ಜೀವಂತ ನಿದರ್ಶನ, ಮಾದರಿಯೇ ಸರಿ. 'ನಾನು ಪತಿ', 'ನಾನು ಪತ್ನಿ' ಎಂಬ ಭೇದವೇ ಇರಲಿಲ್ಲ. ಅಷ್ಟು ಅನ್ಯೋನ್ಯತೆ. ಹಿರಿಯ ವಕೀಲರಾದ ಕುಸುಮಾಕರ ಅವರು ತುಂಬಾ ಮಾತುಗಾರರು. ಅವರ ಮಾತುಗಳನ್ನು ಕೇಳುತ್ತಾ ಕುಳಿತರೆ ನಮಗೆ ಹೊತ್ತು ಹೋದದ್ದೇ ಗೊತ್ತಾಗುತ್ತಿರಲಿಲ್ಲ. ಕನ್ನಡ, ಇಂಗ್ಲೀಷ್, ಉರ್ದು, ಹಿಂದಿ ಭಾಷೆಗಳ ಮೇಲೆ ಅದ್ಭುತ ಪ್ರಭುತ್ವ ಅವರದು. ಈ ಭಾಗದ ಹಿರಿಯ ರಾಜಕಾರಣಿಗಳು. ಇಷ್ಟೆಲ್ಲ ಇದ್ದರೂ ಅಹಂಕಾರ ಎಂಬುದು ಲವಲೇಶವಿಲ್ಲ. ವಾರದಲ್ಲಿ ಒಂದೆರಡು ಸಲ ಅವರ ಮನೆಯಲ್ಲಿಯೇ ರಾತ್ರಿ ಬೈಠಕ್‌ಗಳು. ವಿಷಯವೇ ಇಲ್ಲದೆ ಅಥವಾ ಎಲ್ಲಾ ವಿಷಯಗಳ ಕುರಿತು ಅಷ್ಟೇ ಪ್ರಭಾವ ಪೂರ್ಣವಾಗಿ ತಮ್ಮ ವಿಚಾರ ಮಂಡಿಸುವ ಕಲೆ ಅವರಿಗೆ ಕರಗತ. ಓತಪ್ರೋತ ಶಬ್ದಗಳು, ಧ್ವನಿಯ ಏರಿಳಿತ ಅವರಲ್ಲಿಯ ಕಂಠತ್ರಾಣ, ಭಾಷೆಯ ಮೇಲಿನ ಹಿಡಿತಗಳು ಇವೆಲ್ಲ ಅವರ ಮಾತುಗಳಿಗೊಂದು ಮೆರಗು.

ಪತ್ನಿ ಶ್ರೀಮತಿ ಸರಿತಾ ದೇಸಾಯಿಯವರು ವೃತ್ತಿಯಿಂದ ವಕೀಲರಾಗಿದ್ದರೂ ಉತ್ತಮ ಬರಹಗಾರರು. ಹೀಗಾಗಿ ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಮತ್ತು ಸಾಹಿತ್ಯಿಕ ಈ ಎಲ್ಲ ಕ್ಷೇತ್ರಗಳ ವಾತಾರವಣ ಮನೆಯಲ್ಲಿ. ಇದಲ್ಲದೆ ಕಾರ್ಯಕ್ರಮಗಳ ಸಂಘಟನೆಯ ಅಭಿರುಚಿ ಬೇರೆ. ಇದರಿಂದಾಗಿ ಕುಸುಮಾಕರ ದೇಸಾಯಿಯವರ ಮನೆ ಸದಾ ಗಣ್ಯರಿಂದ ಹಾಗೂ

ನಮ್ಮಂತಹ ಸಾಹಿತ್ಯಾಸಕ್ತರಿಂದ ತುಂಬಿ ತುಳುಕುವುದು ಸಹಜವೇ ಆಗಿತ್ತು. ಊಟ, ಉಪಹಾರಗಳ ಆತಿಥ್ಯಕ್ಕಂತೂ ಯಾವ ಕೊರತೆ ಇಲ್ಲ. ಸಂಕುಚಿತ ಭಾವನೆಗಳಿಂದ ಬಹುದೂರವಾಗಿದ್ದವರು ಕುಸುಮಾಕರ ದೇಸಾಯಿಯವರು. ಇತರರು ಸಂತೋಷಪಡುವದನ್ನು ಕಂಡು ಆನಂದ ಪಡುವ ಹಿರಿಯ ಗುಣ ಅವರದು. ಹಿರಿಯ ರಾಜಕಾರಣಿಗಳು, ಸಾಹಿತಿಗಳು ಕಲಬುರಗಿಗೆ ಬಂದರೆ ಸಾಕು ಕುಸುಮಾಕರ ದೇಸಾಯಿಯವರ ಮನೆಯಲ್ಲಿ ಘಮಘಮಿಸುವ ಅಡಿಗೆ ಸಿದ್ಧ. ಸ್ವತಃ ದಂಪತಿಗಳು ಎದುರಿಗಿದ್ದು ಬಂದವರ ಹೊಟ್ಟೆಯನ್ನು ಮಾತ್ರವಲ್ಲ, ಹಾಸ್ಯದ ಮಾತುಗಳ ಮೂಲಕ ಮನವನ್ನು ಮುದಗೊಳಿಸುತ್ತಿದ್ದ ಪರಿ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ನಮ್ಮಂತಹ ಯುವಕರಿಗೆ ಮಾಡುತ್ತಿದ್ದ ಮಾರ್ಗದರ್ಶನ, ನೀಡುತ್ತಿದ್ದ ಉನ್ನತ, ಉತ್ತಮ ವಿಚಾರಗಳನ್ನು ಮರೆಯುವಂತಿಲ್ಲ. ಹೊತ್ತು ಎಷ್ಟಾದರೂ ಕುಸುಮಾಕರ ದೇಸಾಯಿಯವರ ಮಾತು ಇನ್ನೂ ಕೇಳಬೇಕೆಂಬ ಲವಲವಿಕೆ ಹುಟ್ಟುತ್ತಿತ್ತು.

ಈ ಪ್ರದೇಶದ ಪ್ರಾಮಾಣಿಕ, ನಿಷ್ಠಾವಂತ ಹಿರಿಯ ರಾಜಕಾರಣಿಗಳಲ್ಲಿ ಅವರೊಬ್ಬರು. ಅತ್ಯಂತ ಸ್ವಾಭಿಮಾನಿ, ನಿಷ್ಠುರರೂ ಹೌದು. ಇದರಿಂದಾಗಿ ರಾಜಕೀಯ ಕ್ಷೇತ್ರದಲ್ಲಿ ಸಿಗಬೇಕಾದ ರಾಜಕೀಯ ಸ್ಥಾನ, ಮಾನಗಳು ಅವರಿಗೆ ಸಿಗಲಿಲ್ಲ ಎಂಬ ಕೊರಗು ನಮ್ಮದಾಗಿದೆ. ಈ ಕೊರಗು ಅವರಿಗಿರಲಿಲ್ಲ ಎಂಬುದೂ ನಿಜ.

ಇಂತಹ ಚೈತನ್ಯಯುಕ್ತ ಹಿರಿಯರ ನೆನಪನ್ನು, ಮೆಲಕು ಹಾಕುವುದೇ ಒಂದು ಅಪರೂಪದ ಅನುಭವ.

ದಳ-೦೭

ವೈದ್ಯ ಬಂಧುಗಳು

ನುಡಿದಂತೆ ನಡೆದದವರು

✽ ಡಾ. ಎಂ. ಎಂ. ಜೋಶಿ

ನುಡಿದಂತೆ ನಡೆಯುವ ಜನ ಸಿಗುವುದು ವಿರಳ. ಅಂಥ ವಿರಳಾತಿ ವಿರಳರಲ್ಲಿ ನಾನು ಕಂಡಂತಹ ಒಂದು ವ್ಯಕ್ತಿ ವೈ.ವಾ. ಶ್ರೀ ಕುಸುಮಾಕರ ದೇಸಾಯಿಯವರು. ನಾನು ಮೊದಲು ಅವರ ಬಗ್ಗೆ ಕೇಳಿ ತಿಳಿದದ್ದು ೧೯೮೪ ರಲ್ಲಿ. ಅವರ ಭ್ರಾತೃ ಬಾಂಧವರಾದ ಡಾ. ರಥಾಂಗಪಾಣಿ ದೇಸಾಯಿಯವರು ಹುಬ್ಬಳ್ಳಿಗೆ ನೇತ್ರ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯ ಅಭ್ಯಾಸಕ್ಕಾಗಿ ಬಂದವರು, ನಮ್ಮ ಆಸ್ಪತ್ರೆಗೆ ಮೇಲಿಂದ ಮೇಲೆಬರುತ್ತಿದ್ದ ಸಮಯದಲ್ಲಿ. ಅಲ್ಲದೆ ಗುಲ್ಬರ್ಗಾದಲ್ಲಿಯ ನನ್ನ ವೈದ್ಯ ಮಿತ್ರರಾದ ಡಾ. ಮುರಲೀಧರರಾವ್ ಅವರಿಂದಲೂ ಕುಸುಮಾಕರರವರ ಬಗ್ಗೆ ಆಗಾಗ ಕೇಳಿ ತಿಳಿದಿದ್ದೆನಾದರೂ ಪ್ರತ್ಯಕ್ಷವಾಗಿ ಭೇಟಿಯಾದುದು ೧೯೮೬ ರ ಅಗಸ್ಟ್ ತಿಂಗಳಲ್ಲಿ. ಆಗ ಅವರು ಕರ್ನಾಟಕ ರಾಜ್ಯದ ಅರ್ಬನ್ ವಾಟರ್ ಸಪ್ಲೈ ಹಾಗೂ ಡ್ರೈನೇಜ್ ಬೋರ್ಡಿನ ಚೇರಮನ್‌ರಾಗಿದ್ದರು.

ಇಲ್ಲಿಯ ನಮ್ಮ ಪರಿಚಯದ ಶ್ರೀ ಕುಲಕರ್ಣಿ ಎಂಬುವವರು ಇಲೆಕ್ಟ್ರಿಕ್ ಮೋಟರ ಪ್ರೊಟೆಕ್ಟಿಂಗ್ ಡಿವೈಸದ ಹೊಸ ನಮೂನೆಯ ಸಾಧನವನ್ನು ಉದ್ಘಾಟನೆ ಮಾಡಲು ಶ್ರೀ ಕುಸುಮಾಕರರವರನ್ನು ವಿನಂತಿಸಬೇಕೆಂದು ನನ್ನನ್ನು ಕೇಳಿಕೊಂಡರು ಆ ಕಾರ್ಯಕ್ರಮದ ಬಗ್ಗೆ ದೇಸಾಯಿಯವರೊಂದಿಗೆ ದೂರವಾಣಿಯ ಮುಖಾಂತರ ಮಾತನಾಡಿ ಕೇಳಿದಾಗ, ಒಂದೇ ಮಾತಿನಲ್ಲಿ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಬರಲು ಒಪ್ಪಿಕೊಂಡರು. ಮಾನ್ಯಮಂತ್ರಿಗಳಾದ ಶ್ರೀ ಆರ್.ವಿ. ದೇಶಪಾಂಡೆಯವರು ಅಧ್ಯಕ್ಷತೆ ವಹಿಸಿದ ಕಾರ್ಯಕ್ರಮ ೧೯೮೬ ರ ಅಗಸ್ಟದಲ್ಲಿ ಜರುಗಿತು.

ಮೊದಲನೆಯ ಸಲ ಪ್ರತ್ಯಕ್ಷ ಭೇಟಿಯಾದ ಕುಸುಮಾಕರರವರು ಬಾಲ್ಯ ಸ್ನೇಹಿತನಂತೆ ಆತ್ಮೀಯವಾಗಿ ನಡೆದುಕೊಂಡು ರಥಾಂಗಪಾಣಿ ಹಾಗೂ ಡಾ. ಮುರಲೀಧರರವರಿಂದ ನನ್ನ ಬಗ್ಗೆ ತಿಳಿದುಕೊಂಡ ವಿಷಯಗಳನ್ನು ನನಗೆ ಹೇಳುವಾಗ ನನ್ನನ್ನೇ ನನಗೆ ಪರಿಚಯಿಸುವಂತೆ ಇತ್ತು. ಆಮೇಲೆ ದಿ. ಹಣಮಂತರಾವ ಕೌಜಲಗಿ ಜನ್ಮ ಶತಾಬ್ದಿ ಕಾರ್ಯಕ್ರಮ, ಹಾಗೂ ಜಗನ್ನಾಥರಾವ ಚಂಡರಕಿಯವರು ನಿಯೋಜಿಸಿದ ಖಾದಿ ಪ್ರಚಾರ ಪರ ಕಾರ್ಯಕ್ರಮಗಳಿಗೆ ಗುಲಬರ್ಗಾಕ್ಕೆ ಹೋದಾಗ ರಾಜೋಪಚಾರ ಆದರಾತಿಥ್ಯಗಳೆಲ್ಲ ಶ್ರೀಮತಿ ಸರಿತಾ ಹಾಗೂ ಕುಸುಮಾಕರ ದೇಸಾಯಿಯವರಲ್ಲೇ ಆಗಬೇಕು. ಇದರಿಂದ ತಪ್ಪಿಸಿಕೊಳ್ಳುವ ಸಾಧ್ಯತೆಗಳು ಇದ್ದಿಲ್ಲ.

ಘರಾಣೆಸ್ತ ದೊಡ್ಡ ಮನೆತನದ ದೇಸಾಯಿಯವರು ಅಷ್ಟೇ ದೊಡ್ಡ ವಿಶಾಲ ಹೃದಯ ಹಾಗೂ ವಿಶಾಲ ಮನಸ್ಸಿನ ವ್ಯಕ್ತಿಯಾಗಿದ್ದರು. ತಮಗೆ ಸಾಧ್ಯವಾದ ಎಲ್ಲ ಸಹಾಯವನ್ನು ಬೇರೆಯವರಿಗೆ ಕೊಡುವ ಅವರು ತಮಗಾಗಿ ಯಾರಿಂದಲೂ ಏನನ್ನೂ ಕೇಳಿಬೇಡಲಿಲ್ಲ.

ನ್ಯಾಯಕ್ಕಾಗಿ ಹೋರಾಡುವಲ್ಲಿ, ಸತ್ಯ, ವಸ್ತುಸ್ಥಿತಿಯನ್ನು ಪ್ರತಿಪಾದಿಸುವಲ್ಲಿ ಅವರು ಎಂದಿಗೂ ಹಿಂಜರಿಯುತ್ತಿರಲಿಲ್ಲ. ಇಂಥ ಕೆಲಸದಲ್ಲಿ ಬೇರೆಯವರು ಅಂಜಿಕೊಂಡು ಅವರಿಗೆ ಸಹಕಾರ ನೀಡದಿದ್ದಾಗಲೂ, ಒಂಟಿ ಸಲಗದಂತೆ ಹೋರಾಟಕ್ಕೆ ಇಳಿಯುತ್ತಿದ್ದರು. ಶ್ರೀಮತಿ ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿಯನ್ನು ಘೋಷಿಸಿದಾಗ ಇದೇ ಪ್ರಕಾರ ಏಕಾಂಗಿಯಾಗಿ ಹೋರಾಟಕ್ಕೆ ಇಳಿದಿದ್ದು. ಆಮೇಲೆ ಸಮಾನ ಮನಸ್ಸಿನ ಜನ ಇವರನ್ನು ಕೂಡಿಕೊಂಡಿದ್ದು ಮುಂದೆ ಜೈಲುವಾಸ ಇವೆಲ್ಲ ಅವರು ಧೈರ್ಯ ತೋರಿದ ಉದಾಹರಣೆಗಳು.

ನಮ್ಮ ಧೀಮಂತ ನಾಯಕರಾದ ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಕುಸುಮಾಕರರು ಬಹಳೇ ಪ್ರೀತ್ಯಾಸ್ಪದ ವ್ಯಕ್ತಿಯಾಗಿದ್ದರು. ಗುಲಬರ್ಗಾದಲ್ಲಿ ಜರುಗಿದ ಒಂದು ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಯಾಗಿದ್ದಾಗ ಬಂದ ಹೆಗಡೆಯವರ ಜೊತೆಗೆ ಸರಿತಾ ಹಾಗೂ ಕುಸುಮಾಕರರವರ ಮನೆಯಲ್ಲಿಯ ಭೋಜನಕೂಟದಲ್ಲಿ ನಾನೂ ಪಾಲ್ಗೊಂಡ ವಿಷಯ ನನ್ನ ನೆನಪಿನಲ್ಲಿ ಇನ್ನೂ ಹಸಿರಾಗಿಯೇ ಉಳಿದಿದೆ.

ಅನುಕೂಲಸ್ಥ ಮನೆತನವಾದ್ದರಿಂದ ಎಷ್ಟೋ ಬಡ ವಿದ್ಯಾರ್ಥಿಗಳು ಕುಸುಮಾಕರರ ಜೊತೆಗೆ ವಿದ್ಯಾರ್ಜನೆಗೆ ಅವರ ಮನೆಯಲ್ಲಿಯೇ ಆಶ್ರಯ ಪಡೆದದ್ದುಂಟು. ಮುಂದೆ ಇಂಥವರಲ್ಲಿಯ ಕೆಲವರು ರಾಜಕೀಯದಲ್ಲಿ ಒಳ್ಳೆಯ ಸ್ಥಾನಮಾನಗಳನ್ನು ಪಡೆದದ್ದೂ ಉಂಟು. ಆದರೆ ಅಂಥವರಿಂದ ದೇಸಾಯಿಯವರು ಯಾವುದೇ ಫಲಾಪೇಕ್ಷೆಯನ್ನು ಮಾಡಲಿಲ್ಲ.

ಹರಪನಹಳ್ಳಿಯ ಸುಸಂಸ್ಕೃತ ವಾತಾವರಣ ಹಾಗೂ ಭ್ರಾತೃ ಸಂಬಂಧಿ ಬೀಟಿಯವರ ನೆರಳಲ್ಲಿ ಬೆಳೆದ ಶ್ರೀಮತಿ ಸರಿತಾ ಹಾಗೂ ಕುಸುಮಾಕರರ ಜೋಡಿ ಒಂದು ಅಪರೂಪದ ದಾಂಪತ್ಯ. ಇಬ್ಬರೂ ಪರಸ್ಪರರನ್ನು ಮೀರಿಸುವ ಮಾತಿನಮಲ್ಲರು. ಅವರ ಮನೆಗೆ ಹೋದಾಗ ಅವರ ಜೊತೆಗೆ ಹರಟುವಾಗ ಹೊತ್ತು ಹೋದದ್ದೇ ಗೊತ್ತಾಗುತ್ತಿರಲಿಲ್ಲ. ಕಟ್ಟುಮಸ್ತಾದ ಅಜಾನುಬಾಹುದೇಹಿ ದೇಸಾಯಿಯವರಿಗೆ ಇಳಿವಯಸ್ಸಿನಲ್ಲಿ ಆರೋಗ್ಯ ಭಾಗ್ಯ ಚೆನ್ನಾಗಿ ಉಳಿಯಲಿಲ್ಲ. ಎರಡೆರಡು ಸಲ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಪಡಬೇಕಾದ ಪ್ರಸಂಗ ಬಂದಿತು. ಆದರೂ ಅವರನ್ನು ಕಂಡು ಮಾತಾಡುವವರಿಗೆ ಹಸನ್ಮುಖಿಯಾಗಿ ಹಾಸ್ಯ ಚಟಾಕಿಯನ್ನು ಹಾರಿಸುವ ದೇಸಾಯಿಯವರು ಅನಾರೋಗ್ಯದವರೆಂದೂ ಗೊತ್ತಾಗುತ್ತಿರಲಿಲ್ಲ. ಈ ಸಮಯದಲ್ಲಿ ಶ್ರೀಮತಿ ಸರಿತಾರವರು ದಕ್ಷತೆಯಿಂದ ಅವರ ಶುಶ್ರೂಷೆಯನ್ನು ಮಾಡುವುದನ್ನು ಕಂಡಾಗ ಪ್ರೀತಿ-ಮಮಕಾರಗಳಿಂದ ಕೂಡಿದ ಕರ್ತವ್ಯವೆಂದರೆ ಹೀಗಿರಬೇಕು ಎನ್ನಿಸದೇ ಇರಲಿಲ್ಲ.

ಇಂಥವರು ಇನ್ನೂ ಬಾಳಿ ಬದುಕಿ ಬೇರೆಯವರಿಗೆ ಆದರ್ಶಪ್ರಾಯರಾಗುವಂತೆ ಪರಮಾತ್ಮನು ಅನುಗ್ರಹಿಸಬೇಕಿತ್ತು ಎಂದು ಅನ್ನಿಸದೇ ಇರದು.

ಎಂದೆಂದೂ ಬಾಡದ ಕುಸುಮ

❁ -ಡಾ. ಶೇಖರ್ ಪಾಟೀಲ

ಈ ದಂಪತಿಗಳಿಬ್ಬರನ್ನು ನೆನೆದಾಗಲೆಲ್ಲ ನನ್ನ ಕಾಲೇಜು ದಿನಗಳು ನೆನಪಿಗೆ ಬರುತ್ತವೆ. ನಾನು ಅವರ ಮನೆಯ ಆಸುಪಾಸಿನಲ್ಲಿ ವಾಸವಾಗಿದ್ದೆ. ಸದಾ ನಗುನಗುತ್ತ, ಜೀವನದ ಸುಮಧುರ ಕ್ಷಣಗಳನ್ನು ಹಂಚಿಕೊಳ್ಳುತ್ತ ಅದ್ಭುತ ಸ್ನೇಹಿತರಂತೆ ಜೊತೆ ಜೊತೆ ನಡೆಯುತ್ತಿದ್ದ ಈ ದಂಪತಿಗಳ ಒಡನಾಟ ನನ್ನ ಮನಃಪಟಲದಲ್ಲಿ ಅಚ್ಚಳಿಯದ ಚಿತ್ತಾರವನ್ನು ಮೂಡಿಸಿವೆ. ಇವರನ್ನು ಕಂಡಾಗಲೆಲ್ಲ ನನ್ನ ಮುಂದಿನ ವೈವಾಹಿಕ ಜೀವನವು ಈ ಆದರ್ಶ ದಂಪತಿಗಳ ಹಾಗೆಯೇ ಇರಬೇಕು ಎಂಬ ಆಸೆಯಾಗುತ್ತಿತ್ತು.

ಕೆಲ ವರ್ಷಗಳ ಹಿಂದೆ ಈ ಸಂಗಾತಿಗಳ ನೇರ ಪರಿಚಯವಾದಾಗ, ನನಗೆ ಅವರ ನಡುವಿನ ಶ್ರೀಮಂತ ಸ್ನೇಹ, ನಿರ್ಮಲ, ಪ್ರೌಢ ವೈವಾಹಿಕ ಸಾಮರಸ್ಯದ ಅರಿವಾಯಿತು. ಸಂತಸದ ಸಮಯದಲ್ಲಷ್ಟೇ ಅಲ್ಲ, ಒತ್ತಡ ಸಂಘರ್ಷಗಳ ನಡುವೆ ಅವರು ತಮ್ಮ ಜೀವನವನ್ನು ಸುಂದರವಾಗಿಟ್ಟುಕೊಂಡರು. ಸಮಾಜದ ಅಭ್ಯುದಯಕ್ಕಾಗಿ ಮಾನವನ ಮೇಲಿನ ಮಮಕಾರದಿಂದ ಕೈಗೂಡಿಸಿ ಕೆಲಸ ಮಾಡಿದರು. ಈ ಬಗೆಯ ಸಾಮರಸ್ಯ ಮತ್ತು ಸ್ನೇಹ ಪ್ರೇಮ ಭರಿತ ದಾಂಪತ್ಯ ಮುಂದಿನ ಪೀಳಿಗೆಗೆ ಮಾದರಿ ಎಂದು ನನಗನ್ನಿಸಿದೆ....

೧೯೯೬-೯೭ರಲ್ಲಿ ಸರಿತಾ ಅವರು ಸ್ತನದ ಕ್ಯಾನ್ಸರ್‌ನಿಂದ ಪೀಡಿತರಾಗಿದ್ದಾರೆಂದು ನಾನು ಹೇಳಿದಾಗ, ಯಾವುದೇ ಆಘಾತಕ್ಕೊಳಗಾಗದೆ, ಮಂದಹಾಸದಿಂದ ಕಾಯಿಲೆಯ ವಿವರ ತಿಳಿಯಲು ಕಾತರ ವ್ಯಕ್ತಪಡಿಸಿದರು. ದುಃಖ, ನೋವು, ಮಾನಸಿಕ ಖಿನ್ನತೆಯನ್ನು ದೂರವಿಟ್ಟು ಆತ್ಮಸ್ಥೈರ್ಯದಿಂದ ಪ್ರವಾಹದ ವಿರುದ್ಧ ಸೆಣಸಾಡಿ, ಸಮಾಜಮುಖಿಯಾಗಿ ಸಮಾಜಸೇವೆಯಲ್ಲಿ ಇನ್ನೂ ಉತ್ಸಾಹದಿಂದ ತೊಡಗಿದರು.

ಕ್ಯಾನ್ಸರ್ ಆಕೆಯನ್ನು ಚೂರು ಚೂರು ಮಾಡಲಿಲ್ಲ. ಅದ್ಭುತ ಮನಸ್ಥೈರ್ಯ, ಅಪಾರವಾದ ಆಶಾವಾದ, ಪಾದರಸದಂತಹ ವ್ಯಕ್ತಿತ್ವ, ಬತ್ತದ ಚಿಲುಮೆಯ ಉತ್ಸಾಹ ಅವರ ಬದುಕನ್ನು ಶ್ರೀಮಂತವಾಗಿಸಿದೆ. ಈ ಮಹಿಳೆ ಕ್ಯಾನ್ಸರ್‌ಗೆ ಆನ್ಸರ್ ಕೊಡಲಾಗದೇ ನೊಂದ ನೂರಾರು ಹೆಂಗಸರಿಗೆ ದಾರಿದೀಪ.

ಇದೆಲ್ಲ ಸರಿತಾ ಅವರ ಬಗ್ಗೆ ಆಯಿತಷ್ಟೆ. ಆದರೆ ಅವರ ಸಹನೆ, ಧೈರ್ಯ, ಹೋರಾಟಮಯ ಜೀವನವನ್ನು ಪ್ರೀತಿಸುವ ಧೋರಣೆ, ಕುಸುಮಾಕರರದೂ ಇಮ್ಮಡಿ ಆಗಿ ಇತ್ತೆಂಬುದು ಅವರ ವ್ಯಕ್ತಿತ್ವವನ್ನು ಸಮೀಪದಿಂದ ಕಂಡವರಿಗೆ ತಿಳಿದುಬರುತ್ತಿತ್ತು. ಸರಿತಾ ಅವರು ನಮ್ಮ ಬೆಂಗಳೂರು ಅಂಕಾಲಜಿ ಆಸ್ಪತ್ರೆಯಲ್ಲಿ ಕಿಮೋಥೆರಪಿ ಚಿಕಿತ್ಸೆ ಪಡೆಯುವ ಸಮಯದಲ್ಲಿ ಶ್ರೀ ಕುಸುಮಾಕರರು ಹೈದರಾಬಾದ್‌ನ ಮೆಡಿಸಿಟಿ ಆಸ್ಪತ್ರೆಯಲ್ಲಿ ಎರಡನೇ ಬಾರಿ ಬೈಪಾಸ್ ಸರ್ಜರಿಗೆ ಒಳಪಟ್ಟಿದ್ದರಂತೆ. ಅವರು ಬೆಂಗಳೂರಿಗೆ ಬಂದ ನಂತರ ನಮ್ಮ ಭೆಟ್ಟಿಗೆ

ಬಂದಿದ್ದಾಗ ನನಗೆ ಅವರಿಬ್ಬರೂ ಪೇಶಂಟ್ ತರಹ ಕಾಣಲಿಲ್ಲ. ಅದೇ ನಗು, ಅದೇ ಹರಟೆ ಇವರಿಗೆ ದೇಹಬಾಧೆಯ ನೋವು ಇರಲಿಕ್ಕಿಲ್ಲವೆ ಎಂದು ಅಚ್ಚರಿ ಎನಿಸುತ್ತಿತ್ತು.

ವಿದ್ಯಾರ್ಥಿದೆಸೆಯಿಂದಲೂ ಕುಸುಮಾಕರ ದೇಸಾಯಿ ಅವರನ್ನು ಕಾಣುತ್ತಿದ್ದ ನನಗೆ ಇವರಿಗೆ ದುಃಖ ದುಮ್ಮಾನವಿಲ್ಲವೆ ಎನಿಸುತ್ತಿತ್ತು. ದೊಡ್ಡ ಕುಟುಂಬದ ಹೊಣೆಗಾರಿಕೆ ಹೊತ್ತಿದ್ದ ದುಃಖ, ಕಷ್ಟದ ಘಟನೆಗಳು ಜೀವನದಲ್ಲಿ ಘಟಿಸಿರಬಹುದು. ಆದರೆ ಎದೆಗುಂದದೇ ಎಲ್ಲರಿಗೂ ಮಾರ್ಗದರ್ಶಕರಾಗಿದ್ದರು.

ಇತ್ತೀಚೆಗೆ ಅವರು ಅನಾರೋಗ್ಯದಿಂದಾಗಿ ಗುಲ್ಬರ್ಗ ಬಿಟ್ಟು ಬೆಂಗಳೂರಲ್ಲೇ ನೆಲೆಸಿದಾಗ ನಾವು ಮೂರು ನಾಲ್ಕು ಜನ ಡಾಕ್ಟರ್ಸ್ ಫ್ರೆಂಡ್ಸ್ ಅವರ ಮನೆಗೆ ಹೋಗಿದ್ದೆವು. ಸೊಂಪಾಗಿ ಹರಟೆ ಹೊಡೆದು ನಕ್ಕು ನಗಿಸಿ ಕಳಿಸಿದ್ದರು.

ಹೊಸ ವರುಷ ಕಾಲಿಡುತ್ತಿದ್ದಂತೇ ಜನೆವರಿ ೩ನೇ ತಾ. ೨೦೦೩ ರಂದು ಶ್ರೀ ದೇಸಾಯಿಯವರು ಎಲ್ಲರನ್ನೂ ಬಿಟ್ಟು ಅದರಲ್ಲೂ ತಮ್ಮ ಸಖಿ ಎಂಬಂತಿದ್ದ ಸರಿತಾರವರನ್ನು ಬಿಟ್ಟು ಅಗಲಿದರು.

ಡಾಕ್ಟರ್ ಆದ ನನಗೆ ಸಾವು ಸಾವಿನ ಸುದ್ದಿಗಳು ಅಪರೂಪವೇನಲ್ಲ. ಆದರೆ ಕುಸುಮಾಕರರ ಸಾವಿನ ಸುದ್ದಿ ಮನಸ್ಸಿಗೆ ತಟ್ಟಿತ್ತು. ಸರಿತಾ ಅವರ ಬಗ್ಗೆ ಕಾಳಜಿ ಎನಿಸಿತು. ಕುಸುಮಾಕರರನ್ನು ಕಳೆದುಕೊಂಡಿರುವ ನಕ್ಷತ್ರಗಳ ನಡುವೆ ನಡೆದಾಡುವ ಸರಿತಾ, ಈ ಕುಸುಮವು ಎಂದೆಂದೂ ಬಾಡದಿರಲಿ. ಸದಾ ಹಸಿರು ತುಂಬಿದ ಈ ಹೃದಯದಲ್ಲಿ ಎಂದೆಂದೂ ಜೀವನದಿ ಹರಿಯುತ್ತಿರಲಿ. ತನ್ನ ಸುತ್ತಮುತ್ತ ಹಸಿರು ಚೆಲ್ಲಲಿ. ಇವರ ಕನಸುಗಳು ನಕ್ಷತ್ರಗಳಂತೆ ಸದಾ ಮಿನುಗುತ್ತಿರಲಿ. ಇವರು ಹಚ್ಚಿದ ಈ ನಂದಾದೀಪ ಎಂದೆಂದೂ ಉರಿಯುತ್ತಿರಲಿ ಎಂದು ಪ್ರಾರ್ಥಿಸುವೆ.

ಕುಸುಮನಮನ

✿ ಡಾ. ರಾಜೇಶ್ ದಂಪತಿಗಳು

ಮಾನ್ಯ ಶ್ರೀಮಾನ ಕುಸುಮಾಕರ ದೇಸಾಯಿಯವರು ನನಗೆ ಪರಿಚಯವಾದದ್ದು ಈಗ್ಗೆ ಸುಮಾರು ೩ ವರ್ಷದ ಕೆಳಗೆ. ಆಗ ನಾನು ಶಾಸಕರ ಭವನ ಆಸ್ಪತ್ರೆಯಲ್ಲಿ ವೈದ್ಯನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಕುಸುಮಾಕರ ದೇಸಾಯಿಯವರ ಪತ್ನಿಯಾದ ಶ್ರೀಮತಿ ಸರಿತಾ ಕು. ದೇಸಾಯಿವರು ಆಗ ವಿಧಾನ ಪರಿಷತ್ ಸದಸ್ಯೆಯಾಗಿದ್ದು ಅಲ್ಲೇ ಶಾಸಕರ ಭವನ ನದ ಒಂದು ಕೊಠಡಿಯಲ್ಲಿ ವಾಸವಾಗಿದ್ದರು. ಆಗ ಅವರು ಮಧುಮೇಹ ರೋಗ ಮತ್ತು ಕಡಿಮೆ ರಕ್ತದ ಒತ್ತಡದಿಂದ ಬಳಲುತ್ತಿದ್ದರು. ನಾನು ಅವರ ರಕ್ತದ ಒತ್ತಡ ಹಾಗೂ ಅವರ ಸಕ್ಕರೆ ಕಾಯಿಲೆ ಬಗ್ಗೆ ಪರೀಕ್ಷೆ ಮಾಡಲು ಆಗಾಗ್ಗೆ ಅವರ ಕೊಠಡಿಗೆ ಹೋಗುತ್ತಿದ್ದೆ. ಒಂದು ದಿವಸ ಸಾಯಂಕಾಲ ಅವರ ರಕ್ತದ ಒತ್ತಡ ಹಾಗೂ ಸಕ್ಕರೆ ಕಾಯಿಲೆ ಬಗ್ಗೆ ಪರೀಕ್ಷಿಸಲು ಅವರ ರೂಂಗೆ ಹೋದಾಗ ಕುಸುಮಾಕರ ದೇಸಾಯಿಯವರು ಅಲ್ಲಿದ್ದರು. ನಾನು ಅವರನ್ನು ನೋಡಿ ನಮಸ್ಕಾರ ಸರ್ ಎಂದೆ. ಆಗಲೇ ಸರಿತಾ ಮೇಡಂರವರು "ಇವರೇ ನಮ್ಮ ಯಜಮಾನ್ರು ಎಂದು ನನಗೆ ಪರಿಚಯಿಸಿದ್ದರು. ಮೊದಲ ನೋಟದಲ್ಲೇ ಅವರ ಸರಳತೆ ಮತ್ತು ಅವರ ನಗು ಮುಖ, ಪ್ರೇಮಾದರಗಳ ಮಾತು ಇದು ನನ್ನ ಮನಸ್ಸಿನ ಮೇಲೆ ಅಚ್ಚೊತ್ತಿದ್ದವು. ಅವರು ನಾನು 'ನಮಸ್ಕಾರ' ಎಂದ ತಕ್ಷಣ ನಮಸ್ಕಾರ ಡಾಕ್ಟ್ರೆ" ಎಂದು ವಿನಯವಾಗಿ ಪ್ರತ್ಯುತ್ತರಿಸಿದರು. ನನ್ನ ಮನೆ, ಹೆಂಡತಿ ಹಾಗೂ ಮಕ್ಕಳು, ಇವರೆಲ್ಲರ ಬಗ್ಗೆ ವಿಚಾರಿಸಿದರು. ನಂತರ ನಾನು ಸರಿತಾ ಮೇಡಂರ ರೂಂ.ಗೆ ಒಮ್ಮೊಮ್ಮೆ ಹೋದಾಗ ಕುಸುಮಾಕರ ದೇಸಾಯಿಯವರು ಗುಲ್ಬರ್ಗಾದಿಂದ ಬಂದಾಗ ನನಗೆ ಸಿಕ್ಕುತ್ತಿದ್ದರು. ಅವರು ೨ ಸಲ ಹೃದಯದ ಬೈಪಾಸ್ ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದರು. ಅವರಿಗೆ ಥೈರಾಯ್ಡ್ ಗ್ರಂಥಿಗೆ ಸಂಬಂಧಿಸಿದ ಖಾಯಿಲೆ ಹಾಗೂ ಸ್ವಲ್ಪ ಮಾನಸಿಕ ಖಿನ್ನತೆಯೂ ಇತ್ತು. ಒಮ್ಮೆ ಶಾಸಕರ ಭವನದಲ್ಲಿ ಅವರು ಬಹಳ ಆಯಾಸಗೊಂಡಾಗ ಅವರನ್ನು ಅಲ್ಲೇ ಹತ್ತಿರದಲ್ಲಿದ್ದ ಮಹಾವೀರ್ ಜೈನ್ ಆಸ್ಪತ್ರೆಗೆ ದಾಖಲಿಸಿದ್ದರು. ನಂತರ ಸ್ವಲ್ಪ ದಿವಸದಲ್ಲಿಯೇ ನಾನು ವಾಸವಾಗಿದ್ದ ನ್ಯಾಷನಲ್ ಗೇಮ್ಸ್ ಕಾಂಪ್ಲೆಕ್ಸ್‌ನ ತುಂಗಭದ್ರಾ ಬ್ಲಾಕ್‌ನಲ್ಲಿ ಅವರು ಒಂದು ಮನೆಗೆ ಬಂದು ಇಳಿದುಕೊಂಡರು. ಆನಂತರದಲ್ಲಿ ಅವರ ನನ್ನ ಬಾಂಧವ್ಯ ಹತ್ತಿರವಾಯಿತು. ಅವರ ವಿಚಾರಧಾರೆ ನನಗೆ ಬಹಳವಾಗಿ ಹಿಡಿಸಿತು. ನಾನು ಸುಮಾರು S.S.L.C. ಯಿಂದ ಶ್ರೀ ರಾಮಕೃಷ್ಣ ಪರಮಹಂಸರ ಗೀಳು ಅಂಟಿಸಿಕೊಂಡಿದ್ದರಿಂದ, ಅವರ ತ್ಯಾಗ, ಸರಳತೆ ಪ್ರಮಾಣಿಕತೆ ಮುಂತಾದ ಗುಣಗಳು ನನಗೆ ಬಹಳವಾಗಿ ಹಿಡಿಸುತ್ತಿದ್ದವು.

ವಜ್ರಕ್ಕಿಂತಲೂ ಕಠಿಣವಾದ, ಹೂವಿಗಿಂತಲೂ ಮೃದುವಾದ, ಇಂತಹ ಸಜ್ಜನರ ಮನಸ್ಸನ್ನೂ, ಹೃದಯವನ್ನೂ ಸಾಮಾನ್ಯರಾದ ನಾವು ಯಾರು ತಾನೇ ತಿಳಿದುಕೊಳ್ಳಲು ಎಷ್ಟರ

ಮಟ್ಟಿಗೆ ಸಮರ್ಥರಿದ್ದೇವೆ? ಶ್ರೀಯುತ ಕುಸುಮಾಕರರು ವೃತ್ತಿಯಲ್ಲಿ ಲಾಯರ್ ಆಗಿದ್ದರು, ಎಲ್ಲಾ ವಿಷಯಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿದ್ದರು. ನಮ್ಮ ದೇಶದ ಈಗಿನ ರಾಜಕೀಯ ಪರಿಸ್ಥಿತಿ, ಪ್ರಪಂಚದಲ್ಲಿ ಆಗುತ್ತಿರುವ ವಿದ್ಯಮಾನಗಳು. ಹಾಗೂ ಒಂದಿನ ನಮ್ಮ ದೇಶದ ಪರಿಸ್ಥಿತಿ. ಈಗಿನ ನಮ್ಮ ದೇಶದಲ್ಲಾಗುತ್ತಿರುವ ಮಾನವೀಯ ಹಾಗೂ ಸಾಮಾಜಿಕ ಮೌಲ್ಯಗಳ ಅಧಃಪತನ, ಈ ವಿಚಾರಗಳ ಬಗ್ಗೆ ಅವರು ಬಹಳವಾಗಿ ತಲೆಕೆಡಿಸಿಕೊಳ್ಳುತ್ತಿದ್ದರು. ಅವರ ಸಮಕಾಲೀನ ನಾಯಕರಾದ, ರಾಮಕೃಷ್ಣ ಹೆಗಡೆ, ಮಧು ದಂಡವತೆ, ಜಾರ್ಜ್ ಫರ್ನಾಂಡಿಸ್, ಜೆ. ಹೆಚ್. ಪಟೇಲ ಹಾಗೂ ಈಗಿನ ಸರ್ಕಾರದಲ್ಲಿರುವ ಅನೇಕ ಮಂತ್ರಿಗಳ ಮತ್ತು ಬೇರೆ ಬೇರೆ ವೃತ್ತಿಗಳಲ್ಲಿ ಉನ್ನತ ಸ್ಥಾನದಲ್ಲಿರುವ ಅನೇಕರ ಪರಿಚಯ ಅವರಿಗೆ ಚೆನ್ನಾಗಿತ್ತು. ಅವರು ಲೋಹಿಯಾವಾದಿಗಳೂ ಹಾಗೂ ಸಮಾಜವಾದಿಗಳಾಗಿದ್ದರೂ ಕೂಡ ಎಲ್ಲಾ ಒಳ್ಳೆ ಚಿಂತನೆಯುಳ್ಳವರನ್ನು ಮತ್ತು ಸಮಾಜಕ್ಕಾಗಿ ದುಡಿಯುವವರನ್ನು, ಪ್ರಾಮಾಣಿಕರನ್ನು ಬಹಳವಾಗಿ ಮೆಚ್ಚಿಕೊಳ್ಳುತ್ತಿದ್ದರು ಹಾಗೂ ಗೌರವದಿಂದ ಕಾಣುತ್ತಿದ್ದರು. ಅವರು ಯಾವುದೇ ಒಂದು ವಿಷಯವಾದರೂ ಅದನ್ನು ಬಹಳವಾಗಿ ಅಭ್ಯಸಿಸಿ ತರ್ಕ ಮಾಡಿ. ತಮ್ಮ ವಿಚಾರವನ್ನು ಮಂಡಿಸುತ್ತಿದ್ದರು. ಯಾವಾಗಲೂ ಹಾಸ್ಯ ಪ್ರವೃತ್ತಿ ಅವರಲ್ಲಿ ಹೆಚ್ಚಾಗಿರುತ್ತಿತ್ತು ಮತ್ತು ಸರಳರಾಗಿದ್ದರು. ಅವರು ನಿಷ್ಠುರವಾದಿಯೂ ಹೌದು. ಯಾವುದೇ ವಿಚಾರವನ್ನೂ ಅವರು ಸುಲಭವಾಗಿ ಒಪ್ಪುತ್ತಿರಲಿಲ್ಲ ಮತ್ತು ಯಾವುದೇ ವಿಚಾರದಲ್ಲೇ ಆಗಲಿ ಅವರು ರಾಜಿ ಮಾಡಿಕೊಳ್ಳುತ್ತಿರಲಿಲ್ಲ. ಯಾವ ವ್ಯಕ್ತಿಯೇ ಆಗಲಿ, ಯಾರ ವಿಚಾರವೇ ಆಗಲಿ ತಪ್ಪಿದ್ದಲ್ಲಿ ಅದನ್ನು ಅವರ ಎದುರಿಗೇ ಖಂಡಿಸುವಂತಹ ಪ್ರವೃತ್ತಿ ಅವರದಿತ್ತು. ಹಾಗಾಗಿ ಅನೇಕರು ಅವರಿಂದ ದೂರವಾದ ಉದಾಹರಣೆಗಳನ್ನು ಅವರೇ ಎಷ್ಟೋ ಬಾರಿ ನನ್ನ ಹತ್ತಿರ ಹೇಳಿದ್ದುಂಟು. ಅವರು ಗಾಂಧಿವಾದಿಯಾಗಿದ್ದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಎಷ್ಟೋ ಬಾರಿ ಜೈಲಿಗೆ ಹೋಗಿದ್ದರೂ, ಅವರ ಆಚಾರ ವಿಚಾರ ಹೇಗಿತ್ತೆಂದರೆ, ಒಳ್ಳೆಯ ಊಟವನ್ನೇ ಮಾಡುತ್ತಿದ್ದರು. ಅವರು ಬಾಹ್ಯ ಆಡಂಬರಕ್ಕೆ ಬೆಲೆಕೊಡುತ್ತಿರಲಿಲ್ಲ. ಸಿಲ್ಕ್ ಜುಬ್ಬಾ ಪೈಜಾಮ್ ಬಟ್ಟೆ ಉಟ್ಟರೂ ಅಂತರ್ಯದಲ್ಲಿ ಹೃದಯವಂತಿಕೆ, ಸರಳತೆ ಮತ್ತು ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡಿದ್ದರು. ಎಲ್ಲಾ ತರಹದ ಮನುಷ್ಯರನ್ನು (ಬಡವ, ಶ್ರೀಮಂತ) ಒಂದೇ ದೃಷ್ಟಿಕೋನದಿಂದ ನೋಡುತ್ತಿದ್ದರು. ಮತ್ತು ಜಾತೀಯತೆಯನ್ನು ಮೀರಿದ, ಮಾನವೀಯತೆಯ ಮೂರ್ತಿಗಳಾಗಿದ್ದರು. ಶ್ರೀಯುತ ದೇಸಾಯಿಯವರು ಒಮ್ಮೊಮ್ಮೆ ನಗುತ್ತಿದ್ದರು. ನಮ್ಮನ್ನೂ ನಗಿಸುತ್ತಿದ್ದರು. ಆದರೆ ಅವರ ತಂದೆಯವರ ಕೇಸಿನ ವಿಚಾರ (ಮಕ್ಕಳು ಅಪ್ಪನ ಆಸ್ತಿ ಎಲ್ಲರಿಗೂ ಸರಿಸಮಾನವಾಗಿ ಸಿಗಬೇಕೆಂಬುದು ಅವರ ಇಚ್ಛೆಯಿದ್ದಿತು). ಅವರ ಆರೋಗ್ಯ ಅವರ ಶ್ರೀಮತಿಯವರ ಆರೋಗ್ಯ ಮತ್ತು ತನ್ನ ಆದರ್ಶಗಳಿಗೆ ಧಕ್ಕೆ ಬರುವಂತಹ ಪರಿಸ್ಥಿತಿ ನಿರ್ಮಾಣವಾದಾಗ ಅವರು ಬಹಳ ಖಿನ್ನರಾಗುತ್ತಿದ್ದರು. ಅವರು ಒಂದು ತರಹದ ಭಾವನಾತ್ಮಕ ಜೀವಿ. ಬಹಳ ಬೇಗನೆ ಉಲ್ಲಸಿತರಾಗುತ್ತಿದ್ದರು. ಮತ್ತು ಅಷ್ಟೇ ಬೇಗನೆ

ಖಿನ್ನರಾಗುತ್ತಿದ್ದರು. ಆದೇನೇ ಇದ್ದರೂ ನನ್ನನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಮತ್ತು ನನ್ನಲ್ಲಿ ಅವರಿಗೆ ಅಪಾರ ನಂಬಿಕೆ ಇತ್ತು. ನಾನು ಹಗಲೆಂದರೆ ಹಗಲು, ರಾತ್ರಿಯೆಂದರೆ ರಾತ್ರಿ ಅವರಲ್ಲಿಗೆ ಹೋಗಬೇಕಾಗಿತ್ತು. ಅವರನ್ನು ನಾನು ವೈದ್ಯನಾಗಿ ಪರೀಕ್ಷಿಸುವುದಲ್ಲದೆ, ಅವರ ಎಲ್ಲಾ ಪ್ರಶ್ನೆಗಳಿಗೂ ನನಗೆ ತಿಳಿದ ಮಟ್ಟಿಗೆ ನಾನು ಉತ್ತರಿಸಬೇಕಾಗಿತ್ತು. ಕೆಲವು ಸಂದರ್ಭಗಳಲ್ಲಂತೂ ಯಾರೇ Specialist (ನುರಿತ ವೈದ್ಯರು) ಅವರಿಗೆ ಏನೇ ಔಷಧಿ ಹೇಳಿದರೂ, ಅವರು ನನ್ನ ಬಳಿ ಒಮ್ಮೆ ಕೇಳಲೇಬೇಕಾಗಿತ್ತು, ನಾನು ಅವರಿಗೆ ಎಷ್ಟೋ ಸಲ ಹೇಳಿದ್ದುಂಟು. ಸರ್ ನಾನು ಬರೀ M.B.B.S. ಓದಿದ ಸಾಮಾನ್ಯ ವೈದ್ಯ ಎಂದು. ಆದರೂ ಅವರಿಗೆ ನನ್ನ ಜ್ಞಾನದ ಬಗ್ಗೆ ಅಪಾರ ವಿಶ್ವಾಸವಿತ್ತು. ಅವರು ವೈದ್ಯಕೀಯ ವಿಷಯಗಳಲ್ಲಿ ಅನೇಕ ಪುಸ್ತಕಗಳನ್ನೋದಿ ಜ್ಞಾನ ಸಂಪಾದಿಸಿದ್ದರು. ಎಷ್ಟೋ ಸಲ ಅವರಿಗೆ ಅವರ ಖಾಯಿಲೆ ಬಗ್ಗೆ ನಿಖರವಾದ ಮಾಹಿತಿ ಒದಗಿಸಲು ನಾನು ಪುಸ್ತಕಗಳನ್ನು ಓದಬೇಕಾಗಿತ್ತು. ನಾನು ನನ್ನ ಹೆಂಡತಿ, ಮಕ್ಕಳು ಚೆನ್ನಾಗಿರಬೇಕು. ನನಗೆ ಹೊಸ ಬಟ್ಟೆ ಉಡಿಸಿ ನೋಡಬೇಕು. ಇವರೆಲ್ಲಾ ಅವರು ನನ್ನ ಬಗ್ಗೆ ತೋರಿಸಿದ ಪ್ರೀತಿ ಔದಾರ್ಯಕ್ಕೆ ಉದಾಹರಣೆ. ನಾನು ಅವರ ಮನೆಗೆ ಹೋಗ್ತೀನಿ ಎಂದು ಹೇಳಿ ಹೋಗಲಿಕ್ಕಾಗದ ಸಂದರ್ಭಗಳಲ್ಲಿ ಅವರೂ ಊಟ ಮಾಡದೇ ಎಷ್ಟೋ ದಿನ ನನಗೋಸ್ಕರ ಕಾದದ್ದು ಉಂಟು. ಅವರಲ್ಲಿ ಬಹಳ ಆತ್ಮಸ್ಥೈರ್ಯವಿತ್ತು. ಎಲ್ಲಾ ವಿಷಯದ ಬಗ್ಗೆ ಅವರಿಗೆ ಅಪಾರವಾದ ಜ್ಞಾನವಿತ್ತು. ಹಾಗಾಗಿ ಅವರ ಬಳಿ ಹೋಗಿ ಗಂಟೆಗಟ್ಟಲೆ ಕೂತರೂ ನನಗೆ ಬೇಸರವಾಗುತ್ತಿರಲಿಲ್ಲ.

ಅವರು ತುರ್ತು ಸಂದರ್ಭದಲ್ಲಿ ಜೈಲಿನಲ್ಲಿ ಕಳೆದ ದಿನಗಳು, ಅವರ ಚರಿತ್ರೆ ಹಾಗೂ ಅವರು Water boatd ಚೇರ್ಮನ್ನರು ಆದ ದಿನಗಳು, ಇವೆಲ್ಲದರ ವಿಷಯವಾಗಿ ನನ್ನ ಬಳಿ ಬಹಳವಾಗಿ ಮಾತನಾಡುತ್ತಿದ್ದರು.

ಇದರಿಂದ ನಮಗೆ ಗೊತ್ತಿಲ್ಲದ ಎಷ್ಟೋ ವಿಚಾರಗಳ ಬಗ್ಗೆ ತಿಳಿದುಕೊಳ್ಳಲು ಅವಕಾಶವಾಯಿತು. ನನಗಂತೂ ದೇಸಾಯಿಯವರು ನನ್ನ ತಂದೆಯವರಿಗಿಂತ ಹೆಚ್ಚಿನವರಾಗಿದ್ದರು. ಅಂತಹ ಉತ್ತಮರ ಸೇವೆ ಮಾಡುವ ಭಾಗ್ಯವನ್ನು ಅವರ ಕಡೆಯ ದಿನಗಳಲ್ಲಿ ಆ ಭಗವಂತ ನನಗೆ ಒದಗಿಸಿದ್ದಕ್ಕೆ ಅವನಿಗೆ ನಾನು ಋಣಿಯಾಗಿದ್ದೇನೆ.

ಅವರ ಶ್ರೀಮತಿಯವರ ಬಗ್ಗೆ ಅವರಿಗೆ ಬಹಳ ಗೌರವ ಮತ್ತು ಪ್ರೀತಿ ಇತ್ತು. ಅವರ ಪತ್ನಿಯವರೋ ಸ್ನೇಹಶೀಲರು, ವಿಚಾರ ಸಂಪನ್ನರು ತ್ಯಾಗಮೂರ್ತಿಗಳು ಮತ್ತು ಅವರ ಸಹನೆಯಂತೂ ಭೂದೇವಿಗೆ ಹೋಲಿಸಿದರೂ ತಪ್ಪಾಗಲಾರದು. ಅವರೇ ಸ್ವತಃ ಶಸ್ತ್ರಚಿಕಿತ್ಸೆಗೆ ಒಳಪಟ್ಟ ರೋಗಿಯಾಗಿದ್ದರೂ ಕೂಡ ಗಂಡನ ಜೊತೆಯಲ್ಲಿದ್ದು ಕೊನೆಯವರೆಗೂ ಅವರಿಗೆ ಮಾರ್ಗದರ್ಶಿಯಾಗಿ, ಸೇವಕಿಯಾಗಿ ಅವರ ಎಲ್ಲಾ ಬೇಡಿಕೆಗಳನ್ನೂ ಈಡೇರಿಸುವ ಕಾಮಧೇನುವಾಗಿದ್ದರು. ಪತಿ ಕೋಪದಿಂದ ಒಮ್ಮೊಮ್ಮೆ ರೇಗಿದರೂ ಇವರು ಕೋಪ ಮಾಡಿಕೊಳ್ಳುತ್ತಿರಲಿಲ್ಲ. ಸಹನೆ ಸಹಿಷ್ಣುತೆಯ ಮೂರ್ತಿಯಾಗಿದ್ದ ಇವರ ಮೇಲೆ ನಮ್ಮ ಮುಂದೆ

